ಬಾಗಳಿ : ಶಾಸನಗಳು ಮತ್ತು ಸಂಸ್ಕೃತಿ

ಪಿಎಚ್.ಡಿ.ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಭಾರತಿ ಅಳವಂಡಿಮಠ

ಮಾರ್ಗದರ್ಶಕರು
ಡಾ. ಡಿ.ವಿ. ಪರಮಶಿವಮೂರ್ತಿ
ಅಧ್ಯಾಪಕರು, ಶಾಸನಶಾಸ್ತ್ರ ವಿಭಾಗ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ [illegible] ೨೭೬

ಏಪ್ರಿಲ್ ೨೦೦[illegible]

ಬಾಗಳಿ : ಶಾಸನಗಳು ಮತ್ತು ಸಂಸ್ಕೃತಿ

ಪಿಎಚ್.ಡಿ.ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಭಾರತಿ ಅಳವಂಡಿಮಠ

ಮಾರ್ಗದರ್ಶಕರು
ಡಾ. ಡಿ.ವಿ. ಪರಮಶಿವಮೂರ್ತಿ
ಅಧ್ಯಾಪಕರು, ಶಾಸನಶಾಸ್ತ್ರ ವಿಭಾಗ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೩

ಸಂಶೋಧಕರ ಪ್ರಮಾಣ ಪತ್ರ

ಬಾಗಳಿ : ಶಾಸನಗಳು ಮತ್ತು ಸಂಸ್ಕೃತಿ ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಡಾ. ಡಿ.ವಿ.ಪರಮಶಿವಮೂರ್ತಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 4/4/03
ಸ್ಥಳ : ವಿದ್ಯಾರಣ್ಯ

ಭಾರತಿ ಅಳವಂಡಿಮಠ
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

118

ಮಾರ್ಗದರ್ಶಕರ ಪ್ರಮಾಣ ಪತ್ರ

ಕುಮಾರಿ ಭಾರತಿ ಅಳವಂಡಿಮಠ ಇವರು **ಬಾಗಳಿ : ಶಾಸನಗಳು ಮತ್ತು ಸಂಸ್ಕೃತಿ** ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 4/4/03
ಸ್ಥಳ : ವಿದ್ಯಾರಣ್ಯ

ಡಾ. ಡಿ.ವಿ.ಪರಮಶಿವಮೂರ್ತಿ
ಮಾರ್ಗದರ್ಶಕರು ಮತ್ತು ಅಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅರಿಕೆ

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿದ ಹಿಂದಿನ ಕುಲಪತಿಗಳಾದ ಎಂ.ಎಂ.ಕಲಬುರ್ಗಿಯವರಿಗೆ ಹಾಗೂ ಇಂದಿನ ಕುಲಪತಿಗಳು ಮತ್ತು ಕನ್ನಡದ ಹಿರಿಯ ವಿದ್ವಾಂಸರಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಅವರಿಗೆ ನನ್ನ ಗೌರವಪೂರ್ವಕ ನಮನಗಳು.

ನನಗೆ ಮಾರ್ಗದರ್ಶಕರಾಗಿ ಸಹಕರಿಸಿದ ಡಾ.ಡಿ.ವಿ.ಪರಮಶಿವಮೂರ್ತಿ ಅವರಿಗೂ, ವಿಭಾಗದ ಮುಖ್ಯಸ್ಥರಾದ ಡಾ.ದೇವರಕೊಂಡಾರೆಡ್ಡಿ, ಅಧ್ಯಾಪಕರುಗಳಾದ ಶ್ರೀ ಕಲವೀರ ಮನ್ವಚಾರ್, ಡಾ.ಕೆ.ಜಿ. ಭಟ್‌ಸೂರಿ ಅವರಿಗೆ,

ಹಿಂದಿನ ಕುಲಸಚಿವರಾದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಈಗಿನ ಕುಲಸಚಿವರಾದ ಡಾ.ಕೆ.ವಿ. ನಾರಾಯಣ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ.ಕರೀಗೌಡ ಬೀಚನಹಳ್ಳಿ ಅವರಿಗೆ,

ಅಧ್ಯಯನದಲ್ಲಿ ಸಹಕರಿಸಿದ ಎಂ.ಕೊಟ್ರೇಶ್ ಮತ್ತು ಡಾ.ಕೆ.ರವೀಂದ್ರನಾಥ್ ಅವರಿಗೆ, ಕ್ಷೇತ್ರಕಾರ್ಯ ಕೈಗೊಂಡಾಗ ನನಗೆ ಸಹಾಯ, ಸಹಕಾರ ತೋರಿದ ನನ್ನ ಸಂಬಂಧಿಕರಾದ ಬಾಗಳಿಯ ಶ್ರೀ ಪ್ರಕಾಶ ಮತ್ತು ರೂಪಾ ಅವರಿಗೆ ಮತ್ತು ಗುರುಗಳಾದ ಶ್ರೀ ಎಸ್.ಎಸ್. ಹಿರೇಮಠ, ಶ್ರೀ ಕುಂ.ಬಾ.ಸದಾಶಿವಪ್ಪ, ಶ್ರೀ ರಾಜಶೇಖರ್ ಅವರಿಗೆ,

ಅಧ್ಯಯನದ ಜೊತೆಗೆ ಆರೋಗ್ಯ ವಿಚಾರಿಸುತ್ತಾ, ತಾಳ್ಮೆಯಿಂದ ಪ್ರೋತ್ಸಾಹಿಸಿದ ಪೂಜ್ಯ ಅಪ್ಪ, ಅಮ್ಮ ಮತ್ತು ಅಜ್ಜಿಯವರಿಗೆ ಹಾಗೂ ವೀರಮ್ಮ ರುದ್ರಯ್ಯನವರಿಗೆ ಹಾಗೂ ಆರ್.ಎಂ. ಸಹೋದರರಿಗೆ,

ಬಾಗಳಿಯ ಸ್ಮಾರಕ ರಕ್ಷಕರಾದ ಮಹಾಬಲೇಶ್ವರ, ಅಮರೇಶಪ್ಪ, ಬುಳ್ಳಪ್ಪ ಮತ್ತು ಶೇಕ್ ಅಹಮ್ಮದ್ ಅವರಿಗೆ, ಅಲ್ಲದೆ ನನ್ನ ಕ್ಷೇತ್ರಕಾರ್ಯದಲ್ಲಿ ನನ್ನ ಜೊತೆಗೆ ಬಂದು ಸಹಕರಿಸಿದ ಮಲ್ಲೇಶ, ಮಂಜುನಾಥ, ರೋಣದ ನಾಗಪ್ಪ ಅವರಿಗೆ,

ನನ್ನ ಜೊತೆಗಿದ್ದು ಸಹಕರಿಸಿದ ಅಕ್ಕಂದಿರಾದ ಮಂಗಳ ಕೊಟ್ರೇಶ್, ಪ್ರೇಮಾ ವಿಜಯಕುಮಾರ ಮತ್ತು ಇತರ ಸಹೋದರ ಮತ್ತು ಸಹೋದರಿಯರಿಗೆ,


ಆತ್ಮೀಯ ಸಹೋದರನಂತಿರುವ ಜೆ.ದೇವೇಂದ್ರಪ್ಪ, ಕವಿತಾ, ಸ್ನೇಹಬಳಗಕ್ಕೆ, ನನ್ನ ಹಳ್ಳಿಯ ಸಮಸ್ತ ನಾಗರೀಕ ಬಂಧುಗಳಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ,

ಅಲ್ಪಸಮಯದಲ್ಲಿಯೇ ನಿಬಂಧವನ್ನು ಅಚ್ಚುಕಟ್ಟಾಗಿ ಸಂಯೋಜಿಸಿದ ಶ್ರೀ ಎ.ಎಂ. ಕೃಪಾಶಂಕರ್ ಮತ್ತು ಶ್ರೀಮತಿ ಬಿ.ರಶ್ಮಿಯವರಿಗೆ,


ನನ್ನ ಕೃತಜ್ಞತೆಗಳು

ಭಾರತಿ ಅಳವಂಡಿಮಠ

ಹರಪನಹಳ್ಳಿ ತಾಲೂಕು ನಕ್ಷೆ



ಬಾಗಳಿ ನಕ್ಷೆ



ಕಲ್ಲೇಶ್ವರ
ವಸ್ತುಸಂಗ್ರಹಾಲಯ
ಇಷ್ಟಲಿಂಗ
ಬಸ್‌ನಿಲ್ದಾಣ
ಚನ್ನಬಸವೇಶ್ವರ
ತ್ರಿಕೂಟ
ಮಸೀದಿ
ಮಾರುತಿ
ಪಂಚಾಯತಿ
ಬಸವೇಶ್ವರ
ಬಸದಿ
ವೀರಭದ್ರ
ಹೊನ್ನತ್ತೆಮ್ಮ
ಲಕ್ಷ್ಮೀನರಸಿಂಹ
ಕನಕೇಶ
ಚೌಡಮ್ಮ
ಹೊಸಪೇಟೆ ರಸ್ತೆ
ಕಾಳಿಕಾ

ಪರಿವಿಡಿ

ಅಧ್ಯಾಯ ೧

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಪ್ರವೇಶ

ನಮ್ಮ ಸಂಸ್ಕೃತಿಯ ಮೂಲ ಬೇರುಗಳು ಇಂದಿಗೂ ಉಳಿದು ಬಂದಿರುವುದು ಹಳ್ಳಿಗಳಲ್ಲಿ ಎಂದರೆ ತಪ್ಪಾಗಲಾರದು. ಜನಪದ ಸಾಹಿತ್ಯ, ಐತಿಹ್ಯಗಳು, ಶಾಸನಗಳು, ದೇವಾಲಯಗಳು, ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳು ಇದಕ್ಕೆ ಸಾಕ್ಷಿಯಾಗಿವೆ. ಆದರೆ ಇವು ಇಂದು ಕಾಲನ ಕೈಯಲ್ಲಿ ಸಿಕ್ಕು ಪಳೆಯುಳಿಕೆಗಳಾಗಿ ಮಾರ್ಪಟ್ಟಿವೆ. ಇತಿಹಾಸದ ಜೊತೆಗೆ ಅನೇಕ ದಂತ ಕತೆಗಳು ಬೆರೆತುಕೊಂಡು ನಿಜ ಇತಿಹಾಸ ಮರೆಯಾಗುತ್ತಿದೆ. ಇಂತಹ ಒಂದು ಹಳ್ಳಿ ಬಳ್ಳಾರಿ ಜಿಲ್ಲೆಯ ಬಾಗಳಿ ಎಂಬ ಗ್ರಾಮವಾಗಿದೆ. ಆ ಗ್ರಾಮದಲ್ಲಿ ಇಂದಿಗೂ ಪ್ರಾಚೀನ ಸಂಸ್ಕೃತಿಯ ಕುರುಹುಗಳಾದ ಶಾಸನಗಳು, ದೇವಾಲಯಗಳು ಮತ್ತು ಆಚರಣೆ ವಿಧಿ-ವಿಧಾನಗಳು ಕಂಡು ಬರುತ್ತವೆ. ಇಲ್ಲಿರುವ ನೂರಕ್ಕೂ ಹೆಚ್ಚು ಶಾಸನಗಳು, ಇಪ್ಪತ್ತಕ್ಕೂ ಹೆಚ್ಚು ದೇವಾಲಯಗಳನ್ನು ಅಧ್ಯಯನ ಮಾಡುವುದು ನಮ್ಮ ಉದ್ದೇಶವಾಗಿದೆ.

ಅಧ್ಯಯನದ ಉದ್ದೇಶ

ಇತಿಹಾಸದ ಅಧ್ಯಯನವು ಇಂದು ರಾಜಮಹಾರಾಜರ ಅಧ್ಯಯನವಾಗದೆ ಜನಸಾಮಾನ್ಯರ ಬದುಕಿನ ಅಧ್ಯಯನವಾಗಿ ವಿಸ್ತೃತಗೊಳ್ಳತೊಡಗಿದೆ. ಇದರಿಂದಾಗಿ ಅರಸರ ಚರಿತ್ರೆಯು ಗೌಣವಾಗಿ, ಶ್ರೀಸಾಮಾನ್ಯರ ಬದುಕಿಗೆ ಅವರ ಚರಿತ್ರೆಗೆ ಮಹತ್ವ ಪ್ರಾಪ್ತವಾಗಿದೆ. ಕರ್ನಾಟಕದಲ್ಲಿ ಇಂತಹ ಅಧ್ಯಯನಗಳು ತೀರವಿರಳ ವಾಗಿ ನಡೆದಿವೆ. ಇತ್ತೀಚೆಗೆ ಇಂತಹ ಅಧ್ಯಯನಗಳು ಹೆಚ್ಚಾಗಿ ಕಂಡುಬರುತ್ತಿದ್ದು, ಅವುಗಳ ಪ್ರೇರಣೆ ಈ ಅಧ್ಯಯನದ ಹಿಂದಿದೆಯೆಂದರೆ ತಪ್ಪಾಗದು. ಪ್ರಸ್ತುತ ಈ ಅಧ್ಯಯನವು ಶಾಸನಗಳ ಹಿನ್ನೆಲೆಯಲ್ಲಿ ಬಾಗಳಿಯ ಇತಿಹಾಸ ಮತ್ತು ಸಂಸ್ಕೃತಿಯನ್ನು ನೋಡುವ ಪ್ರಯತ್ನವಾಗಿದೆ. ಕರ್ನಾಟಕದಲ್ಲಿ ಶಾಸನಗಳ ಒಂದು ಸುವ್ಯವಸ್ಥಿತವಾದ ಅಧ್ಯಯನ ಆರಂಭವಾದುದ್ದು ವಾಲ್ಟೆರ್ ಇಲಿಯಟ್‌ರಿಂದ ಎನ್ನಬಹುದು. ಇವರ ಕಾಲದಿಂದ ಕರ್ನಾಟಕದ ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸಗಳ ಅಧ್ಯಯನದಲ್ಲಿ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತು. ಆನಂತರ ಬಿ.ಎಲ್.ರೈಸ್, ಆರ್. ನರಸಿಂಹಚಾರ್, ಡಾ.ಶೇಷಾದ್ರಿ, ಪಿ.ಬಿ.ದೇಸಾಯಿ, ಡಾ.ಚಿದಾನಂದಮೂರ್ತಿ ಇನ್ನೂ ಮುಂತಾದವರು ಈ ರೀತಿಯ ಅಧ್ಯಯನವನ್ನು ಮುಂದುವರಿಸಿದರು. ಇತ್ತೀಚಿಗೆ ಇವರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋದ ಇತ್ತೀಚಿನ ಸಂಶೋಧಕರು ಒಂದು ಘಟಕವನ್ನು, ಒಂದು ಸಮಾಜವನ್ನು ಅಥವಾ ಒಂದು ಗ್ರಾಮವನ್ನೇ ಅಧ್ಯಯನ ಮಾಡುವ ಹೊಸ ಪದ್ಧತಿ ಬೆಳೆಸಿದರು. ಇಂತಹ ಅಧ್ಯಯನದ ಫಲವಾಗಿ ಹಿಂದೆ ಸರದಿದ್ದ ದೇಸೀ

ಅಂಶಗಳು ಮುಂದೆ ಬಂದವು. ಅನೇಕ ಆಶ್ಚರ್ಯಕರ ಫಲಿತಾಂಶಗಳು ಪ್ರಕಟಗೊಂಡವು. ಇದರಿಂದ ಬೆಳಕೇ ಕಾಣದಿದ್ದ ಜನಪದರ ಬದುಕು, ಸಾಹಿತ್ಯ, ವೈಯಕ್ತಿಕ ಆಚರಣೆಗಳು ಬಹಿರಂಗಗೊಂಡವು. ಈ ರೀತಿಯ ಸೂಕ್ಷ್ಮ ಅಧ್ಯಯನಗಳ ಪ್ರೇರಣೆಯೇ ನಮ್ಮ ಈ ಅಧ್ಯಯನದ ಹಿಂದಿದೆ. ಇಲ್ಲಿ ಶಾಸನಗಳ ಒಂದು ಸುವ್ಯವಸ್ಥಿತ ಅಧ್ಯಯನದ ಜೊತೆಗೆ ಸಾಂಸ್ಕೃತಿಕ, ರಾಜಕೀಯ, ಆಡಳಿತ, ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳನ್ನು ಅಧ್ಯಯನ ಮಾಡಲಾಗಿದೆ.

ಈ ಹಿಂದೆ ಕೋಗಳಿ-೫೦೦, ಬಲ್ಲಕುಂದೆ-೩೦೦, ತರ್ದವಾಡಿ-೧೦೦೦ ಮುಂತಾದ ಪ್ರಾದೇಶಿಕ ಘಟಕಗಳನ್ನು, ನಾಡುಗಳನ್ನು ಕುರಿತು ಹಲವು ವಿದ್ವಾಂಸರು ಅಧ್ಯಯನ ಮಾಡಿರುವರು. ಇವುಗಳಂತೆಯೇ ಅಧ್ಯಯನದ ದೃಷ್ಟಿಯಿಂದ ಕೋಗಳಿ-೫೦೦ ನಾಡಿನ ಆಡಳಿತದ ಉಪವಿಭಾಗವಾದ ಬಾಗಳಿಯನ್ನು 'ಬಾಗಳಿ-೫೦'ರ ಒಂದು ನಾಡು ಎಂದು ಗುರುತಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ 'ಬಾಗಳಿ-೫೦' ಎಂಬ ವಿಭಾಗದ ಉಲ್ಲೇಖ ಅನೇಕ ಶಾಸನಗಳಲ್ಲಿ ಕಂಡುಬಂದಿದೆ.

ಹರಪನಹಳ್ಳಿ ತಾಲೂಕಿನ ಬಾಗಳಿ ಎಂಬ ಪುಟ್ಟ ಗ್ರಾಮ ೧೯೯೭ರ ನಂತರ ಬಳ್ಳಾರಿ ಜಿಲ್ಲೆಯಿಂದ ಬೇರ್ಪಟ್ಟು ನೂತನವಾಗಿ ರಚಿತವಾದ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾಯಿತು. ಈ ಗ್ರಾಮ ಹರಪನಹಳ್ಳಿಯಿಂದ ದಕ್ಷಿಣಕ್ಕೆ ಹತ್ತು ಕಿ.ಮೀ.ದೂರದಲ್ಲಿದೆ. ವಿಶೇಷವೆಂದರೆ ಈ ಗ್ರಾಮಕ್ಕೆ ಇಂದಿಗೂ ಸರಕಾರಿ ವಾಹನಗಳ ವ್ಯವಸ್ಥೆಯಿಲ್ಲ. ಕೇವಲ ಒಂದೆರಡು ಖಾಸಗಿ ವಾಹನಗಳಿವೆ. ಇಂತಹ ಕುಗ್ರಾಮ ನೂರಕ್ಕೂ ಹೆಚ್ಚು ಶಾಸನಗಳನ್ನು ತನ್ನ ಮಡಿಲಲಿಟ್ಟುಕೊಂಡಿದೆಯೆಂದರೆ ಆಶ್ಚರ್ಯವಾಗುತ್ತದೆ. ಸುಂದರವಾದ ನೈಜತೆಯಿಂದ ಕೂಡಿದ ಕಲ್ಯಾಣ ಚಾಳುಕ್ಯರ ಅನೇಕ ದೇವಾಲಯಗಳು ಇಲ್ಲಿ ಕಲಾರಸಿಕರಿಗೆ ಆನಂದ ನೀಡುತ್ತಿವೆ. ಕಲೆಯ ಪ್ರಪಂಚಕ್ಕೆ ಅಪರೂಪವಾದ ಕಾಣಿಕೆಯಾದ ಕಲ್ಲೇಶ್ವರ ದೇವಾಲಯವಂತೂ ನೋಡಲು ಎರಡು ಕಣ್ಣು ಸಾಲದು. ಇಂತಹ ಪ್ರಸಿದ್ಧ ದೇವಾಲಯಗಳನ್ನು ಮತ್ತು ನೂರಾರು ಶಾಸನಗಳ ಅಧ್ಯಯನ ಅವಶ್ಯವೆನಿಸಿದ್ದರಿಂದ, ''ಬಾಗಳಿ-ಶಾಸನ ಮತ್ತು ಸಂಸ್ಕೃತಿ' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ ನಮ್ಮ ಅಧ್ಯಯನಕ್ಕೂ ಪೂರ್ವದಲ್ಲಿ ಅನೇಕ ಇತಿಹಾಸಕ್ತರೂ ಬಾಗಳಿಯ ಸಂಸ್ಕೃತಿಯ ಬಗೆಗೆ ಹಲವು ಕೃತಿಗಳನ್ನು ಮತ್ತು ಲೇಖನಗಳನ್ನು ಪ್ರಕಟಿಸಿದ್ದಾರೆ. ಆದರೆ ಅವುಗಳಲ್ಲಿ ಹೆಚ್ಚಾಗಿ ಪ್ರಸಿದ್ಧವಾದ ಕಲ್ಲೇಶ್ವರ ದೇವಾಲಯದ ಬಗೆಗಿನವೇ ಅಧಿಕವಾಗಿವೆ. ಅದರಲ್ಲೂ ಅವೆಲ್ಲ ಕೇವಲ ಪರಿಚಯಾತ್ಮಕ ಲೇಖನಗಳಾಗಿವೆ. ಅನೇಕ ಬಿಡಿ ಲೇಖನಗಳನ್ನು(ಸುಧಾ, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ಡೆಕ್ಕನ್ ಹೆರಾಲ್ಡ್) ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಉದಯವಾಣಿ ವಿಶೇಷಾಂಕದಲ್ಲಿ (೧೯೮೯ರಲ್ಲಿ) ಡಾ.ಚಂದ್ರಶೇಖರ ಅವರು 'ಬೆಡಗಿನ ಬಾಗಳಿಗೆ ಬಾರಯ್ಯ ರಸಿಕ' ಎಂಬ ಬಿಡಿ ಲೇಖನವನ್ನು ಪ್ರಕಟಿಸಿದರು. ಅದರಲ್ಲಿ

ಮುಖ್ಯವಾಗಿ ಕಲ್ಲೇಶ್ವರ ದೇವಾಲಯವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ನಂತರ ಉಳಿದ ದೇವಾಲಯಗಳನ್ನು ಅಂದರೆ, ಇಷ್ಟಲಿಂಗದೇವಾಲಯ, ಚನ್ನಬಸವೇಶ, ಸಂಗನಬಸವೇಶಗಳ ಬಗ್ಗೆ ಒಂದೆರಡು ಸಾಲುಗಳಲ್ಲಿ ಮಾತ್ರ ವಿವರಿಸಿದ್ದಾರೆ. ಸ್ಥಳೀಯರಾದ ಬಣಕಾರ ರಾಜಶೇಖರಪ್ಪನವರು ಇಲ್ಲಿಯ ದೇವಾಲಯಗಳನ್ನು ಕುರಿತು ಬರೆದಿರುವರು. ಇದರಲ್ಲೂ ಕಲ್ಲೇಶ್ವರ ದೇವಾಲಯವನ್ನೇ ವಿವರಿಸಿದ್ದಾರೆ. ರಾ.ಲ.ಪುರುಷೋತ್ತಮರು ಕಂಬನಿ ದುಂಬಿದ ಕಲ್ಲುಗಳು ಎಂಬ ಪ್ರವಾಸಿ ಕೈಪಿಡಿಯಲ್ಲಿ ಬಾಗಳಿಯನ್ನು ಕುರಿತು ಒಂದು ಪುಟದಷ್ಟು ವಿವರಣೆ ನೀಡಿದ್ದಾರೆ. ಅದರಲ್ಲಿ ೩೦ ಶಾಸನಗಳ ಜೊತೆಯಲ್ಲಿ ಕಲ್ಲೇಶ್ವರ ದೇವಾಲಯವನ್ನು ಮುಖ್ಯವಾಗಿ ನೋಡಿದ್ದಾರೆ. ಸಿ.ವ.ಚನ್ನಬಸವೇಶ್ವರರು ಬಳ್ಳಾರಿ ಜಿಲ್ಲಾದರ್ಶನದಲ್ಲಿ ಒಂದು ಪುಟದಷ್ಟು ಬಾಗಳಿಯ ಇತಿಹಾಸವನ್ನು ಹೇಳಿದ್ದಾರೆ. ಇದೊಂದು ಅಗ್ರಹಾರವಾಗಿತ್ತೆಂದು ತಿಳಿಸಿದ್ದಾರೆ. ಬಳ್ಳಾರಿ ಜಿಲ್ಲಾದರ್ಶನದಲ್ಲಿ ಕುಂಬಾಸದಾಶಿವಪ್ಪನವರು ಅಲ್ಲಿನ ಕಲ್ಲೇಶ್ವರ ದೇವಾಲಯ ಮತ್ತು ಕೆಲವೊಂದು ಶಾಸನಗಳಿವೆ ಎಂದು ವಿವರಿಸಿರುವರು. ಹೆಚ್.ಎಸ್.ವಸಂತ ಅವರು 'ಕೋಗಳಿ-೫೦೦' ಬಾಗಳಿ ಒಂದು ನಾಡು ಎಂಬ(ಎಂ.ಫಿಲ್ ಅಪ್ರಕಟಿತ) ಗ್ರಂಥದಲ್ಲಿ ಬಾಗಳಿಯು, ಬಾಳ್ಗುಳಿ ಎಂದು ಶಾಸನದಲ್ಲಿ ಉಲ್ಲೇಖವಾಗಿದೆಯೆಂದು ಮತ್ತು ಇದೊಂದು ಅಗ್ರಹಾರವಾಗಿತ್ತೆಂದು ತಿಳಿಸಿದ್ದಾರೆ. ಇನ್ನು ಮಹಾಬಲ್ಲೇಶ್ವರ ಕಾಟ್ರಳ್ಳಿಯವರು 'ಬಾಗಿಳಿಯೇ ಬಾಗಳಿಗೆ' ಎಂಬ ಗ್ರಂಥವನ್ನು ಹೊರತಂದಿದ್ದಾರೆ. ಇದು ಪ್ರಮುಖವಾಗಿ ಜಾನಪದ ಅಂಶಗಳ ಅಧ್ಯಯನವನ್ನು ಸಂಭಾಷಣೆ ರೂಪದಲ್ಲಿ ಅಲ್ಲಿಯ ಜನರ ಪ್ರತಿನಿತ್ಯ ಜೀವನದ ರೀತಿ ನೀತಿಗಳನ್ನು ತಿಳಿಸಿದ್ದಾರೆ. ಬಾಗಳಿಯಲ್ಲಿ ಒಂದು 'ಕಂಚಿನ ಪತ್ರ' ದೊರತಿದ್ದು, ಇದು ಇತಿಹಾಸ ದರ್ಶನದಲ್ಲಿ ಪ್ರಕಟವಾಗಿದೆ. ಅದರಲ್ಲಿ ಬಾಗಳಿಯು ೩೩ ಹಳ್ಳಿಗಳ ಹೋಬಳಿ ಕೇಂದ್ರವಾಗಿತ್ತು ಮತ್ತು ಬಾಗಳಿ ಎಂಬ ಹೆಸರಿನ ಜೊತೆಗೆ, ಮೊದಲಿದ್ದ ನಾಮವನ್ನು ತಿಳಿಸುತ್ತದೆ. ಇನ್ನು ಇಲ್ಲಿಯ ಕಲ್ಲೇಶ್ವರ ದೇವಾಲಯದ ಬಗ್ಗೆ ಅನೇಕರು ಆಗಾಗ ಬಿಡಿಲೇಖನಗಳನ್ನು ಪ್ರಕಟಿಸುತ್ತಿರುವರು. ಇರುವುದನ್ನು ಗಮನಿಸಬಹುದು. ಡಾ.ಸಿ.ಎಸ್.ಪಾಟೀಲರು 'Raichur and Bellary Dirstict Temples' ಎಂಬ ಗ್ರಂಥದಲ್ಲಿ ಕಲ್ಲೇಶ್ವರ ದೇವಾಲಯದ ವಾಸ್ತು ಮತ್ತು ನವರಂಗದಲ್ಲಿರುವ ನಾಲ್ಕು ಕಂಬಗಳಲ್ಲಿರುವ ನರ್ತಕಿಯರನ್ನು ಕುರಿತು ಸಂಕ್ಷಿಪ್ತ ವಿವರವನ್ನು ನೀಡಿದ್ದಾರೆ. ಡಾ.ಆರ್ .ಶೇಷಶಾಸ್ತ್ರಿಯವರು 'ಕರ್ನಾಟಕದ ವೀರಗಲ್ಲು'ಗಳು ಎಂಬ ನಿಬಂಧದಲ್ಲಿ ಇಲ್ಲಿಯ ಒಂದು ಹುಲಿ ಬೇಟೆ ವೀರಗಲ್ಲಿನ ಬಗ್ಗೆ ವಿವರಣೆ ನೀಡಿದ್ದಾರೆ. ಡಾ.ಡಿ.ವಿ.ಪರಮಶಿವಮೂರ್ತಿಯವರು 'ಕನ್ನಡ ಶಾಸನಶಿಲ್ಪ' ಎಂಬ ನಿಬಂಧದಲ್ಲಿ ಇಲ್ಲಿಯ ಕೆಲವೊಂದು ಶಾಸನಶಿಲ್ಪಗಳ ಜೊತೆಗೆ ವೀರಗಲ್ಲುಗಳ ಶಿಲ್ಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಕಲ್ಲೇಶ್ವರ ದೇಗುಲದ ಶಾಸನಗಳನ್ನು ದಾನ ಶಾಸನಶಿಲ್ಪ ಎಂಬ ಅಧ್ಯಯದಲ್ಲಿ ಚರ್ಚಿಸಲಾಗಿದೆ. ಇಲ್ಲಿಯ ಮಿಥುನ ಶಿಲ್ಪಗಳ ಬಗ್ಗೆ ಕೆ.ಎನ್.ಕಾಟ್ಕರ್ ರವರು ಮೊದಲ ಬಾರಿಗೆ ಒಂದು ಲೇಖನವನ್ನು ಪ್ರಕಟಿಸಿದ್ದಾರೆ.

ಅವುಗಳಲ್ಲಿ ಮುಖ್ಯವಾದ ಮಿಥುನ ಶಿಲ್ಪಗಳನ್ನು ಸಂಕ್ಷಿಪ್ತ ವಿವರಣೆಯೊಂದಿಗೆ ಚರ್ಚಿಸಿದ್ದಾರೆ. ಡಾ.ಚನ್ನಕ್ಕ ಪಾವಟೆಯವರು 'ಶಾಸನಗಳಲ್ಲಿ ಸ್ತ್ರೀಸಮಾಜ' ಎಂಬ ನಿಬಂಧದಲ್ಲಿ ಇಲ್ಲಿಯ ಶಾಸನದಲ್ಲಿ ಉಲ್ಲೇಖವಾಗಿರುವ ಸ್ತ್ರೀ ಸ್ಥಾನಮಾನವನ್ನು ಕುರಿತು ಚರ್ಚಿಸಿದ್ದಾರೆ. ಮುಖ್ಯವಾಗಿ ದೇವದಾಸಿಯರ ಬಗ್ಗೆ ವಿವರಿಸಿದ್ದಾರೆ.

ಹೀಗೆ ಮೇಲೆ ತಿಳಿಸಿದ ನಿಬಂಧಗಳಾಗಲಿ, ಕೃತಿಗಳಾಗಲಿ, ಲೇಖನಗಳಾಗಲಿ ಇಲ್ಲಿಯ ಶಾಸನಗಳು ಮತ್ತು ದೇವಾಲಯಗಳ ಬಗ್ಗೆ ವ್ಯಾಪಕವಾದ ಅಧ್ಯಯನ ನಡೆಸಿಲ್ಲ. ಈವರೆಗಿನ ಬರಹಗಳೆಲ್ಲ ಹೆಚ್ಚಾಗಿ ಕಲ್ಲೇಶ್ವರ ದೇವಾಲಯದ ಬಗ್ಗೆ ವಿವರಣೆಯನ್ನು ನೀಡುತ್ತವೆ. ಶಾಸನಗಳಲ್ಲಿ ಯಾವುದಾದರೂ ಒಂದು ಪ್ರಕಾರವನ್ನು ಕುರಿತು ಅಥವಾ ಒಂದು ವೀರಗಲ್ಲು ಅಥವಾ ಬಿಡಿ ಶಾಸನವನ್ನು ಕುರಿತು ಚರ್ಚಿಸಲಾಗಿದೆ. ಈ ಕಾರಣದಿಂದ ಇಲ್ಲಿ ದೊರೆಯುವ ಎಲ್ಲಾ ಶಾಸನಗಳನ್ನು ಒಂದೆಡೆ ಸಂಗ್ರಹಿಸಿ ನಮ್ಮ ಸಂಸ್ಕೃತಿಯ ಪ್ರತೀಕಗಳಾದ ಅಲ್ಲಿರುವ ಎಲ್ಲಾ ದೇವಾಲಯಗಳನ್ನು ಪೂರಕವಾಗಿ ಜಾನಪದ ಸಾಹಿತ್ಯವನ್ನು ಬಳಸಿಕೊಂಡು ಒಟ್ಟುಗೂಡಿಸಿಕೊಂಡು ಅಧ್ಯಯನ ಮಾಡಬೇಕೆಂಬ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಬಾಗಳಿಯ ಜನಪದ ಸಾಹಿತ್ಯವಂತೂ ಹೇರಳವಾಗಿದೆ. ಇಲ್ಲಿನ ಜಾನಪದ ಅಧ್ಯಯನವೇ ಪ್ರತ್ಯೇಕವಾಗಿ ಆಗ ಬೇಕಾದ್ದರಿಂದ ನಮ್ಮ ಅಧ್ಯಯನದಲ್ಲಿ ಆದನ್ನು ಪೂರಕವಾಗಿ ಮಾತ್ರ ಬಳಸಿಕೊಳ್ಳಲಾಗಿದೆ.

ಬಾಗಳಿ ಒಂದು 'ಅನಾದಿಅಗ್ರಹಾರ', ಮಹಾಅಗ್ರಹಾರ, ಶ್ರೀಮತ್‌ಚಾಳುಕ್ಯಚಕ್ರೇಶ್ವರ ದತ್ತಿಯ ಅಗ್ರಹಾರವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಜೊತೆಗೆ ಇದೊಂದು ಭತ್ತ ಗ್ರಾಮವಾಗಿತ್ತೆಂದು ತಿಳಿಯುತ್ತದೆ.(ನಾಗದೇವನೆಂಬುವವನು) 'ಬಾಳ್ಗುಳಿ' ಕಾರಿಟ್ಟಿಗೆ ಮೊದಲಾದ ಫಲವು ಬತ್ತಗ್ರಾಮಗಳುನಂ... ಪ್ರತಿಪಾಳನಂಗೆಯ್ದು' ಎಂಬ ಉಲ್ಲೇಖ ಶಾಸನದಲ್ಲಿ ಬರುತ್ತದೆ. ಇದರಿಂದ ಬಾಗಳಿ ಒಂದು ಭತ್ತ ಗ್ರಾಮವಾಗಿದ್ದು ಕಾರಿಟ್ಟಿಗೆಯವರೆಗೂ ಇದರ ವ್ಯವಹಾರ ಇತ್ತೆಂದು ಹೇಳಬಹುದು. ಈ ಒಂದು ಶಾಸನದಲ್ಲಿ ಬರುವ ಉಲ್ಲೇಖವನ್ನು ಗಮನಿಸಿದಾಗ ಇದೊಂದು ಶಿಕ್ಷಣ ಕೇಂದ್ರವಾಗಿತ್ತೆಂದು ಹೇಳಬಹುದು. 'ಸ್ವಸ್ತ್ಯದಿಧಿಪರಿವೃತ್ತವಿಖ್ಯಾತ್ತೋ| ತುಂಗಮಗಾಂಗೇಯ ಯಮನಿಯಮಸ್ವಾಧ್ಯಾಯುದ್ಧ್ಯಯನಧ್ಯಾನ| ಧಾರಣಜಪಹೋಮಾನುಷ್ಠಾಣ| ಸಂಪನ್ನರಪ್ಪ ಶ್ರೀ ಮದ್ಬಾ ಳ್ಗುಳಿಯಯ್ವದಿಂಬರು' ಎಂಬುದನ್ನು ಗಮನಿಸಿದಾಗ, ಇದು ಶಿಕ್ಷಣಕೇಂದ್ರವೂ ಆಗಿತ್ತೆಂದು ಕಂಡುಬರುತ್ತದೆ. ಆದರೆ ಇದನ್ನು ಒಂದು ಕಟ್ಟೆಮನೆ ಗ್ರಾಮವೆಂತಲೂ ಕರೆಯುತ್ತಾರೆ. ಏಕೆಂದರೆ ಕಟ್ಟೆಮನೆ ಗ್ರಾಮವೆಂದರೆ ಶಿಕ್ಷೆಯನ್ನು ವಿಧಿಸುವ ಜಾಗ, ಸ್ಥಳ, ಗ್ರಾಮ ಎಂದರ್ಥವಾಗುತ್ತದೆ. ಇದಕ್ಕೆ ಆಧಾರವೆನ್ನುವಂತೆ ಅಲ್ಲಿ ಒಂದು ಕಟ್ಟೆಯೂ ಇದೆ. ಅದನ್ನು 'ಪ್ರಮಾಣದ ಕಟ್ಟೆ' ಎಂದು ಕರೆಯುತ್ತಾರೆ. ಈಗಲೂ ಅದನ್ನು ಯಾರು ಸುಲಭವಾಗಿ ಮುಟ್ಟುವುದಿಲ್ಲ. ಹೀಗೆ ಬಾಗಳಿ, ಅನಾದಿ ಅಗ್ರಹಾರ ರಾಜಧಾನಿ, ಶಿಕ್ಷಣ ಕೇಂದ್ರ, ಶಿಕ್ಷಾಕೇಂದ್ರವಾಗಿತ್ತೆಂದು ಶಾಸನಗಳಿಂದ

ಸ್ಪಷ್ಟಪಡಿಸಿದ್ದೇವೆ. ಇಂತಹ ಅಗ್ರಹಾರವಾದ ಬಾಗಳಿಯನ್ನು ರಾಷ್ಟ್ರಕೂಟರು, ಚಾಲುಕ್ಯರು, ನೊಳಂಬರು, ಪಾಂಡ್ಯರು, ಕಲಚೂರಿಗಳು, ಹೊಯ್ಸಳರು ಮಹಾಬಲಿವಂಶದವರು, ಪಾಳೆಯಗಾರರು(ಇವರ ರಾಜಧಾನಿ) ಮತ್ತು ವಿಜಯನಗರದ ಅರಸರು ಆಳ್ವಿಕೆ ಮಾಡಿದರೆಂದು ತಿಳಿದುಬರುತ್ತದೆ. ಇವುಗಳನ್ನು ಮುಂದಿನ ಅಧ್ಯಯನಗಳಲ್ಲಿ ವಿವರಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಶಾಸನಗಳ ಮಹತ್ವದಿಂದ ಗುರುತಿಸುವುದಾದರೆ ಮೊದಲು ಹಂಪೆಯನ್ನು, ನಂತರ ಬಾಗಳಿಯನ್ನು ಗುರುತಿಸಬಹುದು. ಏಕೆಂದರೆ ಇಲ್ಲಿ ನೂರಕ್ಕೂ ಹೆಚ್ಚು ಶಾಸನಗಳು ಕಂಡುಬರುತ್ತವೆ. ಈಗ ಇದು ದಾವಣಗೆರೆ ಜಿಲ್ಲೆಗೆ ಸೇರಿದೆ. ಹಂಪೆಯ ಶಾಸನಗಳಲ್ಲಿ ದಾನಶಾಸನಗಳ ಜೊತೆಗೆ ಕೆಲವೊಂದು ದೇವಾಲಯಗಳ ಉಲ್ಲೇಖಗಳು ಬರುತ್ತವೆ. ಆದರೆ ಬಾಗಳಿಯ ಶಾಸನಗಳಲ್ಲಿ ಬಹುಪಾಲು ಶಾಸನಗಳು ದಾನದ ವಿಷಯಗಳನ್ನೇ ಉಲ್ಲೇಖಿಸುತ್ತವೆ. ಕೆಲವೊಂದು ಶಾಸನಗಳಲ್ಲಿ 'ಕಲಿದೇವರು' ಎಂದು ಉಲ್ಲೇಖ ವಾಗಿದ್ದು, ಇದಕ್ಕೆ ರಾಜರು, ಮಂಡಳೇಶ್ವರರು, ಸಾಮಂತರು, ದಂಡನಾಯಕರು, ವ್ಯಾಪಾರಿಗಳು, ವರ್ತಕರು, ನಾನಾದೇಶಿ, ಅಯ್ಯಾವೊಳೆ ತಂಬುಲಿಗರು, ಸಾಸಿರ್ವರು, ವೇಶ್ಯೆಯರು ದಾನಗಳನ್ನು ನೀಡಿದರೆಂದು ಕಂಡುಬರುತ್ತದೆ. ಇವರು ನೀಡಿದ ದಾನಗಳ ಎಲ್ಲಾ ವಿವರಣೆಗಳನ್ನು ಮುಂದೆ ಚರ್ಚಿಸಲಾಗಿದೆ. ಈ ಶಾಸನಗಳಲ್ಲಿ ಹೆಚ್ಚಾಗಿ ದೇವಾಲಯದ ಪೂಜಾ ಕಾರ್ಯಗಳಿಗೆ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಬಿಟ್ಟ ದಾನಗಳೇ ಅಧಿಕ. ನಂತರ ದೇವಾಲಯದಲ್ಲಿದ್ದ ಮಹಾಜನರಿಗೆ(ಬ್ರಾಹ್ಮಣರಿಗೆ) ವಿದ್ಯಾಭ್ಯಾಸಕ್ಕೆ, ಸತ್ರಕ್ಕೆ, ಛಾತ್ರಕ್ಕೆ ಹೀಗೆ ಮುಂತಾದವುಗಳಿಗೆ ನೀಡಿದ ದಾನಗಳನ್ನು ನೋಡಲಾಗಿದ್ದು, ದೇವರ ಅಂಗಭೋಗ ಮತ್ತು ರಂಗಭೋಗಳಿಗೆ ನೀಡಿದ ದಾನಗಳು ಅಧಿಕ ಸಂಖ್ಯೆಯ ಶಾಸನಗಳಲ್ಲಿ ಕಂಡುಬರುತ್ತವೆ. ಇಲ್ಲಿ ಅಂಗಭೋಗವೆಂದರೆ ದೇವರಿಗೆ ಸಂಬಂಧಿಸಿದ ಸೇವೆ ಎಂದಾಗುತ್ತದೆ. ಇದರಲ್ಲಿ ಆಭರಣ ಉಡುಪು ಅಲಂಕಾರ ನೈವೇದ್ಯ ಮೊದಲಾದವೆಲ್ಲ ಸೇರುತ್ತವೆ. ರಂಗಭೋಗವೆಂದರೆ ದೇವಾಲಯಕ್ಕೆ ಸಂಬಂಧಿಸಿದ್ದು, ಇದರಲ್ಲಿ ದೇವಾಲಯ ನಿರ್ವಹಣೆ, ಕಾರ್ಯಕ್ರಮಗಳು, ನರ್ತನ, ಗೀತನ ಮೊದಲಾದವುಗಳಿಗೆ ಸೇರುತ್ತದೆ. ಈ ಸಮಯದಲ್ಲಿ ಸೂಳೆಯರ ಸೇವೆಯೂ ಇರುತ್ತಿತ್ತು. ಇಲ್ಲಿಯ ಎರಡು ಶಾಸನಗಳಲ್ಲಿ 'ಪನ್ನಿರ್ವಸ್ಸೂಳೆಯರ್ಗ್ಗ, ಸೂಳೆವಾಳಂಗ ವಂಚಿಗಂಗಂ ಪರಿಕಾರರ್ಗ್ಗೆ, ಪಾತ್ರಕಂ, ದೇಸಿಗಚ್ಛಾತ್ರಕ್ಕಂ' ಎಂಬ ಉಲ್ಲೇಖ ಬರುತ್ತದೆ. ಆದರೆ ಇಲ್ಲಿ ಸೂಳೆವಳ ಎಂಬಂಥ ಪದಗಳು ವಿಶೇಷವಾಗಿ ಕಂಡುಬರುತ್ತವೆ. ಇವುಗಳನ್ನು ಗಮನಿಸಿದಾಗ ಬಾಗಳಿಯಲ್ಲಿ ಪ್ರಾಚೀನ ಕಾಲದಲ್ಲಿ ಹೆಚ್ಚು ದೇವದಾಸಿಯರು ಇದ್ದರೆಂದು ಹೇಳಬಹುದು. ಇದರೊಂದಿಗೆ ಈ ಹಿನ್ನೆಲೆಯಲ್ಲಿ ಇವುಗಳ ವಿವರವಾದ ಅಧ್ಯಯನಕ್ಕೆ ಇದು ಅವಕಾಶ ಕಲ್ಪಿಸಿತು. ಈ ದೇವದಾಸಿಯರ ದೇವರಿಗೆ ಅನೇಕ ರೀತಿಯ ದಾನಗಳನ್ನು ನೀಡುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ.

ಈ ದಾನಶಾಸನಗಳ ಜೊತೆಗೆ ಅಲ್ಲಿಯ ದೇವಾಲಯಗಳು, ಸ್ಮಾರಕಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳು ಮತ್ತು ಶಾಸನಶಿಲ್ಪಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಈ ಹಿಂದೆ ಹೇಳಿದಂತೆ ಇಲ್ಲಿಯ ಶಾಸನಗಳಲ್ಲಿ ದೇವಾಲಯಗಳ ಉಲ್ಲೇಖಬರುವುದಿಲ್ಲ. ಅಲ್ಲಿಯ ಕಲ್ಲೇಶ್ವರ ದೇವರನ್ನು 'ಕಲ್ಲಿನಾಥ' ಎಂದು ಉಲ್ಲೇಖಿಸುತ್ತವೆ. ಒಂದು ಶಾಸನದಲ್ಲಿ 'ಸಬಾಳ ವೃದ್ಧಸಹಿತವಶೇಷ ಕಲಿದೇವಸ್ವಾಮಿ ದೇವಾಲಯದೊಳ್ನೆರೆದು' ಎಂದು ಉಲ್ಲೇಖವಾಗಿದೆ. ಇನ್ನೊಂದು ಶಾಸನದಲ್ಲಿ 'ಬಾಗಳಿಯ ಸೇಸಮಹಾಜನಂಗಳು, ಚಂನಕೇಶವ ದೇವಾಲಯದಲಿ xxxx...'ಎಂದು ಉಲ್ಲೇಖವಿದೆ. ಹೀಗೆ ಒಂದೆರಡು ಶಾಸನಗಳಲ್ಲಿ ಈ ದೇವಾಲಯಗಳ ಉಲ್ಲೇಖ ಬರುತ್ತದೆ. ಇವುಗಳ ಜೊತೆಗೆ ಉಳಿದ ಇತರ ದೇವಾಲಯಗಳನ್ನು ಚರ್ಚಿಸಲಾಗಿದೆ.

ಹೀಗೆ ನಮ್ಮ ಅಧ್ಯಯನದ ಮುಖ್ಯ ಉದ್ದೇಶ ಶಾಸನಗಳ ಹಿನ್ನೆಲೆಯಲ್ಲಿ ಬಾಗುಳಿಯನ್ನು, ಪ್ರಾಚೀನಕಾಲದಿಂದ ಇಂದಿನವರೆಗೆ ಕಂಡುಬಂದ ಸಾಂಸ್ಕೃತಿಕ ಕೊಡುಗೆ ಏನು? ಎಂಬುದನ್ನು ಪರಾಮರ್ಶಿಸುವುದು. ಇದರ ಜೊತೆಗೆ ಇದರ ತಾಲೂಕು ಕೇಂದ್ರವಾದ ಹರಪನಹಳ್ಳಿಯ ಸುತ್ತಲಿನ ಪರಿಸರವನ್ನು ಬಾಗಳಿಗೆ ಸಂಬಂಧಿಸಿದಂತಹ ಶಾಸನಗಳ ಹಿನ್ನೆಲೆಯಲ್ಲಿ ಜೊತೆಗೂಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಇತ್ತೀಚಿನ ಅಧ್ಯಯನಗಳು ಸಾಂಸ್ಕೃತಿಕ ಎಂಬ ವಿಶೇಷಣವನಿಟ್ಟುಕೊಂಡು ಸಾಕಷ್ಟು ಅಧ್ಯಯನಗಳಾಗ ವುದನ್ನು ನಾವು ನೋಡಬಹುದು. ಈ ನಿಬಂಧ ಶೀರ್ಷಿಕೆಯಲ್ಲಿ ಬಂದಿರುವ 'ಸಂಸ್ಕೃತಿ' ಎಂಬ ಮಾತು ಮೇಲಿನ ಅರ್ಥವನ್ನು ಹೊಂದಿದೆ. ಆದರೆ 'ಸಂಸ್ಕೃತಿ' ಎಂಬ ಮಾತು ಇತ್ತೀಚಿನದು. ಬಹುಶಃ ಇಂಗ್ಲಿಷಿನ 'Culture' ಎಂಬ ಪದಕ್ಕೆ ಸಮನಾಗಿ ಹುಟ್ಟಿಕೊಂಡು, ನೂರಾರು ವರ್ಷದಿಂದೀಚೆಗೆ (ಪ್ರಯೋಗ) ಬಳಕೆಯಾಗುತ್ತಿದೆ. ಸಂಸ್ಕೃತಿ ಎಂದರೆ ಈ ಪದಕ್ಕೆ ಅರ್ಥಕೊಡುವುದು ಸುಲಭವಾದರೂ ವ್ಯಾಖ್ಯಾನ ಕೊಡುವುದು ಕಷ್ಟ. ಇದರ ಅರ್ಥ ಕುರಿತು ವಿದ್ವಾಂಸರ ಕೆಲವು ಭಿನ್ನಾಭಿಪ್ರಾಯಗಳಿದ್ದರೂ ಈ ಪದವನ್ನು ನಾವು ಯಾವ ಅರ್ಥದಲ್ಲಿ ಬಳಸಿಕೊಂಡು ವ್ಯಾಖ್ಯಾನ ಕೊಟ್ಟಿದ್ದೇವೆ ಎಂಬುದನ್ನು ಈ ನಿಬಂಧದ ಕೊನೆಗೆ ಸೂಚಿಸಿದ್ದೇವೆ. ಶಾಸನಗಳನ್ನು ಅಧ್ಯಯನ ಮಾಡುವಾಗ ಅವುಗಳನ್ನು ಮೊದಲು ವರ್ಗೀಕರಣ ಮಾಡುವುದು ಅವಶ್ಯಕ. ಈ ವರ್ಗೀಕರಣದಲ್ಲಿ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ಉಲ್ಲೇಖಗಳೇ ಹೆಚ್ಚಾಗಿ ಕಂಡುಬರುತ್ತವೆ. ನಮ್ಮ ಅಧ್ಯಯನದಲ್ಲಿ ರಾಜಕೀಯ ಇತಿಹಾಸದ ಜೊತೆಗೆ, ಸಾಮಾಜಿಕ, ಆರ್ಥಿಕ, ಆಡಳಿತ, ಶೈಕ್ಷಣಿಕ ಇತಿಹಾಸದ ಜೊತೆಗೆ ಆಚರಣೆ ಪದ್ಧತಿಗಳನ್ನು ವಿವರಿಸಲಾಗಿದೆ. ಉದಾಹರಣೆಗೆ ರಾಜರು, ಅವರ ಪತ್ನಿಯರು ನೀಡಿದ ದಾನಗಳು, ಇವರ ಯುದ್ಧಗಳು, ದಿಗ್ವಿಜಯಗಳು

ಆ ಕಾಲದ ಸಾಮಾಜಿಕ ಚಟುವಟಿಕೆಗಳು, ರಾಜ್ಯದ ಆಡಳಿತ ಕ್ರಮ, ವಿಧಾನ, ಧರ್ಮಗಳ ಸಮನ್ವಯತೆ, ಆ ಕಾಲದ ಜನಜೀವನ (ಪ್ರಸ್ತುತ) ಹೀಗೆ ಮುಂತಾದವುಗಳನ್ನು ಚರ್ಚಿಸಲಾಗಿದೆ.

ಒಂದು ನಾಡಿನ ಜೀವನ ಕ್ರಮ ಕೆಲವು ಕಾವ್ಯಗಳಲ್ಲಿ ಅಲ್ಲಲ್ಲಿ ಜಲದಂತೆ ಕಂಡುಬಂದರೂ ಹೆಚ್ಚು ಪ್ರಮಾಣದಲ್ಲಿ ಹೆಚ್ಚು ವಿಸ್ತಾರವಾಗಿ, ಹೆಚ್ಚು ಶುದ್ಧರೂಪದಲ್ಲಿ ಕಾಣಿಸಿಕೊಳ್ಳುವುದು ಶಾಸನಗಳಲ್ಲಿ ಎಂದು ಹೇಳಬಹುದು. ಆದ್ದರಿಂದ ನಮ್ಮ ನಾಡಿನ ಜನಜೀವನವನ್ನು ಅರಿಯಬೇಕಾದರೆ ಶಾಸನಗಳಿಗಿಂತ ಉತ್ತಮವಾದ ಸಾಧನ ಮತ್ತೊಂದಿಲ್ಲವೆಂದು ಹೇಳಬಹುದು. ಇದರಿಂದ ನಮ್ಮ ನಾಡಿನ ಸಂಸ್ಕೃತಿಗೆ ಬಾಗಳಿಯ ಕೊಡುಗೆ ಏನು? ಎಂಬುದನ್ನು ಕುರಿತು ಇಲ್ಲಿ ಅಭ್ಯಸಿಸಲಾಗಿದೆ.

ವ್ಯಾಪ್ತಿ

ಸಾಮಾನ್ಯವಾಗಿ ಪ್ರತಿಯೊಂದು ಅಧ್ಯಯನಕ್ಕೂ ಒಂದು ಮಿತಿ ಎನ್ನುವುದು ಇರಲೇಬೇಕು. ಇನ್ನು ಕೆಲವೊಂದು ಅಧ್ಯಯನಗಳಿಗೂ ಮಿತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಉದಾಹರಣೆಗೆ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ್ರಿ.ಶ.೪೫೦ ರಿಂದ ೧೧೫೦ರವರೆಗೆ ಎಂದು ಮಿತಿ ಹಾಕಿಕೊಂಡಿದ್ದಾರೆ. ಇಂತಹ ಅನೇಕ ಅಧ್ಯಯನಗಳು ಇತ್ತೀಚಿಗೆ ಹೆಚ್ಚಾಗಿ ಕಂಡುಬರುತ್ತವೆ. ಬಳ್ಳಾರಿಯನ್ನಂತೂ ಹರಿದು ತುಂಡು ತುಂಡುಗಳಾಗುವಷ್ಟು ಅಧ್ಯಯನಗಳು ನಡೆಯುತ್ತಲಿವೆ. ನಮ್ಮ ಈ ಅಧ್ಯಯನವು ಶಾಸನಗಳ ಅಧ್ಯಯನವಾದ್ದರಿಂದ ಇಲ್ಲಿ ಬರುವ ಎಲ್ಲಾ ಶಾಸನಗಳನ್ನು ಒಂದೆಡೆ ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ಈ ಶಾಸನಗಳಲ್ಲಿ ಬಾಗಳಿಯ ಶಾಸನಗಳ ಜೊತೆಗೆ ಹೊರಗಿನ ಶಾಸನಗಳನ್ನು ಸೇರಿಸಿಕೊಳ್ಳಲಾಗಿದೆ. ಇದರ ವ್ಯಾಪ್ತಿಯಲ್ಲಿ ಬರುವ ಹರಪನಹಳ್ಳಿ, ಉಚ್ಚಂಗಿದುರ್ಗ, ಹಲವಾಗಿಲು, ನೀಲಗುಂದ, ಕೊಟ್ಟೂರು, ಕಾನಹಳ್ಳಿ, ಕೂಲಹಳ್ಳಿ, ಮಾಡಲಗೇರಿ, ದಾದಾಪುರ, ಹಿರೇಹಡಗಲಿ, ಹೂವಿನಹಡಗಲಿ, ಮದಲಗಟ್ಟಿ, ಕೋಗಳಿ, ಹೊಳಲು, ಹೊಳಗುಂದಿ, ಕುರುವತ್ತಿ ಇಲ್ಲಿರುವ ಶಾಸನಗಳನ್ನು ಬಳಸಿಕೊಳ್ಳಲಾಗಿದೆ. ಇವುಗಳು ಹಡಗಲಿ, ಹರಪನಹಳ್ಳಿ ತಾಲೂಕಿನ ಪ್ರದೇಶಗಳಾದರೆ, ಬಾಗಳಿಯ ಸುತ್ತಲಿನ ಗ್ರಾಮಗಳಾದ ಶೃಂಗಾರ ತೋಟ, ಕಣವಿಹಳ್ಳಿ, ನಂದಿಬೇವೂರು, ಕಾಯಕದಹಳ್ಳಿ, ದಡಿಗಾರನಹಳ್ಳಿ, ಕೂಲಹಳ್ಳಿ, ಕಾನಹಳ್ಳಿ, ಚಿಕ್ಕಹಳ್ಳಿ, ಬಂಡ್ರಿ, ಕೋಡಿಹಳ್ಳಿ ಇವುಗಳನ್ನು ನಮ್ಮ ಅಧ್ಯಯನಕ್ಕೆ ಒಳಗುಮಾಡಿ ಕೊಳ್ಳಲಾಗಿದೆ. ಒಟ್ಟಾರೆ ಬಾಗಳಿಯಲ್ಲಿ ಒಂದು ನೂರಕ್ಕೂ ಹೆಚ್ಚು ಶಾಸನಗಳು ಕಂಡುಬಂದಿದ್ದು ಅವುಗಳಲ್ಲಿ ಕೆಲವೊಂದು ತ್ರುಟಿತ, ಅಪೂರ್ಣ, ಕಾಲದ ಉಲ್ಲೇಖವಿಲ್ಲದವುಗಳು, ಸ್ಪಷ್ಟವಾದ ಮಾಹಿತಿಗಳಿಲ್ಲದವುಗಳೇ ಅಧಿಕ. ಆದರೂ ಅವೆಲ್ಲವುಗಳನ್ನು ಒಂದು ಗೂಡಿಸಿಕೊಂಡು ವಿವರಿಸಲಾಗಿದೆ. ಒಂದು ಶಾಸನ ಮಾತ್ರ ಪರಿಷ್ಕೃತ ಪಾಠವಾಗಿದೆ(೧೩.೨) ಉಳಿದವುಗಳು ಅಪೂರ್ಣ ವಿವರವನ್ನು

ಒದಗಿಸುತ್ತವೆ. ಇವುಗಳಲ್ಲಿ ಚಾಲುಕ್ಯರ ಶಾಸನಗಳೇ ಹೆಚ್ಚು. ಅದರಲ್ಲೂ ಬಹುಪಾಲು ಶಾಸನಗಳು ಶೈವ ಶಾಸನಗಳು ಚಾಲುಕ್ಯರ ಪ್ರಖ್ಯಾತ ರಾಜನಾದ ಆರನೆಯ ವಿಕ್ರಮಾದಿತ್ಯನ ೧೩ ಶಾಸನಗಳು ಇಲ್ಲಿ ಕಂಡುಬರುತ್ತವೆ. ಇದೊಂದು ವಿಶೇಷವಾದ ಸಂಗತಿಯಾಗಿದೆ. ಆರನೇ ವಿಕ್ರಮಾದಿತ್ಯನ ಇಷ್ಟೊಂದು ಶಾಸನಗಳು ಒಂದೇ ಸ್ಥಳದಲ್ಲಿ ಬೇರೆಲ್ಲೂ ದೊರಕಿಲ್ಲ. ಆದ್ದರಿಂದ ಇವರ ಕಾಲಕ್ಕೆ ಬಾಗಳಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರೆಂದು ಹೇಳಲಾಗಿದೆ. ಇನ್ನು ಇಲ್ಲಿ ಮಹಾಬಲಿವಂಶಿಯರ ಕೆಲವೊಂದು ಶಾಸನಗಳು ದೊರಕಿವೆ(ಎಲ್ಲವೂ ತ್ರುಟಿತ). ಇವರ ಉಲ್ಲೇಖಗಳು ಪ್ರಾಯಶಃ (ಬಾಗಳಿ ಮತ್ತು ನೀಲಗುಂದ) ಬೇರಲ್ಲೂ ಕಂಡುಬರುವುದಿಲ್ಲವೆನಿಸುತ್ತದೆ. ಇವರು ಬಾಣರ ಸಂಬಂಧಿಗಳಾಗಿರಬೇಕು. ಇಂತಹ ಶಾಸನಗಳಲ್ಲಿ ದಾನಶಾಸನಗಳೇ ಅಧಿಕ. ಇವುಗಳಲ್ಲಿ ಸಂಸ್ಕೃತಿಯ ಪ್ರಧಾನ ಅಂಶಗಳನ್ನು ಮತ್ತು ಧರ್ಮವನ್ನು ಆಯಾಕಾಲಕ್ಕೆತಕ್ಕಂತೆ ಗುರುತಿಸಲಾಗಿದೆ. ಈ ಎಲ್ಲಾ ಶಾಸನಗಳಲ್ಲಿ ಸಾಮಾನ್ಯ ಅಂಶಗಳಾದ ದೇವಾಲಯಗಳ ವ್ಯವಸ್ಥೆಗಾಗಿ, ಮಠಗಳಿಗಾಗಿ, ಮಹಾವ್ಯಕ್ತಿಗಳಿಗಾಗಿ ಇಲ್ಲವೇ ಅನ್ನಸಂತರ್ಪಣೆ, ಧರ್ಮ ಕಾರ್ಯಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ದಾನದತ್ತಿಗಳನ್ನು ನೀಡಿರುವುದನ್ನು ಗಮನಿಸಬಹುದು. ಇಂತಹ ದಾನಗಳನ್ನು ಲೌಕಿಕ ಸಂಪತ್ತಿನ ಗಳಿಕೆಯ ಸಾರ್ಥಕತೆ ಎಂದು ಆ ಜನ ಭಾವಿಸಿದ್ದರು. ರಾಜರಿಂದ ಹಿಡಿದು ಜನಸಾಮಾನ್ಯರವರೆಗೂ ಈ ಧಾರ್ಮಿಕ ಭಾವನೆಯ ಅವರ ಜೀವನದ ಸಹಜಗುಣವಾಗಿತ್ತೆಂದು ಶಾಸನಗಳ ನೆರವಿನಿಂದ ಸ್ಪಷ್ಟಪಡಿಸಬಹುದಾಗಿದೆ.

ಇಲ್ಲಿಯ ಶಾಸನಗಳಲ್ಲಿ ಹೆಚ್ಚಾಗಿ ಶ್ಲೋಕದ ಬದಲಾಗಿ ರಾಜ್ಯವನ್ನಾಳುತ್ತಿರುವ ಚಕ್ರವರ್ತಿಯ ಸಕಲ ಬಿರುದಾವಳಿಗಳೊಡನೆ ಶಾಸನ ಪ್ರಾರಂಭವಾಗುತ್ತವೆ. ಚಕ್ರವರ್ತಿಯ ವಂಶವೃಕ್ಷದ ದೀರ್ಘವಾದ ವರ್ಣನೆ ಇಲ್ಲಿ ಬರುತ್ತದೆ. ಕೆಲವು ವೇಳೆ ಮೂರು ನಾಲ್ಕು ತಲೆಮಾರುಗಳಷ್ಟು ಹಿಂದಿನ ವಂಶವನ್ನು ಹೇಳಿದರೆ, ಇನ್ನು ಕೆಲವು ಶಾಸನಗಳಲ್ಲಿ ವಂಶದ ಮೂಲಪುರುಷನಿಂದ ಪ್ರಾರಂಭಿಸಿ ಹೇಳಿರುವುದುಂಟು. ಬಿರುದಾವಳಿಗಳೆಲ್ಲ ಗದ್ಯದಲ್ಲಿದ್ದು ವಂಶವೃಕ್ಷದ ವರ್ಣನೆ ಸಾಮಾನ್ಯವಾಗಿ ಪದ್ಯದಲ್ಲಿದೆ. ಇಂತಹ ಗದ್ಯ ಪದ್ಯಗಳಿಂದ ಕೂಡಿದ ಶಾಸನಗಳು ಚಂಪೂಶೈಲಿಯಲ್ಲಿ ಉಲ್ಲೇಖವಾಗಿರುತ್ತವೆ. ಶಾಸನಗಳು ಕನ್ನಡ ಸಾಹಿತ್ಯದ ತಲಕಾವೇರಿ. ಕನ್ನಡ ಕಾವ್ಯಗಳಿಗೂ (ಸಾಹಿತ್ಯ) ಶಾಸನಗಳಿಗೂ ಒಂದು ರೀತಿಯ ಅವಿನಾಭಾವ ಸಂಬಂಧ. ಮೊದಲು ಶಾಸನ ಹುಟ್ಟಿಕೊಂಡರೆ, ಅದೇ ರೀತಿಯಾಗಿ ಕನ್ನಡ ಕಾವ್ಯಗಳು ಬಂದವು. ಕನ್ನಡ ಕಾವ್ಯದ ಜಿನಗು ಮೊತ್ತ ಮೊದಲು ಕಂಡುಬರುವುದು ಶಾಸನಗಳಲ್ಲಿ ಎನ್ನುವಂತೆ ಪಂಪನ ಕಾವ್ಯಗಳಿಗಿಂತ ಹಿಂದಿನ ಕಾವ್ಯವಾಗಲಿ, ನೃಪತುಂಗನ ಕವಿರಾಜಮಾರ್ಗಕ್ಕಿಂತ ಹಿಂದಿನ ಗ್ರಂಥವಾಗಲಿ ನಮಗೆ ಇನ್ನೂ ದೊರೆತಿಲ್ಲ.

ಮೇಲೆ ತಿಳಿಸಿದ ಹಾಗೆ ರಾಜಾಧಿರಾಜರಿಂದ ಹಿಡಿದು ಜನಸಾಮಾನ್ಯರವರೆಗೂ ಧರ್ಮದ ನಂಬಿಕೆಯು ಜೀವನದ ಸಹಜಗುಣವಾಗಿ ಪರಿಣಮಿಸಿತ್ತು. ಸಾಹಿತ್ಯ ಕೃತಿಗಳು ಈ ಧರ್ಮದ ಹಿನ್ನೆಲೆಯಲ್ಲಿ

ರಚಿತವಾದವುಗಳೆಂದು ಹೇಳಬಹುದು. ಅದರ ಫಲವಾಗಿ ಊರೂರಿನಲ್ಲಿ ದೇವಾಲಯಗಳು ತಲೆಯೆತ್ತಿದುವು. ದಾನ ಧರ್ಮಗಳು ಜೀವನದ ತಳಹದಿಯಾದವು. ಬಾಗಳಿಯ ಅನೇಕ ದೇವಾಲಯಗಳು ಚಾಲುಕ್ಯರ ಕಾಲದವುಗಳು ಎನ್ನುವುದು ವಿಶೇಷ. ಶಿಲ್ಪ ಜಗತ್ತಿಗೆ ಮೃದುವಾದ ಬಳಪದ ಕಲ್ಲಿನಲ್ಲಿ ಶಿಲ್ಪಗಳನ್ನು ಕೆತ್ತಿರುವುದರಿಂದ ಇವರ ಕಲೆ ಒಂದು ಕಾಣಿಕೆಯಾಯಿತು. ಇಲ್ಲಿನ ಕಲ್ಲೇಶ್ವರ ದೇವಾಲಯವಂತೂ ನೋಡಲು ಮನಮೋಹಕವಾಗಿದೆ. ಪ್ರಶಾಂತವಾದ ವಾತಾವರಣದಲ್ಲಿ ಸೂಕ್ಷ್ಮ ಕೆತ್ತನೆಯಿಂದಕೂಡಿದ್ದು, ಅಚ್ಚು ಮತ್ತು ಗಾರೆಯಿಂದ ಕಟ್ಟಿದ ಗೋಪುರವನ್ನು ಹೊಂದಿದೆ. ಆದರೆ ಈ ಗೋತ್ರದ ವಿಜಯನಗರದ ಕಾಲದ ದೇವಾಲಯಗಳ ಗೋಪುರದಂತೆ ಕಂಡುಬರುವುದರಿಂದ ಅವರ ಕಾಲದ್ದೇ ಎಂದು ಹೇಳುವುದು ಅಷ್ಟು ಸಮಂಜಸವಲ್ಲ. ಈ ದೇವಾಲಯದಲ್ಲಿ ನವರಂಗದಲ್ಲಿರುವ ಮದನಿಕ ವಿಗ್ರಹಗಳ ಕೆತ್ತನೆಯಂತೂ ಅದ್ಭುತವಾಗಿದೆ. ಇವು ನಾಲ್ಕು ಕಂಬಗಳಲಿದ್ದು ಒಟ್ಟು ೧೬ ಮದನಿಕೆ ವಿಗ್ರಹಗಳು ಕಂಡುಬರುತ್ತವೆ. ಪ್ರತಿಯೊಂದೂ ವಿವಿಧ ಭಂಗಿಗಳಲ್ಲಿ ಕೆತ್ತಲ್ಪಟ್ಟವೆ. ಇಲ್ಲಿಯ ಉತ್ತರಕ್ಕಿರುವ ಉಗ್ರನರಸಿಂಹವಂತೂ ಕಲಾ ಪ್ರಪಂಚಕ್ಕೆ ಒಂದು ಕಾಣಿಕೆ. ತುಂಬಾ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಆ ನರಸಿಂಹನ ಉಗ್ರ ಕೆತ್ತನೆ ಭಯ ಉಂಟಾಗುವ ರೀತಿಯಲ್ಲಿದೆ. ಇಷ್ಟಲಿಂಗ ದೇವಾಲಯ ಎತ್ತರವಾದ ತಳಹದಿಯ ಮೇಲೆ ರಚಿತವಾಗಿದ್ದು, ಇದೂ ಕೂಡ ಎತ್ತರವಾಗಿದ್ದು, ಚಾಲುಕ್ಯರ ಶೈಲಿಯಲ್ಲಿದೆ. ಉಳಿದ ದೇವಾಲಯಗಳನ್ನು ಅಧ್ಯಾಯ ಐದರಲ್ಲಿ ಸಮಗ್ರವಾಗಿ ಚರ್ಚಿಸಲಾಗಿದೆ. ಜೊತೆಗೆ ಬಾಗಳಿ ಗ್ರಾಮದೊಳಗಿರುವ ಇತರ ದೇವಾಲಯಗಳನ್ನೂ ಬಳಸಿಕೊಳ್ಳಲಾಗಿದೆ.

ಬಾಗಳಿಯ ಬಗ್ಗೆ ಸ್ಥಳೀಯರ ಹೇಳಿಕೆ, ಕಥೆ, ಹಾಡು, ಲಾವಣಿಗಳನ್ನು ಬಳಸಿಕೊಳ್ಳಲಾಗಿದ್ದು, ಇವುಗಳ ಜೊತೆಗೆ ಬಾಗಳಿ ಎಂಬ ಹೆಸರು ಈ ಮೊದಲು ಏನಿತ್ತು ಅದು ಬರುಬರುತ್ತಾ ಹೇಗೆ ಮಾರ್ಪಟ್ಟಿತು ಎಂಬುದನ್ನು ಅಲ್ಲಿನ ಐತಿಹ್ಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಹೀಗೆ ಇವೆಲ್ಲವುಗಳ ಜೊತೆಗೆ ವ್ಯಾಪಕ ಕ್ಷೇತ್ರಕಾರ್ಯದೊಂದಿಗೆ ಬಾಗಳಿಯ ಸಮಗ್ರ ಇತಿಹಾಸದೊಂದಿಗೆ ಇಲ್ಲಿನ ಪ್ರಮುಖ ದೇವಾಲಯಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಜೊತೆಗೆ ಶಾಸನಶಿಲ್ಪಗಳನ್ನು ವಿವರವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಇಲ್ಲಿ ಕೆಲವೊಂದು ಅಪ್ರಕಟಿತ ಶಾಸನಗಳು ದೊರೆತಿವೆ. ಅವುಗಳನ್ನು ನಿಬಂಧದಲ್ಲಿ ಹೇಳಿಲ್ಲ. ಆದ್ದರಿಂದ ಶಾಸನಗಳಲ್ಲಿ ಮೊದಲು ರಾಷ್ಟ್ರಕೂಟರ ಶಾಸನಗಳಿಂದ ಪ್ರಾರಂಭಗೊಂಡು ವಿಜಯನಗರದ ಅರಸರವರೆಗೂ ಉಲ್ಲೇಖವಾಗಿರುವ ಶಾಸನಗಳ ಹಿನ್ನೆಲೆಯಲ್ಲಿ 'ನಮ್ಮ ಸಂಸ್ಕೃತಿ ನೆಲೆಗಳಿಂದ ಹಳ್ಳಿಗಳಲ್ಲಿ ಬಾಗಳಿ' ಎಂಬ ಹಳ್ಳಿಯ ಸಂಸ್ಕೃತಿಯನ್ನು ಅಧ್ಯಯನ ಮಾಡಲಾಗಿದೆ.

◆◆

ಅಧ್ಯಾಯ ೨

ಬಾಗಳಿಯ ಇತಿಹಾಸ

೧. ಪುರಾತತ್ವ ಹಿನ್ನೆಲೆ
೨. ಭೌಗೋಳಿಕ ಹಿನ್ನೆಲೆ
೩. ಇತಿಹಾಸ
  ೧. ಮೌರ್ಯರು
  ೨. ಶಾತವಾಹನರು
  ೩. ಕದಂಬರು
  ೪. ಗಂಗರು
  ೫. ರಾಷ್ಟ್ರಕೂಟರು
  ೬. ಕಲ್ಯಾಣ ಚಾಲುಕ್ಯರು
  ೭. ಪಾಂಡ್ಯರು
  ೮. ಸೇವುಣರು
  ೯. ಹೊಯ್ಸಳರು
  ೧೦. ವಿಜಯನಗರದ ಅರಸರು
  ೧೧. ಪಾಳೆಯಗಾರರು
  ೧೨. ಮಹಾಬಲಿವಂಶಿಯರು

ಪೀಠಿಕೆ

ಕರ್ನಾಟಕವು ಭೌಗೋಳಿಕ ದೃಷ್ಟಿಯಿಂದ ಬಹುಪುರಾತನವಾದುದು. ಪುರಾತನ ಕಾಲದ ಮಾನವನ ಚಟುವಟಿಕೆಗಳನ್ನು ಆದಿ ಹಳೆಶಿಲಾಯುಗದ ಕಾಲದಿಂದಲೂ ಗುರುತಿಸಲಾಗಿದೆ. ಅದರಲ್ಲೂ ಬಳ್ಳಾರಿ ಜಿಲ್ಲೆ, ಆಗಿನ ಮದ್ರಾಸ್ ಪ್ರಾಂತ್ಯದ ಇತರೆ ಜಿಲ್ಲೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಶಿಲಾಯುಗದ ನೆಲೆಗಳನ್ನು ಮತ್ತು ಅವಶೇಷಗಳನ್ನು ಹೊಂದಿದೆ ಎಂದು ೧೯೦೮ರ ಭಾರತದ ಇಂಪೀರಿಯಲ್ ಗೆಜೆಟಿಯರ್ ತಿಳಿಸುತ್ತದೆ. ರಾಬರ್ಟ್ ಬ್ರೂಸ್‌ಫೂಟ್ ಎಂಬುವನು ಈ ಜಿಲ್ಲೆಯ ಪ್ರಮುಖ ಪ್ರಾಗೈತಿಹಾಸಿಕ ನೆಲೆಗಳನ್ನು ಸರ್ವೇಕ್ಷಣೆ ಮಾಡಿ, ಅವುಗಳಲ್ಲಿ ೭೭ ನೆಲೆಗಳನ್ನು ಗುರುತಿಸಿ ಅವುಗಳಲ್ಲಿ ಸುಮಾರು ೩೬ ನೆಲೆಗಳು ಪ್ರಮುಖವಾಗಿವೆ ಎಂದು ತಿಳಿಸುತ್ತಾನೆ. ಬಳ್ಳಾರಿ ಕೋಟೆ ಪ್ರದೇಶದಲ್ಲಿ ಕಪ್ಪು ಜ್ವಾಲಾಮುಖಿ ಶಿಲೆಯ ಆಯುಧಗಳು, ಹೊಸಪೇಟೆಯ ಗಾದಿಗನೂರು ಕುರಿಕುಪ್ಪೆ ಬೆಟ್ಟಗಳಲ್ಲಿ ಹಳೆ ಶಿಲಾಯುಗಕ್ಕೆ ಸಂಬಂಧಿಸಿದ ಶಿಲಾಯುಧಗಳು, ಸಂಡೂರಿನ ಕಬ್ಬಿಣದ ಅದಿರುಗಳು, ಹರಪನಹಳ್ಳಿ, ಹಲುವಾಗಿಲ ಬಳಿ ಬೃಹದಾಕಾರದ ಕಲ್ಲುಗಳು(ಬಿಳಿಕಲ್ಲು) ಕುರುವತ್ತಿಯ ನೆಲೆಯಲ್ಲಿ ಬೆಣಚುಶಿಲೆಯ ಶಿಲಾಯುಧಗಳು ಬೆಳಕಿಗೆ ಬಂದಿವೆ. ಇವುಗಳಿಂದ ಆದಿ ಹಳೆಶಿಲಾಯುಗದ ಈ ಸಾಂಸ್ಕೃತಿಕ ಸಂಪ್ರದಾಯದ ಒಂದು ನೆಲೆದೊರೆತದ್ದು ಇಡೀ ದಕ್ಷಿಣ ಭಾರತದಲ್ಲಿಯೇ ಪ್ರಥಮವಾಗಿದೆ. ಇಂತಹ ಸಾಂಸ್ಕೃತಿಕ ನೆಲೆಗಳಲ್ಲಿ, ಗ್ರಾಮಗಳು ಸಂಸ್ಕೃತಿಯ ಕೇಂದ್ರಗಳಾಗಿರುವಂತೆ ಅಭಿವೃದ್ಧಿಯ ಮಾನದಂಡಗಳು ಹೌದು. ಇದರಿಂದ ಗ್ರಾಮಗಳು ಅಭಿವೃದ್ಧಿ ಹೊಂದಿದ್ದರೆ ಇಡೀ ದೇಶವೇ ಅಭಿವೃದ್ಧಿ ಹೊಂದಿದಂತೆ. ಇಂತಹ ಗ್ರಾಮಗಳ ಸಂಸ್ಕೃತಿಯನ್ನು ತಿಳಿಯಬೇಕಾದರೆ ಇತಿಹಾಸದ ಮೊರೆಹೋಗಬೇಕಾಗು ತ್ತದೆ. ಈ ಗ್ರಾಮದ ಇತಿಹಾಸ ತಿಳಿಯಬೇಕಾದರೆ ಶಾಸನಗಳನ್ನು ಮತ್ತು ಜನಪದ ಸಾಹಿತ್ಯವನ್ನು ಅವಲಂಬಿಸಬೇಕಾಗಿದೆ. ಆ ಗ್ರಾಮ ಹರಪನಹಳ್ಳಿ ತಾಲೂಕಿನ ಈಗಿನ ದಾವಣಗೆರೆ ಜಿಲ್ಲೆಯ ಬಾಗಳಿ ಗ್ರಾಮವಾಗಿದೆ. ಇಲ್ಲಿ ಮೊದಲು ಹರಪನಹಳ್ಳಿ ಪರಿಸರದ ಹಿನ್ನೆಲೆ ಹೇಳಿ, ನಂತರ ಬಾಗಳಿಯ ಹಿನ್ನೆಲೆಯನ್ನು ಗುರುತಿಸಲಾಗಿದೆ.

ಹರಪನಹಳ್ಳಿ ಪರಿಸರದ ಭೌಗೋಳಿಕ ಹಿನ್ನೆಲೆ

ಹರಪನಹಳ್ಳಿ ಭೌಗೋಳಿಕವಾಗಿ ಸಮುದ್ರಮಟ್ಟಕ್ಕಿಂತ ಎತ್ತರವಾಗಿದ್ದು, ಹೆಚ್ಚು ಮಳೆ ಬೀಳುವ ತಾಲೂಕು ಕೇಂದ್ರವಾಗಿದೆ. ವಾರ್ಷಿಕ ಸರಾಸರಿ ೭೩೦.೭೯ ಸೆಂ.ಮೀ.ನಷ್ಟು ಮಳೆ ಬೀಳುವ ಪ್ರದೇಶವಾಗಿದೆ. ಇದರ ಉತ್ತರಕ್ಕೆ ಇಳಿಜಾರಿನ ಗುಡ್ಡ-ಶ್ರೇಣಿ, ದಟ್ಟವಾದ ಕಾಡುಗಳಿಂದ ಕೂಡಿದ್ದು, ಪಕ್ಕದಲ್ಲಿಯೇ

ಗೋಸಾಯಿ ಗುಡ್ಡದಲ್ಲಿ ಗೋಸಾಯಿ ಸಮಾಧಿ, ಎತ್ತರವಾದ ಪ್ರದೇಶದಲ್ಲಿ ಕಂಡುಬರುತ್ತದೆ. ದಕ್ಷಿಣಕ್ಕೆ ಕೊಂಡಜ್ಜಿ ಮುಂತಾದ ಗ್ರಾಮಗಳ ಸಮೂಹವಾಗಿ, ಉಚ್ಚಂಗಿ ದುರ್ಗದವರೆಗೂ ಸಾಗಿದೆ. ಇದರ ಸುತ್ತಲೂ ಕೆಲವು ಗುಡ್ಡಗಾಡು ಪ್ರದೇಶಗಳು ಕಂಡುಬರುತ್ತವೆ. ಚಿಗಟೇರಿಯ ಜಾಜಿಕಲ್ಲುಗುಡ್ಡ, ಮಲ್ಲಪ್ಪನ ಗುಡ್ಡ, ಗೋಸಾಯಿ ಗುಡ್ಡ ಮುಂತಾದವುಗಳನ್ನ ಹೆಸರಿಸಬಹುದು. ಇನ್ನು ಕೆಲವು ಪ್ರದೇಶಗಳಲ್ಲಿ ಮ್ಯಾಂಗನೀಸ್ ಅದಿರು, ತಾಮ್ರ ಸಿಕ್ಕಿರುವುದು ಕಂಡುಬರುತ್ತವೆ. ಕೊಂಗನಹೊಸೂರು, ಕಲ್ಲಳ್ಳಿಯಲ್ಲಿ ಮೆಕ್ಕಲುಮಣ್ಣು, ಕಣಿವೆಹಳ್ಳಿ ಬಳಿ ಕಬ್ಬಿಣದ ಅದಿರು ಹಲುವಾಗಿಲಿಗೆ ಒಂದು ಮೈಲಿ ದೂರದಲ್ಲಿ ಬಿಳಿಯ ಜೇಡಿಮಣ್ಣು, ಸುಣ್ಣದಕಲ್ಲುಗಳು ದೊರೆಯುತ್ತವೆ.

ಹೀಗೆ ಉತ್ತರಕ್ಕೆ ಹಡಗಲಿ, ಪೂರ್ವಕ್ಕೆ ಕೂಡ್ಲಿಗಿ, ಜಗಳೂರು, ದಕ್ಷಿಣಕ್ಕೆ ದಾವಣಗೆರೆ(ಜಿಲ್ಲೆ) ಹರಿಹರ, ಪಶ್ಚಿಮಕ್ಕೆ ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲೂಕುಗಳಿಂದ ಸುತ್ತುವರಿದು, ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚು ಗಮನ ಸೆಳೆದ ಕೇಂದ್ರವಾಗಿದೆ. ಈ ತಾಲೂಕಿನ ಸುತ್ತಲೂ ಹೆಚ್ಚಾಗಿ ಕೆರೆಗಳು ಕಂಡುಬರುತ್ತವೆ. ಇನ್ನೂ ಕೆಲವೊಂದು ಕಡೆಗಳಲ್ಲಿ ಹೊಸಕೆರೆಗಳು ನಿರ್ಮಾಣವಾಗುತ್ತಿವೆ. ೧೯೭೨ರ ಅಂಕಿ ಅಂಶಗಳ ಪ್ರಕಾರ ಹರಪನಹಳ್ಳಿಯಲ್ಲಿ ೪೦ ಸಣ್ಣಕೆರೆಗಳು, ೬ ದೊಡ್ಡಕೆರೆಗಳು ಇದ್ದವೆಂದು ತಿಳಿದುಬರುತ್ತದೆ. ಹತ್ತಿರದ ತುಂಗಭದ್ರಾ ನದಿಯು ಪಕ್ಕದ ಗ್ರಾಮವಾದ ಹಲುವಾಗಿ ನಿಂದ ಉಪನದಿಯಾಗಿ, ಚಿಕ್ಕ ಚಿಕ್ಕ ಹಗರಿಗಳಾಗಿ ಹರಿದು ಅಣಿಜಿಯಿಂದ ಉತ್ತರಾಭಿಮುಖವಾಗಿ ಹಡಗಲಿಯ ಬಳಿ ಮದಲಗಟ್ಟಿ ಹೊಳೆಯನ್ನು ಸೇರುತ್ತದೆ. ಹೀಗೆ ಬಳ್ಳಾರಿ ಜಿಲ್ಲೆಯಿಂದ ದಕ್ಷಿಣಕ್ಕೆ ೨೦೦ಕಿ.ಮೀ ದೂರದಲ್ಲಿ ಭೌಗೋಳಿಕವಾಗಿ ವಿಭಿನ್ನ ರೀತಿಯಿಂದ ಗುರುತಿಸಿಕೊಂಡಿದ್ದು ಕರಕುಶಲಗಳಿಗೆ, ಕೃಷಿಕರಿಗೆ, ವೀರರಿಗೆ, ಕವಿಗಳಿಗೆ, ಜನಪದರಿಗೆ ನೆಲೆನೀಡಿದೆ.

ಹರಪನಹಳ್ಳಿಯ ಚಾರಿತ್ರಿಕ ಹಿನ್ನೆಲೆ

ಬಳ್ಳಾರಿ ಜಿಲ್ಲೆ ಪೂರ್ವದಲ್ಲಿ ಸುಮಾರು ಒಂದು ಸಾವಿರ ವರ್ಷಗಳಿಂದಲೂ ನೊಳಂಬವಾಡಿ-೩೨೦೦೦, ಆಡಳಿತ ವಿಭಾಗಕ್ಕೆ ಒಳಪಟ್ಟಿತ್ತು. ಈ ನೊಳಂಬವಾಡಿ ೩೨೦೦೦ ವಿಭಾಗಗಳಲ್ಲಿ ಒಂದಾದ ಕೋಗಳಿ-೫೦೦ ಒಂದು ಭಾಗವಾಗಿತ್ತು. ಕದಂಬವಾಡಿ-೧೦೦೦ ವಿಭಾಗಕ್ಕೆ ಹರಪನಹಳ್ಳಿಯ ಕೆಲವು ಗ್ರಾಮಗಳು ಸೇರಿದ್ದವು. ಇವುಗಳಲ್ಲಿ ಹರಪನಹಳ್ಳಿ, ಕೋಗಳಿ-೫೦೦ರ ಒಂದು ಭಾಗವಾಗಿತ್ತು. ಅಂದರೆ ಕ್ರಿ.ಶ.೧೮೬೮ ೮೨ರವರೆಗೆ ಬ್ರಿಟಿಷರ ಆಡಳಿತ ಸಂದರ್ಭದಲ್ಲಿ ಹರಪನಹಳ್ಳಿ ಬಳ್ಳಾರಿ ಜಿಲ್ಲೆಯ ಪಶ್ಚಿಮದ ತಾಲೂಕು ಕೇಂದ್ರವಾಗಿದ್ದು, ಡೆಪ್ಯೂಟಿ ಕಲೆಕ್ಟರ್ ಸಾಹೇಬರ ಮುಖ್ಯಸ್ಥಳವಾಗಿತ್ತು. ೧-೧೦-೧೯೫೩ರಲ್ಲಿ ಬಳ್ಳಾರಿ ಜಿಲ್ಲೆ ಮೈಸೂರು ಪ್ರಾಂತ್ಯಕ್ಕೆ ಸೇರುವ ಮೊದಲು ಮದ್ರಾಸ್ ರಾಜ್ಯಕ್ಕೆ ಸೇರಿತ್ತು. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯದ ರಚನೆಯಾದಾಗ, ಬಳ್ಳಾರಿ ಈ ತಾಲೂಕಿನ ಜಿಲ್ಲೆಯಾಯಿತು. ೧೯೯೮-೯೯ ನಂತರ ದಾವಣಗೆರೆ

ಜಿಲ್ಲೆಗೆ ಸೇರ್ಪಡೆಯಾಯಿತು. ಹರಪನಹಳ್ಳಿ ೧.೪೨೨೩ ಚ.ಮೀ ವಿಸ್ತೀರ್ಣ ಹೊಂದಿದ್ದು, ೧೯೭೧ರ ಜನಗಣತಿಯಂತೆ, ೧,೪೫,೭೧೪ ಜನಸಂಖ್ಯೆ ಇದ್ದು, ೧೯೯೧ರ ಪ್ರಕಾರ ೨,೩೭,೦೦೦ದಷ್ಟು ಹೆಚ್ಚಳವಾಯ್ತು. ಇದು ಒಂದು ಹೋಬಳಿಯಾಗಿದ್ದು ಮೂರು(ಫಿರ್ಕಾ) ಹೋಬಳಿಗಳನ್ನು ಹೊಂದಿದೆ. ಚಿಗಟೇರಿ, ಅರಸಿಕೆರೆ, ತೆಲಿಗಿ. ಈ ತಾಲೂಕು ೭೬ ಗ್ರಾಮಗಳನ್ನು ಮತ್ತು ೧೫೪ ಕಂದಾಯ ಗ್ರಾಮಗಳನ್ನು ಹೊಂದಿದೆ. ಇಷ್ಟೆಲ್ಲಾ ಬೆಳೆದಿದ್ದರೂ ಹದಿಮೂರನೆ ಶತಮಾನದವರೆಗೂ ಗಣನೀಯವಲ್ಲದ ಚಿಕ್ಕಗ್ರಾಮವಾಗಿತ್ತು. ಚಾರಿತ್ರಿಕವಾಗಿ ಈ ತಾಲೂಕಿನ ಇತರ ಪ್ರದೇಶಗಳು ಗಣನೆಗೆ ತೆಗೆದುಕೊಳ್ಳಬೇಕಾದಂತ ಸ್ಥಿತಿಯಲ್ಲಿತ್ತು. ನಂತರ ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರವಾದ್ದರಿಂದ ಬಳ್ಳಾರಿ ಜಿಲ್ಲೆಯ ಆಳ್ವಿಕೆಗೆ ಒಳಪಟ್ಟಿತು. ಅಂದರೆ ಬಳ್ಳಾರಿ ಮೌರ್ಯರ ಆಳ್ವಿಕೆಗೆ ಒಳಪಟ್ಟಾಗ, ಅದರಲ್ಲಿ ಈ ಪ್ರದೇಶವೂ ಸೇರಿದ್ದು, ನಂತರ ಹಿರೇಹಡಗಲಿ ಶಾಸನದಲ್ಲಿ[೧] ಈ ಪ್ರದೇಶವನ್ನು 'ಶಾತವಾಹನೀಯ' ಎಂದು ಉಲ್ಲೇಖ ಬಂದಿರುವುದರಿಂದ, ಶಾತವಾಹನರಿಗೆ ಸೇರಿದ್ದೀತು. ಐದನೆಯ ಶತಮಾನದಲ್ಲಿ ಈ ಪ್ರದೇಶವು ಬನವಾಸಿಯ ಕದಂಬರಿಗೆ ಸೇರಿದ್ದು, ಇವರು ಉಚ್ಚಂಗಿದುರ್ಗದವರೆಗೂ ರಾಜ್ಯ ವಿಸ್ತರಿಸಿದ್ದು, 'ಬನವಾಸಿ-೧೨೦೦೦' ಎಂದು ಹೆಸರಾಯಿತು. ಇವರ ನಂತರ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಇವರ ಸಾಮಂತರಾಗಿದ್ದ ನೊಳಂಬರಿಗೆ ಈ ಪ್ರದೇಶದ ಕೆಲಭಾಗಗಳು ಸೇರಿದ್ದವು. ನೊಳಂಬವಾಡಿ ೩೨೦೦೦ರ ಮಹಾಮಂಡಳೇಶ್ವರ ಆಳ್ವಿಕೆಗೆ ಒಳಪಟ್ಟಿತು. ೧೦೬೪ರ ಉಚ್ಚಂಗಿಯ ಒಂದು ಶಾಸನದಲ್ಲಿ[೨] ಕಲ್ಯಾಣಿ ಚಾಲುಕ್ಯರ ಸಾಮಂತರಾದ ಉಚ್ಚಂಗಿ ಪಾಂಡ್ಯರು ಈ ಭಾಗವನ್ನು ಆಳಿದರೆಂದು ಕಂಡುಬರುತ್ತದೆ. ಹನ್ನೆರಡನೆಯ ಶತಮಾನದವರೆಗೂ ಇವರು ಆಳ್ವಿಕೆ ನಡೆಸಿದರು. ನಂತರ ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟ ಈ ಸಾಮ್ರಾಜ್ಯ ೧೫೬೫ರ, ರಕ್ಕಸ ತಂಗಡಿ ಯುದ್ಧದಲ್ಲಿ ಪತನವಾಯಿತು. ಇದೇ ಸಾಮ್ರಾಜ್ಯದಲ್ಲಿ ದಳಪತಿಗಳಾಗಿ, ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಪಾಳೆಯಗಾರರಿಂದ, ಹರಪನಹಳ್ಳಿ ಪಾಳೆಯಪಟ್ಟು ಸ್ಥಾಪನೆಯಾಯಿತು. ಇಲ್ಲಿ ಪಾಳೆಯಗಾರರು ೧೪೮೮ ರಿಂದ ೧೭೯೯ವರೆಗೆ ರಾಜ್ಯಭಾರ ಮಾಡಿದರು. ಇವರು ಸ್ವತಂತ್ರಪ್ರಿಯರು. ಆಗ ಬಳ್ಳಾರಿ ಆಂಗ್ಲರ ಆಡಳಿತಕ್ಕೆ ಒಳಪಟ್ಟ ಬಳಿಕ ಈ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಹಾಗೆಯೇ ಉಳಿಯಿತು. ಕ್ರಿ.ಶ.೧೮೫೭[೩] ರಲ್ಲಿ ಮೀರಾಕೊರನಹಳ್ಳಿಯ ಮುದಗಲ್ ಗಡಾದ ದೇಸಾಯಿ, ಸಣ್ಣಬಸವನ ಗೌಡರ ಪೂರ್ವಜರಾದ ದೊಡ್ಡರಾಯನ ಗೌಡ ಮತ್ತು ಭೀಮನಗೌಡ ಎನ್ನುವವರು, ಬಂಡಾಯದ ಭೀಮರಾಯನ ಜೊತೆಗೂಡಿ ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡಿದ್ದರು. ಆಗ ಹರಪನಹಳ್ಳಿ ಸ್ವತಂತ್ರವಾಯಿತು. ಇನ್ನೂ ಕ್ರಿ.ಶ.೧೧೪೯ರ ಬೆಣ್ಣೆಯೂರಿನ ಶಾಸನ[೪] ಒಂದರಲ್ಲಿ 'ಬ್ರಹ್ಮಪುರಿ', ೧೨ ಜನಬ್ರಾಹ್ಮಣರು ಎಂದು ಉಲ್ಲೇಖವಿದೆ. ಆಗ ಹರಪನಹಳ್ಳಿಗೆ 'ಬ್ರಹ್ಮಪುರಿ' ಎಂದು ಹೆಸರಿದ್ದಿತು. ಹರಪನಹಳ್ಳಿಗೆ ೧೨ ಕಿ.ಮೀ ದೂರದ ಆಗ್ನೇಯ ದಿಕ್ಕಿನ ಕಡೆಗೆ ಇರುವ ಮುತ್ತಿಗೆ ಎಂಬ ಗ್ರಾಮದ ಕುಮಾರ ಸ್ವಾಮಿ ದೇವಾಲಯದ

ಶಾಸನದಲ್ಲಿ[೫] ಕ್ರಿ.ಶ.೧೨೧೮ರಲ್ಲಿ ಹೊಯ್ಸಳರ ವೀರಬಲ್ಲಾಳನು ಆಳುತ್ತಿರುವಾಗ, ಬ್ರಾಹ್ಮಣರ ವಿಷ್ಣುನಾಯಕನ ಪುತ್ರ ಹರಿಹರ-ಹರಿಯಣ್ಣರ ಅಮ್ಮಿಲೆಯು, ಹಾಗೂ ರಂಗಯ್ಯಹೆಗ್ಗಡೆ ಮುಂತಾದವರು ನೀರಿನ ಅರವಟ್ಟಿಗೆಯ ಗೃಹ ಚಾವಣಿಗಾಗಿ ಕೋಗಳಿ-೫೦೦ ಉಪವಿಭಾಗವಾದ ಮುತ್ತಿಗೆಯನ್ನು ಅರಸಬೊಪ್ಪಯ್ಯ-ಬೊಮ್ಮಯ್ಯರಿಂದ ಭೂದಾನ ಸ್ವೀಕರಿಸುತ್ತಾನೆ. ಅಂದರೆ ಈ ಹಿಂದೆ ಹರಪನಹಳ್ಳಿ ಕೇವಲ ೨೫-೩೦ ಮನೆಗಳ ಅಗ್ರಹಾರವಾಗಿರಬೇಕು. ಮುತ್ತಿಗೆಯ ಅರಸನ ಹೆಸರಿನಿಂದ ಬೊಮ್ಮನಹಳ್ಳಿ ಎಂದು, ಆ ನಂತರ ಹರಿಯಣ್ಣ ಅಥವಾ ಹರಿಯಪ್ಪ ಹೆಗ್ಗಡೆಯ ಹೆಸರಿನಿಂದ, ಹರಿಗನಹಳ್ಳಿ>ಹರಿಯಪ್ಪನಹಳ್ಳಿ>ಹಾರಪ್ಪನಹಳ್ಳಿ> ಹರುಪ್ಪನಹಳ್ಳಿ ಎಂದಾಗಿರಬಹುದು. ಈಗ ಹರಪನಹಳ್ಳಿ ಎಂದು ಕರೆಯಲ್ಪಟ್ಟಿದೆ. ಪಾಳೆಯಗಾರರು, ಪಾಳೆಯಪಟ್ಟನ್ನು ಸ್ಥಾಪಿಸುವ ಮೊದಲೇ ಹೀಗೆಲ್ಲಾ ರೂಪಾಂತರ ಹೊಂದಿದೆ. ಇದರ ಸುತ್ತಲೂ 'ಹ' ಎಂಬ ಅಕ್ಷರದಿಂದ ಮೊದಲು ಬರುವ ಕೆಲವು ಗ್ರಾಮಗಳಿವೆ. ಹೊಂಬಳಗಟ್ಟಿ, ಹುಲಿಕಟ್ಟಿ, ಹಲುವಾಗಿಲು ಹೀಗೆ ಮುಂತಾದ ಗ್ರಾಮಗಳು ಕಂಡಬರುತ್ತವೆ.

ಈ ಪ್ರದೇಶ ಜೈನಕ್ಷೇತ್ರವಾಗಿತ್ತು, ಕೋಗಳಿಯ ಶಿವಕೋಟ್ಯಾಚಾರ್ಯರ ವಡ್ಡಾರಾಧನೆಯಲ್ಲಿ ಹರಪನಹಳ್ಳಿಯನ್ನು ಹರಪರಿಯ `ಪೊಳಲೊಳ್`(ಪೊಳಲು) (ಪಟ್ಟಣ) ಎಂದು ಉಲ್ಲೇಖ ಕಂಡುಬರುತ್ತದೆ.[೬] ಪಾಳೆಯಗಾರನಾದ ಮೊದಲ ಸೋಮಶೇಖರ ನಾಯಕನ ಕಾಲದಲ್ಲಿ ಕೆಲವು ಹಳ್ಳಿಗಳು ಹಾಳಾಗಿ, ಹರಪನಹಳ್ಳಿ ಎಂಬ ಹೋಬಳಿ ಗ್ರಾಮಕ್ಕೆ ಅಳಿದುಳಿದವುಗಳು ಸೇರಿದ್ದವು. ಅವು ಹನ್ನೆರಡು ಹಳ್ಳಿಗಳಾಗಿದ್ದವು. ಹರಪನಹಳ್ಳಿಯಲ್ಲಿ ಇಂದಿಗೂ ಹನ್ನೆರಡು ಓಣಿಗಳು, ಹನ್ನೆರಡು ಆಂಜನೇಯ ದೇವಾಲಯಗಳು, ಹನ್ನೆರಡು ಉಕ್ಕುಡಗಳು, ಹನ್ನೆರಡು ಮಠಗಳು, ಹನ್ನೆರಡು ಗರಡಿಮನೆಗಳು ಇರುವುದು ಕಂಡುಬರುತ್ತದೆ. ಇವೆಲ್ಲವುಗಳ ಸಂಖ್ಯೆ ಹನ್ನೆರಡು ಎಂದು ಇರುವುದರಿಂದ, 'ಹ' ಅಕ್ಷರದಿಂದ ಮೊದಲಗೊಂಡು ಹರಪನಹಳ್ಳಿ ಎಂದಾಗಿರಬಹುದೆಂದು ಹೇಳಬಹುದು. ಹರಪನಹಳ್ಳಿಯಲ್ಲಿ ಒಂದು ಕೋಟೆ ಇತ್ತು. ಈಗ ಎಲ್ಲಾ ಹಾಳಾಗಿದೆ. ಈ ಕೋಟೆ ಎಂಬ ಹೆಸರಿಂದಲೇ ಅಲ್ಲಿಯ ಆಂಜನೇಯನನ್ನು ಕೋಟೆ ಆಂಜನೇಯ ಎಂದು ಕರೆಯುತ್ತಾರೆ. ಇಲ್ಲಿ ಹತ್ತೊಂಬತ್ತನೆಯ ಶತಮಾನದವರೆಗೂ ಕೋಟೆಯಲ್ಲಿ ಜನವಾಸಿಸುತ್ತಿದ್ದರು. ಈಗ ಕೋಟೆ ಹಾಳಾಗಿ ಒಂದೆರಡು ಮೋಟು ಗೋಡೆಗಳು ಉಳಿದಿವೆ. ಹೀಗೆ ಹರಪನಹಳ್ಳಿ ತಾಲೂಕು ಕೇಂದ್ರವಾಗಿ, ಪಟ್ಟಣವಾಗಿದ್ದರೂ ತನ್ನ ಹೆಸರಿನ ಜೊತೆಗೆ ಹಳ್ಳಿ ಎನ್ನುವ ಪದವನ್ನು ಉಳಿಸಿಕೊಂಡಿದೆ. ಇಲ್ಲಿ ಪಟ್ಟಣ ಪಂಚಾಯಿತಿ, ಲೋಕೋಪಯೋಗಿ ಇಲಾಖೆ, ಎ.ಪಿ.ಎಂ.ಸಿ., ಆರೋಗ್ಯ ಕೇಂದ್ರಗಳು, ಅರಣ್ಯ ಇಲಾಖೆ, ಕೃಷಿ ಇಲಾಖೆ, ಕೈಗಾರಿಕೆ, ನೀರಾವರಿ ಇತ್ಯಾದಿಗಳೊಂದಿಗೆ ಅನೇಕ ಸರಕಾರಿ ಇಲಾಖೆಗಳನ್ನು ಹೊಂದಿದ್ದು, ಸುತ್ತೆಡೆಗೂ ಸಾರಿಗೆ ಸಂಪರ್ಕವಿದೆ. ಕಲೆ, ಸಾಹಿತ್ಯ, ಸಂಸ್ಕೃತಿಗಳೊಂದಿಗೆ ತನ್ನ ವೈಶಿಷ್ಟತೆಯನ್ನು ಗುರುತಿಸಲಾಗಿದೆ. ಹರಪನಹಳ್ಳಿ ಪಾಳೆಯಗಾರರೆಂದು ಖ್ಯಾತಿ ಪಡೆದ, ಈ

ಹರಪನಹಳ್ಳಿಯಿಂದ ಆ ಹೋಬಳಿ ಕೇಂದ್ರಕ್ಕೆ ಮೂರು ಮಾರ್ಗಗಳಿವೆ.

೧. ಹರಪನಹಳ್ಳಿಯಿಂದ ಶೃಂಗಾರತೋಟದ ಮುಖಾಂತರ

೨. ಹರಪಹಳ್ಳಿಯಿಂದ ಚಿಕ್ಕಹಳ್ಳಿಯ ಮುಖಾಂತರ

೩. ಹರಪನಹಳ್ಳಿಯಿಂದ ಬಂಡ್ರಿಯ ಮುಖಾಂತರ ಕೂಲಹಳ್ಳಿಯ ಮಾರ್ಗ.

ಈ ಮೂರು ಮಾರ್ಗಗಳಿಂದ ಕೂಡಿದ ಪುಟ್ಟ ಗ್ರಾಮವೇ 'ಬಾಗಳಿ'. ಆದರೆ ವಾಹನ ಸೌಕರ್ಯ ಇರುವುದು ಬಂಡ್ರಿಯ ಮೂಲಕ ಮಾತ್ರ. ಹೀಗೆ ಮೂರು ಮಾರ್ಗಗಳನ್ನು ಹೊಂದಿದೆ.

ಬಾಗಳಿ

ಪೀಠಿಕೆ : ಬಳ್ಳಾರಿ ಜಿಲ್ಲೆಯಲ್ಲಿ ಬಾಗಳಿಯೂ ಬಹಳ ಪ್ರಾಚೀನವಾದ ಮತ್ತು ಉತ್ಕೃಷ್ಟ ಸಂಸ್ಕೃತಿಯನ್ನು ಹೊಂದಿದ ಗ್ರಾಮವಾಗಿದೆ. ಇದಕ್ಕೆ ಅಲ್ಲಿ ದೊರೆಯುವ ಶಾಸನಗಳು, ದೇವಾಲಯಗಳು ಇತರೆ ಸ್ಮಾರಕಗಳು ಮತ್ತು ಐತಿಹ್ಯಗಳು ಸಾಕ್ಷಿಯಾಗಿವೆ. ಬಾಗಳಿಯ ಇತಿಹಾಸ ನೇರವಾಗಿ ರಾಷ್ಟ್ರಕೂಟರ ಶಾಸನಗಳೊಂದಿಗೆ ಪ್ರಾರಂಭವಾದರೂ ಬಳ್ಳಾರಿ ಜಿಲ್ಲೆಯ ಇತಿಹಾಸ ಮೌರ್ಯರ ಕಾಲದಷ್ಟು ಹಿಂದಕ್ಕೆ ಹೋಗುತ್ತದೆ. ಕ್ರಿ.ಪೂ.೩೦೦ರ ಅಶೋಕ ಚಕ್ರವರ್ತಿಯ ಎರಡು ಶಾಸನಗಳು ಈ ಜಿಲ್ಲೆಯ ನಿಟ್ಟೂರು ಮತ್ತು ಉದೆಗೊಳಂನಲ್ಲಿ ದೊರಕಿವೆ. ಇದಕ್ಕೂ ಪೂರ್ವದ ಇತಿಹಾಸವನ್ನು ಅರಿಯಲು ಪುರಾತತ್ವ ನೆಲೆಗಳನ್ನು ಬಿಟ್ಟರೆ ಮತ್ತಾವ ಸಾಕ್ಷಿಗಳು ಇಲ್ಲ. ಕ್ರಿ.ಶ.೧೦ನೇ ಶತಮಾನದಿಂದ ೧೬ನೇ ಶತಮಾನದವರೆಗೆ ಈ ಜಿಲ್ಲೆಯ ಇತಿಹಾಸ ವೈಭವದಿಂದ ಕೂಡಿತ್ತು ಎಂಬುದಕ್ಕೆ ಅನೇಕ ಆಧಾರಗಳಿವೆ. ಬಾಗಳಿ ಈಗ ದಾವಣಗೆರೆ ಜಿಲ್ಲೆಗೆ ಸೇರಿದ್ದರೂ, ಹಿಂದೆ ಈ ಪರಿಸರದ ಅರಸರೇ ಇದನ್ನು ಆಳುತ್ತಿದ್ದರು. ಮಾನಸಿಕವಾಗಿ ಇಂದಿಗೂ ಈ ಭಾಗ ಬಳ್ಳಾರಿ ಜಿಲ್ಲೆಗೆ ಸೇರಿದೆ. ಸುಮಾರು ೧೦೦೦ ವರ್ಷಕ್ಕಿಂತಲೂ ಮಿಗಿಲಾದ ಉತ್ಕೃಷ್ಟ ಸಂಸ್ಕೃತಿಯನ್ನು ಹೊಂದಿದ ಬಾಗಳಿ ಇಂದು ತನ್ನ ಒಡಲಲ್ಲಿ ಅನೇಕ ಸಾಕ್ಷ್ಯಾಧಾರಗಳನ್ನು ಹುದುಗಿಸಿಕೊಂಡಿದೆ. ಆ ಸಾಕ್ಷ್ಯಾಧಾರಗಳನ್ನು ಒಂದೆಡೆ ಸಂಗ್ರಹಿಸಿ ಬಾಗಳಿ ಪರಿಸರದ ಇತಿಹಾಸವನ್ನು ಈ ಮುಂದೆ ಚರ್ಚಿಸಲಾಗಿದೆ.

೧. ಪುರಾತತ್ವ ಹಿನ್ನೆಲೆ

ಬಳ್ಳಾರಿ ಜಿಲ್ಲೆಯ ಪ್ರಮುಖ ಜೀವನದಿ ತುಂಗಭದ್ರ. ವರ್ಷದುದ್ದಕ್ಕೂ ಹರಿಯುವ ಈ ನದಿಯ ಇಕ್ಕೆಲಗಳಲ್ಲಿ ಪುರಾತನ ಮಾನವನ ನೆಲೆಗಳು ಪತ್ತೆಯಾಗಿವೆ. ಇವುಗಳ ಅಧ್ಯಯನದಿಂದ ಬಳ್ಳಾರಿ ಜಿಲ್ಲೆ ಪುರಾತನ ಮಾನವನ ಪ್ರಮುಖ ವಾಸಸ್ಥಾನಗಳಲ್ಲಿ ಒಂದಾಗಿತ್ತು ಎಂದು ತಿಳಿದುಬರುತ್ತದೆ. ರಾಬರ್ಟ್‌ಬ್ರೂಸ್ ಫೂಟ್ ಎಂಬುವವನು ಮೊದಲ ಬಾರಿಗೆ ಈ ಜಿಲ್ಲೆಯ ಪುರಾತತ್ವ ನೆಲೆಗಳನ್ನು ಸಮೀಕ್ಷೆಮಾಡಿ ಒಟ್ಟು

೭೭ ನೆಲೆಗಳನ್ನು ಗುರುತಿಸಿದ್ದಾನೆ. ಇವುಗಳಲ್ಲಿ ಸುಮಾರು ೩೬ ನೆಲೆಗಳು ಬಹಳ ಪ್ರಮುಖವಾದವು ಎಂದು ಹೇಳಿದ್ದಾನೆ. ಬಳ್ಳಾರಿ ಕೋಟೆಯ ಪ್ರದೇಶದಲ್ಲಿ ಕಪ್ಪುಜ್ವಾಲಾಮುಖಿ ಶಿಲೆಯ ಆಯುಧಗಳು, ಹೊಸಪೇಟೆಯ ಗಾದಿಗನೂರು, ಕುರುಕುಪ್ಪೆ ಬೆಟ್ಟಗಳಲ್ಲಿ ಹಳೆ ಶಿಲಾಯುಗದ ಆಯುಧಗಳು, ಸಂಡೂರು, ಹರಪನಹಳ್ಳಿ, ಹಲವಾಗಿಲು, ಕುರುವತ್ತಿ ಮುಂತಾದ ಕಡೆ ಬೆಣಚು ಶಿಲೆಯ ಆಯುಧಗಳು ಕಂಡುಬಂದಿವೆ. ಈ ಪರಿಸರದಲ್ಲಿ ಆದಿ ಹಳೆ ಶಿಲಾಯುಗದ ನೆಲೆಗಳು ದೊರಕಿದ್ದು, ಇವು ದಕ್ಷಿಣ ಭಾರತದಲ್ಲಿ ಕಂಡುಬಂದ ಪ್ರಥಮ ನೆಲೆಗಳಾಗಿವೆ. ಬಳ್ಳಾರಿಯಲ್ಲಿ ಕೆಲವೊಂದು ಮಚ್ಚಿನಾಕಾರದ ಕೊಡಲಿಗಳು ದೊರಕಿದ್ದು, ಅವು ಮಾನವ ಸಂಸ್ಕೃತಿಯ ಪ್ರತೀಕಗಳಾಗಿವೆ. ಕೂಡ್ಲಿಗಿಯಲ್ಲಿ ಕೆಲವೊಂದು ಮಾನವಾಕಾರದ ಪುರಾತನ ಅವಶೇಷಗಳು ದೊರೆತಿದ್ದು ಕಂಡುಬರುತ್ತದೆ.

೨. ಭೌಗೋಳಿಕ ಹಿನ್ನೆಲೆ

ಬಾಗಳಿಯಲ್ಲಿ ಪುರಾತತ್ವ ಕಾಲದ ಯಾವುದೇ ಅವಶೇಷಗಳು ಕಂಡುಬರುವುದಿಲ್ಲ. ಪ್ರಕೃತಿ ಸಹಜವಾದ ಸುಂದರವಾದ ಗಿಡ, ಮರಗಳಿಂದ ಕೂಡಿದ ಈ ಗ್ರಾಮದ ಮಧ್ಯದಲ್ಲಿ ಒಂದು ದೊಡ್ಡಕೆರೆಯನ್ನು ಹೊಂದಿದ್ದು ಇದು ತಗ್ಗಾದ ಪ್ರದೇಶದಲ್ಲಿ ಕಂಡುಬರುತ್ತದೆ.[೭] ಈ ಕೆರೆ ರಾಷ್ಟ್ರಕೂಟರ ಕಾಲದಲ್ಲಿ ಅಸ್ತಿತ್ವದಲ್ಲಿತ್ತು ಎಂದು ಕಂಡುಬರುತ್ತದೆ. ಕೆರೆಯ ದಂಡೆಗೆ ಹೊಂದಿಕೊಂಡು ಪೂರ್ವಾಭಿಮುಖವಾಗಿ ಕಲಾ, ಸೌಂದರ್ಯದ ಶ್ರೀಮಂತಿಕೆಯಿಂದ ಕೂಡಿದ ಕಲ್ಲೇಶ್ವರ ದೇವಾಲಯವಿದೆ. ಹೀಗೆ ಭೌಗೋಳಿಕವಾಗಿ ಕೆರೆಬಾವಿಗಳಿಂದ ಕೂಡಿದ್ದು, ೩೭೮೮-೭೧ ಚ.ಮೀ ವಿಸ್ತೀರ್ಣ ಹೊಂದಿದೆ. ಇದು ಹೆಚ್ಚಾಗಿ ಕೃಷಿ ಅವಲಂಬಿತ ಪ್ರದೇಶ(ಬಯಲು)ವಾಗಿರುವುದರಿಂದ ಇಲ್ಲಿನ ಜನರ ಮುಖ್ಯ ಉದ್ಯೋಗ ವ್ಯವಸಾಯವಾಗಿದೆ. ಇದು ಹೆಚ್ಚು ಕೆಂಪು ಮಿಶ್ರಿತ ಭೂಮಿಯಾಗಿದೆ. ಕಪ್ಪು ಭೂಮಿ ಬಹಳ ಕಡಿಮೆ. ಕೆಂಪು ಭೂಮಿಯಿಂದ ಕೂಡಿದ್ದರೂ ನೀರಾವರಿಯನ್ನು ಹೊಂದಿದ್ದು, ಲಾಭದಾಯಕ ಬೆಳೆಗಳಾದ ಹತ್ತಿ, ಶೇಂಗಾ, ಮೆಕ್ಕೆಜೋಳ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬೆಳೆಯುವ ಪ್ರದೇಶವಾಗಿದೆ. ಭೌಗೋಳಿಕವಾಗಿ ಏನೂ ವಿಶೇಷತೆ ಇಲ್ಲದಿದ್ದರೂ ಚಾರಿತ್ರಿಕವಾಗಿ ಗಮನ ಸೆಳೆದಿದೆ. ಬಾಗಳಿಯ ಜನಸಂಖ್ಯೆ-೧೯೯೧ ಪ್ರಕಾರ, ೨,೮೮೩ರಷ್ಟಿದ್ದು, ಈಗ ೨,೯೭೮ರಷ್ಟು ಹೆಚ್ಚಳವಾಗಿದೆ.

ಬಾಗಳಿಯ ನಾಮ ವಿಶ್ಲೇಷಣೆ

ಬಳ್ಳಾರಿ ಜಿಲ್ಲೆಯ ಕೆಲವು ಗ್ರಾಮಗಳಿಗೆ ಅಥವಾ ಸ್ಥಳಗಳಿಗೆ ಜನಪದರ ದೃಷ್ಟಿಯಲ್ಲಿ ಹೇಳುವ ನಾಮಗಳು, ಶಾಸನಗಳಲ್ಲಿ ಬರುವ ನಾಮಗಳು, ಪದಪಲ್ಲಟ ಅಥವಾ ಅಕ್ಷರ ಪಲ್ಲಟಗಳಾಗಿ ಕಾಣಿಸಿಕೊಂಡಿವೆ. ಅವುಗಳಲ್ಲಿ ಬಾಗಳಿಯೂ ಅಕ್ಷರ ಪಲ್ಲಟವಾಗಿ ಕಾಣಿಸಿಕೊಳ್ಳುತ್ತದೆ. ಇದರ ಪ್ರಾಚೀನ ಹೆಸರು ಬಾಗಳಿ>ಬಾಗುಲಿ>ಬಾಗಲಿ>ಬಗಲಿ ಹೀಗೆ ಕಂಡುಬರುತ್ತದೆ.[೮]

ಶಾಸನಗಳಲ್ಲಿ 'ಬಾಳ್ಗುಳಿ' ಎಂದು ಉಲ್ಲೇಖವಾಗಿದೆ. ಇದನ್ನು ಬಿಡಿಸಿದಾಗ ಬಾಳ್+ಗುಳಿ ಎಂದಾಗುತ್ತದೆ. ಬಾಳ್ ಎಂದರೆ ಕತ್ತಿ, ಗುಳಿ ಎಂದರೆ ತಗ್ಗು ಅಥವಾ ಕಂದರ ಎಂದಾಗುತ್ತದೆ. (ಬಾಳ್ಗಚ್ಚು ಪದದ ಹಿನ್ನೆಲೆಯಲ್ಲಿ) ಅಂದರೆ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಬೇಕಾದರೆ ಯುದ್ಧೋಪರಣಗಳು ಬೇಕು. ಯುದ್ಧದಲ್ಲಿ ಖಡ್ಗ ಮೊದಲು ನಂತರ ಇತರ ಸಾಮಗ್ರಿಗಳು. ಅರಸರು ಯುದ್ಧ ಮಾಡಿ ಯಶಸ್ಸು ಕಂಡುದರಿಂದ ಅವರ ನೆನಪಿಗಾಗಿ ಸ್ಥಾಪಿಸಲ್ಪಟ್ಟ ಊರು. ಆದರೆ ವಿದ್ವಾಂಸರೊಬ್ಬರು[೧೨] ಈ ಪದವನ್ನು(ಬೊಳ್ಗುಳಿ) ಬೊಳ್ ಎಂದರೆ ಸಂನ್ಯಾಸಿ, ಬೋಳ್‌ಗಳ + ಉಳಿ = ಎಂದರೆ ಇದು ಜೈನ ದೇವಾಲಯ, ಜೈನ ಬಸದಿಗಳ ಊರಾಗಿತ್ತು ಎಂದು ವ್ಯಕ್ತಪಡಿಸುತ್ತಾರೆ. ಅಂದರೆ ಜೈನ ಸಂನ್ಯಾಸಿಗಳ ವಾಸಸ್ಥಾನವಾಗಿತ್ತು. ಬೋಟ್ಟುಗಳಿ ಎಂಬ ಪದ ಕಾಲಾಂತರದಲ್ಲಿ ಬಾಳ್ಗುಳಿಯಾಗಿರಬೇಕು. ಮತ್ತೊಬ್ಬ ವಿದ್ವಾಂಸರು[೧೩] 'ಬಲಗುಳಿ' ಕಾಲಾಂತರದಲ್ಲಿ ಬಾಗುಳಿಯಾಯಿತು ಎಂದಿದ್ದಾರೆ.[೯] ಅದಕ್ಕೆ ಅವರು ಯಾವುದೇ ಆಧಾರಗಳನ್ನು ನೀಡಿಲ್ಲ. ಕೆಲವು ಗ್ರಂಥಗಳಲ್ಲಿ ಬಲಗುಲಿ ಎಂಬ ಹೆಸರಿದ್ದಿತೆಂದು ಉಲ್ಲೇಖಿಸಿದ್ದಾರೆ.[೧೦] ಗೋವಿಂದ ಪೈ ಅವರ ಒಂದು ಲೇಖನದಲ್ಲಿ ಬಾಗಳೀಯನ್ನು 'ಬಾಗಲಿ' ಎಂದು ಕರೆಯಲಾಗುತ್ತಿತ್ತೆಂದು ತಿಳಿಸಿದ್ದಾರೆ.[೧೧] ಜನಪದರ ಮಾತಿನಲ್ಲಿ, ಬಾಗಳಿಯನ್ನು ಒಂದು ಪದ್ಯದಲ್ಲಿ ಹೀಗೆ ಗುರುತಿಸಿದ್ದಾರೆ.

> 'ಪರಮಶ್ರೀ ಗುರುರಾಯ ಕೊಟ್ಟೂರಾಧೀಶ್ವರನೇ
> 'ನೆರೆಭಾಗಳಿಯ' ಕುಲಕೆ ಶಿಖರ ರತ್ನವೆಂದೆನಿಪ|
> ಅಭಯಹಸ್ತವನಿತ್ತೊ, ವರ ಸೋಮಶೇಖರನೇ|,
> ಕರಮುರಾರಿಯನು ಮರ್ದಿಸಿದ ಬಲಬಲಾ||

ಈ ಪದಕ್ಕೆ ಮುತ್ತಿಗೆಯಪದ ಎನ್ನುತ್ತಾರೆ. ಇಲ್ಲಿ ಬಾಗಳಿಯನ್ನು ಮಹಾಪ್ರಾಣವಾಗಿ ಬಳಸಿದ್ದಾರೆ.[೧೨] ಬಾಗಳಿ>ಭಾಗಳಿ ಎಂದು ಕರೆಯಲಾಗಿದೆ. ಇತ್ತೀಚಿನ ಕೆಲವು ಲೇಖನಗಳಲ್ಲಿ 'ಬಲಗುಳಿ' ಎಂದು ಹೆಸರಿಸಿದ್ದಾರೆ.

ಸ್ಥಳೀಯರ ಮಾತುಗಳಲ್ಲಿ

ಗ್ರಾಮದ ಹಿರಿಯರು ಬಾಗಳಿಯನ್ನು ಹೀಗೆ ವರ್ಣಿಸಿದ್ದಾರೆ. ಬಾಗಳಿ ಎಂದರೆ ಮನುಷ್ಯನು ತಿಳುವಳಿಕೆ ಹೊಂದಲಿ ಎಂಬುದಕ್ಕಾಗಿ, ಅಲ್ಲಿರುವ ದೇವಾಲಯದೊಳಕ್ಕೆ(ಕಲ್ಲೇಶ್ವರದೇವಾಲಯ) 'ಬಾಗಿ' ಹೋಗಲಿ ಎಂಬುದಕ್ಕೆ 'ಬಾಗುಳಿ' ಎಂಬ ಹೆಸರು ಬಂದಿತು. ಬಾಗಳಿ ಎಂಬ ಗ್ರಾಮ ತಗ್ಗಾದ ಪ್ರದೇಶದಲ್ಲಿರುವುದರಿಂದ, ದೈವಿ ಸ್ವರೂಪ ಕಲ್ಲೇಶನಿರುವುದರಿಂದ 'ಊರೊಳಗೆ ಬಾಗಿ ಕಾಲಿಡು' ಎಂದು ಹೇಳುತ್ತಾರೆ.[೧೩] ಇದರಿಂದ 'ಬಾಗಳಿ' ಎಂಬ ಹೆಸರು ಬಂದಿದೆ ಎಂದು ವ್ಯಕ್ತಪಡಿಸುತ್ತಾರೆ. ಆದರೆ ಇದೇನಾದರೂ ಆಗಿರಲಿ, ಶಾಸನಗಳಲ್ಲಿ ಉಲ್ಲೇಖವಾಗಿರುವುದು ಖಚಿತ. ಹಿಂದೆ ತಿಳಿಸಿದ ಹಾಗೆ ಬಾಳ್ ಎಂದರೆ ಖಡ್ಗ, ಗುಳಿ

[illegible]

[illegible]

[illegible]

[illegible]

ಅಥವಾ 'ಕುಳಿ' ಎಂದರೆ ಕುಣಿ ಅಥವಾ ತಗ್ಗು. ಇಲ್ಲಿ ಬಿಟ್ಟಿಗನೆಂಬ ರಾಜ, ರಾಜ್ಯದ ಚ್ಯುತನಾಗಿ(ಸೋತು) ಕಾನಹಳ್ಳಿ ಸಮೀಪದ ಗುಡ್ಡದ ಗುಹೆಯೊಂದರಲ್ಲಿ ಅವಿತನಂತೆ, ಬಿಟ್ಟಿಗನು ತನ್ನ ರಾಜ ಚಿಹ್ನೆಯಾದ ಖಡ್ಗವನ್ನು ಬೇರೆಯವರು ಪಡೆಯದಂತೆ, ರಕ್ಷಿಸಲು ಈ ಗ್ರಾಮದಲ್ಲಿರುವ ಒಂದು ನೀರಿನ ಗುಂಡಿಯಲ್ಲಿ ಹೂಳಿದನು. ಇದನ್ನು ಜನರು 'ಕತ್ತಿಗುಂಡಿ' ಎಂದು ಕರೆಯುತ್ತಾರೆ. ರಾಜ ಅವಿತುಕೊಂಡ ಗುಹೆಯನ್ನು 'ಬಿಟ್ಟಿಗನ ಮರಡಿ' ಎಂದು ಈಗಲೂ ಕರೆಯುತ್ತಾರೆ. ಇದೊಂದು ದಂತಕತೆಯಾಗಿದೆ.

ಇನ್ನೂ ಗ್ಯಾಸಿಟಿಯರ್‌ನಲ್ಲಿ 'ಬಾಗುಳಿ' ಎಂದು ಬಂದಿದೆ.[೧೪] ಕನ್ನಡ ವಿಶ್ವಕೋಶದಲ್ಲಿ ಬಾಳ್ಗುಳಿ ಎಂಬ ಹೆಸರಿನ ಗ್ರಾಮ, ಅಗ್ರಹಾರವಾಗಿತ್ತು[೧೫] ಎಂದಿದೆ. ಶಾಸನಗಳಲ್ಲಿ 'ಶ್ರೀಮದ್ ದತ್ತಿ ಹರಿಶ್ಚಂದ್ರ ಬಾಗುಳಿ' ಅಥವಾ 'ಬಾಳ್ಗುಳಿ' ಎಂದು ಉಲ್ಲೇಖ ಬರುತ್ತದೆ.[೧೬] ಆದರೆ ಇದನ್ನು ಅಗ್ರಹಾರ ಎಂದು ಏಕೆ ಕರೆದರೋ ಕಾರಣಗಳಿಲ್ಲ. ಇಲ್ಲಿ ಬರುವ ಪ್ರತಿಯೊಂದು ಶಾಸನಗಳಲ್ಲಿ 'ಅಗ್ರಹಾರ'ವೆಂದು ಉಲ್ಲೇಖವಾಗಿದೆ.

೩. ಬಾಗಳಿಯ ಇತಿಹಾಸ

ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಪುರಾತತ್ವ ನೆಲೆಗಳು ಕಂಡುಬರುವುದರ ಜೊತೆಗೆ ಈ ಭಾಗದ ಉಲ್ಲೇಖ ನಮ್ಮ ಮಹಾಕಾವ್ಯವಾದ ರಾಮಾಯಣದಲ್ಲಿಯೂ ದೊರೆಯುತ್ತದೆ. ರಾಮನಿಗೆ ಸಹಾಯ ಮಾಡಿದ ಸುಗ್ರೀವ ಮತ್ತು ಹನುಮಂತರ 'ಕಿಷ್ಕಿಂದೆ' ಇಂದಿನ ಹಂಪೆಯ ಪ್ರದೇಶವಾಗಿದೆ. ಹೀಗೆ ಪ್ರಾಚೀನತೆಗೆ ಹೆಸರಾದ ಈ ಜಿಲ್ಲೆಯ ಶಾಸನಗಳ ಇತಿಹಾಸ ಪ್ರಾರಂಭವಾಗುವುದು ಅಶೋಕನ ಶಿಲಾಶಾಸನಗಳಿಂದ. ಅಂದಿನಿಂದ ಇಲ್ಲಿವರೆಗೂ ಈ ಭಾಗವನ್ನಾಳಿದ ಮೌರ್ಯರು, ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಳುಕ್ಯರು, ಕಳಚೂರಿಗಳು, ಹೊಯ್ಸಳರು, ವಿಜಯನಗರದ ಅರಸರ ಶಾಸನಗಳು ಲಭ್ಯವಾಗಿವೆ. ಬಾಗಳಿಯಲ್ಲಿ ಇತಿಹಾಸಪೂರ್ವ ಮತ್ತು ಇತಿಹಾಸದ ಆರಂಭ ಕಾಲದ ಇಟ್ಟಿಗೆಯ ಕಟ್ಟಡ ದೊರೆಕಿದ್ದು, ಅದು ದೇವಾಲಯದ ಕಟ್ಟಡವಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೧೭] ಆದರೆ ಅದು ಯಾವ ದೇವಾಲಯವೆಂದು ಸ್ಪಷ್ಟಪಡಿಸಿಲ್ಲ. ಅಲ್ಲಿಯ ಕನಕೇಶ್ವರ ದೇವಾಲಯದಲ್ಲಿ ಒಂದು ಇಟ್ಟಿಗೆ ದೊರೆತಿದ್ದು, ಅದು ಶಾತವಾಹನ ಕಾಲದ್ದೆಂದು ತಿಳಿದುಬರುತ್ತದೆ. ಇದರಿಂದ ಕಲ್ಯಾಣಚಾಳುಕ್ಯರಿಗಿಂತ ಮೊದಲು ಶಾತವಾಹನರು ಈ ಭಾಗವನ್ನು ಆಳಿದರೆಂದು ಗೊತ್ತಾಗುತ್ತದೆ. ಬಾಗಳಿಯಲ್ಲಿ ಒಂದು ಕಂಚಿನ ಪತ್ರ ದೊರೆತಿದ್ದು ಅದು ಈಗಾಗಲೇ ಪ್ರಕಟವಾಗಿದೆ.[೧೮] ಬಾಗಳಿಯಲ್ಲಿ 'ದುರ್ಗಿಯ ವರ' ಎಂಬ ನಾಣ್ಯವು ಚಲಾವಣೆಯಲ್ಲಿದ್ದಿತೆಂದು ತಿಳಿದುಬರುತ್ತದೆ. ಆದರೆ ಈವರೆಗೆ ಆ ನಾಣ್ಯ ದೊರಕಿರುವುದಿಲ್ಲ ಮತ್ತು ಇದು ಯಾರ ಕಾಲದಲ್ಲಿ ಚಲಾವಣೆಯಲ್ಲಿತ್ತು ಎಂಬ ದಾಖಲೆಯು ಸಿಗುವುದಿಲ್ಲ. ಏಕೆಂದರೆ ಇಲ್ಲಿನ ಯಾವ ಶಾಸನಗಳಲ್ಲಿಯೂ ಈ ನಾಣ್ಯದ ಉಲ್ಲೇಖ ಬಂದಿಲ್ಲ. ಎಂ.ಎಸ್.ನಾಗರಾಜು[೧೯] ಅವರ

ಅಭಿಪ್ರಾಯದಂತೆ ಇಲ್ಲಿ ಒಂದು ಮಲ್ಲಿಕಾರ್ಜುನ ದೇವಾಲಯವಿತ್ತು. ಅದು ಶಾತವಾಹನರ ಕಾಲದ ಇಟ್ಟಿಗೆಯ ಕಟ್ಟಡವಾಗಿದ್ದು ಉತ್ತರಾಭಿಮುಖವಾಗಿದೆ ಎಂದು ತಿಳಿಸಿದ್ದಾರೆ.[೧೯] ಅವರು ಹೇಳಿದ ಹಾಗೆ ಇಲ್ಲಿ ಯಾವುದೇ ಮಲ್ಲಿಕಾರ್ಜುನ ದೇವಾಲಯವಿಲ್ಲ. ಆದರೆ ಮಳೆ ಮಲ್ಲಪ್ಪ ಎಂಬ ದೇವಾಲಯವಿದೆ. ಇದು ಪೂರ್ವಾಭಿಮುಖವಾಗಿದ್ದು, ಕಲ್ಲಿನ ಕಟ್ಟಡವಾಗಿದೆ. ಆದರೆ ಇದು ನಾಗರಾಜು ಅವರು ಹೇಳುವಂತೆ ಮಲ್ಲಿಕಾರ್ಜುನ ದೇವಾಲಯವಲ್ಲ. ಇದಕ್ಕೆ ಮೊದಲಿನಿಂದಲೂ ಮಳೆಮಲ್ಲಪ್ಪನೆಂದೇ ಕರೆಯುತ್ತಾರೆ. ಆದರೆ ಬಾಗಳಿಯಲ್ಲಿ ಕನಕೇಶ್ವರ ಎಂಬ ಹೆಸರಿನಿಂದ ಕರೆಯಲ್ಪಡುವ ಕನಕಪ್ಪದೇವಾಲಯವಿದೆ. ಅದು ಉತ್ತರಕ್ಕೆ ಮುಖವಾಗಿದ್ದು ಇಟ್ಟಿಗೆಯಿಂದ ಕೂಡಿದೆ.

ಬಾಗಳಿಯಿಂದ ೧೦.ಕಿ.ಮೀ ದೂರದ ಬೆಟ್ಟದ ಮೇಲೆ ಬೆಟ್ಟದ ಮಲ್ಲಪ್ಪ ಎಂಬ ದೇವಾಲಯವಿದೆ. ಇದು ಸಹ ಉತ್ತರಕ್ಕೆ ಮುಖವಾಗಿದೆ. ಆದರೆ ಅದು ಸೋಗಿ ಕ್ಷೇತ್ರಕ್ಕೆ ಒಳಪಟ್ಟಿದೆ. ಇದು ಮೊದಲು ಬಾಗಳಿಗೆ ಸೇರಿತ್ತೆನ್ನಲು ಯಾವುದೇ ದಾಖಲೆಯಾಗಲಿ, ಶಾಸನವಾಗಲಿ ಇಲ್ಲ. ಬಾಗಳಿಯ ಒಂದು ಲಾವಣಿ ಪದದಲ್ಲಿ ಈ ದೇವಾಲಯವನ್ನು ಹೆಸರಿಸಿ ಹಾಡಿದ್ದಾರೆ.

ಕೋಗಳಿ-೫೦೦ ನಾಡಿನ ಉಪವಿಭಾಗವಾಗಿದ್ದ ಬಾಗಳಿ ಎಂಟನೆಯ ಶತಮಾನದ ಕೊನೆಯಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಿದೆ. ಇದನ್ನು ಶಾಸನಗಳು 'ಅನಾದಿ ಅಗ್ರಹಾರ'ವೆಂದು, ಈ ಅಗ್ರಹಾರದಲ್ಲಿ 'ಐವತ್ತು ಮಹಾಜನರು' ಇದ್ದರೆಂದು ತಿಳಿಸುತ್ತವೆ. ಇಲ್ಲಿಯ ಶಾಸನವೊಂದರಿಂದ ಇದು ಕ್ರಿ.ಶ.೯೨೨ಕ್ಕಿಂತ ಮೊದಲು ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಬಳ್ಳಾರಿ ಜಿಲ್ಲೆಯ ಅನೇಕ ಶಿಲಾಲೇಖಗಳು ಬಾಗಳಿಯು ಒಂದು ಶಿಕ್ಷಣ ಕೇಂದ್ರವಾಗಿತ್ತೆಂದು ತಿಳಿಸುತ್ತವೆ.

ಸ್ವಸ್ತ್ಯುದಧಿ ಪರಿವೃತ್ತ
ವಿಖ್ಯಾತ್ತೋತುಂಗಮಗಾಂಗೇಯ
ಯಮನಿಯಮಸ್ವಾಧ್ಯಾಯದ್ಧ್ಯ
ಯನಧ್ಯಾನಧಾರಣಜಪಹೋಮಾನು ಷ್ಠಾಣ
ಸಂಪನ್ನರಪ್ಪ ಶ್ರೀಮದ್ಬಾಬ್ಬುಳಿಯಯ್ವದಿಂಬರು[೨೦]

ಇದನ್ನು ಗಮನಿಸಿದಾಗ ಇದೊಂದು ಶಿಕ್ಷಣ ಕೇಂದ್ರವಾಗಿತ್ತು ಎನ್ನಬಹುದು. ಹೀಗೆ ಒಮ್ಮೆ ಅಗ್ರಹಾರ, ಶಿಕ್ಷಣಕೇಂದ್ರ, ನ್ಯಾಯ ಕೇಂದ್ರವಾಗಿದ್ದಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಬಾಗಳಿಯ ಒಂದು ಶಾಸನದಲ್ಲಿ ಕ್ರಿ.ಶ.೧೦೬೦ರಲ್ಲಿ 'ಬಾಗಳಿ ಮತ್ತು ಕಾರಿಟ್ಟಿಗೆ' ಎಂದು ಬರುತ್ತದೆ. ಅಂದರೆ(ನಾಗದೇವ ನೆಂಬುವನು) ಬಾಳ್ಗುಳಿ ಕಾರಿಟ್ಟಗೆ ಮೊದಲಾಗೆ ಫಲವೂ ಬತ್ತಗ್ರಾಮಗಳುಮಂ... ಪ್ರತಿಪಾಳನಂಗೆಯ್ದು..." ಎಂದಿದೆ.[೨೧](ಕಾರಿಟ್ಟಗೆ ಈಗಿನ ಗಂಗಾವತಿ ತಾಲೂಕಿನ ಕಾರಟಗಿ) ಇದು ಸಹ ಇದರ ವ್ಯಾಪ್ತಿಗೆ ಒಳಪಟ್ಟಿತ್ತು. ಇದನ್ನು ಕಲಬುರ್ಗಿಯವರು ಭತ್ತ ಗ್ರಾಮಗಳೆಂದರೆ, ರಾಜನಿಂದ ಯಾವುದೇ ಅಧಿಕಾರಿಗೆ ಅಥವಾ ವ್ಯಕ್ತಿಗೆ ಸಂಪೂರ್ಣ ಸ್ವಾಮ್ಯ ಸಮೇತ ಬಿಟ್ಟುಕೊಡಲಾದ ಹಳ್ಳಿ, ಇದನ್ನು ಜಹಗೀರು ಅಥವಾ

ಇನಾಮ ಎಂದು ಕರೆದಿದ್ದಾರೆ. ಈ ಭತ್ತಗ್ರಾಮವನ್ನು ಬ್ರಾಹ್ಮಣರಿಗೆ ತೆರಿಗೆ ರೂಪದಲ್ಲಿ ಕಾಣಿಕೆಯಾಗಿ ಕೊಟ್ಟಿರಬಹುದೆಂದು ಊಹಿಸಿದ್ದಾರೆ.[೨೨] ಇವೆಲ್ಲವುಗಳ ಹಿನ್ನೆಲೆಯಲ್ಲಿ ಬಾಗಳಿ ೮ನೇ ಶತಮಾನದ ಅಂತ್ಯ ಅಥವಾ ೯ನೇ ಶತಮಾನದ ಪ್ರಾರಂಭದಲ್ಲಿ ತನ್ನ ಅಸ್ತಿತ್ವವನ್ನು ರೂಢಿಸಿಕೊಂಡಿತು ಎಂಬುದು ಸ್ಪಷ್ಟ. ಬಾಗಳಿಯ ಕಂಚಿನ ಪತ್ರದಲ್ಲಿಯ ಐತಿಹಾಸಿಕ ಕತೆಯೊಂದನ್ನು ಈ ಕೆಳಗೆ ಚರ್ಚಿಸಲಾಗಿದೆ. ಈ ಕತೆಯಲ್ಲೂ ಸಹ ಇತಿಹಾಸ ಅಡಗಿದೆ. ಸುಮಾರು ಎರಡು ಶತಮಾನಕ್ಕೂ ಹೆಚ್ಚು ಕಾಲ ರಾಜ್ಯವಾಳಿದ (ಹದಿನಾರು ಜನ) ಹರಪನಹಳ್ಳಿ ಪಾಳೆಯಗಾರ ಮನೆತನದ ಮೊದಲ ಅರಸ ದಾದಯ್ಯ. ಇವನು ಬಾಗಳಿಯಿಂದ ಹರಪನಹಳ್ಳಿಗೆ ಬಂದು ತನ್ನ ರಾಜ್ಯವನ್ನು ವಿಸ್ತರಿಸುವ ಮುನ್ನ ಗೊಲ್ಲರ ಗೋಪಾಲ ಗೌಡನಿಂದ ಬಾಗಳಿಯ ಗೌಡಿಕೆಯನ್ನು ಪಡೆದನು. ಕಂಚಿನ ಪತ್ರದಲ್ಲಿ ಗೊಲ್ಲರ ಗೋಪಾಲಗೌಡ ಹುಗ್ಗಿಹೊಯ್ದು ಬಾಗಳಿಯನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಬಹುಶಃ ದಾದಯ್ಯ, ಬಾಗಳಿಯ ಗೌಡಿಕೆಯನ್ನು ಈ ಗೊಲ್ಲರ ಗೋಪಾಲಗೌಡನಿಂದ ಪಡೆದಿರಬಹುದು. ಇನ್ನೊಂದು ಮಾಹಿತಿಯೆಂದರೆ ದಾದಯ್ಯ ಅಲ್ಲಿಯ ಜೋಯಿಸ ಕಾಮಭಟ್ಟರಿಗೆ, ಬಾಗಳಿಗೆ ಸೇರಿದ ೩೩ ಹಳ್ಳಿಗಳನ್ನು ನಿರ್ವಹಿಸಲಿಕ್ಕೆ ದತ್ತಿ ಕೊಟ್ಟನೆಂದು ತಿಳಿದುಬರುತ್ತದೆ. ಈ ಹಳ್ಳಿಗಳೂ ಇಂದಿಗೂ ಬಾಗಳಿಯ ಸುತ್ತಮುತ್ತಲೂ ಕಂಡುಬರುತ್ತವೆ. ಕೆಲವು ಹಳ್ಳಿಗಳ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ಹಳ್ಳಿಗಳ ಹೋಬಳಿ ಕೇಂದ್ರವಾಗಿದ್ದ ಬಾಗಳಿಯನ್ನು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ೮೦೫ನೇ ಸೋಭಾನಕೃತು ಸಂವತ್ಸರ ವೈಶಾಖ ಬಹುಳ ೧೨ರಲ್ಲಿ, ಅಂದರೆ ಕ್ರಿ.ಶ.೮೮೩ ಏಪ್ರಿಲ್ ೧೨ನೇ ಶುಕ್ರವಾರ ಕರಿಕಾಲ ಖಂಡೆರಾಯನ ಬಾಗಿಲ ಕಾಯುವ ಗೊಲ್ಲರ ಗೋಪಾಲಗೌಡನು ಸ್ಥಾಪಿಸಿದನೆಂದು ಹೇಳಲಾಗಿದೆ. ಹೀಗೆ ಇದರ ಇತಿಹಾಸ ಪ್ರಾಚೀನವಾದುದು ಎಂಬುದಕ್ಕೆ ಇಲ್ಲಿನ ಪ್ರಾಚೀನ ದೇವಾಲಯಗಳು ಮತ್ತು ಶಾಸನಗಳೇ ಸಾಕ್ಷಿ. ಇದರಿಂದ ಇದು ಹಲವು ದಶಕಗಳ ಹಿಂದಯೇ ಪ್ರಖ್ಯಾತಿ ಪಡೆದಿತ್ತು ಎನ್ನುವುದಕ್ಕೆ ಇವು ಸಾಕ್ಷಿಗಳಾದರೆ, ಅಲ್ಲಿನ ಒಂದು ಕೆರೆ ರಾಷ್ಟ್ರಕೂಟರ ಕಾಲದಲ್ಲಿ ಅಸ್ತಿತ್ವದಲ್ಲಿತ್ತು ಎಂದು ಕಂಡುಬರುತ್ತದೆ. ಇದರಿಂದ ರಾಷ್ಟ್ರಕೂಟರ ಕಾಲದಿಂದಲೂ ಬಾಗಳಿ ಇತಿಹಾಸವನ್ನು ಗುರುತಿಸಬಹುದು. ಈ ಕೆರೆಯು ನೀರಾವರಿಗೆ ಬಳಕೆಯಾಗುತ್ತಿತ್ತು. ಈ ಹಿಂದೆ ಹೇಳಿದ ಹಾಗೆ ಬಾಗಳಿ ಮತ್ತು ಕಾರಿಟ್ಟಗೆ ಭತ್ತಗ್ರಾಮಗಳಾಗಿದ್ದ ವೆಂದು ಹೇಳುವುದರಲ್ಲಿ ಯಾವ ಸಂದೇಹವಿಲ್ಲ. ಏಕೆಂದರೆ ಭತ್ತ ಅಥವಾ ನೆಲ್ಲು ಬೆಳೆಯಲು ಹೆಚ್ಚು ನೀರು ಬೇಕು. ಆದ್ದರಿಂದ ಬಾಗಳಿಯ ಕೆರೆಯಿಂದ ಹೆಚ್ಚು ನೀರು ಬಳಸಲಾಗುತ್ತಿತ್ತು. ಈಗಲೂ ಸಹ ನೀರು ಬಿಡುವವರಿದ್ದಾರೆ. ಅವರನ್ನು ನೀರಗಂಟಿ ಮನೆತನದವರು ಎಂದು ಕರೆಯಲಾಗುತ್ತದೆ.

ಹೀಗೆ ಬಾಗಳಿಯು ಮೂವತ್ಮೂರು ಹಳ್ಳಿಗಳ ಹೋಬಳಿ ಮತ್ತು ಭತ್ತಗ್ರಾಮವಾಗಿತ್ತು. ಈ ಮೂವತ್ಮೂರು ಹಳ್ಳಿಗಳಲ್ಲಿ ಮುಖ್ಯವಾಗಿ ಹರಪನಹಳ್ಳಿ, ಮಾಡಲಗೇರಿ, ಕೂಲಹಳ್ಳಿ, ಕಾಯಕದಳ್ಳಿ, ದಡಿಗಾರನಹಳ್ಳಿ, ಕೋಡಿಹಳ್ಳಿ, ಕಣವಿಹಳ್ಳಿ, ನೀಲಗುಂದ, ಕೊಟ್ಟೂರು, ಕೂಡ್ಲಿಗಿ, ಹೂವಿನ ಹಡಗಲಿ,

ಮಾಸಲವಾಡ, ಹಿರೇಹಡಗಲಿ, ಮದಲಗಟ್ಟಿ, ಕಾನಹಳ್ಳಿ, ಉಚ್ಚಂಗಿದುರ್ಗ, ಸೋಗಿ, ಕುರುವತ್ತಿ, ಕೋಗಳಿ ಮುತ್ತಿಗಿ, ಮಾಗಳ, ನಂದಿಬೇವೂರು, ತಿಮ್ಮಲಾಪುರ ಮುಂತಾದವುಗಳನ್ನು ಹೆಸರಿಸಬಹುದಾಗಿದೆ. ಹೀಗೆ ಬಾಗಳಿ ತನ್ನ ಇತಿಹಾಸವನ್ನು ಶಾಸನಗಳಿಂದ ಗುರುತಿಸಿಕೊಂಡಿದ್ದು, ಅಗ್ರಹಾರವಾಗಿ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಇಲ್ಲಿ ಮೊದಲು ಆಡಳಿತ ವಿಭಾಗಗಳನ್ನು ಗುರುತಿಸಿದ್ದು, ನಂತರ ರಾಜವಂಶಗಳನ್ನು ನೋಡಲಾಗಿದೆ.

೧. ಮೌರ್ಯರು

ಮೌರ್ಯರ ಆಳ್ವಿಕೆಗೆ ಬಳ್ಳಾರಿ ಜಿಲ್ಲೆ ಒಳಪಟ್ಟಿದ್ದನ್ನು ಶಾಸನಗಳು ನಿರೂಪಿಸುತ್ತವೆ. ಕ್ರಿ.ಪೂ.೩೨೬ರ ಸುಮಾರಿಗೆ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಇವರ ಆಳ್ವಿಕೆಯೊಂದಿಗೆ ದೇವನಾಂಪ್ರಿಯದರ್ಶಿಯಾದ ಆಶೋಕನು ಆಳಿದ ಶಾಸನಗಳು ಇಲ್ಲಿ ದೊರೆತಿವೆ. ಇವನ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಸಿದ್ಧಾಪುರ, ಜಟಿಂಗ ರಾಮೇಶ್ವರ, ಬ್ರಹ್ಮಗಿರಿ, ರಾಯಚೂರು ಜಿಲ್ಲೆಯ ಕೊಪ್ಪಳ, ಮಸ್ಕಿಯಲ್ಲಿ ದೊರೆತಿವೆ. ಕೊಪ್ಪಳ ಜಟಿಂಗರಾಮೇಶ್ವರ, ಮಸ್ಕಿ ಇವು ಬಳ್ಳಾರಿಗೆ ಹತ್ತಿರದ ಸ್ಥಳಗಳು. ಈ ಜಿಲ್ಲೆಯ ಉದೇಗೊಳ, ಜಟಿಂಗ ರಾಮೇಶ್ವರದಲ್ಲೂ ಸಿಕ್ಕಿವೆ. ಇವುಗಳಿಂದ ಬಳ್ಳಾರಿಯ ಪ್ರದೇಶ ಮೌರ್ಯ ಸಾಮ್ರಾಜ್ಯದ ದಕ್ಷಿಣ ತುದಿಯೂ ಧರ್ಮ ಪ್ರಸಾರದ ಪ್ರಮುಖ ಘಟಕವೂ ಆಗಿತ್ತೆಂದು ಸ್ಪಷ್ಟವಾಗುತ್ತದೆ.

೨. ಶಾತವಾಹನರು

ಶಾತವಾಹನರ ಆಡಳಿತಕ್ಕೆ ಈ ಪ್ರದೇಶ ಸೇರಿದ್ದರೂ, ಇವರು ಹಾಕಿಸಿರುವ ಶಾಸನಗಳಾವುವು ಇದುವರೆಗೆ ದೊರೆಕಿಲ್ಲ. ಕ್ರಿ.ಪೂ.೨೨೦ ರಿಂದ ಕ್ರಿ.ಶ.೨೩೦ವರೆಗೆ ಆಳಿದ ಶಾತವಾಹನರ ಮೂಲನೆಲೆ ಬಳ್ಳಾರಿ ಜಿಲ್ಲೆಯೆಂದು ಕೆಲವು ವಿದ್ವಾಂಸರ ಹೇಳಿಕೆ. ಹೂವಿನ ಹಡಗಲಿ ತಾಲೂಕಿನ ಹಿರೇಹಡಗಲಿ ಗ್ರಾಮದಲ್ಲಿ ದೊರೆತ ಶಿಲಾಶಾಸನದ ಪ್ರಕಾರ ಈ ಪ್ರದೇಶವನ್ನು 'ಶಾತವಾಹನೀಯ' ಎಂದು ಕರೆಯುತ್ತಿದ್ದರು. (ಕೆಲವರು ತಾಮ್ರಪತ್ರದಲ್ಲಿ ಉಲ್ಲೇಖವಿದೆ ಎಂದು ಹೇಳಿದ್ದಾರೆ) ವಾದಗಳೇನಾದರೂ ಇರಲಿ, ಬಳ್ಳಾರಿ ಜಿಲ್ಲೆ ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ಗಮನಾರ್ಹ.

೩. ಗಂಗರು

ಬಳ್ಳಾರಿ ಜಿಲ್ಲೆಯ ಕೆಲಪ್ರದೇಶಗಳನ್ನು ಗಂಗರು ತಮ್ಮ ವಶದಲ್ಲಿಟ್ಟುಕೊಂಡಿದ್ದರು. ಕೆಲವು ಶಾಸನಗಳು ಇವರ ಆಳ್ವಿಕೆಯನ್ನು ನಿರೂಪಿಸುತ್ತವೆ. ಕೋಗಳಿ ಶಾಸನದಲ್ಲಿ ಗಂಗ ದೊರೆ ದುರ್ವಿನೀತನು ಬಸದಿಯೊಂದನ್ನು ನಿರ್ಮಿಸಿದನೆಂದು ಉಲ್ಲೇಖ ಬರುತ್ತದೆ.[೨೩] ಅಂಬಳಿ ಶಾಸನದಲ್ಲೂ ಈತನ ಪ್ರಸ್ತಾಪ ಬರುತ್ತದೆ. ಅಂಬಳಿ

ಗ್ರಾಮದ ಒಡೆಯನಾದ ಪಶುಪತಿಭಟ್ಟನೆಂಬಾತನಿಗೆ ದುರ್ವಿನೀತಗಂಗನು ಪರಮಾದರದಿಂದ ರಾಜ್ಯ ಚಿಹ್ನೆಗಳನ್ನು ಕೊಡುತ್ತಾನೆ. ಇದರಿಂದ ಪಶುಪತಿಭಟ್ಟನಿಗೆ ಯಾವುದೇ ಸಾಧನೆಯಲ್ಲಿ ನೆರವಾಗುತ್ತಾನೆ. ಹೆಚ್ಚಿನ ವಿವರಗಳೇನು ಕಂಡುಬರುವುದಿಲ್ಲ.

೩. ಕದಂಬರು

ಕದಂಬರು ಕರ್ನಾಟಕದ ಪ್ರಥಮ ಕನ್ನಡಿಗ ಚಕ್ರವರ್ತಿಗಳಾಗಿದ್ದರು. ತಮ್ಮ ರಾಜ್ಯವನ್ನು ಪಶ್ಚಿಮ ಕಡಲಿನಿಂದ ಬಳ್ಳಾರಿ (ಜಿಲ್ಲೆ) ಮತ್ತು ಉಚ್ಚಂಗಿದುರ್ಗದವರೆಗೂ ವಿಸ್ತರಿಸಿದರು. ಇವರಿಗೆ ಸಂಬಂಧಿಸಿದ ಹಲವಾರು ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಸಿಕ್ಕಿವೆ. ಇವರ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶವನ್ನು 'ಕದಂಬಳಿಗೆ ನಾಡು' ಎಂದು ಕರೆಯುತ್ತಿದ್ದರು. ನಂತರ 'ಕದಂಬಳಿಗೆ ಸಾಸಿರ'ವೆಂದು ಕರೆಯಲಾಗಿದೆ. ಈ ವಿಭಾಗವು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಕೂಡ್ಲಿಗಿ ತಾಲೂಕು ಮತ್ತು ದಾವಣಗೆರೆಯ ಕೆಲವು ಭಾಗಗಳನ್ನು ಒಳಗೊಂಡಿತ್ತು. ಈಗ ಈ ಗ್ರಾಮ ಕಡಬಗೆರೆ ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ. ಇದರ ಉಪವಿಭಾಗ ಉಚ್ಚಂಗಿ ದುರ್ಗ ಅಥವಾ ಉಚ್ಚಂಗಿ-೩೦(ಕದಂಬಳಿಗೆ-ಸಾವಿರದ) ಆಗಿತ್ತು. ಉಚ್ಚಂಗಿಯನ್ನು 'ಉಚ್ಚಶೃಂಗ ವಿಷಯ'ವೆಂದು ಕರೆಯಲಾಗುತ್ತಿತ್ತು. ಇಲ್ಲಿಯ ಒಂದು ಶಾಸನದಲ್ಲಿ ಕದಂಬವಾಡಿನಾಡ ಮಧ್ಯದೊಳ್ಮೇರ ವಿಪ್ಪಂತಿಟ್ಟುದುಚ್ಚಂಗಿಯ ಪರ್ವತಂ ಎಂದಿದೆ.[೨೪] ಹರಪನಹಳ್ಳಿ ತಾಲೂಕಿನ ಕಡಬಗೆರೆಯ ಕ್ರಿ.ಶ.೯೨೨ ಸೆಪ್ಟಂಬರ್ ೯ರ ಶಾಸನದಲ್ಲಿ ರಾಷ್ಟ್ರಕೂಟರ ಚಕ್ರವರ್ತಿ ಇಂದ್ರವಲ್ಲಬ ಆಳುತ್ತಿರುವಾಗ ಆತನ ಅಧೀನ ವಾಗಿ ಮಹಾಸಾಮಂತ 'ರೊಟ್ಟ, ಶ್ರೀಮತ್ ಬಿಜ್ಜ' ಕೋಗಳಿ-೫೦೦, ಮಾಸವಾಡಿ-೧೪೦ ಆಳುತ್ತಿರುತ್ತಾನೆ. ಕದಂಬವಂಶದ ಮುದುದರದೇವಯ್ಯನ ಮಗ ಮಾಳಯ್ಯನು ಹೋರಾಡಿ ಸತ್ತನೆಂದು ಬರುತ್ತದೆ. ಇದೇ ಗ್ರಾಮದ ಇನ್ನೊಂದು ಶಾಸನದಲ್ಲಿ ನೊಳಂಬವಾಡಿ ಅಯ್ಯಪ್ಪಯ್ಯನ ಮಗ ಅಣ್ಣಿಗನು ಪಡುಗಲ್ಲು ಮುತ್ತಿದಾಗ ಕದಂಬವಂಶದ ಕಣ್ಣವಾರನು(ಮುದುದರಯ್ಯನ ಮಗನಾದ) ವೀರಮರಣ ವನ್ನಪ್ಪಿದನು.[೨೫] ಇದೇ ಕಲ್ಲಿನ ಹಿಂಭಾಗದಲ್ಲಿ(ಶಾಸನದ ಹಿಂಭಾಗ) ಕದಂಬ ವಂಶದ ಕಣ್ಣವಾರ ನಾಕಲೊಕ್ಕನು ಹೋರಾಡಿ ಜಯಪಡೆದು ಸ್ವರ್ಗಸ್ಥನಾಗಿರುವುದನ್ನು ಉಲ್ಲೇಖಿಸುತ್ತದೆ.[೨೬] ಇದರಿಂದ ಮುದುದರದೇವಯ್ಯನಿಗೆ ಇಬ್ಬರು ಮಕ್ಕಳಿದ್ದರೆಂಬುದನ್ನು ತಿಳಿಯಬಹುದು.

ಕೋಗಳಿನಾಡಿನ ಒಡೆತನ ಕದಂಬ ವಂಶದವರಿಗೆ ಲಭ್ಯವಾಗಿತ್ತೆಂದರೆ ಕಲ್ಯಾಣಿ ಚಾಲುಕ್ಯರಿಗೆ ಕದಂಬ ವಂಶದ ಆಯ್ಯುವರ್ಮ ನೆರವಾಗಿರಬೇಕು. ವಿಜಯಿಯಾದ ಇಮ್ಮಡಿ ತೈಲಪನು ಇವನನ್ನು ಕೋಗಳಿನಾಡಿನ ಸಾಮಂತನನ್ನಾಗಿ ನೇಮಿಸಿರಬೇಕು. ಉಪಲಬ್ದ ಆಧಾರಗಳಿಂದ ಕೋಗಳಿ ನಾಡಿನ ಪ್ರಭುವಾಗಿ ಈ ವಂಶ ಸ್ಥಾಪಿಸಿದವನು ಆಯ್ಯುವರ್ಮ ಎಂದು ಗೊತ್ತಾಗುತ್ತದೆ. ಈತನ ಪ್ರಥಮ ಉಲ್ಲೇಖ ಬಾಗಳಿ

ಕ್ರಿ.ಶ.೯೮೭ರ ಶಾಸನದಲ್ಲಿ ಬರುತ್ತದೆ.[೨೭] ಅಹವಮಲ್ಲದೇವನ ಆಳ್ವಿಕೆಯಲ್ಲಿ ಇತನ ಪಾದಪದ್ಮೋಪಜೀವಿಯಾಗಿ ಮಹಾಸಾಮಂತ ಆಯ್ಯುವರ್ಮನು ಕಿಸುಕಾಡು-೭೦, ಕೋಗಳಿ-೫೦೦ ಆಳುತ್ತಿದ್ದನು. ಕೋಗಳಿಯ ಒಂದು ಶಾಸನದಲ್ಲಿ ಚಾಲುಕ್ಯ ಅರಸ ಅಹವಮಲ್ಲ ದೇವನ ಸಾಮಂತ ದಶಾಶ್ವಮೇಧನೊಂದಿಗೆ ಕದಂಬವಂಶದ ಆದಿತ್ಯವರ್ಮರಸ(ಆಯ್ಯುವರ್ಮ) ಕೋಗಳಿ-೫೦೦, ಸಂದವತ್ತಿ-೧೨ ಆಳುತ್ತಿದ್ದನೆಂದು ಹೇಳಲಾಗಿದೆ.[೨೮] ಇವನ ಆಳ್ವಿಕೆಯಲ್ಲಿ ತೆರಿಗೆ ಪದ್ಧತಿಯಲ್ಲಿ ಬಾಳ್ಗುಳಿಯ ತಂಬುಲಿಗರು ಬಂದು, ಒಂದು ಸೇರಿಗೆ ಎರಡು ಪಣ ಎಲೆ(ಮಾರುವುದು) ಕೊಡುವುದು ಸಮ್ಮತವಾಗಿತ್ತು. ಇದು ನ್ಯಾಯವಾಗಿತ್ತು ಕೂಡ. ಆದರೆ ಚಾಲುಕ್ಯರ (ಕಾಲದಲ್ಲಿ) ಅಹವಮಲ್ಲದೇವನ ಆಳ್ವಿಕೆಯಲ್ಲಿ ತೆರಿಗೆಯನ್ನು ಹೆಚ್ಚಿಸಿದನು. ಆಗ ಬಾಗುಳಿಯ ತಂಬುಲಿಗರು, ಇತರರೂ ಹೋಗಿ ನೇರವಾಗಿ ಈತನ ಆಡಳಿತದ ಅಸಂತೋಷವನ್ನು ವ್ಯಕ್ತಪಡಿಸಿದಾಗ ಪುನಃ ಹಿಂದಿನದನ್ನೇ ಜಾರಿಗೆ ತರುತ್ತಾನೆ. ಇನ್ನೊಂದು ಶಾಸನದಲ್ಲಿ ನಾಚಿದೇವರಸನು ಕೋಗಳಿ ನಾಡಿನ ಕದಂಬ ಮನೆತನದಲ್ಲಿ ಪ್ರಸಿದ್ಧಿಪಡೆದ 'ಮನ್ನೆಯ'ನಾದ ಘಟ್ಟಿಯರಸರ ಮಗನಿರಬೇಕು. ಮಹಾಮಂಡಳೇಶ್ವರ, ಕೊಟ್ಟೂರನಾಚಿದೇವನಮೊಮ್ಮಗನು, ಹರಿಹರದೇವನ ಪುತ್ರನೂ ಆದ ವೀರಜಗದಾಳ, ಮೊಮ್ಮಗ ಬೊಮ್ಮಿದೇವರಸ ಎಂದು ಬರುತ್ತದೆ. ಹೀಗೆ ಕದಂಬರ ಆಳ್ವಿಕೆಯನ್ನು ಇಲ್ಲಿಯ ಶಾಸನಗಳು ಉಲ್ಲೇಖಿಸುತ್ತದೆ.

೪. ರಾಷ್ಟ್ರಕೂಟರು

ಬಾದಾಮಿಚಾಲುಕ್ಯರ ತರುವಾಯ ಆಡಳಿತಕ್ಕೆ ಬಂದವರು ರಾಷ್ಟ್ರಕೂಟರು. ಇವರು ಚಾಲುಕ್ಯರಂತೆ ಕನ್ನಡಿಗರು. ಮೂಲತಃ ಕನ್ನಡಿಗರೆಂದು ಡಾ.ಅಲ್ಟೇಕರ್ ಅಭಿಪ್ರಾಯ ಪಡುತ್ತಾರೆ.[೨೯] ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶದ ಪ್ರಾಂತ್ಯಗಳೆಲ್ಲ ರಾಷ್ಟ್ರಕೂಟರ ಅಧೀನಕ್ಕೊಳಪಟ್ಟಿದ್ದವು. ಈ ಮನೆತನದ ರಾಜನಾದ ದ್ರುವನ ಮಗನಾದ ಮುಮ್ಮಡಿ ಗೋವಿಂದನು ಚಿತ್ರದುರ್ಗ ತುಮಕೂರು, ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶವನ್ನೊಳಗೊಂಡ ನೊಳಂಬವಾಡಿಯನ್ನು ಜಯಿಸಿದ್ದನು. ಕ್ರಿ.ಶ.೭೫೩ರಲ್ಲಿ ತನ್ನ ಚಕ್ರವರ್ತಿ ಬಾದಾಮಿ ಚಾಲುಕ್ಯರ ವಂಶದ ಕೀರ್ತಿವರ್ಮನನ್ನು ಸೋಲಿಸಿ ಅಧಿಕಾರಕ್ಕೆ ಬಂದರು. ಈ ವಂಶದ ಚಕ್ರವರ್ತಿಗಳು ಬಳ್ಳಾರಿ ಜಿಲ್ಲೆಯ ದೇವಾಲಯಗಳಿಗೆ ದಾನ-ದತ್ತಿ ಬಿಟ್ಟಿದ್ದಾರೆಂಬುದನ್ನು ಇಲ್ಲಿ ದೊರೆತ ಹಲವಾರು ಶಾಸನಗಳು ತಿಳಿಸುತ್ತವೆ. ರಾಷ್ಟ್ರಕೂಟರ ದೊರೆಗಳಲ್ಲಿ ಪ್ರಸಿದ್ಧನಾದವನು ಮೂರನೆಯ ಕೃಷ್ಣ. ಇವನ ನಾಲ್ಕು ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ.

ಬಾಗಳಿ ಶಾಸನದಲ್ಲಿ ಕ್ರಿ.ಶ.೯೪೪-೪೫(ಕನ್ನರದೇವ) ಮೂರನೆಯ ಕೃಷ್ಣನ ಆಳ್ವಿಕೆಯಲ್ಲಿ 'ಕನ್ನರದೇವ ರಾಜ್ಯಂಗೆಯ್ಯು' ಎಂದಿದ್ದು, ಇವನ ಸಾಮಂತನಾದ ಕತ್ಯೆರ, ಕೋಗಳಿ-೫೦೦, ಮಾಸಿಯವಾಡಿ-೧೪೦,

ಆಳುತ್ತಿದ್ದುದನ್ನು ಉಲ್ಲೇಖಿಸುತ್ತದೆ.[೩೦] ಕ್ರಿ.ಶ.೯೨೨ರಲ್ಲಿ ರಾಷ್ಟ್ರಕೂಟರ ರಾಜ ನಿತ್ಯವರ್ಷ ಇಂದ್ರವಲ್ಲಭನ ಕಾಲದಲ್ಲಿ ಇವನ ಸಾಮಂತ ಬಿಜ್ಜನೆಂಬುವನು, ಕೋಗಳಿ-೫೦೦, ಮಾಸಿಯವಾಡಿ-೧೪೦ ಆಳುತ್ತಿದ್ದನೆಂದು ತಿಳಿದುಬರುತ್ತದೆ.[೩೧] ಇದೇ ಶಾಸನದ ಇನ್ನೊಂದು ಭಾಗದಲ್ಲಿ ನಿತ್ಯವರ್ಷನ ಮಹಾಸಾಮಂತ ಬಿಜ್ಜನು ಮಾಸಿಯವಾಡಿ-೧೪೦, ಕೋಗಳಿ-೫೦೦ ಆಳುತ್ತಿದ್ದನೆಂದು ಬರುತ್ತದೆ.[೩೨] ಕ್ರಿ.ಶ.೯೯೧ರಲ್ಲಿ ಚಾಲುಕ್ಯರಾಜನ ಸಾಮಂತನಾಗಿ ರಾಷ್ಟ್ರಕೂಟ ದೊರೆ ಕನ್ನರದೇವ ಆಳುತ್ತಿದ್ದನು.[೩೩] ಇಂದ್ರವಲ್ಲಭನ ಆಳ್ವಿಕೆಯನ್ನು ತಿಳಿಸುವ ಕಡಬಗೆರೆ ಶಾಸನದಂತೆ ಇವನ ಅಧೀನನಾಗಿ ರಟ್ಟಕಂದರ್ಪನಿದ್ದನು.(ಬಿರುದರರೊಟ್ಟ) ರಟ್ಟಕಂದರ್ಪನನ್ನು ನಾಗಯ್ಯನವರು 'ಬಿರುದರೊಟ್ಟ' ಎಂದಿದ್ದಾರೆ.[೩೪] ಆದರೆ ಬಾಗಳಿ ಶಾಸನದಲ್ಲಿ ಇಂದ್ರವಲ್ಲಭನಿಗೆ ರಟ್ಟಕಂದರ್ಪ ಎಂಬ ಬಿರುದಿತ್ತೆಂದು ತಿಳಿದುಬರುತ್ತದೆ. ಸಾಮಂತರೊಟ್ಟ(ರೊಟ್ಟ) ಎಂದಿರುವುದರಿಂದ ಇವನೇ ಬಿರುದರೊಟ್ಟ ಆಗಿದ್ದಾನೆ. ಆದರೆ ಬಿರುದರ ರೊಟ್ಟ ಎಂಬುದು ಇವನ ಹೆಸರಲ್ಲ. ರಟ್ಟಕಂದರ್ಪನು 'ರೊಟ್ಟ' ಎಂಬ ಬಿರುದು ಪಡೆದು, ಕೋಗಳಿ-೫೦೦, ಮಾಸಿಯವಾಡಿ-೧೪೦ ಆಳುತ್ತಿದ್ದನೆಂದು ತಿಳಿದುಬರುತ್ತದೆ.[೩೫] ಈ ಶಾಸನ ಇಂದ್ರವಲ್ಲಭನ ಬಿರುದುಗಳನ್ನು ಮತ್ತು ಅವನ ಲಾಂಛನ 'ಗರಡ'ವಾಗಿತ್ತೆಂದು ಉಲ್ಲೇಖಿಸುತ್ತದೆ. ಈ ಶಾಸನದ ಕೆಳಗೆ 'ನೇಗಿಲ' ಚಿತ್ರವಿದೆ. ಸಾಮಂತನಾದ ರೊಟ್ಟನು ಕೋಗಳಿ-೫೦೦, ಮಾಸವಾಡಿ-೧೪೦ ಮತ್ತು ಕುಕ್ಕನೂರು-೩೦ನ್ನು ಆಳುತ್ತಿದ್ದನೆಂದು ಇನ್ನೊಂದು ಶಾಸನದಲ್ಲಿ ಬರುತ್ತದೆ.[೩೬] ಇದು ರಾಜನಾದ ಅಕಾಳವರ್ಷ ಕನ್ನರದೇವನನ್ನು ಹೆಸರಿಸುತ್ತದೆ. ಇವನ ಆಳ್ವಿಕೆ ಯಲ್ಲಿ ಇನ್ನೊಬ್ಬ ಸಾಮಂತನಾದ ಧೋರಪಯ್ಯ ಇದ್ದನೆಂದು ಉಲ್ಲೇಖಿಸುತ್ತದೆ.

ಕ್ರಿ.ಶ.೯೭೨ರಲ್ಲಿ ರಾಷ್ಟ್ರಕೂಟರ ಇನ್ನೊಬ್ಬ ದೊರೆ ಖೊಟ್ಟಿಗದೇವನ ಆಳ್ವಿಕೆ ಇತ್ತು. ಇವನ ಸಾಮಂತ ಗಂಗಪೆರ್ಮಾಡಿ ಇದ್ದನೆಂದು ತಿಳಿದುಬರುತ್ತದೆ. ಇದೇ ಸಮಯದಲ್ಲಿ ರಾಮದುರ್ಗ ಶಾಸನ ಒಂದರಲ್ಲಿ ಅಮೋಘವರ್ಷ ಆಳಿದನೆಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ(ಕಾಲ ಒಂಬತ್ತನೆ ಶತಮಾನ ಎಂದು ತಿಳಿಸುತ್ತದೆ). ಚಿರಸ್ತಹಳ್ಳಿಯ ಒಂದು ಶಾಸನದಲ್ಲಿ ನಾಲ್ಕನೆಯ ಗೋವಿಂದನ ಆಳ್ವಿಕೆಯೂ ಸಹ ಇಲ್ಲಿತ್ತೆಂದು ತಿಳಿದುಬರುತ್ತದೆ. ಇಲ್ಲಿಯ ಇನ್ನೊಂದು ಶಾಸನದಲ್ಲಿ ರಾಷ್ಟ್ರಕೂಟರ ಮೂರನೆಯ ಕೃಷ್ಣ ಆಳುತ್ತಿದ್ದನೆಂದು, ಇವನನ್ನು 'ಚಲಕನೆಲ್ಲಾತಂಶ್ರೀಮತ್ಕನ್ನರದೇವನರಾಜ್ಯಮುತ್ತರೋತ್ತರಾಭಿವೃದ್ಧಿಗೆ ಸಲುತ್ತಮಿರೆ' ಎಂದು ಉಲ್ಲೇಖ ಬರುತ್ತದೆ.[೩೭] ಈ ಎಲ್ಲಾ ಅಂಶಗಳಿಂದ ರಾಷ್ಟ್ರಕೂಟರ ಇತಿಹಾಸವನ್ನು ಚರ್ಚಿಸಲಾಯಿತು.

ವಂಶಾವಳಿ

ಎರಡನೆಯ ತೈಲಪ(೯೭೩-೯೯೭)

ಸತ್ಯಾಶ್ರಯ		ದಶವರ್ಮ
ವಿಕ್ರಮಾದಿತ್ಯ (೧೦೦೮-೧೦೧೫)	ಅಯ್ಯಣ (೧೦೧೫)	ಜಯಸಿಂಹ ಎರಡನೆಯ (೧೦೧೫-೧೦೪೪)
	ಸೋಮೇಶ್ವರ ಒಂದನೆಯ (೧೦೪೪-೧೦೬೮)	ಜಯಸಿಂಹ ಮೂರನೆಯ
ಸೋಮೇಶ್ವರ-ಎರಡನೆಯ (೧೦೬೮-೧೦೭೬)	ವಿಕ್ರಮಾದಿತ್ಯ IV (೧೦೭೬-೧೧೨೭)	ಜಯಸಿಂಹ ನಾಲ್ಕನೆಯ
	ಸೋಮೇಶ್ವರ ಮೂರನೆಯ (೧೧೨೭-೧೧೩೯)	
ಜಗದೇಕಮಲ್ಲ ಎರಡನೆಯ (೧೧೩೯-೧೧೪೯)		ತೈಲಪಮೂರನೆಯ
ಸೋಮೇಶ್ವರ (೧೧೮೪-೧೧೯೮)	ಭೂಲೋಕಮಲ್ಲ ಎರಡನೆಯ	ಜಗದೇಕಮಲ್ಲ ಮೂರನೆಯ

ಕರ್ನಾಟಕದ ಇತಿಹಾಸದಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆ ಒಂದು ಪ್ರಮುಖ ಘಟ್ಟವಾಗಿ ನಿಲ್ಲುತ್ತದೆ. ಇವರ ಕಾಲದ ಶಾಸನಗಳು ಹೆಚ್ಚು ಬೆಳಕಿಗೆ ಬಂದಿವೆ. ಅದರಲ್ಲೂ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ದೊರತಿವೆ. ಇವರ ಕಾಲದಲ್ಲಿ ಹಲವಾರು ದೇವಾಲಯಗಳು, ಬಸದಿಗಳು ಮತ್ತು ವಾಸ್ತುಶಿಲ್ಪ ಕಲೆಯು ಶಾಸ್ತ್ರೀಯವಾಗಿ ಬೆಳೆದು, ಹೆಚ್ಚು ಪ್ರಸಿದ್ಧಿ ಪಡೆದವು. ಇವರ ಹಲವಾರು ಸಾಹಿತ್ಯ ಕೃತಿಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲೂ ಪ್ರಮುಖವೆನಿಸಿವೆ.

ಈ ವಂಶದ ಇಮ್ಮಡಿ ತೈಲಪನು ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಾಮ್ರಾಜ್ಯವನ್ನು ಸ್ಥಾಪಿಸಿದನು. ಬಾಗಳಿ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯರ ಶಾಸನಗಳೇ ಹೆಚ್ಚಾಗಿ ದೊರೆತಿವೆ. ಕೋಗಳಿಯಲ್ಲೂ ಇವರ ಕಾಲದ ದೇವಾಲಯಗಳು, ಬಸದಿಗಳು, ಶಾಸನಗಳು ದೊರಕುತ್ತವೆ. ಬಾಗಳಿ ಶಾಸನಗಳಲ್ಲಿ ಕಂಡುಬರುವ ಅರಸರೆಂದರೆ ಎರಡನೆಯ ತೈಲಪ, ಎರಡನೆಯ ಜಗದೇಕಮಲ್ಲ, ಆರನೆಯ ವಿಕ್ರಮಾದಿತ್ಯ, ಒಂದನೆಯ ಸೋಮೇಶ್ವರ.

ಎರಡನೆ ತೈಲಪ - (೯೭೩-೯೩)

ರಾಷ್ಟ್ರಕೂಟರ ಅರಸ ಎರಡನೆಯ ಕರ್ಕನನ್ನು ಪದಚ್ಯುತಿಗೊಳಿಸಿ ದಕ್ಷಿಣದಲ್ಲಿ ಚಾಲುಕ್ಯರ ಸಾರ್ವಭೌಮತ್ವವನ್ನು ಮತ್ತೆ ಸ್ಥಾಪಿಸಿ ಚಾಲುಕ್ಯರ ವಂಶಜನೆಂದು ಹೇಳಿಕೊಂಡಿದ್ದಾನೆ. ಇವನ ಪೂರ್ವಿಕರು ಇವನನ್ನು ವಿಜಯಾದಿತ್ಯನೆಂದು ಕರೆದಿದ್ದು, ರನ್ನನ ಗದಾಯುದ್ಧದ ವಂಶವೃಕ್ಷದಲ್ಲಿ ಸತ್ಯಾಶ್ರಯವೆಂಬುದು

ಇವನ ಮೊದಲ ಹೆಸರಾಗಿತ್ತೆಂದು ಕಂಡುಬರುತ್ತದೆ. ನಾಲ್ಕನೆಯ ವಿಕ್ರಮಾದಿತ್ಯನ ಮಗನಾಗಿದ್ದ ಇವನು ಈ ಶಾಸನದಲ್ಲಿ ಈತನ ಪಾದಪದ್ಮೋಪಜೀವಿಯಾಗಿ ಮಹಾಸಾಮಂತ ಆಯ್ಯುವರ್ಮನು ಕಿಸುಕಾಡು-೭೦, ಕೋಗಳಿ-೫೦೦ನ್ನು ಆಳುತ್ತಿದ್ದನೆಂದು ಬರುತ್ತದೆ.[೩೮] ಇದರಲ್ಲಿ ಇವನನ್ನು ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಸತ್ಯಾಶ್ರಯ ಕುಳತಿಳಕ, ಚಾಲುಕ್ಯಾಭರಣ ಶ್ರೀ ಮದ್‌ಹವಮಲ್ಲದೇವ ಎಂಬ ಬಿರುದುಗಳಿಂದ ಹೊಗಳಿದೆ. ಇದಕ್ಕೂ ಮೊದಲು ಕುಡುತಿನಿ ಶಾಸನದಲ್ಲಿ[೩೯] ಇವನ ಉಲ್ಲೇಖ ಬರುತ್ತದೆ. ಬಾಗಳಿಯ ಇನ್ನೊಂದು ಶಾಸನ[೪೦], ಬಾಗಳಿ ಎಂಬ ಊರಿನ ತಂಬುಲಿಗರು (ವೀಳ್ಯದೆಲೆ ಮಾರುವವರು) ತೆರಿಗೆ ವಿನಾಯತಿಯಲ್ಲಿ ಒಂದು (ಹೇರಿಗೆ)ಸೇರಿಗೆ ಎರಡು ಪಣ ಎಲೆಯನ್ನು ತೆರಿಗೆ ಕೊಡುವುದು ನ್ಯಾಯವಾಗಿತ್ತು. ಈ ಪದ್ಧತಿ ರಾಷ್ಟ್ರಕೂಟರ ಕಾಲದಿಂದಲೂ ಒಂದೇ ರೀತಿಯಾಗಿತ್ತು. ಆದರೆ ಇದನ್ನು (ತೈಲಪ) ತನ್ನ ಆಳ್ವಿಕೆಯಲ್ಲಿ ಹೆಚ್ಚಿಸಿದನು. ಈ ತೆರಿಗೆಯನ್ನು ಸಹಿಸದೆ ಮಲ್ಲಯ್ಯಸೆಟ್ಟಿ, ಅಣ್ಣಮ್ಮ ಮೊದಲಾದ ಪ್ರಮುಖರು ಹೋಗಿ ಚಕ್ರವರ್ತಿ ತೈಲಪನಿಗೆ ಸಾಷ್ಟಾಂಗವೆರಗಿ ಹೆಚ್ಚಾದ ಸುಂಕವನ್ನು ಕಡಿಮೆಗೊಳಿಸಲು ಕೇಳಿಕೊಳ್ಳುತ್ತಾರೆ. ಆಗ ತೈಲಪ ರಾಷ್ಟ್ರಕೂಟರ ದೊರೆ ಕನ್ನರದೇವನು ಮಾಡಿದ ಪದ್ಧತಿಯನ್ನು ಜಾರಿಗೆ ತಂದನು. 'ಕನ್ನರದೇವನ ಮರ್ಯ್ಯಾದೆಯಲ್ಲಾದ ಸುಂಕದ ಮರ್ಯ್ಯಾದೆಯಂ ತಪ್ಪದೆ ನೆಡೆಯಿಮೆನ್ದು' ಹೇಳಿ ಪ್ರಜೆಗಳನ್ನು ಸಂತೈಸಿ ಕಳುಹಿಸಿದನು. ಇದರಿಂದ ಇವನ ಆಳ್ವಿಕೆ ಪ್ರಜೆಗಳಿಗೂ ಹಿತವಾಗಿತ್ತೆಂದು ಕಂಡುಬರುತ್ತದೆ.

ಎರಡನೆಯ-ಜಗದೇಕಮಲ್ಲ(ಜಯಸಿಂಹ)(೧೦೧೫-೪೪)

ಐದನೆಯ ವಿಕ್ರಮಾದಿತ್ಯನ ಆಳ್ವಿಕೆ ನಂತರ ಇವನ ಕಿರಿಯ ಸೋದರ ಇಮ್ಮಡಿ ಅಯ್ಯಣನ ನಂತರ ಇವನ ತಮ್ಮನಾದ ಇಮ್ಮಡಿ ಜಯಸಿಂಹ ಚಾಲುಕ್ಯರ ದೊರೆಯಾದನು, ಇವನೇ ಜಗದೇಕಮಲ್ಲ. ಇಲ್ಲಿಯ ಶಾಸನಗಳಲ್ಲಿ ಇವನ ಉಲ್ಲೇಖ ಕಂಡುಬರುತ್ತದೆ. ಈತನ ಜಯಸಿಂಹ, ಜಗದೇಕಮಲ್ಲ, ತ್ರೈಲೋಕ್ಯಮಲ್ಲ, ಮಲ್ಲಿಕಾಯೋದ, ವಿಕ್ರಮಸಿಂಹ ಎಂಬ ಬಿರುದುಗಳನ್ನು ಪಡೆದಿದ್ದನು. ಈ ಶಾಸನ ಗಳಲ್ಲಿ ಈತನ ಉಲ್ಲೇಖವಿರುವ ಶಾಸನಗಳು

ಬಾಗಳಿ ಶಾಸನ ಸಂಖ್ಯೆ ೯೭(S.II.IX N-೮೦)
ಬಾಗಳಿ ಶಾಸನ ಸಂಖ್ಯೆ ೯೯ (SII. IX N-೮೯)
ಬಾಗಳಿ ಶಾಸನ ಸಂಖ್ಯೆ ೧೩೬ (SII IX N-೮೧)

ಕ್ರಿ.ಶ.೧೦೧೮ರಲ್ಲಿ ಜಗದೇಕಮಲ್ಲ ಜಯಸಿಂಗದೇವನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಈ ಶಾಸನದಲ್ಲಿ ಈತನನ್ನು 'ಸಮಸ್ತಭುವನಾಶ್ರಯ, ಪ್ರಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ ಸತ್ಯಾಶ್ರಯ ಕುಳತಿಳಕ, ಚಾಳುಕ್ಯಾಭರಣ ಮಲ್ಲಿಕಾಮೋದ, ಶ್ರೀಮದ್ ಜಗದೇಕಮಲ್ಲ ಜಯಸಿಂಘ ದೇವ' ಎಂದು ಉಲ್ಲೇಖಿಸಿದೆ. ಇವನ ಸಾಮಂತ ಜಗದೇಕಮಲ್ಲ ನೊಳಂಬ ಉದಯಾದಿತ್ಯನಿದ್ದ

[illegible]

ನೆಂದು ಕಂಡುಬರುತ್ತದೆ. ಈತನು ಜಯಸಿಂಹನ ಪಾದಪದ್ಮೋಪಜೀವಿಯಾಗಿ 'ಕಂಪಲಿಯ ನೆಲೆವೀಡಿನಿಂದ, ಗಂಗವಾಡಿ-೯೬೦೦೦, ಕದಂಬಳಿಕೆ-೧೦೦೦, ಕೋಗಳಿ-೫೦೦, ಮಾಸವಾಡಿ-೧೪೦ ರೊಳಗಿನ ಐದು ಗ್ರಾಮಗಳನ್ನು ಮತ್ತು ಬಲ್ಲಕುಂದೆ-೩೦೦, ಕುದಿಹರವಿ-೭೦, ಎಡೆದೊರೆ-೨೦೦೦ಗಳನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ.[೪೧] ಈತನ ಮಗಳಾದ ರೇವಳದೇವಿಯನ್ನು ಜಯಸಿಂಹನು ವಿವಾಹವಾಗಿದ್ದರಿಂದ ಹೆಚ್ಚಿನ ಜವಬ್ದಾರಿಯನ್ನು ಇವನೆ ನಿರ್ವಹಿಸುತ್ತಿದ್ದನು.

ಇದೇ ವಿವರವನ್ನು ಹೇಳುವ ಇನ್ನೊಂದು ಶಾಸನ ಇಲ್ಲಿ ಕಂಡುಬರುತ್ತದೆ.[೪೨] ಇನ್ನೊಂದು ಶಾಸನದಲ್ಲಿ ಚಾಲುಕ್ಯ ಜಗದೇಕಮಲ್ಲ ಇಮ್ಮಡಿ ಜಯಸಿಂಹನ ಆಳ್ವಿಕೆಯಲ್ಲಿ ಬಾಗಳಿ ಐವತ್ತು ಮಹಾಜನರು ಕಲಿದೇವರ ದೇವಾಲಯದಲ್ಲಿ ನೆರೆಯುತ್ತಿದ್ದರೆಂದು ತಿಳಿದುಬರುತ್ತದೆ.[೪೩] ಈತನ ಇನ್ನೂ ಕೆಲವು ಶಾಸನಗಳು ಸೋಗಿ, ಹರಪನಹಳ್ಳಿ, ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತದೆ. ಬಾಗಳಿಯ ಇನ್ನೊಂದು ಶಾಸನದಲ್ಲಿ ಈತನ ಹೆಸರಿದೆ, ಕಾಲವಿಲ್ಲ.[೪೪]

ಒಂದನೆಯ ಸೋಮೇಶ್ವರನ ಕೆಲವು ಶಾಸನಗಳು ಕಂಡುಬರುತ್ತವೆ. ಸಿಂದವಾಡಿ-೧೦೦೦ ವಿಭಾಗವನ್ನು ಈತನು ಆಳುತ್ತಿರುವಾಗ ನೊಳಂಬ ಘಟ್ಟಿದೇವ, ವೀರನೊಳಂಬಪಲ್ಲವಪೆರ್ಮಾಡಿ ಇವರು ಆಳುತ್ತಿದ್ದರೆಂದು ಕೋಗಳಿ ಶಾಸನದಲ್ಲಿ ಉಲ್ಲೇಖವಾಗಿದೆ.[೪೫] ಈ ವಂಶದವನೇ ಆದ ಇನ್ನೊಬ್ಬ ಅರಸ ಸಿಂಘದೇವನು ಒಂದನೆಯ ಸೋಮೇಶ್ವರನ ಪಾದಪದ್ಮೋಪಜೀವಿಯಾಗಿ, ಬಲ್ಲಕುಂದೆ-೩೦೦, ಸಿಂದವಾಡಿ-೧೦೦೦ ಆಳುತ್ತಿದ್ದನೆಂದು ಚಿರಸ್ತಹಳ್ಳಿಯ ಶಾಸನದಿಂದ ತಿಳಿದುಬರುತ್ತದೆ.[೪೬] ಬಾಗಳಿಯ ಶಾಸನದಲ್ಲಿ ತ್ರೈಲೋಕ್ಯಮಲ್ಲ ಎಂದು ಉಲ್ಲೇಖಿಸಿದ್ದು, ಆಳ್ವಿಕೆಯನ್ನು ಸೂಚಿಸುತ್ತದೆ.[೪೭] ಆದರೆ ಶಾಸನ ತುಂಬಾ ತ್ರುಟಿತವಾಗಿರುವುದರಿಂದ ಸರಿಯಾದ ಮಾಹಿತಿ ಒದಗಿಬರುವುದಿಲ್ಲ. ಇನ್ನೂ ಈತನ ಶಾಸನಗಳು ಹರಪನಹಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಂಡುಬರುತ್ತವೆ.

ಆರನೆಯ ವಿಕ್ರಮಾದಿತ್ಯ

ಬಾಗಳಿಯ ಶಾಸನಗಳಲ್ಲಿ ಬಹುಪಾಲು ಶಾಸನಗಳು ಈತನನ್ನು ಉಲ್ಲೇಖಿಸುತ್ತವೆ. ೧೦೭೬ರಲ್ಲಿ ಆಳ್ವಿಕೆ ಮಾಡಿದ ಇವನು ೧೧೨೬ರಲ್ಲಿ ಕೊನೆಗೊಳ್ಳುತ್ತಾನೆ. ಇವನು 'ಪೆರ್ಮಾಡಿದೇವ', 'ತ್ರಿಭುವನಮಲ್ಲ' ಎಂಬ ಬಿರುದುಗಳನ್ನು ಧರಿಸಿದ್ದನು. ಇಲ್ಲಿಯ ಶಾಸನಗಳಲ್ಲಿ ಹೆಚ್ಚಾಗಿ 'ತ್ರಿಭುವನಮಲ್ಲ' ಎಂದೇ ಬರುತ್ತದೆ.

ಹಿರೇಹಡಗಲಿಯ ಒಂದು ಶಾಸನದಲ್ಲಿ ಸೋಮೇಶ್ವರ ಚಕ್ರವರ್ತಿಯಾಗಿ ಆಳುತ್ತಿರುವಾಗ ಇವನ ಪುತ್ರ ಆರನೆಯ ವಿಕ್ರಮಾದಿತ್ಯನು ಕುಮಾರವೃತ್ತಿಯಿಂದ ಗಂಗವಾಡಿ-೯೬೦೦೦ ಬನವಾಸಿ-೧೨೦೦೦ ಮತ್ತು ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ.[೪೮] ಇವನು ಕಲ್ಯಾಣಚಾಲುಕ್ಯರ

ಚಕ್ರವರ್ತಿಗಳಲ್ಲಿ ಶ್ರೇಷ್ಠ ಚಕ್ರವರ್ತಿಯಾಗಿದ್ದನು. ಕಲ್ಯಾಣವನ್ನು ಹೆಚ್ಚು ಕಾಲದವರೆಗೂ ಆಳಿದ ಅರಸ. ಬಾಗಳಿಯಲ್ಲದೇ ಬಳ್ಳಾರಿ ಜಿಲ್ಲೆಯ ಸುತ್ತಮುತ್ತಲೂ ಈತನ ಶಾಸನಗಳು ಸಿಕ್ಕಿವೆ. ಇವನು ಚಾಲುಕ್ಯ 'ವಿಕ್ರಮಶಕೆ' ಪ್ರಾರಂಭ ಮಾಡಿದನು. 'ನಿತ್ಯಭೂಮಿಧಾನಲೋಲ'ನೆಂಬ ಖ್ಯಾತಿಗಳಿಸಿಕೊಂಡಿದ್ದ ವಿಕ್ರಮಾದಿತ್ಯ ಬಳ್ಳಾರಿ ಜಿಲ್ಲೆಯ ಅನೇಕ ದೇವಾಲಯಗಳಿಗೆ ದತ್ತಿದಾನ ನೀಡಿದ್ದಾನೆ. ನಿಷ್ಠುರವಾದ ವ್ಯಕ್ತಿತ್ವ ಹೊಂದಿದ್ದ, ಇವನು ಪ್ರಭುವರ್ಗದವರು ತಪ್ಪು ಮಾಡಿದರೆ ಅವರನ್ನು ಅಧಿಕಾರದಿಂದ ಕಿತ್ತೊಗೆಯುತ್ತಿದ್ದನು. ಅವರ ವಂಶದವರಿಗೂ ಅಧಿಕಾರ ಸಿಗದಂತೆ ನಿಯಮಗಳನ್ನು ರೂಪಿಸುತ್ತಿದ್ದನು.

ಈ ಶಾಸನದಲ್ಲಿ ಈತನನ್ನು ಸಮಸ್ತಭುವನಾಶ್ರಯ, ಶ್ರೀಪೃಥ್ವೀವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ಪರಮಭಟ್ಟಾರಕ, ಸತ್ಯಾಶ್ರಯ ಕುಳತಿಳಕ ಚಾಲುಕ್ಯಾಭರಣ, ಶ್ರೀಮದ್ ತ್ರಿಭುವನಮಲ್ಲದೇವನು ಕಲ್ಯಾಣದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಇವನ ಸಾಮಂತ ಪಾಂಡ್ಯದೇವನು ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದನೆಂದು ಬರುತ್ತದೆ.[೪೯] ಅಂದರೆ ಇವನ ಆಳ್ವಿಕೆಯಲ್ಲಿ ಹೆಚ್ಚಾಗಿ ಸಾಮಂತರು ಕಾಣಿಸಿಕೊಳ್ಳುತ್ತಾರೆ. ಹೆಚ್ಚಿನ ಶಾಸನಗಳಲ್ಲಿ ಸಾಮಂತರೇ ಆಳಿದುದ್ದನ್ನು ಉಲ್ಲೇಖಿಸುತ್ತವೆ. ಪ್ರಮುಖ ದೊರೆಯಾಗಿ ವಿಕ್ರಮಾದಿತ್ಯನನ್ನು ಹೊಗಳಿವೆ. ಈ ಶಾಸನದಲ್ಲಿ ಚಾಲುಕ್ಯ ಅರಸ ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ದಂಡನಾಯಕ ಮುದ್ದರಸ ದಾನ ನೀಡಿದನೆಂದು ಬರುತ್ತದೆ.[೫೦] ಇದು ಈತನ ಆಳ್ವಿಕೆಯಲ್ಲಿ ನಾಗಕಲ್ಲಯ್ಯ ದಾನ ನೀಡಿದನೆಂದು ಉಲ್ಲೇಖವಿದೆ.[೫೧] ಈ ಶಾಸನದಲ್ಲಿ ಬಿರುದಾವಳಿಗಳಿಂದ ಹೊಗಳಿದ್ದು, ಇವನ ಆಳ್ವಿಕೆಯಲ್ಲಿ, ಇವನ ದಂಡನಾಯಕ ಬಮ್ಮದೇವರಸು ದಾನ ನೀಡಿದನೆಂದು ಉಲ್ಲೇಖ ಬರುತ್ತದೆ.[೫೨] ಈ ಶಾಸನದಲ್ಲಿ ಈತನ ಆಳ್ವಿಕೆಯಿದ್ದು ಸಾಮಂತ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿ-೩೨೦೦೦ವನ್ನು ನೋಡಿಕೊಳ್ಳುತ್ತಿದ್ದನೆಂದು ಕಂಡುಬರುತ್ತದೆ. ಇದರಲ್ಲಿ ಚಾಲುಕ್ಯ ತ್ರಿಭುವನಮಲ್ಲ ಎಂದಿದ್ದು, ಇವನ ಸಾಮಂತನನ್ನು ಹೆಚ್ಚು ಹೊಗಳಿದೆ.[೫೩] ಈ ಶಾಸನದಲ್ಲಿ ಚಾಲುಕ್ಯರ ತ್ರಿಭುವನಮಲ್ಲದೇವನ ಕಾಲದಲ್ಲಿ ಇವನ ಸಾಮಂತ ತ್ರಿಭುವನಮಲ್ಲಪಾಂಡ್ಯನು ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದನೆಂದು ಉಲ್ಲೇಖ ಬರುತ್ತದೆ.[೫೪] ಈ ಶಾಸನದಲ್ಲಿಯೂ ಸಹ ಪಾಂಡ್ಯದೇವನು ಆಳುತ್ತಿದ್ದನೆಂದು ತಿಳಿದುಬಂದಿದೆ. ಆದರೆ ವಿಕ್ರಮಾದಿತ್ಯನನ್ನು 'ಶ್ರೀಮದ್‌ತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಬಿವೃದ್ಧಿ ಪ್ರವರ್ದ್ಧಮಾನವಚಂದ್ರಾರ್ಕತಾರಂಬರಂ ಸಲುತ್ತಮಿರೆ' ಎಂದು ಉಲ್ಲೇಖಿಸುತ್ತದೆ.[೫೫] ಇದುಸಹಇದೆವಿವರವನ್ನು ಹೇಳುತ್ತದೆ.[೫೬] ಇದರಲ್ಲಿ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಪಾಂಡ್ಯನು ನೊಳಂಬವಾಡಿಯನ್ನು ನೋಡಿಕೊಳ್ಳುತ್ತಿದ್ದನು ಎಂಬ ವಿವರಣೆಯನ್ನು ತಿಳಿಸುತ್ತದೆ.[೫೭] ಈ ಶಾಸನದಲ್ಲಿ ಕಾಲ ೧೧೨೬ ಎಂದಿದ್ದು ಯಾವ ಅರಸನ ಬಗ್ಗೆಯೂ ಪ್ರಸ್ತಾಪಬರುವುದಿಲ್ಲ. ಕಾಲದ

ಉಲ್ಲೇಖದಿಂದ ಇದನ್ನು ಇವನ ಶಾಸನವೆಂದು ಗುರುತಿಸಬಹುದು. ಜೊತೆಗೆ ಶಾಸನವೂ ತ್ರುಟಿತ ವಾಗಿದೆ.[೫೮] ಇಲ್ಲಿ ಬರುವ ಎಲ್ಲಾ ಶಾಸನಗಳಲ್ಲಿ 'ಪಾಂಡ್ಯ' ವಂಶದವರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡು ಅವರಿಗೆ ಅಧಿಕಾರ ವಹಿಸಿಕೊಟ್ಟಿರುವುದರಿಂದ, ಪಾಂಡ್ಯರು ನೊಳಂಬವಾಡಿ ಆಳುತ್ತಾ ಉಚ್ಚಂಗಿದುರ್ಗವನ್ನು ತಮ್ಮರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ಹೀಗೆ ಇಲ್ಲಿಯ ಶಾಸನಗಳಲ್ಲಿ ಇವನ ಆಡಳಿತ ಮಾತ್ರವನ್ನು ಉಲ್ಲೇಖಿಸಿವೆ. ಇವನ ಆಳ್ವಿಕೆಯಲ್ಲಿ ನಿಷ್ಠೆಯಿತ್ತು ಎನ್ನುವುದಕ್ಕೆ ಕುರುವತ್ತಿ ಒಂದು ಶಾಸನದಲ್ಲಿ ಗಂಡರಾದಿತ್ಯನು ಹೊಳಲ ಅಗ್ರಹಾರದ ಮಹಾಜನಗಳು(ಈಗಿನ ಹೂವಿನ ಹಡಗಲಿ ತಾಲೂಕಿನ ಹೊಳಲು ಗ್ರಾಮ) ಮನ್ನೆಯ ಬೊಪ್ಪಯನು, ಹೊಳಲನ್ನು ಸೆರೆಹಿಡಿದು, ಗ್ರಾಮವನ್ನು ಸುಲಿಗೆ ಮಾಡಿ ಬ್ರಾಹ್ಮಣರನ್ನು ಕೊಂದನೆಂದು ವಿಕ್ರಮಾದಿತ್ಯನಿಗೆ ದೂರು ನೀಡಿದಾಗ, ಅರಸನು ಅವನನ್ನು ದಂಡಿಸಿ, ಅವನು ಮತ್ತು ಅವನ ಸಂತತಿಯವರು, ಹೊಳಲಿನ ಮನ್ನೆಯನ್ನು ಪಡೆಯದಂತೆ ಆಜ್ಞಾಪಿಸಿದನು. ಆ ಪ್ರಕಾರ ಒಪ್ಪಿ, ಬೆಣ್ಣೆಯೂರು ೧೨, ನೀಲಗುಂದ, ಎರಡು ಹಡಂಗಿಲೆಗಳು(ಅಂದರೆ ಹಿರೇಹಡಗಲಿ ಮತ್ತು ಹೂವಿನ ಹಡಗಲಿ) ಮಾಗಳ, ಬಿದರಹಳ್ಳಿ, ಹಹನೂರು(ಇದು ಪ್ರಾಯಶಃ ಈಗಿನ ಹಗರನೂರು ಆಗಿರಬೇಕು), ಹೊನ್ನವಳ್ಳಿ, ಕುರುವತ್ತಿ ಮತ್ತು ಬಾಳ್ಗುಳಿಯನ್ನು ಒಳಗೊಂಡಂತೆ ೩೨೦೦೦ರ ಜನರ ಸಮ್ಮುಖದಲ್ಲಿ ತ್ರಿಪುರಾಂತಕ ದೇವರ ಬಳಿ ಬೊಪ್ಪಯ್ಯನು ನೀರನ್ನು ಕುಡಿದು ನಂತರ ಈ ಶಾಸನವನ್ನು(ಕಲ್ಲನ್ನು) ನಿಲ್ಲಿಸಿದನು. ಇದು ಅವನ ಆಡಳಿತ ಮತ್ತು ವ್ಯಕ್ತಿತ್ವಕ್ಕೆ ಮೆರಗು ನೀಡಿದ ಶಾಸನವಾಗಿದೆ.[೫೯] ಇಲ್ಲಿಯ ಶಾಸನಗಳಲ್ಲಿ ಇವನ ಶಾಸನಗಳೆ ಅಧಿಕ ಸಂಖ್ಯೆಯಲ್ಲಿರುವುದರಿಂದ ಅವುಗಳನ್ನು ಹೀಗೆ ಗುರುತಿಸಲಾಗಿದೆ.

ಬಾಗಳಿ ಶಾಸನ ಸಂಖ್ಯೆ ೧೦೦ (S.I.I IX N-೧೪೫)

,, ೧೨೨ ,, ೧೪೪

,, ೧೦೨ ,, ೧೬೮

,, ೧೦೩ ,, ೧೭೩

,, ೧೦೪ ,, ೧೭೮

,, ೧೮೦ ,,

,, ೧೨೭ ,, ೧೮೯

,, ೧೦೬ ,, ೧೯೧

,, ೧೦೭ ,, ೧೯೨

,, ೧೭೯ ,, ೧೯೮

,, ೧೦೮ ,, ೨೦೧

,, ೧೧೦ ,, ೨೦೩

,, ೧೧೨ ,, ೨೧೧

ಈ ಪ್ರದೇಶದಲ್ಲಿ ಸಿಕ್ಕಿರುವಷ್ಟು ಶಾಸನಗಳು ಪ್ರಾಯಶಃ ಬೇರೆಲ್ಲೂ ಸಿಗುವುದಿಲ್ಲ ಎನ್ನಬಹುದು. ಏಕೆಂದರೆ ಒಬ್ಬ ಅರಸನ ಶಾಸನಗಳು ಒಂದೇ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಸಿಗುವುದು ವಿರಳ. ಹೆಚ್ಚಿನ ವಿವರಕ್ಕಾಗಿ ಈ ಪಟ್ಟಿಯನ್ನು ಕೊಡಲಾಗಿದೆ.

ಎರಡನೆಯ ಜಗದೇಕಮಲ್ಲ

ಈತನು ಮೂರನೆಯ ಸೋಮೇಶ್ವರನ ಮಗ ಹಾಗೂ ಉತ್ತರಾಧಿಕಾರಿಯಾಗಿದ್ದನು. ಇವನು 'ಪೆರ್ಮ'. 'ಪೆರ್ಮಾಡಿ', 'ಪೆರ್ಮಾಡಿದೇವ' ಎಂಬ ಬಿರುದುಗಳನ್ನು ಹೊಂದಿದ್ದು, ಕೆಲವು ವರ್ಷಗಳ ನಂತರ 'ಪ್ರತಾಪಚಕ್ರವರ್ತಿ' ಎಂಬ ಮತ್ತೊಂದು ಬಿರುದನ್ನು ಅವನ ಹೆಸರಿಗೆ ಸೇರಿಸಲಾಯಿತು. ಇವನು ಅರಸನಾಗುತ್ತಿದ್ದಂತೆಯೇ ಹೊಯ್ಸಳರು ದಂಗೆ ಎದ್ದುದನ್ನು ಸಹಿಸದೆ ಅವರನ್ನು ಸೆರೆಹಿಡಿದನು. ಇಲ್ಲಿ ಒಂದು ಶಾಸನದಲ್ಲಿ ಇವನ ಉಲ್ಲೇಖ ಬರುತ್ತದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರವೇನೂ ದೊರಕುವುದಿಲ್ಲ. ಇದರಲ್ಲಿ 'ಶ್ರೀಮದ್‌ಚ್ಚಾಳುಕ್ಯ ಪ್ರತಾಪಚಕ್ರವರ್ತಿ ಜಗದೇಕಮಲ್ಲ' ಎಂದು ಬಂದಿದೆ. ಈತನ ಮಾಂಡಳಿಕರು ಕಾಳಿಮಯ್ಯನ ಮಗ ಸೋಮಣ್ಣರಾಗಿದ್ದನೆಂದು ತಿಳಿದುಬರುತ್ತದೆ.[೬೦] ಕಾಳಮಯ್ಯನು ಹಿರಿಯ ದಂಡನಾಯಕನಾಗಿ ಜಗದೇಕಮಲ್ಲನ ಸಾಮ್ರಾಜ್ಯವನ್ನು ಸಂರಕ್ಷಿಸಿದನೆಂದು ಗೊತ್ತಾಗುತ್ತದೆ. ಇನ್ನೊಂದು ಶಾಸನದಲ್ಲಿ ಈತನ ಬಿರುದಾವಳಿಗಳನ್ನೇ ಹೊಗಳಿದೆ. ಆದರೆ ಈ ಶಾಸನದಲ್ಲಿ ಇವನ ಹೆಸರು ಸ್ಪಷ್ಟವಾಗಿಲ್ಲ. ಈತನ ಬಿರುದುಗಳಿಂದ ಈ ಶಾಸನವನ್ನು ಎರಡನೆಯ ಜಗದೇಕ ಮಲ್ಲನ ಶಾಸನ ಎಂದು ಗುರುತಿಸಬಹುದು.[೬೧] ಈ ಹೊತ್ತಿಗಾಗಲೇ ಕಲಚುರಿ ವಂಶದ ಅರಸರು ಆಳ್ವಿಕೆ ಪ್ರಾರಂಭಿಸುವ ಸಂಚು ಹೂಡುತ್ತಿದ್ದರು.

ಕಲ್ಯಾಣಿ ಚಾಲುಕ್ಯರ ಒಂದು ಸಮಸ್ಯೆ ಎಂದರೆ ಎಲ್ಲಾ ಅರಸರು ಒಂದೇ ಬಿರುದಾವಳಿಗಳನ್ನು ಹೊಂದಿರುವುದರಿಂದ, ಕೆಲವೊಂದು ಸಾರಿ ಈತನೇ ಎಂದು ಗೆರೆ ಕೊರೆದು ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಕಾಲದ ಮಾಹಿತಿಯಿಂದ ತಿಳಿಯಬಹುದು. ಬಿರುದುಗಳು ಬೇರೆ ಅರ್ಥಗಳಿಂದ ಕೂಡಿದ್ದರೆ, ಅಲ್ಲಿಯೂ ಸಹ ತಿಳಿಯಬಹುದು. ಈ ಶಾಸನದಲ್ಲಿ ಹೆಸರನ್ನು ಸೂಚಿಸಿಲ್ಲ. ಕಾಲವನ್ನು ತಿಳಿಸುವುದಿಲ್ಲ. ಆದರೆ ಬಿರುದುಗಳಿಂದ ಗುರುತಿಸಬಹುದು. ೨ನೇ ಜಗದೇಕಮಲ್ಲನ ಬಿರುದುಗಳಿಂದ ಗುರುತಿಸಲಾಗಿದೆ. ಬರಿ ಚಾಳುಕ್ಯ ಜಗದೇಕಮಲ್ಲ ಎಂದಿದೆ. ಇವನ ಬಿರುದುಗಳು 'ಪ್ರತಾಪಚಕ್ರವರ್ತಿ' ಎಂದಿರುವುದರಿಂದ ಇವನೇ ಎನ್ನಬಹುದು. ಆದರೆ ಇಲ್ಲಿ ಕಾಲದ ವಿವರ ಸರಿಯಾಗಿಲ್ಲ. ಏಕೆಂದರೆ ಇವನ ನಂತರ ಇವನ ತಮ್ಮನಾದ ಮೂರನೇ ತೈಲನು ಅಧಿಕಾರಕ್ಕೆ ಬರುತ್ತಾನೆ. ಇವನ ಕಾಲ ೧೧೪೯-೬೨ ಎಂದಿದೆ. ಇಲ್ಲಿ ಜಗದೇಕ ಮಲ್ಲನನ್ನು ಉಲ್ಲೇಖಿಸಿದ್ದು, ಕಾಲ ೧೧೬೦ ಎಂದಿದೆ. ಆದರೆ ಬಿರುದು ಜಗದೇಕಮಲ್ಲನದೇ ಆಗಿರುವುದರಿಂದ 'ಮಲ್ಲ'ನನ್ನು ಗುರುತಿಸಬೇಕಾಗುತ್ತದೆ.

೯. ಹೊಯ್ಸಳರು

ಚಾಲುಕ್ಯರ ಪತನದನಂತರ ಅಧಿಕಾರ ಗುರುತಿಸಿಕೊಂಡವರು ಹೊಯ್ಸಳರು. ಇವರು ಸ್ವಲ್ಪ ಕಾಲದವರೆಗೆ ಚಾಲುಕ್ಯರ ಮಾಂಡಲೀಕರಾಗಿದ್ದು, ಮೂರು ಶತಮಾನಗಳವರೆಗೂ ದೀರ್ಘಕಾಲ ಆಳಿದರು. ಚಾಲುಕ್ಯರ ಯುಗದ ಮಧ್ಯಕಾಲೀನ ಕಾಲದಲ್ಲಿ ಹೊಯ್ಸಳರು ಈ ಪ್ರಾಂತ್ಯವನ್ನಾಳಿದರೆಂದು ಇತಿಹಾಸದಿಂದ ಕಂಡುಬರುತ್ತದೆ. ವೀರಬಲ್ಲಾಳನೆಂದು ಕರೆಯಲ್ಪಟ್ಟ ಇಮ್ಮಡಿ ಬಲ್ಲಾಳನು ಹೊಯ್ಸಳರ ಸಾಮಂತಿಕೆಯನ್ನು ತಿರಸ್ಕರಿಸಿ ಸ್ವತಂತ್ರನಾದ. ಇವನು ತನ್ನ ಆಳ್ವಿಕೆಯಲ್ಲಿ ಬಾಗಳಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಮಾಡಿದನೆಂದು ಇಲ್ಲಿಯ ಶಾಸನಗಳಿಂದ ತಿಳಿಯುತ್ತದೆ. ಇವನ ಕಾಲಕ್ಕೆ ಅಂದರೆ ೧೧೮೯ ಸುಮಾರಿಗೆ ಬಳ್ಳಾರಿ ಜಿಲ್ಲೆ ಸಂಪೂರ್ಣವಾಗಿ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ಇದರಲ್ಲಿ ಉಚ್ಚಂಗಿದುರ್ಗವನ್ನು ವಶಪಡಿಸಿಕೊಂಡುದ್ದುದು ಈತನ ಸಾಹಸಗಳಲ್ಲೊಂದು ಎಂದು ಹೇಳಬಹುದು. ೧೧೯೩ ನವೆಂಬರ್ ೧೦ರ ಬಾಗಳಿ ಶಾಸನದಲ್ಲಿ[೬೨] ವೀರಬಲ್ಲಾಳ ದೇವರು ಶ್ರೀಮತು ಹರಿಶ್ಚಂದ್ರದತ್ತಿಯಗ್ರಹಾರ ಬಾಳ್ಗುಳಿಯ ನೆಲೆವೀಡಿನೊಳು ಆಳುತ್ತಿದ್ದನೆಂದು ಹೇಳಲಾಗಿದೆ. ವೀರಬಲ್ಲಾಳನು ಬಾಗಳಿಯ ಸ್ವಯಂಭು ಕಲಿದೇವರ ಅಂಗರಂಗಭೋಗ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಅಲ್ಲಿಯ ಬ್ರಾಹ್ಮಣರ ಭೋಜನಕ್ಕೆ, ನಂದಿಬೇಹೂರ ಸಮಚತುರಾಘಾಟ ಸೀಮೆಯೊಳಗಿನ ಭೂಮಿಯನ್ನು ದಾನಬಿಡುತ್ತಾನೆ. ಅಲ್ಲದೆ ಬಾಗಳಿಯ ನೆಲೆವೀಡಿನಲ್ಲಿರುವಾಗ ಈತನು ಕುರುವತ್ತಿಯ ಶ್ರೀಮದ್‌ದಾಹವಮಲ್ಲೇಶ್ವರ ದೇವರ ದೇವಾಲಯದ ಖಂಡಸ್ಫಟಿತ ಜೀರ್ಣೋದ್ಧಾರಕ್ಕೆ ಅಂಗರಂಗ ಭೋಗಗಳಿಗೆ ಬೆಂಣ್ಣೆವೂರು ‘೧೨’ರಲ್ಲಿಯ ಮಕುರಬ್ಬೆಯನ್ನು ಬಿಡುತ್ತಾನೆ. ಸಂಡೂರಿನ ಕುಮಾರಸ್ವಾಮಿ ದೇವಾಲಯದಿಂದ ಹತ್ತಿರವಿರುವ ಮಧುವನದಲ್ಲಿ ಕೆಲವು ಕಾಲವಿದ್ದು, ಆಳುತ್ತಿದ್ದನೆಂದು ತಿಳಿದುಬರುತ್ತದೆ.[೬೩] ಈ ದೇವಾಲಯಕ್ಕೆ ಹಿಂದೆ ರಾಷ್ಟ್ರಕೂಟ ದೊರೆ ಕೃಷ್ಣನು ಬಿಟ್ಟಿದ್ದ ‘ಪ್ರೀತತಟಾಕ’ (ತಟಾಕ ಎಂದರೆ ಕೆರೆ) ಎಂಬ ಗ್ರಾಮವನ್ನು ಪುನರ್ ದತ್ತಿ ಮಾಡಿಕೊಡುತ್ತಾನೆ.[೬೪] (ಈ ಗ್ರಾಮವನ್ನು ಈಗ ಕೆರೆಪ್ಪಳಿ>ಕೆರೆನಹಳ್ಳಿ ಎಂದು ಕರೆಯಲಾಗಿದೆ) ಇದನ್ನು ಅರಸನಿಗೆ ಸಲ್ಲುತ್ತಿದ್ದ, ತೆರಿಗೆ, ಆಯ, ಮೊದಲಾದವುಗಳನ್ನು ಕುಮಾರಸ್ವಾಮಿ ದೇವಾಲಯಕ್ಕೆ ಸಲ್ಲುವಂತೆ ಆ ಗ್ರಾಮವನ್ನು ದತ್ತಿಯಾಗಿ ನೀಡುವಂತೆ ಅನುಕೂಲ ಮಾಡಿಕೊಡುತ್ತಾನೆ.

ಇವನ ರಾಣಿಯಲ್ಲೊಬ್ಬಳಾದ ಪದುಮಲದೇವಿ, ಹಿರೇಹಡಗಲಿಯಲ್ಲಿದ್ದುದು ತಿಳಿದುಬರುತ್ತದೆ.[೬೫] ಇದರಿಂದ ಈತನು ಈ ಭಾಗಗಳಲ್ಲಿ ಹೆಚ್ಚಾಗಿ ರಾಜ್ಯಭಾರ ಮಾಡಿದನೆಂದು ಗೊತ್ತಾಗುವುದು. ದೇವಗಿರಿಯ ಯಾದವರೊಂದಿಗೆ(ಸೇವುಣರು) ಯುದ್ಧಮಾಡಿ ವಿಜಯ ಸಾಧಿಸಿದನೆಂದು ನೀಲಗುಂದದ ಶಾಸನದಲ್ಲಿ ತಿಳಿಸಲಾಗಿದೆ.

ವೀರನರಸಿಂಹ ಎರಡನೆಯ

ಕೊಟ್ಟೂರಿನ ಶಾಸನದಲ್ಲಿ ವೀರನರಸಿಂಹ ಆಳುತ್ತಿದ್ದನೆಂದು ಕಂಡುಬರುತ್ತದೆ.[೬೬] (ಪ್ರಾಯಶಃ ತಂದೆಯ ನಂತರ ಮಗನು ಬಂದಿರಬೇಕು) ರಾಜವಂಶದಲ್ಲಿ ತಂದೆಯ ನಂತರ ಮಕ್ಕಳು ಅಧಿಕಾರಕ್ಕೆ ಬರುವುದು ಸಾಮಾನ್ಯವಾದರೂ, ಕಡಿಮೆ ಪ್ರಮಾಣದಲ್ಲಿ ಇಂತಹ ಉಲ್ಲೇಖಗಳು ಕಂಡುಬರುತ್ತವೆ. ಈತನು ನೀಲಗುಂದದ ಭೀಮೇಶ್ವರ ದೇವರಿಗೆ ದಾನಬಿಟ್ಟುದುದನ್ನು ತಿಳಿಸುತ್ತದೆ.[೬೭] ಬಾಗಳಿಯ ಒಂದು ಶಾಸನದಲ್ಲಿ, ಬಾಗಳಿಯ ಕಲಿದೇವರಿಗೆ ಭೂಮಿಯನ್ನು ದಾನ ನೀಡುತ್ತಾನೆ ಎಂದಿದೆ.[೬೮] ಇನ್ನೊಂದು ಶಾಸನದಲ್ಲಿ ವೀರನರಸಿಂಹನ ದಂಡನಾಯಕನಾದ ಚಾರ್ವಾಡನು ಕಲಿದೇವರಿಗೆ ಭೂಮಿಯನ್ನು ದಾನ ನೀಡುತ್ತಾನೆ.[೬೯] ಎರಡನೆಯ ನರಸಿಂಹನು ಬಾಗಳಿಯ ಕಲಿದೇವ ಸ್ವಾಮಿ ದೇವಾಲಯಕ್ಕೆ ಚಂಗನಹಳ್ಳಿ, ಕಪ್ಪುರಕೆರೆ ಕೆಳಗೆ ಕ್ರಯಕೊಟ್ಟು, ಗದ್ದೆ ಖರೀದಿಸಿ ದಾನ ಬಿಡುತ್ತಾನೆ.[೭೦] ಇವನ ದಂಡನಾಯಕ ಬಮ್ಮಯ್ಯ ಬಾಗಳಿಯ ಕಲಿದೇವರಿಗೆ ಭೂಮಿಯನ್ನು ದಾನ ಬಿಡುತ್ತಾನೆ.

ಮೂರನೆಯ ನರಸಿಂಹನ ಉಲ್ಲೇಖವೂ ಬಂದಿದೆ. ಇವನ ಕಾಲದಲ್ಲಿ ಹರಿಕಾರ ಮೊಗವಾಡ ಮಾಚರಸನು, ಬೆಟಿಯನಾಯಕನ ಮಗ ಹೆಗ್ಗಡೆ ಚಂದಯ್ಯ, ನೀಲಗಿರಿಯ ನೀಲೇಶ್ವರ ದೇವರ ಪೂಜಾರ್ಥವಾಗಿ ಭೂದಾನ ನೀಡಿದನೆಂದು ಬಂದಿದೆ.[೭೧] ಯಾರು ಎಂದು ಉಲ್ಲೇಖವಿಲ್ಲ.

ಈ ಶಾಸನದಲ್ಲಿ ಬಾಗಳಿಯ ಮಹಾಜನರು ವಿಷ್ಣುಘೈಸರಿಗೆ, ಕಲಿದೇವರಿಗೆ, ಮಾನ್ಯವಾಗಿ ತೋಟವನ್ನು ದಾನನೀಡಿದರೆಂದು ಬಂದಿದೆ. ಇದರ ಕಾಲ ೧೨೯೧ ಎಂದಿರುವುದರಿಂದ ಇದು ಮೂರನೆಯ ನರಸಿಂಹ ಕಾಲಕ್ಕೆ ಹೊಂದುತ್ತದೆ.[೭೨] ಇದೇ ಶಾಸನದ ಪಶ್ಚಿಮ ಮುಖದ ಕಡೆಗೆ ಇರುವ ಶಾಸನದಲ್ಲಿ 'ಚೋಳರಾಜ್ಯ ಪ್ರತಿಷ್ಠಾಚಾರ್ಯಭುಜಬಳಚಕ್ರವರ್ತಿ' ಎಂದಿದ್ದು(ವೀರನರಸಿಂಹ ದೇವನು) ಹರಿಶ್ಚಂದ್ರ ದತ್ತಿ ಅಗ್ರಹಾರ ಬಾಗುಳಿಯ ಶ್ರೀಕಲಿದೇವರ ಶ್ರೀಗಂಧಕ್ಕೆ ದಾನ ಬಿಟ್ಟಿರುವುದನ್ನು ತಿಳಿಸುತ್ತದೆ.[೭೩] ಇದೇ ಶಾಸನದ ಪೂರ್ವಮುಖವಾಗಿರುವ ಕಲ್ಲಿನಲ್ಲಿ ೧೩೩೬ರಲ್ಲಿ ಭೂಮಿ ಮತ್ತು ಮನೆಯನ್ನು ಆತ್ಮರಾಮಸ್ವಾಮಿಗೆ ಮತ್ತು ಆನಂದನಿಧಿಸ್ವಾಮಿಗೆ ದಾನವನ್ನು ನೀಡಿದ್ದರೆಂದು ಬಂದಿರುವುದರಿಂದ, ಕಾಲದ ಉಲ್ಲೇಖದಿಂದ ಮೂರನೆ ಬಲ್ಲಾಳನ ಕಾಲವಾಗಿದೆಂದು ಹೇಳಬಹುದು.[೭೪]

ಹೀಗೆ ಇಲ್ಲಿಯ ಶಾಸನಗಳು ಹೊಯ್ಸಳರ ಆಳ್ವಿಕೆಯನ್ನು ಉಲ್ಲೇಖಿಸಿದ್ದು, ಹೆಚ್ಚಾಗಿ ವೀರಬಲ್ಲಾಳನ ಶಾಸನಗಳು ಕಂಡಬರುತ್ತವೆ. ವೀರಬಲ್ಲಾಳನು ಉಚ್ಚಂಗಿಯನ್ನು ವಶಪಡಿಸಿಕೊಂಡಿದ್ದು, ಕೋಟೆಗಳನ್ನು ಪುನಃ ಪಾಂಡ್ಯ ಅರಸ ಕಾಮದೇವನಿಗೆ ಕೊಟ್ಟು, ಅವನನ್ನು ತನ್ನ ಸಾಮಂತ ಅರಸನನ್ನಾಗಿ ನೇಮಿಸಿಕೊಂಡನು. ಉಚ್ಚಂಗಿಯನ್ನು ತನ್ನ ರಾಜ್ಯದ ಪ್ರಾಂತ್ಯವೊಂದರ ಮುಖ್ಯ ಪಟ್ಟಣವಾಗಿ ಮಾಡಿಕೊಂಡು ರಾಜ್ಯವಾಳಿದನು. ಇಲ್ಲಿಯ ಒಂದು ಶಾಸನದಲ್ಲಿ ಹೊಯ್ಸಳ ವಂಶಾವಳಿಯನ್ನು ಉಲ್ಲೇಖಿಸುತ್ತದೆ.'[೭೫]

[illegible]

೩.೧೦. ಯಾದವರು

ಇವರ ಕೆಲವು ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಾಗಿದ್ದು ಬಾಗಳಿಯಲ್ಲಿ ಇವರ (ಸಾಮಂತರು) ಶಾಸನಗಳು ದೊರೆತಿವೆ. ಮೊದಲು ಕಲ್ಯಾಣದ ಚಾಲುಕ್ಯರಿಗೆ ಮಹಾಮಂಡಲೇಶ್ವರರಾಗಿದ್ದು, ನಂತರ ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ರಾಜ್ಯವಿಸ್ತರಿಸಿದರು. ಇಲ್ಲಿಯ ಶಾಸನವೊಂದು ಶ್ರೀಮತ್‌ಯಾದವ ನಾರಾಯಣ ಭುಜಬಲಪ್ರತಾಪಚಕ್ರವರ್ತಿ, ಶ್ರೀಕಂದರದೇವನು ಆಳುತ್ತಿದ್ದನೆಂದು ತಿಳಿದುಬರುತ್ತದೆ.[೬೬] ಯಾದವರು ಅಥವಾ ಸೇವುಣರು ಎಂದು ಗುರುತಿಸಿಕೊಂಡ ಇವರು ಮಧ್ಯಯುಗದ ರಾಜವಂಶಗಳಂತೆಯೇ ತಾವು ಪೌರಣಿಕನಾಯಕ ಯದುವಿನಿಂದ ಬಂದವರೆಂದೂ, ದ್ವಾರಕಾ ಅಥವಾ ದ್ವಾರವತಿಯಿಂದ ಬಂದವರೆಂದು ಹೇಳಕೊಂಡಿದ್ದಾರೆ. ಇವರು ಯಾದವನಾರಾಯಣ ಎಂಬ ಬಿರುದನ್ನು ಧರಿಸಿದರು. ಮಾದವನಾದ ವಿಷ್ಣುನಿಂದಾಗಿ ಈ ಮನೆತನದವರು ಬಂದರು ಎಂದು ಹೇಳಿಕೊಂಡಿದ್ದಾರೆ. ಇಲ್ಲಿಯ ಇನ್ನೊಂದು ಶಾಸನದಲ್ಲಿ ಯಾದವರಾಜನಾದ ದಂಡನಾಯಕ ಕೃಷ್ಣ ಆಳಿದರೆಂದು ಉಲ್ಲೇಖವಾಗಿದೆ. ಇವರು ವೀರ ಬಲ್ಲಾಳನಾದ ಹೊಯ್ಸಳ ದೊರೆಯೊಂದಿಗೆ ಯುದ್ಧಮಾಡಿದರೆಂದು ನೀಲಗುಂದ ಶಾಸನದಲ್ಲಿ ಬರುತ್ತದೆ.[೬೭] ಆದ್ದರಿಂದ ಕಳಚೂರಿ ವಂಶದವರೊಂದಿಗೆ ಸ್ನೇಹ ಬೆಳೆಸುವ ನೆಪ ಮಾಡಿ, ಆಳ್ವಿಕೆಯಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ರಾಜ್ಯ ವಿಸ್ತರಣೆಗಾಗಿ ಹೊಯ್ಸಳರ ಜೊತೆ ಪೈಪೋಟಿಗೆ ಇಳಿದರು. ಹೊಯ್ಸಳರಿಗೂ ಇವರಿಗೂ ಅನೇಕ ಯುದ್ಧಗಳು ಜರುಗಿದ್ದವು. ಇಂತಹ ಉಲ್ಲೇಖಗಳು ಇನ್ನು ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತದೆ.

೧೧. ನೊಳಂಬರು

ನೊಳಂಬರು ಅಥವಾ ನೊಳಂಬ ಪಲ್ಲವರು ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ಅಧೀನರಾಗಿ ಕ್ರಿ.ಶ.೮ನೇ ಶತಮಾನದಿಂದ ೧೧ನೇ ಶತಮಾದವರೆಗೆ, ಬಳ್ಳಾರಿ ಪ್ರದೇಶವನ್ನೊಳಗೊಂಡು ನೊಳಂಬವಾಡಿ ನಾಡನ್ನು ಆಳುತ್ತಿದ್ದರು. ತಾವು ಆಳುತ್ತಿದ್ದ ಪ್ರದೇಶವನ್ನು ನೊಳಂಬವಾಡಿ-೩೨೦೦೦ ಎಂಬ ಹೆಸರಿನಿಂದಲೇ ಗುರುತಿಸಿಕೊಂಡಿದ್ದಾರೆ. ಗಂಗರ ಮತ್ತು ರಾಷ್ಟ್ರಕೂಟರ ವೈರಿಗಳಾಗಿದ್ದು, ಕಲ್ಯಾಣ ಚಾಲುಕ್ಯರ ಸ್ನೇಹವನ್ನು ಬೆಳೆಸುವುದರ ಜೊತೆಗೆ ತಮ್ಮ ರಾಜಕೀಯ ಸ್ಥಾನವನ್ನು ಗಟ್ಟಿಗೊಳಿಸಿಕೊಂಡರು. ತಮ್ಮನ್ನು ಪಲ್ಲವಾನ್ವಯ, ಪಲ್ಲವಕುಲತಿಳಕ, ಕಾಂಚಿಪುರವರಾಧೀಶ್ವರ ಮುಂತಾದ ಬಿರುದುಗಳೊಂದಿಗೆ ಗುರುತಿಸಿಕೊಂಡಿದ್ದಾರೆ. ಇವರು ತೊಂಬತ್ತುವರ್ಷಗಳ ಕಾಲ ಚಾಲುಕ್ಯರ ಸಾಮಂತರಾಗಿ, ತಮ್ಮ ಸುತ್ತಲಿನ ಪ್ರದೇಶಗಳನ್ನು ತಮ್ಮ ಆಡಳಿತ ವಿಭಾಗಕ್ಕೆ ಸೇರಿಸಿಕೊಂಡರು.

ಬಾಗಳಿಯ ಬಹುಪಾಲು ಶಾಸನಗಳು ನೊಳಂಬರ ಆಡಳಿತವನ್ನು ಉಲ್ಲೇಖಿಸುತ್ತವೆ. ಈ ಶಾಸನದಲ್ಲಿ ಕ್ರಿ.ಶ.೧೧೧೮ರಲ್ಲಿ (ಬಾಗಳಿಯ ಶಾಸನ ಕಾಲ) ಜಗದೇಕಮಲ್ಲ ನೊಳಂಬ ಉದಯಾದಿತ್ಯನು, ಉತ್ತರಾಯಣ

[illegible]

[illegible]

[illegible]

ಸಂಕ್ರಾಂತಿ ನಿಮಿತ್ಯ, ಪಂಪಾಪುರದ ತೀರ್ಥಕ್ಕೆ ಬಂದಿದ್ದಾಗ, ಬಾಗಳಿಯ ಕಲಿದೇವಸ್ವಾಮಿಗೆ ಬಿಕ್ಕಿಗೆ-೭೦ರಲ್ಲಿಯ ನಾರಣೋಝ, ಶಂಕರೋಝರ, ನಾಚಿಮಯ್ಯನಕೆರೆಗಳೊಳಗಾಗಿ, ಲೋಗೇಶ್ವರದ ಹೊಲದ ಚತುರಾಘಾಟ ಸೀಮೆಯಿಂದ ಒಳಗುಳ್ಳ ಭೂಮಿಯನ್ನು ದೇವರ ನೈವೇದ್ಯಕ್ಕೆ ನಂದಾದೀವಿಗೆಗೆ ತಪೋಧನರ ಸತ್ರಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ. ಇದೇ ಶಾಸನದಲ್ಲಿ (ಇಲ್ಲಿ ಪಂಪಾಪುರ ಎಂದರೆ ಈಗಿನ ಹಂಪೆ) ಇದೇ ವಂಶದ, ವೀರನೊಳಂಬನನ್ನು ಪಲ್ಲವಕುಳತಿಳಕನೇಕವಾಕ್ಯಂಪೆರ್ಮಾಡಿಯಂಪಲ್ಲವಾನ್ವಯ, ಶ್ರೀಪೃಥ್ವೀವಲ್ಲಭ, ಪಲ್ಲವ, ಕಾಂಚೀಪುರವರೇಶ್ವರ, ಶ್ರೀಮನ್ವೀರನೊಳಂಬಪಲ್ಲವ(ರಾಜ ನೊಳಂಬ ಉದಯಾದಿತ್ಯ) ಪೆರ್ಮಾಡಿದೇವರು ಎಂದು ಉಲ್ಲೇಖಿಸುತ್ತದೆ. ಇದರಿಂದ ಉದಯಾದಿತ್ಯನು ಗಂಗವಾಡಿ-೯೬೦೦೦, ಕದಂಬಳಿಕೆ-೧೦೦೦, ಕೋಗಳಿ-೫೦೦, ಬಲ್ಲಕುಂದೆ-೩೦೦, ಎಡದೊರೆ-೨೦೦೦, ಕುದಿಹಾರ-೭೦, ಬಿಕ್ಕಿಗ-೭೦ ಈ ಗ್ರಾಮಗಳನ್ನು (ಆಡಳಿತ ಪ್ರದೇಶಗಳು) ತನ್ನ ಅಧೀನಕ್ಕೆ ಒಳಪಡಿಸಿಕೊಂಡು ಕಲ್ಯಾಣದ ಚಕ್ರವರ್ತಿ ಜಯಸಿಂಹನ ಪಾದಪದ್ಮೋಪ ಜೀವಿಯಾಗಿ ಕಂಪಲಿಯ ನೆಲೆವೀಡಿನಿಂದ ಆಳುತ್ತಿದ್ದನೆಂದು ಕಂಡುಬರುತ್ತದೆ. ಈತನ ಮಗಳಾದ ರೇವಳದೇವಿಯನ್ನು ಜಯಸಿಂಹ ವಿವಾಹವಾಗಿದ್ದು ಈ ಶಾಸನದಿಂದ ತಿಳಿದುಬರುತ್ತದೆ.[೨೮] ಇದರಿಂದ ಇವನ ಕಾಲಕ್ಕೆ ನೊಳಂಬ ಪಲ್ಲವರ ರಾಜಧಾನಿ 'ಪಂಜೆರ'ವಿನಿಂದ ಕಂಪುಲಿ(ಕಂಪ್ಲಿ)ಗೆ ಸ್ಥಳಾಂತರಿಸಿದ್ದು ಗೊತ್ತಾಗುವುದು. ಈ ಶಾಸನದಲ್ಲಿ[೨೯] ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ಜಯಸಿಂಘನ ಪಾದಪಾದ್ಮೋಪ ಜೀವಿಯಾಗಿದ್ದ ಉದಯಾದಿತ್ಯನನ್ನು ಪಲ್ಲವಾನ್ವಯ ಶ್ರೀಪೃಥ್ವೀವಲ್ಲಭ, ಪಲ್ಲವಕುಲತಿಳಕ,(ಮಂಡಳಿಕ) ಲಲಾಟಲೋಚನಂ, ಘಟೆಯೊಡೆಗಣ್ಡಂ, ಕದನಕಂಠೀರವ, ಅಮೋಘ ವಾಕ್ಯಂ, ಕಾಂಚೀಪುರವರೇಶ್ವರಂ, ಶ್ರೀಮಜ್ಜಗದೇಕಮಲ್ಲ, ನೊಳಂಬಪಲ್ಲವಪೆರ್ಮಾಡಿಗಳೆನಿಸಿ ನೆಗಳ್ದ, ಉದಯಾದಿತ್ಯದೇವ ಎಂಬ ಪ್ರಶಸ್ತಿಗಳಿಂದ ಗುರುತಿಸಬಹುದಾಗಿದೆ. ಇಲ್ಲಿಯ ಇನ್ನೊಂದು ಶಾಸನದಲ್ಲಿ ಇದೇ ವಿವರವನ್ನು ಹೇಳುತ್ತದೆ. ಒಂದೇ ಅವಧಿಯಲ್ಲಿ ಹಲವಾರು ಆಡಳಿತ ಪ್ರದೇಶಗಳನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿದ್ದನು. ತಲವಾಗಿಲು ಶಾಸನದಲ್ಲಿ ಜಗದೇಕಮಲ್ಲನೊಳಂಬಉದಯಾದಿತ್ಯನು ನೊಳಂಬ ವಾಡಿ-೩೨೦೦೦, ಕದಂಬಳಿಕೆ-೧೦೦೦, ಕೋಗಳಿ-೫೦೦, ಬಲ್ಲಕುಂದೆ-೩೦೦, ಕುದಿಹರವಿ-೭೦, ಬಿಕ್ಕಿಗ-೭೦ ನ್ನು ಆಳುತ್ತಿದ್ದನೆಂದು ಬರುತ್ತದೆ. ಇವನು ಸಹ ತಲವಾಗಿಲ ಭೋಗೇಶ್ವರ ದೇವರಿಗೆ ದೇವಾಲಯದ ಪರಿಚಾರಕ ವರ್ಗದವರಿಗೆ, ಪರಿಕಾರರಿಗೆ, ಹಾಡುವವರಿಗೆ ಪೂಜಾರಿಗೆ, ಕಲುಕುಟಿಗ ಮೊದಲಾದವರಿಗೆ ಭೂದಾನ ನೀಡಿದನೆಂದು ತಿಳಿದುಬರುತ್ತದೆ.[೪೦] ಈತನ ಆಳ್ವಿಕೆಯನ್ನು ತಿಳಿಸುವ ಇನ್ನೂ ಅನೇಕ ಶಾಸನಗಳು ಹರಪನಹಳ್ಳಿಯ ಸುತ್ತಲಿನ ಪ್ರದೇಶಗಳಲ್ಲಿ ಕಂಡುಬರುತ್ತದೆ. ಕೆಲವೊಂದು ಶಾಸನಗಳಲ್ಲಿ ನೊಳಂಬ ಪಲ್ಲವಪೆರ್ಮಾಡಿ ಮತ್ತು ನನ್ನಿನೊಳಂಬ ಪಲ್ಲವಪೆರ್ಮಾಡಿ ಎಂದು ಉಲ್ಲೇಖಗಳು ಬಂದಿವೆ. ಸೋಗಿಯ ಒಂದು ಶಾಸನದಲ್ಲಿ ಉದಯಾದಿತ್ಯನ ಪ್ರಸ್ತಾಪ ಬರುತ್ತದೆ.[೪೧]

೧೧. ಪಾಂಡ್ಯರು

ಉಚ್ಚಂಗಿಯ ಪಾಂಡ್ಯರು ಕಲ್ಯಾಣದ ಚಾಲುಕ್ಯ ಚಕ್ರವರ್ತಿಗಳಿಗೆ ಸಾಮಂತ ಅರಸರಾಗಿದ್ದರು. ಅನೇಕ ಯುದ್ಧಗಳಲ್ಲಿ ಭಾಗವಹಿಸಿ ತಮ್ಮ ಅರಸರಿಗೆ ಜಯತಂದುಕೊಟ್ಟು, ರಾಜರ ಮೆಚ್ಚಿಗೆ ಪಡೆದ ನಂಬಿಕೆಯ ಸಾಮಂತರಾಗಿದ್ದರು. ಇವರು ಉಚ್ಚಂಗಿಯೆಂಬ ಮುಖ್ಯ ಪಟ್ಟಣದಿಂದ ನೊಳಂಬವಾಡಿಯನ್ನು ಆಳುತ್ತಿದ್ದರು. ನೊಳಂಬರ ತರುವಾಯ ಬಳ್ಳಾರಿಯ ಪ್ರದೇಶದಲ್ಲಿ ಪ್ರಬಲವಾಗಿ ಬೆಳೆದವರು. ಇವರು ೧೦೭೬ರಿಂದ ೧೨೦೦ ಶತಮಾನದ ಅಂತ್ಯದವರೆಗೂ ಆಳ್ವಿಕೆ ನಡೆಸುತ್ತಾ ಪಕ್ಕದ ಗುತ್ತರಾಜರೊಡನೆ ವೈವಾಹಿಕ ಸಂಬಂಧ ಬೆಳೆಸುವ ಮೂಲಕ ತಮ್ಮ ರಾಜ್ಯದ ಎಲ್ಲೆಗಳನ್ನು ವಿಸ್ತರಿಸಿಕೊಂಡರು.

ಉಚ್ಚಂಗಿಯ ಪಾಂಡ್ಯರ ವಂಶಾವಳಿಯನ್ನು ಹುಲ್ಲೂರು ಶ್ರೀನಿವಾಸ ಜೋಯಿಸರು ಹೀಗೆ ಗುರುತಿಸಿದ್ದಾರೆ.

೧. ಪಳಿತಪಾಂಡ್ಯ (೧೦೭೬)

೨. ಇರುಕವೇಳ (ತ್ರಿಭುವನಮಲ್ಲಪಾಂಡ್ಯ ೧೦೮೩-೧೧೨೭)

೩. ರಾಯಪಾಂಡ್ಯ (೧೧೨೪-೧೧೩೮)

(ಈತನಿಗೆ ಮೂವರು ಪುತ್ರರು)

ಪಂಡಿತಪಾಂಡ್ಯ	ವೀರಪಾಂಡ್ಯ	ವಿಜಯಪಾಂಡ್ಯ
(೧೧೩೮ - ೧೧೪೩)	(೧೧೪೩-೧೧೬೮)	

ಎಂದು ಗುರುತಿಸಿದ್ದಾರೆ. ಆದರೆ ಇಲ್ಲಿ ದೊರೆತ ಶಾಸನಗಳಲ್ಲಿ ಪಾಂಡ್ಯ ಅರಸರನ್ನು ಹೀಗೆ ಗುರುತಿಸಬಹುದು.

೧. ತ್ರಿಭುವನಮಲ್ಲರಾಯ ಪಾಂಡ್ಯ

೨. ತ್ರಿಭುವನಮಲ್ಲ ಪಾಂಡ್ಯದೇವ

೩. ವೀರಪಾಂಡ್ಯ - I

೪. ವಿಜಯಪಾಂಡ್ಯ

೫. ವೀರಪಾಂಡ್ಯ II (ಜಗದೇಕಮಲ್ಲ)

೬. ವಿಜಯಪಾಂಡ್ಯ II

ತ್ರಿಭುವನಮಲ್ಲ ಪಾಂಡ್ಯದೇವ

ಇವನು ಆರನೆ ವಿಕ್ರಮಾದಿತ್ಯ ಸಾಮಂತನಾಗಿ(ಮಂಡಳೇಶ್ವರ, ಮಾಂಡಳೀಕ) ನೊಳಂಬವಾಡಿ-೩೨೦೦೦ ಪ್ರಾಂತ್ಯಕ್ಕೆ ೧೦೮೨ರಲ್ಲಿ ಆಳುತ್ತಿದ್ದನು. ಇಲ್ಲಿನ ಬಹುಪಾಲು ಶಾಸನಗಳಲ್ಲಿ ಈತನ ಉಲ್ಲೇಖ ಬರುತ್ತದೆ. ಬಾಗಳಿಯ ಶಾಸನದಲ್ಲಿ [೮೨] ಚಾಲುಕ್ಯ ದೊರೆ ತ್ರಿಭುವನಮಲ್ಲದೇವನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರನಾಗಿ ಕಾಂಚೀಪುರವರೇಶ್ವರ, ಯದುವಂಶಾಂಬರದ್ಯುಮಣಿ, ಸುಭಟಚೂಡಾಮಣಿನಿಜಕುಳಕಮಳಮಾರ್ತಂಡ. ಪರಿಚ್ಛೇದಿಗಂಡ, ರಾಜಿಗಜೋಳ ಮನೋಭಂಗ ಮೊದಲಾದ(ಪ್ರಶಸ್ತಿ) ಬಿರುದುಗಳನ್ನು ಧರಿಸಿದ್ದನು. ಈತನ ಮೊದಲ ಉಲ್ಲೇಖ ಅಂಬಳಿ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಈ ಶಾಸನದಲ್ಲಿ ನೊಳಂಬವಾಡಿ

೩೨೦೦೦ವನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[೮೩] ಇಲ್ಲಿಯ ಇನ್ನೊಂದು ಶಾಸನದಲ್ಲಿ ಯಾರ ಸಾಮಂತನಾಗದೇ ನೇರವಾಗಿ ನೊಳಂಬವಾಡಿಯನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ.[೮೪] ಆದರೆ ಈ ಶಾಸನದಲ್ಲಿ ತ್ರಿಭುವನಮಲ್ಲದೇವನ ಆಳ್ವಿಕೆಯಲ್ಲಿ ತ್ರಿಭುವನಮಲ್ಲಪಾಂಡ್ಯನು ನೊಳಂಬವಾಡಿಯನ್ನು ಆಳುತ್ತಿದ್ದಾಗ ಇವನ(ಮಹಾಪ್ರಧಾನ) ದಂಡನಾಯಕ ಬನ್ನಿಗೊಳದ (ಸೋಮ) ಸೋವರಸರು ನೊಳಂಬವಾಡಿ ೩೨೦೦೦ರದ, ವಡ್ಡಾರಾವುಳದ ಸುಂಕವನ್ನಾಳುತ್ತಿದ್ದನೆಂದು ಕಂಡುಬರುತ್ತದೆ.[೮೫] ಈ ಶಾಸನದಲ್ಲಿ ಚಾಳುಕ್ಯ ತ್ರಿಭುವನಮಲ್ಲ ಹಾಗೂ ಇವನ ಸಾಮಂತ ಪಾಂಡ್ಯರಾಜ ಎಂದು ಉಲ್ಲೇಖಿಸುತ್ತದೆ. ನಂತರ ಮುಂದುವರಿದ ಭಾಗದಲ್ಲಿ ತ್ರಿಭುವನಮಲ್ಲ ಪಾಂಡ್ಯದೇವ ಎಂದಿದೆ.[೮೬] ಇದರಲ್ಲಿ ತ್ರಿಭುವನ ಮಲ್ಲನು ಆಳುತ್ತಿದ್ದಾಗ, ಇವನ ಮಾಂಡಳಿಕ ತ್ರಿಭುವನಮಲ್ಲಪಾಂಡ್ಯನ ಕಾಲದಲ್ಲಿ ಬಾಗಳಿಯ ಮಹಾಜನರು ಕಲಿದೇವರ ಪೂಜೆ ಕಾರ್ಯಗಳ ಬಗ್ಗೆ ಚರ್ಚಿಸಲು ಸಭೆ ಸೇರುತ್ತಿದ್ದರು.[೮೭]

ಹೀಗೆ ಹೆಚ್ಚಾಗಿ ಇವನ ಉಲ್ಲೇಖ ಶಾಸನಗಳಲ್ಲಿ ಬರುವುದರಿಂದ ಹೆಚ್ಚಿನ ವಿವರಕ್ಕಾಗಿ ಈ ರೀತಿಯ ಪಟ್ಟಿಯನ್ನು ಜೋಡಿಸಲಾಗಿದೆ. ಇವನ ಮೊದಲ ಉಲ್ಲೇಖ ಅಂಬಳಿ ಶಾಸನದಲ್ಲಿ ಕಂಡುಬರುತ್ತದೆ. ಈತನ ಉಲ್ಲೇಖವಿರುವ ಶಾಸನಗಳು.

ಬಾಗಳಿ ಶಾಸನ ಸಂಖ್ಯೆ ೧೦೫ (S.I.I IX N-೧೭೮)

,, ೧೨೭ ,, ೧೮೯

,, ೧೦೬ ,, ೧೯೧

,, ೧೦೭ ,, ೧೯೨

,, ೧೭೯ ,, ೧೯೮

,, ೧೦೮ ,, ೨೦೧

,, ೧೧೦ ,, ೨೦೩

,, ೧೧೧ ,, -

,, ೧೧೨ ,, ೨೧೧

ಈ ಎಲ್ಲಾ ಶಾಸನಗಳಲ್ಲಿ ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದನೆಂದು ಬರುತ್ತದೆ. ಈ ಪಟ್ಟಿಯನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಲಾಗಿದ್ದು ಹೆಚ್ಚಿನ ವಿವರಕ್ಕೆ ಈ ಅನುಕೂಲ ಮಾಡಲಾಗಿದೆ.

ಹೀಗೆ ಇವನು ನೊಳಂಬವಾಡಿ-೩೨೦೦೦ ಜೊತೆಗೆ ಗಂಗವಾಡಿ-೯೬೦೦೦ವನ್ನು ಆಳುತ್ತಿದ್ದನೆಂದೂ ಹೂವಿನ ಹಡಗಲಿ ಶಾಸನವೊಂದರಲ್ಲಿ ಹೇಳುತ್ತದೆ.[೮೮] ಇದರ ಜೊತೆಗೆ ಈತನ ಉಲ್ಲೇಖಗಳು ಕೂಡ್ಲಿಗಿ, ಸಿರುಗುಪ್ಪ, ಹರಪನಹಳ್ಳಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ದುಗ್ಗತಿಯ ಒಂದು ಶಾಸನದಲ್ಲಿ ತ್ರಿಭುವನಮಲ್ಲನ ಮಂಡಳೇಶ್ವರನಾಗಿ ತ್ರಿಭುವನಮಲ್ಲ ಪಾಂಡ್ಯದೇವ 'ಬೇವೂರ' ನೆಲೆವೀಡಿನಿಂದ ಆಳುತ್ತಿದ್ದನೆಂದು ತಿಳಿದುಬರುತ್ತದೆ.[೮೯] ಇವನ ಎಲ್ಲಾ ಶಾಸನಗಳಲ್ಲಿ 'ತ್ರಿಭುವನಮಲ್ಲದೇವ ಪಾದಾಬ್ಜಭ್ರಿಂಗಂ' ಎಂದು ಉಲ್ಲೇಖವಾಗಿರುವುದರಿಂದ ತ್ರಿಭುವನಮಲ್ಲನಿಂದ ಅಪಾರವಾದ ಪ್ರೀತಿಗಳಿಸಿದ್ದನು, ಅಷ್ಟೇ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದನು, ಆದ್ದರಿಂದ ಇವನಿಗೆ 'ತ್ರಿಭುವನಮಲ್ಲ' ಎಂಬ ಬಿರುದನ್ನು ಕೊಟ್ಟನು. ಚೋಳ ದೊರೆ ರಾಜಿಗಚೋಳನನ್ನು ಸೋಲಿಸಿ, ವಿಕ್ರಮಾದಿತ್ಯನಿಗೆ ಜಯ ತಂದಿದ್ದರಿಂದ 'ರಾಜಿಗಚೋಳಮನೋಭಂಗ' ಎಂಬ ಬಿರುದನ್ನು ಧರಿಸಿದನು. ಮಹಾಮಂಡಳೇಶ್ವರ ನಾದ ಪಾಂಡ್ಯದೇವನು ಇಲ್ಲಿಯ ಕೆಲವು ದೇವಾಲಯಗಳಿಗೆ ದಾನ, ದತ್ತಿಗಳನ್ನು ನೀಡಿದನು. ಈ ಶಾಸನವೊಂದರಲ್ಲಿ ಇವನ ದಂಡನಾಯಕ ತಿಕ್ಕಭಟ್ಟನು ದೇವರ ನೈವೇದ್ಯಕ್ಕೆ, ಸತ್ರಕ್ಕೆ, ಊರಿನ ಕೆರೆಗೆ ದಾನ ನೀಡಿದನೆಂದು ಉಲ್ಲೇಖಬರುತ್ತದೆ.[೯೦] ಇನ್ನೊಂದು ಶಾಸನದಲ್ಲಿ ಈತನ ಒಪ್ಪಿಗೆಯ ಮೇರೆಗೆ ಪೆರ್ಗ್ಗಡೆ ಕಾವರಾಜನು ದೀಪಾವಳಿಯ ಹಬ್ಬದಲಿ ಮಹಾರಾಜನು ಉದಲುಕುಡುವ ಗದ್ಯಾಣದ ಎರಡರಲ್ಲಿ ದೇವರ ರಂಗಭೋಗಕ್ಕೆ ೧ ಗದ್ಯಾಣ ಬಿಡಬೇಕೆಂದು, ಮಹಾಸಾಮಂತನ ವಿನಂತಿಯ ಮೇರೆಗೆ ದೇವರಿಗೆ ದಾನ ಬಿಡುತ್ತಾನೆ.[೯೧]

ಹೀಗೆ ವಿಕ್ರಮಾದಿತ್ಯನ ನಂಬಿಗೆಯನ್ನು ಪಡೆದು, ನಿಷ್ಠಾವಂತ ಮಾಂಡಳಿಕನಾಗಿ ನಡೆದುಕೊಳ್ಳುತ್ತಿದ್ದನು. ಒಬ್ಬ ಪ್ರಾಮಾಣಿಕ ರಾಜನೆಂದರೂ ತಪ್ಪಾಗಲಾರದು. ಇವನ ಮಗ ರಾಯಪಾಂಡ್ಯನೂ ಸಹ ನೊಳಂಬವಾಡಿ ಮತ್ತು ಶಾಂತಲಿಗೆ ನಾಡುಗಳಿಗೆ ಮಂಡಲಾಧೀಶನಾಗಿದ್ದನು.

ಜಗದೇಕಮಲ್ಲ ವೀರಪಾಂಡ್ಯ

ಈತನು ಚಾಲುಕ್ಯ ದೊರೆ ಎರಡನೆ ಜಗದೇಕ ಮಲ್ಲನ ಮಂಡಳೇಶ್ವರನಾಗಿದ್ದನು. ಇಲ್ಲಿಯ ಶಾಸನಗಳಲ್ಲಿ ಕೆಲವು ಶಾಸನಗಳು ಇವನನ್ನು ಉಲ್ಲೇಖಿಸುತ್ತವೆ. ಈ ಶಾಸನದಲ್ಲಿ ಜಗದೇಕಮಲ್ಲ ವೀರಪಾಂಡ್ಯದೇವನು ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದನೆಂದು ಕಂಡುಬರುತ್ತದೆ. ಈ ಶಾಸನದಲ್ಲಿ ಇವನನ್ನು ಬಿರುದಾವಳಿಗಳಿಂದ ಹೊಗಳಿದೆ.[೯೨] 'ಕಾಂಚೀಪುರವರಾಧೀಶ್ವರ' 'ಯದುವಂಶಾಬರ' 'ಸುಭಟ ಚೂಡಾಮಣಿ', 'ನಿಜಕುಳಮಾರ್ತಾಂಡ' 'ಪರಿಚ್ಛೇದಿಗಂಡ', 'ರಾಜಿಗಚೋಳಮನೋಭಂಗ' ಎಂಬ ಉಲ್ಲೇಖ ಬರುತ್ತದೆ. ಈ ಶಾಸನದಲ್ಲಿ ಇವನ ಮಾವ ವಿಕ್ರಮಾದಿತ್ಯ ಅರಸನು ಬಾಳ್ಗುಳಿಯ ೫೦(ಐವತ್ತು) ಮಹಾಜನರಿಗೆ ೧೭೩ ಗದ್ಯಾಣವನ್ನು ಕೊಳಗವಾಹಿಯಾಗಿ ವರ್ಷಕ್ಕೆ ಎರಡು ಎಂಬಂತೆ ದಾನ ನೀಡಿ, ಇದರ ಬಡ್ಡಿಯಲ್ಲಿ ದೇವಾಲಯದ ೧೩ ಬ್ರಾಹ್ಮಣರಿಗೆ ಪಡಿಯ ರೂಪದಲ್ಲಿ ನೀಡುವಂತೆ, ಕಲಿದೇವರ ಒಂದು ನಂದಾದೀಪಕ್ಕೆ ಹಾಗೂ ನರಸಿಂಹದೇವರ ಒಂದು ನಂದಾದೀಪಕ್ಕೆ ನಡೆಸಲು ಬಿಡುತ್ತಾನೆ. ಈ

[illegible]

[illegible]

[illegible]

ಧರ್ಮದ ಫಲವು ವಿಕ್ರಮಾದಿತ್ಯದೇವನ ಅತ್ತೆ ಕೇತಬ್ಬರಸಿ ಹಾಗೂ ಅವನ ಪತ್ನಿ ನಾಗಿಯಾಂಡೆಯರಸಿಗೆ ಸಲ್ಲಬೇಕೆಂದು ಉಲ್ಲೇಖಿಸುತ್ತದೆ. ಇದರಿಂದ ಇವನು ಆಡಳಿತದ ಜೊತೆಗೆ, ಕುಟುಂಬದ ಜವಾಬ್ದಾರಿಯನ್ನು ಹೆಚ್ಚು ಗಮನದಲ್ಲಿರಿಸಿಕೊಂಡಿದ್ದನೆಂದು ಗೊತ್ತಾಗುತ್ತದೆ.

ಈ ಶಾಸನದಲ್ಲಿ ಚಾಳುಕ್ಯ ಜಗದೇಕಮಲ್ಲನು ಆಳುತ್ತಿದ್ದಾಗ ಅವನ ಸಾಮಂತ ವೀರಪಾಂಡ್ಯನು ಕದಂಬಳಿಗೆ-೧೦೦೦, ಬಲ್ಲುಕುಂದೆ-೩೦೦, ಕೋಗಳಿ-೫೦೦ರನ್ನು ಆಳುತ್ತಿದ್ದನೆಂದು ಬರುತ್ತದೆ. ಇದರ ಮುಂದುವರಿದ ಭಾಗದಲ್ಲಿ ಇವನನ್ನು

ಗಿರಿದುರ್ಗಕ್ಕಶನಿಸ್ವರೂಪನಚಳತ್ಕಾ
ನ್ತಾರ ದುರ್ಗಕ್ಕೆ ಭೀಕರದಾವಾನಳ
ನತ್ಯುದಾತ್ತ ಜಗದುರ್ಗ್ಗಕ್ಕೌವ್ವನೆಂದಂದು
ಸಂಗರದೊಳು ಮಾರ್ಮ್ಮಲೆದೊಡ್ಡಿ
ನಿಂದು ಬಯಲೊಳು ಮಾರಾನ್ತು ಬಾಳ್ವಂ
ನರಾರ್ನ್ನರನಾಥಾಗ್ರಣಿ ವೀರಪಾಂಡ್ಯನೊಳಿಳಾಲೋಕೈಕವಿಖ್ಯಾತನೊಳ್ [೯೩]

ಎಂದು ವರ್ಣಿಸಿದೆ. ಇಂದರಿಂದ ಇವನ ಧರ್ಮದ ವೀರಗುಣವನ್ನು ತಿಳಿಯಬಹುದು. ಇವನು ದಾನಗುಣಕ್ಕೂ ಖ್ಯಾತಿಯಾಗಿದ್ದನು. ಇವನಲ್ಲಿಗೆ ಬಂದು ಹೋದರೆ ತಮಗೆ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ಉಚ್ಚಂಗಿಯ ದಂಡನಾಯಕರ ನಂಬಿಕೆಯಾಗಿತ್ತು. ಇವನು ಗಿರಿದುರ್ಗಕ್ಕೆ ಶನಿಸ್ವರೂಪನಾಗಿದ್ದನು. ಅಚಲಕಾನ್ತಾರ(ವನ) ದುರ್ಗಕ್ಕೆ ಭೀಕರವಾದ (ದಾವಾನಲದಂತಾಗಿ) ಕಾಡ್ಗಿಚ್ಚಿನಂತೆ ಮತ್ತು ಅತೀಉದಾತ್ತ ಗುಣವನ್ನು ಹೊಂದಿದ್ದನು. ಜಲದುರ್ಗಕ್ಕೆ ಓರ್ವ(ಸಮುದ್ರದೊಳಗಿನ) ಬೆಂಕಿಯಾಗಿದ್ದನೆಂದು ಹೇಳಬಹುದು. (ವನದುರ್ಗಕ್ಕೆ ಇಲ್ಲಿ ಕಾಂತಾರದುರ್ಗವೆಂದು ಕರೆಯಲಾಗಿದೆ) ಇವನು ತನ್ನನ್ನು ಬಿಜ್ಜಳನ ಮಂಡಳೇಶ್ವರನೆಂದು ಹೇಳಿಕೊಂಡಿದ್ದಾನೆ. ಆದುದರಿಂದ ಈ ಶಾಸನದಲ್ಲಿ ಬಿಜ್ಜಳದೇವನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರನಾದ ವೀರಪಾಂಡ್ಯ ದೇವ 'ಕಾಂಚಿಪುರಾವರಾಧೀಶ್ವರ ಎಂಬ ವಿಶೇಷಣವನ್ನು ಧರಿಸಿ, ಕೋಗಳಿ-೫೦೦ ಮತ್ತು ಕದಂಬಳಿಕೆ-೧೦೦೦ವನ್ನು ಆಳುತ್ತಿರುತ್ತಾನೆ. ಈ ಅರಸನ ನಿರ್ದೇಶನದಂತೆ ಕೋಗಳಿ ಮತ್ತು ಕದಂಬಳಿಕೆ ಸುಂಕದ ಅಧಿಕಾರಿಯಾದ ಕಲ್ಲಿಮಯ್ಯನು ನೀಲಗುಂದದ ಭೀಮೇಶ್ವರದೇವರಿಗೆ ಕೋಗಳಿ-೫೦೦ರ ಮುಖ್ಯ ಪಟ್ಟಣವಾದ ನೀಲಗುಂದದ ಕೆಲವು ತೆರಿಗೆಗಳನ್ನು ದಾನ ನೀಡುತ್ತಾನೆ ಎಂದು ಬಂದಿದೆ.[೯೪] ಆದರೆ ಈ ಶಾಸನದಲ್ಲಿ 'ತ್ರಿಭುವನಮಲ್ಲ ದೇವಪಾದಾಬ್ಜಭ್ರಿಂಗಂ' ಎಂದು ಉಲ್ಲೇಖವಾಗಿದೆ. ಬಿಜ್ಜಳನು ಇಮ್ಮಡಿ ಜಗದೇಕಮಲ್ಲನ ಮಂತ್ರಿಯಾಗಿ, ಸೇನಾಧಿಪತಿ, ಮಹಾಮಂಡಲೇಶ್ವರನಾಗಿ ಸೇವೆಸಲ್ಲಿಸಿದ್ದನು. ಅಲ್ಲದೆ ಬಿಜ್ಜಳನಿಗೆ 'ತ್ರಿಭುವನಮಲ್ಲ' ಎಂಬ ಬಿರುದಿದ್ದಿತು. ಇದರಿಂದ ಇವನಿಗೆ ಹೀಗೆ ಕರೆದಿರಬೇಕು. ಇವನು ಜಗದೇಕಮಲ್ಲ ಬಿರುದಿನ ನಂತರ ಈ ಬಿರುದನ್ನು ಪಡೆದಿರಬಹುದಾಗಿದೆ.

ಇವನ ನಂತರ ವಿಜಯಪಾಂಡ್ಯದೇವನು ಉಚ್ಚಂಗಿಯನ್ನು ಆಳುತ್ತಿದ್ದನೆಂದು ಬರುತ್ತದೆ. ಮಾಡಲಗೇರಿಯ ಒಂದು ಶಾಸನದಲ್ಲಿ ಜಗದೇಕಮಲ್ಲ ಕಲ್ಯಾಣದಿಂದ ರಾಜ್ಯವಾಳುತ್ತಿದ್ದಾಗ ಇವನ ಮಹಾಮಂಡಳೇಶ್ವರನಾದ ವಿಜಯಪಾಂಡ್ಯನು ನೊಳಂಬವಾಡಿ-೩೨೦೦೦ವನ್ನು ಉಚ್ಚಂಗಿಯಿಂದ ಆಳುತ್ತಿದ್ದನು.[೬೫] ಬಾಗಳಿ ಶಾಸನದಲ್ಲಿ ವಿಜಯಪಾಂಡ್ಯ ದೇವನು ಉಚ್ಚಂಗಿಯನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ವೀರಪಾಂಡ್ಯ ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದಾಗ, ಇವನ ಸಾಮಂತ ವಿಜಯಪಾಂಡ್ಯ ರಾಜನ ಕರ್ತವ್ಯಗಳನ್ನು ಪರಿಪಾಲಿಸುತ್ತಿದ್ದನೆಂದು ಉಲ್ಲೇಖ ಬರುತ್ತದೆ.[೬೬] ಇವನ ಜೊತೆಗೆ ಇವನ ದಂಡನಾಯಕನಾದ ವಿಜಯಹೆಮ್ಮಾಡಿಯು ಆಳುತ್ತಿದ್ದನೆಂದಿದೆ. ಇವನ ಉಲ್ಲೇಖ ಮಾಡಲಗೇರಿ ಶಾಸನದಲ್ಲಿಯೂ ಬಂದಿದೆ. ಈ ಶಾಸನದಲ್ಲಿ ಮಹಾಮಂಡಳೇಶ್ವರ ವಿಜಯಪಾಂಡ್ಯ ದೇವರ ಆಳ್ವಿಕೆ ಎಂದಿದೆ.[೬೭] ಮಾನ್ಯರ ಮಸಲವಾಡ ಶಾಸನದಲ್ಲಿ ಮಾಂಡಲೀಕ ವಿಜಯಪಾಂಡ್ಯದೇವ ಕೋಗಳಿ-೫೦೦, ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದನೆಂದು ಉಲ್ಲೇಖ ಬಂದಿದೆ. ಹೊಳಲಿನ ಒಂದು ಶಾಸನದಲ್ಲಿ ಇವನ ನಾಮಾವಳಿ ಕಂಡುಬರುತ್ತದೆ. 'ಯಾದವಾಭರಣ, ಪಾಂಡ್ಯಕುಳಕಮಳ ಮಾರ್ತಂಡಂ, ಪರಿಚ್ಛೇದಿಗಂಡಂ, ರಾಜಿಗಚೋಳ, 'ಸಾಹಸೋತ್ತುಂಗ' ಎಂಬ ಬಿರುದುಗಳನ್ನು ಹೊಂದಿದ್ದನೆಂದು ಉಲ್ಲೇಖಿಸುತ್ತದೆ.[೬೮] ಇಲ್ಲಿಯ ಕೆಲವು ಶಾಸನಗಳಲ್ಲಿ 'ತ್ರಿಭುವನಮಲ್ಲ ವೀರಪಾಂಡ್ಯ' ಎಂದು ಉಲ್ಲೇಖವಾಗಿದೆ. ಅಂದರೆ ಚಾಲುಕ್ಯ ರಾಜ ತ್ರಿಭುವನಮಲ್ಲ ಆಳುತ್ತಿದ್ದಾಗ ಇವನ ಸಾಮಂತ ವೀರಪಾಂಡ್ಯನು ನೊಳಂಬವಾಡಿಯನ್ನು ಆಳುತ್ತಿದ್ದನೆಂದು ಬಂದಿದೆ.[೬೯] ಆದರೆ ಇವನ ಸಾಮಂತ ಪಾಂಡ್ಯದೇವನಾಗಿದ್ದು, ಇವನ ಮಗ ರಾಯ ಪಾಂಡ್ಯ ಸಾಮಂತ ರಾಜನಾಗಿರಬೇಕು. ಇವನಿಗೂ ಸಹ ತ್ರಿಭುವನಮಲ್ಲ ಎಂಬ ಬಿರುದನ್ನು ನೀಡಿರಬಹುದು.

ಹೀಗೆ ಪಾಂಡ್ಯರು ೧೦೭೬ ರಿಂದ ೧೨೦೦ವರೆಗೂ ಬಾಗಳಿಯನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಕಲ್ಯಾಣಿ ಚಾಲುಕ್ಯರ ಅರಸರ ಮೇಲೆ ಅಪಾರವಾದ ಸ್ನೇಹ, ಪ್ರೀತಿ, ನಂಬಿಕೆಗಳನಿಟ್ಟುಕೊಂಡು ನೊಳಂಬವಾಡಿಯನ್ನು ಆಳಿದ್ದಾರೆ.

ಪಾಳೆಯಗಾರರು

ಹರಪನಹಳ್ಳಿಯು ಬಳ್ಳಾರಿಯಿಂದ ಬೇರ್ಪಟ್ಟು ನೂತನವಾಗಿ ದಾವಣಗೆರೆ ಜಿಲ್ಲೆಗೆ ಸೇರಿ ಕೊಂಚ ಇತಿಹಾಸವನ್ನು ಬದಲಿಸಿತೆನ್ನಬಹುದು. ಅಂದರೆ (ಇದು) ದಾವಣಗೆರೆ ಜಿಲ್ಲೆಯ ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ಹರಹಪನಹಳ್ಳಿಯ ಇತಿಹಾಸ ಬದಲಾಗಬಹುದು. ಆದರೆ ಇಲ್ಲಿ ಬಳ್ಳಾರಿ ಜಿಲ್ಲೆಯ ಇತಿಹಾಸದಿಂದ ನೋಡಲಾಗಿದೆ. ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಪತನವಾದ

ನಂತರ, ಸೂರ್ಯನು ಮುಳುಗುವ ಮಬ್ಬಿನಲ್ಲಿ ಕನ್ನಡ ನಾಡಿನಲ್ಲಿ ಹಲವು ಪಾಳೆಯ ಪಟ್ಟಗಳು ಉದ್ಭವವಾದವು. ಅವುಗಳಲ್ಲಿ ಹರಪನಹಳ್ಳಿಯ ಪಾಳೆಯಪಟ್ಟು ಒಂದು. ಹರಪನಹಳ್ಳಿಯ ಪಾಳೆಯಪಟ್ಟು ಬೇಡನಾಯಕರ ಕೇಂದ್ರವಾಗಿತ್ತು. ವಿಜಯನಗರದ ಸೈನ್ಯದಲ್ಲಿ ಹರಪನಹಳ್ಳಿ ಹಾಗೂ ಹೊಸಪೇಟೆಯ ಬೇಡ ಜನಾಂಗದವರು ಸುಮಾರು ಎರಡುನೂರು ವರ್ಷಗಳ ಕಾಲ ಸೇವೆಸಲ್ಲಿಸುತ್ತಾ ಬಂದಿದ್ದರು. ಯುದ್ಧದ ನಂತರ ಅಳಿದುಳಿದ ಬೇಡ ಜನಾಂಗದ ನಾಯಕರುಗಳಲ್ಲಿ ಒಬ್ಬನಾದ ಹರಪನಹಳ್ಳಿಯ ದಾದಯ್ಯ(ಮೂಲಬಾಗಳಿ)ನೆಂಬುವನು ಜನತೆಯ ವಿಶ್ವಾಸದಿಂದ ಬೇಡ ಸೈನಿಕರು ನಿಶ್ಚಯಿಸಿದಂತೆ ಪ್ರಥಮ ಪಾಳೆಯಗಾರನೆಂದು ಕರೆಯಲ್ಪಟ್ಟನು. ಪ್ರಾರಂಭದಲ್ಲಿ ಬಾಗಳಿಯಲ್ಲಿ ತಮ್ಮ ಅಧಿಕಾರವನ್ನು ಪ್ರಾರಂಭಿಸಿದ ಕಾರಣ ಇವರಿಗೆ 'ಬಾಗಳಿಯ ನಾಯಕರು' ಅಥವಾ ಬಾಗಳಿಯ ಭೂಪರು ಎಂದು ಹೆಸರು ಬಂದಿತ್ತು. ಈಗ ಇವರನ್ನು 'ಹರಪನಹಳ್ಳಿ ಪಾಳೆಯಗಾರರು' ಎಂದು ಕರೆಯಲಾಗಿದೆ. ಇವರನ್ನು ಹರಪನಹಳ್ಳಿ ಪಾಳೆಯಗಾರರೆಂದು ಕರೆದರೂ, ಶಾಸನಗಳಲ್ಲಿ ಇವರ ಹೆಸರುಗಳ ಮುಂದೆ 'ಬಾಗುಳಿ' ಎಂಬ ಹೆಸರು ಸೇರ್ಪಡೆಯಾಗಿದೆ. ಒಂದೇ ಹೆಸರಿನ ಅನೇಕ ಅರಸರು ಈ ಪಾಳೆಯ ಪಟ್ಟನಲ್ಲಿ ಬಂದಿರುವುದರಿಂದ ಕಾಲದ ಮಾಹಿತಿ ಇದ್ದಲ್ಲಿ ಮಾತ್ರ ಇವರನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ನಾಯಕರು ಅಥವಾ ಪಾಳೆಯಗಾರರು ಹರಪನಹಳ್ಳಿಯನ್ನು ಕೇಂದ್ರವಾಗಿ ಮಾಡಿಕೊಂಡುದುದರಿಂದ ಈ ತಾಲೂಕಿನ ಸುತ್ತಲೂ ಇವರ ಉಲ್ಲೇಖಗಳು ದೊರೆಯುತ್ತವೆ.

ಹದಿಮೂರನೇ ಶತಮಾನದಲ್ಲಿ ಹರಪನಹಳ್ಳಿಯ ಮುತ್ತಿಗೆ-ಒಂರ ಗ್ರಾಮಕ್ಕೆ ಸೇರಿದ್ದರೂ, ಇದಕ್ಕೂ ಮೊದಲು ಬಾಗಳಿ ಗ್ರಾಮಕ್ಕೆ ಸೇರಿದ್ದು, ಕಂಚಿನ ಪತ್ರದಿಂದ ಗೊತ್ತಾಗುತ್ತದೆ. ಹರಪನಹಳ್ಳಿಯಲ್ಲಿ ಪಾಳೆಯಗಾರಿಕೆ ಆರಂಭವಾಗುವ ಮೊದಲೇ ಹರಿಯಪ್ಪನಹಳ್ಳಿ, ಹಾರುಪ್ಪಹಳ್ಳಿ ಎಂದು ಕರೆಯಲಾಗಿತ್ತು. ಲಿಂಗಣ್ಣ ಕವಿ ವಿರಚಿತ 'ಕೆಳದಿನೃಪ ವಿಜಯ'ದಲ್ಲಿ ಹರಪನಹಳ್ಳಿ ಪಾಳೆಯಗಾರರಿಗೆ, ಕೆಳದಿ ಅರಸರು ಸಂಬೋಧಿಸಿ ಬರೆದ ಪತ್ರಗಳಲ್ಲಿ 'ಹರಪುರಾಧೀಶ್ವರ' ಎಂಬ ಉಲ್ಲೇಖ ಬರುತ್ತದೆ.[೧೦೦] ಇದು ಕಾಲಾಂತರದಲ್ಲಿ ಹರಪನಹಳ್ಳಿ ಎಂದು ಹೆಸರಾಯಿತು. ಪಾಳೆಯಗಾರರಿಗೂ ಸಹ ಹರಪನಹಳ್ಳಿ ಪಾಳೆಯಗಾರರೆಂಬ ನಾಮವಾಯಿತು. ಬಳ್ಳಾರಿ ಜಿಲ್ಲೆಯಲ್ಲಿ ಬರುವ ಪಾಳೆಯಗಾರರಲ್ಲಿ ಹೆಚ್ಚು ಪ್ರಬಲರೆಂದರೆ ಈ ಹರಪನಹಳ್ಳಿ ಪಾಳೆಯಗಾರರು.

ಹರಪನಹಳ್ಳಿ ಪಾಳೆಯಗಾರರ ಮನೆತನದ ಮೂಲ(ಸ್ಥಳದಿಂದ ವಲಸೆ) ಪುರುಷ ದಾದಯ್ಯನಾಯಕ. ಈತನು ತನ್ನ ಪೂರ್ವಿಕರಿದ್ದ ಸ್ಥಳದಿಂದ ವಲಸೆ ಬಂದು ಬಾಗಳಿ ಕೋಟೆಯಲ್ಲಿ ನೆಲೆಸಿದನು. ಆದ್ದರಿಂದಲೇ ಈತನಿಗೆ ಬಾಗಳಿಯ ದಾದಯ್ಯನಾಯಕನೆಂದು ಅಡ್ಡಹೆಸರು ರೂಢವಾಯಿತು. ನಂತರದಲ್ಲಿ ಈ ರಾಜರು ಬಾಗಳಿಯ ಬಸಪ್ಪನಾಯಕ, ಬಾಗಳಿಯ ಸೋಮಶೇಖರ ನಾಯಕ ಎಂದೇ ಸಂಭೋದಿಸಲ್ಪಟ್ಟಿರುವರು.

ಆದರೆ ಉಚ್ಚಂಗಿದುರ್ಗದ ಶಿಲಾಪರ್ವದ ಶಿಖರದಲ್ಲಿ ವಿರಾಜಿಸುತ್ತಿರುವ ಶ್ರೀವೃತ್ಸವಾಂಭ ಕೃಪಾಶ್ರಯದಲ್ಲಿರುವ ಅರಮನೆಯಲ್ಲಿದ್ದು ಆ ನಂತರ ಹರಪನಹಳ್ಳಿಯ ಕೋಟೆಯಲ್ಲಿ ಸಿಂಹಾಸನವನ್ನು ನಿರ್ಮಿಸಿಕೊಂಡು ಅಂತ್ಯ ಕಾಲದವರೆಗೂ ಹರಪನಹಳ್ಳಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ್ದರಿಂದ ಹರಪನಹಳ್ಳಿ ಪಾಳೆಯಗಾರರೆಂದು ಪ್ರಸಿದ್ಧಿಯಾದರು. ಇಂತಹ ಭೂಪರ ಅಥವಾ ಪಾಳೆಯಗಾರರ ವಂಶಾವಳಿಯನ್ನು ಹೀಗೆ ಗುರುತಿಸಬಹುದು.[೧೦೧]

೧. ಶ್ರೀದಾದಾನಾಯಕ (ಹೊನ್ನನಾಗತಿ, ಜನ್ನಾನಾಗತಿ, ಭರ್ಮನಾಗತಿ, ಹನುಮನಾಗತಿ) (ಹೊನನಾಗತಿಗೆ ಸೋಮಸೇಖರ II ದತ್ತು ಪುತ್ರ)

೨. ಅಂತನಾಯಕ- (ಪತ್ನಿಯರು) (ಕಾಡಮ್ಮನಾಗತಿ, ತುಂಬಾ ನಾಗತಿ, ನಿಚ್ಚಾನಾಗತಿ)

೩. ರಂಗಪ್ಪನಾಯಕ-(ಚಂಪಾನಾಗತಿ)

೪. ಭರ್ಮನಾಯಕ

೫. ಓಬ್ಬಣ್ಣನಾಯಕ

೬. ವೀರ ಮುಮ್ಮಡಿನಾಯಕ

೭. ಬಸವಂತನಾಯಕ(ಕೊಟ್ರಪ್ಪನಾಯಕ)

೮. ಬಸವಂತನಾಯಕ II (ಪತ್ನಿ - ಹಿರೇಅಮ್ಮಾಜಿ)

೯. ವೀರಬಸಪ್ಪನಾಯಕ

೧೦. ಬಸಪ್ಪನಾಯಕ

೧೧. ಸೋಮಶೇಖರನಾಯಕ I (ಸೋಮಮ್ಮಾಜಿ, ದೀನಮ್ಮಾಜಿ, ಬಸಮ್ಮಾಜಿ, ಜಮಾನುಮತಿ)

ಸೋಮಶೇಖರ ನಾಯಕನಿಗೆ ಮಕ್ಕಳಿರಲಿಲ್ಲವಾದ್ದರಿಂದ ವೀರಬಸಪ್ಪನಾಯಕ ಮತ್ತು ಬಸಪ್ಪನಾಯಕರನ್ನು ದತ್ತು ತೆಗೆದುಕೊಂಡಿದ್ದನು. ಇವನಿಗೂ ಸಹ ನಾಲ್ಕು ಜನ ಪತ್ನಿಯರು. (ಬಸಮ್ಮಾಜಿ, ನೀಲಮ್ಮಾಜಿ, ಹಿರೇಬಸಮ್ಮಾಜಿ) ಇವರಲ್ಲಿ ಬಾಗಳಿಯ ಭೂಪರೆನಿಸಿದವರನ್ನು ಗುರುತಿಸಿ, ಇವರನ್ನು ಮಾತ್ರ ನೋಡಲಾಗಿದೆ.

೧. ದಾದೇನಾಯಕ

೨. ರಂಗನಾಯಕ

೩. ಹಿರಿಬಸವಂತನಾಯಕ

೪. ಇಮ್ಮಡಿಬಸಪ್ಪನಾಯಕ

೫. ಕೊಟ್ರಪ್ಪನಾಯಕ

೬. ಹಿರಿಬಸಪ್ಪನಾಯಕ

೭. ಕೊಟ್ಟೂರಪ್ಪನಾಯಕ

ಇವರನ್ನು ಬಾಗಳಿಯ ನಾಯಕರೆಂದು ಕರೆಯಲಾಗಿದೆ. ಇವರ ಆಳ್ವಿಕೆ ೧೫೧೬ರಿಂದ ಆರಂಭವಾಗಿ ೧೭೫೬ ವರೆಗೂ ಕೊನೆಗೊಂಡಿರಬೇಕು. ಇದರ ನಂತರ ಇವರ ಯಾವುದೇ ಶಾಸನಗಳು ದೊರೆಯುವುದಿಲ್ಲ. ಈ ಭೂಪರಲ್ಲಿ ಅಥವಾ ಪಾಳೆಯಗಾರರಲ್ಲಿ ಪ್ರಮುಖರನ್ನು ಮಾತ್ರ ಹೆಸರಿಸಲಾಗಿದೆ. ಅವರೇ ಬಾಗಳಿಯ ಭೂಪರು.

ದಾದಯ್ಯನಾಯಕ : ಪಾಳೆಯಗಾರರ ಮನೆತನದ ಮೂಲ ಪುರುಷ ದಾದಯ್ಯನಾಯಕ.(ಸ್ಥಳದಿಂದ ವಲಸೆ) ಈತನನ್ನು ದಾದೇನಾಯಕ, ದಾದಿನಾಯಕನೆಂತಲೂ ಕರೆಯುತ್ತಾರೆ. ಈತನು ತನ್ನ ಪೂರ್ವಜರು ಇದ್ದ ಸ್ಥಳದಿಂದ ವಲಸೆ ಬಂದು ಬಾಗಳಿಯಲ್ಲಿ ನೆಲಸಿದ್ದನು. ಇದರಿಂದ ಇವನಿಗೆ ಬಾಗಳಿಯ ದಾದಯ್ಯನಾಯಕ ಎಂದು ಹೆಸರಾಯಿತು. ಇವನು ಉಚ್ಚಂಗಿಯ ಶಿಲಾಪರ್ವತದಲ್ಲಿ ಅರಮನೆಯನ್ನು ನಿರ್ಮಿಸಿದ್ದನು. ಆನಂತರ ಹರಪನಹಳ್ಳಿ ಕೋಟೆಯಲ್ಲಿ ಸಿಂಹಾಸನವನ್ನು ವಹಿಸಿಕೊಂಡು ಕೊನೆಯವರೆಗೂ ಹರಪನಹಳ್ಳಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ್ದರಿಂದ ಹರಪನಹಳ್ಳಿ ಪಾಳೆಯಗಾರ ಎಂದು ಕರೆಯಲ್ಪಟ್ಟನು. ಈತನು ಬಾಗಳಿಯ ಮಾಚಿನಾಯಕನ ಮಗ. ಇವನಿಗೆ ಮುದ್ದಾನಾಯಕ ಎಂಬ ಹೆಸರಿತ್ತು. ಈ ಮಾಚಿನಾಯಕ ಅಥವಾ ಮುದ್ದಾನಾಯಕನಿಗೆ ನಾಲ್ಕು ಜನ ಗಂಡುಮಕ್ಕಳು. ಅವರಲ್ಲಿ ಮೊದಲನೆಯವನು ದಾದಾನಾಯಕ. ಎರಡನೆಯ ಮಗ ರಂಗನಾಯಕ. ಮೂರನೆಯ ಮಗ ತಿಮ್ಮಯ್ಯನಾಯಕ, ನಾಲ್ಕನೆಯವನು ಓಬಣ್ಣನಾಯಕ. ಇವನನ್ನು ಕಣ್ಣಪ್ಪ ಕುಲದವನು, ಕನ್ನಡನಾಡಿನ ರಕ್ಷಣೆಗಾಗಿ ತನ್ನ ತಲೆಯನ್ನೇ ಅರ್ಪಿಸಿದ ಗಂಡುಗಲಿ, ಕುಮಾರರಾಮನ ವಂಶದನೆಂದು, ಪುವ್ವಲ ವಂಶಕ್ಕೆ ಸೇರಿದವನೆನ್ನಲಾಗಿದೆ.[೧೦೨] ದಾದಾನಾಯಕನು ಪರಾಕ್ರಮಿ, ಬಲಶಾಲಿ, ಧೀರ, ಸತ್ಯವಂತ, ಧರ್ಮಪರ, ಉದಾರಿಯೂ ಮತ್ತು ವಿದ್ಯಾಪೇಕ್ಷೆ ಉಳ್ಳವನು, ಪೋಷಕನಾಗಿದ್ದನು. ಈತನಿಗೆ ೧೫೬೬ರಲ್ಲಿ, ಹರಪನಹಳ್ಳಿ ಬ್ರಿಟೀಷರ ವಶವಾಗುವ ಕಾಲದಲ್ಲಿ ಅವರಿಗೆ ಬರೆದುಕೊಟ್ಟ ಕೈಫಿಯತ್ತಿನಲ್ಲಿ ಪಟ್ಟಾಭಿಷೇಕವಾಯಿತೆಂದು ಉಲ್ಲೇಖವಿದೆ. ನಂತರ ಕ್ರಿ.ಶ.೧೫೮೦ರಲ್ಲಿ ಪಾಳೆಯಗಾರನಾಗಿದ್ದ ಎಂಬುದು ಶಾಸನಗಳಿಂದ ತಿಳಿಯುತ್ತದೆ.[೧೦೨]

ವಿಜಯನಗರದ ವೈರಿಯಾದ ಆಲಿಆದಿಲ್‌ಷಾನಿಗೆ ಹರಪನಹಳ್ಳಿ ಪಾಳೆಯಗಾರನು ಆಪ್ತಮಿತ್ರನೂ ಆಗಿದ್ದನು. ಇವರು ಸುರಪುರ, ರಾಯದುರ್ಗ, ಜರಿಮಲೆ, ಗುಡೇಕೋಟೆ, ಕನಕಗಿರಿ, ಆನೆಗುಂದಿ, ಮತ್ತೋಡು, ತರಿಕೆರೆ, ಸಿರಾ, ಹರ್ತಿಕೋಟೆ, ನಾಯಕನಹಟ್ಟಿ ಇವರ ಜೊತೆಗೆ ಸಂಬಂಧವನ್ನಿರಿಸಿಕೊಂಡಿದ್ದರು. ಅದರಲ್ಲೂ ಹೆಚ್ಚಾಗಿ ಚಿತ್ರದುರ್ಗ ಸಂಸ್ಥಾನದೊಡನೆ ತಮ್ಮ ಹುಟ್ಟನ್ನು ಕಂಡುಕೊಂಡು, ಚಿತ್ರದುರ್ಗದ ಮೊದಲ ದೊರೆ ಅಥವಾ ಸಂಸ್ಥಾಪಕ ದೊರೆ ಮತ್ತಿತಿಮ್ಮಣ್ಣ ನಾಯಕನ ಕಾಲದಿಂದಲೂ ಅತಿಯಾದ ಸಲುಗೆಯನ್ನು ಇಟ್ಟುಕೊಂಡಿದ್ದರು. ವಿಜಯನಗರದ ಅರಸರ ಮನ್ನಣೆಯನ್ನು ಪಡೆದು ವಿಜಯನಗರದ ಸೈನ್ಯದಲ್ಲಿ ದುಡಿದು ಮುಂದೆ ಅದೇ ಸೈನಿಕರಿಂದ ಬೇಡ ಜನಾಂಗದ ಯುವಕರು ನೇಮಿಸಲ್ಪಟ್ಟ ಪಾಳೆಯಗಾರನಾಗಿದ್ದನು.

ದಾದಯ್ಯ ವಿಜಯನಗರದ ಸೈನ್ಯದಲ್ಲಿದ್ದ ಬೇಡನಾಯಕರ ಗುಂಪನ್ನು ಕಟ್ಟಿಕೊಂಡು, ಕುದುರೆದಳ, ಆನೆದಳ, ಸೈನ್ಯದಳ ಹೀಗೆ ಪ್ರತಿಯೊಂದಕ್ಕೂ ದಳಪತಿಗಳನ್ನು ನೇಮಿಸಿಕೊಂಡು ಸೈನ್ಯವನ್ನು ಬಲಪಡಿಸುತ್ತಾ ಆಡಳಿತದಲ್ಲಿ ಸುಧಾರಣೆಯನ್ನು ತಂದು, ಪ್ರಬಲ ಪಾಳೆಯಗಾರನೆನಿಸಿ, ತನ್ನ ವ್ಯಾಪ್ತಿಯನ್ನು ಕೋಗಳಿ, ನೀಲಗುಂದ, ಕಾನಹಳ್ಳಿಯವರೆಗೆ ವಿಸ್ತರಿಸಿ, ತನ್ನ ವ್ಯಾಪ್ತಿಗೆ ಸುಮಾರು ೪೦೦ ಹಳ್ಳಿಗಳನ್ನು ಸೇರಿಸಿಕೊಂಡು ಪ್ರತಿವರ್ಷ ಎಂಟು ಲಕ್ಷ ರೂಪಾಯಿಗಳ ಆದಾಯ ಬರುವಂತೆ ಮಾಡಿಕೊಂಡು ಆರ್ಥಿಕವಾಗಿ ಪ್ರಬಲನಾದನು. ತನ್ನ ಆಡಳಿತದಲ್ಲಿ ಮೊದಲು ಹರಪನಹಳ್ಳಿ ಎರಡು ಕೆರೆಗಳನ್ನು ಮತ್ತು ಕೋಟೆಯನ್ನು ಸುಭದ್ರಗೊಳಿಸಿ ಸುತ್ತಲೂ ಕಂದಕಗಳನ್ನು ನಿರ್ಮಿಸಿದನು. ಇವನ ಕಾಲದಲ್ಲಿ ಅನೇಕ ಕೆರೆಬಾವಿಗಳನ್ನು ನಿರ್ಮಾಣಮಾಡಿ ಕೃಷಿಗೆ ಹೆಚ್ಚು ಪ್ರಾಧಾನ್ಯತೆ ನೀಡುವ ಮೂಲಕ ಜನಮನ್ನಣೆ ಗಳಿಸಿದನು. ಚಿತ್ರದುರ್ಗದ ಪಾಳೆಯಗಾರ ಮತ್ತು ತಿಮ್ಮಣ್ಣನಾಯಕ ಆಡಳಿತ ನಡೆಸುತ್ತಿದ್ದಾಗ ಬಸವಾಪಟ್ಟಣದ ಕೆಂಗಣ್ಣನಾಯಕ ಚಿತ್ರದುರ್ಗದ ಕೋಟೆಯನ್ನು ದುರ್ಬಲಗೊಳಿಸಲು ಮುತ್ತಿಗೆ ಹಾಕಿದನು. ಈ ಸಮಯದಲ್ಲಿ ಶೌರ್ಯಕ್ಕೆ ಹೆಸರಾಗಿದ್ದ ಈ ಪಾಳೆಯಗಾರನ ಸಹಾಯಯಾಚಿಸಿದಾಗ, ದಾದಯ್ಯ ಸಮಾಲೋಚಿಸಿ ತನ್ನ ಸೈನ್ಯದೊಂದಿಗೆ ಧಾವಿಸಿ ಕೆಂಗಣ್ಣನಾಯಕನನ್ನು ಸೋಲಿಸಿ, ಆಪತ್ತಿನಿಂದ ಪಾರುಮಾಡಿ ವಿಜಯಸಾಧಿಸಿದ ದಾದಯ್ಯನಿಗೆ, ತಿಮಣ್ಣನಾಯಕ ತನ್ನ ಮಗಳಾದ ಹೊನ್ನನಾಗತಿಯನ್ನು ಕೊಟ್ಟು ವಿವಾಹ ಮಾಡಿದನು. ಅಳಿಯನಿಗೆ ಬಳುವಳಿಯಾಗಿ ಉಚ್ಚಂಗಿದುರ್ಗ ಮತ್ತು ಚಿತ್ರದುರ್ಗದ ಕೆಲವು ಹಳ್ಳಿಗಳನ್ನು ಕೊಟ್ಟನು. ಹೊನ್ನನಾಗತಿ ಆಕಸ್ಮಿಕ ಮರಣಕ್ಕೆ ತುತ್ತಾಗಿ ಸಾವನ್ನಪ್ಪಿದ ನಂತರ ಪ್ರಜೆಗಳ ಒತ್ತಾಯದ ಮೇರೆಗೆ, ಜರಿಮಲೆ ಪಾಳೆಯಗಾರನ ಮಗಳು ಚಂಪಾನಾಗತಿ, ಗುಡೇಕೋಟೆಯ ಪಾಳೆಯಗರನ ಮಗಳು ಬರ್ಮಾನಾಗತಿ, ಬಿಳಿಚೋಡ ಮಾಂಡಲೀಕನ ಮಗಳು ಹನುಮನಾಗತಿಯರನ್ನು ಮದುವೆಯಾದನು. ಈತನು ಹರಪನಹಳ್ಳಿ ತಾಲೂಕು ದೇವರ ತಿಮ್ಮಲಾಪುರದಲ್ಲಿ ಶ್ರೀ ವೆಂಕಟರಮಣನ ದೇವಸ್ಥಾನವನ್ನು ತನ್ನ ಆಡಳಿತದ ಕೊನೆಯಲ್ಲಿ ನಿರ್ಮಿಸಿದನು ಎಂದು ಹೇಳಬಹುದು. ಮತ್ತು ಹಡಗಲಿ ತಾಲೂಕು ಮದಲ ಗಟ್ಟಿಗ್ರಾಮ(ಹೂವಿನಹಡಗಲಿ)ದಲ್ಲಿ ಈತನ ಪ್ರತಿಮೆ ಇದೆ ಎಂದು ವಿದ್ವಾಂಸರ ಅಭಿಪ್ರಾಯವಾದರೆ, ಆ ಪ್ರತಿಮೆ ಈತನದೇ ಎನ್ನಲು ಯಾವುದೇ ಆಧಾರಗಳಿಲ್ಲ. ಇವನಿಗೆ ವಿಜಯನಗರದ ಅರಸರು ಮಾನ್ಯ ಮಾಡಿದಂಥ ಬಿರುದುಗಳು ಮನ್ಮಹಾಚಾರ್ಯ, ಭಾಷೆಗೆ ತಪ್ಪದನಾಯಕರ ಗಂಡ, ಮೊರೆ ಹೊಕ್ಕವರ ಕಾಯ್ವ, ಮಾರಾಂತರಗೆಲುವ, ಇತ್ಯಾದಿಗಳಿಂದ ಕರೆದಿದ್ದಾರೆ. ಈತನ ಕೊನೆ ೧೫೯೩ ವರೆಗೆ ಎಂದು ಹೇಳಲಾಗಿದೆ. ಈತನ ಒಂದು ಶಾಸನ ಹೀಗೆ ಉಲ್ಲೇಖವಾಗಿದೆ.

ಶಾಲಿವಾಹನ ಶಕ ೧೫೦೨ ವಿಕ್ರಮ ಸಂವತ್ಸರದ ಮಾರ್ಗಶಿರಬಹುಳ ೧೧ರಲ್ಲು ರಾಜಕುಮಾರ ತಿಮ್ಮರಾಜ ಅರಸುಗಳು, ಆನೆಗೊಂದಿಯ ಪಟ್ಟಣದ ರತ್ನಸಿಂಹಾಸನಾರೂಢನಾಗಿ ಆಳುತ್ತಿದ್ದಾಗ, ಶ್ರೀಮನ್ಮಹಾನಾಯಕಾಚಾರ್ಯ, ಭಾಷೆಗೆತಪ್ಪದನಾಯಕರಗಂಡ, ಮೊರೆಹೊಕ್ಕವರ ಕಾಯ್ವ, ಮಾರಾಂತರ

[illegible]

ಗೆಲುವ ಬಾಗಳಿಯ ಮಾಚಿನಾಯಕರ ಮಕ್ಕಳು ದಾದಾನಾಯಕರು ಕೊಟ್ಟೂರು ಸೀಮೆಯ ಕುರುಬ ಕುಲದ ಸಿದ್ಧಪ್ಪ ಒಡೆಯರು, ಮೊದಲಾದವರಿಗೆ ಕೊಡುವಂಥ ಕುರಿದೆರಿಗೆಯನ್ನು ಶ್ರೀ ಬಾಗುಳಿಯ ಕಲ್ಲಿನಾಥದೇವರ ಸನ್ನಿಧಿಯಲ್ಲಿ ತಮ್ಮ ಗುರುಸ್ವಾಮಿಗೂ ತಮ್ಮ ಮಾತಾಪಿತೃಗಳಿಗೂ ಅಧಿಕಪುಣ್ಯ ಆಗಬೇಕೇಂದು, ಕುರಿತೆರಿಗೆಯನ್ನು ಮನ್ನಾಮಾಡಿ ಧರ್ಮಶಾಸನ ಬರೆಸಿಕೊಟ್ಟರು ಎಂದು ಉಲ್ಲೇಖವಾಗಿದೆ.[೧೦೩]

ಹೀಗೆ ವಿಜಯನಗರದ ಸೈನ್ಯದಲ್ಲಿ ಹರಪನಹಳ್ಳಿ ಹಾಗೂ ಹೊಸಪೇಟೆಯ ಬೇಡ ಜನಾಂಗದವರು ಸುಮಾರು ೨೦೦ ವರ್ಷಗಳ ಕಾಲ ಸೇವೆ ಸಲ್ಲಿಸುತ್ತ ಬಂದಿದ್ದ ಸೈನಿಕರಾಗಿದ್ದರು. ಯುದ್ಧದ ನಂತರ ಅಳಿದುಳಿದ ಬೇಡ ಜನಾಂಗದ ನಾಯಕರುಗಳಲ್ಲಿ ಒಬ್ಬನಾದ ಸೈನಿಕ ದಾದಯ್ಯ. ಸೈನ್ಯದಿಂದ ಹೊರಬಂದು ಸ್ವತಂತ್ರವಾದ ಸೈನ್ಯಪಡೆಯನ್ನು ಕಟ್ಟಿಕೊಂಡು ಜನತೆಯ ವಿಶ್ವಾಸದಿಂದ ಪ್ರಥಮ ಪಾಳೆಯಗಾರನೆಂದು ಕರೆಯಲ್ಪಟ್ಟನು. ಕೆಳದಿನೃಪವಿಜಯದಲ್ಲಿ ಮೊದಲ ದೊರೆ ದಾದಾನಾಯಕ ಎಂಬುದಾಗಿ ವಿವರ ನೀಡುತ್ತದೆ.

ರಂಗನಾಯಕ (ರಂಗಣ್ಣನಾಯಕ) : ಈತ ದಾದಾನಾಯಕನ ಮೂರನೆ ಹೆಂಡತಿಯ ಮಗನಾಗಿರಬಹುದು. ಏಕೆಂದರೆ ದಾದಾನಾಯಕನಿಗೆ ನಾಲ್ಕು ಜನ ಪತ್ನಿಯರಲ್ಲಿ ಯಾರ ಮಗ ಎಂದು ಸ್ಪಷ್ಟವಾಗಿ ಹೇಳುವುದು ಸ್ವಲ್ಪ ಕಠಿಣ. ಇವನು ೧೫೯೨ರಿಂದ ೧೬೧೬ವರೆಗೆ ಆಳ್ವಿಕೆ ಮಾಡಿದನೆಂದು ಕಂಡುಬರುತ್ತದೆ.[೧೦೪] ತಂದೆಯಂತೆ ಧೈರ್ಯಶಾಲಿಯಾಗಿದ್ದನು. ಯುದ್ಧಗಳಲ್ಲಿ ತಂದೆಗೆ ಸಹಕರಿಸುತ್ತಾ ರಾಜ್ಯವನ್ನು ಪೂರ್ವಕ್ಕೆ ಕೊಟ್ಟೂರಿನವರೆಗೂ ವಿಸ್ತರಿಸಿದನು. ಇಪ್ಪತ್ನಾಲ್ಕು ವರ್ಷಗಳ ಕಾಲ ರಾಜ್ಯವಾಳಿದ ಇವನು ಹೆಚ್ಚು ಜನಪರ ಕೆಲಸಗಳನ್ನು ಮಾಡಿಸಿ, ದೇವಾಲಯಗಳು, ಕೆರೆಗಳನ್ನು ಕಟ್ಟಿಸಿದನು. ಈತನು ಸಹ ದೇವರ ತಿಮ್ಮಲಾಪುರದಲ್ಲಿ ತಂದೆಯೊಂದಿಗೆ, ಆಡಳಿತ ವಿಷಯಗಳಲ್ಲಿ ಭಾಗವಹಿಸಿದ್ದನು. ಇವರಿಬ್ಬರ ನೆನಪಿಗೆ ಹರಪನಹಳ್ಳಿ ಪಕ್ಕದ ದೇವರ ತಿಮ್ಮಲಾಪುರದಲ್ಲಿ ಕಲ್ಲಿನ ವಿಗ್ರಹಗಳನ್ನು ಸ್ಥಾಪನೆಮಾಡಿದ್ದಾರೆ. ಇವರ ಹೆಸರಿನಲ್ಲಿ, ಅಲ್ಲಿ ಇಂದಿಗೂ ತಿಮ್ಮಲಾಪುರ ಜಾತ್ರೆಯಾಗುತ್ತದೆ. ಇವರು ನಾಯಕ ಜನಾಂಗದವರಾದರೂ ಈ ದೇವರಿಗೆ ಹೆಚ್ಚಾಗಿ ಬ್ರಾಹ್ಮಣ ಜನಾಂಗದವರು ನಡೆದುಕೊಳ್ಳುತ್ತಾರೆ. ರಂಗನಾಯಕನು ಜರಿಮಲೆ ಪಾಳೆಯಗಾರರ ಮಗಳಾದ ಚಂಪಾನಾಗತಿಯನ್ನು ಮದುವೆಯಾಗಿದ್ದನು.

ಹಿರಿಯ ಬಸವಂತ ನಾಯಕ : ಇವನು ಮುಮ್ಮಡಿ ಬಸಪ್ಪನಾಯಕನ ಚಿಕ್ಕ ಸೋದರ. ಅಂದರೆ ರಂಗರಾಜನ ಮಗ ಕುಮಾರಬಸಪ್ಪ. ಇವನ ಮಗ ಕುಮಾರ ಮುಮ್ಮಡಿ ಬಸಪ್ಪನಾಯಕನ ಸೋದರ ಎಂದು ಹೇಳಬಹುದಾಗಿದೆ.[೧೦೫] ಈತನಿಗೆ ಬಸಪ್ಪನಾಯಕನೆಂತಲೂ ಕರೆದಿರುವರು. ಇವನ ಕಾಲ ೧೬೮೨ ಎಂದು ಗೆಸಿಟಿಯರ್ ನಲ್ಲಿ ಹೇಳಲಾಗಿದೆ.[೧೦೬] ಆದರೆ ಈ ನಾಯಕ ವೀರಶೈವನಾದುದು ಕುತೂಹಲಕಾರಿ.

ಫ.ಗು ಹಳಕಟ್ಟಿಯವರು ಬರೆದ 'ಸಾರಂಗ ಮಠಾಧೀಶ್ವರರು' ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ. ಶಿವಸಂಗಪ್ಪಯ್ಯ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಗ್ರಾಮಕ್ಕೆ ಕರೆಯಿಸಲ್ಪಟ್ಟ. ಬಾಳೆಹಳ್ಳಿ ಸಂಸ್ಥಾನಾಧಿಪತಿಗಳಿಂದ ಚನ್ನವೀರಸ್ವಾಮಿ ಪರ್ವತ ಸಿಂಹಾಸನಾಧಿಪತಿಗಳಿಂದ ವೀರಭೀಕ್ಷಾವರ್ತಿಗಳಿಂದ (ಸ್ವಾಮಿ) ಈ ಮೂವರು ವೀರಮುಮ್ಮಡಿನಾಯಕ, ಮುಮ್ಮಡಿನಾಯಕ, ಬಸವಂತನಾಯಕರು, ಹರಪನಹಳ್ಳಿ ಸಂಸ್ಥಾನದ ಮೇರೆಗೆ ವೀರಶೈವ ದೀಕ್ಷೆಯನ್ನು ಪಡೆದರು. ಆಗ ಬಸವಂತನಾಯಕ ತನ್ನ ಹೆಸರನ್ನು ಕೊಟ್ರಪ್ಪನೆಂದು ಬದಲಾಯಿಸಿಕೊಂಡನು. ಈ ಮೂವರೂ ಶಿವಸಂಗಪ್ಪನಿಗೆ ಒಂದು ಮಠವನ್ನು ಉಜ್ಜನಿಯಲ್ಲಿ ಕಟ್ಟಿಸಿದರು. ಇದಕ್ಕೆ 'ಹಂಚಿನಮಠ' ಎಂದು ಹೆಸರಿದೆ. ಉಜ್ಜನಿ ಗ್ರಾಮದ ಸರಕಾರಿ ದಾಖಲೆಗಳಲ್ಲಿ ಇದು ನಮೂದಿತವಾಗಿದೆ. ಇವರಿಗೂ ಮತ್ತು ಕೆಳದಿ ಪಾಳೆಯಗಾರರಿಗೂ ವಿಶೇಷ ಸ್ನೇಹವಿತ್ತು.[೧೦೭] ಈ ಸ್ನೇಹವೇ ಹರಪನಹಳ್ಳಿ ನಾಯಕರಾದ ಇವರಿಗೆ ವೀರಶೈವ ದೀಕ್ಷೆ ಪಡೆಯಲು ಕಾರಣವಾಗಿರಬೇಕೆಂಬ ಅಭಿಪ್ರಾಯವಿದೆ.[೧೦೮]

ಆಡಳಿತದಲ್ಲಿ ಕುಶಲನಾದ ಕೊಟ್ರಪ್ಪನಾಯಕ ವೀರಶೈವ ಧರ್ಮಕ್ಕೆ ಪ್ರಾಶಸ್ತ್ಯ ನೀಡಿದನು. ಮುಮ್ಮಡಿ ನಾಯಕನು ಬಿಜಾಪುರದ ನವಾಬರ ಅವಲಂಬನೆಯನ್ನು ಕಡಿಮೆ ಮಾಡಿ, ಪ್ರಾಬಲ್ಯ ಹೊಂದುತ್ತಿದ್ದ ಮರಾಠರಿಗೆ, ಶಿವಾಜಿಯು ಸಿಂಹಾಸನ ರೂಢನಾದ ನಂತರ ಇವರೊಂದಿಗೆ ಹೋರಾಡಿ ಗೆಲ್ಲುವುದು ಅಸಾಧ್ಯವೆನಿಸಿ ರಾಜಿ ಮಾಡಿಕೊಂಡು ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಾ ಮರಾಠರ ಆಡಳಿತದಲ್ಲಿ ರಾಜ್ಯಭಾರ ನಡೆಸಿದನು. ಪ್ರಾಯಹಃ ಈತನ ಕಾಲಕ್ಕೆ ದಾದಯ್ಯನ ರಕ್ತ ಸಂಬಂಧಿಗಳು ಕೊನೆಗೊಂಡಿರಬಹುದು.

ಎರಡನೆಯ ವೀರಬಸಪ್ಪನಾಯಕ (೧೬೮೮-೯೦) : ಹರಪನಹಳ್ಳಿ ಪಾಳೆಯಗಾರರಲ್ಲಿ ಹೆಚ್ಚು ಪರಾಕ್ರಮಿಯೂ, ದಕ್ಷ ಆಡಳಿತಗಾರನೂ, ಆದ ಮೊದಲ ಸೋಮಶೇಖರನಾಯಕನಿಗೆ, ಇದ್ದೊಬ್ಬ ಮಗನು ಮಡಿದ ನಂತರ ನೋವನ್ನು ಅನುಭವಿಸುತ್ತಿರುವ ಇವನ ಹೆಂಡತಿ ಸೋಲನ್ನನುಭವಿಸುತ್ತಿರುವುದನ್ನು ಕಂಡು ತನ್ನ ಹತ್ತಿರದ ಸಂಬಂಧಿಯ ಮಗನಾದ ಅಡವಿಬೊಮ್ಮಣ್ಣ ನನ್ನು ದತ್ತು ಪಡೆದುಕೊಂಡಳು. ಅವನಿಗೆ ಅರಸಪಟ್ಟ ಕಟ್ಟಿಸಿದ ಮೇಲೆ ವೀರಬಸಪ್ಪನೆಂದು ಕರೆದರು. ಇವನೇ ಎರಡನೆಯ ವೀರಬಸಪ್ಪನಾಯಕ. ಈತ ಬಹುಕಾಲ ಬದುಕಲಿಲ್ಲ.

ಇವನು ನಾರಾಯಣದೇವರಕೆರೆಯ ಜೋಯಿಸರಿಗೆ ಪ್ರಶ್ನೆ ಹೇಳಿದ್ದಕ್ಕೆಂದು ಬಂದು ಭೂಮಿಯನ್ನು ಕೊಟ್ಟನೆಂದು ಒಂದು ಶಾಸನದಲ್ಲಿದೆ. (ಈ ಭೂಮಿ ಡಣಾಯಕನ ಕೆರೆಯ ಹಿಂದಿನ ಭಾಗ) ಈ ಅರಸ ದುರ್ಬಲನಾದ ಸಮಯವನ್ನರಿತು ಇವನ ದಳವಾಯಿ ಬಸವನಾಯಕ ದಂಗೆ ಎದ್ದನು. ಇದನ್ನು ಸಹಿಸಲಾರದೆ ಸೋಮ್ಮಮಾಜಿಯು ತಾನೇ ಸ್ವತಃ ಸೈನ್ಯದೊಡನೆ ದಂಡೆತ್ತಿ ಹೋಗಿ ಸೋಲಿಸಿದಳು. ಹೇಡಿಯಾದ ಇವನು ಗತಿಸಿದ ನಂತರ ಸೋಮಮ್ಮಾಜಿ ಬಸಪ್ಪನಾಯಕನನ್ನು ನೇಮಿಸಿದಳು.

ಎರಡನೆಯ ಬಸವಂತನಾಯಕ : ಈತನು ಜನಮನ್ನಣೆ ಪಡೆದ ನಾಯಕ ದಯಾಶೀಲ, ನಂಬಿಕೆಯ ಪಾಳೆಯಗಾರನಾಗಿದ್ದನು. ಬಳ್ಳಾರಿ ಜಿಲ್ಲಾ ಗೆಜಿಟಿಯರ್‌ನಲ್ಲಿ ಈತನ ಕಾಲ ೧೭೧೫-೨೧ ಎಂದಿದೆ. ಆದರೆ ವಿದ್ವಾಂಸರು ೧೭೧೫-೧೬ ಎಂದು ಉಲ್ಲೇಖಿಸಿದ್ದಾರೆ.[೧೦೯] ಮತ್ತು ಕೆಳದಿನೃಪವಿಜಯದಲ್ಲಿ ೧೬೩೭-೩೮ ಎಂದಿದೆ. ಪ್ರಾಯಶಃ ಇದೇ ಕಾಲವಾಗಿರಬೇಕು, ಈತನ ಆಳ್ವಿಕೆ. ಏಕೆಂದರೆ ಬಾಗಳಿಯ ನಾಯಕರು ಎಂದು ಗುರುತಿಸಲಾದ ಪಾಳೆಯಗಾರರ ಕಾಲ ೧೭೦೯ರಲ್ಲಿ ಕೊನೆಗೊಳ್ಳುತ್ತದೆ. ಆದ್ದರಿಂದ ಶಾ.ಕ.೧೬೩೭-೩೮ ಆಗಿರಬೇಕು. ಇವುಗಳಿಂದ ಈತನ ಕಾಲಾವಧಿ ಒಂದು ವರ್ಷವೆಂದು ಗೊತ್ತಾಗುತ್ತದೆ. ಇವನು ಊರಿಂದ ಊರಿಗೆ ಸಂಚರಿಸುವ ಪ್ರಯಾಣಿಕರಿಗೆ, ಪ್ರವಾಸಿಗರಿಗೆ, ಬಾಯಾರಿಕೆಯನ್ನು ಇಂಗಿಸಲು ಹರಪನಹಳ್ಳಿ ಪಟ್ಟಣದ ರಸ್ತೆಗಳಲ್ಲಿ, ಬೇವಿನ ಮರಗಳಿದ್ದ ಕಟ್ಟೆಗಳ ಮೇಲೆ ಅರವಟ್ಟಿಗೆಗಳನ್ನು ಸ್ಥಾಪಿಸಿದನು. ಇವನ ನಂತರ ಮೊದಲ ವೀರಬಸಪ್ಪನಾಯಕ, ಎರಡನೆಯ ವೀರಬಸಪ್ಪನಾಯಕ, ಬಸಪ್ಪನಾಯಕರು ಕಂಡುಬರುತ್ತಾರೆ. ಇವನನ್ನು ಬಾಗಳಿ ಬಸಪ್ಪನಾಯಕ ಎಂದು ಕುಂಬಾಸ ಹೇಳಿದ್ದಾರೆ.[೧೧೦] ಆದರೆ ಇವನು ಒಂದು ವರ್ಷದ ಅವಧಿಯಲ್ಲಿ ಈತ ಬಾಗಳಿ ಬಸಪ್ಪ ಆಗಲಾರನೆನ್ನಬಹುದು. ಏಕೆಂದರೆ ಬಳ್ಳಾರಿ ಜಿಲ್ಲಾ ಶಾಸನಸಂಪುಟದಲ್ಲಿ ಬಾಗಳಿ ಬಸಪ್ಪನಾಯಕ ಅಥವಾ ಬಸವಪ್ಪನಾಯಕ ಎಂದು ಉಲ್ಲೇಖವಾಗಿದೆ. ಕಾಲದ ವಿವರವೂ ಕೂಡ ಉಲ್ಲೇಖವಾಗಿದ್ದು, ವ್ಯತ್ಯಾಸವಾಗುತ್ತದೆ. ಇಲ್ಲಿ ಇವನ ಕಾಲ ೧೬೩೭ ಎಂದಿದ್ದರೆ, ಅದರಲ್ಲಿ ೧೫೦೦ ನಂತರದ ಕಾಲವನ್ನು ಗುರುತಿಸಲಾಗಿದೆ. ಕೆಳದಿ ನೃಪವಿಜಯದಲ್ಲಿ ಬಾಗಳಿ ಬಸಪ್ಪನಾಯಕ ಎಂದು ಬರುತ್ತದೆ. ಕಾಲದ ವಿವರಬರುವುದಿಲ್ಲ. ಕೂಡ್ಲಿ ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹದಲ್ಲಿ ಬಾಗಳಿ ಬಸಪ್ಪನಾಯಕ ಎಂದು ಮಾತ್ರ ಉಲ್ಲೇಖವಾಗಿದೆ.[೧೧೧]ಎಲ್ಲಿಯೂ ಸ್ಪಷ್ಟವಾದ ಕಾಲದ ಮಾಹಿತಿಯೊಂದಿಗೆ ಬಾಗಳಿ ಬಸಪ್ಪನಾಯಕ ಇವನೆಂದು ತಿಳಿದುಬರುವುದಿಲ್ಲ. ಎಲ್ಲಿಯೂ ಬಾಗಳಿ ಬಸಪ್ಪನಾಯಕನ ವಿಶೇಷವೇನೂ ಕಂಡುಬರುವುದಿಲ್ಲ.

ಹೀಗೆ ಒಂದು ವರ್ಷದ ಅವಧಿಯಲ್ಲಿ ಸಾಮಾಜಿಕ ಕಾರ್ಯಗಳನ್ನು ಮಾಡಿ, ಜನರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಇಟ್ಟುಕೊಂಡ ನಾಯಕನಾಗಿದ್ದನು. ಇವನ ಮರಣದ ನಂತರ ಬಸಪ್ಪನಾಯಕ ಆಳ್ವಿಕೆಗೆ ಬಂದಿರಬಹುದಾಗಿದೆ. ಮತ್ತೆಲ್ಲೂ ಇವನ ಉಲ್ಲೇಖಗಳು ಕಂಡುಬರುವುದಿಲ್ಲ.

ಬಸವಪ್ಪನಾಯಕ : ಇವನನ್ನು ಶಾಸನಗಳಲ್ಲಿ ಬಾಗುಳಿ ಬಸಪ್ಪ ಎಂದು ಕರೆಯಲಾಗಿದೆ. ಈ ಶಾಸನದಲ್ಲಿ ಈತನನ್ನು ಶ್ರೀಮನ್ಮಹಾನಾಯಕಾಚಾರ್ಯ, ಭಾಷೆಗೆತಪ್ಪುವನಾಯಕರಗಂಡ, ಮರೆಹೊಕ್ಕರೆಕಾಯ್ವ, ಮಾರಾಂತರ ಗೆಲುವ ಬಾಗಳಿಬಸವಪ್ಪನಾಯಕ ಎಂದು ಉಲ್ಲೇಖಿಸುತ್ತದೆ.[೧೧೨] ಇವನು ಸುಬೇದಾರ ರಂಗಪ್ಪರಿಗೆ, ರಾಜ್ಯಕ್ಕೆ ಆದಾಯ ಬರುವ ಹಾಗೆ ಮಾಡಬೇಕೆಂದು ಮತ್ತು ಉಳಿದ ಅರಸರೊಂದಿಗೆ ಬಾಗಳಿ

ಸಂಸ್ಥಾನವು ಉತ್ತಮ ಸಂಬಂಧವುಂಟಾಗುವಂತೆ ಮಾಡಿದ್ದರಿಂದ ಬಾಗಳಿ ಬಸಪ್ಪನಾಯಕನು ಗಡಿನಿಜಾಪುರ ಗ್ರಾಮವನ್ನು ದಾನವಾಗಿ ನೀಡುತ್ತಾನೆ. ಇದರ ಜೊತೆಗೆ ಹಾರುಕನಾಳು ಗ್ರಾಮವನ್ನು ಸೇರಿಸಿಕೊಳ್ಳುತ್ತಾನೆ. ಕಸವನಹಳ್ಳಿಯ ಶಾಸನವೊಂದರಲ್ಲಿ[೧೧೩] ಬಾಗಳಿ ಬಸವಪ್ಪನಾಯಕನು ಕಸವನಹಳ್ಳಿಪುರವರ್ಗವು ಹಾಳು ಬಿದ್ದುದ್ದನ್ನು ಸರಿಪಡಿಸಿ ಜೀರ್ಣೋದ್ಧಾರ ಮಾಡಿ, ಗಿರಿಮಲ್ಲಪ್ಪನ ಮೊಮ್ಮಗ ಹಾಗೂ ಬಸವಯ್ಯನ ಮಗನಾದ ತಿರುಕಪ್ಪನಿಗೆ ಭೂದಾನ ನೀಡುತ್ತಾನೆ. ಅರಸಿಕೆರೆಯ ಶಾಸನದಲ್ಲಿ[೧೧೪] ರಾಮದೇವರಾಯರ ಕೂಮರರ ಬಗುಳಿ ಬಸವಪ್ಪನಾಯಕ ಅಯ್ಯನವರು ಅರಸೀಕೆರೆ ಮುರಿಗೆಯ ಮಗ ಬಸವಯಗೆರಾವುತ ವೃತ್ತಿಗಾಗಿ ಕೊಟ್ಟ ಅರಸರ ಮರದ ಪೆಟ್ಟಿಗೆ ಎಂದು ಉಲ್ಲೇಖ ಬರುತ್ತದೆ. ಅಂದರೆ ಬಾಗಳಿಬಸಪ್ಪನು, ಸಾಂತರ ಮಗ ಮಲ್ಲಣ್ಣನ ವಿದ್ಯಾದಾನಕ್ಕೆ ದಾನವನ್ನು ನೀಡುತ್ತಾನೆ. ಹಗರಿಗಜಾಪುರದ ಒಂದು ಶಾಸನದಲ್ಲಿ ಈತನನ್ನು 'ಕಲಿಯುಗದ ಬೋಜ' ಎಂದು ಸಂಭೋದಿಸಲಾಗಿದೆ. ಇವನು ಕೆಳದಿಯ ಅರಸರ ಜೊತೆ ಹೆಚ್ಚು ಸ್ನೇಹ ಹೊಂದಿದ್ದನು. ಚಿತ್ರದುರ್ಗ ನಾಯಕರೊಂದಿಗೆ ಯುದ್ದ ಸಂಬಂಧ ಹೊಂದಿ, ಬರಮಣ್ಣ ನಾಯಕನೊಡನೆ ಹೆಚ್ಚು ಹೋರಾಟ ಮಾಡಿದನು. ಚಿಂತಕಲ್ಲಿನ ಬಿಳಿಚೋಡಿನ ನಾಯಕರೊಂದಿಗೆ, ಹೋರಾಡಿ ದುರ್ಗವನ್ನು ಅವರಿಂದ ವಶಪಡಿಸಿಕೊಂಡುದುದನ್ನು. ಬರಮಣ್ಣನಾಯಕ ಸಹಿಸದೆ ಹರಪನಹಳ್ಳಿಯ ಕೋಟೆಯನ್ನು ವಶಪಡಿಸಿಕೊಂಡನು. ಇವನ ತೊಂದರೆ ಸಹಿಸದ ಬಸಪ್ಪನಾಯಕ ದೈನ್ಯದಿಂದ ಸಹಾಯವನ್ನು ಪ್ರಾರ್ಥಿಸಿದ ಮೇರೆಗೆ ಕೆಳದಿ ಸೋಮಶೇಖರ ನಾಯಕನು ಹರಪನಹಳ್ಳಿಯ ಸಂಸ್ಥಾನವನ್ನು ಉದ್ಧಾರಮಾಡಲು ಗುರುವಪ್ಪ ಮಂತ್ರಿಯೊಡನೆ ಸೈನ್ಯವನ್ನು ಕಳುಹಿಸಿ ಭರಮನಾಯಕನ ಸೊಕ್ಕನ್ನು ಅಡಗಿಸಿ ಕೋಟೆಯನ್ನು ವಶಪಡಿಸಿಕೊಂಡು ಬಸಪ್ಪನಾಯಕ ಪ್ರಖ್ಯಾತಿಯನ್ನು ಹೆಚ್ಚಿಸಿಕೊಂಡನು.

ಕೆಳದಿ ನೃಪವಿಜಯದಲ್ಲಿ[೧೧೫] ''ಹರಪನಹಳ್ಳಿ ಬಸವಪ್ಪನಾಯಕ ಪರಿಸ್ತರಣಗಳಂ ಕೊಂಡು ರಾಜ್ಯಂಗಳನಾ ಕ್ರಮಿಸುತ್ತಂ ಮಿಕ್ಕಮೀರಿ ಕೈಗೆಯುತ್ತಂ ಬರಲಾಭರಮನಾಯಕನ ದಟನಾಂ ಪೊಡಶಕ್ಯಮಾಗಿ ಹರಪನಹಳ್ಳಿ ಬಾಗುಳಿ ಬಸವಪ್ಪನಾಯಕ, ದೈನೋಕ್ತಿಯಿಂ, ರಾಯಸಮಂ ಬರೆದು ಕಳುಪಿ ತಮ್ಮ ಸಂಸ್ಥಾನ ಮನುದ್ಧರಿ ಸುವೇಳ್ಕೆಂದು, ಪೇಳಿಸಲಂತಾಗಲೆಂದು ಗುರುವಪ್ಪ ಮಂತ್ರಿಯೊಡನೆ ಸಂಖ್ಯಾತನಾದ ಸೈನ್ಯಮಂ ತೆರಳ್ಚಿಕಳುಹಿ, ಯುದ್ದರಂಗದೊಳಾ ಭರಮನಾಯಕ ಪರಾಕ್ರಮಾತಿಶಯಂ, ಮುರಿದಾ ಪರಿಸ್ತರಣಗಳಂ ಕೊಂಡು, ಬಸವಪ್ಪ ನಾಯಕಂಗಿತ್ತು, ಪರಮ ಪ್ರಖ್ಯಾತಿಯಂ ಪಡೆದಂತಿರುತ್ತಮಿರಲ್ ....೧'' ಎಂದು ಬರುತ್ತದೆ. ಪ್ರಾಚೀನ ಶಾಸನ ಲೇಖನಗಳ ಸಂಗ್ರಹದಲ್ಲಿ ಈತನ ಎರಡು ಶಾಸನಗಳು ಬರುತ್ತವೆ.[೧೧೬] ಇವುಗಳಲ್ಲಿ ಕಾಲದ ವ್ಯತ್ಯಾಸ ಕಂಡುಬರುತ್ತದೆ. ಆದರೂ ಇವನನ್ನು ಗುರುತಿಸಿ ಹೇಳಲಾಗಿದೆ. ಹೀಗೆ ದಕ್ಷ ಆಡಳಿತ ಗಾರನಾಗಿದ್ದು, ದಕ್ಷ ಅಂಗರಕ್ಷಕರನ್ನು ಹೊಂದಿದ್ದನು. ಇವನ ಅಂಗರಕ್ಷಕ ಪವಾಡ ಪುರುಷನಾಗಿದ್ದನು. ಪವಾಡ ಪುರುಷ ಎನ್ನುವುದಕ್ಕೆ ಒಂದು ಚಿಕ್ಕ ಕಥೆಯನ್ನು ನೋಡಬಹುದು.

ಒಮ್ಮೆ ಇಟಗಿಗ್ರಾಮ(ಹೂ.ಹಡಗಲಿ ತಾ)ದಲ್ಲಿ ಒಂದು ದಿನ ತೋಟದ ಹೊಲವೊಂದರಲ್ಲಿ ಕಬ್ಬಿಣದ ನೇಗಿಲಿನಿಂದ ಇಬ್ಬರು ಹೊಲ ಹೂಳುತ್ತಿದ್ದರು. ಇವರಿಗೆ ಚಿಕ್ಕಹುಡುಗರು(ತಮ್ಮ ಮಕ್ಕಳು) ಈ ವ್ಯಕ್ತಿಗಳಿಗೆ ಉಣಲು ಬುತ್ತಿ ತಂದು, ಬಾವಿಬಳಿ ಮರದ ನೆರಳಿನಲ್ಲಿ ಆ ಬುತ್ತಿಯನ್ನು ಇಟ್ಟು, ಆ ಹುಡುಗರು ಬೇರೊಂದು ಕಡೆ ಆಟವಾಡುತ್ತ ಕುಳಿತವು. ಪಕ್ಕದ ಗ್ರಾಮದಿಂದ ಇಬ್ಬರು, ಆ ತೋಟಕ್ಕೆ ಮಾರ್ಗ ಮದ್ಯದಿಂದ ಹಾಯ್ದು ಹೋಗುವಾಗ, ನೆರಳಲ್ಲಿ ಕುಳಿತ ಆ ಹುಡುಗರನ್ನು ನೋಡಿ, ಹಸಿದ ಆ ಇಬ್ಬರು, ಆ ಬುತ್ತಿ ನೋಡಿ ಹುಡುಗರನ್ನು ಹೆದರಿಸಿ ಬುತ್ತಿಯನ್ನು ಕಸಿದು ಊಟಮಾಡಿದರು. ಊಳುವುದನ್ನು ಬಿಟ್ಟು, ಅವರೆಲ್ಲ ಇವರನ್ನು ಹೊಡೆಯಲು ಓಡಿಬಂದರು. ಆಗ ಇವರಲ್ಲಿ ಒಬ್ಬ ಕಪ್ಪಲಿಯಿಂದ(ತಂಬಿಗೆ) ನೀರು ಮೇಲಕ್ಕೆ ಬರುವಂತೆ ತನ್ನ ಹೆಗಲ ಹಚ್ಚಿ ಕಪ್ಪಲಿ ಎಳೆದನು, ಆಗ ನೀರು ಮೇಲೆ ಬಂದುದನ್ನು ಕಂಡು ಆ ವ್ಯಕ್ತಿಗಳು ಬೆರಗಾದರು. ಇವರ ಬಗ್ಗೆ ಉಂಟಾಗಿದ್ದ ಸುದ್ದಿ ಹರಪನಹಳ್ಳಿ ನಾಯಕರಿಗೆ ತಲುಪಿತು. ಆಗ ಬಾಗಳಿ ಬಸಪ್ಪನಾಯಕ ಇವರನ್ನು ಕರೆಯಿಸಿ ತಮ್ಮ ಅಂಗರಕ್ಷಕರನ್ನಾಗಿ ನೇಮಿಸಿಕೊಂಡನು. ಇದರಿಂದ ಹರಪನಹಳ್ಳಿ ಸುತ್ತಲೂ ಇವನ ಆಡಳಿತ ಕ್ರಮಹಬ್ಬಿತು.

ಹ್ಯಾರಡದ ಒಂದು ಶಾಸನದಲ್ಲಿ 'ಶ್ರೀಮನ್ಮಹಾನಾಯಕಾಚಾರ್ಯ್ಯಬಾಗಳಿಬಸಪನಾಯಕಾ' ಅಯನವರೂ, ಅಕ್ಷನಶೆನಿರುಪದಿಂದಲೂ, ಸೊಗೆ ಮಾದಪನಾಯಕರು, ಹೆರಡದ ಸೇನಬೋಗ ಹನುಮಂಣನ ಮಗ(ಹೆಸರು ಹಾಳಾಗಿದೆ) ಕೊಟ್ಟಸಲೆಗೆ, ಮಾನ್ಯರ ಹೊಲ ೧ ಮಾನ್ಯವಾಗಿ, ಪೂರ್ವಮರ್ಯಾದೆಯಿಂದ ದಿxx ಕಡದತ್ತ ಕಂಮರ ಬಾಗಳೊಜ' ಎಂದು ಉಲ್ಲೇಖವಾಗಿದೆ.[೧೧೭] ಕಾಲದ ವಿವರವಿಲ್ಲ. ಇಲ್ಲಿಯೇ ಇನ್ನೊಂದು ಶಾಸನದಲ್ಲಿ[೧೧೮] ಬಗಳಿಬಸವಪ್ಪ ಅಯನು, ಹಲುವತಿನ ಗುರುಪದಕೆಗೆ ಬಗಳಿ ಶ್ರೀ ಬಸವಪರ್‍ಯೆನರು ಎಂದಿದೆ. ಅಂದರೆ ಹಲವತನ ಗುರುಪಾದಕ್ಕೆ ಸಮರ್ಪಿಸಿದ ಭಕ್ತಿ ಎಂದು ಹೇಳಬಹುದು. (ಹಲವತಿನ ಈಗಿನ ಉಲುವತ್ತಿ ಇರಬಹುದು) ಹೀಗೆ ಬಾಗಳಿನಾಯಕ ಪ್ರಜೆಗಳ ನಾಯಕನಾಗಿ, ಪ್ರಜೆಗಳಂತೆಯೇ ಆಳ್ವಿಕೆ ನೋಡಿಕೊಂಡು ಹೋಗಿದ್ದನು. ಆದರೆ ಇವನು ಯಾರ ಸೆರೆಮನೆಯಲ್ಲಿ ಇರಲಿಲ್ಲ.

ಬಾಗಳಿ ಬಸಪ್ಪನಾಯಕ : ಈತನು ಶೂರನು, ಧೀರಪರಾಕ್ರಮಿ ಆಗಿದ್ದ. ಸೋಮಶೇಖರ ನಾಯಕರಂತೆ ಪ್ರಸಿದ್ಧಿ ಪಡೆದಿದ್ದನು. ಸೋಮಶೇಖರನಾಯಕನೆಂದರೆ ಇವನು ಭಕ್ತಿ, ಗೌರವ ಶ್ರದ್ಧೆ ಇಟ್ಟಿದ್ದನು. ಇಂತಹ ಭಕ್ತಿಯಿಂದಲೇ ತನ್ನ ಹೆಸರನ್ನು 'ಸೋಮಶೇಖರನಾಯಕರ ಬಸಪ್ಪನಾಯಕ'ನೆಂದು ಇಟ್ಟುಕೊಂಡಿದ್ದನು. ಶಾಸನಗಳಲ್ಲಿ ಹೀಗೆಯೇ ಉಲ್ಲೇಖವಾಗಿರುವುದು ಕಂಡುಬರುತ್ತದೆ. ಇವನ ಕಾಲಾವಧಿ ಕ್ರಿ.ಶ.೧೮೫೦ ಎಂದಿದೆ. (ಇದು ಶಾಲಿವಾಹನ ಶಕವರ್ಷ ೧೭೭೨) ಬಸಪ್ಪನಾಯಕನಿಗೆ ಬ್ರಾಹ್ಮಣ ದೇವರಲ್ಲಿ ಅಪಾರವಾದ ಭಕ್ತಿ, ನಂಬಿಕೆ ಇತ್ತು. ಹೈದರ ಮತ್ತು ಟಿಪ್ಪುವರಿಗೆ ವಿಧೇಯನಾಗಿದ್ದುಕೊಂಡು ತನ್ನ ರಾಜ್ಯ ಕಾಪಾಡಿಕೊಂಡಿದ್ದನು. ಇವನ ಧೈರ್ಯವೇ ಇವನಿಗೆ ಮೃತ್ಯುವಾದುದು ಶೋಚನೀಯ. ಇವನು ಕ್ರಿ.ಶ.

೧೭೭೨ರಲ್ಲಿ ಶ್ರೀ ಕೂಡ್ಲಿಶೃಂಗೇರಿ ಮಠದ ನರಸಿಂಹ ಭಾರತಿಸ್ವಾಮಿಗಳಿಗೆ ಸೋಮಲಾಪುರವೆಂಬ ಗ್ರಾಮವನ್ನು ದಾನಕೊಟ್ಟು, ಅದನ್ನು ತನ್ನ ವಶವರ್ತಿಗಳಾದ ಕುರುವತ್ತಿ ಕೆಂಚಣ್ಣ, ಕೊಟ್ರಣ್ಣ, ಹನುಮಣ್ಣ ಇವರಿಗೆ ಚೀಟಿಯಲ್ಲಿ ಈ ಗ್ರಾಮವನ್ನು ಧಾರಾಪೂರ್ವಕವಾಗಿ ಉಮ್ಮಳಿಯಾಗಿ ಪಾಲಿಸಿಯಿದೀತೆಂದು ತಿಳಿಸುತ್ತಾ, ಗ್ರಾಮಕ್ಕೆ ತೋರಣ ಕಟ್ಟಿಸಿ ಕೊಟ್ಟು, ಹೇಳಿದ ಪ್ರಕಾರ ಒಂದು ಪತ್ರವನ್ನು ಕೊಟ್ಟಿದ್ದಾನೆ. ೧೭೮೧ರಲ್ಲಿ ಭಾರತಿಸ್ವಾಮಿಗಳನ್ನು ವರ್ಣಿಸಿ, ತನ್ನ ಗ್ರಾಮಕ್ಕೆ ಬೇಕಾದ ಕೆಲಸಕಾರ್ಯಗಳು ಸರಳವಾಗಿ ನಡೆಯುವಂತೆ ಭಿನ್ನವಿಸಿ ಈ ಪತ್ರವನ್ನು ಹೀಗೆ ಬರೆದುಕಳುಹಿಸುತ್ತಾನೆ. ಶ್ರೀಮನ್ ಮಹಾನಾಯಕಾಚಾರ್ಯರಾದ ಬಾಗಳಿ ಸೋಮಶೇಖರರ ಶ್ರೀ ಬಸಪ್ಪನಾಯಕನವರು ಮಾಡುವ ಬಿನ್ನಹ, - ಅದಾಗಿ ನಾವು ಕ್ಷೇಮ ತರುವಾಯ ಹಂಪೆಯಲ್ಲಿ...ಸ್ವಾಮೀಯ ನೂತನ ರಥಮಾಡಿಸಲು ಅಷ್ಟು ಸುಲಭವಲ್ಲ, ತಾವು ತಿಳಿದುಕೊಂಡಿರಷ್ಟೆ ರಥದ ಕೆಲಸದ ಗತಿ ಸಮಗ್ರವಾಗಬೇಕು. ಆದ ಕಾರಣ ರಥ ನಿರ್ಮಾಣ ಮಾಡಿಸುವಂತಾಹುದ್ದು, ರಥವನ್ನು ಮಾಡಿಸಿ ಪ್ರತಿಷ್ಠೆಯನ್ನು ಹೆಚ್ಚಿಸಿ ಈ ಕಾಲದಲ್ಲಿ ರಥದಿಂದಲೇ ರಥೋತ್ಸವ ಮಾಡಬೇಕೆಂಬ ಹಾಗೆ ನಿಶ್ಚಯಿಸಿದ್ದೇವೆ. ತಾವು ಸಂಸ್ಥಾನದ ಶ್ರೇಯೋಭಿಲಾಷೆಯನ್ನು ಮುಖ್ಯವಾಗಿ ಬಯಸುವುದರಿಂದ, ಈ ಮಹೋತ್ಸವಕ್ಕೆ ತಮ್ಮ ಆಗಮನವಾಗಬೇಕೆಂಬ ಅಪೇಕ್ಷೆ, ತಮಗೆ ತಿಳಿದಷ್ಟು ವರಗಳನ್ನು ನೀಡುತ್ತೇವೆ, ನಮ್ಮ ಯೋಗಾನಂದ ಸೋಮಯಾಜಿಗಳು ಬರದ್ದರಿಂದ, ಅವರ ಗಮನಕ್ಕೆ ತಂದದ್ದು ಆಯ್ತು, ಅವರ ಸ್ಥಾನವನ್ನು ನೀವು ತುಂಬಬೇಕು ಎಂದು'' ಬರುತ್ತದೆ.[೧೧೮] ಇದರಿಂದ ಇವನ ಸಾಮಾಜಿಕ ಕಾರ್ಯಗಳಿಗೆ ಹೆಚ್ಚು ಕಾಳಜಿ ನೀಡದ್ದನೆಂದು ಕಂಡುಬರುತ್ತದೆ. ಇದೇ ಕಾಲದ ಇನ್ನೊಂದು ಶಾಸನದಲ್ಲಿ[೧೧೯] ಮಹಾನಾಯಕಾಚಾರ್ಯರಾದ, ಬಾಗಳಿ ಸೋಮಶೇಖರನಾಯಕರ ಬಸಪ್ಪ ನಾಯಕನು ಬರೆಸಿಕೊಟ್ಟ, ಸರ್ವಮಾನ್ಯದ ಪಟ್ಟದ ಕ್ರಮವೆಂತೆಂದರೆ, ತಾವು ದೇವರ ಪ್ರಾರ್ಥನೆ ಮಾಡುತ್ತಾ ಇರುವುದು ತಿಳಿದ ಸಂಗತಿ ಆದ ಕಾರಣ, ಶ್ರೀ ದೇವರಿಗೆ ದೀಪಾರಾಧನೆ ಬಗ್ಗೆ ಹೊಸೂರಿನಿಂದ ವರ್ಷವೊಂದಕ್ಕೆ ನಾಣ್ಯ, ೧೦೦ ಗದ್ಯಾಣ ಕೊಡಬೇಕು. ನೂರು ವರಾದ ಪ್ರಕಾರ ಕಾಲಕಾಲಕ್ಕೂ ಶಿವಾರ್ಪಿತ ವಾಗಿ ಕೊಟ್ಟು, ನಡೆಸಬೇಕೆಂದು ಬರೆಸಿಕೊಟ್ಟ ಪಟ್ಟೆವು, ಆದರೆ ಇದರಲ್ಲಿ ಯಾರಿಗೆ ಎಂದು ಸ್ಪಷ್ಟವಿಲ್ಲ. ಇದಕ್ಕೆ ಉತ್ತರವಾಗಿ ವಾಸಪ್ಪ, ಹನುಮಣ್ಣ ನೇಮಣ್ಣನಿಗೆ(ಚೀಟಿ) ಶೃಂಗೇರಿ ಶಂಕರ ಭಾರತಿಸ್ವಾಮಿಗಳಿಗೆ ವರುಷಕ್ಕೆ ನೂರುನಾಣ್ಯ ಕೊಡಬೇಕೆಂದು ಕಳುಹಿದಾಗ, ಇವರು ಬಸಪ್ಪನಾಯಕನಿಗೆ ಚೀಟಿಕಳುಹಿಸಿದರು. ಈ ಶಾಸನಗಳು ದಾನಕೇಳುವುದರ ಬಗ್ಗೆ ಉಲ್ಲೇಖಿಸುತ್ತವೆ. ೧೭೭೮ರಲ್ಲಿ ಅಶ್ವಾಲಾಯನ ಸೂತ್ರದ ಜಾಮದಗ್ನಿ ವತ್ಸಗೋತ್ರದ ನಾರಾಯಣಚಾರ್ಯಕೊಟ್ಟ ಭೂದಾನ ಪತ್ರದ ಕ್ರಮವೆಂತೆಂದರೆ, ನಮ್ಮ ಒರೇರಿಗೆ ಸುಕೃತ ಬರಬೇಕೆಂದು, ಕೋಗಳಿ ಪೆಂಟಿಕೆ ಸಲ್ಲುವ ಕೊಟ್ಟೂರು ಸೀಮೆವಳಗಣ ಮಾದಿಹಳ್ಳಿ, ಪಟ್ಟಿಡಿ ಬೂದಿಹಾಳ ಗ್ರಾಮವನ್ನು ಇದಕ್ಕೆ ಸಲ್ಲುವ ಬ್ರಾಹ್ಮಣರ ಮನೆ, ವಕ್ಕಲಮನೆ ಕಣ, ಹಿತ್ತಲು, ಕೋಟೆ, ಮುಂತಾದ ಸಹಸಹಿರಣ್ಯೋದಕದಾನ, ಧಾರಾಪೂರ್ವಕವಾಗಿ ಶಿವಾರ್ಪಿತವಾಗಿ ತ್ರಿವಾಚತ್ರಿಕರಣ

[illegible]

ಯುಕ್ತವಾಗಿ ಕೊಟ್ಟಿದ್ದೇವೆ. ಈ ಭೂಮಿಗೆ ಸಲುವ ಕಾಡಾರಂಭ, ನಿರಾರಂಭ ನಿಧಿನಿಕ್ಷೇಪ ಜಲಪಷಾಣ ಅಷಿಣಿ ಆಗಾಮಿ, ಸಿದ್ಧಸಾಧ್ಯಗಳೆಂಬ ಅನುಭೋಗ, ತೇಜೋಪಾರ್ಜನೆಯನ್ನು ಸುಖದಲ್ಲಿ ಅನುಭವಿಸಿಕೊಂಡು ಇರುವುದು. ಮೇಲಾಗಿ ಸುಂಕ, ಕುರಿದೆರಿಗೆ, ಪೊಳೆಪೊಮ್ಮು ಜೋಡಿಗಳನ್ನು ಮಾನ್ಯವಾಗಿ ಕಾಣಿಕೆ ಕೊಡಬೇಕು. ಕಾಲಚಕ್ರದಲ್ಲಿ ಬಂದ ಪಟ್ಟ, ಪಗಡಿ ಮುಂತಾದ ಸಕಲಲಾಭನೂ ಹಾಕಿ ಕೊಟ್ಟಿದ್ದೇವೆ. ನಿಮ್ಮ ಪುತ್ರಪೌತ್ರ ಪರಂಪರೆಯಲ್ಲಿ ಅನುಭವಿಸಿಕೊಂಡಿಯಿವುದೆಂದು, ಬರೆಸಿಕೊಟ್ಟ ಭೂದಾನ ಶಾಸನ ಎಂದು ಬರುತ್ತದೆ. ಹರಪನಹಳ್ಳಿಯ ಕೆಲವು ಗ್ರಾಮಗಳನ್ನು ಆಳಿ, ವಶಪಡಿಸಿಕೊಂಡು, ಹಂಪೆಯ ವಿರೂಪಾಕ್ಷದೇವರ ಭಕ್ತನಾಗಿದ್ದನೆಂದು ಕಂಡುಬರುತ್ತದೆ. ಇನ್ನೂ ಕೆಲವೊಂದು ಶಾಸನಗಳು ಭೂದಾನ ಮಾಡಿದ್ದನ್ನು ತಿಳಿಸುತ್ತವೆ.[೨೦]

ಒಮ್ಮೆ ಟಿಪ್ಪುವಿನೊಂದಿಗೆ ಯುದ್ಧದಲ್ಲಿ ಸಹಾಯಮಾಡಿ ಕೊಪ್ಪಳದುರ್ಗದ ವಶಕ್ಕೆ ಕಾರಣನಾದನು. ಇದರಿಂದ ಟಿಪ್ಪುವಿಗೆ ಇಂತಹ ಶೂರನಾಯಕನನ್ನು ಕಂಡು ಅಸೂಯೆಯಾಯಿತು. ಇವನು ಎಂದಾದರೂ ತನ್ನ ಮೇಲೆ ಕೈಮಾಡಬಹುದೆಂದು ಈ ನಾಯಕನನ್ನು ಹಣಿಯುವ ಉಪಾಯ ಹುಡುಕುತ್ತಿದ್ದ. ಈ ಯೋಚನೆಯನ್ನು ಮೊದಲೇ ತಿಳಿದಿದ್ದ ನಾಯಕ ಟಿಪ್ಪುವಿನ ಸಂಚಿನಿಂದ ಪಾರಾಗಿ ಕೊಟ್ಟೂರು, ನಾರಾಯಣದೇವರಕೆರೆ, ಉಚ್ಚಂಗಿದುರ್ಗ, ಕೂಡ್ಲಿಗಿ ವಶಪಡಿಸಿಕೊಂಡು ಆಳುತ್ತಿದ್ದನು. ಇವುಗಳಿಂದ ಈ ಎಲ್ಲ ಉಲ್ಲೇಖಗಳಿಂದ ಇವನೇ ಬಾಗಳಿ ಬಸಪ್ಪನಾಯಕ ಎಂದು ಹೇಳಬಹುದು.

ಬಾಗುಳಿಯ ಹರಿಯಮ್ಮಾಜಿ : ಈಕೆ ರಾಜ್ಯಭಾರ ಮಾಡಬೇಕೆಂದು ಬಂದವಳಲ್ಲ. ಅನಿವಾರ್ಯವಾಗಿ ಆಡಳಿತವನ್ನು ನೋಡಿಕೊಳ್ಳ ಬೇಕಾಯಿತು. ಕೊನೆಗೂ ರಾಜ್ಯಪರಿಪಾಲನೆಯನ್ನು ಕೈಗೊಂಡಳು. ತನ್ನ ಆಡಳಿತದಲ್ಲಿ ಹಿಡಿತವನ್ನು ತಂದುಕೊಂಡು ಉತ್ತಮ ಆಡಳಿತಗಾರಳು, ಯುಕ್ತಿವಂತಳು, ಸೈನ್ಯದಲ್ಲಿ ಶಿಸ್ತು ಉಂಟಾಗಲು ಹಗಲಿರುಳು ಪ್ರಯತ್ನಿಸಿದಳು. ದಾನಧರ್ಮ ಕಾರ್ಯಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದಳು. ನೆರೆಹೊರೆಯ ಅರಸು ಮನೆತನಗಳ ಜೊತೆಗೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದಳು. ಅರಸು ಮನೆತನಕ್ಕೆ ಸಂಬಂಧಿಸಿದ ಅಥವಾ ಇತರ ಸಮಸ್ಯೆಗಳನ್ನು ಮಂತ್ರಿಗಳು, ಅಧಿಕಾರಿಗಳ ಸಲಹೆ ಆಲೋಚನೆಗಳ ಮೂಲಕ ಬಗೆಹರಿಸುತ್ತಿದ್ದಳು. ವಿಜಯನಗರದ ಅರಸರು ಇವಳನ್ನು ರಾಣಿ ಎಂದು ಮಾನ್ಯ ಮಾಡಿದ್ದರು. ಈಕೆಯ ದಾನಶಾಸನಗಳಲ್ಲೂ ಸಹ ಅರಸರು ರತ್ನಸಿಂಹಾಸನಾರೂಢರಾಗಿ, ಶ್ರೀರಂಗರಾಯದೇವ ಮಹಾರಾಯ ಪೃಥ್ವಿ ರಾಜ್ಯವನ್ನಾಳುತ್ತಿರಲು 'ಮೊನ್ನೆವೀರಳಾದ ಬಾಗಳಿ ಹರಿಯಮ್ಮಾಜಿ' ಎಂದು ಪ್ರಸ್ತಾಪಿಸಲಾಗಿದೆ. ಈಕೆಯ ಅಧಿಕಾರ ೧೬೭೨-೧೭೧೧ ವರೆಗೆ ಕಂಡುಬರುತ್ತದೆ.

ರಾಣಿಬೆನ್ನೂರಿನಿಂದ ಈಶಾನ್ಯ ದಿಕ್ಕಿನಲ್ಲಿ ಸುಮಾರು ೧೮ ಕಿ.ಮೀ ದೂರದಲ್ಲಿ ತುಂಗಭದ್ರಾನದಿಯ ದಂಡೆಯ ಮೇಲೆ ಉದ್ಗಟ್ಟಿ ಎಂಬ ಗ್ರಾಮದ ಒಂದು ಮಠದಲ್ಲಿ ಈಕೆಯನ್ನು ಹರಪನಹಳ್ಳಿ ಪಾಳೆಯಗಾರ ಬಸವಂತನಾಯಕನ ಮಡದಿ ಬಾಗಳಿ ಹರಿಯಮ್ಮಾಜಿ' ಎಂದು ಬರುತ್ತದೆ. ಆದರೆ ಯಾವ ಬಸವಂತನಾಯಕ

ಎಂದು ಗೊತ್ತಾಗುವುದಿಲ್ಲ. ಪತಿ ಅಕಾಲಿಕ ಮರಣದ ನಂತರ ಇವಳೇ ರಾಜ್ಯಭಾರ ನಿರ್ವಹಿಸಿ ಒಳ್ಳೆಯ ಕಾರ್ಯಗಳನ್ನು ಮಾಡಿದ ಕೀರ್ತಿಗೆ ಪಾತ್ರಳಾದಳು. ಬನ್ನಿಕಲ್ಲು ಶಾಸನ ದಲ್ಲಿ ಶ್ರೀಮನ್ಮಹಾನಾಯಕಾಚಾರ್ಯ, ಭಾಷೆಗೆ ತಪ್ಪುವ ನಾಯಕರ ಗಂಡ, ಮರೆಹೊಕ್ಕರೆ ಕಾಯ್ವು, ಮಾರಾಂತರಗೆಲ್ವ ಬಾಗಳಿ ಹತಿಮಂಮ್ಮಾಜಿ ಯವರು' ಎಂದು ಉಲ್ಲೇಖಿಸುತ್ತದೆ.[೧೫]

ಗೆಸಿಟಿಯರ್ ನಲ್ಲಿ(ಬಳ್ಳಾರಿ) ಗಂಡನ ಆಳ್ವಿಕೆ ಕಾಲಕ್ಕೆ ಹರಿಯಮ್ಮಾಜಿಯ ಕಾಲವನ್ನು ಕೂಡಿಸಿದರೆ, ಆರು ವರ್ಷ ಗಂಡನ ಹೆಸರಿನಲ್ಲಿ ಆಳ್ವಿಕೆ ನಡೆಸಿದಳು. ಇದರಲ್ಲಿ ಒಟ್ಟು ಆಳ್ವಿಕೆ ಅವಧಿ ಆರು ವರ್ಷ ಎಂದು ಹೇಳಲಾಗಿದೆ. ಕುಂ.ಬಾ.ಸ ಅವರು ಈಕೆಯ ಮೂರು ಶಾಸನಗಳನ್ನು ಸಂಗ್ರಹಿಸಿದ್ದಾರೆ. ಒಂದು ಶಾಸನವನ್ನು ಮಾತ್ರ ನೋಡಲಾಗಿದೆ. ಮೊದಲಿಗೆ ಶ್ಲೋಕದಿಂದ ಪ್ರಾರಂಭವಾಗಿ ಶಕವರ್ಷ ೧೬೩೩ರಲ್ಲಿ ಶ್ರೀಮದ್ರಾಜಾಧಿರಾಜ, ರಾಜಪರಮೇಶ್ವರ, ವೀರಪ್ರತಾಪ, ಶ್ರೀವರ ಶ್ರೀರಂಗದೇವರಾಯ, ದೇವಮಾರಯ್ಯ ನವರು ಚಂದ್ರಗಿರಿಯೆಂಬ ದುರ್ಗದಲ್ಲಿ ಮಣಿಖಚಿತ ಸಿಂಹಾಸನಾರೂಢನಾಗಿ, ಸುಖಸಂಕಥಾ ವಿನೋದದಿಂದ ಪೃಥ್ವಿರಾಜ್ಯನ್ನಾಳುತ್ತಿರಲು, ಅವನ ಮನ್ನೆಯವರರಾದ ಶ್ರೀ ಮನ್ಮಹಾನಾಯಕಾಚಾರ್ಯ್ಯರಾದ, ಭಾಷೆಗೆ ತಪ್ಪುವನಾಯಕರಗಂಡ, ಮರೆಹೊಕ್ಕವರ ಕಾಯ್ವ ಮರಾಂತರಗೆಲ್ವ ಬಾಗುಳಿ ಹರಿಯಮ್ಮಾಜಿಯವರೂ ರಾಜ ಪುರೋಹಿತ ನಾಗದೇವಭಟ್ಟಗೆ ಬರೆಸಿಕೊಟ್ಟ ಭೂದಾನ ಪಟ್ಟೇದ ಕ್ರಮವೆಂತೆಂದರೆ, ದಳವಾಯಿ ಬಸಪ್ಪನು ತಮ್ಮಮಾನ್ಯದ ಗ್ರಾಮ ಅಲಗಿಲವಾಡದಲ್ಲಿ, ಈ ನಾಗದೇವಭಟ್ಟಗೆ ಗದ್ದೆ ಬೀಜವರಿಯಲ್ಲು-೧ ವಕ್ಕಳದ ಗದ್ದೆಯನು ಧಾರಾಪೂರ್ವಕವಾಗಿ, ಶಿವಾರ್ಪಿತವಾಗಿ ಕೊಟ್ಟಿದ್ದೇನೆ. ದೇವರು ಯಿ ಮಾನ್ಯವನ್ನು ಪಾಲಿಸಿಕೊಳ್ಳಬೇಕೆಂಬ ಹಾಗೆ ಹೇಳಿಕೊಂಡ ಕಾರಣ ಈ ವಕ್ಕಳಗದ್ದೆಮಾನ್ಯವನ್ನು ನಿನ್ನ ಪುತ್ರರು ಪಾರಂಪರಿಕವಾಗಿ ಅನುಭವಿಸಿಕೊಂಡು ಸುಖದಲ್ಲಿಯಿಹುದೆಂದು ಬರೆಸಿಕೊಟ್ಟ ಭೂದಾನ

ದಾನಪಾಲನಯಾರ್ಮಧ್ಯೇ ದಾನಾಚ್ರೇಯೊನುಫಲಾನಂ|
ದಾನತ್ಸರ್ಗಮಹಾಪ್ನೋತಿಪಾಲನಾದಚ್ಯುತಂಪದಂ||

ಬರುತ್ತದೆ. ಈ ದಾನವನ್ನು ಕಾಪಾಡಿಕೊಂಡು ಹೋದರೆ ನಿಮ್ಮ ಮುಂದಿನ ಪೀಳಿಗೆಗೆ ಒಳ್ಳೆಯದಾಗುತ್ತದೆ ಎಂದು ಹೇಳಿಸಿ, ದಾನಬಿಡುತ್ತಾಳೆ. ಇದರಿಂದ ಇವಳು ಕೂಡ ಬಾಗಳಿಯಿಂದ ಆಳಿದ್ದು ವ್ಯಕ್ತವಾಗುತ್ತದೆ. ಅಂದರೆ ಅರಮನೆ ಪುರೋಹಿತರಾದ ಶ್ರೀನಾಗದೇವ ಭಟ್ಟರಿಗೆ ಅಲಗಿಲವಾಡದಲ್ಲಿ(ಹರಪನಹಳ್ಳಿ ತಾಲೂಕು) ಒಂದು ವಕ್ಕಳದಗದ್ದೆಯನ್ನು ದಾನಮಾಡಿದ ಎಂದು ಕಂಡುಬರುತ್ತದೆ.[೧೬] ಕ್ರಿ.ಶ.೧೭೧೧ರಲ್ಲಿ ಪುರೋಹಿತ ಜೋಯಿಸ ಪ್ರಸನ್ನಭಟ್ಟರಿಗೆ ದೇವೋತ್ತಮ ಹನುಮಂತಭಟ್ಟರ ನರಸಿಂಹಭಟ್ಟರಿಗೆ ಕೊಟ್ಟ ಭೂದಾನ ಕೋಗಳೆ ಪಂಟಿಕೆ,(ಸೀಮೆ) ಸಲುವ ನಾರಾಯಣದೇವರ ಕೆರೆ ಯೊಳಗಣಭೂಮಿಯನ್ನು ಬಾಗಳಿಯಲ್ಲಿ ವಕ್ಕಳಗದ್ದೆಯನ್ನು ದಾನಕೊಟ್ಟು, ಶಾಸನ ಬರೆಸಿದ್ದಾಳೆ. ಅಲಗಿಲವಾಡದ ಕೋಟೆಗೆ ಬಸಪ್ಪನಾಯಕ

ಎಂಬುವ ದಳವಾಯಿಯನ್ನು ನೇಮಿಸಿದಳು. ಹರಪನಹಳ್ಳಿ ತಾಲೂಕಿಗೆ ಸೇರಿದ ಉಚ್ಚಂಗಿದುರ್ಗಕ್ಕೆ ಹೋಗುವ ಮಾರ್ಗದ ಒಂದು ಬದಿಯಲ್ಲಿ ಒಂದು ಹಳ್ಳಿ ಇದೆ. ಇದಕ್ಕೆ ಈಗಲೂ ಹರಿಯಮ್ಮನಹಳ್ಳಿ ಎಂದು ಕರೆಯುತ್ತಾರೆ. ಇದು ಹರಿಯಮ್ಮಾಜಿ ಹೆಸರಿನಲ್ಲಿ ಸ್ಥಾಪನೆಯಾಗಿದೆ. ಈ ಶಾಸನಗಳು ಅವಳ ಆಳ್ವಿಕೆಯನ್ನು ದೃಢೀಕರಿಸಿವೆ. ಪಟ್ಟವಿಲ್ಲದಿದ್ದರೂ ಅಪಾಯದ ಸಮಯದಲ್ಲಿ ತಾನೇ ಖಡ್ಗಹಿಡಿದು ಯುದ್ಧಮಾಡಿದ್ದು ಅವಳ ಆಡಳಿತಕ್ಕೆ ಮೆರೆಗು ನೀಡುತ್ತದೆ. ಈಕೆ ರಾಜ್ಯವಾಳಿದ್ದು ಸಮಕಾಲೀನ ನೆರೆರಾಜ್ಯಗಳ ಅರಸರ ಪತ್ರ ಮತ್ತು ಅವಳು ಬರೆದ ದಾನ ಶಾಸನಗಳಿಂದ ಗೊತ್ತಾಗುತ್ತದೆ. ವಿಶೇಷವೆಂದರೆ (ಶಾ.ಶ.೧೬೩೭) ಕ್ರಿ.ಶ.೧೭೧೦ರಲ್ಲಿ ದಾನ ಶಾಸನದಲ್ಲಿ ಶ್ರೀಮನ್ಮಮಹಾಚಾರ್ಯ್ಯ ನಾಯಕಾ ಭಾಷೆಗೆ, ತಪ್ಪುವ ನಾಯಕರ ಗಂಡ ಮೊರೆಹೊಕ್ಕವರ ಕಾಯ್ವ ಮಾರಾಂತ ಗೆಲ್ವ ಬಾಗಳಿ ಹರಿಯಪ್ಪನವರು, ಜೋಯಿಸರ ಪ್ರಸನ್ನಭಟ್ಟರಿಗೆ ಬರೆಸಿಕೊಟ್ಟ ದಾನಪಟ್ಟೇದ ಕ್ರಮವೆಂತೆಂದರೆ, ನೀನು ಶಂಕರಚಾರ್ಯರವರ ಮಠ ಕಟ್ಟಿಸಿ ಈ ಸ್ವಾಮಿಗಳಿಗೆ, ಮಠವನ್ನು ಕೊಟ್ಟಕಾರಣ ಅವರಿಗೆ ವಿರುಪಾಕ್ಷೇತ್ರದಲ್ಲಿ ಪ್ರತಿಷ್ಠೆ ಮಾಡಿಸಿದ ಕಾರಣ '೧' ಒಂದು ವಕ್ಕಳ ಗದ್ದೆಯನ್ನು ಬಾಗಳಿಯಲ್ಲಿ ಕೊಟ್ಟು ಬಿಡುವುದಾಗಿ ಹೇಳಿ ಈ ಸ್ವಾಮಿಗಳು ನಿನಗೆ ವಾಕ್ಯ ಕೊಟ್ಟಿದ್ದ ಕಾರಣ, ನಿನ್ನ ಸಂಗಡ ಪಾದಗಾಣಿಕೆಗೆ ಹತ್ತು ವರಹವನ್ನು ಕೊಂಡು ಬಾಗುಳಿಲಿ ಕೊಟ್ಟು ಬರುವುದಾಗಿದೆ' ಎಂದಿದೆ. ಆದರೆ ಇಲ್ಲಿ ಹರಿಪ್ಪ ಅಥವಾ ಹರಿಯಪ್ಪನವರು ಎಂದಿರುವುದರಿಂದ ಇವನು ಹರಿಯಮ್ಮಾಜಿಯ ಸಂಬಂಧಿ ಇರಬಹುದು. ಏಕೆಂದರೆ ಹರಿಯಮ್ಮಾಜಿಯ ಕಾಲವನ್ನು ಈ ಶಾಸನ ಸೂಚಿಸಿರುವುದರಿಂದ, ಈತನು ಅವಳ ಹತ್ತಿರ ಸಂಬಂಧಿಯಾಗಿರಬೇಕು. ಇದನ್ನು ಬಿಟ್ಟರೆ ಮತ್ತೆ ಇವನ ಉಲ್ಲೇಖ ಎಲ್ಲಿಯೂ ಕಂಡುಬರುವುದಿಲ್ಲ.

ಹೀಗೆ ಹರಿಯಮ್ಮಾಜಿ ಪಟ್ಟವಿಲ್ಲದೆ ಅಧಿಕಾರವನ್ನು ಕೈಗೊಂಡು ಆಡಳಿತ ಮಾಡಿದಳು. ಬನ್ನಿಕಲ್ಲಿನ ಶಾಸನದಲ್ಲಿ, ಬನ್ನಿಕಲ್ಲಬಸೈಯನ ಮಗ ಬಸೈಯಗೆ ಬರೆಸಿಕೊಟ್ಟ ಭೂದಾನ ಕ್ರಮವೆನೆಂದರೆ....

> ನಂನ ಮಗನ ಹೆಸರಿಟ್ರು ಬಂನಿಕಲ್ಲ ಗ್ರಾಮದ
> ವೊಕಳ ಮಾಂನ್ಯವಂನು ಪಾಲಿಸಿಕೊಳ್ಳಬೇಕೆಂದು
> ಬಿಂನಾಹಮಾಡಿಕೊಂಡ ಕಾರಣ ನಿಮಗೆ ಬಂನಿಕಲ್ಲ
> ಗ್ರಾಮದಲಿ ಆ ೧ ವೊಕಳದಬೀಜವರ್ರಿ ಮಾಂನ್ಯವಂನ್ನು
> ಲಿಂಗಾಮುದ್ರಾ ಸ್ಥಾಪಿತವಾಗಿ ಪಾಲಿಸಿಕೊಟ್ಟುಯಿದೆವೆ|
> ಅಲ್ಲಿಯೇನುಂ x ಪಾದಾರ್ಜನೆಯಂನು ಆಗುಮಾಡಿ
> ಕೊಂಡು| ನಿಂನ ಪುತ್ರಪೌತ್ರ ಪರಂಪರೆಯದಲ್ಲು ಸುಖದ
> ಲ್ಲಿ ಅನುಭವಿಸಿಕೊಂಡುಯಿಪ್ಪುದೆಂದು ಬರೆಸಿ ಕೊ|
> ಟ್ಟ ಭೂದಾನದಪಟ್ಟೆವೂ-

ಎಂದಿದೆ. ಇಲ್ಲಿ ೧೭೧೦ರಲ್ಲಿ ಬಾಗಳಿ ಹರಿಯಮ್ಮಾಜಿಯವರು ಬಂನಿಕಲ ಬಸವನಿಗೆ ಇವನ ಮಗ ಬಸವೈಯನಿಗೆ ಭೂದಾನ ನೀಡಿದ್ದಾಳೆ.

[illegible]

ಸೋಮಶೇಖರ ನಾಯಕ : ಹರಪನಹಳ್ಳಿ ಎಂದ ತಕ್ಷಣ ರಾಜಾಸೋಮಶೇಖರ ನಾಯಕರನ್ನು ನೆನಪು ಮಾಡಿಕೊಡುತ್ತದೆ. ಏಕೆಂದರೆ ಪಾಳೆಯಗಾರರಲ್ಲಿಯೇ ಸಮರ್ಥ, ದಕ್ಷ ಆಡಳಿತಗಾರರು, ಹೌದ್ದು ಸಮರ್ಥ ಆಡಳಿತವನ್ನು ನೀಡಿದ್ದಾರೆ. ಇವರ ಹೆಸರಿನಲ್ಲಿ ಒಂದು ಶಾಲೆಯನ್ನು ಆರಂಭಿಸಿ ಇವರ ಭಾವಚಿತ್ರವನ್ನು ಹಾಕಿರುವುದನ್ನು ಹರಪನಹಳ್ಳಿಯಲ್ಲಿ ನೋಡಬಹುದು. ಕುಂಬಾಸ ಅವರು ಇಬ್ಬರು ಸೋಮಶೇಖರನಾಯಕನ್ನು ಗುರತಿಸಿದ್ದಾರೆ. ಮೊದಲ ಸೋಮಶೇಖರ ನಾಯಕ(ಶಾ.ಶ.೧೬೬೪-೧೬೮೮) ಎರಡನೆಯ ಸೋಮಶೇಖರ (ಶಾ.ಶ.೧೭೦೯-೨೧) ಹೀಗೆ ಕಾಲವನ್ನು ಹೇಳಿದ್ದಾರೆ. ಬಳ್ಳಾರಿ ಜಿಲ್ಲಾ ಶಾಸನ ಸಂಪುಟದಲ್ಲಿ ಬಾಗಳಿ ಸೋಮಶೇಖರ ನಾಯಕ(ಶಾ.ಶ.೧೭೭೨) ಸರಿಯಾದ ಕಾಲ ೧೮೫೦' ಎಂದು ಬರುತ್ತದೆ. ಆದರೆ ಇಲ್ಲಿ ಯಾವ ಸೋಮಶೇಖರ ಎಂಬುದು ಗೊತ್ತಾಗುವುದಿಲ್ಲ. ಇದನ್ನು ಶಾಲಿವಾಹನ ಶಕಕ್ಕೆ ನೋಡಿದರೆ ಎರಡನೆಯ ಸೋಮಶೇಖರ ನಾಯಕ ಎಂದು ಗುರುತಿಸಿಬಹುದು. (ಆದರೆ ಇಲ್ಲಿ ಒಬ್ಬ ನಾಯಕನನ್ನು ಮಾತ್ರ ಹೇಳಲಾಗಿದೆ.) ಇವನು ಮೊದಲು ಬಾಗಳಿಯಲ್ಲಿಯೇ ಇದ್ದವನು. ನಂತರ ಸೈನ್ಯವನ್ನು ಕಟ್ಟಿಕೊಂಡು ಹರಪನಹಳ್ಳಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಡಳಿತ ಮಾಡಿದನು. ಎರಡನೆಯ ಸೋಮಶೇಖರನಾಯಕ ಎಂದು ಅವರ ಅಭಿಪ್ರಾಯವಾದರೆ ನಮ್ಮ ಪ್ರಕಾರ ಮೊದಲನೆಯ ಸೋಮಶೇಖರವಾಗಿದ್ದಾನೆ. ಏಕೆಂದರೆ ಈ ಹಿಂದೆ ಬಸಪ್ಪನಾಯಕನನ್ನು ಸೋಮಶೇಖರ ಬಸಪ್ಪನಾಯಕ ಎಂದು ಹೇಳಿರುವುದರಿಂದ ಅವನಿಗೂ ಇವನಿಗೂ ಸ್ವಲ್ಪ ಕಾಲದಲ್ಲಿ ವ್ಯತ್ಯಾಸವಾಗಿರುತ್ತದೆ. ಇವನ ಕಾಲದ ಮಾಹಿತಿಯಿಂದ ಇಲ್ಲಿ ಎರಡನೆ ಸೋಮಶೇಖರ ನಾಯಕನ ಕಾಲಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿ[೧೨೩] ಬಾಗಳಿ ಸೋಮಶೇಖರ ನಾಯಕನ ಬಸವಪ್ಪನಾಯಕ ಎಂದಿರುವುದರಿಂದ ೨ನೇ ಸೋಮಶೇಖರ ನಾಯಕ ಬಂದಿರುವುದು ಗೊತ್ತಾಗುತ್ತದೆ. ಅವರೇ ಹೇಳುವಂತೆ ಇವನು ಬಸಪ್ಪನಾಯಕನ ಅಣ್ಣ ಅಯ್ಯಪ್ಪನಾಯಕನ ಹಿರಿಯಪುತ್ರನು. ಇವನು ಚಿಕ್ಕವನು ಆದರೆ ಬಸಪ್ಪನಾಯಕನ ಕಾಲಕ್ಕೂ, ಇವನ ಕಾಲಕ್ಕೂ ತುಂಬಾ ವ್ಯತ್ಯಾಸವನ್ನು ಗುರುತಿಸಿದ್ದಾರೆ. ರಾಜರ ಅಧಿಕಾರದ ಕ್ರಮ ವಂಶಪರಂಪರೆ ಎಂಬುದು ಗೊತ್ತಿರುವುದಾದರೂ, ಬಸಪ್ಪನಾಯಕನ ನಂತರ ಇವನನ್ನು ಹೇಳಬೇಕಿತ್ತು. ಆದರೆ ಒಂದನೆಯ ಸೋಮಶೇಖರ ಎಂದು ಗುರುತಿಸಿದ್ದಾರೆ. ಎರಡನೆ ಸೋಮಶೇಖರ ನಾಯಕನನ್ನು ಮೊದಲನೆಯ ನಾಯಕನೆಂದು ಹೇಳಬಹುದಿತ್ತು.

ಹರಪನಹಳ್ಳಿ ಪಾಳೆಯಗಾರರಲ್ಲಿ ಹೆಚ್ಚು ಪರಾಕ್ರಮಿಯೂ ದಕ್ಷ ಆಡಳಿತಗಾರನೂ ಆದವನು. ಈತನ ಬಗ್ಗೆ ಹೆಚ್ಚಾಗಿ ಶಾಸನಗಳೇನು ಕಂಡುಬರುವುದಿಲ್ಲ. ಹರಪನಹಳ್ಳಿಯ ಸುತ್ತಲಿನ ಕೆಲವೊಂದು ಗ್ರಾಮಗಳನ್ನು ತನ್ನ ಕೇಂದ್ರಕ್ಕೆ ಸೇರಿಸಿಕೊಂಡು, ಗುತ್ತಿಯ ಮುರಾರಿಗೂ ಇವನಿಗೂ ದ್ವೇಷ ಸದಾ ಇತ್ತು. ಆಗ ಸೋಮಶೇಖರ ನಾಯಕ ಚಿಕ್ಕವಯಸ್ಸಿನವನಾಗಿದ್ದರಿಂದ ಹರಪನಹಳ್ಳಿ ದಿವಾನನು ಸೋಮಶೇಖರನನ್ನು ಮರಾಠ ರಾಜ್ಯದಿಂದ ಕರೆತಂದು ಇವನ ಹೆಸರಿನಲ್ಲಿ ಹರಪನಹಳ್ಳಿಯನ್ನು ವಶಪಡಿಸಿಕೊಂಡು ಹಕ್ಕನ್ನು

ಸ್ಥಾಪಿಸಿದನು. ಜನರಲ್ ಹಾರಿಸ್ ಸೈನ್ಯ ಸಮೇತವಾಗಿ ಹರಿಹರದಲ್ಲಿದ್ದಾಗ, ದಿವಾನನು ಸೋಮಶೇಖರನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಆತನನ್ನು ಭೇಟಿ ಮಾಡಿ, ಬಳ್ಳಾರಿ ಜಿಲ್ಲೆಯಲ್ಲಿ ೬೦,೦೦೦ ರೂಪಾಯಿಗಳ ಜಾಗೀರನ್ನು ಪಾಳೆಯಗಾರನಿಗೆ ಮತ್ತು ಆತನ ಕಡೆಯವರಿಗೆ ನೀಡುವ ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ಈ ಒಪ್ಪಂದವು ಪಾಳೆಯಗಾರರು ಸೈನ್ಯವನ್ನಿಡಕೂಡದು ಮತ್ತು ಮೈಸೂರಿನಲ್ಲಿ ವಾಸಿಸಬೇಕೆಂಬ ಷರತ್ತನ್ನು ಒಳಗೊಂಡಿತ್ತು. ಈ ಒಪ್ಪಿಗೆ ಗೌರ್ನರ್ ಜನರಲ್‌ಗೆ ಇತ್ತು. ಆದರೆ ಸೋಮಶೇಖರನಾಯಕ ದಿವಾನನು ಹರಪನಹಳ್ಳಿಯನ್ನು ಬ್ರಿಟಿಷರಿಗೆ ಒಪ್ಪಿಸಿದುದಕ್ಕೆ ಅಸಮಾಧಾನ ತೋರಿದ. ಇದರಿಂದ ದಿವಾನನು ಅರಸನನ್ನು ಬೇರೆ ಸ್ಥಳಕ್ಕೆ ಕರೆದೊಯ್ಯುವುದನ್ನು ಕಂಡ ರಾಣಿಯರನ್ನು ಸೆರೆಮನೆಗೆ ಕಳುಹಿಸಿದನು. ನಾಯಕ ಆ ಸ್ಥಳದಿಂದ ಓಡಿ ಬಂದು ಆಂಗ್ಲರ ಹತ್ತಿರ ಧನ ಸಹಾಯಯಾಚಿಸಿದನು. ದಿವಾನನು ಇವನನ್ನು ಕೊಲ್ಲುವ ಪ್ರಯತ್ನ ಮಾಡುವುದರಲ್ಲಿಯೇ ಆಂಗ್ಲರು ಹರಪನಹಳ್ಳಿಯನ್ನು ವಶಪಡಿಸಿಕೊಂಡರು. ಹೀಗೆ ನಾಲ್ಕು ಜನ ಪತ್ನಿಯರನ್ನು ಹೊಂದಿ ಪ್ರಮುಖ ದೊರೆಯಾಗಿ ಬಾಗಳಿ ಸೋಮಶೇಖರನಾಯಕ ಹರಪನಹಳ್ಳಿಯ ಪಾಳೆಯಗಾರನಾಗಿದ್ದನು.

ಮುಮ್ಮಡಿ ಬಸಪ್ಪನಾಯಕ : ಇವನು ಬಾಗಳಿಯ ನಾಯಕನಾಗಿದ್ದನು. ಕ್ರಿ.ಶ.೧೭೧೨ವರೆಗೆ ಎಂದು ಉಲ್ಲೇಖವಿದೆ. ಈತನ ವಿಶೇಷ ವ್ಯಕ್ತಿತ್ವವೇನು ಕಂಡುಬರುವುದಿಲ್ಲ. ಇವನು ದಾನ ನೀಡಿದ ಕೆಲವು ಮಾಹಿತಿಯನ್ನು ತಿಳಿಸುವ ಶಾಸನಗಳು ಕಂಡುಬರುತ್ತವೆ. ಈ ಶಾಸನದಲ್ಲಿ[೧೨] ಮೊದಲಿಗೆ ಶ್ಲೋಕ ಉಲ್ಲೇಖಾಗಿದ್ದು, ನಂತರ ಈ ಬಿರುದಾವಳಿಗಳು ಕಂಡುಬರುತ್ತವೆ.

> ಶ್ರೀಮನ್ಮಮಹಾನಾಯಕಾಚಾರ್ಯರಾದ ಭಾಷೆಗೆತಪ್ಪುದನಾಯಕರಗಂಡ
> ಮೊರೆಹೊಕ್ಕವರಕಾಯ್ವ ಮಾರಾಂತರಗೆಲ್ವ ಬಾಗಳಿ ಮುಮ್ಮಡಿ
> ಬಸಪ್ಪನಾಯಕ ಅಯ್ಯನವರು, ಕೊಟ್ಟ ಭೂದಾನ ಕ್ರಮವೆಂದರೆ ೧೭೦೧-೦೨
> ರಲ್ಲಿ ತುಂಗಭದ್ರಾತೀರದ ಬಸವಾಪುರ ಗ್ರಾಮವನ್ನು ಬಾಗಲಿ ಮತ್ತು
> ಕೆಸರಹಳ್ಳಿ ಗ್ರಾಮದಲ್ಲಿ ಗದ್ದೆಗಳನ್ನು ಶ್ರೀನರಸಿಂಹಭಾಗತೀಸ್ವಾಮಿಗಳ
> ವರೆಗೆ ದಾನ ಮಾಡುತ್ತಾನೆ ಎಂದು ವಿವರಿಸುತ್ತದೆ.
> ಮುಂದುವರಿದ ಭಾಗದಲ್ಲಿ ಹರಪುರಲದಲ್ಲಿ ಇರುವ ಹೊಸಪೇಟೆಯಲ್ಲಿ
> ಮಠ ಸ್ಥಾಪನೆ ಮಾಡಿಸಿ ನಂತರ ಇದರ ಶಿವಾರ್ಪಿತವಾಗಿ ಕೊಟ್ಟಿದ್ದು
> ಎಂದಿದೆ.

ವಿಜಯನಗರದ ಸೈನ್ಯದಲ್ಲಿ ಹರಪನಹಳ್ಳಿ ಹಾಗೂ ಹೊಸಪೇಟೆಯ ಬೇಡ ಜನಾಂಗದ ನಾಯಕರು ಇದ್ದರು ಎನ್ನುವುದು ಸ್ಪಷ್ಟವಾಗುತ್ತದೆ. ಈ ಶಾಸನದಲ್ಲಿ ಆ ಗ್ರಾಮದಲ್ಲಿ ಬರುವ ಎಲ್ಲಾ ಭಟ್ಟರ ಹೆಸರುಗಳನ್ನು ಹೇಳಿಕೊಂಡು, ಅವರವರ ಪುರೋಹಿತ ಸ್ಥಾನವನ್ನು ಒಪ್ಪಿಸಿ ಬರೆಸಿಕೊಟ್ಟಿದ್ದು-

ಶ್ರೀಮನ್ಮಹಾಚಾರ್ಯ ಭಾಷೆಗೆ ತಪ್ಪದ ನಾಯಕ(ರ) ಬಾಗಳಿ ಮುಮ್ಮಡಿ ಬಸಪ್ಪ ನಾಯಕಪ್ಪಯ್ಯನವರು, ನಮ್ಮ ಪುರೋಹಿತರೂ ಜೋಯಿಸ್ಸರು ಆದ ಸಿಂಹಾದ್ರಿಭಟ್ಟರು ಮಕ್ಕಳ, ವೋಬಳಭಟ್ಟರ, ಲಕ್ಷ್ಮಣ

[illegible]

ಭಟ್ಟರು ಹಿರೇಚಂದ್ರ ಭಟ್ಟರು ಆದ ಸಿಂಹಾದ್ರಿ ಭಟ್ಟರ ಮಕ್ಕಳ ಹಿರೇಚಂದ್ರಭಟ್ಟರು, ಚಿಕ್ಕಚಂದ್ರಭಟ್ಟರು ಚಿಕ್ಕವೋಬಳಭಟ್ಟರಮಕ್ಕಳು, ಯೋಗೇಶ್ವರ ಭಟ್ಟರು, ಕಾಶಿಭಟ್ಟರು, ಅನಂತ ಭಟ್ಟರು ವಿಶ್ವನಾಥ ಭಟ್ಟರಮಕ್ಕಳು, ಯಲ್ಲಂಭಟ್ಟರ ನರಸಿಂಹಭಟ್ಟರು ತಿಮ್ಮಂಣ ಭಟ್ಟರಿಗೆ ಬರೆಸಿಕೊಟ್ಟನೆಂದು, ಏನಾದರೂ ತೊಡಕು ಬಂದರೆ ನೀವೇ ಕೇಳಿ ವಿಚಾರಿಸಬೇಕು, ಅವರವರಿಗೆ ಬಂದ ಆದಾಯವನ್ನು ಅವರೇ ಉಣಬೇಕು ಬಂದ ಆದಾಯನ್ನು ಬಾಗುಳಿ ಉಚ್ಚಂಗಿದುರ್ಗದ ಜೋಯ್ಸರಿಗೆ ಅರಮನೆಗೆ ಕಳುಹಿಸಬೇಕು. ಇದಕ್ಕೆ ದಾರಿ ತಪ್ಪಿದವರು ಅರಮನೆಗೆ ನೂರಾ ಇಪ್ಪತ್ತು ವರಹ ಅಪರಾಧ ಕೊಡಬೇಕೆಂದು ಬರೆಸಿ ದಾನಕೊಟ್ಟಿದ್ದನು. ಕೊಟ್ಟದಾನವನ್ನು ಕಾಪಾಡಿಕೊಂಡು ಹೋಗಬೇಕು ಇಲ್ಲವಾದರೆ ಪಾಪಬರುತ್ತದೆ ಎಂದು ಎಲ್ಲಾ ಶಾಸನಗಳಲ್ಲಿ ಈ ಪದ್ಯ ಕಂಡುಬರುತ್ತದೆ.

'ಸ್ವರತ್ತಾದ್ವಿಗುಣಂ ಪುಣ್ಯಂ
ಪರದತ್ತಾನು ಪಾಲನಂ
ಪರದತ್ತಾ ಪಹರೇಣ ಸ
ಸ್ವದತ್ತಾ ನಿಷ್ಫಲಂಭವೇತ್'

ಹೀಗೆ ಇಲ್ಲಿ ಬರುವ ಶಾಸನಗಳಲ್ಲಿ, ಆಡಳಿತ ಕ್ರಮ ನೋಡಿದರೆ ಪ್ರತಿಯೊಂದರಲ್ಲೂ ನ್ಯಾಯ ಸಮ್ಮತವಾದ ವಿಧಾನವನ್ನು ಅನುಸರಿಸಿ ಆಳ್ವಿಕೆ ಮಾಡಿದನು. ವಿಶೇಷವೆಂದರೆ ತನ್ನ ಆಳ್ವಿಕೆಯಲ್ಲಿ ಉಚ್ಚಂಗೆಮ್ಮಗೆ ಗಂಟೆಯನ್ನು ಮಾಡಿಸಿಕೊಟ್ಟಿದ್ದಾನೆ. ಇದನ್ನು ಈಗಲೂ ಕಾಣಬಹುದು. ಈ ಗಂಟೆಯ ಮೇಲಿನ ಶಾಸನದಲ್ಲಿ[೧೨೫] ಉಂಚ್ಚಂಗೆವ್ವನವರ ವೋಲಗಕ್ಕೆ ದತ್ತಿ ಕೊಟ್ಟಗಂಟೆಯನ್ನು ಶ್ರೀಕುಮಾರ ರಂಗನಾಯಕರು ಶ್ರೀ ಕುಮಾರಬಸಪ್ಪನಾಯಕರು ಬೊಕ್ಕಸರ ಕೋನಯ್ಯನ ಮುಖಾಂತರ ಮಾಡಿಸಿದ್ದು ಈ ಘಂಟೆ ಭಿನ್ನವಾಗಲಾಗಿ, ಆ ಕುಮಾರಬಸಪ್ಪನಾಯಕರು ಅವ್ವನವರವೋಲಗಕ್ಕೆ, ವೈಶಾಖ ಶುದ್ಧ ಪಂಚಮಿಯಲ್ಲು ಕುಮಾರ ಚಿಗಟೇರಿ ಶಿವನಪ್ಪನ ಮುಖಾಂತರ ಮಾಡಿಸಿದಂತಹ ಈ ಘಂಟೆ, ಈ ಘಂಟೆ ಮಾಡಿದಾತ ಕಂಚುಗಾರ ಗೌಡ್ರುದಂಡೆಪ್ಪ ಮಗ ನಾಗಪ್ಪ, ಈ ಕೆತ್ತನೆಯನ್ನು ಕೆತ್ತಿದಾತ ಗಾಳಿ ಮುದಿಮಪ್ಪನ ಮಗ ಕರಿಯಪ್ಪನು, ದುರ್ಗದ ಪರಮೇಶ್ವರಿ ನಿಮ್ಮ ಪಾದವೇಗತಿ (ಶಾ.ಶ.೧೬೩೦) ೧೭೦೮ ಮೋಘ ನಕ್ಷತ್ರದಲ್ಲಿ ಶ್ರೀ ಸ್ವಾಮಿ ಉಚ್ಚಂಗಿದುರ್ಗದ ಉಚ್ಚಂಗೆಮ್ಮಗೆ ಬಾಗಳಿ ಮುಮ್ಮಡಿ ಬಸಪ್ಪನಾಯಕರು ಒಪ್ಪಿಸಿದ ಗಂಟೆ, ತೂಕ ಮಣ ನಲ್ವತ್ತೊಂದು ಸೇರು ಎಂದಿದೆ. ಇದನ್ನು ಹರಪನಹಳ್ಳಿ ಪಾಳೆಯಗಾರರು ಸೇರಿ ಒಪ್ಪಿಸಿದರೆಂದು ಕಂಡುಬರುತ್ತದೆ. ಇನ್ನೊಂದು ಶಾಸನದಲ್ಲಿ[೧೨೬] ಬಾಗಳಿ ಇಮ್ಮಡಿ ಬಸವನ ಮಗ ಮುಮ್ಮಡಿ ಬಸವಂತರಾಯ, ಇವನ ಮಗ ಮುಮ್ಮಡಿ ಬಸವಪ್ಪನಾಯಕರು ಉಜಿನಿ ಸಿದ್ದೇಶ್ವರ ದೇವರ ಪಾದಕ್ಕೆ ಈ ಗಂಟೆಯನ್ನು ಸಮರ್ಪಿಸಿದ್ದಾರೆ. ದೇವರ ಸನ್ನಿಧಾನದಲ್ಲಿ ಸಮರ್ಪಿಸ್ತ ಗಂಟೆ ಎಂದು ಉಲ್ಲೇಖವಾಗುತ್ತದೆ ಈ ಶಾಸನದಲ್ಲಿ[೧೨೭] ೧೭೦೯ರಂದು ಈ ಗಂಟೆಯನ್ನು ಉಚ್ಚಂಗೆಮ್ಮನಿಗೆ ಬಾಗಳಿಯ ಮುಮ್ಮಡಿ ಬಸಪ್ಪನಾಯಕನು ಸಮರ್ಪಿಸಿದನೆಂದು ಉಲ್ಲೇಖಿಸುತ್ತದೆ.

(ರಂಗಪ್ಪ) ರಂಗನಾಯಕ : ಪಾಳೆಯಗಾರರಿಗೆ ಕೆಲವರು ಸಾಮಂತರಿದ್ದರು. ಶಿವನಪ್ಪನಾಯಕ, ರಾಮಯ್ಯ ನಾಯಕ, ಬಸವನಾಯಕ, ರಂಗನಾಯಕ, ಕೆಂಚನಾಯಕ ಮತ್ತು ರಂಗನಾಯಕ ಇವನ ದಾದಯ್ಯ ಸೋದರನಾಗಿದ್ದನು. ಕೆಲವು ಕಾಲ ಬಾಗಳಿಯನ್ನು ಸ್ವತಂತ್ರವಾಗಿ ಆಳಿದನು. ಬಾಗಳಿ ಸುತ್ತಲೂ ಇರುವ ಮೂವತ್ತೂರು ಹಳ್ಳಿಗಳನ್ನು ಬಾಗಳಿ ರಾಜ್ಯಕ್ಕೆ ಸೇರಿಸಿದ್ದನು. ಇದರ ಜೊತೆ ಬಾಗಳಿ ಸಂಸ್ಥಾನದ ಮೇಲೆ ಬೇರೆ ಅರಸರು ಬರದಂತೆ ತನ್ನ ಸೈನ್ಯವನ್ನು ನೇಮಿಸಿದ್ದನು. ದಾದಾಪುರದ ಅರಸ ಆಗಿಂದಾಗಿ ಎದುರಿಸಿ ಯುದ್ಧಮಾಡುತ್ತಿದ್ದನು. ರಂಗನಾಯಕ ಅವನನ್ನು ಸೋಲಿಸಿ ಹಿಮ್ಮೆಟ್ಟಿಸಿದನು. ತನ್ನ ಸೋದರನಂತೆ ಪರಾಕ್ರಮಿಯಾಗಿದ್ದರಿಂದ ಸಮರ್ಥವಾಗಿ ಬಾಗಳಿಯನ್ನು ಆಳಿದನು. ಇವನು ಕಾಲವಾದ ನಂತರ ಬಾಗಳಿ ರಾಜ್ಯವು ಹರಪನಹಳ್ಳಿ ಸೀಮೆಗೆ ಸೇರ್ಪಡೆಯಾಯಿತು. ಈ ಇಬ್ಬರು ಸೋದರರನ್ನು ಕುರಿತಾಗಿ ಹರಪನ ಹಳ್ಳಿಯ ಬೇಡ ಸಮುದಾಯದವರು 'ದಾದಣ್ಣ-ರಂಗಣ್ಣ' ಎಂಬ ಲಾವಣಿಯೊಂದನ್ನು ಹಾಡುತ್ತಾರೆ. ಬೇಡರಕೇರಿಯ ಜಾತ್ರೆಯದಿನ ಈ ಪದವನ್ನು ಇಂದಿಗೂ ವಿಶೇಷವಾಗಿ ಹಾಡುತ್ತಾರೆ.

ಹರಪನಹಳ್ಳಿ ರಾಜ್ಯ ಸ್ಥಾಪಿಸಿದ ಬಾಗಳಿ ಭೂಪರಾದ ದಾದಯ್ಯ ಮತ್ತು ರಂಗಯ್ಯ ಇಬ್ಬರೂ ಸೇರಿ ಅಮಲಾಪುರದಲ್ಲಿ ಶ್ರೀ ವೆಂಕಟರಮಣ(ತಿಮ್ಮಲಾಪುರ) ದೇವಾಲಯ ನಿರ್ಮಿಸಿ, ದೇವರನ್ನು ಸ್ಥಾಪಿಸಿ ತೇರು ಎಳೆದು ವರ್ಷಕ್ಕೊಮ್ಮೆ ಆಚರಿಸುವಂತೆ ಮಾಡಿದರು. ಆ ಭಾಗದಲ್ಲಿ ಹೆಚ್ಚಾಗಿ ದೇವರ ಹೆಸರನ್ನು ಬಿಟ್ಟು, ರಾಜರ, ಹೆಸರನ್ನು ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ಈಗಲೂ ಈ ಹೆಸರುಗಳೇ ಹೆಚ್ಚಾಗಿ ಕಂಡುಬರುತ್ತದೆ. ಈ ಭಾಗದಲ್ಲಿ ಪಾಳೆಯಗಾರರ ಪ್ರಭಾವ ಹೆಚ್ಚಾಗಿತ್ತೆಂದು ಕಂಡುಬರುತ್ತದೆ. ಆ ಭಾಗದಲ್ಲಿ ಜಾತ್ರೆಯಲ್ಲಿ ಎಲ್ಲಾ ಧರ್ಮದವರು ಸೇರಿರುತ್ತಾರೆ. ಹೆಚ್ಚಾಗಿ ಬ್ರಾಹ್ಮಣರು ಕಂಡುಬರುತ್ತಾರೆ.

ವಿಜಯನಗರದ ಅರಸರು : ವಿಜಯನಗರದ ಅರಸರ ಆ ಜನ್ಮವೈರಿಯಾದ ವಿಜಾಪುರದ ಆಲಿಆದಿಲ್‌ಷಾನು ಅಳಿಯ ರಾಮರಾಯ(ರಾಜರಾಮ)ನನ್ನು ಸೋಲಿಸಿ ಸದಾಶಿವರಾಯನ ಸಂಬಂಧ ಬೆಳೆಸಿದನು. ಇಂಥ ಪರಿಸ್ಥಿತಿ ಉಂಟಾದ ಮೇಲೆ ವಿಜಯನಗರದ ಅರಸರ ಸಂತತಿ, ಆನೆಗುಂದಿ ಮತ್ತು ಚಂದ್ರಗಿರಿ ನೆಲೆವೀಡುಗಳಿಂದ ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಆಳಿದರೆಂದು ಕಂಡುಬರುತ್ತದೆ. ಕ್ರಿ.ಶ.೧೫೬೫ರಲ್ಲಿ ರಕ್ಕಸಗಿ ಯುದ್ಧವು ಬಿಜಾಪುರದ ಸಂಯುಕ್ತ ಸೈನ್ಯ ಮತ್ತು ವಿಜಯನಗರದ ಸೈನ್ಯದ ಮಧ್ಯ ನಡೆಯಿತು. ಇದರ ಪರಿಣಾಮವಾಗಿ ವಿಜನಗರದ ಪರವಾಗಿ ಯುದ್ಧ ಮಾಡಲು ಹೋಗಿದ್ದ ರಾಮರಾಯ ಯುದ್ಧದಲ್ಲಿ ಕೊನೆಯಾಗುತ್ತಾನೆ. ಈ ಅವಧಿಯಲ್ಲಿ ಹೆಸರಿಗೆ ಮಾತ್ರ ಅರಸರಾಗಿದ್ದ ಇವರಲ್ಲಿ, ಇವರ ಸೇನೆಯಲ್ಲಿ ಸೇವೆಸಲ್ಲಿಸುತ್ತಿದ್ದ ದಳವಾಯಿಗಳು, ಸರದಾರರು, ಕೆಲಸದವರು, ಚಿಕ್ಕಪುಟ್ಟ ಸ್ವತಂತ್ರ್ಯ ರಾಜ್ಯಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ದಕ್ಷಿಣ ಕರ್ನಾಟಕದ ಕೆಲ ರಾಜ್ಯಗಳಿದ್ದರೆ ಬಳ್ಳಾರಿ ಜಿಲ್ಲೆಯ, ಬಳ್ಳಾರಿ, ಸಂಡೂರು, ಗುಡೇಕೋಟೆ, ಜರಿಮಲೆ, ಹರಪನಹಳ್ಳಿ ಸಂಸ್ಥಾನಗಳಾಗಿದ್ದವು. ಬಳ್ಳಾರಿ

[illegible]

ಇವರ ಕಾಲಕ್ಕೆ ಇವರಿಗೆ ತವರುಮನೆಯಾಗಿತ್ತು. ಹರಪನಹಳ್ಳಿಗೂ ವಿಶೇಷ ಗಮನಹರಿಸಿದ್ದರು. ಈ ಹೊತ್ತಿಗೆ ಬಾಗಳಿಯ ದಾದಯ್ಯ ದುರ್ಗದ ಪಾಳೆಯಗಾರ ಮತ್ತಿ ತಿಮ್ಮಣ್ಣನಾಯಕರು ಈ ಅರಸರ ಸೆರೆಯಲ್ಲಿ ಬಂಧಿತರಾಗಿದ್ದರೂ ಬಿಡುಗಡೆಯಾಗಿತ್ತು. ಇಲ್ಲಿಯ ಶಾಸನಗಳಲ್ಲಿ ಸದಾಶಿವರಾಯನ ಉಲ್ಲೇಖ ಬರುತ್ತದೆ. ಕ್ರಿ.ಶ.೧೫೮೦ರಲ್ಲಿ ರಾಮರಾಜನ ಕುಮಾರ ತಿಮ್ಮರಾಜ ಅರಸರು ಆನೆಗುಂದಿಯಲ್ಲಿ ಆಳುತ್ತಿದ್ದಾಗ, ಶ್ರೀಮಹಾನಾಯಕಾಚಾರ್ಯ, ಮರೆಹೊಕ್ಕವರ ಕಾಯ್ವ, ಮಾರಾಂತಗೆಲುವ, ಬಾಗಳಿಯ ಮಾಚಿನಾಯಕ ಮಕ್ಕಳು ದಾದಾಯ್ಯನಾಯಕರು ಕೊಟ್ಟೂರುಸೀಮೆಯ ಕುರುಬಕುಲದ ಸಿದ್ದಪ್ಪ, ಒಡೆಯರು, ಮೊದಲಾದವರಿಗೆ, ಅರಮನೆಗೆ ಕೊಡುವಂಥ ಕುರಿದೆರಿಗೆಯನ್ನು ಬಾಗಳಿ ಕಲ್ಲಿನಾಥದೇವರ ಸನ್ನಿಧಿಯಲ್ಲಿ ಮನ್ನಾ ಮಾಡಿ ಬರೆಯಿಸಿದ ಧರ್ಮಶಾಸನ ಎಂದು ಉಲ್ಲೇಖಬರುತ್ತದೆ.[೧೨೮]

ಈ ಶಾಸನದಲ್ಲಿ 'ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ, ಶ್ರೀ ವೀರಪ್ರತಾಪ ಸದಾಶಿವನು ವಿದ್ಯಾನಗರದಲ್ಲಿ ರತ್ನ ಸಿಂಹಾಸನರೂಢನಾಗಿ ಪ್ರಥ್ವಿರಾಜ್ಯವನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[೧೨೯] ಮುತ್ತಗಿ ಶಾಸನದಲ್ಲಿ ಇದೇ ವಿವರ ಬರುತ್ತದೆ. ಈ ಶಾಸನದಲ್ಲಿ ರಾಜಪರಮೇಶ್ವರ ಸದಾಶಿವರಾಯ ವಿದ್ಯಾನಗರಿಯಲ್ಲಿ ಆಳುತ್ತಿದ್ದಾಗ ಇವನ ಸಾಮಂತ ಹಡಪದ ಬಯ್ಯಪನಾಯಕನಿದ್ದನು.[೧೩೦] ಇದರಲ್ಲಿ ಸದಾಶಿವರಾಯನು ತನ್ನ ಆಳ್ವಿಕೆಯಲ್ಲಿ ತಾನೇ ಹಡಪದ ಕೃಷ್ಣಪ್ಪನಾಯಕರಿಗೆ ಕೊಟ್ಟ ಕೊಟ್ಟೂರ ಸೀಮೆಗೆ ಸಲುವ ಬಾಗುಳಿಯ ಚಾಮಿನಾಯಕರ ಮಗ ಹೆಳಟಿನಾಯಕರು, ಬಾಗಳಿಯ ಕುಮಾರರ ಬಸವಿಗೌಡನ ಮಗ ಲಿಂಗಗೌಡ ಮುಂತಾದವರಿಗೆ ಕುರಿದೆರಿಗೆಯನ್ನು ಕೊಡಬೇಕೆಂದು ಬರೆಸಿಕೊಟ್ಟ ಧರ್ಮ ಶಾಸನ ಎಂದಿದೆ.[೧೩೧] ಇದರಲ್ಲಿ ಕುರಿಗಳಿಗೆ ತೆರಿಗೆಯಿಲ್ಲ ಎಂದು ಹೇಳುತ್ತಾನೆ. ಹೀಗೆ ಬಾಗುಳಿ ಗ್ರಾಮಕ್ಕೆ ಕೆಲವೊಂದು ಸಾಮಾಜಿಕ ಕಾರ್ಯಗಳನ್ನು ಮಾಡಿದನು.

ಇಲ್ಲಿಯ ಒಂದು ಶಾಸನದಲ್ಲಿ ಶ್ರೀಮನ್ಮಹಾರಾಜಾಧಿರಾಜ, ರಾಜಪರಮೇಶ್ವರ, ಶ್ರೀವೀರಪ್ರತಾಪ, ಶ್ರೀವೀರವೆಂಕಟಪತಿ ಮಹಾದೇವರ, ಕುಮಾರಬಾಗಳಿಬಸಪ್ಪನು ಕಸವನಹಳ್ಳಿ ಪುರವರ್ಗವನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ.[೧೩೨] ಮೈದೂರನ್ನು ವಿಜಯನಗರವನ್ನು ವೆಂಕಟಪತಿದೇವರಾಯನು ಆಳುತ್ತಿದ್ದನೆಂದು ಬರುತ್ತದೆ. ಇನ್ನೊಂದು ಶಾಸನದಲ್ಲಿ ವೆಂಕಟಪತಿದೇವರಾಯನು ಆಳುತ್ತಿದ್ದಾಗ ಬಾಗಳಿ ವೊಬ್ಬೆಯ ದೇವನಾಯಕನ ಕುಮಾರ ಮಹಾನಾಯಕಾಚಾರ್ಯ ಬಸವೈನಾಯಕನ ಕಾಲದಲ್ಲಿ, ಮೈದೂರಲ್ಲಿ ಧರ್ಮದ ಯಾತ ಮತ್ತು ಕಲ್ಲದೋಣಿ ಮಾಡಿಸಿದ ಎಂದು ಬರುತ್ತದೆ.[೧೩೩] ಆದರೆ ವೆಂಕಟಪತಿದೇವರಾಯನು ವಿಜಯ ನಗರದ ಅರಸನಾದರೂ, ಎಲ್ಲಿಂದ ಆಳುತ್ತಿದ್ದನೆಂದು ಸ್ಪಷ್ಟವಿಲ್ಲ. ಸದಾಶಿವರಾಯ ಮತ್ತು ರಾಮದೇವ ರಾಯನನ್ನು ಉಲ್ಲೇಖಿಸುವ ಶಾಸನಗಳಲ್ಲಿ, ರಾಮದೇವರಾಯನ ಕುಮಾರ ಬಾಗಳಿ ಬಸವಪ್ಪ ನಾಯಕ ನಿದ್ದನೆಂದು ಕಂಡುಬರುತ್ತದೆ.

ಹೀಗೆ ವಿಜಯನಗರದ ಅರಸರಲ್ಲಿ ಬಾಗಳಿಯ ಭೂಪರು ಸಾಮಂತರಾಗಿದ್ದರು. ಈ ಅರಸರು ಸಾಮಂತರನ್ನು ತಮ್ಮ ಮಕ್ಕಳಂತೆ ಕಾಣುತ್ತಿದ್ದರು. ಆದ್ದರಿಂದ ಇವರಿಗೆ ಕುಮಾರ ಎಂದು ಕರೆಯುತ್ತಿದ್ದರು. ಇದನ್ನೇ ಹರಪನಹಳ್ಳಿ ಪಾಳೆಯಗಾರರು ಆಚರಣೆಗೆ ತಂದರು. ಉಚ್ಚಂಗಿದುರ್ಗದ ಉಚ್ಚಂಗೆಮ್ಮನ ಗಂಟೆ ಶಾಸನವನ್ನೆ ಇದಕ್ಕೆ ಉದಾಹರಣೆಯಾಗಿ ನೋಡಬಹುದು. ವಿಜಯನಗರದ ಅರಸರು ಗುರುಗಳಿಗೆ(ವಿದ್ಯೆ ಕಲಿಸುವವರಿಗೆ) ದಾನವನ್ನು, ಕುಸ್ತಿ ಆಡುವವರಿಗೆ, ಗರಡಿ ಮನೆಗಳನ್ನು ನೀರಾವರಿ ಯೋಜನೆ, ಕೆರೆ ಬಾವಿಗಳನ್ನು ತೋಡಿಸಿದ್ದರು. ಪ್ರಾಣಿ ಪಕ್ಷಿಗಳಿಗಾಗಿ ದೋಣಿ, ಬಾವಿಗಳನ್ನು ಸ್ಥಾಪಿಸಿ, ಪ್ರಯಾಣಿಕರ ಅನುಕೂಲಕ್ಕಾಗಿ ಅರವಟ್ಟಿಗೆಗಳ ವ್ಯವಸ್ಥೆ ಮಾಡಿಸಿದ್ದರು. ಈ ಅರಸರು ತಮ್ಮ ಪತ್ರವ್ಯವಹಾರಗಳಲ್ಲಿ ಶ್ರೀವಿರೂಪಾಕ್ಷನ ಹೆಸರಿನ ಮೊಹರನ್ನು ಉಪಯೋಗಿಸುತ್ತಿದ್ದರು. ಇವರು ಹರಪನಹಳ್ಳಿ ಪಾಳೆಯಗಾರರಿಗೆ 'ಮಹಾನಾಯಕಾಚಾರ್ಯ' ಎಂಬ ಬಿರುದನ್ನು ಮಾನ್ಯಮಾಡಿದ್ದರು. ಆದುದರಿಂದ ಪ್ರತಿಯೊಂದು ಶಾಸನದಲ್ಲಿ ಇದನ್ನು ಉಲ್ಲೇಖಿಸಿಕೊಂಡಿದ್ದಾರೆ.

ಮಹಾಬಲಿವಂಶೀಯರು : ಬಾಗಳಿ ಮತ್ತು ನೀಲಗುಂದ ಶಾಸನಗಳಲ್ಲಿ ಮಹಾಬಲಿವಂಶದ ರಾಜರ ಹೆಸರು ಬರುತ್ತದೆ. ಅವರು ಕರ್ನಾಟಕದ ಪೂರ್ವಭಾಗದಲ್ಲಿದ್ದ ಮಹಾಬಲಿವಂಶದ ಅರಸರಿಗೂ ಬಾಣ ಅರಸರಿಗೂ ಇದ್ದ ಸಂಬಂಧ ತಿಳಿಯುವುದಿಲ್ಲ. ಈ ಶಾಸನದಲ್ಲಿ (ಕಾಲದ ಉಲ್ಲೇಖವಿಲ್ಲ) ತ್ರುಟಿತವಾಗಿದೆ. ಈ ಶಾಸನದಲ್ಲಿ ಇವರ ಉಲ್ಲೇಖ ಹೀಗೆ ಕಂಡುಬರುತ್ತದೆ.

ಸಾಮನ್ತಾಧಿಪತಿ ಮಹಾಬಲಿವಂಸ ಆದಿ ಪೆಂಪೆಸೋ,
ನೀಗ್ಗುರ್ಗುಂದಗ್ರಾಮಂ ಸೋಲಗಂಗನಚಕ್ರ ಅಯವೊನ್ದ
ಕೊಲವಿದಕೆ ಭ್ರಿತ್ಯ ಪಾರಾಯಣ ಆರನಂತಬಿರುದಕೊಣ್ಡ
ಪ್ರಸವೊತ, ತೆಕ್ಕೋಜಂ, ನೀತಿಸೊಂ, ಗಂಗನಚಕ್ರಂ, ಅಯ್ಯವೊನ್ತ
ಬಂಟರಭಾವಂ, ನುಡಿದನ್ತೆಗಣ್ಡಂ ತೊಲಗಣ್ಡಂ, ಛಲವಾದಿಗಣ್ಡಂ
ಪ್ರಜೆ ಮೆಚ್ಚಿಗಣ್ಡಂ ಕೆವಾರೆ ಸಿಂಘಂ, ಅಣ್ಣನವದ್ರಿ ಅಯ್ಯದಿಂಬರ
ದೆಸೆದವಳಂ ಸಮಯ ಆಸನ್ನಾ ಹದ್ವಿರಚ ಮರಾರಿ ಎಚರಸನ
ಪುತ್ರಂ ಧರೆಮುಟ್ಟೆಗಣ್ಡಂ ರಥದ ಪಾಳೆಯಲ್ಲಿ ಜೋಳವಾಳಿಯ
ಕುದುರೆಯ ಮೇಲಾಳ ಪೆಣದಿರೆದು ಸುರಲೋಕಪ್ರಾಪ್ತನಾದ ಗೂಳಿದೇವ

ಎಂದು ಉಲ್ಲೇಖಬರುತ್ತದೆ.[೧೩೪] ಇಲ್ಲಿ ಕೆಲವು ವಿಶೇಷಣಗಳನ್ನು ನೋಡಬಹುದು. ಗಂಗನ ಚಕ್ರ, ಬಂಟರಭಾವ, ನುಡಿದಂತೆಗಂಡ, ತೊಲಗಂಡ, ಪ್ರಜೆಮೆಚ್ಚಿಗಂಡಂ, ಕೈವಾರೆಸಿಂಘಂ, ಎಚರಸನ ಪುತ್ರಂ ಧರೆಮುಟ್ಟೆಗಂಡ... ಹೀಗೆ ಮುಂತಾದ ವಿಶೇಷಣಗಳನ್ನು ಕಾಣಬಹುದು. ಇಲ್ಲಿ ಏಚರಸನ ಮಗ ಗೂಳಿದೇವ ರಥದ ಪಾಳೆಯಲ್ಲಿ ಕುದುರೆಯ ಮೇಲಾಳು ಆಗಿದ್ದು, ಹೋರಾಡುವಾಗ ಮಡಿದ ಎಂದು ತಿಳಿದುಬರುತ್ತದೆ. ಇದರ ಕಾಲವನ್ನು ಲಿಪಿಯ ಆಧಾರದಿಂದ ಹನ್ನೊಂದನೆಯ ಶತಮಾನಕ್ಕೆ ಸೇರಿಸಬಹುದು.

[illegible]

ಇನ್ನು ನೈರುತ್ಯದ ಅಧಿಷ್ಠಾನದಲ್ಲಿರುವ ಶಾಸನದಲ್ಲಿ ಹನ್ನೊಂದನೆಯ ಶತಮಾನವೆಂದಿದ್ದು, ಇದೇ ವಂಶದನನ್ನು ಉಲ್ಲೇಖಿಸುತ್ತದೆ.

ಶ್ರೀ ಮಹಾಬಲಿ
ವಂಶ ಆದಿಪೆಂಪ
ದೇಂ ನೀಗ್ರುಗ್ಗುಂನ್ದಗ್ರಾಮೋ
ಉಪವಸನ ಪುತ್ರಂ
ದಸವಮದೆ....
....

ಎಂದು ಉಲ್ಲೇಖವಾಗಿದೆ.[೧೩೫] ಇದು ಸರಿಯಾದ ಅರ್ಥವನ್ನು ತಿಳಿಸುವುದಿಲ್ಲ. ಆದರೆ ಎರಡರಲ್ಲೂ ಆದಿಪೆಂಪೆ ಎಂದಿರುವುದರಿಂದ ಆ ವಂಶದ ನಾಯಕನಿರಬಹುದು. ಈ ಶಾಸನದಲ್ಲಿ ಮಹಾಬಲಿ ವಂಶದ ದಶವರ್ಮ ಎಂದು ಬಂದಿದೆ. ಕಲ್ಲೇಶ್ವರ ದೇವಾಲಯದ ನವರಂಗದ ಹಿಂಬದಿಯ ಗೋಡೆಯ ಶಾಸನವೂ ಸಹ ಅದೇ ಉಲ್ಲೇಖವನ್ನು ತಿಳಿಸುತ್ತದೆ. `ಮಹಾಸಾಮಂತಾಧಿಪತಿ, ಮಹಾಬಲಿವಂಶದ ಆದಿಪೆಮೊಸೊಂ, ನೀಗ್ರುಗ್ಗನ್ದ ಗ್ರಾಮತೋದಾಲಗಂಗನ ಪತ್ರಂ, ಲಯನಾ ಮನ್ನಕೇ, ಶ್ರೀ ಮೊತೊಏಚವನಪುತ್ರ ದಸವರ್ಮ ಎಂದು ಬಂದಿದೆ. ಇದರ ಕಾಲ ಹನ್ನೆರಡನೆಯ ಶತಮಾನ ಎಂದು ವ್ಯಕ್ತವಾಗುತ್ತದೆ.[೧೩೬] ಇದು ಕಾಲದ ಉಲ್ಲೇಖವನ್ನು ನೀಡವುದಿಲ್ಲ.

ಆಯು ಶ್ರೀಮಹಾಬಲಿವಂಸ ಆದಿಪೆವೊ
ನಿರ್ಗುಗ್ದದ ಗ್ರಾಮಂ.......................

ಎಂದು ಉಲ್ಲೇಖವಾಗಿದೆ.[೧೩೭] ಆದರೆ ಎಲ್ಲಾ ಶಾಸನಗಳಲ್ಲಿ ನೀಗ್ರುಗ್ಗಂದ ಎಂದು ಬಂದಿರುವುದರಿಂದ ಆತನು(ದಸವರ್ಮ) ನೀಲಗುಂದವನ್ನು ಕೇಂದ್ರವಾಗಿ ಮಾಡಿಕೊಂಡು ಆಳಿರಬಹುದಾಗಿದೆ. ಹೀಗೆ ಮಹಾಬಲಿ ವಂಶದವರು ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಮಾತ್ರ ಕಾಣಿಸಿಕೊಳ್ಳದೆ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಸುತ್ತಲಿನ ಬಾಗಳಿ ನೀಲಗುಂದ ಪ್ರದೇಶಗಳಲ್ಲಿ ಇದ್ದರೆಂದು ಕಂಡುಬರುತ್ತದೆ.

ಹೀಗೆ ವಿವಿಧ ರಾಜಮನೆತನಗಳು ಆಳಿರುವುದನ್ನು ಈ ಎಲ್ಲಾ ಶಾಸನಗಳು ಉಲ್ಲೇಖಿಸಿರುವುದರಿಂದ ರಾಜಕೀಯ ಇತಿಹಾಸವನ್ನು ನೋಡಲಾಯಿತು. ನಂತರ ಅವರ ಆಡಳಿತ ವ್ಯವಸ್ಥೆಯನ್ನು ನೋಡಲಾಗಿದೆ.

ಅಡಿಟಿಪ್ಪಣಿಗಳು

೧. ಕ.ವಿ.ಶಾ.ಸಂ ಶಾಸನ-೫೭ ಹಿರೇಹಡಗಲಿ(ಕಾಲ ೩ನೇ ಶತಮಾನ)

೨. ,, ಉಚ್ಚಂಗಿದುರ್ಗ ಶಾಸನ-೯

೩. ಬಳ್ಳಾರಿ ಗ್ಯಾಸಿಟಿಯರ್ ಪುಟ-೮೯

೪. ಕ.ವಿ.ಶಾ.ಸಂ. ಬೆಣ್ಣಿಹಳ್ಳಿ ಶಾಸನ-೧೯೯

೫. ಕ.ವಿ.ಶಾ ಮುತ್ತಿಗಿ ಶಾಸನ-೧೮೭

೬. ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆಯ (ಸುಕುಮಾರಸ್ವಾಮಿಯ ಕಥೆ)ಲ್ಲಿ ಪುಟ-೬೨)

೭. The chalukas of kalyana Editor Dr.m.s.NagaraJa Rao

೮. ಕರ್ನಾಟಕದ ಪುರಾತತ್ವ ನೆಲೆಗಳು, ಕೆ.ಬಿ.ಶಿವತಾರಕ್ , ಪು.೩೩೧

೮. ಕುಂ.ಬಾ.ಸ ಕ.ವಿ.ಶಾ.ದ ಪುಟ.೧೦೭

೯. ಬೆಡಗಿನ ಬಾಗಳಿಗೆ ಬಾರಯ್ಯ ರಸಿಕ ಚಿತ್ರಲೇಖನ ಡಾ.ಹೆಚ್ .ಚಂದ್ರಶೇಖರ, ಉದಯವಾಣಿ- ದೀಪಾವಳಿ ವಿಶೇಷಾಂಕ ೧೯೮೯

೧೦. ಬಳ್ಳಾರಿ ಜಿಲ್ಲಾದರ್ಶನ, ಸಿ.ವ.ಚನ್ನಬಸವೇಶ್ವರ

೧೧. ಪೊಟ್ಟಲಕೆರೆಯ ಶಾಸನ ವಿಮರ್ಶೆ, ಪು.೮೯

೧೨. ಮಂಗಳಾರುತಿ ಪದಗಳ ಪುಸ್ತಕ (ರಚನೆ ಬಳಿಗಾನೂರು ಕೊಟ್ರಯ್ಯ) ಕೊಟ್ಟೂರು ಮುತ್ತಿಗೆಯ ಪದ - ೧೯೬೧ ಸಂ.ಬಿ.ಮಲ್ಲೇಶಪ್ಪ, ಬಾಗಳಿ

೧೩. ಸ್ಥಳೀಯರೇ ಆದ, ಯಜಮಾನ ಬಣಕಾರ ಸಿದ್ದಪ್ಪ, ನಾಗಪ್ಪ, ಮತ್ತು ಕಾಟ್ರಳ್ಳಿಯವರ ಅಭಿಪ್ರಾಯ.

೧೪. ಕರ್ನಾಟಕ ರಾಜ್ಯ ಗ್ಯಾಸಿಟಿಯರ್, ಭಾಗ ಮೂರು, ಪು೧-೫೪೬

೧೫. ಕನ್ನಡ ವಿಶ್ವಕೋಶ, ಮೈ.ವಿ.ವಿ ಪುಟ-೯೯೪

೧೬. ಕ.ವಿ.ಶಾ. ಬಾಗಳಿ ಶಾಸನ-೯೭

೧೭. ಕರ್ನಾಟಕ ಇತಿಹಾಸ ದರ್ಶನ ಪು.೨೬೦

೧೮. ಇತಿಹಾಸ ದರ್ಶನ, ಸಂ.೫, ಪು.೯೫

೧೯. (Among other impartant places mention may be made of Bagali, Ittgi and Kuknoor. At Bagali, the foundation of a Brick built temple of he Satavahana period was noticed, lying on the north of the Mallikarjuna temple) Indian Archaeology A Review-1983-84, P.40

೨೦. ,, ಬಾಗಳಿ ಶಾಸನ-೯೭ ಕ್ರಿ.ಶ.೧೦೧೮

೨೧. ಶಾಸನ ವ್ಯಾಸಂಗ- ಪಂಪನ ಅಗ್ರಹಾರ- ರನ್ನನ ಬತ್ತಗಾವೆ. ಎಂ.ಎಂ.ಕಲಬುರ್ಗಿ, ಪು.೧.೪೩

೨೨. ಮಾರ್ಗ-೨, ಎಂ.ಎಂ.ಕಲಬುರ್ಗಿ ಪುಟ-೬೦

೨೩. ಕೋಗಳಿ ಶಾಸನ ೧೫

೨೪. ಕ.ವಿ.ಶಾ ಉಚ್ಚಂಗಿದುರ್ಗ ಶಾಸನ-೬ ಕ್ರಿ.ಶ.೧೦೬೪

೨೫. ,, ಕಡಬಗೆರೆ ಶಾಸನ-೨೧೦ ಕ್ರಿ.ಶ.೯೩೩

೨೬. ,, ಕಡುಗೆರೆ ಶಾಸನ-೨೧೧ ಕ್ರಿ.ಶ.೯೩೩

೨೭. ,, ಬಾಗಳಿ ಶಾಸನ-೧೩೦ ಕ್ರಿ.ಶ.೯೮೭-೯೦೯

೨೮. ,, ಕೋಗಳಿ ಶಾಸನ-೧೭ ಕ್ರಿ.ಶ.೯೯೨

೨೯. ,, ಕರ್ನಾಟಕ ಚರಿತ್ರೆ ಸಂಪುಟ-೨ ಕ.ವಿ.ಹಂ ಪುಟ-೨

೩೦. ,, ಬಾಗಳಿ ಶಾಸನ-೧೨೪

೩೧. ,, ಕಡಬಗೆರೆ ಶಾಸನ-೨೧೦ ಕ್ರಿ.ಶ.೯೩೩

೩೨. ,,

೩೩. ,, ಬಾಗಳಿ ಶಾಸನ-೯೬ ,,

೩೪. ಬ.ಜಿ.ಸಾ.ಇ ಪುಟ-೩೪

೩೫. ಕ.ವಿ.ಶಾ ಬಾಗಳಿ ಶಾಸನ-೧೨೬

೩೬. ,, ೯೪ ಕ್ರಿ.ಶ.೯೫೬

೩೭. ,, ೯೪ ಕ್ರಿ.ಶ.೯೫೬

೩೮. ,, ೧೩೦ ಕ್ರಿ.ಶ.೯೮೭

೩೯. ,, ಕುಡುತಿನಿ ಶಾಸನ-೨೬ ಕ್ರಿ.ಶ.೯೯೧

೪೦. ,, ಬಾಗಳಿ ಶಾಸನ-೯೬ ಕ್ರಿ.ಶ.೯೯೬

೪೧. ,, ೯೭ ಕ್ರಿ.ಶ.೧೦೧೮

೪೨. ,, ೧೩೬ ಕ್ರಿ.ಶ.೧೦೧೮

೪೩. ,, ೯೯ ಕ್ರಿ.ಶ.೧೦೩೫

೪೪. ,, ೧೮೩ -

೪೫. ,, ಕೋಗಳಿ ಶಾಸನ-೯ ಕ್ರಿ.ಶ. ೧೦೪೭

೪೬. ,, ಚಿರಸ್ತಹಳ್ಳಿ ಶಾಸನ-೫೨ ಕ್ರಿ.ಶ.೧೦೪೮-೪೯

೪೭. ,, ಬಾಗಳಿ ಶಾಸನ-೧೩೧ ಕ್ರಿ.ಶ.೧೦೫೦

೪೮. ,, ಹಿರೇಹಡಗಲಿ ಶಾಸನ-೫೨ ಕ್ರಿ.ಶ.೧೦೫೭

೪೯. ,, ಬಾಗಳಿ ಶಾಸನ-೧೦೦ ಕ್ರಿ.ಶ.೧೦೭೯

೫೦. ,, ೧೦೨ ಕ್ರಿ.ಶ.೧೦೭೯

೫೧. ,, ೧೨೨ ಕ್ರಿ.ಶ.೧೦೭೯

೫೨. ,, ೧೦೩ ಕ್ರಿ.ಶ.೧೧೦೭

೫೩. ,, ೧೨೭ ಕ್ರಿ.ಶ.೧೧೧೩

೫೪. ,, ೧೦೭ ಕ್ರಿ.ಶ.೧೧೧೫

೫೫. ,, ೧೦೬ ಕ್ರಿ.ಶ.೧೧೧೫

೫೬. ,, ೧೭೬ ಕ್ರಿ.ಶ.೧೧೧೯

೫೭. ,, ೧೦೮ ಕ್ರಿ.ಶ.೧೧೨೨

೫೮. ,, ೧೩೭ ಕ್ರಿ.ಶ.೧೧೨೬

೫೯. ,, ಕುರುವತ್ತಿ ಶಾಸನ ೧೩

೬೦. ,, ಬಾಗಳಿ ೯೮ ಕ್ರಿ.ಶ.೧೧೪೭

೬೧. ,, ೧೧೪ ಕ್ರಿ.ಶ.೧೧೪೮

೬೨. ,, ೧೧೩ ೧೧೪೩

೬೩. ,, ಕುರುವತ್ತಿ ಶಾಸನ-೪ ೧೧೯೪

೬೪. ,, ಕುಮಾರಸ್ವಾಮಿ ಬೆಟ್ಟ ಶಾಸನ-೭ ೧೨೦೬

೬೫. ,, ಕುರುವತ್ತಿ ಶಾಸನ-೫೩ ೧೨೧೨

೬೬. ,, ಕೊಟ್ಟೂರು ಶಾಸನ-೧೩ ಕ್ರಿ.ಶ.೧೨೨೧

೬೭. ,, ನೀಲಗುಂದ ಶಾಸನ-೮೦ ಕ್ರಿ.ಶ.೧೨೨೪

೬೮. ,, ಬಾಗಳಿ ಶಾಸನ-೧೭

೬೯. ,, ೧೩೩ ಕ್ರಿ.ಶ.೧೨೨೮

೭೦. ,, ೧೮೨ ಕ್ರಿ.ಶ.೧೨೫೧

೭೧. ,, ೧೩೫ ಕ್ರಿ.ಶ.೧೨೫೧

೭೨. ,, ೧೩೩ -

೭೩. ,, ೧೩೩ - ಪಶ್ಚಿಮ ಮುಖ (ಈ ಶಾಸನದಲ್ಲಿ ಬೇರೆ ಬೇರೆ ಶಾಸನ ಪಾಠಗಳು ಸೇರಿದ್ದು, ಬೇರೆ ಬೇರೆ ಮುಖಗಳಿಂದ ಗುರುತಿಸಲಾಗಿದೆ. ಪಶ್ಚಿಮ ಮುಖ, ಉತ್ತರಮುಖ, ಪೂರ್ವಮುಖ, ದಕ್ಷಿಣ ಮುಖ)

೭೪. ,, ೧೩೩ ಪೂರ್ವಮುಖ

೭೫. ,, ೧೧೬ ಕ್ರಿ.ಶ.೧೧೯೩

೭೬. ,, ೧೩೫ ಕ್ರಿ.ಶ.೧೨೫೦

೭೭. ,, ನೀಲಗುಂದ ಶಾಸನ-೮೦ ಕ್ರಿ.ಶ.೧೨೫೦

೭೮. ,, ಬಾಗಳಿ ಶಾಸನ-೯೭-

೭೯. ,, ಬಾಗಳಿ ಶಾಸನ-೧೩೬ ಕ್ರಿ.ಶ.೧೦೧೮

೮೦. ,, ತಲವಾಗಿಲು ಶಾಸನ-೨೧೭ ಕ್ರಿ.ಶ.೧೦೩೪

೮೧. ,, ಸೋಗಿ ಶಾಸನ-೯೬ ೧೦೩೮

೮೨. ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು - ಸಂ.ಲಕ್ಷ್ಮಣ ತೆಲಗಾವಿ, ಪು.೩೩೩

೮೩. ಕ.ವಿ.ಶಾ ಬಾಗಳಿ ಶಾಸನ-೧೦೦ ಕ್ರಿ.ಶ.೧೦೭೯

೮೪. ,, ಅಂಬಳಿ ಶಾಸನ-೫ ಕ್ರಿ.ಶ.೧೦೮೩

೮೫. ,, ಬಾಗಳಿ ಶಾಸನ-೧೦೭ ಕ್ರಿ.ಶ.೧೧೧೫

೮೬. ,, ೧೦೮ ಕ್ರಿ.ಶ.೧೧೨೨

೮೭. ,, ೧೧೧ ತ್ರುಟಿತ

೮೮. ,, ೧೧೨ ಕ್ರಿ.ಶ.೧೧೨೬

೮೯. ,, (ಹೂವಿನಹಡಗಲಿ-೮೩)ರಾಗಿಮಸಲವಾಡ ಶಾಸನ-೩೫ ಕ್ರಿ.ಶ.೧೦೮೫

೯೦. ,, ದುಗ್ಗತ್ತಿ ಶಾಸನ-೩೬ ಕ್ರಿ.ಶ.೧೧೨೬

೯೧. ,, ಬಾಗಳಿ ಶಾಸನ-೧೦೭-೧೧೧೫

೯೨ ,, ೧೭೯-

೯೩. ,, ೧೧೫ ಕ್ರಿ.ಶ.೧೧೫೩

೯೪ ,, ೧೮೪ ಕ್ರಿ.ಶ.೧೧೬೦

೯೫ ,, ನೀಲಗುಂದ ಶಾಸನ-೭೯ ಕ್ರಿ.ಶ.೧೧೬೨

೯೬. ,, ಬಾಗಳಿ ಶಾಸನ-೧೮೦

೯೭.. ,, ಮಾಡಲಗೇರಿ ಶಾಸನ-೯೨ ಕ್ರಿ.ಶ.೧೧೭೧

೯೮. ,, ಮಾನ್ಯರ ಮಸಲವಾಡ-೬೧ ಕ್ರಿ.ಶ.೧೧೭೮

೯೯.. ,, ಹೊಳಲು ಶಾಸನ-೩೯ ಕ್ರಿ.ಶ.೧೧೮೧

೧೦೦. ಲಿಂಗಣ್ಣ ಕವಿಯ ಕೆಳದಿ ನೃಪವಿಜಯದಲ್ಲಿ ಹರಪನಹಳ್ಳಿ ಪಾಳೆಯಗಾರರು ಡಾ.ಕೆಳದಿವೆಂಕಟೇಶಜೋಯಿಸ, ಪು.೨೩೮

೧೦೧. ಚಿಕ್ಕರೂರು ಗೋವಿಂದಚಾರ್ಯರ ಲೇಖನ(ಅಪ್ರಕಟಿತ) ಪುಟ-೫೦

೧೦೨. ಕೈಫಿಯತ್ತುಗಳಲ್ಲಿ ಕುಮಾರರಾಮ ಎಸ್.ಬಿ., ಹರ್ಲಾಪುರ, ಪು.೨೭

೧೦೩. ಬಾ.ಗಿ.ಬಾ, ಪು-೨೮೨

೧೦೪. ಹ.ಪಾ. ಕುಂಬಾಸ, ಪು.೮೮ ಮತ್ತು ಬ.ಜಿ.ಸಂ ಕೊಟ್ಟೂರು ಶಾಸನ-೧೦

೧೦೫. ಅದೇ ,, ಪು-೧೫

೧೦೬. ಕ.ವಿ.ಶಾ.ಸಂ. ಕೂಡ್ಲಿಗಿ ಶಾಸನ-೮

೧೦೭. ಕೆಳದಿ ನೃಪವಿಜಯ ಡಾ.ಕೆಳದಿ ವೆಂಕಟೇಶಜೋಯಿಸ, ಪು.೨೩೮

೧೦೮. (ಹನ್ನೆರಡನೆಯ ಶತಮಾನದ ನಂತರ ಶಿವಶರಣರ ಪರಂಪರೆ ಮುಗಿದ ಮೇಲೆ ಚೀರಾಳ್ ಸ್ವಾಮಿ ೧೬೦೫ರಲ್ಲಿ ಹರಪನಹಳ್ಳಿಯಲ್ಲಿ ಅವದೂತ ಪರಂಪರೆಯನ್ನು ಪ್ರಾರಂಭಿಸಿದರು.(ಅಂದರೆ ಹರಪನಹಳ್ಳಿಯಲ್ಲಿ ಬಸವಂತರಾಯ ಪಾಳೆಯಗಾರ ಆಳುತ್ತಿದ್ದ ಕಾಲ. ೧೬ ರಿಂದ ೧೭ನೇ ಶತಮಾನದ ಅವಧಿ) ಈ ಚೀರಾಳ್ ಸ್ವಾಮಿಯ ಮಠ ಇಂದಿಗೂ ಹರಪನ ಹಳ್ಳಿಯಲ್ಲಿ ಇದೆ ಎಂಬ ಪ್ರತೀತಿ ಇದೆ. ಇವರಿಗೆ ಪೊಡಮೊಟ್ಟು ಬಸವಂತರಾಯ 'ಶರಣಸತಿ ಲಿಂಗಪತಿ' ಎಂಬ ಭಾವನೆಯಿಂದ ಪೂಜಿಸುವಾಗ 'ಸತಿ' ಎಂಬ ಭಾವನೆಯಿಂದ ಕೈಗೆ ಬಳೆತೊಟ್ಟು ಪೂಜಿಸುತ್ತಿದ್ದ ಎಂಬ ಪರಿಕಲ್ಪನೆ ಇತಿಹಾಸದಿಂದ ತಿಳಿದುಬರುತ್ತದೆ. ಈ ಅಂಶದಿಂದಲೂ ಅವನು ವೀರಶೈವ ಧರ್ಮಕ್ಕೆ ಮತಾಂತರ ಹೊಂದಿದನು ಎನ್ನಬಹುದು.)

೧೦೯. ಇತಿಹಾಸದರ್ಶನ, ಸಂ-೭

೧೧೦. ಹ.ಪಾ. ಕುಂಬಾಸ ಪುಟ-೮೬

೧೧೧. ಪ್ರಾಚೀನ ಶಾಸನ ಲೇಖನ ಸಂಗ್ರಹ, ಪು.೮೩

೧೧೨. ಬ.ಜಿ.ಶಾ.ಸಂ ನಿಚ್ಚವನಹಳ್ಳಿ(ಹ.ಹಳ್ಳಿ.ತಾ) ಶಾಸನ-೨೧೩

೧೧೩. ಅದೇ ಕಸವನಹಳ್ಳಿ ,, ಶಾಸನ-೨೧೨

೧೧೪. ,, ಅರಸಿಕೆರೆ ,, ಶಾಸನ-೨೧೫

೧೧೫. ಕೆಳದಿ ನೃಪವಿಜಯ- ಕೆಳದಿ ವೆಂಕಟೇಶ, ಪು.೨೩೮

೧೧೬. ಪ್ರಾಚೀನ ಶಾಸನ ಲೇಖನ ಸಂಗ್ರಹ, ಪು.೮೭,೮೮

೧೧೭. ಕ.ವಿ.ಶಾ ಹ್ಯಾರಡ ಶಾಸನ-೪೩

೧೧೮. ,, ೪೫

೧೧೯. ಪ್ರಾಚೀನ ಶಾಸನ ಲೇಖನ ಸಂಗ್ರಹ, ಪು.೮೭

೧೨೦. ಅದೇಶ ಪು.೮೭

೧೨೧. ಕ.ವಿ.ಶಾ ಹ್ಯಾರಡ ಶಾಸನ-೪೪

೧೨೨. ,, ಬನ್ನಿಕಲ್ಲು ಶಾಸನ-೨೩

೧೨೩. ಉಚ್ಚಂಗಿದುರ್ಗದ ಐತಿಹಾಸಿಕ ಮತ್ತು ಸಾಂಸ್ಕೃತಿಕ ದರ್ಶನ, ಎಂ.ಕೊಟ್ರೇಶ್ (ಎಂ.ಫಿಲ್ ಪ್ರಬಂಧ), ಕ.ವಿ.ಹಂ, ಪು.೩೮

೧೨೪. ಕ.ವಿ.ಶಾ.ಸಂ. ಹ್ಯಾರಡ ಶಾಸನ-೪೪

೧೨೫. ಹ.ಪಾ.ಕುಂಬಾಸ ಪುಟ-೯೫

೧೨೬. ಕ.ವಿ.ಶಾ.ಸಂ ಉಚ್ಚಂಗಿದುರ್ಗ ಶಾಸನ-೧೯

೧೨೭. ,, ಉಜ್ಜನಿ ಶಾಸನ-೮

೧೨೮. ,, ಉಚ್ಚಂಗಿದುರ್ಗ ಶಾಸನ-೧೮

೧೨೯. ,, ಕೊಟ್ಟೂರು ಶಾಸನ-೧೦ ಕ್ರಿ.ಶ.೧೫೪೭

೧೩೦. ,, ಬಾಗಳಿ ಶಾಸನ-೧೨೧ ಕ್ರಿ.ಶ.೧೫೫೦

೧೩೧. ,, ಮುತ್ತಿಗಿ ಶಾಸನ-೧೮೬ ಕ್ರಿ.ಶ.೧೫೫೧

೧೩೨. ,, ಬಾಗಳಿ ಶಾಸನ-೧೨೧

೧೩೩. ,, ಕಸವನಹಳ್ಳಿ ಶಾಸನ (ಕಸವನಹಳ್ಳಿ)-೨೧೨

೧೩೪. ,, ಮೈದೂರು ಶಾಸನ-೧೯೨

೧೩೫. ,, ಬಾಗಳಿ ಶಾಸನ-೧೪೬

೧೩೪. ,, ಬಾಗಳಿ ೧೫೪

೧೩೫. ,, ನೀಲಗುಂದ ಶಾಸನ-೮೪

೧೩೬. ,, ನೀಲಗುಂದ ಶಾಸನ-೮೬

◆◆

ಅಧ್ಯಾಯ ೩

ಆಡಳಿತ ವ್ಯವಸ್ಥೆ

೧ ಸಾಮಂತರು
೨ ದಂಡನಾಯಕರು
೩ ಮಹಾಮಂಡಳೇಶ್ವರರು
೪ ಸೇನಭೋವರು
೫ ಹೆಗ್ಗಡೆಗಳು
೬ ಕುಳಕರಣಿಗಳು
೭ ಗ್ರಾಮಾಡಳಿತ

ಪ್ರಾಚೀನ ಕರ್ನಾಟಕದಲ್ಲಿ ಆಡಳಿತ ವ್ಯವಸ್ಥೆಯನ್ನು ಸ್ಥೂಲವಾಗಿ ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ರಾಜ್ಯಾಡಳಿತ, ಗ್ರಾಮಾಡಳಿತ. ಇದು ಕೇವಲ ನಮ್ಮ ಸೌಕರ್ಯಕ್ಕಾಗಿ ಮಾಡಿಕೊಂಡಿರುವ ವ್ಯವಸ್ಥೆ. ಒಂದನ್ನು ಬಿಟ್ಟು ಮತ್ತೊಂದು ಇಲ್ಲ. ಏಕೆಂದರೆ ಗ್ರಾಮಗಳ ಮತ್ತು ನಗರಗಳ ಒಟ್ಟಾರೆ ಮೊತ್ತವೇ ರಾಜ್ಯ. ಆದರೆ ಒಂದೊಂದು ಗ್ರಾಮಗಳು ಕೆಲವು ವಿಷಯಗಳಲ್ಲಿ ಆಡಳಿತದ ಪ್ರತ್ಯೇಕ ಘಟಕಗಳಾಗಿವೆ. ಆದುದರಿಂದ ಗ್ರಾಮವೇ ಆಡಳಿತದ ಕೊನೆಯ ಘಟಕ. ಗ್ರಾಮಗಳಲ್ಲಿ ಗ್ರಾಮಪಂಚಾಯತಿಗಳಿದ್ದು, ಅಲ್ಲಿ ಮುಖಂಡ ಗೌಡನಾಗಿರುತ್ತಾನೆ. ಗ್ರಾಮಗಳಲ್ಲಿ 'ಗೌಡನ' ನೇತೃತ್ವದಲ್ಲಿ ಆಡಳಿತವನ್ನು ನಿರ್ವಹಿಸುತ್ತಿದ್ದರೆ, ನಗರಗಳ ಮುಖಂಡನಿಗೆ 'ಪಟ್ಟಣಸ್ವಾಮಿ' ಎಂದು ಕರೆಯಲಾಗುತ್ತಿತ್ತು.

ಇವುಗಳಿಗೆಲ್ಲ ರಾಜನೇ ಅಧಿಪತಿ. 'ಯಥಾರಾಜ ತಥಾಪ್ರಜಾ' ಎನ್ನುವ ಮಾತಿನಂತೆ ರಾಜನೇ ಸರ್ವೋಚ್ಛ (supream) ರಾಜ್ಯದ ರಕ್ಷಣೆಯೇ ಅವನ ಹೊಣೆಯಾಗಿತ್ತು. ಕೆಲವು ಸಂದರ್ಭಗಳಲ್ಲಿ 'ರಾಜನ್' ಎಂಬ ಬಳಕೆಯೂ ಉಂಟು.[೧] ಉನ್ನತ ಜವಬ್ದಾರಿ ಹೊತ್ತ ರಾಜ, ಪ್ರಜೆಗಳ ಕ್ಷೇಮವೇ ಅವನ ಆದ್ಯ ಕರ್ತವ್ಯವಾಗಿತ್ತು. ಇಂತಹ ಸಾರ್ವಜನಿಕ ಹೊಣೆ ಹೊತ್ತ ರಾಜ, ತನ್ನ ನೆರವಿಗೆ ಒಂದು ಮಂತ್ರಿ ಪರಿಷತ್ತನ್ನು ರಚಿಸಿಕೊಂಡಿರುತ್ತಾನೆ. ವಿವಿಧ ಅಧಿಕಾರಿಗಳನ್ನು ನೇಮಿಸಿಕೊಂಡಿರುತ್ತಾನೆ. ಈ ಮಂತ್ರಿ ಪರಿಷತ್ತಿನಲ್ಲಿ ಮಹಾಮಂಡಳೇಶ್ವರ, ಮಂಡಳೇಶ್ವರ, ಸಾಮಂತಾಧಿಪತಿ, ದಂಡನಾಯಕ, ಮಹಾಸಾಮಂತಾಧಿಪತಿ, ಸಂಧಿವಿಗ್ರಹಿ, ಧರ್ಮಾಧಿಕಾರಿ ಎಂಬ ವಿವಿಧ ವರ್ಗಗಳನ್ನು ನೋಡಬಹುದು. ಸಾಮ್ರಾಜ್ಯವನ್ನು ಇದರಂತೆಯೇ, ಪ್ರಾಂತ್ಯ, ರಾಷ್ಟ್ರ, ದೇಶ, ಘಟಕ, ಮಂಡಲ, ವಿಷಯ ಎಂಬ ಭಾಗಗಳಿಂದ ಗುರುತಿಸಿಕೊಂಡಿರುತ್ತಾನೆ. ಮಂಡಲ ಅಥವಾ ಪ್ರಾಂತದ ಒಡೆಯನಿಗೆ ಮಂಡಲಾಧಿಪತಿ, ಮಂಡಳೇಶ್ವರ ಎಂದು ಕರೆಯಬಹುದು. ಇನ್ನು ಮಂಡಲದ ಕೆಳಗಿನ ವಿಭಾಗಕ್ಕೆ 'ನಾಡು' ಎಂದು ಸೂಚಿಸಲಾಗಿದೆ. 'ನಾಡು'ಗಳನ್ನು 'ನಾಡಗಾವುಂಡ' ಅಥವಾ ನಾಡಪೆರ್ಗ್ಗಡೆ ಆಳುತ್ತಿದ್ದನು. ಮೇಲೆ ಹೇಳಿದ ಹಾಗೆ ಗ್ರಾಮಗಳಲ್ಲಿ ಗ್ರಾಮಸಭೆಗಳು, ಅಗ್ರಹಾರಗಳಲ್ಲಿ ಮಹಾಜನರ ಸಭೆ, ಪಟ್ಟಣಗಳಲ್ಲಿ ವರ್ತಕರ ಸಭೆ, ಮಹಾನಾಡುಗಳೆಂದು ವಿಭಾಗಿಸಿ, ಇದರ ಒಡೆಯ ಪಟ್ಟಣಸ್ವಾಮಿಯಾಗಿರುತ್ತಿದ್ದನು. ಹೀಗೆ ರಾಜರು ತಮ್ಮ ಆಡಳಿತಕ್ಕೆ(ವಂಶಪಾರಂಪರ್ಯ) ತಕ್ಕಂತೆ ರಾಜ್ಯವನ್ನು ಅಥವಾ ಸಾಮ್ರಾಜ್ಯವನ್ನು ಗಂಗವಾಡಿ-೯೬೦೦೦, ನೊಳಂಬವಾಡಿ-೩೨೦೦೦, ಬನವಾಸಿ-೧೨೦೦೦ಗಳೆಂಬ ವಿಭಾಗಗಳನ್ನು ರಚಿಸಿಕೊಂಡಿದ್ದರು. ಇವುಗಳಲ್ಲಿ ನೊಳಂಬವಾಡಿ-೩೨೦೦೦ ಸಾವಿರದ ಒಂದು ವಿಭಾಗ ಬಳ್ಳಾರಿ. ಈ ವಿಭಾಗವನ್ನು ಶಾತವಾಹನರು, ಪಲ್ಲವರು, ಕದಂಬರು, ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಪಾಂಡ್ಯರು

ಆಳಿದರೆಂದು ಕಂಡುಬರುತ್ತದೆ. ನೊಳಂಬವಾಡಿ ನಾಡಿನಲ್ಲಿ ಬಲ್ಲಕುಂದೆ-೩೦೦, ಕೋಗಳಿ-೫೦೦, ಕದಂಬಳಿಕೆ-೧೦೦೦, ಮಾಸವಾಡಿ-೧೪೦, ಕಿಸುಕಾಡು-೭೦, ಕುದಿಹರವಿ-೭೦, ಬಿಕ್ಕಿಗ-೭೦, ಮುತ್ತಿಗೆ-೩೦, ಸಂದವತ್ತಿ-೧೨, ಎಡದೊರೆ-೨೦೦೦ ಪ್ರಮುಖ ವಿಭಾಗಗಳಾಗಿದ್ದವು. ಇವುಗಳಲ್ಲಿ ಈ ಅಧ್ಯಯನಕ್ಕೆ ಸಂಬಂಧಿಸುವಂತೆ ರಾಷ್ಟ್ರಕೂಟರ, ಚಾಲುಕ್ಯರ, ಹೊಯ್ಸಳರ ಆಡಳಿತ ವಿಭಾಗಗಳನ್ನು ನೋಡಲಾಗಿದೆ.

ಬಾಗಳಿ ಶಾಸನಗಳಲ್ಲಿ ಉಲ್ಲೇಖವಾಗಿರುವ ಆಡಳಿತ ವಿಭಾಗಗಳು

ಪ್ರಾಚೀನ ಕಾಲದಲ್ಲಿ ಬಳ್ಳಾರಿ ಜಿಲ್ಲೆ ಎರಡು ಪ್ರಮುಖ ವಿಭಾಗಗಳಲ್ಲಿ ಹಂಚಿಹೋಗಿತ್ತು. ಒಂದು ಸಿಂದವಾಡಿ-ಸಾವಿರ, ಮತ್ತೊಂದು ಕೋಗಳಿ-ಐನೂರು. ಇವು ನೊಳಂಬವಾಡಿ ೩೨೦೦೦ದ ವಿಭಾಗಗಳಾಗಿದ್ದವು. ಇವುಗಳ ಜೊತೆಗೆ ಕದಂಬಳಿಕೆ- ಸಾವಿರ ವಿಭಾಗಕ್ಕೆ ಹರಪನಹಳ್ಳಿಯ ಕೆಲವು ಗ್ರಾಮಗಳು ಒಳಗೊಂಡಿದ್ದವು. ಹರಪನಹಳ್ಳಿ ತಾಲೂಕಿನ 'ಕಡಬಗೆರೆ' ಎಂಬ ಸ್ಥಳ ಪ್ರಾಯಶಃ ಕದಂಬಳಿಕೆ ಸಾವಿರ ಪ್ರದೇಶದ ಕೇಂದ್ರ ಸ್ಥಳವಾಗಿರಬೇಕು. ನೊಳಂಬವಾಡಿ-೩೨೦೦೦ ವಿಭಾಗದ ಉಪವಿಭಾಗಗಳಾದ ಸಿಂದವಾಡಿ-೧೦೦೦, ಕದಂಬವಾಡಿ-೧೦೦೦, ಕೋಗಳಿ-೫೦೦ಗಳಲ್ಲಿ, ಕೋಗಳಿ-೫೦೦೦ರ ಒಂದು ಭಾಗವಾಗಿತ್ತು ಬಾಗಳಿ.

ಗಂಗವಾಡಿ-೯೬೦೦೦

ಕರ್ನಾಟಕದ ಇತಿಹಾಸದಲ್ಲಿ ಗಂಗರ ಆಳ್ವಿಕೆ ಚಿರಸ್ಮರಣೀಯ. ಇವರು ೬೧೦ ರಿಂದ ೭೫೭ವರೆಗೆ ಬಾದಾಮಿ ಚಾಲುಕ್ಯರ ಸಾಮಂತರಾಗಿ, ೭೫೭ ರಿಂದ ೯೭೩ವರೆಗೆ ರಾಷ್ಟ್ರಕೂಟರ ಸಾಮಂತರಾಗಿ, ೯೭೩ ರಿಂದ ೧೫೫ವರೆಗೆ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ರಾಜ್ಯಭಾರ ಮಾಡಿದರು. ಇವರು ಆಳಿದ ಪ್ರದೇಶವನ್ನು ಗಂಗವಾಡಿ ಅಥವಾ ಗಂಗನಾಡು ಎಂದು ಕರೆಯಲಾಗಿದೆ. ಈ ಶಾಸನದಲ್ಲಿ[೧] ನೊಳಂಬಪಲ್ಲವ ಪೆರ್ಮಾಡಿ ಈ ಭಾಗವನ್ನು ಆಳುತ್ತಿದ್ದನೆಂದು ಉಲ್ಲೇಖ ಬರುತ್ತದೆ. ಇಲ್ಲಿ ೧೦೧೮ ಎಂದು ಉಲ್ಲೇಖವಾಗಿರುವುದರಿಂದ ಚಾಲುಕ್ಯರ ದೊರೆ ಎರಡನೆಯ ಜಯಸಿಂಹನ ಸಾಮಂತನಾಗಿ ಈ ಭಾಗವನ್ನು ಆಳಿದನು. ಅಂದರೆ ಗಂಗರು ಈ ಭಾಗವನ್ನು ಆಳುವ ಸಮಯದಲ್ಲಿ ಕಲ್ಯಾಣಚಾಲುಕ್ಯರ ಸಾಮಂತರಾಗಿದ್ದರು.

ನೊಳಂಬವಾಡಿ-೩೨೦೦೦

ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗವು ಕದಂಬರ ಆಳ್ವಿಕೆಗೆ ಬಹುಕಾಲದವರೆಗೆ ಒಳಪಟ್ಟಿದ್ದರಿಂದ ಕದಂಬಳಿಗೆ-೧೦೦೦ ಎಂದೇ ಕರೆಯಲಾಗುತ್ತಿತ್ತು. ಹತ್ತನೆಯ ಶತಮಾನದಲ್ಲಿ ನೊಳಂಬರ ಆಳ್ವಿಕೆ ಬಲವಾದ್ದರಿಂದ ಈ ಪ್ರದೇಶವೂ ನೊಳಂಬವಾಡಿ-೩೨೦೦೦ ವೆಂದು ಪ್ರಸಿದ್ಧಿಯಾಯಿತು. ನಂತರ ಈ ಪ್ರದೇಶವನ್ನಾಳಿದ ಚಾಲುಕ್ಯರು, ನೊಳಂಬರು, ರಾಷ್ಟ್ರಕೂಟರು, ಹೊಯ್ಸಳರು ಈ ಹೆಸರಿಂದಲೇ ಗುರುತಿಸಿದರು. ಇದು ಆಡಳಿತದ ದೊಡ್ಡ ವಿಭಾಗವಾದ್ದರಿಂದ, ಇದನ್ನು ಆಳುವವರು ಅದೇ ಅರ್ಥದಲ್ಲಿ ಕರೆಯುತ್ತಿದ್ದರಿಂದ ಈ ವಿಭಾಗಕ್ಕೆ ನೊಳಂಬವಾಡಿ ಎಂಬ ಹೆಸರು ಬಂದಿತ್ತು. ನಂತರ ಈ ಭಾಗವನ್ನು

ಪಾಂಡ್ಯರು ಹೆಚ್ಚು ಆಳಿದ್ದರಿಂದ, ಅವರನ್ನು ಶಾಸನಗಳಲ್ಲಿ ಹೆಚ್ಚಾಗಿ ನೊಳಂಬವಾಡಿ-೩೨೦೦೦ ಆಳುತ್ತಿರುವಾಗ ಎಂದು ಉಲ್ಲೇಖಿಸಿವೆ.

ಕೋಗಳಿ-೫೦೦

ಇದು ನೊಳಂಬವಾಡಿ-೩೨೦೦೦ದ ಒಂದು ಉಪವಿಭಾಗ. ಕೋಗಳಿಯನ್ನು ಮುಖ್ಯ ಕೇಂದ್ರವಾಗಿಸಿಕೊಂಡ ಇದರ ಸುತ್ತಲ ೫೦೦ ಗ್ರಾಮಗಳನ್ನು ಒಳಗೊಂಡ ವಿಭಾಗವೇ ಕೋಗಳಿ-೫೦೦. ಇದು ಹಗರಿಬೊಮ್ಮನಹಳ್ಳಿ ತಾಲೂಕಿನ ಚಿಕ್ಕಗ್ರಾಮ. ಕೋಗಳಿ-೫೦೦ ವಿಭಾಗವನ್ನು ಬೇರೆ ಬೇರೆ ರಾಜವಂಶೀಯರು ಆಳಿದರು. ಆದರೆ ಸಿಂದವಾಡಿನಾಡು ಅಥವಾ ಸಿಂದವಾಡಿ ಸಾಸಿರವನ್ನು ಸಿಂದ ಅರಸರು ಆಳಿದರು. ಕೋಗಳಿ ನಾಡು ಮತ್ತು ಸಿಂದವಾಡಿ ನಾಡುಗಳನ್ನು ಬೇರ್ಪಡಿಸುವ ಗಡಿ ಎಂದರೆ, ಸಂಡೂರಿನಿಂದ ತುಂಗಭದ್ರ ನದಿಯವರೆಗೆ ಹಬ್ಬಿರುವ ಬೆಟ್ಟದ ಸಾಲು. ಈ ಬೆಟ್ಟದ ಸಾಲಿನ ಪಶ್ಚಿಮ ಭಾಗ. ತುಂಗಭದ್ರೆಯ ನದಿದಂಡೆ ದಕ್ಷಿಣ ಭಾಗ ಕೋಗಳಿ ನಾಡಾಗಿದೆ.

ಪ್ರಾಚೀನ ಕಾಲದ ಪ್ರಸಿದ್ಧ ನಗರವಾದ ಇದು ಜೈನರ ಕೇಂದ್ರವಾಗಿತ್ತು. ಕ್ರಿ.ಶ.೫೬೯ರಲ್ಲಿ ಗಂಗರ ದೊರೆ ದುರ್ವಿನೀತನು ಕೋಗಳಿಯಲ್ಲಿ ಬಸದಿಯನ್ನು ನಿರ್ಮಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ.[೨] ಶಿವಕೋಟ್ಯಾಚಾರ್ಯರ ವಡ್ಡಾರಾಧನೆಯಲ್ಲಿ ಕೋಗಳಿಯ ಉಲ್ಲೇಖ ಬರುತ್ತದೆ. ಬಾಗಳಿಯ ಒಂದು ಶಾಸನದಲ್ಲಿ ಕೋಗಳಿಯ ವರ್ಣನೆ ಬರುತ್ತದೆ.[೩] ಆದರೆ ಶಾಸನ ತ್ರುಟಿತವಾಗಿರುವುದರಿಂದ ಸರಿಯಾದ ಮಾಹಿತಿ ಸಿಗುವುದಿಲ್ಲ. ನೀಲಗುಂದ ಮತ್ತು ಮೋರಗೇರಿ ಶಾಸನಗಳಲ್ಲಿ ಕೋಗಳಿಯನ್ನು ಕಾವ್ಯಮಯವಾಗಿ ವರ್ಣಿಸಿರುವ ಉಲ್ಲೇಖಗಳು ಬಂದಿವೆ. ನೀಲಗುಂದ ಶಾಸನದಲ್ಲಿ ಕೋಗಳಿಯನ್ನು ಹೀಗೆ ವರ್ಣಿಸುತ್ತದೆ.

> ನಾಡುಗಳೊಳಗೆಲ್ಲ ನಾಡಿದೆತ್ತ ಸಮದ
> ನಾಡುಗರ ಸವತಿ ಚೆಲ್ವಕೋಗಳಿ
> ನಾಡು ನೋಡಲ್ಕೆ ಸೊಗಯಿಕ್ಕಂ

ಎಂದು ತ್ರಿಪದಿಯಲ್ಲಿ ಕಂಡುಬರುತ್ತದೆ.[೪] ಅಂದರೆ ನಾಡಿನ ಪ್ರಕೃತಿ, ಸಂಪತ್ತು ಸೊಬಗನ್ನು ವರ್ಣಿಸುತ್ತದೆ. ಹೀಗೆ ಪುಣ್ಯಕ್ಷೇತ್ರವೂ, ಜೈನಕ್ಷೇತ್ರವೂ ಆಗಿದ್ದ ಕೋಗಳಿ, ಹಗರಿಬೊಮ್ಮನಹಳ್ಳಿ, ಹೂವಿನ ಹಡಗಲಿ, ಕೂಡ್ಲಿಗಿ ಹಾಗೂ ಹರಪನಹಳ್ಳಿ ತಾಲೂಕಿನ ಗ್ರಾಮಗಳನ್ನು ಒಳಗೊಂಡಿತ್ತು. ಈ ಹೆಸರಿನ ಹಾಗೆ ಅಂದರೆ, ಕೋಗಳಿ-೫೦೦ ರಂತೆ, ಬಾಗಳಿ ಇದರ ಒಂದು ವಿಭಾಗವಾಗಿತ್ತು. ಆದರೆ ಬಾಗಳಿಗೆ ಕೋಗಳಿ-೫೦೦ ಎನ್ನುವ ಹಾಗೆ ಇದಕ್ಕೆ ಯಾವುದೇ ಸಂಖ್ಯೆಯಿಲ್ಲ. ಇಲ್ಲಿಯ ಶಾಸನಗಳಲ್ಲಿ ಹೆಚ್ಚಾಗಿ, ಬಾಗಳಿ-೫೦(ಐವತ್ತು), ಮಹಾಜನರು ಎಂದು ಉಲ್ಲೇಖವಾಗಿರುವುದರಿಂದ ಬಾಗಳಿಯನ್ನು 'ಬಾಗಳಿ-೫೦' ಎಂದು ಹೇಳಲಾಗಿದೆ.

ಬಲ್ಲಕುಂದೆ-೩೦೦

ಕರ್ನಾಟಕದ ಸಂಸ್ಕೃತಿಯ ಹಿರಿಮೆಯನ್ನು ಹೊತ್ತುನಿಂತ ಹಲವು ಪ್ರಮುಖ ಆಡಳಿತ ವಿಭಾಗಗಳಲ್ಲಿ ಸಿಂದವಾಡಿ-೧೦೦೦ರ ಉಪವಿಭಾಗವಾದ ಬಲ್ಲಕುಂದೆ-೩೦೦ ಒಂದು. ಇದು ಮೂರುನೂರು ಹಳ್ಳಿಗಳಿಂದ ಕೂಡಿದ, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಚಿಕ್ಕಗ್ರಾಮ. ಬಲ್ಲಕುಂದೆ ನಾಡಿನ ಕೇಂದ್ರಸ್ಥಳವಾಗಿದ್ದು, ತುಂಗಭದ್ರಾ ಮತ್ತು ಇದರ ಉಪನದಿಗಳ ಮಧ್ಯದಲ್ಲಿ ಬಳ್ಳಾರಿ ಸಿರುಗುಪ್ಪ, ಸಂಡೂರು, ಹೊಸಪೇಟೆ ತಾಲೂಕುಗಳ ಭಾಗವನ್ನು ವ್ಯಾಪಿಸಿತ್ತು. ಬಲ್ಲಕುಂದೆ ನಾಡು ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಕಲಚೂರ್ಯರು, ನೊಳಂಬರು, ಪಲ್ಲವರು ಮತ್ತು ಉಚ್ಚಂಗಿಯ ಪಾಂಡ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಕುರುಗೋಡಿನ ಸಿಂದರಿಗೂ ಆಶ್ರಯ ನೀಡಿತ್ತು. ಕುರುಗೋಡು ಬಲ್ಲಕುಂದೆ ನಾಡಿಗೆ ರಾಜಧಾನಿಯಾಗಿತ್ತು. ಬಾಗಳಿಯ ಎರಡು ಶಾಸನಗಳಲ್ಲಿ[೫೫] ಬಲ್ಲಕುಂದೆ-೩೦೦ ಎಂದು ಉಲ್ಲೇಖ ಬರುತ್ತದೆ. ಅಂದರೆ ಆ ಎರಡು ಶಾಸನಗಳಲ್ಲಿ ಗಂಗವಾಡಿ-೯೬೦೦೦, ಕದಂಬಳಿಕೆ-೧೦೦೦, ಕೋಗಳಿ-೫೦೦, ಮಾಸವಾಡಿ-೧೪೦ ರೊಳಗಣ ಐದು ಗ್ರಾಮಗಳನ್ನು, ಬಲ್ಲಕುಂದೆ-೩೦೦, ಕುದಿಹರವಿ-೭೦, ಎಡದೊರೆ-೨೦೦೦ಗಳನ್ನು ಕಂಪಲಿಯಿಂದ ನೊಳಂಬ ಉದಯಾದಿತ್ಯನು ಆಳುತ್ತಿದ್ದನೆಂಬ ಉಲ್ಲೇಖ ಬರುತ್ತದೆ.

ಮಾಸವಾಡಿ-೧೪೦

ಇದು ಪುಲಿಗೆರೆ ೩೦೦ರ ಉಪವಿಭಾಗವಾಗಿತ್ತು. ಅಂದರೆ ದಕ್ಷಿಣದಲ್ಲಿ ಬಲ್ಲಕುಂದೆ ನಾಡಿನ ತೆಕ್ಕೆಕಲ್ಲು-೧೨ ಮತ್ತು ನೆಲ್ಲುಡಿ-೧೨, ನೈರುತ್ಯದಲ್ಲಿ ಪುಲಿಗೆರೆ ೩೦೦ರ ಉಪವಿಭಾಗವಾಗಿತ್ತು. ಆದರೆ ಇದು ಗಂಗವಾಡಿ-೯೬೦೦೦ದ ವಿಭಾಗವಾಗಿರಬಹುದು. ಪುಲಿಗೆರೆ-೩೦೦ ಉಪವಿಭಾಗ ಮಾಸವಾಡಿ-೧೪೦ ಆಗಿತ್ತು. ಬಾಗಳಿಯ ಶಾಸನದಲ್ಲಿ ಮಾಸವಾಡಿ-೧೪೦ ರೊಳಗಣ ಎರಡು ಗ್ರಾಮಗಳು ಎಂದು ಉಲ್ಲೇಖಬಂದಿದೆ.[೬]

ಕುದಿಹರವಿ-೭೦

ಇಲ್ಲಿಯ ಎರಡು ಶಾಸನಗಳಲ್ಲಿ 'ಎಡೆದೊರೆಯಿಚ್ಛಾಸಿರದೊಳಗಣ ಕುದಿಹಾರವೆಪ್ಪತ್ತು' ಎಂದು ಉಲ್ಲೇಖಬರುತ್ತದೆ. ಈ ವಿಭಾಗವು ಶಾಸಗಳಲ್ಲಿ ಕುದಿಯಪರವಿ, ಕುದಿಯಹರವಿ, ಕುಡಿಹಾರ, ಕುದಿಹಾರ ಮೊದಲಾದ ರೂಪಗಳಲ್ಲಿ ಕಾಣಿಸಿಕೊಂಡಿದೆ. ಆದರೆ ಇದು ಎಡದೊರೆ ನಾಡಿನ ಯಾವ ವಿಭಾಗಕ್ಕೆ(ಉಪವಿಭಾಗದಲ್ಲಿ) ಸಮಾವೇಶಗೊಂಡಿತ್ತು ಎಂಬುದು ಶಾಸನಗಳಿಂದ ತಿಳಿದು ಬರುವುದಿಲ್ಲ. ಮಲ್ಲಯ್ಯನ ಗುಡ್ಡದ ಒಂದು ಶಾಸನದಲ್ಲಿ[೬] ಕುದಿಯಪರವಿಯಪ್ಪತ್ತುಮಂ' ಎಂಬ ಉಲ್ಲೇಖವಿದೆ. ಬಾಗಳಿ ಶಾಸನದಲ್ಲಿ[೭] ಕುದಿಹಾರವೆಂದಿದ್ದು, ಗುಡ್ಡದ ಶಾಸನದಲ್ಲಿ ಕುದಿಯ ಪರವಿ ಎಂದು ಬಂದಿರುವುದರಿಂದ ಬೇರೆ ಬೇರೆ ಹೆಸರುಗಳಿಂದ ಕಾಣಿಸಿಕೊಂಡಿದೆ. ಆದರೆ ಎರಡೂ ಒಂದೇ ಹೆಸರಿನ ವಿಭಾಗವಾಗಿದೆ.

ಈ ಕುದಿಯಹರವಿಯನ್ನು ಕ್ರಿ.ಶ.೧೧೧೭ರಿಂದ ೧೧೫೪ವರೆಗೆ ನೊಳಂಬಪಲ್ಲವ ವಂಶದವರು ಆಳುತ್ತಿದ್ದರು. ಇವರು ಕೋಗಳಿ, ಬಲ್ಲಕುಂದೆ, ನೊಳಂಬವಾಡಿ ನಾಡುಗಳ ಜೊತೆಗೆ ಕುದಿಯಹರವಿ ವಿಭಾಗವನ್ನು ಆಳುತ್ತಿದ್ದರು. ಕೋಗಳಿ ಮತ್ತು ಬಲ್ಲಕುಂದೆ ನಾಡುಗಳು ತುಂಗಭದ್ರಾನದಿಯ ಬಲದಂಡೆಯಲ್ಲಿರುವುದರಿಂದ ಈ ವಿಭಾಗವು ನದಿಯ ಎಡದಂಡೆಯಲ್ಲಿರಬೇಕು. ಆದ್ದರಿಂದ ಶಾಸನಗಳಲ್ಲಿ ತುಂಗಭದ್ರೆಯ ದಂಡೆಯ ಕಂಪಲಿಬೀಡಿನಿಂದ ನೊಳಂಬರು, ಪಲ್ಲವರು ಆಳುತ್ತಿದ್ದರೆಂದು ಉಲ್ಲೇಖಿಸುತ್ತವೆ.

ಎಡದೊರೆ-೨೦೦೦

ಆಡಳಿತ ವಿಭಾಗಗಳನ್ನ ಸಾಮಾನ್ಯವಾಗಿ ಆಯಾ ವಿಭಾಗಗಳ ಮುಖ್ಯ ಸ್ಥಳಗಳ ಹೆಸರಿನಿಂದ ಕರೆಯಲಾಗುತ್ತಿತ್ತು. ಉದಾ. ಕೋಗಳಿನಾಡು, ಬಲ್ಲಕುಂದೆನಾಡು, ತರ್ದವಾಡಿನಾಡು ಇತ್ಯಾದಿ. ಆದರೆ ಜನಾಂಗ ಮತ್ತು ಪ್ರಕೃತಿವಾಚಿಗಳ ದೃಷ್ಟಿಯಿಂದ ಆಡಳಿತ ವಿಭಾಗಗಳ ಮುಖ್ಯ ಸ್ಥಳಗಳನ್ನು ಶಾಸನಗಳ ಉಲ್ಲೇಖವಿಲ್ಲದಿದ್ದರೆ ಗುರುತಿಸುವುದು ಸ್ವಲ್ಪ ಕಠಿಣವೆ. ಉದಾ- ನೊಳಂಬವಾಡಿ, ಸಿಂದವಾಡಿ, ಬೆಳ್ವೊಲ ಇತ್ಯಾದಿ. ಎಡದೊರೆಯೂ ಇದೇ ಸಾಲಿಗೆ ಸೇರಿದೆ. ತುಂಗಾಭದ್ರಾನದಿಯ ದಂಡೆಯ(ಎಡೆಯ) ಮೇಲೆ ಜನವಸತಿ ನೆಲೆಸಿ ಅದು ಎಡೆಯ ಊರಾಗಿ ಬೆಳೆದಿರಬೇಕು. ಇದುವೆ ಮುಂದೆ ಎರಡು ಸಾವಿರ ನಾಡಿಗೆ ಮುಖ್ಯ ಪಟ್ಟಣವಾಗಿರಬೇಕು. ಇಲ್ಲಿಯ ಶಾಸನಗಳಲ್ಲಿ 'ವೆಡೆದೊಜೆಯಿಚ್ಛಾಸಿರ' ಎಂದು ಉಲ್ಲೇಖ ಬರುತ್ತದೆ.[೮]

ಬಿಕ್ಕಿಗ-೭೦

ಇದು ಕೋಗಳಿ-೫೦೦ ಉಪವಿಭಾಗವಾಗಿದ್ದು, ಎಪ್ಪತ್ತು ಗ್ರಾಮಗಳನ್ನು ಒಳಗೊಂಡಿತ್ತು. ಇಲ್ಲಿಯ ಶಾಸನಗಳು 'ಬಿಕ್ಕಿಗನೆಟ್ಟಿತ್ತರ(ಮನೆ) ಮಂನೆಯ ಬಿಕ್ಕಿಯುಂ ಭೀರಭಟ್ಟನು' ಎಂದು ಉಲ್ಲೇಖಿಸುತ್ತವೆ.[೯] ಬಿಕ್ಕಿಗ ಭೀರಭಟ್ಟನು ಬಿಕ್ಕಿಗನೆಳ್ಪತ್ತರವನ್ನಾಳುತ್ತಿದ್ದನೆಂದು ಗೊತ್ತಾಗುತ್ತದೆ. ತೆಲಗಿಯ ಶಾಸನದಲ್ಲಿ 'ಬಿಕ್ಕಿಗನೆಳ್ಪತ್ತರೊಳಗಣಗ್ರಹಾರ ತೆಲಗಿಯೂರೊಡೆಯ ಕಣ್ಣಿಮಯ್ಯ ಎಂಬ ಬರುತ್ತದೆ.[೧೦] ತೆಲಗಿಯ ಸಮೀಪ ಬಿಕ್ಕಿಕಟ್ಟೆಗ್ರಾಮ ಈ ವಿಭಾಗದ ಮುಖ್ಯ ಸ್ಥಳವಾಗಿರಬೇಕು. ಇದು ತೆಲಿಗಿ, ದುಗ್ಗತ್ತಿ, ತಲವಾಗಿಲು, ತುಂಬಿಗೆರೆ, ಗುಂಡಗತ್ತಿ, ಅರಸಿಕರೆ, ನೀಲಗುಂದ ಮುಂತಾದ ೭೦ ಹಳ್ಳಿಗಳನ್ನು ಒಳಗೊಂಡಿತ್ತು. ತಲವಾಗಿಲು ಒಂದು ಶಾಸನದಲ್ಲಿ 'ಕೋಗಳಿಯಯ್ನೂರರ ಕಂಪಣ ಬಿಕ್ಕಿಗನೆರ್ಪ್ಪತ್ತರೊಳಗಣ ತಲವಗೆಯ' ಎಂದಿದೆ.[೧೧] ನಿಲುಗುಂದದ ಶಾಸನದಲ್ಲಿಯೂ ಸಹ 'ಕೋಗಳಿಯಯ್ನೂರರ ಕಂಪಣಂ', 'ಬಿಕ್ಕಿಗನೆರ್ಪ್ಪತ್ತಱ ಮೊದಲ ಕಂಪಣಂ', ಶ್ರೀ ಮದಗ್ರಹಾರ ನೀರ್ಗುಂದ' ಎಂದು ಬರುತ್ತದೆ.[೧೨] ಈ ಎಲ್ಲಾ ಗ್ರಾಮಗಳು ಬಿಕ್ಕಿಗ ೭೦ರ ವಿಭಾಗಕ್ಕೆ ಸೇರಿದ್ದವು.

ಬಾಗಳಿ-೫೦

ಇದು ಕೋಗಳಿ-೫೦೦ ನಾಡಿನ ಉಪವಿಭಾಗವಾಗಿದೆ. ಆದರೆ ಇದಕ್ಕೆ ಎಲ್ಲಾ ಆಡಳಿತ ವಿಭಾಗಗಳಿಗಿರುವಂತೆ, ಯಾವುದೇ ಅಂಕಿಯ ನಿಯಮವಿಲ್ಲ. ಇಲ್ಲಿ ಬರುವ ಎಲ್ಲಾ ಶಾಸನಗಳಲ್ಲಿ 'ಐವತ್ತು ಮಹಾಜನರು' ಎಂದು ಬರುವುದರಿಂದ, ಅಧ್ಯಯನದ ದೃಷ್ಟಿಯಿಂದ 'ಬಾಗಳಿ-೫೦' ಎಂದು ಗುರುತಿಸಿಕೊಳ್ಳ ಲಾಗಿದೆ. ಬಾಗುಳಿ ಒಂದು ಕಂಚಿನ ಪತ್ರದಲ್ಲಿ 'ಬಾಗಳಿ-ಮೂವತ್ತ್ಮೂರು' ಹಳ್ಳಿಗಳ ಹೋಬಳಿ ಗ್ರಾಮವಾಗಿತ್ತೆಂದು ತಿಳಿದು ಬರುತ್ತದೆ. ಇದಕ್ಕೆ 'ಕಟ್ಟೆಮನಿಗ್ರಾಮ'ವೆಂತಲೂ ಕರೆಯುತ್ತಾರೆ. ಆದ್ದರಿಂದ ಕೋಗಳಿ-೫೦೦ ಎಂದು ಕರೆಯುವ ಹಾಗೆ, ಬಾಗಳಿ-೫೦ ಎಂದು ಕರೆಯಲಾಗಿದೆ. ಶಾಸನಗಳಲ್ಲಿ ಶ್ರೀಮದ್ ಹರಿಶ್ಚಂದ್ರದತ್ತಿಯ ಗ್ರಹಾರ, ಚಾಲುಕ್ಯ ಚಕ್ರೇಶ್ವರ ದತ್ತಿ ಎಂಬುದಾಗಿಯಗ್ರಹಾರ ವ್ಯಕ್ತಿಯ ಹೆಸರಿನಿಂದ ಕರೆದಿರುವುದು ಉಲ್ಲೇಖವಾಗಿದೆ.

ಸಂದವತ್ತಿ-೧೨

ಇದು ಕೋಗಳಿ-೫೦೦ ನಾಡಿನ ಒಂದು ಉಪವಿಭಾಗವಾಗಿತ್ತು. ಕೋಗಳಿ ಶಾಸನದಲ್ಲಿ ಮಹಾಸಾಮಂತ ಕದಂಬ ವಂಶದ ಆದಿತ್ಯವರ್ಮರಸ ಕೋಗಳಿ-೫೦೦, ಸುಂದವತ್ತಿ-೧೨ ಆಳುತ್ತಿದ್ದನೆಂದು ಕಂಡುಬರುತ್ತದೆ.[೧೩] ಇದರ ಬಗ್ಗೆ ಹೆಚ್ಚಿನ ವಿವರಗಳೇನು ಕಂಡುಬರುವುದಿಲ್ಲ.

ಕಿಸುಕಾಡು-೭೦

ಬಾಗಳಿಯ ಒಂದು ಶಾಸನದಲ್ಲಿ 'ಆಯ್ತುವರ್ಮ್ಮ‌ಕಿಸುಕಾಳೆಟತ್ತುವಂಕೋಗಳಿಜುಯ್ಯೂಟ್ಟವಂ' ಎಂದು ಉಲ್ಲೇಖವಾಗಿದೆ. ಅಹವಮಲ್ಲನ ಆಳ್ವಿಕೆಯಲ್ಲಿ ಈತನ ಸಾಮಂತನಾದ ಆಯ್ತುವರ್ಮನು ಈ ಭಾಗಗಳನ್ನು ಆಳುತ್ತಿದ್ದನೆಂದು ಕಂಡುಬರುತ್ತದೆ.[೧೪] ಇದು ಕೋಗಳಿ-೫೦೦ರ ಉಪವಿಭಾಗವಾಗಿರಬೇಕು. ಆದರೆ ಇದು ಬಿಕ್ಕಿಗ-೭೦, ಮತ್ತು ಕುದಿಹರವಿ-೭೦ ಹಾಗೆ ಸ್ಪಷ್ಟವಾದ ಮಾಹಿತಿ ಕೊಡುವುದಿಲ್ಲ. ಕಿಸುಕಾಡು-೭೦ರ ಉಲ್ಲೇಖ ಹೆಚ್ಚಾಗಿ ಎಲ್ಲೂ ಕಂಡುಬರುವುದಿಲ್ಲ.

ಕುಕ್ಕನೂರು-೩೦

ಇಲ್ಲಿಯ ಶಾಸನದಲ್ಲಿ ಅಕಾಳವರ್ಷ ಕನ್ನರದೇವನ ಆಳ್ವಿಕೆಯಲ್ಲಿ ಇವನ ಸಾಮಂತ ರೊಟ್ಟನು ಕುಕ್ಕುನೂರು-೩೦ರ ವಿಭಾಗವನ್ನು ಆಳುತ್ತಿದ್ದನೆಂಬ ಉಲ್ಲೇಖ ಬರುತ್ತದೆ.[೧೫] ಇದು ನೊಳಂಬವಾಡಿ-೩೨೦೦೦ರ ಒಂದು ಉಪವಿಭಾಗವಾಗಿರಬಹುದು. ಇದರ ಬಗ್ಗೆ ಹೆಚ್ಚಾಗಿ ಎಲ್ಲಿಯೂ ಉಲ್ಲೇಖವಾಗಿರುವುದಿಲ್ಲ.

ಇದನ್ನು ಅಥವಾ ಇಲ್ಲಿ ಆಡಳಿತ ನಡೆಸಿದ ರಾಜವಂಶಗಳನ್ನು ಗಮನಿಸಬಹುದು. ಬಳ್ಳಾರಿ ಜಿಲ್ಲೆಯನ್ನು ವಿವಿಧ ರಾಜರು ಆಳಿದ ಇತಿಹಾಸವಿದೆ. ಇಂತಹ ಇತಿಹಾಸ ಬಾಗಳಿಗೂ ಇದೆ. ಇಲ್ಲಿ ಹೆಚ್ಚು ಕಾಲ ಕಲ್ಯಾಣ ಚಾಲುಕ್ಯರು ಆಡಳಿತ ನಡೆಸಿದ್ದಾರೆ. ಬಹುಪಾಲು ಶಾಸನಗಳು ಇವರ ಆಳ್ವಿಕೆಯನ್ನು ಉಲ್ಲೇಖಿಸುತ್ತವೆ. ಆರಂಭದಲ್ಲಿ ಲಿಖಿತ ದಾಖಲೆಗಳ ಆಧಾರದಿಂದ ಪ್ರಾರಂಭವಾಗುವ ಘಟ್ಟವೆಂದರೆ ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಪ್ರಾಚೀನ ಲಿಖಿತ ದಾಖಲೆಗಳಾದ ಅಶೋಕನ ಶಾಸನಗಳು. ಅಂದರೆ ಮೌರ್ಯರ ಆಳ್ವಿಕೆಯಿಂದ ಇದರ ಇತಿಹಾಸ ಪ್ರಾರಂಭವಾಗುತ್ತದೆ.

ರಾಷ್ಟ್ರಕೂಟರು ಆಡಳಿತ ನಿರ್ವಹಣೆಗಾಗಿ ಸಾಮ್ರಾಜ್ಯವನ್ನು ಅನೇಕ ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದರು. 'ರಾಷ್ಟ್ರ' ಎಂಬುದು ಪ್ರಮುಖ ಆಡಳಿತ ಘಟಕವಾಗಿತ್ತು. 'ವಿಷಯ'ಗಳು(ಒಂದು ಪ್ರಾಂತ್ಯ) ರಾಷ್ಟ್ರದ ಉಪವಿಭಾಗಗಳಾಗಿದ್ದವು.(ಎರಡು ಸಾವಿರ ಗ್ರಾಮಗಳನ್ನು ಒಳಗೊಂಡ ಘಟಕವೇ ವಿಷಯ) ಕೆಲವು ಸಲ 'ವಿಷಯ' ಎಂಬುದರ ಬದಲು 'ದೇಶ' ಎಂಬ ಹೆಸರು ಬಳಕೆಯಲ್ಲಿತ್ತು. 'ಭುಕ್ತಿ' ಎಂಬುದು ಇನ್ನೊಂದು ಪ್ರಾದೇಶಿಕ ವಿಭಾಗವಾಗಿದ್ದು ೧೦೦ ರಿಂದ ೫೦೦ ಹಳ್ಳಿಗಳನ್ನು ಒಳಗೊಂಡ ಭಾಗವಾಗಿದ್ದಿತು. ಇಂತಹ ವಿಭಾಗಗಳನ್ನು ನೋಡಿಕೊಳ್ಳಲು ಸಾಮಂತರು, ದಂಡನಾಯಕರು, ಸೇನಭೋವರು ಎಂಬ ಹುದ್ದೆಗಳನ್ನು ನೇಮಿಸಿಕೊಂಡಿದ್ದರು.

ಈ ಅರಸರ ಪ್ರಖ್ಯಾತ ಚಕ್ರವರ್ತಿಯಾದ ಅಮೋಘವರ್ಷನ ದಂಡನಾಯಕನಾಗಿದ್ದ ಬಂಕೆಯೆಂಬುವನು ಬನವಾಸಿ-೧೨೦೦೦, ಮತ್ತು ಬೆಳಗಲಿ-೩೦೦, ಕದಂಬಳಿಗೆ-೧೦೦೦, ಕಂದರಚೆ-೭೦, ಕುಂದೂರು-೫೦೦, ಪುಲಿಗೆರೆ-೩೦೦ಗಳನ್ನು ಆಳುತ್ತಿದ್ದನೆಂದು ಕಂಡುಬರುತ್ತದೆ. ಕದಂಬಳಿಗೆ-೧೦೦೦ದ ಅಧಿಕಾರಿ ಕನ್ನಯ್ಯನಾಗಿದ್ದನು. ಇವುಗಳು 'ಗಂಗವಾಡಿ ೯೬೦೦೦'ದ ವಿಭಾಗಗಳಾಗಿದ್ದವು. ನೊಳಂಬವಾಡಿ-೩೨೦೦೦ ವಿಭಾಗಗಳನ್ನು ಇಂತಹ ಅಧಿಕಾರಿಗಳು ಆಳಿದರೆಂದು ಕಂಡುಬರುತ್ತದೆ. ಇಲ್ಲಿಯ ಶಾಸನಗಳಲ್ಲಿ ಬರುವ ಪ್ರಮುಖ ಸಾಮಂತರನ್ನು ನೋಡಲಾಗಿದೆ.

೧. ಸಾಮಂತರು

ರಾಜನು ತನ್ನ ವಿಸ್ತಾರವಾದ ಸಾಮ್ರಾಜ್ಯವನ್ನು ನೋಡಿಕೊಳ್ಳಲು ತನಗೆ ಅನುಕೂಲವಾಗುವಂತೆ ಕೆಲವೊಂದು ಘಟಕಗಳನ್ನು ರಚಿಸಿಕೊಂಡಿದ್ದನು. ಇವುಗಳನ್ನು ನೋಡಿಕೊಳ್ಳಲು ಸಾಮಂತರು, ದಂಡ ನಾಯಕರನ್ನು ನೇಮಿಸಿಕೊಂಡಿದ್ದನು. ಇಂತಹ ಘಟಕ ಅಥವಾ ಪ್ರಾಂತ್ಯಗಳ ಆಡಳಿತ ಚಕ್ರವರ್ತಿಗಳ ಪಾದಪದ್ಮೋಪ ಜೀವಿಗಳಾಗಿದ್ದ ಮಹಾಸಾಮಂತರ ಮೂಲಕ ನಡೆದುಕೊಂಡು ಬರುತ್ತಿತ್ತೆಂದು ಶಾಸನಗಳ ಮೂಲಕ ತಿಳಿಯಬಹುದು. ಕೆಲವೊಂದು ಶಾಸನಗಳಲ್ಲಿ 'ಮನ್ನೆ'ಯರು ಎಂದು ಉಲ್ಲೇಖವಾಗಿದೆ.(ಮನ್ನೆ

ಎಂದರೆ ಗೌರವಕ್ಕೆ, ಮನ್ನಣೆಗೆ ಪಾತ್ರನಾದವನು) ಅಂದರೆ ಚಕ್ರವರ್ತಿಗಳಿಂದ, ಮಹಾಮಂಡಳೇಶ್ವರರಿಂದ ಮನ್ನಣೆಗೆ ಪಾತ್ರರಾದವರು. ಇವರನ್ನು ಸಹ ಸಾಮಂತರೆಂದೇ ಕರೆಯಬಹುದಾಗಿದೆ. ಈ ಶಾಸನಗಳಲ್ಲಿ ಚಕ್ರವರ್ತಿಗಳ ಪ್ರಶಸ್ತಿ, ಬಿರುದುಗಳ ಜೊತೆಗೆ ಮಹಾಸಾಮಂತರ, ಮಂಡಳೇಶ್ವರರ ಬಿರುದುಗಳು, ಪ್ರಶಸ್ತಿಗಳು ಉಲ್ಲೇಖವಾಗಿವೆ. ಶಾಸನದಲ್ಲಿ ಮಹಾಸಾಮಂತ ಚಾಲುಕ್ಯವಂಶದ ಕತ್ಯರನ ಉಲ್ಲೇಖ ಬರುತ್ತದೆ. ಈತನನ್ನು

'ಮಹಾಸಾಮನ್ತ ತುರುಗವೆ(ಡೆ)ಜ್ಗ ಬಿಳಿಯಂಬಿನಾತವಸೂದ್ರ
ಕಂ ವಿದ್ಯಷ್ಟಮಾರ್ತ್ತಂಡ ಪ್ರಿಯಗಾಳ್ಳ ಚಾಳುಕ್ಯವಂಶೋದ್ಭವಂಕತ್ಯರ'

ಎಂದು ಬಂದಿದೆ.[೧೬] ಇದರಿಂದ ರಾಜನಂತೆ ಇವನು ಸಹ ಬಿರುದಾವಳಿಗಳನ್ನು ಹೊಂದಿದ್ದು, ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಇದರಲ್ಲಿ ಅಕಾಳವರ್ಷನ(IIIಕೃಷ್ಣ) ಮಹಾಸಾಮಂತ ರೊಟ್ಟಯ್ಯ ಎಂದಿದೆ. ಈತನನ್ನು

'ಮಹಾಸಾಮನ್ತ ಶೌಚಾರ್ಣ್ಣವಂ, ಸಾರಲೊಳ್ಳಿ
ದೋಂ ಸಮ್ಮನದಾಣ್ಡಂ ಪಗೆಗೆ ಬಲ್ಗಣ್ಡ, ನುಡಿದನ್ತೆ
ಗಣ್ಡ ಕೃತಯುಗಗಳ್ಳಂ ಶ್ರೀಮತ ರೊಟ್ಟಯ್ಯ'

ಎಂದಿದೆ.[೧೭] ಇವನು ಅರಸರಷ್ಟೇ ಪ್ರಖ್ಯಾತಿ ಪಡೆದು ಮಾಸವಾಡಿ-೧೪೦, ಕೋಗಳಿ-೫೦೦, ಕುಕ್ಕನೂರು-೩೦ನ್ನು ಆಳುತ್ತಿದ್ದನೆಂದು ಕಂಡುಬರುತ್ತದೆ. ಇದೇ ಶಾಸನದಲ್ಲಿ ರೊಟ್ಟಯ್ಯನ ಸಾಮಂತ ಧೋರಪಯ್ಯ ಎಂಬುವನು ದಾನವನ್ನು ನೀಡುತ್ತಾನೆ ಎಂದು ಬರುತ್ತದೆ. ಶಾಸನ ತ್ರುಟಿತವಾಗಿರುವುದರಿಂದ ದಾನದ ಕಾರಣ ತಿಳಿದುಬರುವುದಿಲ್ಲ. ಇವನನ್ನು ಶಾಸನದಲ್ಲಿ

ಮಹಾಸಾಮನ್ತ ಶೌಚಾಂಜನೇಯ ಸಾಹಸಭೀಮ ಸಮರತ್ರಿನೇತ್ರಂ
ಮಾರ್ತ್ತಲೆಸಿಂಘ ಧರೆನೊಡೆಗಣ್ಡ ಪಗೆವರಂಕುಸಂ
ಚಾಳುಕ್ಯ ನಾರಾಯಣಂ ಏಕವಾಕ್ಯಂ ಪ್ರಿಯಗಳ್ಳಂ ಆರೂಢ
ಸರ್ವ್ವಜ್ಞ(ಂ)ನಾಶ್ರಿತಜನ ಕಲ್ಪವೃಕ್ಷ ಶ್ರೀಮತು ಧೋರಪಯ್ಯ

ಎಂದಿದೆ.[೧೮] ಇವನು ಸಾಮಂತನಷ್ಟೇ ಹೆಸರುಗಳಿಸಿದ್ದನು. ಈ ಶಾಸನದಲ್ಲಿ ಖೊಟ್ಟಿಗನ ಸಾಮಂತ ಗಂಗಪೆರ್ಮಾನಡಿ' ಎಂದಿದೆ. ಆದರೆ ಶಾಸನ ಪೂರ್ತಿ ತ್ರುಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ಒದಗುವುದಿಲ್ಲ. ಹೀಗೆ ಕೆಲವು ಶಾಸನಗಳಲ್ಲಿ ಸಾಮಂತ ಎಂದು ಬಂದರೆ, ಕೆಲವುಗಳಲ್ಲಿ ಮಹಾಸಾಮಂತ ಎಂದಿರುವುದರಿಂದ, ಪದಗಳಲ್ಲಿ ವ್ಯತ್ಯಾಸವಾಗಿವೆಯೇ ವಿನಃ ಎರಡು ಅರ್ಥಗಳು ಒಂದೇ ಎಂದು ಹೇಳಬಹುದು. ಈ ಶಾಸನವು ಮಹಾಸಾಮಂತ ಆಯ್ಯುವರ್ಮ ಕಿಸುಕಾಡು-೭೦, ಕೋಗಳಿ-೫೦೦ರನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.[೧೯] ಇವನು ಅಹವಮಲ್ಲದೇವನ ಸಾಮಂತನಾಗಿದ್ದನು.

ಇನ್ನೂ ಇಲ್ಲಿ ಸಾಮಂತ ದೊರೆ ಜಗದೇಕಮಲ್ಲ ನೊಳಂಬ ಉದಯಾದಿತ್ಯ ಆಳುತ್ತಿದ್ದನೆಂದು ಕಂಡುಬರುತ್ತದೆ.[೨೦] ಇವನು ೧೦೧೮ರಲ್ಲಿ ಹಂಪೆಗೆ ಬಂದಿದ್ದನೆಂದು ತಿಳಿಯುತ್ತದೆ. ಇವನ ಕಾಲದಲ್ಲಿ ಹಂಪೆಯ ವಿರುಪಾಕ್ಷ ದೇವಾಲಯ ರಚನೆಯಾಗಿರಬೇಕು. ಈ ಕಾಲದಲ್ಲಿ ಹಂಪೆಯು ಪಂಪಾಕ್ಷೇತ್ರ ಎಂದು, ಬಹು ಪ್ರಸಿದ್ಧಿಯಾಗಿತ್ತು. ಈ ಕಾಲಕ್ಕೆ ಇವನು ಪಂಪಾತೀರದ ತೀರ್ಥಕ್ಷೇತ್ರಕ್ಕೆ ಬಿಜೆಯಂಗೈದಿದ್ದನು. ಇದೇ ಕಾಲದಲ್ಲಿಯೇ ಬಾಗಳಿಯ ಕಲ್ಲೇಶ್ವರ ದೇವಾಲಯಕ್ಕೆ ದಾನ ನೀಡಿದನೆಂದು ಕಂಡುಬರುತ್ತದೆ. ಇವನ ಕೆಲವು ಬಿರುದು ಪ್ರಶಸ್ತಿಗಳೂ ಕಂಡುಬಂದಿವೆ. ಇವನನ್ನು ಉಲ್ಲೇಖಿಸುವ ಇಂತಹ ಶಾಸನ ತೆಲಗಿಯಲ್ಲಿ ಕಂಡುಬರುತ್ತದೆ.[೨೧] ಆದರೆ ಅದರಲ್ಲಿ ಮಹಾಮಂಡಳೇಶ್ವರ ಜಗದೇಕಮಲ್ಲ ನೊಳಂಬಪಲ್ಲವ ಪೆರ್ಮಾಡಿ ದೇವ ಎಂದು ಉಲ್ಲೇಖವಾಗಿದೆ. ತಲವಾಗಿಲ ಶಾಸನದಲ್ಲಿ ಜಗದೇಕಮಲ್ಲ ಉದಯಾದಿತ್ಯ ನೊಳಂಬನು ತತ್ಪಾದ ಜೀವಿಯಾಗಿದ್ದನು ಎಂದು ಬರುತ್ತದೆ.[೨೨] ಇವನು ನೊಳಂಬವಾಡಿಯನ್ನು ಆಳುತ್ತಿದ್ದಾಗ ತಲವಾಗಿಲ ಭೋಗೇಶ್ವರ ದೇವರಿಗೆ ಮತ್ತು ದೇವಾಲಯದ ಪರಿಚಾರಕ ವರ್ಗವಾದ ಪರಿಕಾರರಿಗೆ ಪಾಡುವವರಿಗೆ(ಹಾಡುವವರು) ಪೂಜಾರಿಗೆ, ಕಲ್ಲುಕುಟಿಗ ಮೊದಲಾದವರಿಗೆ ತಾನೇ ಕೈಯಾರೆ ಭೂಮಿಯನ್ನು ದಾನ ನೀಡಿದನೆಂದು ಬರುತ್ತದೆ. ಇದೇ ವಿವರಣೆಯನ್ನು ಹೇಳುವ ಇನ್ನೊಂದು ಶಾಸನ ಇಲ್ಲಿ ಕಂಡುಬರುತ್ತದೆ.[೨೩] ಈ ಶಾಸನದಲ್ಲಿ ಮಾಂಡಳಿಕ ತ್ರೈಲೋಕ್ಯಮಲ್ಲ ನೊಳಂಬಪಲ್ಲವ ಪೆರ್ಮಾಡಿ ಜಯಸಿಂಗದೇವನು ಕೋಗಳಿ-೫೦೦, ಬಲ್ಲಕುಂದೆ-೩೦೦ರನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ.[೨೪] ಇವನು ಸ್ವಲ್ಪಗೊಂದಲಕ್ಕೀಡು ಮಾಡಿದ್ದಾನೆ. ಏಕೆಂದರೆ ಚಾಳುಕ್ಯ ರಾಜ ಭುವನೈಕಮಲ್ಲನು ಆಳುತ್ತಿದ್ದಾಗ ಇವನು ಸಾಮಂತನಾಗಿದ್ದನೆಂದು ಬಂದಿರುವುದರಿಂದ ಇವನು ಎರಡನೆಯ ಸೋಮೇಶ್ವರನ ಮಾಂಡಳೀಕ ಎನ್ನಬಹುದು. ಆದರೆ ತ್ರೈಲೋಕ್ಯಮಲ್ಲ ನೊಳಂಬಪಲ್ಲವ ಪೆರ್ಮಾಡಿ, ಜಯಸಿಂಗದೇವ ಎಂದಿರುವುದರಿಂದ ತ್ರೈಲೋಕ್ಯಮಲ್ಲ ಎಂಬ ಬಿರುದು ಒಂದನೆ ಸೋಮೇಶ್ವರನದಾಗಿದ್ದು, ಇದೇ ಬಿರುದನ್ನು ಇವನಿಗೆ ಕೊಟ್ಟಿರುವುದಾದರೂ, ಕಾಲ ೧೦೬೮ ಎಂದಿದೆ. ಈ ಕಾಲಕ್ಕೆ ಒಂದನೆ ಸೋಮೇಶ್ವರನ ಕಾಲ ಮುಕ್ತಾಯವಾಗುತ್ತದೆ. ಎರಡನೆ ಸೋಮೇಶ್ವರನ ಕಾಲ ಆರಂಭವಾಗುತ್ತದೆ. ಇದರಿಂದ ಈ ಸಾಮಂತನನ್ನು ಎರಡನೆ ಸೋಮೇಶ್ವರನ ಸಾಮಂತನೆಂದು ಕರೆಯಲಾಗಿದೆ. ಇವನನ್ನು ಉಲ್ಲೇಖಿಸುವ ಇನ್ನು ಕೆಲವು ಶಾಸನಗಳು ಕಲ್ಕಂಬ, ಬಲ್ಲಕುಂದೆ, ಓರುವಾಯಿಗಳಲ್ಲಿ ಕಂಡುಬರುತ್ತವೆ.

ಈ ಶಾಸನವು ತ್ರೈಲೋಕ್ಯಮಲ್ಲನ ಆಳ್ವಿಕೆ ಸೂಚಿಸಿದ್ದು, ಇವನ ಮಹಾಸಾಮಂತ(ಸಾಮಂತನ ಹೆಸರು ಹಾಳಾಗಿದೆ) ಪಳಿಯಣ್ಣ ನಾಲ್ಸಾಸಿರವನ್ನು ಆಳುತ್ತಿದ್ದನೆಂದು ಬರುತ್ತದೆ.[೨೫] ಇದು ಒಂದನೆಯ ಸೋಮೇಶ್ವರನ ಕಾಲವಾಗಿದೆ. ಇವನ ಸಾಮಂತನ ಹೆಸರು ಹಾಳಾಗಿರುವುದರಿಂದ ಯಾರೆಂಬುವುದು ಸ್ಪಷ್ಟವಿಲ್ಲ. ಮೇಲೆ ಹೇಳಿದ ಹಾಗೆ ಪಳಿಯಣ್ಣ ನಾಲ್ಸಾಸಿರವನ್ನು ಆಳುತ್ತಿದ್ದು, ಹನ್ನೆರಡು ಮತ್ತರುಭೂಮಿಯನ್ನು ದಾನ

ನೀಡುವಂತೆ ತಿಳಿಯುತ್ತದೆ. ಸೋಮೇಶ್ವರನ ಸಾಮಂತರಲ್ಲಿ ಪ್ರಮುಖರಾದವರು ಸಿಂಗಣ್ಣ ಚಾಮುಂಡರಾಯ ಮತ್ತು ಕಾಕತೀಯ ಪೋಲ. ಇವರಂತೆಯೇ ಪಳಿಯಣ್ಣನು ಸಹ ಒಬ್ಬ ಸಾಮಂತನಾಗಿರಬಹುದಾಗಿದೆ. ಇಲ್ಲಿ ಇವನು ನಾಲ್ಸಾಸಿರವನ್ನು ಆಳುತ್ತಿದ್ದನೆಂಬುದು ಉಲ್ಲೇಖವಿದೆ. ವಿಕ್ರಮಾದಿತ್ಯನ ಕಾಲದಲ್ಲಿ ಪಟ್ಟಮಹಾದೇವಿಯ ಮಗನಾದ ಯುವರಾಜ ಮಲ್ಲಿಕಾರ್ಜುನ ದೇವನು, ಕರ್ಡ್ಡಿಡನಾಲ್ಸಾಸಿರವನ್ನು ಆಳುತ್ತಿದ್ದನೆಂದು ಬರುತ್ತದೆ. ಕಾಲದ ವ್ಯತ್ಯಾಸವಿರುವುದರಿಂದ, ಪಳಿಯಣ್ಣನ ನಂತರ ಇವನು ಆಡಳಿತ ಮಾಡಿರಬಹುದು.

ತ್ರಿಭುವನ ಮಲ್ಲಪಾಂಡ್ಯನು ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದನೆಂದು ಇಲ್ಲಿಯ ಬಹುಪಾಲು ಶಾಸನಗಳಲ್ಲಿ ಕಂಡುಬರುತ್ತದೆ.[೧೨] ವಿಕ್ರಮಾದಿತ್ಯನ ಎಲ್ಲ ಶಾಸನಗಳಲ್ಲಿ ಸಾಮಂತ, ಮಾಂಡಳಿಕ, ಮಹಾಮಂಡಳೇಶ್ವರ ಎಂದು ಉಲ್ಲೇಖ ಬರುತ್ತದೆ. ಇವನು ಅವನ ನೆಚ್ಚಿನ, ನಂಬಿಕೆಯ, ನಿಷ್ಠೆಯ ಸಾಮಂತನಾಗಿದ್ದರಿಂದ ತ್ರಿಭುವನ ಮಲ್ಲಪಾಂಡ್ಯದೇವ ಎಂದು ಹೇಳಿಕೊಂಡಿದ್ದಾನೆ. ಕೆಲವು ಶಾಸನಗಳಲ್ಲಿ ಪಾಂಡ್ಯದೇವ ಎಂದಿದ್ದರೆ ಕೆಲವುಗಳಲ್ಲಿ ತ್ರಿಭುವನಮಲ್ಲ, ಪಾಂಡ್ಯದೇವ, ಪಾಂಡ್ಯರಾಜ ಎಂದು ಉಲ್ಲೇಖಗಳಿವೆ. ಇವನು ಚಕ್ರವರ್ತಿಯಷ್ಟೇ ಪ್ರಾಮುಖ್ಯತೆಯನ್ನು ಪಡೆದು ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದನೆಂದು ಕಂಡುಬರುತ್ತದೆ. ಆದರೆ ಈ ಶಾಸನದಲ್ಲಿ ಮಾತ್ರ ನೊಳಂಬವಾಡಿ-೩೨೦೦೦ ಮತ್ತು ಗಂಗವಾಡಿ-೯೬೦೦೦ ಆಳುತ್ತಿದ್ದ ಬಗ್ಗೆ ಉಲ್ಲೇಖಿಸುತ್ತದೆ.[೨೬]

ಈ ಶಾಸನದಲ್ಲಿ ಇಬ್ಬರು ಸಾಮಂತರನ್ನು ಹೆಸರಿಸುತ್ತದೆ. ಸಾಮಂತ ತ್ರಿಭುವನಮಲ್ಲ ವೀರಪಾಂಡ್ಯನು[೨೭] ಆಳುವಾಗ, ಇವನ ಸಾಮಂತ ವಿಜಯಪಾಂಡ್ಯದೇವ ಇದ್ದನೆಂದು ಉಲ್ಲೇಖ ಬರುತ್ತದೆ.[೨೮] ಇಲ್ಲಿ ವೀರಪಾಂಡ್ಯನು ಜಗದೇಕಮಲ್ಲನ ಸಾಮಂತನಾಗಿದ್ದನು. ಇವನ ಮಾವ ವಿಕ್ರಮಾದಿತ್ಯರಸನು ಬಾಗಳಿಯ ಐವತ್ತು ಮಹಾಜನರೊಂದಿಗೆ ಸೇರಿ ಬಾಗಳಿಯ ಮಹಾಜನರಿಗೆ ೧೭೩ ಗದ್ಯಾಣಗಳನ್ನು ಬಿಡುತ್ತಾನೆ. ಇವನು 'ಜಗದೇಕಮಲ್ಲ' ಎಂಬ ಬಿರುದು ರಾಜನಿಂದ ಪಡೆದುಕೊಂಡಿದ್ದನು. ಏಕೆಂದರೆ ಅವನ ಆಪ್ತ ಸ್ನೇಹಿತನಾಗಿದ್ದು, ರಾಜನ ಮೆಚ್ಚಿಗೆ, ಮನ್ನಣೆ ಪಡೆದಿದ್ದರಿಂದ ಆ ಬಿರುದನ್ನು ಹೊಂದಿದ್ದನು.

ಇನ್ನು ಈ ಶಾಸನದಲ್ಲಿ ಸಾಮಂತನಾದ ಹಳವಿನಾಯಕನು ಬಾಗುಳಿಯನ್ನು ಆಳುತ್ತಿದ್ದನೆಂದು ಉಲ್ಲೇಖವಾಗಿದೆ.[೨೯] ಇವನು ವಿಜಯನಗರದ ಸದಾಶಿವರಾಯನ ಕಾಲದಲ್ಲಿ ಬಯ್ಯಪ್ಪ ನಾಯಕನ ಮಗ ಕೃಷ್ಣಪ್ಪನಾಯಕನು ಕೋಗಳಿ ಬಳಿಯ ಕೊಟ್ಟೂರನ್ನು, ೩೫೦೦೦ದ ಸೀಮೆಯನ್ನು ಪಾಲಿಸುತ್ತಿದ್ದಾಗ, ಇವನ ಸಾಮಂತನಾಗಿದ್ದನೆಂದು ಕಂಡುಬರುತ್ತದೆ. ಈತನು ಯಾವುದೇ ದಾನ-ದತ್ತಿಗಳನ್ನು ಕೊಟ್ಟಿರುವುದಿಲ್ಲ.

ಇದೇ ಕಾಲದಲ್ಲಿಯೇ(ರಾಜ ಸದಾಶಿವರಾಯ) ಕೃಷ್ಣಪ್ಪನಾಯಕ ಈ ಭಾಗವನ್ನು ಪಾಲಿಸುವಾಗ ಬಾಗುಳಿಯ ಚಾಮಿನಾಯಕನ ಮಗ ಹೆಳವಿನಾಯಕನಿದ್ದನೆಂದು ಬಂದಿರುವುದರಿಂದ ಅವನು(ಹಳವಿನಾಯಕ)

ಅವರ ಸಂಬಂಧಿಯಾಗಿರಬೇಕು. ಏಕೆಂದರೆ ಮೇಲೆ ತಿಳಿಸಿದ ಹಳವಿನಾಯಕ ಈ ಹೆಳವಿನಾಯಕನ ಕಾಲ ಒಂದೇ ಆಗಿರುವುದರಿಂದ ಪ್ರಾಯಹಃ ಇವನ ಸಂಬಂಧಿ ಇರಬಹುದಾಗಿದೆ.

ಹೀಗೆ ಅಧಿರಾಜ ಅಥವಾ ಚಕ್ರವರ್ತಿಗಳ ಅಧೀನದಲ್ಲಿ ಇದ್ದುಕೊಂಡು ಬೇರೆ ಬೇರೆ ರಾಜ್ಯಗಳನ್ನು ಆಳುತ್ತಿದ್ದರೆಂದು, ಈ ಸಾಮಂತರಿಂದ ತಿಳಿದುಬರುತ್ತದೆ. ಇವರು ಅವರವರ ಆಳ್ವಿಕೆಯ ಪ್ರದೇಶದಲ್ಲಿ ರಾಜರಿಗಿದ್ದ ಸ್ಥಾನಮಾನಗಳು, ಗೌರವ ಮನ್ನಣೆಗಳು ಇವರಿಗಿದ್ದವು.

೨. ದಂಡನಾಯಕರು

ದಂಡ ಎಂಬ ಪದಕ್ಕೆ ನಮ್ಮ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನಕೊಟ್ಟಿದ್ದೇವೆ. 'ದಂಡ' ಎಂದರೆ 'ಶಿಕ್ಷೆ' ಎಂಬುದು ಪ್ರಮುಖವಾದ ಅರ್ಥ. ದಂಡು ಎಂದರೆ ಸೈನ್ಯದ ತುಕಡಿ ಎಂಬ ಅರ್ಥವೂ ಇದೆ. ಅಧಿಕಾರದಂಡ, ಅಧಿಕಾರದ ಚಿಹ್ನೆಯಾದ ಕೋಲು ಎಂಬ ಅರ್ಥವೂ ಇದೆ. ಶಿಕ್ಷೆ ನೀಡುವ ಅಧಿಕಾರಿ ಅಥವಾ ಸೈನ್ಯಾಧಿಕಾರಿ ಎಂಬ ಅರ್ಥವೂ ಇದೆ. ಒಟ್ಟಿನಲ್ಲಿ ದಂಡನಾಯಕ ಎಂದರೆ ಒಂದು ದಂಡಿನ ಅಥವಾ ಗುಂಪಿನ ನಾಯಕನೂ ಆಗುತ್ತಾನೆ. ಅಧಿಕಾರ ಚಲಾಯಿಸುವ ಹಕ್ಕನ್ನು ಪಡೆದ ಮುಖ್ಯಸ್ಥನೂ ಆಗುತ್ತಾನೆ. ಕೆಲವು ಸಂದರ್ಭದಲ್ಲಿ ಈ ದಂಡನಾಯಕರ ಕೈಕೆಳಗೆ ಕೆಲವು ಸೈನ್ಯಾಧಿಕಾರಿಗಳು ಇರುತ್ತಿದ್ದರು.

ಈ ದಂಡನಾಯಕ ಎಂಬ ಹುದ್ದೆ ಕೇವಲ ಸೈನಿಕ ಇಲಾಖೆಗೆ ಸೀಮಿತವಾಗಿರದೇ ಅದರಲ್ಲಿ ಸುಂಕದ ದಂಡನಾಯಕರು, ವಿದ್ಯಾ ಇಲಾಖೆಯ ದಂಡನಾಯಕರು, ವಿದೇಶಾಂಗದ ದಂಡನಾಯಕರು ಇರುತ್ತಿದ್ದರು. ಮುಖ್ಯವಾಗಿ ಕೇಂದ್ರಿಯ ದಂಡನಾಯಕರೆಂದು ಗುರುತಿಸಿಕೊಂಡರೆ, ಮಹಾಸಾಮಂತಾಧಿಪತಿ(ಮಹಾಪ್ರಚಂಡ), ದಂಡನಾಯಕರು ಕೆಳಗಿನ ಅಧಿಕಾರಿಗಳಾಗಿದ್ದರು. ದಂಡನಾಯಕರಲ್ಲಿ ಪ್ರತಿಯೊಂದು ಇಲಾಖೆಯ ಮುಖ್ಯ ಸ್ಥಾನವನ್ನೊ, ಇಲ್ಲವೆ ಈ ಎಲ್ಲ ಇಲಾಖೆಗಳ ಮೇಲಿನ ದಂಡನಾಯಕನನ್ನೊ ಮಹಾಪ್ರಧಾನ ದಂಡನಾಯಕನೆಂದು ಕರೆಯುತ್ತಿದ್ದರು.

ಸುಂಕದ ದಂಡನಾಯಕರು : ಈ ಶಾಸನದಲ್ಲಿ ಬರುವ ಮುದ್ದರಸನನ್ನು ಸುಂಕದ ದಂಡನಾಯಕನೆನ್ನಲಾಗಿದೆ. ಇದರಲ್ಲಿ ಈತನ ಬಿರುದು, ಪ್ರಶಸ್ತಿಗಳು ಕಂಡುಬರುತ್ತವೆ. ''ಮಹಾಮಾತ್ಯ ಪದ್ಮೋಪವೀರಾಜಮಾನ ಮಾನ್ಯೋನ್ನತ ಪ್ರಭುಮಂತ್ರೋತ್ಸಾಯಶಕ್ತಿಯಸಂಪನ್ನೆಂ, ಜನಾಶ್ರಿತಂ, ಜನಕಲ್ಪವೃಕ್ಷಂ, ಪತಿಕಾರ್ಯ್ಯಧಕ್ಷನ್ನಿ ಯೋಗಯೋಗನ್ಧರಾಯಣ, ನೀತಿಪರಾಯಣ, ಗೋತ್ರಪವಿತ್ರಂ, ಸುಜನಮಿತ್ರಂ, ಶ್ರೀಮದಚ್ಚು ಪನ್ನಾಯರದಿಷ್ಠಾಯಕಂ, ದಣ್ಣನಾಯಕ' ಎಂದು ಉಲ್ಲೇಖಿಸುತ್ತದೆ.[೩೦]

ಇಲ್ಲಿ 'ಪನ್ನಾಯ'(ಪನ್ಯಾಯ) ಎಂದರೆ ವೀಳ್ಯಾದೆಲೆಯ ಮೇಲಿನ ತೆರಿಗೆ ಎಂದಾಗುತ್ತದೆ.(ಕ.ಕ.ನಿ.ಸಂ.೫) ಈ ಶಾಸನದಲ್ಲಿ 'ಪನ್ಯಾಯ' ಎಂದು ಉಲ್ಲೇಖವಾಗಿದೆ. ಆದರೆ ಇದು 'ಪನ್ನಾಯ' ಎಂದಿರಬೇಕು. ಇವನು

ಮಹಾಜನರ ಸಮ್ಮುಖದಲ್ಲಿ ದೇವರಿಗೆ ನೈವೇದ್ಯಕ್ಕೆ ಹಾಗೂ ನಂದಾದೀವಿಗೆಗೆ ತಿಂಗಳಿಗೆ ಎರಡು ಎಲೆ ಹೇರಿನ ಸುಂಕದ ರೂಪದಲ್ಲಿ ೧೨ ಪಣವನ್ನು ನೀಡುತ್ತಾನೆ. ಇಲ್ಲಿ ಎಲೆ ಹೇರಿನ ಸುಂಕ ಎಂದಿರುವುದರಿಂದ 'ಪನ್ನಾಯ'ದ ಅಧಿಕಾರಿ ಅಥವಾ ಸುಂಕದ ದಂಡನಾಯಕ ಎನ್ನಲಾಗಿದೆ. ಆದರೆ ಹೂವಿನ ಹಡಗಲಿ ಶಾಸನವೊಂದರಲ್ಲಿ ಇವನನ್ನು ತೆರಿಗೆಯ ಅಧಿಕಾರಿಯೆಂದೇ ಉಲ್ಲೇಖಿಸುತ್ತದೆ.[೩೧] ಅಂದರೆ ನೊಳಂಬವಾಡಿ-೩೨೦೦೦ ತೆರಿಗೆಯ ಅಧಿಕಾರಿಯಾಗಿದ್ದಾಗ ಪೂವಿನಹಡಗಲಿ ೧೨೦ ಮಹಾಜನಗಳ ಸಮ್ಮುಖದಲ್ಲಿ ಕಲಿದೇವರಿಗೆ ಪನ್ನಾಯದ ತೆರಿಗೆಯನ್ನು ದಾನ ಮಾಡುತ್ತಾನೆ. ಈ ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ಒದಗುವುದಿಲ್ಲ. ಸೋಗಿಯ ಶಾಸನದಲ್ಲಿ ದಂಡಾಧಿಪತಿ ಮುದ್ದರಸ ಅಥವಾ ಮುದ್ದರಾಜನು, ಕೆರೆಗೆ ದಾನ ನೀಡಿದನೆಂದು ಬರುತ್ತದೆ.[೩೨]ನೀಲಗುಂದ ಶಾಸನದಲ್ಲಿ 'ಪನ್ನಾಯದಧಿಷ್ಠಾಯಕಂ' ಮುದ್ದರಸನು ಕಿರ್ಬ್ಬಟ್ಟೆಯ ಸುಂಕವನ್ನು ಪಡೆದು ಆಳುತ್ತಿರಲು, ನೀಲಗುಂದದ ಸ್ವಯಂಭು ಭೀಮೇಶ್ವರದೇವರ ಸೇವೆಗಾಗಿ ಕೆಲವು ತೆರಿಗೆಗಳನ್ನು ದಾನ ನೀಡಿದ ವಿವರವಿದೆ.[೩೩] ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ದಂಡನಾಯಕ ಮುದ್ದರಸನು ಕಿರ್ಬ್ಬಟ್ಟೆಯ ತೆರಿಗೆಯ ಅಧಿಕಾರಿಯಾಗಿದ್ದುದನ್ನು ನಾವು ಗಮನಿಸಬಹುದು. ಈ ಶಾಸನದಲ್ಲಿ ದಂಡನಾಯಕ ಬಮ್ಮರಸರನ್ನು ಬಿರುದುಗಳೊಂದಿಗೆ 'ಶ್ರೀಮದಚ್ಚಪನ್ನಾಯದಧಿಷ್ಠಾಯ' ದಂಡನಾಯಕ ಎಂದು ಉಲ್ಲೇಖಿಸಿದೆ.[೩೪] ಇವನು ಪನ್ನಾಯದ ಸುಂಕದಲ್ಲಿ ಹಿರಿಯಕೆರೆಯ ಕೆಲಸಕ್ಕೆ ತಿಂಗಳಿಗೆ ಒಂದು ಗದ್ಯಾಣ ಹೊನ್ನನ್ನು ಮಹಾಜನರ ಸಮ್ಮುಖದಲ್ಲಿ ದೇವರಿಗೆ ದಾನ ನೀಡುತ್ತಾನೆ ಎಂದು ಬರುತ್ತದೆ.

ಮತ್ತೊಂದು ಶಾಸನದಲ್ಲಿ ಬರುವ ವಿವರವನ್ನು ರಕ್ಷಣಾ ಇಲಾಖೆಯ ಅಧಿಕಾರಿ ಎಂದು ಕರೆಯಬಹುದು. ಏಕೆಂದರೆ ಇಲ್ಲಿ ರಾಜನು ಆಳುತ್ತಿದ್ದಾಗ ದಂಡನಾಯಕ ಅವನನ್ನು ರಕ್ಷಣೆ ಮಾಡಿದನೆಂದು ಉಲ್ಲೇಖಿಸುತ್ತದೆ.[೩೫] ಮಹಾಪಸಾಯಿತ, ವಿಜಯಹೆಮ್ಮಾಡಿಯು ದಂಡನಾಯಕನು ವಿಜಯಪಾಂಡ್ಯದೇವನು(ಮಹಾರಾಜರು ಕಾರ್ಯಗಳನ್ನು ಕೈಗೊಳ್ಳುವಾಗ) ಆಳುವಾಗ ಅವನಿಗೆ ರಕ್ಷಕನಾಗಿದ್ದನೆಂದು ಕಂಡುಬರುತ್ತದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ದೊರಕುವುದಿಲ್ಲ. ಇದರಲ್ಲಿ ಶ್ರೀಮನ್ಮಹಾ ಪ್ರಧಾನನಚ್ಚು ಪನ್ನಾಯದಧಿಷ್ಠಾಯಕಂ, ದಂಡನಾಯಕ ತಿಕ್ಕಭಟ್ಟರು ಎಂದುಬರುತ್ತದೆ. ಇದರಿಂದ ಇವನನ್ನು ಸಹ ಸುಂಕದ ಅಧಿಕಾರಿ ಎಂದು ಕರೆಯಬಹುದು. ಈತನು ಪಂಡಿತರ ಮತ್ತು ಮಹಾಜನರ ಸಮ್ಮುಖದಲ್ಲಿ ದೇವರಿಗೆ, ಒಂದು ಎಲೆಯ ಹೇರಿಗೆ ಒಂದು ಹಣವನ್ನು ದಾನಕೊಡುತ್ತಾನೆ. ಇದೇ ಶಾಸನದಲ್ಲಿ ದಂಡನಾಯಕ 'ತಿಕಣ' ನೆಂಬುವನು ದೇವರಿಗೆ ಭೂಮಿಯನ್ನು ದಾನ ನೀಡಿದನೆಂದು ಉಲ್ಲೇಖಿಸುತ್ತದೆ. ಕಾಲದ ಉಲ್ಲೇಖ ಸರಿಯಾಗಿಲ್ಲ. ಮೋರಗೇರಿ ಒಂದು ಶಾಸನದಲ್ಲಿ ದಂಡನಾಯಕ ತಿಕಣ್ಣ ಎಂದು ಬಂದಿದೆ.[೩೬] ಇವನ ಕಾಲ ೧೦೪೫ ಎಂದಿದೆ.(ಒಂದನೇ ಸೋಮೇಶ್ವರನ ಕಾಲ) ಈ ಶಾಸನವು ದಂಡನಾಯಕ

ಮಹದೇವರಸನನ್ನು ಉಲ್ಲೇಖಿಸುತ್ತದೆ.[೩೭] ಈತನನ್ನು ಪ್ರಶಸ್ತಿಗಳೊಂದಿಗೆ 'ಮಹಾಸಾಮಂತಾಧಿಪತಿ, ಮಹಾಪ್ರಂಚಡದಂಡನಾಯಕ, ಶಿಷ್ಟೇಷ್ಟಜನಾಭೀಷ್ಟಪದಪ್ರಧಾಯಕಂ, ನಿಯೋಗ ಯೋಗನ್ಧರಂ, ಪತಿಕಾರ್ಯಧರನ್ಧರಂ, ಶ್ರೀಮನ್ಮಹಾಪ್ರದಾನಚ್ಛುಪನ್ನಾಮದಧಿಷ್ಠಾಯಕಂ, ದಂಡನಾಯಕ, ದಂಡಾಯದ' ಎಂದು ದಂಡನಾಯಕನನ್ನು ಹೆಸರಿಸುತ್ತದೆ. 'ಇವನು ಮಹದೇವರಸನ ಅಪ್ಪಣೆಯಂತೆ ಒಂದು ಎಲೆಯ ಹೇರಿನ ಸುಂಕವನ್ನು ದಾನ ನೀಡಿದನೆಂದು ಕಂಡುಬರುತ್ತದೆ.

ಈ ಶಾಸನದಲ್ಲಿ ದಂಡನಾಯಕ ಬನ್ನಿಗೋಳದ ಪ್ರಭುಸೋಮರಸರು ಪ್ರಶಸ್ತಿ ಬಿರುದುಗಳೊಂದಿಗೆ ಉಲ್ಲೇಖವಾಗಿರುವುದು ಕಂಡುಬರುತ್ತದೆ.[೩೮] ಇವನು ಮಹಾಪ್ರಧಾನದಂಡನಾಯಕನಾಗಿ ವಡ್ಡರಾವುಳದ ಸುಂಕವನ್ನಾಳುತ್ತಿದ್ದನೆಂದು ಹೇಳಿದೆ. ಅಂದರೆ(ವಡ್ಡರಾವುಲೆ) ರಾಜನ ಕುಟುಂಬ ವರ್ಗದವರ ವೆಚ್ಚಕ್ಕಾಗಿ ಹಾಕುತ್ತಿದ್ದ ತೆರಿಗೆ ಎಂದು ಹೇಳಬಹುದು. ತನ್ನ ಕೆಲಸದ ಜೊತೆಗೆ ದೇವರಗ್ರಾಸನಕ್ಕೆ ವಡ್ಡರಾವುಳದ ಸುಂಕದಲ್ಲಿ ಒಂದು ಪಾಗವನ್ನು ದಾನ ನೀಡುತ್ತಾನೆ. ಇದು ಮಹಾಪ್ರಧಾನರಾಯಭೂಪಾಳ ಗಜಾಂಕುಷ, ಬೊಮ್ಮಯ್ಯ ದಂಡನಾಯಕ ಎಂದು ಉಲ್ಲೇಖಿಸುತ್ತದೆ.[೩೯] ಇದರ ಮುಂದುವರಿದ ಭಾಗದಲ್ಲಿ ಆರೊಬ್ಬ ಅಧಿಕಾರಿಗಳಾಗಿ ಈ ಸ್ಥಳಕ್ಕೆ ಬಂದರೆ, ಈ ದಾನವನ್ನು ಮುಂದುವರಿಸಿಕೊಂಡು ಹೋಗಬೇಕು ಎಂದುಬರುತ್ತದೆ. ಇವನ ನಂತರ ಯಾವ ರಾಜನೇ ಬಂದರೂ ಅವನ ಪದ್ಧತಿಯಂತೆ ಅನುಸರಿಸಿಕೊಂಡು ಹೋಗಬೇಕು. ಈ ಶಾಸನ ಒಂದೇ ಆದರೂ, ಇದರ ಬೇರೆ ಬೇರೆ ಭಾಗಗಳಲ್ಲಿ ಉಲ್ಲೇಖಗಳು ಕಂಡುಬರುತ್ತವೆ.(ಅಂದರೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ) ಇದರ ಪೂರ್ವಭಾಗದಲ್ಲಿ ಮಹಾಪ್ರಧಾನ ದಂಡನಾಯಕ ಮಲ್ಲಿಕಾರ್ಜುನ ಎಂದಿದೆ. ಇವನು ಮತ್ತು ಬೊಮ್ಮಯ್ಯನು ಕೃಷ್ಣದೇವರಿಗೆ ಭೂದಾನ ನೀಡಿದರು. ಇವರನ್ನು ಕಾಲದ ಉಲ್ಲೇಖದಿಂದ ಎರಡನೆ ವೀರನರಸಿಂಹನ ದಂಡನಾಯಕರಾಗಿದ್ದರೆಂದು ಕಂಡುಬರುತ್ತದೆ.

ಹೀಗೆ ವಿವಿಧ ಇಲಾಖೆಗೆ ಸೇರಿದ ದಂಡನಾಯಕರು, ಶ್ರೇಣಿಯ ಅಧಿಕಾರಿಗಳು ಸಾಮಾನ್ಯವಾಗಿ ರಾಜ್ಯದ ರಾಜಧಾನಿಯಲ್ಲಿರದೆ, ಬೇರೆ ಬೇರೆ ಭಾಗಗಳಲ್ಲಿಗೆ ಹೋಗಿ ಕೆಲಸವನ್ನು ನಿರ್ವಹಿಸುತ್ತಿದ್ದರು. ಸುಂಕದ ಇಲಾಖೆಯ ಅಧಿಕಾರಿಗಳು ಹೆಚ್ಚಾಗಿ ಬೇರೆ ಭಾಗಗಳಿಗೆ ಸಂಚರಿಸುತ್ತಿದ್ದರು. ಇವರ ಕೆಳಗೆ ಕೆಲಸ ಮಾಡುವ ದಂಡನಾಯಕರು ತಮ್ಮ ವ್ಯಾಪ್ತಿಗೆ ಬರುವ ಪ್ರದೇಶಗಳಿಗೆ ಸಂಚರಿಸುತ್ತಿದ್ದರು. ಹೀಗೆ ಸುಂಕವನ್ನು ಸಂಗ್ರಹಿಸುತ್ತಿದ್ದ ಇವರು, ಇವರಿಗೆ ಸಂದ ಕೆಲವು ಭಾಗಗಳನ್ನು ವೇತನರೂಪದಲ್ಲಿ ಕೊಡುತ್ತಿರಬೇಕು. ಆದರೆ ಅವುಗಳ ಪ್ರಮಾಣವನ್ನು ಶಾಸನಗಳು ನಿರ್ಧಿಷ್ಟವಾಗಿ ತಿಳಿಸುವುದಿಲ್ಲ. ಕೆಲವು ಅಧಿಕಾರಿಗಳಿಗೆ, ದೇವಾಲಯಗಳಿಗೆ ಮಠಗಳಿಗೆ, ಪೂಜಾರಿಗೆ, ಸತ್ರಕ್ಕೆ ಕೆರೆಗೆ, ಸುಂಕದ ಕೆಲಭಾಗಗಳನ್ನು ಬಿಟ್ಟುಕೊಡುತ್ತಿದ್ದರು. ಇವರಿಗೆ ಕೊಡುವ ಸುಂಕವನ್ನು ಪ್ರಾಯಶಃ ಬೇರೆ ಬೇರೆ ಗ್ರಾಮಗಳಿಂದ ಬರುವ ವೇತನದ(ಆದಾಯ)

[illegible]

ಭಾಗವಾಗಿರಬೇಕು. ಇಲ್ಲಿಯ ಕೆಲವರು ದಂಡನಾಯಕರ ಹೆಸರಿನ ಮುಂದೆ 'ಅರಸ' ಎಂಬ ವಿಶೇಷಣ ಬಳಕೆಯಾಗಿರುವುದರಿಂದ ಪ್ರಾಯಶಃ ಇವರು ಸಿಂದರ ವಂಶದವರಿರಬಹುದು.

೩. ಮಹಾಮಂಡಳೇಶ್ವರರು(ಮಾಂಡಳಿಕ)

ಆಡಳಿತ ವಿಭಾಗವಾಗಿರುವ 'ಮಂಡಲ'ದ ಕಲ್ಪನೆ ಪ್ರಾಚೀನವಾದುದು. ಮಂಡಲಕ್ಕೆ 'ಪ್ರಾಂತ್ಯ' 'ಪ್ರದೇಶ' ಎಂದು ಕರೆಯಲಾಗಿದೆ. ಮಂಡಲ ಇಲ್ಲವೆ ಪ್ರಾಂತ್ಯದ ಒಡೆಯ ಮಹಾಮಂಡಳೇಶ್ವರನಾಗಿರುತ್ತಿದ್ದ. 'ಮಹಾಮಂಡಳೇಶ' ಎಂದರೆ ವಿಸ್ತಾರವಾದ ಪ್ರದೇಶ ಅಥವಾ ಆ ಪ್ರದೇಶದ ಒಡೆಯ ಎಂದರ್ಥ. (ಅಂದರೆ, ಮಂಡಲ=ಪ್ರದೇಶ, ಈಶ=ಒಡೆಯ) ಮಹಾಮಂಡಳೇಶ್ವರ ಎಂಬುದಕ್ಕೆ 'ಮಂಡಲಾಧಿಪತಿ', 'ಮಂಡಲಿಕ', 'ಮಾಂಡಳೀಕ', 'ಮಂಡಲೇಶ' ಎಂಬ ಪದಗಳು ಜೊತೆಯಾಗಿವೆ.

ವಿಸ್ತಾರವಾದ ಸಾಮ್ರಾಜ್ಯದ ಆಡಳಿತವನ್ನು ಚಕ್ರವರ್ತಿಯೊಬ್ಬನೆ ನೋಡಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ, ವಿವಿಧ ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಇಂತಹ ವಿಭಾಗಗಳನ್ನು ಅಥವಾ ಮಂಡಲಗಳನ್ನು ವಂಶಪರಂಪರೆಯಾಗಿ ಬಂದ ಮಹಾಮಂಡಳೇಶ್ವರರು ರಾಜನ ಅನುಮತಿಯ ಮೇರೆಗೆ ಆಳುತ್ತಿದ್ದರು. ಇವರು ಚಕ್ರವರ್ತಿಗೆ ಅಧೀನರಾಗಿ ಪ್ರತಿವರ್ಷಕಪ್ಪವನ್ನು ಕೊಡುತ್ತಿದ್ದರೆಂದು ಕಂಡುಬರುತ್ತದೆ. ಇವರು ವಂಶಪರಂಪರೆಯಾಗಿ ಬಂದ ಬಿರುದು ಮತ್ತು ರಾಜಚಿಹ್ನೆಗಳನ್ನು ಧರಿಸಿದ್ದರು. ಮಹಾಸಾಮಂತರಾದ ಇವರು ಚಕ್ರವರ್ತಿಯ ಪ್ರೀತಿ, ವಿಶ್ವಾಸಗಳಿಸಿ ಮಹಾಮಂಡಳೇಶ್ವರ ಎಂಬ ಪದವಿಯೋನ್ನತಿಯನ್ನು ಪಡೆದಿದ್ದರು. ಈ ಶಾಸನಗಳಲ್ಲಿ ಕಂಡುಬರುವ ಹೆಚ್ಚು ಮಹಾಮಂಡಳೇಶ್ವರರು ಉನ್ನತ ಪದವಿಯನ್ನು ಗಳಿಸಿದ್ದವರೇ ಆಗಿರುವುದರಿಂದ, ಅವರ ಬಿರುದಾವಳಿ, ಪ್ರಶಸ್ತಿಗಳನ್ನು ಉಲ್ಲೇಖಿಸಿವೆ. ಆದರೆ ಹನ್ನೊಂದನೆಯ ಶತಮಾನದಿಂದ ಹದಿಮೂರನೆ ಶತಮಾನದವರೆಗೆ ಆಳಿದ ರಾಜರ, ಮಾಂಡಳೀಕರೂ, ತಮ್ಮ ಅಧಿಕಾರದ ವಿಶೇಷಣಗಳನ್ನು ತಮ್ಮ ಹೆಸರಿನ ಮುಂದೆ ಧರಿಸಿಕೊಳ್ಳುವ ರೂಢಿಯನ್ನು ಹೊಂದಿದ್ದರು. ನೊಳಂಬರಾಜರು ತಮ್ಮ ಅಧಿಕಾರದ ಅಧಿರಾಜರಾದ ಚಾಳುಕ್ಯ ಅರಸರ ಜಗದೇಕಮಲ್ಲ, ತ್ರೈಲೋಕ್ಯಮಲ್ಲ ಎಂಬ ವಿಶೇಷಣಗಳ ಜೊತೆಗೆ ತಮ್ಮ ಹೆಸರನ್ನು ಸೇರಿಸಿ ಶಾಸನಗಳಲ್ಲಿ ಬರಸಿಕೊಂಡಿದ್ದಾರೆ. ಕೆಲವೊಮ್ಮೆ ತಮ್ಮ ಹೆಸರನ್ನು ಬಿಟ್ಟು ಚಾಳುಕ್ಯರ ಬಿರುದಿನೊಂದಿಗೆ ಬರೀ 'ನೊಳಂಬ ಪೆರ್ಮಾನಡಿ' ಎಂದು ಮಾತ್ರ ಸೇರಿಸಿಕೊಂಡಿದ್ದಾರೆ. ಇದೇ ಪದ್ಧತಿಯನ್ನು ಪಾಂಡ್ಯರು ಅನುಸರಿಸಿದ್ದಾರೆ. ಉದಾ : ತ್ರಿಭುವನಮಲ್ಲಪಾಂಡ್ಯ, ಜಗದೇಕಮಲ್ಲಪಾಂಡ್ಯ, ಜಗದೇಕಮಲ್ಲವೀರಪಾಂಡ್ಯದೇವ ಇತ್ಯಾದಿ. ಇವರೂ ಸಹ ತಮ್ಮ ಹೆಸರನ್ನು ಕೆಲವು ಶಾಸನಗಳಲ್ಲಿ ಹೇಳಿಕೊಂಡಿರುವುದಿಲ್ಲ. ಇಂತಹ ಪರಂಪರೆ ಇವರ ಕಾಲಕ್ಕೆ ಕೊನೆಗೊಂಡಿತು. ಇಲ್ಲಿ ಕೆಲವು ಶಾಸನಗಳಲ್ಲಿ ಈ ಪರಂಪರೆಯನ್ನು ಕಾಣಬಹುದು.

ನೊಳಂಬ ಪಲ್ಲವಪೆರ್ಮಾಡಿ ಈತನನ್ನು ಈ ಶಾಸನದಲ್ಲಿ 'ಮಂಡಳೀಕ ನೊಳಂಬ ಪಲ್ಲವಪೆರ್ಮ್ಮಾನಡಿ' ಎಂದು ಉಲ್ಲೇಖಿಸಿದೆ.[೪೦] ಇಲ್ಲಿ ಮಂಡಳೀಕ ಎಂದಿದೆ. ಆದರೂ ಈತ ಮಹಾಮಂಡಳೇಶ್ವರನಾಗಿದ್ದ ಎಂದು ಕಂಡುಬರುತ್ತದೆ. ಹಿಂದೆ ತಿಳಿಸಿದ ಹಾಗೆ ಮಂಡಳೇಶ್ವರ ಎಂಬುದಕ್ಕೆ ಮಾಂಡಳಿಕ ಎಂಬ ಪರ್ಯಾಯ ಪದಗಳೂ ಉಂಟು. ಈತನನ್ನು 'ಘಟೆಯೊಡೆಗಂಡ', ಎಂದು ಕರೆಯುವುದು ವಿಶೇಷವೆನಿಸಿದೆ. ಇವನು ತುಂಗಭದ್ರೆಯ ನದಿದಂಡೆಯತೀರದ, ಕಂಪುಲಿ ಬೀಡಿನಿಂದ ಪಂಚಗ್ರಾಮಗಳನ್ನು ಆಳುತ್ತಿದ್ದನೆಂದು ಕಂಡುಬರುತ್ತದೆ.(ಅವುಗಳನ್ನು ಹಿಂದೆ ಅಧ್ಯಾಯ ಎರಡು ನೊಳಂಬರು ಎಂಬುದರಲ್ಲಿ ಹೇಳಲಾಗಿದೆ) ಇವನನ್ನು ಉಲ್ಲೇಖಿಸುವ, ಇದೇ ವಿವರವನ್ನು ಹೇಳುವ ಇನ್ನೊಂದು ಶಾಸನ ಇಲ್ಲಿದೊರೆಯುತ್ತದೆ.[೪೧] ಕಂಚಿಕೇರಿಯ ಒಂದು ಶಾಸನದಲ್ಲಿ[೪೨] ಜಗದೇಕಮಲ್ಲ 'ನೊಳಂಬಪಲ್ಲವ ಪೆರ್ಮಾಡಿ xx.xx' ಎಂದು ಉಲ್ಲೇಖ ಬರುತ್ತದೆ. ಶಾಸನ ತ್ರುಟಿತವಾಗಿರುವುದರಿಂದ ಸ್ಪಷ್ಟತೆ ಇಲ್ಲ. ಆದರೂ ಇಲ್ಲಿ ನೊಳಂಬ ಉದಯಾದಿತ್ಯನೇ ಇರಬೇಕು. ಇವನು ಸಹ ಇಮ್ಮಡಿ ಜಯಸಿಂಹನ ಕಾಲದಲ್ಲಿಯೇ ಮಂಡಳೇಶ್ವರನಾಗಿದ್ದ ಎನ್ನಲಾಗಿದೆ. ಇನ್ನು ಕೆಲವು ಶಾಸನಗಳಲ್ಲಿ ಇವರ ಉಲ್ಲೇಖಗಳು ಕಂಡುಬರುತ್ತವೆ. ಆದರೆ ಅವುಗಳಲ್ಲಿ ನೊಳಂಬಪಲ್ಲವ ಪೆರ್ಮಾಡಿದೇವ ಎಂದು ಉಲ್ಲೇಖವಾಗಿದೆ.[೪೩]

ತ್ರಿಭುವನಮಲ್ಲ ಪಾಂಡ್ಯದೇವ : ಇವನು ಆರನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾಗಿದ್ದನು. ಈತನ ಉಲ್ಲೇಖ ಇಲ್ಲಿ ಹೆಚ್ಚಾಗಿ ಕಂಡಬರುತ್ತದೆ. ಕೆಲವೊಂದು ಶಾಸನಗಳಲ್ಲಿ ಶ್ರೀಮತ್ರಿಭುವನಮಲ್ಲದೇವ ಪಾದಬ್ಜಭ್ರಿಂಗಂ', ಸಮಸ್ತ ಪ್ರಶಸ್ತಿಸಹಿತಂ, ಶ್ರೀ ಮನ್ಮಹಾಮಂಡೇಶ್ವರ' ಎಂದು ಉಲ್ಲೇಖಬರುತ್ತದೆ. ವಿಕ್ರಮಾದಿತ್ಯನ ಕಾಲದಲ್ಲಿ ಚಾಲುಕ್ಯ ಸಾಮ್ರಜ್ಯದ ಅನೇಕ ಭಾಗಗಳು ಮಾಂಡಲೀಕನಿಂದ ಆಳಲ್ಪಡುತ್ತಿದ್ದವು. ಅದರಲ್ಲೂ ಹೆಚ್ಚಾಗಿ ಪಾಂಡ್ಯರಸರು ಮಾಂಡಲೀಕರಾಗಿದ್ದರು. ಇಲ್ಲಿಯ ಶಾಸನಗಳಲ್ಲಿ ವಿಕ್ರಮಾದಿತ್ಯ ಬರಿ ನಾಮಮಾತ್ರ ಅಧಿಕಾರಿ(Nominal)ಯಾಗಿ ಕಾಣಿಸಿಕೊಳ್ಳುತ್ತಾನೆ. ಆಡಳಿತ ಜವಬ್ದಾರಿಯೆಲ್ಲ ಪಾಂಡ್ಯದೇವನದೇ ಆಗಿತ್ತು. ಇವನು ನೊಳಂಬವಾಡಿಯನ್ನು ನೋಡಿಕೊಂಡರೂ ಬನವಾಸಿ, ಶಾಂತಲಿಗೆ ಹಾಗೂ ಹದಿನೆಂಟು ಅಗ್ರಹಾರಗಳಿಗೆ ಒಡೆಯನಾಗಿದ್ದನು. ಕ್ರಿ.ಶ.೧೦೭೬ರಲ್ಲಿ ಬರ್ಮದೇವರಸು ಮಾಂಡಲೀಕನಾಗಿದ್ದನು.(ಪಾಂಡ್ಯದೇವನ ದಂಡನಾಯಕ) ಇವನ ನಂತರ ೧೧೨೫ರಲ್ಲಿ ಪಾಂಡ್ಯದೇವ ಮಗನಾದ ರಾಯಪಾಂಡ್ಯದೇವನು ನೊಳಂಬವಾಡಿ ಮತ್ತು ಶಾಂತಲಿಗೆ ನಾಡುಗಳಿಗೆ ಮಂಡಲಾಧೀಶನಾಗಿದ್ದನು.

ಇವನ ಮೊದಲ ಉಲ್ಲೇಖ ಅಂಬಳಿ ಶಾಸನದಲ್ಲಿ ಕಂಡುಬರುತ್ತದೆ.[೪೪] ನಂತರದ ಉಲ್ಲೇಖ ಬಾಗಳಿ ಯಲ್ಲಿ ದೊರೆಯುತ್ತದೆ. ಇದರಲ್ಲಿ 'ಮಹಾಮಂಡಳೇಶ್ವರ ಕಾಂಚೀಪುರವರಾಧೀಶ್ವರ, ಯದುವಂಶಾಂಬರ ದ್ಯುಮಣಿ, ಸುಭಟಚೂಡಾಮಣಿ, ನಿಜಕುಳಕಮಳ ಮಾರ್ತಾಂಡ, ಪರಿಚ್ಛೇದಿಗಂಡ, ನಿಗಳಂಕಮಲ್ಲ

ಪಾಂಡ್ಯದೇವ' ಎಂಬ ಪ್ರಶಸ್ತಿಗಳೊಂದಿಗೆ ಉಲ್ಲೇಖವಾಗಿದ್ದಾನೆ. ಇವನನ್ನು ಉಲ್ಲೇಖಿಸುವ ಶಾಸನಗಳೇ ಹೆಚ್ಚಾಗಿ ಕಂಡುಬರುತ್ತದೆ.

ಜಗದೇಕಮಲ್ಲವೀರಪಾಂಡ್ಯದೇವ : ಇವನು ಎರಡನೆಯ ಜಗದೇಕಮಲ್ಲನ ಕಾಲದಲ್ಲಿ ಮಂಡಳೇಶ್ವರನಾಗಿದ್ದನು. ಜಗದೇಕಮಲ್ಲನ ಮಾಂಡಲೀಕರಲ್ಲಿ ಇವನು ನೊಳಂಬವಾಡಿಯ ಮಂಡಲೇಶ್ವರನಾಗಿದ್ದನು. ಕೊಟ್ನೆಕಲ್ಲು ಒಂದು ಶಾಸನದಲ್ಲಿ(ಹೂವಿನ ಹಡಗಲಿ ತಾಲೂಕು) ಜಗದೇಕಮಲ್ಲನ ಮಂಡಳೇಶ್ವರನಾದ ವೀರ ಪಾಂಡ್ಯದೇವನ ತಾಯಿ, ಸೋವಲದೇವಿಯನ್ನು ಕುರಿತು ಉಲ್ಲೇಖಬರುತ್ತದೆ.[೪೫] ಆದರೆ ಇವನ ಮೊದಲ ಉಲ್ಲೇಖ ಹೊಳಲು ಶಾಸನದಲ್ಲಿ ಕಂಡುಬರುತ್ತದೆ.[೪೬] ನಂತರ ಅಂಬಳಿ, ಕೊಟ್ನೆಕಲ್ಲು, ಉಲುವತ್ತಿ, ಅಲಬೂರು, ಗುಂಡಗತ್ತಿ, ಶ್ರೀನಿವಾಸಪುರಗಳಲ್ಲಿ ಕಂಡುಬರುತ್ತವೆ. ಬಾಗಳಿಯ ಶಾಸನದಲ್ಲಿ ವೀರಪಾಂಡ್ಯನ ಮಾವವಿಕ್ರಮಾದಿತ್ಯರಸನು ಬಾಗಳಿಯ ಕಲಿದೇವರಿಗೆ ದಾನ ನೀಡಿದ್ದನೆಂದು ಬರುತ್ತದೆ.[೩೪]

ಈ ಶಾಸನದಲ್ಲಿ ಆರನೆಯ ವಿಕ್ರಮಾದಿತ್ಯನ ಕಾಲವನ್ನು ಉಲ್ಲೇಖಿಸಿದ್ದು, ಮಹಾಮಂಡಳೇಶ್ವರ ಎಂದಿದೆ, ಆದರೆ ಈ ಮಂಡಳೇಶ್ವರ ಯಾರೆಂದು ಉಲ್ಲೇಖವಿಲ್ಲ. ಅದರಲ್ಲಿ ಹೀಗೆ ಬಂದಿದೆ.

> 'ಮಹಾಮಂಡಳೇಶ್ವರ, ಕಾಂಚಿಪುರವರಾಧೀಶ್ವರ, ಯದುವಂಶಾಂಬರದ್ಯು
> ಮಣಿ, ಸುಭಟ ಚೂಡಾಮಣಿ, ನಿಜಕುಳಕಮಳ ಮಾರ್ತಾಂಡ,
> ಪರಿಚ್ಛೇದಿಗಣ್ಡಂ, ಶ್ರೀಮತು ಸಿದ್ಧಾರ್ತಿಸಂವತ್ಸರದ ಭಾದ್ರಪದ ೧೩ನೆ ಸೋ ದಂದು
> ಮಹಾಜನಗಳಿಗೆ ನಾಗೆಕಲ್ಲಯ್ಯನು ಕೊಂಮೂರ ಕೆಯಿ೧೧ ಗಾಣನೆರೆ

ಎಂದು ಕಂಡುಬರುತ್ತದೆ.[೪೭] ಇಲ್ಲಿ ನಾಗೆಕಲ್ಲಯ್ಯನೇ ಇವನ ಮಾಂಡಳೀಕನಾಗಿರಬಹುದು. ಆದರೆ ನಾಗಕಲ್ಲಯ್ಯನ ಉಲ್ಲೇಖ ಎಲ್ಲಿಯೂ ಕಂಡುಬರುವುದಿಲ್ಲ. ಬಿರುದಾವಳಿಗಳನ್ನು ನೋಡಿದರೆ ಪಾಂಡ್ಯ ದೇವನಿರಬಹುದು. ಇಲ್ಲವೆ ನಾಗಕಲ್ಲಯ್ಯ ಈ ಬಿರುದುಗಳನ್ನು ಹೊಂದಿ ಭೂದಾನ ಮಾಡಿರಬಹುದು.

ತ್ರಿಭುವನ ಮಲ್ಲವೀರಪಾಂಡ್ಯ : ಇವನು ತ್ರಿಭುವನಮಲ್ಲ ಪಾಂಡ್ಯ ದೇವನ ಎರಡನೆಯ ಮಗ. ಈತನು ವಿಕ್ರಮಾದಿತ್ಯ ಕಾಲದಲ್ಲಿ ಮಂಡಳೇಶ್ವರನಾಗಿದ್ದನು. ವಿಕ್ರಮಾದಿತ್ಯನ ಎಲ್ಲ ಮಾಂಡಲೀಕರು 'ಶ್ರೀ ಮತ್ತ್ರಿಭುವನಮಲ್ಲದೇವ ಪಾದಾಬ್ಜಭ್ರಿಂಗಂ' ಎಂದು ಬರೆಸಿಕೊಂಡರೆ, ಈ ಶಾಸನದಲ್ಲಿ 'ಶ್ರೀಮತು ಹರಿಹರ ದೇವಪಾದಾಬ್ಜಭ್ರಿಂಗಂ' ಸಮಸ್ತಪ್ರಶಸ್ತಿಸಹಿತಂ, ಶ್ರೀ ಮನ್ಮಹಾಮಂಡಳೇಶ್ವರ ತ್ರಿಭುವನಮಲ್ಲ ವೀರಪಾಂಡ್ಯ ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ.[೪೮] ಇಲ್ಲಿ ವೀರಪಾಂಡ್ಯ ವಿಕ್ರಮಾದಿತ್ಯನನ್ನು 'ಹರಿಹರ' ಎಂದು ಬರೆಸಿಕೊಂಡಿದ್ದಾನೆ. ಹರಿಹರನಿಗೆ ಹೋಲಿಸಿ ಹೇಳಿದ್ದಾನೆ. ಅಂದರೆ ಮಾಂಡಳೀಕರು ಚಕ್ರವರ್ತಿಗಳನ್ನು ದೇವರಿಗೆ ಸಮಾನರು ಎಂದು ನಂಬಿದ್ದರು. ರಾಜರು ಮೂಲತಃ ದೈವೀಪುರುಷನೊಬ್ಬನಿಂದ ಧರೆಗಿಳಿದು ಬಂದವನೆಂದು ಹೇಳಿಕೊಳ್ಳುತ್ತಿದ್ದರು. ಅಂದರೆ ರಾಜನು ಸಹ ದೈವೀಪುರುಷನಾಗಿದ್ದನು.

ವಿಜಯಪಾಂಡ್ಯದೇವ : ಇವನು ವೀರಪಾಂಡ್ಯದೇವನ ತಮ್ಮನಾಗಿದ್ದಾನೆ. ಇವನು ಸಹ ವಿಕ್ರಮಾದಿತ್ಯನ ಮಾಂಡಲೀಕನಾಗಿದ್ದನು. ಈತನನ್ನು 'ಸಮಸ್ತ ಪ್ರಶಸ್ತಿಸಹಿತ ಶ್ರೀಮಹಾಮಂಡಳೇಶ್ವರ ವಿಜಯಪಾಂಡ್ಯದೇವರು ಎಂದು ಉಲ್ಲೇಖವಾಗಿದೆ.[೪೯] ಈ ಶಾಸನ ತೃಟಿತವಾಗಿರುವುದರಿಂದ ಬೇರೆ ಯಾವ ಮಾಹಿತಿ ಸಿಗುವುದಿಲ್ಲ. ಇಲ್ಲಿಯ ಒಂದು ಶಾಸನದಲ್ಲಿ ಪಾಂಡ್ಯರ ವಂಶಾವಳಿಯನ್ನು ಉಲ್ಲೇಖಿಸಿದ್ದು, ಕಾಲದ ಮಾಹಿತಿ ಇಲ್ಲ.[೫೦] ಆದರೆ ಇದನ್ನು ಚಾಳುಕ್ಯರ ಕಾಲಕ್ಕೆ ಸೇರಿಸಬಹುದು.(ಶಾಸನ ಪಾಠದ ಆಧಾರದಿಂದ) ಇದರಲ್ಲಿ ಕೆಲವರ ಪಾಂಡ್ಯರ ಹೆಸರನ್ನು ಗುರುತಿಸಲಾಗಿದೆ. ಆದರೆ ಯಾವ ಪಾಂಡ್ಯರ ಆಡಳಿತದ್ದು ಎಂಬುದನ್ನು ಗುರುತಿಸಲಾಗದು. ಈ ಹಿಂದೆ ತಿಳಿಸಿದ ಹಾಗೆ ವೀರಪಾಂಡ್ಯನ ಸಾಮಂತ ವಿಜಯಪಾಂಡ್ಯ ಎಂದು ಬಂದಿರುವುದರಿಂದ, ವೀರಪಾಂಡ್ಯ ವಿಜಯಪಾಂಡ್ಯನ ಅಣ್ಣನಿರಬೇಕು. ಇನ್ನು ಕೆಲವು ಪಾಂಡ್ಯರಸರನ್ನು ಹೆಸರಿಸುತ್ತದೆ. ರಾಯಪಾಂಡ್ಯ, ಪಂಡಿತಪಾಂಡ್ಯ, ಪಾಂಡುರಯ್ಯ ಎಂದು ಬರುತ್ತದೆ. ಇವರು ರಾಯಪಾಂಡ್ಯನ ಮಕ್ಕಳಾಗಿದ್ದರು ಎಂಬುದನ್ನು ಈ ಶಾಸನದ ಉಲ್ಲೇಖದಿಂದ ತಿಳಿಯಬಹುದು. ಅವರಲ್ಲಿ ಈ ಮೂವರನ್ನು ಹೀಗೆ ಗುರುತಿಸಬಹುದು.

೧. ಪಂಡಿತ ಪಾಂಡ್ಯ
೨. ವೀರಪಾಂಡ್ಯ
೩. ವಿಜಯಪಾಂಡ್ಯ

ಈ ಶಾಸನದಲ್ಲಿ ಸರಿಯಾದ ಉಲ್ಲೇಖವಿಲ್ಲದ ಕಾರಣ ಸರಿಯಾದ ಕ್ರಮದಲ್ಲಿ ಇವರ ಹೆಸರು ಕಂಡುಬರುವುದಿಲ್ಲ. ಆದ್ದರಿಂದ ಮೊದಲು ರಾಯಪಾಂಡ್ಯ ಎಂದಿರುವುದರಿಂದ, ಇವನಿಗೆ ಮೂವರು ಮಕ್ಕಳಿದ್ದರೆಂದು ಕಂಡುಬರುತ್ತದೆ. ಶಾಸನದ ಬಹುಪಾಲು ಭಾಗದಲ್ಲಿ ವಿಜಯಪಾಂಡ್ಯ ಮತ್ತು ವೀರಪಾಂಡ್ಯದೇವ ಎಂದು ಉಲ್ಲೇಖಬರುತ್ತದೆ. ವಿಜಯಪಾಂಡ್ಯದೇವನನ್ನು 'ಯಾಧವಾಭರಣೇ', 'ಪಾಂಡ್ಯಕುಳಮಾರ್ತಾಂಡ' ಪರಿಚ್ಛೇದಿಗಂಡೇ, ರಾಜಿಗಜೋಳಮನೋಭಂಗೆ, ಸಾಹಸೋತುಂಗ, ಮಹಾ ಮಂಡಳೇಶ್ವರ ವಿಜಯಪಾಂಡ್ಯದೇವ' ಎಂದು ಉಲ್ಲೇಖಿಸುತ್ತದೆ. ವಿಶೇಷವೆಂದರೆ ಇಡೀ ಶಾಸನದಲ್ಲಿ ಬರೀ ಪಾಂಡ್ಯರ ಬಿರುದುಗಳು, ಹೊಗಳಿಕೆಯನ್ನು, ಅಲಂಕಾರಿಕ ಪದಗಳಿಂದ ಉಲ್ಲೇಖಿಸುತ್ತದೆ. ಆದರೆ ಆಡಳಿತ ಕ್ರಮದ ಬಗ್ಗೆ ಎಲ್ಲಿಯೂ ಕಂಡುಬರುವುದಿಲ್ಲ. ಇನ್ನುಳಿದ ಪಾಂಡ್ಯರನ್ನು ಈ ಬಿರುದುಗಳೊಂದಿಗೆ ಉಲ್ಲೇಖಿಸಿದೆ.

೧. ಪರಾಕ್ರಮ, ಪರಭೂತ, ಪ್ರಭೂತ, ದ್ವೀರಶ್ರೀರಮಣಿ, ಸ್ವಯಂ ವೃತ್ತಿಪತಿ ಶ್ರೀರಾಯಪಾಂಡ್ಯೋನೃಪಃ

೨. ಶ್ರೀ ಯಶ್ಚ ಪರಿಮೋಚಿತಭೂರಿವೈರಮೇಕಂ, ಪದಂ ಸಪಧಿ, 'ಪಂಡಿತಪಾಂಡ್ಯ ದೇವಂ'

೩. ಜೋತ್ಸಾನಿರ್ಮ್ಮಳ, ಕೀರ್ತಿಚರ್ಚ್ಚಿತ, ಜಗಜ್ಜಾಳಂ, ಕಳಾನಾಂನಿಧಿಂ, ವನಿತಾಜಿಹ್ವಾಂತ ಮಾತ್ರಾಶ್ರಯ 'ವೀರಾಪಾಂಡ್ಯದೇವ' ಹೀಗೆ ಪಾಂಡ್ಯರ ವಂಶಾವಳಿಯನ್ನು ನಿರೂಪಿಸುತ್ತದೆ.

[illegible]

[illegible]

[illegible]

[illegible]

ಈ ಶಾಸನದಲ್ಲಿ ಇಬ್ಬರು ಮಂಡಳೇಶ್ವರರನ್ನು ಉಲ್ಲೇಖಿಸುತ್ತದೆ.[೫೧] 'ಮಹಾಮಂಡಳೇಶ್ವರ', 'ಕೊಟ್ಟೂರ ನಾಚಿದೇವನ ಮಂಮ(ಮಗ) ಹರಿಹರ ದೇವನಪುತ್ರನಂ', 'ಶ್ರೀಮನ್ಮಹಾಮಂಡಳೇಶ್ವರ', ವಿಪ್ರಪ್ರಸಾದ ವೀರಜಗದಾಳ ಬಂಮಿದೇವರಸನು' ಎಂದು ಉಲ್ಲೇಖವಾಗಿದೆ. ಕಾಲ ಕ್ರಿ.ಶ.೧೨೧೨ರಲ್ಲಿ ಸೇವುಣರ(ಯಾದವರಾಜ) ರಾಜನಾದ ಎರಡನೆ ಸಿಂಘನು, ಬಲ್ಲಾಳನ ಮೇಲೆ ಯುದ್ಧವನ್ನು ಕೈಗೊಳ್ಳಲು ತಯಾರಿ ನಡೆಸಿದ್ದನು. ಆದರೆ ಬಲ್ಲಾಳನ ಮೇಲೆ ಯುದ್ಧವನ್ನು ಕೈಗೊಳ್ಳದೆ, ನೇರವಾಗಿ ಆಕ್ರಮಣ ಮಾಡದೆ ಇವನ ಸಾಮಂತರನ್ನು ಸ್ವಾಧೀನಪಡಿಸಿಕೊಂಡು, ೧೨೧೩ರಲ್ಲಿ ಲಕ್ಕುಂಡಿಯನ್ನು ಗೆದ್ದನು. ಈ ಹಿಂದೆ ಅದನ್ನು ೧೨೧೨ರಲ್ಲಿ ಬಲ್ಲಾಳ ಹಿಡಿದಿದ್ದನು. ಈ ಹಿನ್ನೆಲೆಯಲ್ಲಿ ಈ ಮಂಡಳೇಶ್ವರರು ಇವನ ಮಾಂಡಲೀಕರಾಗಿದ್ದರು. ಕೊಟ್ಟೂರಿನ ಒಂದು ಶಾಸನದಲ್ಲಿ ಮಂಡಳೀಕ ಜಗದ್ದಳ ಬಂಮಿದೇವ' ಎಂದು ಬಂದಿದೆ.[೫೨] ಇದು ಬಲ್ಲಾಳನ ಕಾಲವಾಗಿದೆ. ಬಂಮಿದೇವನ ಮಕ್ಕಳು ಸೋಯಿದೇವ, ಘಟ್ಟಿದೇವ ಇದ್ದರೆಂದು ಕಂಡುಬರುತ್ತದೆ. ಇವರು ತಮ್ಮ ಆರಾಧ್ಯರಾದ, ಅರಸಿಯ ಬೀಡಿನ ಸೋಮಯಾಜ್ಯನಾದ ಹಿರಿಯಣ್ಣನ ಸನ್ನಿಧಿಯಲ್ಲಿ ಕಲಿದೇವರಿಗೆ(ಬಾಗಳಿಯ) ಭೂಮಿಯನ್ನು ದಾನ ನೀಡಿದರು.

ಈ ಶಾಸನವೊಂದರಲ್ಲಿ ಮಾಂಡಳಿಕ ಬಿಜ್ಜರಸ ಎಂದು ಉಲ್ಲೇಖವಾಗಿದೆ.[೫೩] ಈ ಶಾಸನ ಕಾಲ ೧೦೩೫ ಎಂದಿದೆ. ಇದು ಕಲಚೂರಿಗಳು ಕರ್ನಾಟಕದಲ್ಲಿ ಮೊದಲು ಗುರುತಿಸಿಕೊಂಡ ಕಾಲವಾಗಿದೆ. ಕಲಚೂರಿಗಳ ಮೊದಲ ರಾಜರುಗಳಾದ 'ಉಚ್ಚಿತನಿಂದ ಹಿಡಿದು ಎರಡನೆಯ ಕಿರಿಯಸಗನ ವರೆಗೂ ಕಂಡುಬರುತ್ತಾರೆ. ಆದರೆ ಕರ್ನಾಟಕ ಇತಿಹಾಸದಲ್ಲಿ ಇವರ ಪಾತ್ರವು ಗೌಣವಾಗಿದೆ. ಈ ವಂಶದ ರಾಜಕೀಯ ಚಟುವಟಿಕೆಗಳು ಪ್ರಾರಂಭವಾವಾಗುವುದು. ಬಿಜ್ಜ ಅಥವಾ ಬಿಜ್ಜಳನಿಂದ(ಇವನ ಕಾಲ ೧೦೯೭) ಶಾಸನಗಳು ಇವನನ್ನು ಮಂಡಳೇಶ್ವರ ಎಂದು ಕರೆದಿವೆ. ಈ ಶಾಸನದಲ್ಲಿ ೧೦೩೫ರಲ್ಲಿ ಬಿಜ್ಜನು ೨ನೇ ಜಯಸಿಂಹನ ಮಂಡಳೀಕನಾಗಿದ್ದನೆಂದು ತಿಳಿದುಬರುತ್ತದೆ. ಜಯಸಿಂಹನ ಸಾಮಂತರಲ್ಲೊಬ್ಬನಾದ ಬಿಜ್ಜರಸು ಯಾದವವಂಶದವರನ್ನು ಸೋಲಿಸಿ, ತೊರಗಲೆ ಎಂಬ ಸ್ಥಳವನ್ನು ವಶಪಡಿಸಿಕೊಂಡಿದ್ದನೆಂದು ಕಂಡುಬರುತ್ತದೆ.[೫೪] ಈ ಸಮಯದಲ್ಲಿ ಚಾಲುಕ್ಯರ ಆಂತರಿಕ ಸ್ಥಿತಿ ಸ್ವಲ್ಪ ಹದಗೆಟ್ಟಿತ್ತು. ಆದರೆ ಜಯಸಿಂಹನು ಕಾಳಿದಾಸನೆಂಬ ನಿಷ್ಠಾವಂತ ದಂಡನಾಯಕನ ಸಹಾಯದಿಂದ ತನ್ನ ವೈರಿಗಳನ್ನು ಧ್ವಂಸಮಾಡಿ ಸಾಮ್ರಾಜ್ಯದ ರಕ್ಷಣೆ ಮಾಡಿದನು. ಇದರಿಂದ ಇಲ್ಲಿ ಬಿಜ್ಜರಸನು ಇವನ ಒಬ್ಬ ಮಾಂಡಳೀಕನಾಗಿದ್ದನು. ಹೀಗೆ ಈ ಶಾಸನಗಳಲ್ಲಿ ಇಂತಹ ಮಾಂಡಲೀಕರು ಮಂಡಳೇಶ್ವರರು ಬಾಗಳಿಯನ್ನು ಆಳಿದರೆಂದು ಕಂಡುಬರುತ್ತದೆ.

[illegible]

೪. ಸೇನಭೋವರು

ಇವರನ್ನು ಶ್ಯಾನಭೋಗರೆಂದು ಕರೆಯುತ್ತಾರೆ. ಗ್ರಾಮಗಳ ಲೆಕ್ಕಪತ್ರಗಳನ್ನಿಡುವವರು ಎಂದರೂ ಎನ್ನಬಹುದು.(Village Accountant) ವಿದ್ಯಾವಂತರಾದ ಇವರು ಪ್ರತಿಯೊಂದು ಗ್ರಾಮಕ್ಕೂ ಇರುತ್ತಿದ್ದರು. ಗ್ರಾಮದ ಆಡಳಿತ ವಿಷಯದಲ್ಲಿಯೂ ಪ್ರಮುಖ ಪಾತ್ರವಹಿಸುತ್ತಿದ್ದರು. ಕೆಲವೊಮ್ಮೆ ಶಾಸನಗಳನ್ನು ಬರೆಯುತ್ತಿದ್ದರು. ಇಂತವರ ಉಲ್ಲೇಖಗಳು ಇಲ್ಲಿಯ ಕೆಲವೊಂದು ಶಾಸನಗಳಲ್ಲಿ ಕಂಡುಬರುತ್ತದೆ.

ಈ ಶಾಸನದಲ್ಲಿ ಸೇನಭೋವ ಸಂಕಣ್ಣ ಎಂದು ಉಲ್ಲೇಖವಾಗಿದೆ.[೫೫] ಈತನನ್ನು ಗುಣಗಣಾಳಂಕಾರ, ಚಾರುಚಾರಿತ್ರ, ನಯವಿನೆಯಶೀಲಾಚಾರಸಂಪನ್ನರಪ್ಪ, ಶ್ರೀಮತು ಸೇನಭೋವ xxಣ್ಣಂ' ಎಂದು ಬರುತ್ತದೆ. ಇದು ತ್ರುಟಿತವಾಗಿರುವುದರಿಂದ 'ಣ್ಣ' ಎಂದು ಮಾತ್ರ ಇದೆ. ಇದು ಸಂಕಣ್ಣ ಎಂದಿರಬೇಕು. ಇದೇ ಶಾಸನದ ಮುಂದುವರಿದ ಭಾಗದಲ್ಲಿ ಸಂಕಣ್ಣನ ಪುತ್ರ-'ಸೇನಭೋವಪದ್ಮಣ' ಎಂದು ಉಲ್ಲೇಖವಾಗಿದೆ. ಇವರಿಬ್ಬರು ಸೇರಿ ಮೂಡೆಯ(ಮೂಡಣವಾಗಿರಬೇಕು) ಕಟ್ಟೆಯ ಗದ್ದೆಯನ್ನು ೧೨೦ ಕಮ್ಮ ದಾನ ಬಿಡುತ್ತಾರೆ. ಇಲ್ಲಿ ಸೇನಭೋವ ಸಂಕಣ್ಣನು ಕುರುವತ್ತಿಯ ಈಶ್ವರ ಭಟ್ಟರ ಪುತ್ರ ಸೇನಭೋವಸಂಕಣ್ಣ ಎಂದು ಉಲ್ಲೇಖವಾಗಿದೆ.

ಕುರುವತ್ತಿಯ ಈಶ್ವರ ಭಟ್ಟರ ಮಗ, ಸೇನಭೋವ ಸಂಕಣ್ಣ, ಇವನ ಮಗ ಸೇನಭೋವ ಪದ್ಮಣನಾಗಿದ್ದನೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ದಾನಗಳನ್ನು ಬೇರೆ ಬೇರೆಯಾಗಿ ನೀಡಿದ್ದಾರೆ. ಈಶ್ವರಭಟ್ಟರ ಸಂಕಣ್ಣ, ಎರೆಯ ಹೂವಿನ ತೋಟ ೬೦ ಕಮ್ಮ ಬಿಟ್ಟರೆ, ಸೇನಭೋವ ಸಂಕಣ್ಣನ ಪುತ್ರ ಪದ್ಮಣನು ೧೨೦ ಕಮ್ಮ ಗದ್ದೆಯನ್ನು ದಾನ ಬಿಡುತ್ತಾನೆ. ಅಂದರೆ ತಂದೆ-ಮಕ್ಕಳು ಅವರ ಅಧಿಕಾರದಲ್ಲಿ ಬಂದ ವರಮಾನದ ಆಧಾರದ ಮೇಲೆ ದಾನವನ್ನು ನೀಡಿರಬಹುದಾಗಿದೆ.

ಈ ಶಾಸನದಲ್ಲಿ ಸೇನಭೋವ 'ಸಂಕಣ' ಎಂದು ಉಲ್ಲೇಖವಾಗಿದೆ.[೫೬] ಮೇಲೆ ಹೇಳಿದ ಹಾಗೆ ಆ 'ಸಂಕಣ್ಣ'ನಿಗೂ ಈ ಸಂಕಣನಿಗೂ ಒಂದು ವ್ಯತ್ಯಾಸವಿದೆ. ಮೇಲಿನ 'ಸಂಕಣ್ಣ'ನಿಗೆ 'ಣ'ಕ್ಕೆ 'ನ'ದ ಒತ್ತಕ್ಷರ ಇದೆ. ಈ ಸಂಕಣನಿಗೆ ಅದು ಕಂಡುಬರುವುದಿಲ್ಲ.(ಈ ಎರಡು ಅಕ್ಷರಗಳು ಯೋಗವಾಯಕಗಳು) ಏನೇ ಆದರೂ ಆ ಸಂಕಣ್ಣ ಬೇರೆ ಈ ಸಂಕಣ ಬೇರೆಯವರಾಗಿದ್ದಾರೆ. ಕಾಲದ ದೃಷ್ಟಿಯಿಂದಲೂ ವ್ಯತ್ಯಾಸ ಕಂಡುಬರುತ್ತದೆ. ಈತನನ್ನು 'ಶ್ರೀಮದಯ್ಯದಿಂಬರ, ಪ್ರಿಯಪುತ್ರನಪ್ಪ ಸೇನಭೋವಸಂಕಣ ಎಂದಿದೆ. ಇವನು ನೀಲೇಶ್ವರ ದೇವರ ಪೂಜೆ ಮತ್ತು ನಂದಾದೀಪಕ್ಕೆ ಮಹಾಜನರ ಸಮ್ಮುಖದಲ್ಲಿ xx ರಾಸಿ ಪಂಡಿತರ ಕಾಲನ್ನು ತೊಳೆದು ಮೂಡಲ ತೋಟವನ್ನು ೪೦ ಕಮ್ಮ ದಾನ ನೀಡುತ್ತಾನೆ. ಇದೇ ಶಾಸನದ ಮುಂದುವರಿದ ಭಾಗದಲ್ಲಿ 'ಸಮಸ್ತವಸ್ತು ಗುಣಸಂಪ xxx' ಎಂದು ಬಂದಿದ್ದು ಮುಂದಿನ ಭಾಗ

ತ್ರುಟಿತವಾಗಿದ್ದು, ಸೇನಭೋವ ಹೊನ್ನಬಾಚಯ್ಯ ಎಂದು ಬಂದಿದೆ.[೫೭] ಇವನು ಶ್ರೀಹೊನ್ನದೇವಿಗೆ ನೈವೇದ್ಯಕ್ಕೆ ನಂದಾದೀವಿಗೆಗೆ ಬಿಟ್ಟಹನ್ನಾಸಿ xxxx... ಒಂದು ನೂರುಮತ್ತರು ಕಮ್ಮ ತೋಟವನ್ನು ದಾನ ನೀಡುತ್ತಾನೆಂದು ಕಂಡುಬರುತ್ತದೆ. ಇನ್ನು ಈ ಶಾಸನದಲ್ಲಿ ಸೇನಭೋವ ಅಣ್ಣಮಯ್ಯ ಎಂದಿದೆ. ಇತನನ್ನು

> ಗಂಗರಸ ಸೇನಭೋವ ಅಣ್ಣಮಯ್ಯಂ
> ಪುಸಿಯಿಲ್ಲದಾತಂ, ಪಿಸುಣಮುಗರಿನ
> ಪತಿಹಿತದಣುರಿ, ಪರನಾರಿ ಸೋದರ
> ನಣ್ಣರತೊಳ್ತು ಬಣ್ಣರದಾಸಿ ಮಾಡಿಸಿದ

ಎಂದು ಉಲ್ಲೇಖಬರುತ್ತದೆ.[೫೮] ಆದರೆ ಏನು ಮಾಡಿಸಿದನೆಂದು ತಿಳಿದುಬರುವುದಿಲ್ಲ. ಇವರು ಕೆಲವೊಂದು ಸಾರಿ ಶಾಸನಗಳನ್ನು ಬರೆಯುತ್ತಿದ್ದರೆಂದು ಈ ಹಿಂದೆ ನೋಡಲಾಗಿದ್ದು, ಈ ಶಾಸನದಲ್ಲಿ ಶಾಸನವನ್ನು ಬರೆದಾತ ಸೇನಭೋವ ಸೋಮಯ್ಯ ಎಂದು ಬಂದಿದೆ.[೫೯] ಇದರಿಂದ ಇವರು ಶಾಸನಗಳನ್ನು ಬರೆಯುತ್ತಿದ್ದರೆಂದು ತಿಳಿಯುತ್ತದೆ. ಆದರೆ ಶಾಸನವನ್ನು ಕಂಡಸಿದವರು ಬೇರೆಯಾಗಿರುತ್ತಾರೆ. ಹೀಗೆ ಶಾಸನಗಳಲ್ಲಿ ಉಲ್ಲೇಖವಾಗಿದ್ದ ಸೇನಭೋವರನ್ನು ನೋಡಲಾಯಿತು.

ಕುಳಕರಣಿಗಳು : ಇಲ್ಲಿಯ ಒಂದು ಶಾಸನದಲ್ಲಿ ಕೊಳಕರಣಿ ಕಾಳಯ್ಯ ಎಂದು ಉಲ್ಲೇಖವಾಗಿದೆ.[೬೦] ಕುಳಕರಣಿ ಎಂಬಲ್ಲಿ 'ಕುಳ' ಅಥವಾ ಕುಲ ಮತ್ತು ಕರಣಿ ಎಂಬ ಎರಡು ಪದಗಳಿದ್ದು ಅವು ಕ್ರಮವಾಗಿ ಸಮೂಹ ಮತ್ತು ಕರಣಿಕತನ(ಲೆಕ್ಕ ಬರೆಯುವುದು)ವನ್ನು ನಿರ್ದೇಸುತ್ತವೆ. ಕುಳಕರಣಿಯು ಅಗ್ರಹಾರದ ಬ್ರಾಹ್ಮಣ ಸಮೂಹದ ಲೆಕ್ಕವನ್ನು ನೋಡಿಕೊಳ್ಳುತ್ತಿದ್ದರು ಎಂದು ಶಾಸನಗಳಲ್ಲಿ ತಿಳಿದುಬರುತ್ತದೆ. ಈ ಕುಳಕರಣಿಯು(ಈಗಿನ ಕುಲಕರ್ಣಿ ಅಥವಾ ಕರಣಿಕ) ಮಹಾಜನರ ಗುಮಾಸ್ತನಿದ್ದಂತೆ, ಅವರ ಅಧೀನರಾ ಗಿದ್ದು, ಊರಿನ ಲೆಕ್ಕಪತ್ರಗಳನ್ನು ಇಟ್ಟುಕೊಂಡು, ಮಹಾಜನರ ಪತ್ರವ್ಯವಹಾರಗಳನ್ನು ನೋಡಿಕೊಳ್ಳುವ ವ್ಯಕ್ತಿಯಾಗಿರುತ್ತಿದ್ದನು. ಹೀಗೆ ಸೇನಭೋವ ಮತ್ತು ಕುಳಕರಣಿಗಳು ಬೇರೆ ಬೇರೆಯಾಗಿದ್ದರೂ ಕೆಲಸದ ಸ್ವರೂಪ ಮಾತ್ರ ಒಂದೇ ಆಗಿರುವುದರಿಂದ, ಇವೆರಡೂ ಪದಗಳನ್ನು ಸಮಾನಾರ್ಥದಲ್ಲಿ ಬಳಸತೊಡಗಿದರು. ಕುಲಕರಣಿಗಳು ಗ್ರಾಮದ ಲೆಕ್ಕಪತ್ರಗಳನ್ನು ಹಾಗೂ ನೀತಿ ನಿಯಮಗಳನ್ನು ಬರೆದು ಸಾರ್ವನಿಕರಿಗೆ ತಲುಪಿಸುವಂತೆ ಶಾಸನಗಳಲ್ಲಿ ಬರೆಸುತ್ತಿದ್ದರು.

೪. ಹೆಗ್ಗಡೆಗಳು-(ಪೆರ್ಗ್ಗಡೆ)

ಅರಸರ ಪಾದಪದ್ಮೋಪಜೀವಿಗಳಾಗಿ ಆಳುತ್ತಿದ್ದ ಪೆರ್ಗ್ಗಡೆಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಇವರು ವಿಭಾಗ ಇಲ್ಲವೆ ಉಪವಿಭಾಗಗಳನ್ನು ಆಳುವ ರಾಜವಂಶೀಯರಂತೆ, ವಂಶಪರಂಪರೆಯಾಗಿ

ಮುಂದುವರಿಯದೆ, ತಮ್ಮ ರಕ್ಷಣೆ, ಶೌರ್ಯ ಸಾಹಸಗಳಿಂದಾಗಿ ಕೆಲಸಗಳನ್ನು ಪಡೆಯುತ್ತಿದ್ದರು. ಈಗ ಇವರನ್ನು ಹೆಗ್ಗಡೆ ಎಂದು ಕರೆಯಲಾಗಿದೆ. ಅಂದರೆ ಅಂದಿನ ಪೆರ್ಗ್ಗಡೆಗಳೇ ಇಂದಿನ ಹೆಗ್ಗಡೆಗಳೆನಿಸಿದ್ದಾರೆ. ಇವರಲ್ಲಿ ತಳ ವೃತ್ತಿ ಹೆಗ್ಗಡೆ, ಸಾದಪೆರ್ಗ್ಗಡೆ, ಸುಂಕವೆರ್ಗ್ಗಡ, ರಾಜಸಾಮ್ಯದ ಪೆರ್ಗ್ಗಡೆ, ಕಡಿತವೆರ್ಗ್ಗಡೆ, ಮನೆವೆರ್ಗ್ಗಡೆ ಹೀಗೆ ಮುಂತಾದರಿದ್ದುದನ್ನು ಉಲ್ಲೇಖಿಸುತ್ತವೆ.

'ಹೆಗ್ಗಡೆ ದೋವಯ್ಯ'-(ಪೆರ್ಗ್ಗಡೆ) : ಹೆಗ್ಗಡೆ ಎಂದರೆ ಗ್ರಾಮದ ಮುಖ್ಯಾಧಿಕಾರಿ, ಅರಮನೆ ಮುಂತಾದ ಕಡೆಗಳಲ್ಲಿ ಒಳಾಡಳಿತವನ್ನು ನೋಡಿಕೊಳ್ಳುವವನು ಎಂದಾಗುತ್ತದೆ. ಈ ಶಾಸನದಲ್ಲಿ 'ಸಮಸ್ತಗುಣನಿಧಿ', 'ಗೋತ್ರನಾರಾಯಣಂ', 'ಸ್ವಜನವತ್ಸಳಂ', 'ಸ್ವಾಮಿನೀಭೃತ್ಯಂ', ಶ್ರೀದೋವಯ್ಯಪೆರ್ಗ್ಗಡೆ ಎಂದು ಬಂದಿದೆ. ಇವನು ಪೆರ್ಗ್ಗಡೆಯಾಗಿದ್ದಾಗ ಅಜವರ್ಮನೆಂಬುವನು 'ಒಡ್ಡವಡಂಗಿಲೆ' ಗ್ರಾಮದ ದಾನಗಳನ್ನು ಪಡೆದನೆಂದು ಉಲ್ಲೇಖಿಸುತ್ತದೆ.[೬೧]

ಪೆರ್ಗ್ಗಡೆ ಕಾಳಿದಾಸಯ್ಯ : ಈತನನ್ನು ಮಂಡಳೀಕ ಬಿಜ್ಜರಸ ಪೆರ್ಗ್ಗಡೆ ಕಾಳಿದಾಸಯ್ಯ ಬರೆದಂ, ಎಂದು ಉಲ್ಲೇಖಬರುತ್ತದೆ.[೬೨] ಬಿಜ್ಜರಸನು ಮಾಂಡಳೀಕನಾಗಿದ್ದಾಗ ಇವನ ಪೆರ್ಗ್ಗಡೆಯಾಗಿದ್ದನು. ಸೇನಭೋವರ ಹಾಗೆ ಕೆಲವೊಂದು ಸಾರಿ ಶಾಸನಗಳನ್ನು ಬರೆಯುತ್ತಿದ್ದರೆಂದು ತಿಳಿಸಲಾಗಿದೆ. ಈ ಶಾಸನದಲ್ಲಿ 'ಕಾಳಿದಾಸಯ್ಯ ಬರೆದಂ' ಎಂದಿರುವುದರಿಂದ ಈ ಶಾಸನವನ್ನು ಇವನೇ ಬರೆದಿರಬೇಕು.

ಪಿರಿಯಾಡ ಪೆರ್ಗ್ಗಡೆ : ಈತನನ್ನು ಶಾಸನದಲ್ಲಿ 'ಕಣಕ' ಪಿರಿಯಾಡ ಪೆರ್ಗ್ಗಡೆ'ಯೆಂದು ಉಲ್ಲೇಖಬಂದಿದೆ.[೬೩] ಇವನು ಅರಸಿಕೆರೆಯ ಮಹಾಪ್ರಭು ಕಲಿಯಮಗೌಡನ ಮಗಳಾದ ಬಾಚಲದೇವಿಯ ಪತಿಯಾಗಿದ್ದು, ಬಾಗುಳಿಯ ಕಲಿದೇವರಿಗೆ ೧೩ ಗದ್ಯಾಣಗಳನ್ನು ದಾನನೀಡಿದ್ದರೆಂದು ಕಂಡುಬರುತ್ತದೆ. ಇತನ ಹೆಸರು ಪಿರಿಯಾಡ ಎಂದೇ ಆಗಿರಬೇಕು. ಏಕೆಂದರೆ ಶಾಸನದಲ್ಲಿ 'ಪಿರಿಯಾಡ' ಎಂದು ಮಾತ್ರ ಉಲ್ಲೇಖ ಬಂದಿದೆ. ಇವನ ಹೆಂಡತಿ ಮತ್ತು ಇವನು ಸೇರಿ ದೇವರಿಗೆ ದಾನನೀಡಿದರು. ದಾನದ ವಿವರವನ್ನು ಶಾಸನ ಹೀಗೆ ಉಲ್ಲೇಖಿಸುತ್ತದೆ. 'ಚಾಳುಕ್ಯವಿಕ್ರಮವರ್ಷದ ನಾಲ್ಕನೆಯ ವರ್ಷದ ಜೇಷ್ಠಮಾಸದ ವಡ್ಡವಾರ ಸೂರ್ಯಗ್ರಹಣದಂದು ಅರಸಿಯ ಕೆರೆಯಗೌಡಿಕೆ ತಮಗೆ ನಡೆವ ತೇಜಸ್ವಾಮ್ಯದಿಂದುಳ್ಳ ಧನ, ಭೂಮಿ, ಧಾನ್ಯಗಳನ್ನು ದೇವರ ಅಂಗ, ರಂಗಭೋಗಕ್ಕೆ ಬ್ರಾಹ್ಮಣರಿಗೆ, ಇವರ ಅಣ್ಣಾಸನಕ್ಕೆ ಪುರಾಣ ಹೇಳುವವರಿಗೆ, ದಾನಬಿಟ್ಟರು ಎಂದು ಬಂದಿದೆ. ಈ ಶಾಸನದಲ್ಲಿ ಪ್ರತಿಯೊಂದು ಕೆಲಸ ಕಾರ್ಯಗಳಿಗೆ, ವ್ಯಕ್ತಿಗೆ ದಾನನೀಡಿದ ವಿವರವಿದೆ. ಶಾಸನದ ಕೊನೆಯ ಭಾಗದಲ್ಲಿ ದಿವ್ಯತಿಥಿಯಾಳ್ ಕಣಕಪಿರಿಯಾಡ ಪೆರ್ಗ್ಗಡೆಗಳು, ಬಿಕ್ಕಿಗ-೭೦ ಆಳುತ್ತಿದ್ದ ಅರಸಿಕೆರೆಯ ಮೂಲಿಗ, ಗದ್ದೆಯನ್ನು ದಾನಬಿಟ್ಟರು. ಮೂಲಿಗ ಮಾಚಿಸೆಟ್ಟಿಯು, ಬಿಕ್ಕಿಗ-೭೦ ಆಳುತ್ತಿದ್ದಾಗ ಪೆರ್ಗ್ಗಡೆಗಳಾದ ಇವರು ದಾನಬಿಟ್ಟರು. ಇಲ್ಲಿ ಇನ್ನೊಂದು

ಪದ ಕಣಕ' ಎಂದು ಬಂದಿದೆ. ಇದು ಅವರ ವೃತ್ತಿಯನ್ನು ಹೇಳುವಂತಿದೆ. ಅಂದರೆ ವ್ಯಾಪಾರಿಗಳು, ಅಂಗಡಿಗಳನ್ನು ನೋಡಿಕೊಂಡು ಹೋಗುವವರು(ಕಿರಾಣಿ ಅಂಗಡಿಯ ಮಾಲೀಕರು).

ಪೆರ್ಗ್ಗಡೆ ನರಸಿಂಘಯ್ಯ : ಈತನನ್ನು 'ಸಮಸ್ತರಾಜ್ಯಭರನಿರೂಪಿತ', 'ಮಹಾಮಾತ್ಯಪದವಿ ವಿರಾಜ ಮಾನ್ನೋನ್ನತ, ಪ್ರಭುಮಂತ್ರೋತ್ಸಾಹ ಶಕ್ತಿತ್ರಯ, ಸಂಪನ್ನರಪ್ಪ ಶ್ರೀಮತ್ಪೆರ್ಗ್ಗಡೆ ನರಸಿಂಘಯ್ಯ ಎಂದು ಉಲ್ಲೇಖವಾಗಿದೆ.[೬೪] ಇವನು ನೊಳಂಬ ಉದಯಾದಿತ್ಯನು ಪಂಪಾಪುರ ತೀರ್ಥಕ್ಕೆ(ಹಂಪೆಗೆ) ಬಂದಾಗ ಇವನ ಅಪ್ಪಣೆಯಂತೆ ನರಸಿಂಘಯ್ಯನು ಬಾಗುಳಿಗೆ ಬಂದು, ಸೋಮಸಿಂಘ ಭಳಾರರ ಕಾಲನ್ನು ತೊಳೆದು ಬಾಗುಳಿಯ ಮಹಾಜನರ ಸಮ್ಮುಖದಲ್ಲಿ (ಬಿಕ್ಕಿಗ-೭೦ರ ಭಿಕ್ಕಿಯ ಭೀರಭಟ್ಟನು) ಬಾಗುಳಿಯ ಮಹಾಜನರಿಗೆ, ಕಲಿದೇವಸ್ವಾಮಿಗೆ, ತಪೋಧನರ ಸತ್ರಕ್ಕೆ ಛಾತ್ರ ಭೋಜನಕ್ಕೆ, ದೇವಾಲಯದ ಕೆಲಸ ಕಾರ್ಯಗಳಿಗೆ, ದೇವಾಲಯದ ಸೂಳೆಯರಿಗೆ ಭೂಮಿಯನ್ನು ದಾನ ನೀಡುತ್ತಾನೆ. ಇದರ ಕೊನೆಯ ಭಾಗದಲ್ಲಿ ಈ ಶಿಲಾಶಾಸನದೊಳ್ವಿಶೇಷದಿಂ ಬರೆಸಿದ, ಅಂತಕನಾಂತಬಲಕೆ, ಮುಂದಾಂತಕನು ದ್ಯೋಗದೆಡೆಗೆ ಶೌರ್ಯ್ಯಾಚಿತದೊಳ್ಕೊಂತಿಸುತನೆನಿಪ ಮಹಾಶ್ರೀಮಂತನ ಮಗ ನೆಲೆನೆಗಳ್ದನೆಲ್ತೆ ನರಸಿಂಘಯ್ಯ ದೇವರು' ಎಂದು ಉಲ್ಲೇಖವಾಗಿದೆ. ಇವನ ನೈಪುಣ್ಯತೆ ಮತ್ತು ಶೌರ್ಯಸಾಹಸದಲ್ಲಿ ಕುಂತಿ ಸುತಭೀಮನಂತೆ ಇದ್ದನೆಂದು ಹೊಗಳಿಕೆ ಬರುತ್ತದೆ. ಇವನು ಬಿಟ್ಟದಾನವು ಕೆರೆಗಳ ದುರಸ್ತಿಕಾರ್ಯ ಗಳಿಗೆ ಉಪಯೋಗವಾಗಲೆಂದು ಬರೆಸಿ ದಾನನೀಡಿದ್ದನು. "ಮಹಾಜನದಧ್ಯದೊಳ್ ಬಿಕ್ಕಿಕಳ್ಬಲೆ ಭೀರಭಟ್ಟನರೆಯ ಸೋಮಸಿಂಘಭಳಾರರ ಕಾಲಂ ಕರ್ಚಿಧಾರೆಯನೆರೆಯಿಸಿ ಕರೆಗೊಂಡಂಗೆಯ್ದಿಸವಂಧವಂ ಕೊಣ್ದು ಕೆರೆಗಳ ಪಡಿಸಲಿಸುವರ್ ಎಂದು ಉಲ್ಲೇಖಬರುತ್ತದೆ. ಇಂತಹ ವಿವರವನ್ನು ತಿಳಿಸುವ ಇನ್ನೊಂದು ಶಾಸನ ಕಂಡುಬರುತ್ತದೆ.[೬೫]

ಹೆಗ್ಗಡೆ ಚರ್ವಾಡ : ಈತನು ಮಲ್ಲಿಕಾರ್ಜುನ ದಂಡನಾಯಕರ ಹೆಗ್ಗಡೆಯಾಗಿದ್ದನು. ಈತನನ್ನು ಮಲ್ಲಿಕಾರ್ಜುನ ದಂಡನಾಯಕರಯಗ್ಗಡೆ ಚರ್ವಾಡನು' ಎಂದು ಉಲ್ಲೇಖಿಸಲಾಗಿದೆ.[೬೬] ಇವನು ಹರಿನೀರ ಬಾಯಿ ಕಲ್ಲುತೋಟ ಮತ್ತು ತನಗಿರುವ ಎಲ್ಲಾ ತೋಟಗಳಲ್ಲಿ ಮುಖ್ಯವಾಗಿರುವುದನ್ನು (ಕಲಿದೇವರಿಗೆ) ಹೊನ್ನದೇವರಿಗೆ ಬಿಟ್ಟುಕೊಡುತ್ತಾನೆ. ಶಾಸನವು ತ್ರುಟಿತವಾಗಿ, ಕೊನೆಯ ಭಾಗ ಹಾಳಾಗಿರುವುದರಿಂದ ಹೆಚ್ಚಿನ ವಿವರ ದೊರಕುವುದಿಲ್ಲ.

ಹೆಗ್ಗಡೆ ಮಲ್ಲಯ್ಯ : ಇವನನ್ನು ಪಂಡಿತಯ್ಯನ ಹೆಗ್ಗಡೆ ಎಂದು ಉಲ್ಲೇಖಿಸುತ್ತದೆ.[೬೭] ಶಾಸನದಲ್ಲಿ ಗ್ರಾಮದ, ನ್ಯಾಯದ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಾನೆ. ಇಲ್ಲಿ ಅಂಗಡಿ ಕಾಳಯ್ಯನ ಮಗಳು ಜಾತಿಸಂಕರ ಮಾಡಿದಾಗ ಬಾಗುಳಿಯ ಐವತ್ತು ಮಹಾಜನರು ಪ್ರಧಾನವಾಗಿ ಪಂಡಿತಯ್ಯನ ಹೆಗ್ಗಡೆ ಪಂಡಿತ್ಯಯನ ಹೆಗ್ಗಡೆ ಮಲ್ಲಯ್ಯ ಮತ್ತು ಗೋಪಯ್ಯ ಎಂಬ ಹೆಗ್ಗಡೆಯೂ ಸೇರಿ ಸರಿಯಾದ

[illegible]

[illegible]

ಕ್ರಮಕೈಗೊಳ್ಳುತ್ತಾರೆ. ಮಗಳು ಮಾಡಿದ ತಪ್ಪಿಗಾಗಿ ಕಾಳಯ್ಯನು ಹರಿನೀರಬಾಯಿ, ಕಲ್ಲುತೋಟವನ್ನು ೮೦ ಕಮುನ್ನು ಶ್ರೀ ಕಲಿದೇವರ ದಿವ್ಯಪಾದಕ್ಕೆ ಧಾರೆಯರೆಯಬೇಕೆಂದು ನಿರ್ಣಯ ಮಾಡುತ್ತಾರೆ.

ಹೆಗ್ಗಡೆ-ಚಂದಯ್ಯ : ಈತನು ವೀರನರಸಿಂಹನ ಕಾಲದಲ್ಲಿದ್ದನೆಂದು ಕಂಡುಬರುತ್ತದೆ.[೬೮] ಇವನು ಮಹಾ ಅಗ್ರಹಾರವಾದ ಬಾಗಳಿಯ ನೀಲಗಿರಿಯ ನೀಲೇಶ್ವರ ದೇವರಿಗೆ, ಬಾಗುಳಿಯ('ಅಶೇಷ') ಸಮಸ್ತಜನರಾದ ಮಹಾಜನರ ಸನ್ನಿಧಾನದಲ್ಲಿ ಮೊಗವಾಡ ಮಾಚರಸನ ಹರಿಕಾರ ಬೆಟಿಯನಾಯಕನ ಮಗನಾದ ಹೆಗ್ಗಡೆ ಚಂದಯ್ಯ, ಈ ದೇವರ ಅಂಗರಂಗಭೋಗಕ್ಕೆ ಬೆಳ್ಳಿಯ ಕಟ್ಟದ ತನ್ನ ತೋಟಗಟಿನ ಕಂಭ ೧೦೦ ರಷ್ಟು ಪೂಜಾರ್ಥಕ್ಕೆ ದಾನ ನೀಡಿದನು.

ಇದರಲ್ಲಿ ತಳವೃತ್ತಿಯ ಹೆಗ್ಗಡೆ, ಸುಂಕವೆರ್ಗ್ಗಡ, ಮನೆಪೆರ್ಗ್ಗಡೆ, ಮುಂತಾದವರಿದ್ದರೆಂದು ಈ ಹಿಂದೆ ತಿಳಿಸಲಾಗಿದೆ. 'ಈ ಶಾಸನವೊಂದರಲ್ಲಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಪ್ರಧಾನಂ, ಶ್ರೀಕರಣಂ, ಸರ್ವ್ವಾರ್ಧ್ಯಕ್ಷಂ, ತಂತ್ರಾಧಿಷ್ಠಾಯಕಂ ಮನೆವೆರ್ಗಡೆ ಮಹಾಪಸಾಯಿತಂ, ವಿಜಯಹೆಮ್ಮಾಡಿ ಎಂದು ಉಲ್ಲೇಖಬರುತ್ತದೆ.[೬೯] ಇಲ್ಲಿ 'ಮನೆವೆರ್ಗ್ಗಡೆ' ಮಹಾಪಸಾಯಿತಂ ವಿಜಯ ಹೆಮ್ಮಾಡಿ ಎಂದು ಉಲ್ಲೇಖವಿದೆ. ಇದು ಮನೆವೆರ್ಗ್ಗಡೆ ಎಂಬುದಕ್ಕೆ ಸಮನಾಗಿದೆ. ಅಂದರೆ ಪೆರ್ಗ್ಗಡೆ ಎಂಬುದು ಮಹತ್ತರದ ಸೂಚಿತವಾಗಿದೆ. ಇವೆರಡೂ ದೊಡ್ಡ ಅಧಿಕಾರಿಗಳನ್ನು ಸೂಚಿಸುವ ಪದಗಳು. ಪೆರ್ಗ್ಗಡೆ ಎನ್ನುವುದು ಸಂಸ್ಕೃತದ 'ಮಹತ್ತರ' ಎಂಬ ಪದದ ಅನುವಾದವಾಗಿರುವಂತಿದೆ. ಮಹತ್ತರ - ಮಹತ್+ತರಹ(Greater) = ಮಹತ್‌ಗಿಂತ ದೊಡ್ಡದು ಎಂಬ ಅರ್ಥದಲ್ಲಿ, ಪೆರ್+ಕಡೆ>ಪೆರ್ಗಡೆ ಎಂಬಲ್ಲಿಯೂ 'ಕಡೆ' ಎಂಬುದು ಪೆರ್ ಗಿಂತ ದೊಡ್ಡದು ಎಂಬ ಅರ್ಥವನ್ನು ಸೂಚಿಸುವಂತೆ ಕಾಣುತ್ತದೆ. ಇಲ್ಲಿ ಬರುವ (ಪದವಿ) ಅಧಿಕಾರಿಗಳನ್ನೂ ಇಂತಹದ್ದೆ ಹುದ್ದೆ ಎಂದು ಗುರುತಿಸುವುದು ಕಠಿಣ.

ಮಂತ್ರಿಮಂಡಲದ ಮಂತ್ರಿಗಳನ್ನು ಮಹಾಪ್ರಧಾನಿ, ಮಹಾಮಾತ್ಯ(ಎರಡೂ ಒಂದೇ ಆಗಿರಬಹುದು), ದಂಡನಾಥ, ಮಹಾದಂಡನಾಥ, ಸಂಧಿವಿಗ್ರಹಿ ಮುಂತಾದ ಹೆಸರುಗಳಿಂದ ಶಾಸನಗಳು ಕರೆದಿವೆ. ಮಂತ್ರಿ ಮಂಡಲದ ಒಬ್ಬೊಬ್ಬ ಸಚಿವನಿಗೂ ಆಡಳಿತದ ಯಾವ ಯಾವ ಶಾಖೆಗಳನ್ನು, ಯಾವ ಯಾವ ಆಧಾರದ ಮೇಲೆ ರಾಜನು ಹಂಚುತ್ತಿದ್ದನೆಂದು ಶಾಸನಗಳು ಸ್ಪಷ್ಟವಾಗಿ ಮಾಹಿತಿ ಕೊಡುವುದಿಲ್ಲ. ಏಕೆಂದರೆ ಒಬ್ಬನೇ ಮಂತ್ರಿಗೆ ಮೇಲಿನ ಎಲ್ಲ ವಿಶೇಷಣಗಳನ್ನು ಕೊಟ್ಟಿರುವುದು ಕಂಡುಬರುತ್ತದೆ.

ಈ ಶಾಸನದಲ್ಲಿ ಇವನನ್ನು ಮನೆವೆರ್ಗ್ಗಡೆ, ತಂತ್ರಾಧಿಷ್ಠಾಯಕ, ಪಸಾಯತ ಎಂದು ಉಲ್ಲೇಖಿಸುತ್ತದೆ. (ರಾಜನ ಅನುಗ್ರಹಕ್ಕೆ ಪಾತ್ರನಾಗಿ, ಅವನ ಬಳಿ ಇರುವ ಒಬ್ಬ ಅಧಿಕಾರಿ) ಇಲ್ಲಿ ಎಲ್ಲ ಅಧಿಕಾರದ ವಿಶೇಷಣಗಳು ಇವನಿಗೆ ಇರುವುದರಿಂದ ಯಾವುದೆಂದು ನಿಖರವಾಗಿ ಹೇಳಲಾಗದು.

ಪೆರ್ಗ್ಗಡೆ ಕಾವರಾಜ : ಈತನು ತ್ರಿಭುವನ ಮಲ್ಲನ ಕಾಲದಲ್ಲಿ (ಹೆಗ್ಗಡೆ)ಪೆರ್ಗ್ಗಡೆಯಾಗಿದ್ದನು. ಇವನ ಪಾಂಡ್ಯದೇವರ ಬೆಸದಿಂದಿದ್ದು 'ಸಮಸ್ತವಸ್ತು' ಗುಣಗಣಾಳಂಕಕಾರ, ಚಾರುಚಾರಿತ್ರನಯ, ವಿಷಯ ಸೀಲಾಚಾರ ಸಂಪನ್ನರಪ್ಪ, ಶ್ರೀಮತ್ಪರ್ಗ್ಗಡೆ ಕಾವರಾಜಂ' ಎಂದು ಉಲ್ಲೇಕವಾಗಿದೆ.[೨೦] ಇವನು ದೀಪಾವಳಿಯ ಹಬ್ಬದ ದಿನ ಮಹಾಜನ ಉದಲುಕುಡುವ ಗದ್ಯಾಣದ ಎರಡರಲ್ಲಿ ದೇವರ ರಂಗಭೋಗಕ್ಕೆ ಬಿಟ್ಟ ಒಂದು ಗದ್ಯಾಣ ಎಂದು ವ್ಯಕ್ತವಾಗುತ್ತದೆ. ಹೀಗೆ ಇವುಗಳು ಪೆರ್ಗ್ಗಡೆಗಳವರನ್ನು ಉಲ್ಲೇಖಿಸಿವೆ. ಈವರೆಗೆ 'ಪೆರ್ಗ್ಗಡೆ' ಎಂದು ಉಲ್ಲೇಖವಾದರೆ ಈ ಶಾಸನದಲ್ಲಿ 'ಪೆರ್ಗ್ಗಡೆ ಕರಣಂಗಳು' ಎಂದು ಬಂದಿದೆ.[೨೧] ಇದು ಪ್ರಾಯಶಃ ಪೆರ್ಗ್ಗಡೆ ಮಾಡುವ ಕೆಲಸಕ್ಕೆ ದಾನ ನೀಡಬೇಕು ಎಂಬ ಅರ್ಥವನ್ನು ಕೊಡಬಹುದಾಗಿದೆ. ಏಕೆಂದರೆ ಪನ್ನಾಯದ ಸುಂಕದೊಳಗೆ ತಿಂಗಳಿಗೊಂದು ಗದ್ಯಾಣ, ಪೊನ್ನಿನಲ್ಲಿ ನಡೆವ, ಪೆರ್ಗ್ಗಡೆ ಕರಣಂಗಳು, ಕುಡುತಂ, ಒಪ್ಪಂತಾಗಿ ಬಿಪ್ಪರು ಎಂದು ಬರುತ್ತದೆ. ದಾನವನ್ನು ಬಿಟ್ಟವರು ಸುಂಕದ ಅಧಿಕಾರಿ ಬರ್ಮರಸರು. ಹೀಗೆ ವಿಭಾಗಮಟ್ಟದಲ್ಲಿ ಅಲ್ಲದೆ ಊರುಗಳ ರಕ್ಷಣೆಯೂ ಪೆರ್ಗ್ಗಡೆ ಮತ್ತು ಇವರಿಗೆ ಸಹಾಯಕರಾಗಿ ಇತರರ ಮೂಲಕ ನಡೆಯುತ್ತಿತ್ತು. ಇವರು ಮಂಡಳೇಶ್ವರರಿಗೆ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದರಲ್ಲದೆ, ತಮ್ಮ ಸಾಮ್ರಾಜ್ಯದ ಅಪತ್ಕಾಲದಲ್ಲಿ ಚಕ್ರವರ್ತಿಗೆ ಮಂಡಳೇಶ್ವರರೊಂದಿಗೆ ಸೇರಿಕೊಂಡು ವೈರಿಗಳನ್ನು ಹಿಮ್ಮೆಟ್ಟಿಸುತ್ತಿದ್ದರು. ತಮ್ಮ ಆಡಳಿತಕ್ಕೆ ಒಳಪಟ್ಟ ಪ್ರದೇಶವನ್ನು ಸುಲಿಗೆಗಳಿಂದ, ದಂಗೆಗಳಿಂದ ರಕ್ಷಿಸುತ್ತಿದ್ದರು.

೯. ಗ್ರಾಮಾಡಳಿತ(ಬಾಗಳಿ)

ಊರುಗಳು ಅಥವಾ ಗ್ರಾಮಗಳು ಬೆಳೆದು ಇಲ್ಲವೆ ಮಾರ್ಪಟ್ಟು ಪಟ್ಟಣಗಳು, ಅಗ್ರಹಾರಗಳೆನಿಸಿರುವುದರಿಂದ, ಊರಾಡಳಿತದಲ್ಲಿ ಪಟ್ಟಣ, ಅಗ್ರಹಾರ, ಹಳ್ಳಿಗಳು ಸೇರ್ಪಡೆಯಾಗುತ್ತವೆ. ಊರು, ಹಳ್ಳಿ, ಗ್ರಾಮಗಳು ಮೊದಲಾದವು, ಮೊದಲು ಕೆಲವು ಜನಾಂಗಗಳು ನೆಲೆಯೂರಿ ಬೆಳೆದ ಸ್ಥಳಗಳಾದರೆ, ಮಠ ಮಟ್ಟಣಗಳು, ಸಕಲನಾಗರೀಕ ಸೌಲಭ್ಯಗಳನ್ನು ಪಡೆದ ವಿಸ್ತೃತರೂಪಗಳೆನ್ನಬಹುದು. ಒಂದು ಊರು 'ಪುರ' ಎನಿಸಿಕೊಳ್ಳಬೇಕಾದರೆ ಅದರ ಸುತ್ತಮುತ್ತ ಆರಾಮಗಳು, ತೋಪುಗಳು, ಬಹುವಿಧ ಜನರವಾಸ, ಮಾರಾಟಗಾರರು, ಕೊಳ್ಳುವವರು, ಕಿಕ್ಕಿರಿದು ದುಂಬಿದ ಗದ್ದಲದಿಂದ ಕೂಡಿರುತ್ತದೆ. ದೇವತೆಗಳಿಂದ ದೇವಸ್ಥಾನಗಳಿಂದ ರಾರಾಜಿಸುತ್ತಿರುತ್ತದೆ. ಸಂತ ನೆರೆಯುವುದು ಪಟ್ಟಣಗಳಲ್ಲಿ ಹೆಚ್ಚು. ಇಂತಹ ಊರು ಹಳ್ಳಿಗಳು ಬ್ರಾಹ್ಮಣರಿಗೆ ದತ್ತಿಯಾಗಿ ಬಿಟ್ಟುಕೊಟ್ಟ ಪ್ರದೇಶಗಳಾಗಿರುತ್ತವೆ. ಇವುಗಳಲ್ಲಿ ಬಾಗಳಿ ಒಂದು ಬ್ರಾಹ್ಮಣರಿಗೆ ಬಿಟ್ಟುಕೊಟ್ಟ ಹರಿಶ್ಚಂದ್ರದತ್ತಿಯಗ್ರಹಾರವಾಗಿತ್ತು.

ಪಟ್ಟಣಗಳ ಆಡಳಿತ : ಬಾಗಳಿಯನ್ನು ಕೆಲವು ಶಾಸನಗಳು ರಾಜಧಾನಿಯಾಗಿತ್ತು ಎಂದು ಉಲ್ಲೇಖಿಸುತ್ತವೆ. ಇಲ್ಲಿ ಒಂದು ಶಾಸನದಲ್ಲಿ 'ಮನ್ನೆಯ ಕೆರೆಯ ನೇಲೆವೀಡಿ'ನಿಂದ ಎಂದು ಬಂದಿದೆ.[೨೨] ಕೆಲವು ಶಾಸನಗಳಲ್ಲಿ

‘ಪಟ್ಟಣ ಸ್ವಾಮಿ’ಎಂದು ಬಂದಿರುವುದು ಕಂಡುಬರುತ್ತದೆ. ಇದರಿಂದ ಪಟ್ಟಣಸ್ವಾಮಿ ಅ ಊರಿನ ವ್ಯಾಪಾರಸ್ಥನಾಗಿದ್ದನು. ಪಟ್ಟಣಗಳು ವ್ಯಾಪಾರಿ ಕೇಂದ್ರಗಳಾಗಿರುವುದರಿಂದ ಅಲ್ಲಿನ ಪ್ರತಿಯೊಂದು ಕಾರ್ಯಚಟುವಟಿಕೆಗಳಲ್ಲಿ ವರ್ತಕರ ಪ್ರಭಾವವನ್ನು ಅಲ್ಲಿನ ಶಾಸನಗಳಿಂದ ಗುರುತಿಸಬಹುದು. ವಿವಿಧ ವೃತ್ತಿ, ವ್ಯಾಪಾರಗಳನ್ನು ಕೈಗೊಂಡ ಇವರು ತಮ್ಮದೇ ಆದ ಸಂಘಸಂಸ್ಥೆಗಳನ್ನು ಹೊಂದಿ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಮತ್ತು ವಿವಿಧ ವರ್ಗದ ಇತರರೊಂದಿಗೆ, ದಾನ ಮತ್ತು ದಾನಪ್ರತಿಪಾಲನ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ಬಾಗಳಿ ಗ್ರಾಮದಲ್ಲಿ(ಪಟ್ಟಣ ಆಗಿತ್ತು) ಅಲ್ಲಿಯ ಮಂಡಳೇಶ್ವರರಿಗೆ ಅಧೀನರಾಗಿ ಪಟ್ಟಣದ ‘ಸಮಸ್ತ’ ಜನರು(ಇಲ್ಲಿ ಸಮಸ್ತ ಎನ್ನುವುದಕ್ಕೆ ಅಶೇಷ ಎಂಬ ಪದ ಉಲ್ಲೇಖವಾಗಿದೆ.) ‘ಸಬಾಳವೃದ್ಧಸಹಿತವಶೇಷಂ, ಉಭಯನಾನಾದೇಶಿಗಳು, ಸಾಸಿರ್ವರು, ನಾನಾದೇಶಿ ತಂಬುಲಿಗರು, ಸೆಟ್ಟಿಗಳು, ಸ್ವಾಮಿಗಳಐನ್ನೂರ್ವರು, ಗೌಡಸ್ವಾಮಿಗಳು, ವಡ್ಡವ್ಯವಹಾರಿಗಳು, ಏಕಸ್ಥರಾಗಿ ದತ್ತಿಬಿಟ್ಟಿರುವುದು, ಮತ್ತು ಅವರೆಲ್ಲ ಒಂದೆಡೆ ಸೇರಿ ನಿರ್ಧರಿಸಿದ ಸ್ಥಳ ದಿನಗಳಲ್ಲಿ ನೆರೆಯುತ್ತಿದ್ದು, ವರ್ತಕರ ಪರಸ್ಪರ ಸಹಕಾರ, ಸಹಬಾಳ್ವೆ ಎದ್ದು ಕಾಣುತ್ತದೆ.[೭೦] ಇವರಲ್ಲಿ ದೊಡ್ಡ ಪ್ರಮಾಣದ ವರ್ತಕರು, ವ್ಯಾಪರವನ್ನು ಕೈಗೊಂಡ ಸ್ಥಿತಿವಂತರು, ದೇವಾಲಯಗಳನ್ನು ಕಟ್ಟಿಸಿದ್ದಾರೆ. ಪಟ್ಟಣಗಳ ವರ್ತಕರಲ್ಲಿಯೇ ಮುಖ್ಯಸ್ಥನೊಬ್ಬನಿದ್ದು, ಅವನನ್ನು ಪಟ್ಟಣಸ್ವಾಮಿ ಎಂದು ಕರೆಯಲಾಗಿತ್ತು. ಪಟ್ಟಣಸ್ವಾಮಿಗಳು ಸಹ ದೇವರಿಗೆ, ದೇವಾಲಯಕ್ಕೆ ದಾನ ನೀಡಿರುವುದನ್ನು ವಿವರಿಸುತ್ತವೆ. ಈ ಶಾಸನವೊಂದರಲ್ಲಿ ಬಾಗುಳಿಯ ಪಟ್ಟಣಸ್ವಾಮಿ ಎಂದು ಉಲ್ಲೇಖವಾಗಿದೆ.[೭೧] ಈತನನ್ನು ‘ಸಮಸ್ತ ಗುಣಾಚಾರ ಶಿವಗ್ನಾಸಂಪಂ’ ಎಂದು ಉಲ್ಲೇಖಿಸಿದೆ. ಅಂದರೆ ಸಕಲಗುಣಾಚಾರ ಸಂಪನರಪ್ಪ ಬಾಳ್ಗುಳಿಯ ಪಟ್ಟಣಸ್ವಾಮಿ ಲಕ್ಕಿಸೆಟ್ಟಿ’ ಎಂದು ಕಂಡುಬರುತ್ತದೆ. ಇವನು ಸಹ ಕಲಿದೇವರಿಗೆ ದಾನ ನೀಡಿದನೆಂದು ಉಲ್ಲೇಖಿಸುತ್ತದೆ.

ಹೀಗೆ ಪಟ್ಟಣಗಳನ್ನು ಮತ್ತು ಪಟ್ಟಣಗಳ ಉಪವಿಭಾಗಗಳನ್ನು, ಇವುಗಳ ಆಡಳಿತವನ್ನು ನೋಡಿಕೊಳ್ಳಲು ಸಾಮಂತ, ಮಂಡಳೇಶ್ವರರೊಂದಿಗೆ, ಮನ್ನೆಯರು ಮತ್ತು ಇತರ ಅಧಿಕಾರಿಗಳು ಅಲ್ಲಿ ವಾಸಿಸುತ್ತಿದ್ದರು. ಈ ರೀತಿಯಾದ ಪಟ್ಟಣದ ಆಡಳಿತ ಇತ್ತು ಎಂದು ಕಂಡುಬರುತ್ತದೆ. ಪಟ್ಟಣದ ಆಡಳಿತದಲ್ಲಿ ಹೆಗ್ಗಡೆ(ಪೆರ್ಗ್ಗಡೆ)ಗಳ ಪಾತ್ರವು ಮುಖ್ಯವಾಗಿತ್ತು. ಹೆಗ್ಗಡೆಗಳು ಸುಂಕದ ಅಧಿಕಾರಿಗಳು ಮಾತ್ರ ಆಗಿದ್ದರೆಂದು ನಾಗಯ್ಯನವರು ತಪ್ಪಾಗಿ ಭಾವಿಸುತ್ತಾರೆ.[೭೨] ಏಕೆಂದರೆ ಎಲ್ಲಾ ಅಧಿಕಾರಿಗಳು(ಹೆಗ್ಗಡೆಗಳು) ಸುಂಕದ ಅಧಿಕಾರಿಗಳಾಗಿರಲಿಲ್ಲ. ಕೆಲವರು ಮಾತ್ರ ಇದ್ದರೆಂದು ತಿಳಿಯಬಹುದು. ಕೆಲವರು ಗ್ರಾಮದ ಅಧಿಕಾರಿಗಳು, ಊರಿನ ಒಡೆಯರು ಆಗಿದ್ದರು. ಇಲ್ಲಿಯ ಒಂದು ಶಾಸನದಲ್ಲಿ ‘ಸುಂಕದ ಹೆಗ್ಗಡೆ’ ಎಂದೇ ಉಲ್ಲೇಖ ಬಂದಿದೆ.[೭೩] ಆದರೆ ಇವನ ಹೆಸರು ಅಳಿಸಿ ಹೋಗಿದೆ. ಇದರಿಂದ ಹೆಗ್ಗಡೆಗಳನ್ನು, ಸುಂಕದ

ಹೆಗ್ಗಡೆಗಳು ಎಂದು ನಾಗಯ್ಯನವರು ಭಾವಿಸಿರಬೇಕು. ಇವನು ತನಗೆ ಬಂದ ಸುಂಕದಲ್ಲಿ ಕಲಿದೇವರ ನಂದಾದೀವಿಗೆ ತಿಂಗಳಿಗೆ ಒಂದು ಎಲೆಯ ಹೇರನ್ನು ದಾನ ನೀಡಿದನೆಂದು ತಿಳಿದುಬರುತ್ತದೆ.

ಸಣ್ಣಘಟಕ ಹಳ್ಳಿ(ಉಪವಿಭಾಗ) : ಹಳ್ಳಿಯೂ ಸಹ ಆಡಳಿತ ಉಪವಿಭಾಗಗಳಲ್ಲಿ ಒಂದು ಸಣ್ಣ ಘಟಕವಾಗಿತ್ತು. ಆಡಳಿತದ (ತೀರಾ) ಚಿಕ್ಕ ಘಟಕವೆನ್ನಬಹುದು. ಹಿಂದೆ ಹೇಳಿದ ಹಾಗೆ ಅಗ್ರಹಾರ, ಪಟ್ಟಣಗಳು ಹೆಚ್ಚಾಗಿ ಉಪವಿಭಾಗದ ಮುಖ್ಯಸ್ಥಳಗಳಾಗಿರುತ್ತಿದ್ದವು. ಇವುಗಳಿಗೆ ಆಡಳಿತದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇದ್ದಿತು. ಇಂತಹ ಘಟಕಗಳಾದ ಬಹುಪಾಲು ಹಳ್ಳಿಗಳೇ ಆಡಳಿತದ ಸಣ್ಣ ಘಟಕಗಳು. ಹಳ್ಳಿಗಳು, ಯುದ್ಧಗಳಂತಹ ಮತ್ತು ಅನಿವಾರ್ಯ ಸಮಯದಲ್ಲಿ ಅಗತ್ಯಕ್ಕನುಗುಣವಾಗಿ ಸಹಾಯ ಮಾಡುತ್ತಿದ್ದವು. ಯಾವುದೇ ಒಂದು ಊರು ಅಥವಾ ಹಳ್ಳಿ, ಪಟ್ಟಣ ಅಥವಾ ಗ್ರಾಮಗಳೆನಿಸಿಕೊಳ್ಳಬೇಕಾದರೆ, ಅದು ಯಾವ ಯಾವ ಅನುಕೂಲತೆಗಳನ್ನು ಸೌಲಭ್ಯಗಳನ್ನು ಒಳಗೊಂಡಿರಬೇಕು ಎಂಬುದನ್ನು ಯಾವುದೇ ಶಾಸನವಾಗಲಿ, ಕಾವ್ಯಗಳಾಗಲಿ ತಿಳಿಸುವುದಿಲ್ಲ. ಮನುಷ್ಯನು ಸಂಘಜೀವಿಯಾಗಿ ಒಂದೆಡೆ ನೆಲೆನಿಂತ ಸ್ಥಳಗಳೇ, ಮುಂದೆ ಹಳ್ಳಿಗಳಾಗಿ, ನಗರಗಳಾಗಿ ಬೆಳೆದಿರಬೇಕು. ಜನವಸತಿ ಹೆಚ್ಚಿದಂತೆ, ಜನರ ಅವಶ್ಯಕತೆಗಳಿಗನುಗುಣವಾಗಿ, ಹಳ್ಳಿಗಳು ವಿಸ್ತಾರಗೊಂಡು, ಅನೇಕ ಕೇರಿ, ಕಟ್ಟೆ, ಮಠ, ದೇವಾಲಯಗಳು, ಬಸದಿಗಳು, ಮಸೀದಿಗಳನ್ನು ಹೊಂದಿ ಬೆಳೆದಿರಬೇಕು. ಒಂದು ಊರನ್ನು ಮತ್ತೊಂದು ಊರಿನಿಂದ ಪ್ರತ್ಯೇಕಗೊಳಿಸಲು ಅಲ್ಲಿನ ಪ್ರಾಕೃತಿಕ ವ್ಯವಸ್ಥೆಯೊಂದಿಗೆ, ಗ್ರಾಮನಾಮಗಳು ಸಹಾಯಕವಾಗಿವೆ. ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖ ಆರ್ಥಿಕ ಮೂಲಗಳಾದ ಹಳ್ಳಿಗಳ ವರಮಾನ ಮತ್ತು ಜನಜೀವನದ ಚಿತ್ರಣಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.

ಇಲ್ಲಿಯ ಶಾಸನವೊಂದರಲ್ಲಿ 'ಬಾಗಳಿ ಮೊದಲಾಗಿ, ಹನ್ನೆರಡು ಹಳ್ಳಿಯಲು ಹೊರಗಣಿಂ ಬಂದು ಮಾರಿ' ಎಂದು ಉಲ್ಲೇಖವಾದರೆ[೭೬], ಲೋಗೇಶ್ವರ ಪೊಲದ ಚತುರಘಾಟ ಸೀಮೆಯಿಂದದೊಳಗುಳ್ಳ, ಮೂಡಣ ಕೋಡಿಯಂ, ಪಂಕಲೇರುದುರದಿಂ, ಪಡುವ ಬರೆಕರ್ಗ್ಗಲ್ಲಿಂ, ಕುದುರೆಗಲ್ಲಿಂದ, ವಡ್ಡಗಲ್ಲಿಂ ಎಂದು ಬರುತ್ತದೆ.[೭೭] ಇದು ಭೂಮಿಯ ಗಡಿಯನ್ನು ತಿಳಿಸುತ್ತದೆ. ಈ ಶಾಸನದಲ್ಲಿ[೭೮] ಭೂಮಿಯ ಸೀಮೆಯರಸಿಕೆರೆಯ ಬಡಗಣ, ಜವಲಗೆರೆಯಲ್ಲಿಂದ ಬಡಗಲು, ನೀರುಗುಂದದ ಹೆದ್ದಾರಿಯಿಂ ಎಂದು ಕೆಲವೊಂದು ಹಳ್ಳಿಗಳ ಸೀಮಾ ನಿರ್ದೇಶನ ಮತ್ತು ಆಯಾ ದಿಕ್ಕುಗಳ ಕಡೆಗೆ ಗುರುತಿಸಲಾಗಿದೆ.

ಇನ್ನು ಕೆಲವು ಶಾಸನಗಳಲ್ಲಿ ಭೂಮಿದಾನಗಳ ಪ್ರಸಂಗದಲ್ಲಿ ದಾನನೀಡಿದ ಭೂಮಿಯ ಗಡಿಯಲ್ಲಿರುತ್ತಿದ್ದ, ಆಯಾಕೆರೆ, ಹಳ್ಳನದಿ, ತೋಟ, ತೀರ್ಥ, ದಾರಿ ಮೊದಲಾದವುಗಳನ್ನು ಸೀಮೆಯಗಡಿಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.

ಈ ಶಾಸನಗಳಲ್ಲಿ ಭೂಮಿಯ ಸೀಮೆ, ಅರಸಿಕೆರೆಯ ಕೆರೆಯ ಬಡಗಣ, ಜವಲಗೆರೆಯ ಕೊಳ ೧, ಆ ಕೆರೆಯ ಕೆಳಗೆ ಕಿಸುಮತ್ತರು ೧, ಅಲ್ಲಿಂದ ಬಡಗಲು ಮಾಸೆಟ್ಟಿಯ ಕೆರೆಯ ಪಡುವಣ, ಬಾಯ್ಕಲ್ಲು, ಬಳಿವಿಡಿದು ಹುಣಿಸೆಯಬಾಯ್ಕಲ್ಲಿಂ, ತೆಂಕಲು ಗದ್ದೆ ಮತ್ತರು ೨, ಹೊಸಗೆಯ ಬಾಯ್ಕಲ್ಲು, (ಇಲ್ಲಿ ಬಾಯ್ಕಲ್ಲು ಎನ್ನುವುದಕ್ಕೆ ಬಾಂದುಕಲ್ಲು ಎಂದು ಕರೆಯಬಹುದು. ಬಾಂದುಕಲ್ಲು ಎಂದರೆ ಭೂಮಿಯನ್ನು, ಭೂಮಿಯ ಗಡಿಯನ್ನು ಗುರುತಿಸಲು, ನಿಲ್ಲಿಸಿರುವ ಕಲ್ಲು, ಗಡಿಕಲ್ಲು ಎಂದಾಗುತ್ತದೆ.) ಮೂಡಲಗದ್ದೆ-೬೦೦ ಕಮ್ಮ ಹೊಸಗೆರೆಯ ಕೆಳಗೆ(ರಾ)ಯ್ವಳ್ಳದಿಂ, ಮೂಲಗದ್ದೆ-೩೦೦ ಕಮ್ಮ, ಆಕೆರೆಯ ಮೂಡಲ-ಹೆದ್ದಾರಿಯಂಪಡುವಲುಕೆಯಿ, ಮತ್ತರು-೩, ಯಿಂತೀ ಭೂಮಿಯಮ(೦) ನೂರೊಳಗೆ ಹುಟ್ಟುವ' ಎಂದು ಉಲ್ಲೇಖಗಳು ಕಂಡುಬರುತ್ತದೆ. ಇದರಿಂದ ಗ್ರಾಮದ ಹೊಲವನ್ನು ದಾನ ನೀಡಿದರೆಂದು ತಿಳಿಯುತ್ತಾರೆ. ಅದರ ಮೇರೆ ಅಥವಾ ಗಡಿಗಳನ್ನು ಸಹ ಉಲ್ಲೇಖಿಸುತ್ತವೆ.

ಈ ಶಾಸನದಲ್ಲಿ[೭೯] ಮಂಡವಾಳದ ತೋಟದ, ಹೆದ್ದಾರಿ ಪಡುವಲು, ಬಡಗಲು ಹಳ್ಳ, ಮೂರೋಣಿ ತೆಂಕಲು, 'ಹುಣಿಸಿಯ ಕಾಳನ ಮಂತಗನ ಹುರಿಗಟ್ಟಯ xxxxಗಚ್ಚು', ೧೫೦ ಕಮ್ಮ, ಭಂಡಗಟ್ಟದ ಹಳ್ಳದಿಂ, ಆರು ಕಮ್ಮ, ಕುರುಕೆಯ ಬಳಿ ಕೆಂಗಾಡು ಎಂದು ಉಲ್ಲೇಖಗಳು ಬರುತ್ತದೆ. ಈ ಶಾಸನದ ಕೊನೆಯ ಭಾಗ ತ್ರುಟಿತವಾಗಿರುವುದರಿಂದ ಸ್ಪಷ್ಟವಾಗಿ ಹೆಚ್ಚಿನ ಮಾಹಿತಿ ಸಿಗುವುದಿಲ್ಲ.

ಇದರಲ್ಲಿ xxxx ಹೊಸ ಊರ ಹಳ್ಳದ ತೆಂಕಣ xx..... ಹೀಗೆ ಉಲ್ಲೇಖ ಬರುತ್ತದೆ.[೮೦] ಇದು ಗ್ರಾಮದ ಅಥವಾ ಊರಿನ ಗಡಿಭಾಗದ ಕೊನೆ ಅಥವಾ ಉತ್ತರ ದಿಕ್ಕಿನ ಭಾಗದ ಹಳ್ಳ ಎಂದಾಗುತ್ತದೆ. ಹೀಗೆ ಕೇರಿ, ಗೇರಿ, ಹಳ್ಳ, ಕಟ್ಟೆ, ಓಣಿ, ಹೆದ್ದಾರಿಗಳನ್ನು ಉಲ್ಲೇಖಿಸುವ ಶಾಸನಗಳು ಕಂಡುಬರುವುದರಿಂದ, ಬಾಗಳಿಯೂ ಒಂದು ಪಟ್ಟಣವಾಗಿತ್ತೆಂದು ತಿಳಿದುಬರುತ್ತದೆ. ಇನ್ನೂ ಸಾಮಾನ್ಯವಾಗಿ ಅಲ್ಲಿವಾಸಿಸುವ ಜನವರ್ಗಗಳನ್ನಾಧರಿಸಿ ಕೆಲವು ಗದ್ದೆಗಳು ಕೇರಿಗಳು ಕಂಡುಬಂದಿದೆ. ಊರೊಡೆಯರೆನಿಸಿದ ಮಹಾಜನರು, (ಬ್ರಾಹ್ಮಣರು) ವಾಸಿಸುವ ಕೇರಿಗಳನ್ನು ಊರೊಡೆಯರ ಕೇರಿಗಳೆನಿಸಿದ್ದವು. ಅಗ್ರಹಾರದ ಸಮಸ್ತ ಧಾನ ಧರ್ಮಗಳನ್ನು ಕಾಪಾಡುತ್ತಿದ್ದರಿಂದ ಅವರು ವಾಸಿಸುವ ಕೇರಿಗಳನ್ನು 'ಕಾವರಗೇರಿ'ಗಳೆಂದು ಕರೆಯುತ್ತಿದ್ದರು. ಆದರೆ ಇಲ್ಲಿಯ ಶಾಸನಗಳಲ್ಲಿ 'ಕೇರಿ' ಎಂದು ಯಾವ ಶಾಸನದಲ್ಲಿಯೂ ಉಲ್ಲೇಖಬರುವುದಿಲ್ಲ. ಆದರೆ ಗೇರಿ>ಗೇರೆ ಎಂದು ಉಲ್ಲೇಖವಾಗಿವೆ. ಇದೇ ಪ್ರಾಯಶಃ 'ಕೇರಿ' ಆಗಿರಬೇಕು. ಈ ಶಾಸನದಲ್ಲಿ 'ಕರ್ಮಣ್ಯಗೇರಿಯ ಎರೆಯ ಹಸಲು' ಎಂದು ಬಂದಿದೆ. ಇದು ಬ್ರಾಹ್ಮಣರ ಕೇರಿಯ ಹೆಸರಾಗಿರಬೇಕು. ಈ ಶಾಸನದಲ್ಲಿ 'ಬಿಟ್ಟಳ್ಸಿಜೆಲಗೇರಿ' ಎಂದು ಉಲ್ಲೇಖವಾಗಿದೆ.[೮೧] ಇದನ್ನು ಬಿಡಿಸಿದಾಗ 'ಅಳ್ಸೀರಿಲಗೇರಿ' ಎಂದಾಗುತ್ತದೆ. ಆದರೆ ಅರ್ಥಹೊಂದಾಣಿಕೆ ಸರಿಯಾಗುವುದಿಲ್ಲ. ಆದ್ದರಿಂದ ಇಲ್ಲಿ ಬರುವ ಯಾವುದೇ

ಶಾಸನದಲ್ಲಿ ಕೇರಿ ಎಂದು ವ್ಯಕ್ತವಾಗುವುದಿಲ್ಲ. ಮೇಲೆ ಹೇಳಿದ ಹಾಗೆ ವ್ಯಕ್ತಿಯ ಹೆಸರುಗಳಿಂದ ಕೆಲವು ಕೆರೆ, ಗದ್ದೆಗಳನ್ನು ಉಲ್ಲೇಖಿಸಲಾಗಿದೆ. ಮಾಚಿಸೆಟ್ಟಿಯ ಕೆರೆ, ದಾಸೆಯನಾಯಕರ ಕೆರೆ ಮುಂತಾದವು ಗಳೊಂದಿಗೆ, ಯೀರಣಗದ್ದೆ, ನಾಗದೇವನಗದ್ದೆ ಎಂದು ಉಲ್ಲೇಖವಾಗಿದೆ. ಇಂತಹ ಕೆರೆ, ಗದ್ದೆಗಳನ್ನು ದೇವರಿಗೆ ದಾನ ನೀಡಿದ್ದರೆಂದು ತಿಳಿದುಬರುತ್ತದೆ. ಇದರಿಂದ ಅಂದಿನ ಜನರು ಭಕ್ತಿನಿಷ್ಠೆಯ ಪ್ರತೀಕಗಳಾಗಿದ್ದರು ಎಂದರೆ ತಪ್ಪಾಗಲಾರದು.

ಇನ್ನೂ ಕೆಲವು ಗ್ರಾಮಗಳಲ್ಲಿ ಊರಹೊರಗೆ ಆಶ್ರಯ ಮತ್ತು ವಿಹಾರಕ್ಕಾಗಿ ಉದ್ಯಾನವನಗಳಿದ್ದುದು ತಿಳಿಯುತ್ತದೆ. ಬಾಗಳಿಯ ಶಾಸನದಲ್ಲಿ[೮೨] 'ತೊದಳ್ಮಾಡುವರಾಜಕೀರತತಿ ಬಾಗಳಿಯೊಪ್ಪುವ ನಂದನಂಗ ಳೊಳ್' ಎಂದು ಬರುತ್ತದೆ. ಅಂದರೆ ಬಾಗಳಿ ನೋಡಲ್ಕೆ ಧನವನವನೀತದೊಳ್ ' ಎಂಬಂತೆ ವನದೊಳ್ ಆಡುವ ಪಕ್ಷಿಗಳಂತೆ, ಸುಂದರ ಪ್ರಕೃತಿಯೊಂದಿಗೆ ಶೋಭಿಸುತ್ತಿತ್ತು. ಇಲ್ಲಿಯ ಇನ್ನೊಂದು ಶಾಸನದಲ್ಲಿ ಬಾಗಳಿಯನ್ನು

ಬಾಗುಳಿಯೊಪ್ಪುವದೀ ಧರಿತ್ರಿಯೊಳ್
ತೀಡುವ ತಂಬಲರ್ಬಳೆಸಿ, ತದ್ವನ
ಲಕ್ಷ್ಮಿಯ ಮುಂದೆ ಮಂಗಳಂಬಾಡುವ ತುಂಬಿ
ಕೋಡುವ ಪುಳಿಲು ನಡೆದಾಡುವ ಹಂಸೆ
ರಾಗದಿಂದಾಡುವ ಸೋಗೆ ಬಾದಿನೊಳವೋದಿನೊಳಂ
ವಿಬುದರ್ಕ್ಕಳಂ ತೊದಳ್ಮಾಡುವ ರಾಜಕೀರತತಿ
ಬಾಗಳಿಯೊಪ್ಪುವ ನಂದನಂಗಳೊಳ್ ಎಂಬ ವರ್ಣನೆ ಬರುತ್ತದೆ.[೮೩]

ಮೇಲಿನ ಶಾಸನವು ಬಾಗಳಿಯನ್ನು (ಮನನೆನೆ) ಅಲಂಕಾರವಾಗಿ ಬಣ್ಣಿಸಿದರೆ, ಇದು ಅದರ ಊರು, ಕೇರಿ, ಬೀದಿ, ಗುಡಿಗಳು ಭಕ್ತರಿಂದ ಶೋಭಿಸುತ್ತಿತ್ತೆಂದು ವರ್ಣಿಸುತ್ತದೆ.

'ಮನೆವನೆ ಶಂಕರಾಚ್ಯುತಬುಧಾತಿಥಿಪೂಜೆಯಿನಗ್ನಿ
ಹೋತ್ರದಿಂದನುಪಮವೇದನಾದ ಮಠಸತ್ರಸಭಾ
ಶಿವವಿಷ್ಣುವಾಗ್ನಿಕೇತನ ತತಿಕೇರಿಗೇರಿ ಜನದಿಂ
ಸಲೆ ತಿಂತಿಣಿಬೀದಿವೀದಿ, ತಾನೆನಿಸುವ
ದಾಗಳುಂ'ನೆಗಳ್ದ ಬಾಗಳಿ ವಿಶ್ವಮಹೀತಳಾಗ್ರದೋಳ್'
ಎಂದು ಬಣ್ಣಿಸುತ್ತದೆ. ಇದೇ ಭಾಗದಲ್ಲಿ ಶಾಸನದ ಮುಂದುವರಿದ
ಜಳನಿಧಿಯಂಪಳಂಚಲೆವನೇಕತಟಾಕದಿನಬ್ಜಷಣ್ಡದಿಂ
ಬೆಳದೆಱಗಿರ್ದ್ದಕೆಯ್ವೊಲದಿನುನ್ನತಚಂಪಕಚೋಚಮೋಚ
ಪಾಟಾಳಪನಸಾಂಬ್ರಪೂಗವನನಾಗಲತಾಳಿಯಿನಗ್ರಹಾರ
ಮಂಗಳಮಣಿದರ್ಪ್ಪಣಂ ನೆಗಳ್ದ ಬಾಗುಳಿಯೊಪ್ಪುವದೀಧರಿತ್ರಿಯೊಳ್[೮೪]

ಎಂದು ಬಾಗಳಿಯನ್ನು ಕಾವ್ಯಾತ್ಮಕವಾಗಿ ಉಲ್ಲೇಖಿಸಿರುವುದನ್ನು ನೋಡಲಾಗಿದೆ. ಹೀಗೆ ಬಾಗಳಿ ಬೆಳೆದುನಿಂತ ವನಗಳಿಂದ, ಬಳುಕುವ ಲತಾಂಗಿಯಂತೆ(ಬಳ್ಳಿಯ ಹಾಗೆ) ತಟಾಕಗಳಿಂದ, ಅಗ್ರಹಾರವಾಗಿ ಮೊದಲಾದವುಗಳಿಂದ ಭೂಮಿಯ ಮೇಲೆ ಆಡಳಿತ ಚಿಕ್ಕ ಘಟಕವಾಗಿ ಕಂಗೊಳಿಸುತ್ತಿತ್ತು. ಇನ್ನೊಂದು ಶಾಸನದಲ್ಲಿಯೂ ಕೂಡ ಇದೇ ಬಾಗಳಿಯನ್ನು ವಣಿಸುತ್ತದೆ.[೮೫]

ಅಡಿಟಿಪ್ಪಣಿಗಳು

೧. ಬ.ಜಿ.ಶಾ.ಸಂ. ಬಾಗಳಿ ಶಾಸನ-೯೭ ಕ್ರಿ.ಶ.೧೦೧೮

೨. ,, ಮಲ್ಲಯ್ಯನಗುಡ್ಡ (ಸಿರುಗುಪ್ಪ ತಾ) ಶಾಸನ-೫೯ ಕ್ರಿ.ಶ.೧೦೧೭

೩. ,, ಬಾಗಳಿ ಶಾಸನ-೯೭ ಕ್ರಿ.ಶ.೧೦೧೮

೪. ,, ಬಾಗಳಿ ಶಾಸನ-೧೩೬ ಕ್ರಿ.ಶ.೧೦೧೮

೫. ,, ಬಾಗಳಿ ಶಾಸನ-೧೩೬ ಕ್ರಿ.ಶ.೧೦೧೮

೬. ,, ತೆಲಗಿ ಶಾಸನ-೪೦ ಕ್ರಿ.ಶ.೧೦೩೦

೭. ,, ತಲವಾಗಿಲು ಶಾಸನ-೨೧೭ ಕ್ರಿ.ಶ.೧೦೩೪

೮. ,, ನೀಲಗುಂದ ಶಾಸನ-೮೯ ಕ್ರಿ.ಶ.೧೦೮೭

೯. ,, ಬಾಗಳಿ ಶಾಸನ-೧೦೦ ಕ್ರಿ.ಶ.೧೦೭೯

೧೦. ,, ಕೋಗಳಿ ಶಾಸನ-೧೭ ಕ್ರಿ.ಶ.೯೯೨

೧೧. ,, ಬಾಗಳಿ ಶಾಸನ-೧೩೦ ಕ್ರಿ.ಶ.೯೮೭

೧೨. ,, ಬಾಗಳಿ ಶಾಸನ-೯೪ ಕ್ರಿ.ಶ.೯೫೬

೧೩. ,, ಬಾಗಳಿ ಶಾಸನ-೯೯ ಕ್ರಿ.ಶ.೧೦೩೫

೧೪. ಕ.ವಿ.ಶಾ.ಸಂ ಬಾಗಳಿ - ೧೨೪ ಕ್ರಿ.ಶ.೯೪೪-೪೫

೧೫. ,, ೯೪ ಕ್ರಿ.ಶ.೯೫೬

೧೬. ,, ೯೪ ಕ್ರಿ.ಶ.೯೫೬

೧೭ . ,, ೧೩೦ ಕ್ರಿ.ಶ.೯೮೭

೧೮. ,, ೯೭ ಕ್ರಿ.ಶ.೧೦೧೮

೧೯. ,, ತೆಲಗಿ - ೪೦ ಕ್ರಿ.ಶ.೧೦೩೦

೨೦. ,, ತಲವಾಗಿಲು - ೨೧೭ ಕ್ರಿ.ಶ.೧೦೩೪

೨೧. ,, ಬಾಗಳಿ - ೧೩೬ -

೨೨. ,, ೧೩೨ ಕ್ರಿ.ಶ.೧೦೬೮

೨೩. ,, ೧೩೧ -

೨೪. ,, ೧೦೦ ಕ್ರಿ.ಶ.೧೦೭೯

೨೫. ,, ೧೮೦ ಕ್ರಿ.ಶ.೧೧೦೮

೨೬. ,,

೨೭. ,, ೧೨೦ ಕ್ರಿ.ಶ.೧೫೫೦

೨೮. ,, ೧೦೨ -

೨೯. ,, ಹೂವಿನ ಹಡಗಲಿ -೮೫-

೩೦. ,, ಸೋಗಿ - ೧೦೧

೩೧. ,, ನೀಲಗುಂದ - ೭೬

೩೨. ,, ಬಾಗಳಿ - ೧೦೩

೩೩. ,, ೧೮೦

೩೪. ,, ೧೦೭

೩೫. ,, ೧೦೭

೩೬. ,, ಮೊರಗೇರಿ - ೨೪

೩೭. ,, ಬಾಗಳಿ - ೧೭೯

೩೮. ,, ೧೦೮

೩೯. ,, ೧೩೩

೪೦. ,, ೯೭

೪೧. ,, ೧೩೬

೪೨. ,, ಕಂಚಿಕೇರಿ - ೨೮

೪೩. ,, ಮಾನ್ಯರಮಸಲವಾಡ - ೬೦

೪೪. ,, ಅಂಬಳಿ - ೫

೪೫. ,, ಕೊಟ್ಟೆಕಲ್ಲು - ೮೧ ಕ್ರಿ.ಶ.೧೦೪೮

೪೬. ,, ಹೊಳಲು - ೩೬

೪೭. ,, ಬಾಗಳಿ - ೧೧೪ ಕ್ರಿ.ಶ.೧೦೪೮

೪೮. ,, ೧೨೨ ಕ್ರಿ.ಶ.೧೦೭೯

೪೯. ,, ೧೮೦ ಕ್ರಿ.ಶ.೧೧೦೮

೫೦. ,, ೧೮೧ ಕ್ರಿ.ಶ.೧೧೧೦

೫೧. ,, ೧೧೮ -

೫೨. ,, ೧೧೭ ಕ್ರಿ.ಶ.೧೨೧೨

೫೩. ,, ೧೩ ಕ್ರಿ.ಶ.೧೨೨೧

೫೪. ,, ೯೯ -

೫೫. ಚಾಲುಕ್ಯರ ಇತಿಹಾಸ(ಕರ್ನಾಟಕ ಇತಿಹಾಸ ಮಾಲಿಕೆ) ಎ.ಎನ್ .ನಂಜುಂಡಸ್ವಾಮಿ ಪುಟ.೩೦

೫೬. ಕ.ವಿ.ಶಾ.ಸಂ ಬಾಗಳಿ ಶಾಸನ ೧೮೦ ಕ್ರಿ.ಶ.೧೧೦೮

೫೭. ,, ೧೮೧ ಕ್ರಿ.ಶ.೧೧೧೦

೫೮. ,, ೧೮೧ ಕ್ರಿ.ಶ.೧೧೧೦

೫೯. ,, ೧೫೫ ಕ್ರಿ.ಶ.೧೧ನೇ ಶತಮಾನ

೬೦. ,, ಹನಸಿ ಶಾಸನ ೧ ಕ್ರಿ.ಶ.೧೧ನೇ ಶತಮಾನ

೬೧. ,, ಬಾಗಳಿ ಶಾಸನ ೧೦೫ ಕ್ರಿ.ಶ.೧೧೦೮

೬೨. ,, ೧೨೪

೬೩. ,, ೯೯ ಕ್ರಿ.ಶ.೧೦೩೫

೬೪. ,, ೧೦೦ ಕ್ರಿ.ಶ.೧೦೭೯

೬೫. ,, ೧೩೬ ಕ್ರಿ.ಶ.೧೦೧೮

೬೬. ,, ೯೭

೬೭. ,, ೧೩೩

೬೮. ,, ೧೩೫

೬೯. ,, ೧೮೨ ಕ್ರಿ.ಶ.೧೨೯೧

೭೦. ,, ೧೮೦

೭೧. ,, ೧೭೯

೭೨. ,, ೧೦೩

೭೩. ,, ೧೧೨

೭೪. ,, ೯೯

೭೫. ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ಇತಿಹಾಸ, ಜೆ.ಎಂ.ನಾಗಯ್ಯ ಪು.೬೪

೭೬. ಕ.ವಿ.ಶಾ.ಸಂ ಬಾಗಳಿ ಶಾಸನ

೭೭. ,, ೧೦೪

೭೮. ,, ೯೯

೭೯. ,, ೧೦೦

೮೦. ,, ೧೨೯

೮೧. ,, ೧೨೩

೮೨. ,, ೧೧೦

೮೩. ,, ೧೧೨

೮೪. ,, ೧೪೪

೮೫. ,, ೧೪೪

◆◆

ಅಧ್ಯಾಯ ೪

ಶಾಸನಗಳು

೧. ದಾನಶಾಸನಗಳು
  ೧. ಶೈವ ಶಾಸನಗಳು
  ೨. ವೈಷ್ಣವ ಶಾಸನಗಳು
  ೩. ಜೈನಶಾಸನಗಳು

೨ ಆತ್ಮಬಲಿಯ ಶಾಸನಗಳು
  ೧. ಧಾರ್ಮಿಕ ಆತ್ಮಬಲಿ
  ೨. ವೀರಗಲ್ಲು
  ೩. ಶಿರಬಲಿ

೩ ಲೌಕಿಕ ಆತ್ಮಬಲಿ
  ೧. ಮಹಾಸತಿಕಲ್ಲು
  ೨. ನಿಶಧಿಕಲ್ಲು

೪ ಶಾಸನ ಸಾಹಿತ್ಯ
  ೧. ಶಾಸನ ಕವಿಗಳು
  ೨. ಶಾಸನ ಲಿಪಿವೈವಿಧ್ಯ
  ೩. ಅಲಂಕಾರಿಕ ಅಂಶಗಳು

ಕರ್ನಾಟಕದಲ್ಲಿ ಸಿಗುವ ಶಾಸನಗಳು ಭಾರತದ ಬೇರಾವ ಪ್ರಾಂತದಲ್ಲೂ ಸಿಗುವುದಿಲ್ಲ ಎಂದು ಹೇಳಬಹುದು. ಇಲ್ಲಿ ಶಾಸನಗಳಿರದ ಹಳ್ಳಿಗಳಿಲ್ಲ. ಅವುಗಳನ್ನು ಅನಾದರಿಸಿದ ಹಳ್ಳಿಗಳಿಲ್ಲ. ಇಂತಹ ಸಾವಿರಾರು ಹಳ್ಳಿಗಳಲ್ಲಿ ಒಂದಾದ ಬಳ್ಳಾರಿ ಜಿಲ್ಲೆಯ ಬಾಗಳಿಯೂ ಒಂದು ಹಳ್ಳಿ. ಈ ಹಳ್ಳಿಯಲ್ಲಿ ನೂರಾರು ಶಾಸನಗಳು ಅನಾದರಕ್ಕೆ ಒಳಗಾಗಿವೆ. ಇದಕ್ಕಿಂತ ಮೊದಲು ಬಳ್ಳಾರಿ ಜಿಲ್ಲೆಯ ಅಶೋಕನ ಶಾಸನಗಳು ಕಂಡುಬಂದಿವೆ. ಅವು ಮೂರನೇ ಶತಮಾನದಿಂದ ನಮ್ಮಗೆ ಇತಿಹಾಸವನ್ನು ಒದಗಿಸುತ್ತದೆ. ಅಂದರೆ ಅಶೋಕನಿಂದ ಆರಂಭಗೊಂಡು ವಿಜಯನಗರದ ಕೊನೆಯವರೆಗೆ ಸುಮಾರು ಹದಿನೆಂಟು ಶತಕಗಳ ಸುದೀರ್ಘಕಾಲಾವಧಿಯಲ್ಲಿ ಈ ಜಿಲ್ಲೆಯನ್ನು ಆಳಿದ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ಯಾದವರು, ಪಾಳೆಯಗಾರರು, ಸುಲ್ತಾನರ, ಅರಸರುಗಳ ಆಡಳಿತವನ್ನು, ರಾಜಾವಳಿಯನ್ನು, ವಂಶಾವಳಿಯನ್ನು ಶಾಸನಗಳು ಉಲ್ಲೇಖಿಸುತ್ತವೆ. ಇವರು ತಮ್ಮ ತಮ್ಮ ಆಳ್ವಿಕೆಯಲ್ಲಿ ಸ್ವಯಂ ಪ್ರೇರಣೆಯಿಂದ ಕೊರೆಯಿಸಿದ, ಬರೆಸಿದ ಅನೇಕ ಶಾಸನಗಳು ಕಂಡುಬಂದಿವೆ. ಇವಲ್ಲದೆ ಮಂಡಲಾಧಿಕಾರಿಗಳು, ನಾಯಕರು, ಪ್ರತಿಷ್ಠಿತ ವ್ಯಕ್ತಿಗಳು ಬರೆಯಿಸಿದ, ದೇವತಾ ಪ್ರತಿಷ್ಠೆ, ಧಾರ್ಮಿಕ ದತ್ತಿ ದಾನಗಳ ಸಂಗತಿಗಳನ್ನು ವಿವರಿಸುವ ಶಾಸನಗಳು ಕಂಡುಬರುತ್ತವೆ.

ಬಳ್ಳಾರಿ ಜಿಲ್ಲೆಯಲ್ಲಿ ಮೌರ್ಯರಿಂದ ಶಾಸನಗಳು ಪ್ರಾರಂಭವಾದರೆ ಬಾಗಳಿಯಲ್ಲಿ ರಾಷ್ಟ್ರಕೂಟರಿಂದ ಶಾಸನಗಳು ಪ್ರಾರಂಭವಾಗಿವೆ. ನಂತರ ಕಲ್ಯಾಣ ಚಾಲುಕ್ಯರು, ನೊಳಂಬರು, ಪಾಂಡ್ಯರು, ಹೊಯ್ಸಳರು, ಸೇವುಣರು, ಕಲಚೂರಿಗಳು, ವಿಜಯನಗರದ ಅರಸರುಗಳು ಮತ್ತು ಪಾಳೆಯಗಾರರ ಶಾಸನಗಳು ಕಂಡುಬರುತ್ತವೆ. ಬಾಗಳಿಯ ಕೆಲವು ಶಾಸನಗಳಲ್ಲಿ ಮಹಾಬಲಿಯ ವಂಶಿಯರೆಂದು ಉಲ್ಲೇಖಗಳು ಬಂದಿವೆ. ಈ ಎಲ್ಲಾ ಶಾಸನಗಳಲ್ಲಿ ಮೊದಲು ಮಂಗಲೋಕ್ತಿ, ಪದ್ಯದಲ್ಲಿದ್ದು ಶಿವ, ವಿಷ್ಣು ಇಲ್ಲವೆ ಜಿನಾದಿ ದೇವತಾ ಉಲ್ಲೇಖಗಳಿರುತ್ತವೆ, ಬಳಿಕ ರಾಜ ಪ್ರಶಂಸೆ, ಬಿರುದಾವಳಿಗಳು, ಆಳುತ್ತಿರುವ ರಾಜನ ಮತ್ತು ರಾಜವಂಶದ ವರ್ಣನೆ, ದೇಶ ಪ್ರಶಂಸೆ ಕುಂತಲದ(ಕರ್ನಾಟಕ) ವಿಭಾಗಗಳಾದ ನಾಡು, ಕಂಪಣ, ಗ್ರಾಮಗಳ ವರ್ಣನೆ, ಮುಂದೆ ದಾತೃವಿನ, ದತ್ತಿ ಪಡೆದವನ ಕುಲ, ಗೋತ್ರಗಳ ವಿವರಣೆ, ದತ್ತಿಯ ನಿಶ್ಚಿತ ಕಾಲ, ದತ್ತಭೂಮಿಯ ಸೀಮಾ ವಿವರ, ಕೊನೆಗೆ ದಾನದಿಂದಾಗುವ ಪುಣ್ಯಫಲ, ದತ್ತಾಪಹಾರ ದಿಂದಾಗುವ ಅಪಾಯಗಳ ಉಲ್ಲೇಖಗಳು ಬರುತ್ತವೆ. ನೂರರಲ್ಲಿ ತೊಂಬತ್ತೈದರಷ್ಟು(ಬಹುಪಾಲು) ಶಾಸನಗಳು ದಾನಶಾಸನಗಳೆ ಆಗಿರುವುದರಿಂದ ಅವುಗಳ ಸ್ಥೂಲ ವಿವರವನ್ನು ಮೇಲಿನ ವಿವೇಚನೆಯಿಂದ ತಿಳಿಯಲಾಗಿದೆ.

ಶಾಸನಗಳನ್ನು ಅಭ್ಯಾಸದ ದೃಷ್ಟಿಯಿಂದ ಆರ್.ಎಸ್ .ಪಂಚಮುಖಿ ಹೇಳುವಂತೆ

೧. ಕ್ರಿ.ಪೂ.೩ನೇ ಶತಮಾನದಿಂದ ಕ್ರಿ.ಶ.೪ನೇ ಶತಮಾನದವರೆಗಿನ ಶಾಸನಗಳು ಒಂದನೆ ಕಾಲ ಘಟ್ಟ.

೨. ಕ್ರಿ.ಪೂ. ೫ನೇ ಶತಮಾನದಿಂದ ಕ್ರಿ.ಶ.೧೦ನೇ ಶತಮಾನದವರೆಗಿನ ಶಾಸನಗಳು ಎರಡನೆ ಕಾಲ ಘಟ್ಟ.

೩. ಕ್ರಿ.ಪೂ.೧೧ನೇ ಶತಮಾನದಿಂದ ಕ್ರಿ.ಶ.೧೪ನೇ ಶತಮಾನದವರೆಗಿನ ಶಾಸನಗಳು ಮೂರನೆಯ ಘಟ್ಟ.

೪. ಕ್ರಿ.ಶ.೧೫ನೇ ಶತಮಾನದಿಂದ ಕ್ರಿ.ಪೂ.೧೮-೧೯ನೇ ಶತಮಾನದವರೆಗೆ ನಾಲ್ಕನೆ ಕಾಲಘಟ್ಟ.

ಇವುಗಳನ್ನು ಕಾಲಬೇಧದಿಂದ, ದೇಶಬೇಧದಿಂದ, ರಾಜಮನೆತನಗಳ ಬೇಧದಿಂದ, ಭಾಷಾ ಬೇಧದಿಂದ, ಲಿಪಿ ಬೇಧಗಳಿಂದ ಈ ರೀತಿ ಗುರುತಿಸಿದ್ದಾರೆ. ಆದರೆ ಈ ಶಾಸನಗಳು ಎರಡನೆ ಘಟ್ಟದಿಂದ, ನಾಲ್ಕನೆಯ ಘಟ್ಟದವರೆಗೆ ಉಲ್ಲೇಖಿಸುತ್ತೇವೆ.

ದಾನಶಾಸನಗಳು

ಶಾಸನಗಳ ಉಗಮ ದಾನ-ಧರ್ಮಗಳಲ್ಲಿ ಎನ್ನುವಂತೆ, ಈ ಶಾಸನಗಳಲ್ಲಿ ಹೆಚ್ಚಿನ ಶಾಸನಗಳು ದಾನ ಶಾಸನಗಳಾಗಿವೆ. ಒಂದು ದೃಷ್ಟಿಯಿಂದ ಶಾಸನಗಳು ಸಂಸ್ಕೃತಿಯ ಕಣಜಗಳು ಎನ್ನಬಹುದು. ನಮ್ಮ ಸಂಸ್ಕೃತಿಯಲ್ಲಿ ಧರ್ಮಕ್ಕೆ ಒಂದು ಮೌಲ್ಯವಾದ ಸ್ಥಾನವನ್ನು ಕೊಟ್ಟಿರುವುದು ಕಂಡುಬರುತ್ತದೆ. ಈ ಧರ್ಮದ ಹಿನ್ನೆಲೆಯಲ್ಲಿ ಶಾಸನಗಳು ಬೆಳಕಿಗೆ ಬಂದವು. ಇವುಗಳಲ್ಲಿ ಬರುವ ದಾನದ ವಿವರಗಳು ಹೆಚ್ಚಾಗಿ ದೇವರಿಗೆ, ದೇವಾಲಯಕ್ಕೆ ನೀಡಿದ ದಾನಗಳೆಂದು ತಿಳಿದುಬರುತ್ತದೆ. ಈ ದಾನಗಳಲ್ಲಿ ದೇವಾಲಯಗಳನ್ನು ಕಟ್ಟಿಸಿದ ಉಲ್ಲೇಖಗಳು, ಇವುಗಳ ವ್ಯವಸ್ಥೆಗಾಗಿ ಮತ್ತು ಮಠಗಳಿಗಾಗಿ, ಮಹಾವ್ಯಕ್ತಿಗಳಿಗಾಗಿ, ಇಲ್ಲವೆ ಅನ್ನಸತ್ರಾದಿ, ಧರ್ಮಕಾರ್ಯಗಳಿಗೆ ವಿದ್ಯಾಭ್ಯಾಸಕ್ಕಾಗಿ, ದಾನ-ದತ್ತಿಗಳನ್ನು ಕೊಡುವುದು ಈ ಧಾರ್ಮಿಕ ಭಾವನೆಯಿಂದಲೆ ದಾನಗಳನ್ನು ನೀಡುವುದು ಕಂಡುಬರುತ್ತದೆ. ಇಂತಹ ದಾನಗಳನ್ನು ಧಾರ್ಮಿಕ ಹಿನ್ನೆಲೆಯಿಂದ ವಿಭಾಗಿಸುವುದು ಸೂಕ್ತವೆನಿಸುತ್ತದೆ. ಇವುಗಳಲ್ಲಿ ಶೈವ ಶಾಸನಗಳು, ವೈಷ್ಣವ ಶಾಸನಗಳು, ಜೈನ ಶಾಸನಗಳೆಂದು ವರ್ಗೀಕರಿಸಿ ನೋಡಲಾಗಿದೆ.

೧. ಶೈವ ಶಾಸನಗಳು

ಇಲ್ಲಿಯ ಶಾಸನಗಳಲ್ಲಿ ಹೆಚ್ಚಾಗಿ ಶೈವ ಶಾಸನಗಳೆ ಕಂಡುಬರುತ್ತವೆ. ಧರ್ಮಗಳಲ್ಲಿ ಒಂದಾದ ಶೈವಧರ್ಮವು ಪ್ರಾಚೀನ ಕಾಲದಿಂದಲೂ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿತ್ತು. ರಾಜಮನೆತನಗಳು, ರಾಜರು, ಸಹ ಹೆಚ್ಚಾಗಿ ಶೈವ ಧರ್ಮಾವಲಂಬಿಗಳಾಗಿದ್ದರು. ಆದರೆ ವೈಷ್ಣವ ಧರ್ಮವನ್ನು ಸ್ವೀಕರಿಸಿದ್ದರು. ಇಲ್ಲಿ ಶೈವರೆಂದರೆ ಶಿವಾರಾಧಕರೆಂದೆ ಹೇಳಬಹುದು. ಈ ಶಿವೋಪಾಸನೆಯ ಇತಿಹಾಸ ವೇದಗಳಿಗಿಂತೂ ಹಿಂದಕ್ಕೆ ಹೋಗುತ್ತದೆ. ಶಿವಾರಾಧಕರಿಗೆ ಪಶುಪತಿಯೇ(ಶಿವ) ಒಡೆಯನಾಗಿರುತ್ತಾನೆ. ಶಾಸನಗಳಲ್ಲಿ

ಶಂಕರ, ಒಡೆಯ(ಪಶೂನಾಂ ಪತಿಃ) ಎಂದು ಉಲ್ಲೇಖವಾಗಿದೆ. ಕೆಲವು ಶಾಸನಗಳಲ್ಲಿ ಲಕುಲೀಶ, ಕಾಳಾಮುಖರು ಎಂದು ಉಲ್ಲೇಖ ಬಂದಿರುವುದನ್ನು ಗಮನಿಸಿದರೆ, ಇವು ಶೈವಧರ್ಮರ ಶಾಖೆಗಳಿದ್ದಂತೆ ಎಂದು ಹೇಳಬಹುದು. ಕುರುವತ್ತಿಯ ಒಂದು ಶಾಸನದಲ್ಲಿ ಲಕುಲೀಶ ಪಂಡಿತರ ಗುರು ಎಂದು ಉಲ್ಲೇಖವಾಗಿದೆ.[೨] ಹೊಳಗುಂದಿಯ ಶಾಸನದಲ್ಲಿ ಲಕುಲೀಶಪಂಥದ, ಮಲಯಾಳ ಪಂಡಿತ ಎಂದು ಬರುತ್ತದೆ.[೩] ಇದರಿಂದ ಕಾಳಾಮುಖ, ಲಕುಲೀಶ ಪಂಥವು ಈ ಭಾಗದಲ್ಲಿ ಇತ್ತು. ಕಾಳಾಮುಖರು ಈ ಭಾಗಗಳಲ್ಲಿ ಸಂಚರಿಸುತ್ತಾ ನೆಲೆಯೂರಿದ್ದರು. ಇವರನ್ನು ಉಲ್ಲೇಖಿಸುವ ಶಾಸನಗಳು ಹರಪನಹಳ್ಳಿಯ ಸುತ್ತಲಿನ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇದರಿಂದ ನಮ್ಮ ವಿವೇಚನೆಯಲ್ಲಿ 'ಲಕುಲೀಶ ಕಾಳಾಮುಖ' ಎಂಬ ಹೆಸರುಗಳನ್ನು ಶೈವಕ್ಕೆ ಸ್ವೀಕರಿಸುವುದು ತಪ್ಪಾಗಲಾರದು. ಚಿ.ನಾ.ಮೂ ಅವರು ಈ ಮಾತನ್ನೆ ವ್ಯಕ್ತಪಡಿಸುತ್ತಾರೆ.[೪] ಅದೇನೆ ಇರಲಿ ಅವರ ಪ್ರಸ್ತಾಪಕ್ಕೆ ಬರುವುದಿಲ್ಲ.

ನಮ್ಮ ಅಧ್ಯಯವಾದ ಬಾಗಳಿ ಶಾಸನಗಳಲ್ಲಿ ಎಲ್ಲಿಯೂ ಕಾಳಾಮುಖ-ಲಕುಲೀಶ ಪಾಶುಪತರ ಬಗ್ಗೆ ಉಲ್ಲೇಖಬರುವುದಿಲ್ಲ. ಇಲ್ಲಿ ಹೆಚ್ಚಾಗಿ ಶೈವ ಶಾಸನಗಳು ಬರುವುದರಿಂದ ಮೇಲಿನ ವಿವರಣೆಯನ್ನು ಕೊಡಬೇಕಾಯಿತು. ಈ ಶಾಸನಗಳಲ್ಲಿ ಒಂಬತ್ತು ಶೈವಶಾಸನಗಳಿದ್ದು, ಉಳಿದವುಗಳು ಚಾಲುಕ್ಯರ ಬಿರುದಾವಳಿಗಳೊಂದಿಗೆ ಪ್ರಾರಂಭವಾಗುತ್ತದೆ. ಅಂದರೆ ಶೈವ ಶಾಸನವೆಂದರೆ ಮೊದಲು

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ|
ತ್ರೈಲೋ(ಲೋ)ಕ್ಯ ನಗರಾರಂಭ ಮೂಲಸ್ತಂಭಾಯ ಶಂಭುವೇ|

ಎಂಬ ಮಂಗಳ ಶ್ಲೋಕದಿಂದ ಪ್ರಾರಂಭವಾಗುತ್ತದೆ.(ತಮ್ಮ ಇಷ್ಟದೇವತಾಸ್ತುತಿ) ಉಳಿದ ಶಾಸನಗಳು ಮೊದಲಿಗೆ ಚಕ್ರವರ್ತಿಯ ಸಕಲ ಬಿರುದಾವಳಿಗಳೊಂದಿಗೆ ಪ್ರಾರಂಭವಾಗುತ್ತವೆ. ಅಂದರೆ ಬಿರುದಾವಳಿಗಳಾದ ಸಮಸ್ತಭುವನಾಶ್ರಯ, ಶ್ರೀಪೃಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಸತ್ಯಾಶ್ರಯಕುಳತಿಳಕಂ ಚಾಳುಕ್ಯ ಭರಣಂ ಎಂಬಂತ ಬಿರುದುಗಳು ಶಾಸನದ ಮೊದಲ ಭಾಗದಲ್ಲಿ ಕಂಡುಬರುತ್ತವೆ. ಇವುಗಳನ್ನು ಶೈವಶಾಸನಗಳಾಗಿ ಗುರುತಿಸಿಕೊಂಡಿದ್ದರಿಂದ ಒಟ್ಟಾರೆ ೩೬ ಶೈವ ಶಾಸನಗಳು ಕಂಡುಬಂದಿವೆ. ಏಕೆಂದರೆ ಚಾಲುಕ್ಯರು, ರಾಷ್ಟ್ರಕೂಟರು ಶೈವರೇ ಆಗಿದ್ದರು. ಇವರು ನೀಡಿದ ದಾನ ಶಾಸನಗಳನ್ನು ಹೀಗೆ ವಿವರಿಸಬಹುದು. ದಾನವನ್ನು ಕೊಡುವವನು ರಾಜನಲ್ಲದೆ ಬೇರೆಯವರಾಗಿದ್ದರೆ ಹಾಗೆಯೆ ದಾನವೀಯದ ಸಾಮಂತರಾಜ ಅಥವಾ ದಂಡನಾಯಕ ಅಥವಾ ವ್ಯಕ್ತಿಯ ವರ್ಣನೆ ಬರುತ್ತದೆ. ನಂತರ ಶಾಸನದ ಕಾಲ ವ್ಯಕ್ತವಾಗಿರುತ್ತದೆ. ಇದು ಶಕವರ್ಷಗಳಿಂದ ಆರಂಭವಾಗಿರುತ್ತದೆ. ಹೆಚ್ಚಾಗಿ ಇವುಗಳಲ್ಲಿ ಶಾಲಿವಾಹನ ಶಕ, ಕೆಲವು ಕಡೆ ವಿಕ್ರಮಶಕ ಬರುತ್ತದೆ. ವರ್ಷ, ತಿಂಗಳು, ದಿನಗಳನ್ನು ಹೇಳುವಂತೆ ನಿಖರವಾದ ರೀತಿಯಲ್ಲಿ ಕಾಲವನ್ನು ಶಾಸನಗಳು ಕೊಡುತ್ತವೆ. ಕೆಲವೊಂದು ಕಡೆ ಊಹಿಸಿದ ಕಾಲಗಳು ಇರಬಹುದು. ಕಾಲದ ನಂತರ ಕೊಡಬೇಕಾದ ದಾನವನ್ನು ನಿರ್ದೇಶಿಸುವ ಭಾಗ ಬರುತ್ತದೆ.

ಕೊಡುವ ದಾನ ಭೂಮಿಯಾಗಿದ್ದರೆ ಅದರ ಅಳತೆಯನ್ನು(ಗಡಿ, ಮೇರೆ) ಹೇಳುವುದು. ಗ್ರಾಮವಾಗಿದ್ದರೆ ಅದು ಮಾನ್ಯ ಮಾಡಿದುದೊ ಅಥವಾ ದಾನ ನೀಡಿದುದೋ ಮತ್ತು ಅದರ ಸೀಮೆಗಳನ್ನು ಹೇಳವುದು. ಸುಂಕದ, ತೆರಿಗೆಯ ಹಣದ ವುಗಳಾದರೆ ಅದರ ವಿವಿಧ ರೂಪಗಳನ್ನು ತಿಳಿಸುತ್ತವೆ. ಹೀಗೆ ದಾನದ ಅನೇಕ ಬಗೆಗಳನ್ನು ಇವುಗಳಲ್ಲಿ ಕಾಣಬಹುದು. ಇನ್ನು ದಾನವನ್ನು ಕೊಡುತ್ತಿರುವುದು, ಯಾರಿಗೆ? ವ್ಯಕ್ತಿಗೋ, ದೇವಾಲಯಕ್ಕೊ, ಸಂಸ್ಥೆಗೊ, ಮಠಗಳಿಗೊ, ಅಗ್ರಹಾರಗಳಿಗೊ ಎಂಬುದನ್ನು ತಿಳಿಯಪಡಿಸುತ್ತವೆ. ಹಾಗೆಯೇ ದಾನವನ್ನು ಕೊಡುತ್ತಿರುವ ಕಾರಣವೇನು ಪೂಜಾದಿಕಾರ್ಯಗಳಿಗೂ, ಅನ್ನಸತ್ರಕ್ಕೊ, ವಿದ್ಯಾಗುರುಗಳಿಗೊ, ವಿದ್ಯಾರ್ಥಿಗಳಿಗೆ ಅಥವಾ ವಿದ್ಯಾದಾನಕ್ಕೊ ಎಂಬ ಅಂಶಗಳನ್ನು ತಿಳಿಸುತ್ತವೆ. ಶಾಸನಗಳಲ್ಲಿ ಹೆಚ್ಚಾಗಿ 'ಕಾಲಂಕರ್ಚಿ' ಎಂದು ಬರುತ್ತದೆ. ಅಂದರೆ ಗೌರವ ಪೂರ್ವಕವಾಗಿ ಕೊಡುವ ದಾನ, ದತ್ತಿ ಎಂದಾಗುತ್ತದೆ. ಈ ಎಲ್ಲ ಅಂಶಗಳನ್ನು ಶಾಸನದ ಈ ಭಾಗದಲ್ಲಿ ಕಂಡುಬಂದರೆ ಶಾಸನದಕೊನೆಯ ಅಥವಾ ಮುಕ್ತಾಯದ ಭಾಗವು ಕೊಟ್ಟ ಅಥವಾ ಬಿಟ್ಟದಾನವನ್ನು ರಕ್ಷಣೆ ಮಾಡದಿದ್ದರೆ, ಅಥವಾ ದಾನವನ್ನು ಮುಂದುವರಿಸಿ ಕಾಪಾಡಿಕೊಂಡು ಬಂದವರಿಗೆ ಹೊಣೆಗಾರಿಕೆಯನ್ನು ಹೇಳುತ್ತವೆ. ಸಾಮಾನ್ಯವಾಗಿ ಶಾಸನದ ಕೊನೆಯ ಭಾಗಕ್ಕೆ ಈ ಶ್ಲೋಕವಿರುತ್ತದೆ.[೫]

ಸ್ವದತ್ತಂ ಪರದತ್ತಂ ವಾಯೋಹರೇತಿ ವಸುಂಧರಾಮ್
ಷಷ್ಟಿರ್ವರ್ಷ ಸಹಶ್ರಾಣಾಂ ವಿಷ್ಟಾಯಾಂ ಜಾಯತೇ ಕ್ರಮಿ :

ಅಂದರೆ ತಾವು ಕೊಟ್ಟದ್ದನ್ನಾಗಲಿ ಅಥವಾ ಪರರು ಕೊಟ್ಟದ್ದನ್ನಾಗಲಿ, ಕೊಟ್ಟ ದಾನವನ್ನು ಯಾರು ಅಪಹರಿಸುತ್ತಾರೋ ಅವರು ಅರವತ್ತು ಸಾವಿರ ವರ್ಷ ಕ್ರಿಮಿಗಳಾಗಿ ಹುಟ್ಟುತ್ತಾರೆ ಎಂದು ವಿವರಿಸುತ್ತದೆ. ಇಲ್ಲಿಯ ಕೆಲವುಗಳಲ್ಲಿ ಈ ಶ್ಲೋಕವು ಬಂದಿದೆ.[೬]

ದಾನಪಾಲನ ಯೋರ್ ಮಧ್ಯೇದಾನಾಚ್ಛೇಯೋಪಾಲನಂ
ದಾನಾತ್‌ಸ್ವರ್ಗಂ ಅವಾಪ್ನೋತಿಪಾಲನಾತ್ ಅತ್ಯುತಪದ||

ದಾನವನ್ನು ಕೊಡುವುದು ಮತ್ತು ಕೊಟ್ಟದಾನವನ್ನು ಪರಿಪಾಲಿಸುವುದು. ಇವುಗಳಲ್ಲಿ ದಾನವನ್ನು ಪಾಲಿಸುವುದೇ ಹೆಚ್ಚು ಶ್ರೇಯಸ್ಕರವಾದುದು. ದಾನವನ್ನಿತ್ತವರುಸ್ವರ್ಗವನ್ನುಪಡೆದರೆ ಅದನ್ನು ಪರಿಪಾಲಿಸಿಕೊಂಡು ಬಂದವರು ಅತ್ಯುತ(ಮಹಾ) ಪದವಿಯನ್ನು ಪಡೆಯುತ್ತಾರೆ, ಎಂಬ ವಿವರಣೆ ಕಂಡುಬರುತ್ತದೆ. ಅದರ ಮುಂದುವರಿದ ಭಾಗದಲ್ಲಿ[೭]

ನವಿಷಮ್‌ವಿಷಮ್‌ಇತಿಆಹುರ್‌ದೇವಸ್ವಂವಿಷಯಂಉಚ್ಯಂತೇ|
ವಿಷಮ್‌ಏಕಾಕಿನಂಹಂತಿಂ ದೇವಸ್ವಂ ಪುತಂ ಪಾತ್ರರಂ||

ಎಂದು ಬರುತ್ತದೆ. ಅಂದರೆ 'ವಿಷ' ಎಂಬುದು ವಿಷವಲ್ಲ, ನಿಜವಾದ ವಿಷ ಎಂದರೆ ದೇವತೆಗಳಿಗೆ (ಧರ್ಮಕಾರ್ಯಕ್ಕೆ) ಬಿಟ್ಟದಾನವನ್ನು ಅಪಹರಿಸುವುದು. ವಿಷ ಒಬ್ಬನನ್ನು ಕೊಂದರೆ, ಈ ದಾನವನ್ನು ಅಪಹರಿಸಿದವರ ಪುತ್ರಪೌತ್ರರನ್ನೆಲ್ಲಾ ನಾಶಪಡಿಸುತ್ತದೆ ಎಂಬ ವಿವರಣೆಯನ್ನು ಕೊಡುತ್ತದೆ. ಇನ್ನು

ಕೆಲವು ಶಾಸನಗಳಲ್ಲಿ ಧರ್ಮಮನ್, ಆವನೊಬ್ಬನ್ ಪ್ರತಿಪಾಲಿಸಿದಮ್‌ಗೆಯೆಳೊಳ್, ಗಂಗೆಯೊಳ್, ಕುರುಕ್ಷೇತ್ರದೊಳ್ ವಾರಣಾಸಿಯೊಳ್, ಪ್ರಯಾಗೆಯೊಳ್, ಸಾಸಿರಕವಿಲೆ, ಕೋಡುಂಕೊಳಗಮಂ, ಪಂಚರತ್ನಂಗಳಿಂ ಕಟ್ಟಿಸಿ, ವೇದಪಾರಗರಪ್ಪ ಬ್ರಾಹ್ಮಣರ್ಗೆಕೊಟ್ಟಪುಣ್ಯಂ, ಐದುಗುಂ'' ಎಂದು ಬಂದಿವೆ.[೮]

ಈ ದಾನ, ಧರ್ಮವನ್ನು ಪಾಲಿಸದಿದ್ದವನು ಬ್ರಹ್ಮಹತ್ಯ ದೋಷಕ್ಕೆ, ಸಾವಿರ ಕವಿಲೆಗಳನ್ನು ಕೊಂದವನ ಪಾಪಕ್ಕೆ, ತುತ್ತಾಗುತ್ತಾನೆಂಬ ಎಚ್ಚರಿಕೆಯ ನುಡಿಗಳಾಗಿವೆ. ಇಂತಹ ಉಲ್ಲೇಖಗಳು ಬೇರೆ ಬೇರೆ ಶಾಸನಗಳಲ್ಲಿ ಬಂದರೂ, ಇವುಗಳು ರಚನೆಯಲ್ಲಿ ಹೆಚ್ಚು ಕಡಿಮೆ ಒಂದೇ ಕ್ರಮದಲ್ಲಿದ್ದಂತೆ ಕಂಡರೂ ಸ್ವರೂಪ, ಇವುಗಳ ವೈವಿಧ್ಯವನ್ನು, ವೈಶಿಷ್ಟವನ್ನು ನಿರ್ಧರಿಸುವುದು ಕಠಿಣ.

ಇನ್ನು ಇವುಗಳಲ್ಲಿ ದೇವಾಲಯಗಳಿಗೆ, ವಿದ್ಯಾಸಂಸ್ಥೆಗಳಿಗೆ ಮತ್ತು ವ್ಯಕ್ತಿಗೆ ಕೊಟ್ಟ ದಾನ ಶಾಸನಗಳು. (ಆದರೆ ಇವುಗಳಲ್ಲಿ ದೇವಾಲಯದ ನಿರ್ಮಾಣ, ನಿರ್ವಹಣೆ ಇತರೆ ಕಾರ್ಯಕ್ಕೆ ಕೊಟ್ಟ ಶಾಸನಗಳು ಕಂಡುಬಂದಿವೆ.) ಇವುಗಳಲ್ಲಿ ಮೂರು ಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ.

೧. ಚಕ್ರವರ್ತಿಯಿಂದ ಅಥವಾ ಸಾಮಂತರಾಜರಿಂದ, ರಾಜಾಧಿಕಾರಿಯಿಂದ, ಊರಗಾವುಂಡನಿಂದ, ವರ್ತಕ(ಸಂಘ)ರಿಂದ, ಕೊನೆಗೆ ದೇವಾಲಯದ ನರ್ತಕಿಯರಿಂದ, ಶ್ರೀಮಂತರಿಂದ ಬಡಜನರಿಗೆ ಕೊಟ್ಟ ದಾನಶಾಸನಗಳು.

೨. ದೇವಾಲಯದ(ಗಳ) ಜೀರ್ಣೋದ್ಧಾರಕ್ಕೆ ಅಂಗಭೋಗ, ರಂಗಭೋಗಕ್ಕೆ, ಪೂಜಾ ಕಾರ್ಯಗಳಿಗೆ, ದೇವಾಲಯ ಆಶ್ರಯದಲ್ಲಿರುವ ಮಠಗಳಿಗೆ, ಅನ್ನದಾನಕ್ಕೆ ವಿದ್ಯಾದಾನಕ್ಕೆ ಬೇರೆ ಉದ್ದೇಶಗಳಿಗೆ ಕೊಟ್ಟ ಶಾಸನಗಳು.

೩. ಗದ್ದೆಯನ್ನು, ಭೂಮಿಯನ್ನು, ಕೆರೆಯನ್ನು, ಊರನ್ನು, ಕಟ್ಟಿಸಿದ, ದಾನ ನೀಡಿದ, ಮಾನ್ಯ ಮಾಡಿದ, ತೆರಿಗೆಗಳನ್ನ ನೀಡಿದ, ದಾನ್ಯಗಳನ್ನು, ಪದಾರ್ಥಗಳನ್ನು ನೀಡಿದ. ಹೀಗೆ ಹಲವಾರು ಬಗೆಯಲ್ಲಿಯ ದಾನದ ವಿವರಗಳು ಉಲ್ಲೇಖವಾಗಿವೆ.

ಇಲ್ಲಿಯ ಎಲ್ಲಾ ಶಾಸನಗಳಲ್ಲಿ ಮೇಲಿನ ವಿವರಗಳು ಉಲ್ಲೇಖವಾಗಿರುವುದು ಕಂಡುಬರುತ್ತದೆ. ಇಲ್ಲಿ ಶೈವಶಾಸನಗಳೆಂದು ಕಂಡುಬಂದ ಒಂಬತ್ತು ಶಾಸನಗಳ, ದಾನಗಳನ್ನು ನೋಡಲಾಗಿದ್ದು. ನಂತರ ಬಿರುದಾವಳಿಗಳಿಂದ ಕೂಡಿದ ಶಾಸನಗಳನ್ನು ಚರ್ಚಿಸಲಾಗಿದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವಧರ್ಮ ಬಹುಮುಖ ಅಭಿವೃದ್ಧಿಯಾಗಿತ್ತು. ಪ್ರಾರಂಭದಲ್ಲಿ ಈ ಪಂಥದ ಸ್ಥಾಪಕನು, ಲಕುಲೀಶ ಕಾಳಾಮುಖ ಪಾಶುಪತ ಪಂಥಕ್ಕೆ, ಶಿವನೆ ಅಧಿದೇವರು. ಶ್ರೀ ಸಾಮಾನ್ಯರಿಂದ ಹಿಡಿದು, ರಾಜರುಗಳವರೆಗೆ, ರಾಜವಂಶಗಳವರೆಗೆ, ಶೈವಧರ್ಮವು ಪಸರಿಸಿತ್ತು. ಎರಡನೆ

ಜಯಸಿಂಹನ ಪತ್ನಿ ಸುಗ್ಗಲಾದೇವಿ ಜೈನ ಧರ್ಮವನಾದ ತನ್ನ ಪತಿಯನ್ನು ಶೈವಧರ್ಮಕ್ಕೆ ಪರಿವರ್ತಿಸಿದ್ದಳು.[೯] ಇದರಿಂದ ಇವರು ಶೈವಧರ್ಮವನ್ನು ಶ್ರೇಷ್ಠವೆಂದು ಕಂಡುಕೊಂಡಿದ್ದರು. ಇವರು ಹೆಚ್ಚು ಶೈವದೇವಾಲಗಳಿಗೆ ದಾನ ದತ್ತಿ ನೀಡಿದ್ದರು. ಈ ದೊರೆಗಳು ಶೈವಧರ್ಮವನ್ನು ಅನುಸರಿಸಿದರೂ, ಜೊತೆಗೆ ಜೈನ ಧರ್ಮ ಮತ್ತು ವಿಷ್ಣುವಿನ ಆರಾಧಕರೂ ಆಗಿದ್ದರು. ಧರ್ಮ ಸಮನ್ವರೂ ಆಗಿದ್ದರು. ಹೀಗೆ ಶೈವರಾಗಿದ್ದ ಇವರು ನೀಡಿದ ದಾನ ಶಾಸನಗಳನ್ನು ಮುಂದೆ ನೋಡಲಾಗಿದೆ.

ಚಾಲುಕ್ಯರ ಮೊದಲ ದೊರೆಯಾದ ಎರಡನೆ ತೈಲಪನ ಪ್ರಥಮ ಉಲ್ಲೇಖ ಕುಡುತಿನಿ ಶಾಸನದಲ್ಲಿ ಕಂಡುಬರುತ್ತದೆ.[೧೦] ಕೆಂಚಗಾರ ಬೆಳಗಲ್ಲು ಶಾಸನದಲ್ಲಿ, ಇವನು ಮೂರು ಶಿವದೇವಾಲಗಳಿಗೆ ಪೂರ್ವದಲ್ಲಿ ನಡೆಯುತ್ತಿದ್ದ ಸ್ಥಾನಮಾನವನ್ನು, ಮಾನ್ಯ ಮಾಡಿದನೆಂದು ಉಲ್ಲೇಖಬರುತ್ತದೆ.[೧೧] ಈ ಶಾಸನದಲ್ಲಿ ಈತನ ಪಾದಪದ್ಮೋಪಜೀವಿಯಾದ ಮಹಾಸಾಮಂತ ಆಯ್ಯುತ್ತವರ್ಮನು ಬಾಗುಳಿಯ ಐವತ್ತು ಮಹಾಜನರು, ದುಗ್ಗಿಮಯ್ಯ ಪ್ರತಿಷ್ಠಾಪಿಸಿದ ಆದಿತ್ಯದೇವರಿಗೆ ೬೦ ಕಮ್ಮ ಹುಸುಕಿನ ತೋಟವನ್ನು ದಾನ ನೀಡಿದನೆಂದು ಕಂಡುಬರುತ್ತದೆ.[೧೨] ಆದರೆ ದುಗ್ಗಿಮಯ್ಯ ಯಾರೆಂದು ತಿಳಿಯುವುದಿಲ್ಲ. ಅಂದರೆ ಇಲ್ಲಿ ದುಗ್ಗಿಮಯ್ಯ ಮಾಡಿದ ಅಥವಾ ಪ್ರತಿಷ್ಠಾಪಿತ ದೇವರಿಗೆ ಇವನ ಆಳ್ವಿಕೆಯಲ್ಲಿ ಐವತ್ತು ಜನರ ಸಮ್ಮುಖದಲ್ಲಿ ನೀಡಿದ ದಾನವಾಗಿದೆ. ಈ ಶಾಸನವು ಎರಡನೆ ಜಯಸಿಂಹನನ್ನು ಉಲ್ಲೇಖಿಸಿದ್ದು,[೧೩] ಇವನ ಸಾಮಂತ ದೊರೆಯಾದ ಜಗದೇಕಮಲ್ಲ ನೊಳಂಬಉದಯಾದಿತ್ಯನು, ಉತ್ತರಾಯಣ ಸಂಕ್ರಾಂತಿಯ ನಿಮಿತ್ತ ಪಂಪಾಪುರದ ತೀರ್ಥಕ್ಕೆ ಹೋಗಿದ್ದಾಗ, ಬಾಗುಳಿಯ ಕಲಿದೇವಸ್ವಾಮಿಗೆ ಚತುರಾಘಾಟದ ಸೀಮೆಯೊಳಗಿನ ಭೂಮಿಯನ್ನು ದೇವರಿಗೆ ದಾನ ನೀಡಿದನೆಂದು ಉಲ್ಲೇಖಿಸುತ್ತದೆ. ಇದರ ಜೊತೆಗೆ ಇವನು ದೇವರಿಗೆ, ದೇವರ ಇತರ ಕಾರ್ಯಕ್ಕೆ ಸೂಳೆಯರಿಗೆ, ಸತ್ರಕ್ಕೆ ವಿದ್ಯಾಗುರುಗಳಿಗೆ, ಕೆರೆಗೆ, ಭೂಮಿಯನ್ನು ದಾನ ಬಿಡುತ್ತಾನೆ. ಅಂದರೆ ಉದಯಾದಿತ್ಯ ಪಂಪಾಪುರ ತೀರ್ಥಕ್ಕೆ(ಹಂಪೆಗೆ) ಹೋಗಿದ್ದಾಗ ಬಾಗುಳಿಯ ಕಲಿದೇವಸ್ವಾಮಿಗೆ ಬಿಕ್ಕಿಗ-೭೦ರ ವಿಭಾಗದಲ್ಲಿ ಲೋಗೇಶ್ವರಹೊಲದ ನಾಲ್ಕು ಸೀಮೆಯಿಂದ ಒಳಗೊಂಡ ಭೂಮಿಯನ್ನು ದೇವರ ನೈವೇದ್ಯಕ್ಕೆ ಪೂಜೆಗೆ, ನಂದಾದೀವಿಗೆಗೆ, ತಪೋಧನರ ಸತ್ರಕ್ಕೆ, ಸೂಳೆಯರಿಗೆ, ಸೂಳೆವಾಳಂಗೆ, ಪರಿಕಾರರಿಗೆ, ಇವರ ಪಾತ್ರಕ್ಕೆ, ದೇಸಿಗಚ್ಛಾತ್ರರ ಭೋಜನಕ್ಕೆ ಇವರೆಲ್ಲರಿಗೂ ಮೂರು ಕಾಲಗಳಲ್ಲಿ ನಡೆಯುವಂತೆ, ಈ ದೇವಾಲಯದ ಸ್ಥಾನಿಕರಾದ ಸೋಮಸಿಂಘಭಳಾರರ(ಕಾಲನ್ನು ತೊಳೆದು) 'ಕಾಲಂಕರ್ಚಿ', ಮಹಾಜನರ ಸಮ್ಮುಖದಲ್ಲಿ ಚಾಳುಕ್ಯ ಚಕ್ರೇಶ್ವರದತ್ತಿಯಪ್ಪರಾದ ಬ್ರಾಹ್ಮಣರೆದುರಲ್ಲಿ ವಿಶಾಲವಾದ ಸಮಸ್ತ ಭೂಮಿಯನ್ನು ಎಲ್ಲರಿಗೂ ಸಮನಾಗಿ ದಾನಬಿಡುತ್ತಾನೆಂದು ಉಲ್ಲೇಖಿಸುತ್ತದೆ. ಇದೇ ಶಾಸನದ ಮುಂದುವರಿದ ಭಾಗದಲ್ಲಿ ಬಿಕ್ಕಿಗ-೭೦ನ್ನು ಆಳುತ್ತಿದ್ದ ಭೀರಭಟ್ಟನು ಬಾಗುಳಿಯ ಕಲಿದೇವರ ಸ್ವಾಮಿಗೆ ವರಿಸಿ, ಕೆರೆಗಳಾದ ನಾರಣೋರ್ಘುರ ಕೆರೆಯ ಪಡಿಸಲ್ಲಿಸುವರಿಗೆ, ಲೋಗೇಶ್ವರದ,

ಚತುಸ್ಸೀಮೆ, ಮೂಡಲ ಭಾಗವನ್ನು ದಾನ ನೀಡಿದನೆಂದು ಉಲ್ಲೇಖಿಸುತ್ತದೆ. ಇದರ ಪಾಠ ಹೀಗಿದೆ. ''ಮೂಡಣ ಕೋಡಿಯಂ, ತಂಕಲೋರುದರದಿಂ, ಪಡುವ ಬರೆ ಕೆರ್ಗ್ಗಲ್ಲಿಂ, ಕುದುರೆಗಲ್ಲಿಂದ, ವಡ್ಡಗಲ್ಲಿಂ, ಮಣಿಯೆರೆಯಿಂ, ಪಡುವ ಅಡ್ಡ ವೀರವನ ಕೆರೆಯಿಂ, ಬಡಗಬರೆ ನೀರ್ಗ್ಗುಂದದ ಭಣ್ಣಿವಟ್ಟಯಿಂದಾನೆ ದೊರೆವಿಡಿದಂತೆ, ನಾರಣೋರ್ಝುರ ಕೆರೆಯ ಮೂಡಣ ಕೊಡಿಯಂ ದಾನ ಬಿಡುವುದು ಎಂದು ಬರುತ್ತದೆ. ಭೀರಭಟ್ಟನು ಸಹ ಸೋಮಸಿಂಘಭಳಾರರ ಕಾಲನ್ನು ತೊಳೆದು ಇವರ ನೇತೃತ್ವದಲ್ಲಿ ಈ ಎಲ್ಲಾ ವಸ್ತುಗಳನ್ನು, ಕೆರೆಗಳನ್ನು ದಾನ ನೀಡಿದನು. ಇಲ್ಲಿ ಶ್ರೀಮತ್ಪೆರ್ಗ್ಗಡೆ ನರಸಿಂಘಯ್ಯನು ಸೋಮಸಿಂಘ ಭಳಾರರನ್ನು ಕಾಣಲು ಹಂಪೆಗೆ ಬಂದಿದ್ದನು. ಈತನನ್ನು ಸಮಸ್ತ ರಾಜ್ಯಭಾರ ನಿರೂಪಿತ ಮಹಾಮಾತ್ಯ ಪದವೀ, ವಿರಾಜಮಾನೋಂನ್ನತ, ಪ್ರಭುಮಂತ್ರಾತ್ಸೋಹಶಕ್ತಿತ್ರಯ ಸಂಪನ್ನರಪ್ಪ' ಎಂದು ಬಣ್ಣಿಸಿದೆ. ಇವರಿಬ್ಬರು ರಾಜರು ಈ ರೀತಿಯ ದಾನವನ್ನು ಕೈಗೊಂಡಿದ್ದರು. ಕಲ್ಲೇಶ್ವರ ದೇವಾಲಯದ ಆವರಣದ ಶಾಸನದಲ್ಲಿ ತ್ರಿಭುವನ ಮಲ್ಲನ ರಾಜ್ಯಭಾರದಲ್ಲಿ ನಾಗೆಕಲ್ಲಯ್ಯನೆಂಬುವವನು ಕೊಂಮೂರ ಕೆಯಿ, ಒಂದು ಗಾಣನೆರೆ, ಹದಿನಾಲ್ಕು ಕೊಟ ಎಂದುಬರುತ್ತದೆ.[೧೪] ಅಂದರೆ ಗಾಣಿಗರಿಗೆ ಇವನು ಕೊಂಡ ಅಥವಾ ಬಂದ ವರಮಾನದಲ್ಲಿ ಒಂದು ಕೆಯಿ ಯಷ್ಟು ಕೊಡಬೇಕೆಂದು ಕಂಡುಬರುತ್ತದೆ. ಮಳೆಪ್ಪಮಲ್ಲನ ದೇವಾಲಯದ ಶಾಸನವು ಶ್ರೀಮದ್ದಿವ್ಯಲಿಂಗಂ ನೀಲೇಶ್ವರ ದೇವರಿಗೆ ಗದ್ದೆಯನ್ನು ದಾನನೀಡಿದನೆಂದು ಉಲ್ಲೇಖಿಸುತ್ತದೆ.[೧೫] ಇಲ್ಲಿ ವರ್ತಕರು, ಸೇನಬೋವರು ಸೇರಿ ದಾನ ನೀಡಿದರೆಂದು ಕಂಡುಬರುತ್ತದೆ.

೨. ದೇವಾಲಯದ ಜೀರ್ಣೋದ್ಧಾರಕ್ಕೆ, ಪೂಜಾ ಕಾರ್ಯಗಳಿಗೆ, ಮಠಗಳಿಗೆ, ಸತ್ರಕ್ಕೆ ವಿದ್ಯಾಗುರುಗಳಿಗೆ ನೀಡಿದ ದಾನ ಶಾಸನಗಳು. ಜೊತೆಗೆ ಅಂಗಭೋಗ ಮತ್ತು ರಂಗಭೋಗಗಳಿಗೆ.

ಈ ಶಾಸನದಲ್ಲಿ ತ್ರಿಭುವನಮಲ್ಲದೇವನ ಕಾಲವನ್ನು ಸೂಚಿಸಿದ್ದು, ಇವನ ದಂಡನಾಯಕನಾದ ರಿಷಿಯಣ್ಣನು ನೀಲೇಶ್ವರ ದೇವರ ಪೂಜಾ ಕಾರ್ಯಗಳಿಗೆ, ನೈವೇದ್ಯಕ್ಕೆ ನಂದಾದೀವಿಗೆಗೆ, ತಿಂಗಳಿಗೊಂದು ಎಲೆಯ ಪೇರಿನ ಸುಂಕವನ್ನು ದಾನನೀಡುತ್ತಾನೆ.[೧೬] ನಂತರ ದೇವಸಿಂಗಜೀಯರ ಮಗ ನೀಲೇಶ್ವರ ಪಂಡಿತದೇವರ 'ಕಾಲಂಕರ್ಚಿ' ಮಹಾಜನರ(ಊರೊಡೆಯರಾದ) ಸಮ್ಮುಖದಲ್ಲಿ, ಕೆರೆಯ ಸುಂಕದಲ್ಲಿ ಬರುವ ಲಾಭವನ್ನು ತಿಂಗಳಿಗೊಂದು ಪಣವನ್ನು ದೇವರ ನಂದಾದೀವಿಗೆಗೆ ದಾನಬಿಡುತ್ತಾನೆ. ಇದರ ಕೊನೆಯ ಭಾಗದಲ್ಲಿ ಹಿಟ್ಟನಹಳ್ಳಿಯಲು ಬಿಟ್ಟ, ಕಿಸುವಿನಮತ್ತರೆಡು, ಎಂದು ಉಲ್ಲೇಖವಾಗಿದೆ. ಅಂದರೆ ಹಿಟ್ಟನ ಹಳ್ಳಿಯೆಂದರೆ ಇದೊಂದು ಗ್ರಾಮದ ಹೆಸರಿರಬೇಕು, ಅಥವಾ ಗ್ರಾಮದಲ್ಲಿ ವಾಸವಾಗಿರುವ ಯಾವುದಾದರೂ ಒಂದು ಸಮುದಾಯವಾಗಿರಬೇಕು. ಏಕೆಂದರೆ ಗ್ರಾಮದಲ್ಲಿದ್ದ ಜನರನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದುದು ಶಾಸನಗಳಿಂದ ತಿಳಿಯುತ್ತದೆ. ಮೊದಲು ಮಹಾಜನರು, ಎರಡು ವ್ಯಾಪಾರಿಗಳು(ನಖರರು ಸೆಟ್ಟಿ...) ಮೂರು ಹಿಟ್ಟುಗಳು(ಎಂಟುಹಿಟ್ಟು) ನಾಲ್ಕನೆಯದು ಒಕ್ಕಲು

(ಅರವತ್ತೊಕ್ಕಲು-ಮೂವತ್ತೊಕ್ಕಲು) ಈ ನಾಲ್ಕು ಪ್ರಭೇದಗಳಲ್ಲಿಯೇ ಎಲ್ಲಾ ಜಾತಿಗಳು ಅಂತರ್ಗತವಾಗಿದ್ದವು. ಅಲ್ಲದೆ ಇವು ಸಾಮಾಜಿಕವಾಗಿ ೧೮ ಸಮಯಗಳಾಗಿ(ಪಣ) ವಿಂಗಡಣೆಯಾಗಿದ್ದವು. ಈಗಲೂ ಸಹ ಉಪ್ಪಾರ ಜಾತಿಗಳ್ಲಲಿ ಆರು ವರ, ಮೂರುವರದ ಜನಾಂಗವೆಂದು ಇರುವುದು ಕಂಡುಬರುತ್ತದೆ. ಆದರೆ ಈ ಹಿಟ್ಟನಹಳ್ಳಿ ಎಂಬುದು ಅಳತೆಯನ್ನು ಸೂಚಿಸುವ ಗ್ರಾಮವಾಗಿರಬೇಕು, ಇದು ಜನಾಂಗವಂತೂ ಅಲ್ಲ. ಏಕೆಂದರೆ ಮುಂದೆ ಕಿಸುವಿನ ಮತ್ತರು ಎಂದು ಬಂದಿರುವುದರಿಂದ ಹೀಗೆ ಹೇಳಬಹುದು. ಇದರ ಮುಂದುವರಿದ ಭಾಗದಲ್ಲಿ ದೀಪಾವಳಿಯ ಹಬ್ಬದಂದು ಪೆಗ್ಗಡೆ ಕಾವರಾಜನು ದೇವರ ರಂಗಭೋಗಕ್ಕೆ ಒಂದು ಗದ್ಯಾಣವನ್ನು ದಾನಬಿಡುತ್ತಾನೆ.

ಈ ಶಾಸನದಲ್ಲಿ ಚಾಲುಕ್ಯ ಜಗದೇಕಮಲ್ಲ(ಎರಡನೆಯ)ನ ಕಾಲ ಉಲ್ಲೇಖಿಸಿದ್ದು,[೧೭] ಇವನ ಆಳ್ವಿಕೆಯಲ್ಲಿ, ಇವನ ಮಹಾಮಂಡಳೇಶ್ವರ ವೀರಪಾಂಡ್ಯನು ಇದ್ದನು. ಇವನ ಸಾಮಂತ ಭಟ್ಟರ ಮಾದಿಯಣ್ಣನು ಬಾಗಳಿಯ 'ಅಶೇಷ' ಮಹಾಜನರ ಸಮ್ಮುಖದಲ್ಲಿ ಕಲಿದೇವರಿಗೆ ನಾನಾ ರೀತಿಯ ಸೇವೆಗಾಗಿ ದಾನ ಬಿಡುತ್ತಾನೆ. ಕಲಿದೇವರಿಗೆ ಪ್ರತಿವರ್ಷ ಲಕ್ಷಗಡುಗೆ, ಆ ಗಡುಗೆ ನೀರು,(ಅಗ್ಗವಣಿಯ ನೀರು) (ನಾಲ್ವರು ಪುಳ್ಳಿಮನಿಕ್ಕುವ ಗಡುಗೆಯಂಕುಡುವವರಿಗೆ, ಜಪಮಾಡುವ ಮೂವರಿಗೆ ಏಳು ಮಾನಸ, ಬ್ರಾಹ್ಮಣರಿಗೆ, ಪ್ರತ್ಯೇಕವಾಗಿ ತಿಂಗಳಿಗೆ, ತಿಂಗಳಿಗೆ ಏಳು ಪಣ, ದಕ್ಷಿಣೆಯವರ ಭೋಜನಕ್ಕೆ) ಮತ್ತು ದೇವರ ರಂಗಭೋಗಕ್ಕೆ, ನೈವೇದ್ಯಕ್ಕೆ ಸುಗಂಧ ದ್ರವ್ಯಕ್ಕೆ ಎಂದು, ಮಂಟವಾಳ ತೋಟದ ೪೦ ಕಮ್ಮ, ಚಾಮೆಯಗೆರೆಯ ಮೊದಲ ಕಡಬನಗದ್ದೆ ಐವತ್ತನ್ನು ದಾನನೀಡಿದನು. ಮತ್ತೊಂದು ಶಾಸನದಲ್ಲಿ ಇವನ ಅಳ್ವಿಕೆಯನ್ನು ಉಲ್ಲೇಖಿಸಿದ್ದು[೧೮] ಕಂಡುಬಂದಿದೆ. ಆದರೆ ಇವನ ಆಳ್ವಿಕೆ ೧೧೫೦ಕ್ಕೆ ಕೊನೆಗೊಳ್ಳುತ್ತದೆ. ಇಲ್ಲಿ ಇವನ ೧೯ನೇ ವರ್ಷವೆಂದು ಇರುವುದರಿಂದ ೧೧೫೩ಕ್ಕೆ ಸರಿಹೊಂದುತ್ತದೆ.(ಈ ಹೊತ್ತಿಗೆ ೧೧೫೧-೫೯ವರೆಗೆ ೩ನೇ ತೈಲ ಕಾಣಿಸಿಕೊಳ್ಳುತ್ತಾನೆ) ಇಲ್ಲಿಯೂ ಸಹ ಇವನ ಸಾಮಂತ ವೀರಪಾಂಡನು ಮತ್ತು ಇವನ ಕುಟುಂಬದವರು ಸೇರಿ ಕಲಿದೇವರ ಪೂಜಾ ವಿಧಾನಕ್ಕೆ ದಾನ ನೀಡುವುದನ್ನು ಕಾಣಬಹುದು. ಅಂದರೆ ವೀರಪಾಂಡ್ಯ ಮತ್ತು ಇವನ ಮಾವ, ಅತ್ತೆ ಹಾಗೂ ಇವನ ಪತ್ನಿಯರು ಸೇರಿ ದಾನ ಬಿಡುತ್ತಾರೆ. ಕಲಿದೇವರ ಪೂಜೆ ನಡೆಯುವ ಸ್ಥಳಕ್ಕೆ ದೇವರ ನಂದಾದೀವಿಗೆಗೆ,(ಒಂದೊಂದು ನಂದಾದೀವಿಗೆಗೆ) ನರಸಿಂಹದೇವರ ನಂದಾದೀವಿಗೆಗೆ,(ನೂರರಲ್ಲಿ ಒಂದೊಂದು ನಂದಾದೀವಿಗೆಗೆ) ಸೋಮದೇವರಿಗೆ ನಂತರ ಪುರೋಹಿತರಾದ ಬ್ರಾಹ್ಮಣರಿಗೆ ವರ್ಷಕ್ಕೆ ಎರಡು ಕೊಳಗ ಪೊನ್ನಿನಷ್ಟು ಕೊಂಡ ಗದ್ಯಾಣದಲ್ಲಿ ೧೭೩ ಪೊನ್ನಿನಷ್ಟು ಬಂದ ಬಡ್ಡಿಯಲ್ಲಿ, ನೆಲ್ಲಕ್ಕಿ ಕೊಳಗ ೧ ಬಳ್ಳ, ಎಣ್ಣೆರುಮಾನಂ ೨, ತುಪ್ಪಮಾನ ೧, ಸೊಳಸ ಅಳೆಬಳ್ಳ ೩, ಬಾಡುಕಾಯಿಗೆ ೨ ವೀಸ, ಅಡಿಕೆ ೨೫, ಎಲೆ ೫೦, ಅಡುಗಬ್ಬುರ್(ಸೌದೆ) ತಿಂಗಳಿಗೆ ಒಂದು ಬಂಡಿಯಂತೆ, ಕಲಿದೇವರಿಗೆ, ಇವುಗಳೆಲ್ಲವನ್ನು ದಾನ ನೀಡುತ್ತಾರೆ. ಹಾಗೆಯೇ ದಿವಸಕ್ಕೆ ೨

ಸೊಳಸ ಎಣ್ಣೆ, (ನೂರು)೧೦೦ ಪುಷ್ಪಗಳನ್ನು ದಾನ ನೀಡುತ್ತಾರೆ. ಇದರಂತೆಯೇ ನರಸಿಂಹದೇವರಿಗೆ ಎರಡುದಿನಕ್ಕೊಮ್ಮೆ ೨ ಸೊಳಸ ಎಣ್ಣೆ, ೧೦೦ ಹೂವುಗಳಲ್ಲಿ ನರಸಿಂಹದೇವರಿಗೆ ಒಂದರಂತೆ ದಾನ ನೀಡಿದರೆಂದು ಉಲ್ಲೇಖಬರುತ್ತದೆ. ನಂತರ ಬ್ರಾಹ್ಮಣರಲ್ಲಿ ೧೩ ಜನ ಬ್ರಾಹ್ಮಣರಿಗೆ ಮತ್ತು ೬ ಜನ ಬ್ರಾಹ್ಮಣರಿಗೆ ಭೂಜನಕ್ಕೆ ನೆಲ್ಲಕ್ಕಿಯನ್ನು ೧ ಕೊಳಗದಷ್ಟು ದಾನ ನೀಡುವುದನ್ನು ವ್ಯಕ್ತಪಡಿಸುತ್ತದೆ. ಈ ದಾನದ ಫಲದಲ್ಲಿ, ನಂದಾದೀವಿಗೆಯ ಫಲ ಮಾವಂದಿರಿಗೆ, ಆರು ಜನ ಪುರೋಹಿತ ಬ್ರಾಹ್ಮಣರ ಭೋಜನದ ಫಲ, ಕೇತಬ್ಬೆಯರಸಿಗೆ, ಮತ್ತಾರು(ಮನುಷ್ಯ) ಬ್ರಾಹ್ಮಣರ ಭೋಜನದ ಫಲ, ಮದುವಳಿಗಳಾದ ನಾಗಿಯಾಂಡೆಅರಸಿಗೆ ಬರಲೆಂದು ತಮ್ಮತಮ್ಮ ಮನದೊಳಗೆ ಬೇಡಿಕೊಂಡು ದಾನ ನೀಡಿದರು. ಹೀಗೆ ಈ ಶಾಸನದಲ್ಲಿ ದೇವರಿಗೆ ನೀಡಿದ ನಾನಾ ರೀತಿಯ ವಿವರಗಳು ಉಲ್ಲೇಖವಾಗಿವೆ. ಕಲ್ಯಾಣ ಚಾಲುಕ್ಯರ ಶೈವ ಶಾಸನಗಳ ಜೊತೆಗೆ ಹೊಯ್ಸಳ ಮತ್ತು ವಿಜಯನಗರದ ಅರಸರ ಕೆಲವೊಂದು ಶೈವ ಶಾಸನಗಳು ಕಂಡುಬರುತ್ತವೆ. ಅವುಗಳನ್ನು ಈ ಕೆಳಗೆ ನೋಡಲಾಗಿದೆ. ಈ ಎಲ್ಲಾ ಶಾಸನಗಳೊಂದಿಗೆ ದಾನ ನೀಡಿದವರ, ದಾನ ಪಡೆದವರ, ದಾನದ ವಸ್ತುಗಳನ್ನು ವಿವರಿಸಲಾಯಿತು. ಇದರ ಜೊತೆಗೆ ಭೂಮಿಯನ್ನು ದಾನ ನೀಡಿದುದರ ಮತ್ತು ಹಣವನ್ನು ದಾನ ನೀಡಿದುದರ, ತೆರಿಗೆ ದಾನವನ್ನು ನೀಡಿರುವುದನ್ನು ಗಮನಿಸಲಾಗಿದೆ. ಶೈವಶಾಸನಗಳಲ್ಲಿ ಹೆಚ್ಚಾಗಿ ಅರಸರೇ ದಾನ ನೀಡಿದ್ದು ಕಂಡುಬರುತ್ತದೆ. ದಾನ ಪಡೆದವರು ಬ್ರಾಹ್ಮಣರು, ಪುರೋಹಿತರು ವಿದ್ಯಾರ್ಥಿಗಳು, ಪಂಡಿತರು, ಗುರುಗಳು, ಸೂಳೆಯರು, ಹಾಡುವವರು ಹೀಗೆ ಮೊದಲಾದವರು ಉಲ್ಲೇಖಗಳಿವೆ. ಮುಂದೆ ಹೊಯ್ಸಳ ಮತ್ತು ವಿಜಯನಗರದ ಅರಸರ ದಾನಗಳನ್ನು ನೋಡಲಾಗಿದೆ.

ಈ ಶಾಸನವು ಹೊಯ್ಸಳ ದೊರೆ ವೀರಬಲ್ಲಾಳನನ್ನು ಉಲ್ಲೇಖಿಸಿದ್ದುದಾಗಿದೆ.[೧೯] ಶೈವ ಶ್ಲೋಕದಿಂದ ಪ್ರಾರಂಭವಾಗುತ್ತದೆ. ಈ ಶಾಸನದ ಮುಕ್ಕಾಲು ಭಾಗದಲ್ಲಿ ಇವನ ಹೊಗಳಿಕೆಯೇ ಕಂಡುಬರುತ್ತದೆ. ಈತನು ಬಾಗಳಿಯ ನೆಲೆವೀಡಿನಲ್ಲಿದ್ದಾಗ ಆ ಸ್ಥಳದ ಕಲಿದೇವಸ್ವಾಮಿಯ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಮತ್ತು ಈ ದೇವರ ಅಂಗಭೋಗ ಮತ್ತು ರಂಗಭೋಗಕ್ಕೆ ಬ್ರಾಹ್ಮಣರ ಅಗ್ರಾಸನಕ್ಕೆ ಮಹಾಜನರ 'ಕಾಲಂಕರ್ಚಿ' ನಂದಿಬೇವೂರವರೆಗಿನ(ಸೀಮೆ) ಸಮಸ್ತಭೂಮಿಯನ್ನು ದಾನ ನೀಡಿದನೆಂದು ವ್ಯಕ್ತವಾಗುತ್ತದೆ.

ಇನ್ನು ಈ ಶಾಸನದಲ್ಲಿ ವಿಜಯನಗರದ ಅರಸನಾದ ಸದಾಶಿವರಾಯನ ಕಾಲವನ್ನು ಉಲ್ಲೇಕಿಸಿದ್ದು,[೨೦] ಮೊದಲಿಗೆ ಶೈವ ಶ್ಲೋಕದಿಂದ ಪ್ರಾರಂಭವಾಗುತ್ತದೆ. ಇದರಲ್ಲಿ ಬಾಗುಳಿಯ ಪಟ್ಟಣಸ್ವಾಮಿಯಾದ ಲಕ್ಕಿಸೆಟ್ಟಿಯು ಕಲಿದೇವರ ರಾತ್ರಿಪೂಜೆ ಮತ್ತು ನೈವೇದ್ಯಕ್ಕೆ ನೆಲ್ಲು, ಬಾಡುಕಾಯಿ, ಲವಣ, ತುಪ್ಪಗಳನ್ನು ದಾನ ನೀಡಿದರೆಂದು ಉಲ್ಲೇಖವಿದೆ. ಆದರೆ ಈ ದಾನವನ್ನು ಸ್ಥಾನಿಕರಾದ ದೇವರಾಸಿ ಜೀಯನ(ಕೈಯಲ್ಲಿ) ಕೈಯಿಂದ ದಾನ ಕೊಡಿಸಿದರೆಂದು ತಿಳಿದುಬರುತ್ತದೆ. ಇಲ್ಲಿಯ ಶಾಸನವೊಂದರಲ್ಲಿ ಮೊದಲಿಗೆ ಈ ಶ್ಲೋಕ ಉಲ್ಲೇಖವಾಗಿದೆ.

ಶಂಭೋ, ಶಂಭೋಮಯಿಮೂರ್ತಿಭೂರ್ಭುರ್ಭೂರ್ಯಾತ್ತ
ಭೂತೆಯೇ ಉನ್ಮಜ್ಜಂತಿನಿಮಜ್ಜತಿಯಸ್ಯಾನು
ಬ್ರಹ್ಮಾಣ್ಡಬುದ್ಬುದಾ ತಂನತೋಸ್ಮಿ ಮಹಾಮಹಾದೇವ

ಎಂದು ಉಲ್ಲೇಖವಿದೆ.[೨೧] ಇದನ್ನು ಯಾವ ಶಾಸನವೆಂದು ಗುರುತಿಸುವುದು ಕಠಿಣವಾದರೂ, ರಾಜನ ಹೆಸರು ಬಂದಿರುವುದರಿಂದ ಶೈವ ಶಾಸನವೆಂದು ಹೇಳಬಹುದಾಗಿದೆ. ರಾಜನ ಹೆಸರು ತ್ರಿಭುವನ ಮಲ್ಲದೇವ ಎಂದಿದ್ದು, ಕಲ್ಯಾಣದ ನೆಲೆವೀಡಿನೊಳು ಎಂದು ಉಲ್ಲೇಖವಾಗಿರುವುದು ಕಂಡುಬಂದಿದೆ. ಜೊತೆಗೆ ಶಂಭೊ, ಶಂಭೋ ಎಂಬ ಪದಗಳು ಶಂಕರನಿಗೆ ಬಳಸುವ ರೂಢಿಯಲ್ಲಿದೆ. ಇದರಿಂದಲೂ ಸಹ ಶೈವ ಶಾಸನವೆಂದು ಗುರುತಿಸಲಾಗಿದೆ. ಈ ಶಾಸನದ ಹೆಚ್ಚು ಭಾಗ ತ್ರುಟಿತವಾಗಿರುವುದರಿಂದ ದಾನದ ವಿವರಗಳು ತಿಳಿಯುವುದಿಲ್ಲ. ಇಲ್ಲಿಯವರೆಗೆ ಶಾಸನಗಳಲ್ಲಿ ಉಲ್ಲೇಖಿಸಿರುವ ಶೈವ ಶಾಸನಗಳನ್ನು ಚರ್ಚಿಸಲಾಯಿತು. ಇನ್ನು ಶಾಸನದ ಮೊದಲಿಗೆ ಬಿರುದಾವಳಿಗಳಿಂದ ಉಲ್ಲೇಖವಾಗಿರುವ ಶಾಸನಗಳನ್ನು ನೋಡಬಹುದಾಗಿದೆ. ಈ ಬಿರುದಾವಳಿಗಳಿರುವ ಶಾಸನಗಳು ಹೆಚ್ಚಾಗಿ ಚಾಲುಕ್ಯರ ಶಾಸನಗಳೇ ಆಗಿವೆ. ಅವರು ಶೈವರಾಗಿದ್ದರಿಂದ ಇವುಗಳನ್ನು ರಾಜಾವಳಿ ಅಥವಾ ಶೈವ ಶಾಸನಗಳೆಂದು ಗುರುತಿಸಿಕೊಂಡು ಚರ್ಚಿಸಲಾಗಿದೆ.

ಪ್ರಾಚೀನ ಕರ್ನಾಟಕದ ಆದರ್ಶಕ್ಕನುಗುಣವಾಗಿ ಚಾಲುಕ್ಯ ರಾಜರೂ ಸಹ ದುಷ್ಟ ನಿಗ್ರಹ ಮತ್ತು ಶಿಷ್ಟ ಪರಿಪಾಲನೆಯನ್ನು ಧ್ಯೇಯವನ್ನಾಗಿಟ್ಟುಕೊಂಡು ರಾಜ್ಯಭಾರವನ್ನು ನಡೆಸಿದರೆಂದರೆ ತಪ್ಪಾಗಲಾರದು. ಸಾಮ್ರಾಜ್ಯಗಳನ್ನು ಕಟ್ಟುವುದು ಅರಸರ ಆಕಾಂಕ್ಷೆಯಾಗಿದ್ದುದರಿಂದ, ಸಾಮ್ರಾಟರು ಯೋಗ್ಯವಾದ ಬಿರುದುಗಳನ್ನು, ಪ್ರಶಸ್ತಿಗಳನ್ನು, ನಾಮಗಳನ್ನು ಧರಿಸುತ್ತಿದ್ದರು. ಬಾದಾಮಿ ಚಾಲುಕ್ಯ ವಂಶದ ರಾಜರನೇಕರು ಶ್ರೀ ಪ್ರಥ್ವೀವಲ್ಲಭ, ಶ್ರೀವಲ್ಲಭ, 'ವಲ್ಲಭ', ಸತ್ಯಾಶ್ರಯ, ಮಹಾರಾಜಾಧಿರಾಜ, ರಾಜಪರಮೇಶ್ವರ, ಪರಮಭಟ್ಟಾರಕ, ಸಮಸ್ತಭುವನಾಶ್ರಯ, ಸತ್ಯಾಶ್ರಯ ಕುಳತಿಳಕ, ಹೀಗೆ ಮುಂತಾದ ಬಿರುದುಗಳನ್ನು ತಮ್ಮ ಹೆಸರಿಗೆ ಸೇರಿಸಿಕೊಂಡು ರಾಜವಾಳುತ್ತಿದ್ದರು. ಕಲ್ಯಾಣದ ಚಾಲುಕ್ಯರೂ ಕೂಡ ಸಾಮ್ರಾಜ್ಯಶಾಹಿ ಸಂಕೇತದ ಬಿರುದುಗಳಲ್ಲದೆ,(ಮೇಲಿನ ಬಿರುದುಗಳ ಜೊತೆಗೆ) 'ಚಾಲುಕ್ಯಾಭರಣ' ಎಂಬ ವಿಶೇಷಣಗಳನ್ನು ಹೊಂದಿದ್ದರು. ಇಂತಹ ಬಿರುದುಗಳನ್ನು ಈ ಎಲ್ಲಾ ಶಾಸನಗಳಲ್ಲಿ ಉಲ್ಲೇಖಿಸುತ್ತವೆ.

ಕಲ್ಯಾಣದ ಚಾಲುಕ್ಯರು ಶಾಸ್ತ್ರೋಕ್ತವಾಗಿ ಪಟ್ಟಾಭಿಷಕ್ತರಾದ ಶುಭದಿನ, ದಾನ-ಧರ್ಮ, ದತ್ತಿಗಳನ್ನು ಕೈಗೊಳ್ಳುತ್ತಿದ್ದರು. ಕಲ್ಲೇಶ್ವರ ದೇವಾಲಯದ ಒಂದು ಶಾಸನದಲ್ಲಿ ಎರಡನೆಯ ತೈಲಪನನ್ನು ಶ್ರೀ ಪ್ರಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಶ್ರೀಮತ್ ಅಹವಮಲ್ಲದೇವ ಎಂಬ ಬಿರುದುಗಳನ್ನು ಹೊಂದಿದ್ದನೆಂದು ಉಲ್ಲೇಖವಾಗಿದೆ. ಇವನ ಜೊತೆಗೆ ಒಬ್ಬ ಮಹಾ ಸಾಮಂತನಿದ್ದನೆಂದು ಕಂಡುಬರುತ್ತದೆ. ಇವನು ತೈಲಪನ ಆಳ್ವಿಕೆಯಲ್ಲಿ ಆದಿತ್ಯ ದೇವರಿಗೆ ದಾನ ನೀಡಿದ

ನೆಂದು ವ್ಯಕ್ತವಾಗಿದೆ. ಆದಿತ್ಯ ಎಂದರೆ ಸೂರ್ಯದೇವ ಎಂದಾಗುತ್ತದೆ. ಬಾಗಳಿಯಲ್ಲಿ ಸೂರ್ಯದೇವಾಲವಿರುವುದರಿಂದ ಈ ದೇವರಿಗೆ ೬೦ ಕಮ್ಮ ತೋಟವನ್ನು ದಾನ ನೀಡಿದನೆಂದು ಹೇಳಬಹುದು. ಈ ಶಾಸನದಲ್ಲಿಯೂ ಸಹ ಸಮಸ್ತ ಭುವನಾಶ್ರಯ, ಸತ್ಯಾಶ್ರಯ ಕುಳತಿಳಕ, ಪರಮೇಶ್ವರ ಮಹಾರಾಜಾಧಿರಾಜ, ಪೃಥ್ವೀವಲ್ಲಭ, ಚಾಳುಕ್ಯಾಭರಣ' ಎಂದಿದ್ದು, ಇಮ್ಮಡಿ ಜಯಸಿಂಹನನ್ನು ಉಲ್ಲೇಖಿಸುತ್ತದೆ.[೨೨] ಇಲ್ಲಿ ಇವನ ಸಾಮಂತನಾದ ನೊಳಂಬ ಉದಯಾದಿತ್ಯನು ಪಂಪಾಪುರ ತೀರ್ಥಕ್ಕೆ ಹೋದಾಗ ನರಸಿಂಘಯ್ಯನು(ಪೆರ್ಗ್ಗಡೆ) ಬಾಗುಳಿಯ ಮಹಾಜನರ ಸಮ್ಮುಖದಲ್ಲಿ ತಪೋಧನರ ಸತ್ರಕ್ಕೆ, ಛಾತ್ರರ ಭೋಜನಕ್ಕೆ ಮತ್ತು ದೇವಾಲಯದ ಸೂಳೆಯರಿಗೆ, ಸೂಳೆವಾಳನಿಗೆ, ಪರಿಕಾರರಿಗೆ, ಪಾತ್ರಕ್ಕೆ, ದೇಸಿಗಛಾತ್ರಕ್ಕೆ, ಮೂರು ಕಾಲಕ್ಕೂ ನಡೆಸುವಂತೆ ಭೂಮಿಯನ್ನು ದಾನನೀಡಿದನು. ಒಟ್ಟಾರೆ ದೇವಾಲಯದ ಪ್ರತಿಯೊಂದು ಕಾರ್ಯಕಲಾಪಗಳು ಸರಾಗವಾಗಿ ಸಾಗುವಂತೆ ನೋಡಿಕೊಳ್ಳುತ್ತಾ, ದಾನ ನೀಡಿದನೆಂದು ಕಂಡುಬರುತ್ತದೆ. ಇದೇ ವಿವರವನ್ನು ಉಲ್ಲೇಖಿಸುವ ಇನ್ನೊಂದು ಶಾಸನ ಇಲ್ಲಿ ಕಂಡುಬರುತ್ತದೆ.

ಕಲ್ಲೇಶ್ವರ ದೇವಾಲಯದ ಆವರಣದ ಶಾಸನದಲ್ಲಿ ಇಮ್ಮಡಿ ಜಯಸಿಂಹನನ್ನು ಉಲ್ಲೇಖಿಸಿದ್ದು,[೨೩] ಸಮಸ್ತ ಬಿರುದಾವಳಿಗಳನ್ನು ಹೊಂದಿದ ಇವನ ಆಳ್ವಿಕೆಯಲ್ಲಿ, ಬಾಗಳಿಯ ಮಹಾಜನರು ಮತ್ತು ಇತರರು(ಸಬಾಳವೃದ್ಧಸಹಿತವಶೇಷಂ) ಕಲಿದೇವರ ದೇವಾಲಯದಲ್ಲಿ ನೆರೆದು(ಸೇರಿ) ಅಚ್ಚಿವಳ್ಳಿಯರ ಗಣಮಯ್ಯನ ತಮ್ಮ ನಾಯ್ಚಯ್ಯನ ಕೈಯಿಂದ, ಅಕ್ಕಸಾಲಿಗೆ ಆಯವಾಗಿ ಬಂದಿದ್ದ ಧಾನ್ಯಗಳೆಲ್ಲವನ್ನು(ಉಪ್ಪು ಮೊದಲು ಮಾಡಿ) ಪೊನ್ನಿಗೆ ಎರಡು ಬಳ್ಳ ಕೊಂಡುಕೊಳ್ಳಲು ೧೦೩ ಗದ್ಯಾಣವನ್ನು ಬಿಡಬೇಕೆಂದು ಹೇಳುತ್ತಾರೆ. ನಂತರ ಇವರ ಹುಟ್ಟುವಳಿಯಲ್ಲಿ ನಿತ್ಯವೂ ನಾಲ್ಕು ಜನರಿಗೆ ಸತ್ರವನ್ನು ನಡೆಸುವಂತೆ ದಾನ ನೀಡಬೇಕೆಂದು, ಅಕ್ಕಸಾಲಿಗೆ ಅಪ್ಪಣೆ ಮಾಡುತ್ತಾರೆ. ಹಾಗೆಯೇ ಕಲಿದೇವರ ಮುಂದಿನ ನಂದಾದೀವಿಗೆಗೆಯ ಸೇವೆಗಾಗಿ ಈ ಭೂಮಿಯಿಂದ ಬಂದ ಲಾಭವನ್ನು ಉಪಯೋಗಿಸಬಹುದೆಂದು ಬಾಗುಳಿಯ ಮಹಾಜನರು ಒಂದು ನಿರ್ಣಯವನ್ನು ಹೊರಡಿಸುತ್ತಾರೆ. ಈ ನಿರ್ಣಯದ ಪ್ರಕಾರ ಅಕ್ಕಸಾಲಿಗರು ಪ್ರತಿವರ್ಷ ದಾನ ನೀಡಬೇಕೆಂದು ಹೇಳಬಹುದು. ಕಲ್ಲೇಶ್ವರ ದೇವಾಲಯದ ನೈರುತ್ಯಕ್ಕಿರುವ ಈ ಶಾಸನವು ಇಮ್ಮಡಿ ಸೋಮೇಶ್ವರನನ್ನು ಉಲ್ಲೇಖಿಸಿದ್ದು[೨೪], ಇವನು ಸಹ ಬಿರುದುಗಳನ್ನು ಹೊಂದಿದ್ದು, 'ಭುವನೈಕ್ಯಮಲ್ಲ' ಎಂಬ ವಿಶೇಷ ಬಿರುದನ್ನು ಧರಿಸಿದ್ದನೆಂದು ಕಂಡುಬರುತ್ತದೆ. ಜೊತೆಗೆ ಇವನ ಸಾಮಂತ ಬಿರುದುಗಳು ಸಹ ಉಲ್ಲೇಖವಾಗಿವೆ. ಅವು ಅಲಂಕಾರವಾಗಿ ಉಲ್ಲೇಖವಾಗಿವೆ. ಅವುಗಳಲ್ಲಿ ಸಮಸ್ತಭುವನಸ್ತುತ, ಮಹಾಮಹಿಮೋಧಯೋಲ್ಲಸಿತ ಪಲ್ಲವಾನ್ವಯಂ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಕಾಂಚೀಪುರವರೇಶ್ವರಂ, ವಿದಗ್ಧವಿಳಾಸಿನಿ, ವಿಳೋನಚನ ಚೆಕೋರ ಚಂದ್ರಂ, ಪ್ರತ್ಯಕ್ಷದೇವೇಂದ್ರಂ, ವಿಕ್ರಾಂತಕಂಠಿರವ, ಮಂಡಳೀಕಭೈರವಂ, ಶರಣಾಗತವಜ್ರ ಪಂಜರಂ, ಚಾಳುಕ್ಯದಿಕ್ಕುಂಜರಂ,ವಂದಿಬೃಂದಸಂತರ್ಪ್ಪಣಂ, ವಿಜಯಲಕ್ಷ್ಮೀಕ ಮುಖದರ್ಪ್ಪಣಂ, ರಾಯ ಕುಮಾರ

ಚಮತ್ಕಾರಂ, ಸಾಹಸಾಳಂಕಾರಂ, ಕೀರ್ತಿವಲ್ಲರೀವಳಯಿತ, ತ್ರಿಲೋಕಂ, ಸತ್ಯಾವಲೋಕಂ, ರಾಜವಿದ್ಯಾಂಗನಾಭು ಜಂಗನಣ್ಣನಸಿಂಗ, ಶ್ರೀ ಮತ್ರೈಳೋಕ್ಯ ಮಲ್ಲನೊಳಂಬ ಪಲ್ಲವ ಪೆರ್ಮಾಡಿ' ಎಂದು ವಿಶೇಷಣಗಳಿಂದ ಕೂಡಿದ ಬಿರುದುಗಳನ್ನು ಇಲ್ಲಿ ಗಮನಿಸಬಹುದು. ಆದರೆ ಇಲ್ಲಿ ರಾಜನಿಗಿಂತ, (ಸಾಮಂತ)ಮಾಂಡಳೀಕನೇ ಹೆಚ್ಚು ಬಿರುದುಗಳನ್ನು ಹೊಂದಿದ್ದು, ಆಳ್ವಿಕೆ ಮಾಡಿರಬಹುದಾಗಿದೆ. ಇಲ್ಲಿ ಒಂದು ಪ್ರಶ್ನೆಯೂ ಉದ್ಭವವಾಗುತ್ತದೆ. 'ತ್ರೈಲೋಕ್ಯಮಲ್ಲ' ಎಂಬ ಬಿರುದು ಒಂದನೇ ಸೋಮೇಶ್ವರ ಹೊಂದಿದ್ದನು. ಅವನ ಸಾಮಂತ ಸಿಂಗಣ್ಣನಾಗಿದ್ದನು. ಸಾಮಂತರು ಹೆಚ್ಚಾಗಿ ತಮ್ಮ ರಾಜರ ಬಿರುದುಗಳ ಮುಂದೆ ತಮ್ಮ ಹೆಸರನ್ನು ಕರೆದುಕೊಂಡಿರುತ್ತಾರೆ. ಆದರೆ ಈ ಶಾಸನದಲ್ಲಿ ಉಲ್ಲೇಖವಾಗಿರುವ, 'ಭುವನೈಕ್ಯಮಲ್ಲ' ಎಂಬುದು ಇಮ್ಮಡಿ ಸೋಮೇಶ್ವರನ ಬಿರುದು. ಆದರೆ ಇವನ ಸಾಮಂತ 'ತ್ರೈಳೋಕ್ಯ ಮಲ್ಲನೊಳಂಬ' ಎಂಬ ಬಿರುದನ್ನು ಹೊಂದಿದ್ದಾನೆ. ಆದ್ದರಿಂದ ಇವನು ಯಾರ ಸಾಮಂತ ಎಂದು ಗುರುತಿಸುವುದು ಸ್ವಲ್ಪ ಕಠಿಣವೆ. ಏಕೆಂದರೆ ಒಂದನೇ ಸೋಮೇಶ್ವರ ಕ್ರಿ.ಶ.೧೦೬೮ ಮಾರ್ಚ್ ೯ ರಂದು ಮರಣವನ್ನಪ್ಪುತ್ತಾನೆ. ಅದೇ ವರ್ಷ ಅಂದರೆ ಕ್ರಿ.ಶ.೧೦೬೮ ಮೇ ೧೯ ರಂದು, ಇಮ್ಮಡಿ ಸೋಮೇಶ್ವರ ಅಧಿಕಾರ ವಹಿಸುತ್ತಾನೆ. ಆದರೆ ಶಾಸನ ಉಲ್ಲೇಖದಿಂದ, ಕಾಲದ ಆಧಾರಿದಿಂದ, 'ಭುವನೈಕ್ಯಮಲ್ಲ' ಎಂಬ ಬಿರುದಿನಿಂದ ಇವನನ್ನು ಇಮ್ಮಡಿ ಸೋಮೇಶ್ವರ ಎಂದು ಗುರುತಿಸಬಹುದು. ಆದರೆ ಸಾಮಂತ ತ್ರೈಳೋಕ್ಯಮಲ್ಲ' ಎಂಬ ಬಿರುದಿನೊಂದಿಗೆ ಉಲ್ಲೇಖವಾಗಿರುವುದರಿಂದ ಸ್ಪಷ್ಟತೆ ಕೊಡುವುದು ಕೊಂಚ ಕಠಿಣವೆ. ಇವನು ಇಮ್ಮಡಿ ಸೋಮೇಶ್ವರನ ಸಾಮಂತನಾಗಿದ್ದರೆ 'ಭುವನೈಕ್ಯಮಲ್ಲನೊಳಂಬಪಲ್ಲವ ಪೆರ್ಮಾಡಿ ಜಯಸಿಂಗ ದೇವ' ಎಂದಿರಬೇಕಿತ್ತು. ಏಕೆಂದರೆ ಬೇರೆ ಶಾಸನಗಳಲ್ಲೆಲ್ಲಾ ಒಂದನೆ ಸೋಮೇಶ್ವರ ಸಾಮಂತನಾಗಿದ್ದು, ತ್ರೈಳೋಕ್ಯನೊಳಂಬಪಲ್ಲವಪೆರ್ಮಾಡಿ ಎಂದು ಉಲ್ಲೇಖವಾಗಿದೆ. ಪ್ರಾಯಶಃ ಇಲ್ಲಿ ಯಾವುದೋ ಬಿರುದು ತಪ್ಪಾಗಿ ಉಲ್ಲೇಖವಾಗಿರಬಹುದು. ಇದಕ್ಕೂ ಮಿಗಿಲಾಗಿ ಹೇಳುವುದಾದರೆ ಜಯಸಿಂಗನು ಸಹ ಒಂದನೆ ಸೋಮೇಶ್ವರನ ಸಾಮಂತ, ನೊಳಂಬ ಪಲ್ಲವ ಪೆರ್ಮಾಡಿಯೂ ಸಹ ಒಂದನೇ ಸೋಮೇಶ್ವರನ ಸಾಮಂತನಾಗಿದ್ದನು. ಇಲ್ಲಿ ಮಾಂಡಳೀಕನಾದ ನೊಳಂಬ ಪಲ್ಲವ ಪೆರ್ಮಾಡಿಯ ಆಳ್ವಿಕೆಯಲ್ಲಿ ಬಾಗುಳಿಯ ಐವತ್ತು ಮಹಾಜನರು ನೆರೆದಿದ್ದು, ಬ್ರಾಹ್ಮಣರ ಭೂಮಿಯನ್ನು ಶೂದ್ರನು ಮಾಡುತ್ತಿರಲು ಅದಕ್ಕೆ ಪ್ರತಿಯಾಗಿ ಪ್ರತಿವರ್ಷ ವೀಸಕ್ಕೆ ಮೂರು ಪಣವನ್ನು ನೀಡುವಂತೆಯೂ, ಈ ಹಿಂದೆ ನಿಗಧಿ ಪಡಿಸಿದ್ದ ೫೨ ಗದ್ಯಾಣವನ್ನು ಇತರರು ದುರುಪಯೋಗ ಪಡಿಸಿಕೊಳ್ಳುತ್ತಿರಲು(ಪೆರರುಣುತಿರೆ) ಅದನ್ನು ತೋಣಕಲಿಯ ಮಹಾದೇವಯ್ಯನು ಪಡೆದುಕೊಂಡು, ಸಾಮ್ಯಮೆನ್ನದೆ, ಹಿರಿಯ ಕೆರೆಗೆ ದಾನ ನೀಡಬೇಕೆಂದು ತೀರ್ಮಾನಕ್ಕೆಗೊಳ್ಳುತ್ತಾರೆ. ಇದು ಸಾಮಂತನ ಒಡೆತನದಲ್ಲಿ ನಡೆದಿರುತ್ತದೆ. ಕಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಶಾಸನದಲ್ಲಿ ಮಲ್ಲನ)ಆರನೆ ವಿಕ್ರಮಾದಿತ್ಯನನ್ನು ಸಮಸ್ತ ಬಿರುದು ಗಳೊಂದಿಗೆ ಉಲ್ಲೇಖಿಸುತ್ತದೆ.[೨೪] ಇವನನ್ನು ಮೊರಬ್ ಶಾಸನವೊಂದರಲ್ಲಿ ತ್ರೈಲೋಕ್ಯಮಲ್ಲ, ವೀರನೊಳಂಬ,

ಪಲ್ಲವಪೆರ್ಮಾಡಿ ಎಂದು ಕರೆಯಲಾಗಿತ್ತೆಂದು[೨೫] ಉಲ್ಲೇಖ ಬರುತ್ತದೆ. ಇಲ್ಲಿ ಇವನ ದಂಡನಾಯಕನಾದ ಮುದ್ದರಸನು ಬಾಳ್ಗುಳಿಯ ಶಿವಶಕ್ತಿಪಂಡಿತರ ಕಾಲನ್ನು ತೊಳೆದು ಊರಿನ ಐವತ್ತು ಮಹಾಜನರ ಸಮ್ಮುಖದಲ್ಲಿ ಕಲಿದೇವರ ನೈವೇದ್ಯಕ್ಕೆ ಹಾಗೂ ನಂದಾದೀವಿಗೆಗೆ ತಿಂಗಳಿಗೆ ಎರಡು ಎಲೆ ಹೇರಿನ ಸುಂಕ, ೧೨ ಪಣವನ್ನು ದಾನ ನೀಡಬೇಕೆಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ. ಇದರಲ್ಲಿ ಪೂಜಾರಿಗೆ ಎರಡು ಪಣ, ಪುರಾಣ ಓದುವವನಿಗೆ ಒಂದು, ಹೂವಿನ ತೋಟಕ್ಕೆ ಪಣ ಎರಡರಂತೆ ವ್ಯಯಿಸಬೇಕೆಂಬ ನಿಬಂಧನೆ ಮಾಡಿರುತ್ತಾನೆ. ಕಲ್ಲೇಶ್ವರ ದೇವಾಲಯದ ಶಾಸನದಲ್ಲಿಯೂ ಅವನನ್ನು ಅದೇ ಬಿರುದಾವಳಿಗಳಿಂದ ಉಲ್ಲೇಖಿಸಿದ್ದು, ಇವನ ದಂಡನಾಯಕ ಬಮ್ಮರಸನಿದ್ದನೆಂದು ಕಂಡುಬರುತ್ತದೆ.[೨೬] ವಿಕ್ರಮಾದಿತ್ಯ ಕಾಲದಲ್ಲಿ ಚಾಲುಕ್ಯ ಸಾಮ್ರಾಜ್ಯದ ಅನೇಕ ಭಾಗಗಳು ಮಾಂಡಲೀಕರಿಂದ ಆಳಲ್ಪಡುತ್ತಿದ್ದವು. ಬನವಾಸಿ, ಶಾಂತಲಿಗೆ ಹಾಗು ಹಂದಿನೆಂಟು ಅಗ್ರಹಾರಗಳಿಗೆ ಕ್ರಿ.ಶ.೧೦೭೬ರಲ್ಲಿ ಬರ್ಮದೇವರಸನು ಮಾಂಡಲೀಕನಾಗಿದ್ದರಿಂದ, ಇಲ್ಲಿಯೂ ಸಹ ದಂಡನಾಯಕನಾಗಿ ಹಿರಿಯ ಕರೆಯ ಕೆಲಸಕ್ಕೆ ಪನ್ನಾಯದ ಸುಂಕದಲ್ಲಿ ತಿಂಗಳಿಗೆ ಒಂದು ಗದ್ಯಾಣ ಹೊನ್ನನ್ನು ಬಾಳ್ಗುಳಿಯ ಮಹಾಜನರ ಕಾಲನ್ನು ತೊಳೆದು ಸ್ವಯಂಭು ಕಲಿದೇವರ ಸನ್ನಿದಾನಕ್ಕೆ ನೀಡುತ್ತಾನೆ. ಅಂದರೆ 'ಹಿರಿಯ ಕರೆಯ ಕೆಲಸಕ್ಕೆ ಪ(ಂ)ನ್ನಾಯದ ಸುಂಕದೊಳಗೆ ತಿಂಗಳಿಗೆಯೊಂದು ಗದ್ಯಾಣ ಪೊನ್ನಿನಲ್ಲಿ ನಡೆವುದು' ಎಂದು ವ್ಯಕ್ತವಾಗಿದೆ. ಇದು ಸಹ ವಿಕ್ರಮಾದಿತ್ಯನನ್ನು ಬಿರುದಾವಳಿಗಳಿಂದ ಉಲ್ಲೇಖಿಸಿದ್ದು,[೨೭] ಸಾಮಂತನಾದ ವೀರಪಾಂಡನನ್ನು ಕೂಡ ಸಮಸ್ತ ಬಿರುದುಗಳಿಂದ ಉಲ್ಲೇಖಿಸಿರುವುದನ್ನು ಕಾಣಬಹುದು. ಸಾಮಂತನ ಆಳ್ವಿಕೆಯಲ್ಲಿ ವಡ್ಡವ್ಯವಹಾರಿ ಕುಮಾರಮೂರ್ಕ್ಕನು ಸ್ವಯಂಭೂ ಕಲಿದೇವರ ನಂದಾವೀವಿಗೆಗೆ ಐದು ಗದ್ಯಾಣವನ್ನು ನೀಡಿ, ತನಗೆ ಅದರ ಬಡ್ಡಿಯಲ್ಲಿ ಬಂದ ಆದಾಯವನ್ನು ನಂದಾದೀವಿಗೆ ನಡೆಯುವ ವ್ಯವಸ್ಥೆ ಮಾಡುತ್ತಾನೆ. ಇನ್ನು ಈ ಶಾಸನದಲ್ಲಿ 'ಸಮಸ್ತ' ಪ್ರಶಸ್ತಿಸಹಿತ, ಶ್ರೀಮನ್ಮಹಾಮಂಡಳೇಶ್ವರಂ, ವಿಜಯಪಾಂಡ್ಯದೇವರು' ಎಂದು ಉಲ್ಲೇಖವಾಗಿದೆ. ಶಾಸನ ತ್ರುಟಿತವಾಗಿರುವುದರಿಂದ ಸರಿಯಾದ ಮಾಹಿತಿ ದೊರೆತಿಲ್ಲ. ಮಹಾಜನರು ನೀಲೇಶ್ವರ ದೇವರಿಗೆ, ಪೂಜೆಗೆ, ನಂದಾದೀಪಕ್ಕೆ ತೋಟವನ್ನು ೬೦ ಕಮ್ಮ ದಾನ ಬಿಡುತ್ತಾರೆ ಎಂದು ಕಂಡುಬರುತ್ತದೆ. ಈ ಶಾಸನದಲ್ಲಿ ತ್ರಿಭುವನಮಲ್ಲನೊಂದಿಗೆ, ವೀರಪಾಂಡ್ಯಸಾಮಂತನನ್ನು ಬಿರುದುಗಳೊಂದಿಗೆ ಉಲ್ಲೇಖಿಸುತ್ತದೆ.[೨೮] ಇಲ್ಲಿಸಾಮಂತನ ಆಳ್ವಿಕೆಯಲ್ಲಿ, ವಡ್ಡವ್ಯವಹಾರಿ ಪೂನ್ಮೂರ್ಖಸೆಟ್ಟಿಯು ಶಿವಶಕ್ತಿಪಂಡಿತನ ಕಾಲನ್ನು ತೊಳೆದು ಕಲಿದೇವ ಸ್ವಾಮಿಯ ನಂದಾದೀವಿಗೆಗೆ ೧೪ ಗದ್ಯಾಣವನ್ನು ದಾನ ನೀಡುತ್ತಾನೆ.

ಮಳೆ ಮಲ್ಲಪ್ಪದೇವಾಲಯದಲ್ಲಿರುವ ಶಾಸನದಲ್ಲಿ ಇವರನ್ನೇ ಬಿರುದಾವಳಿಗಳೊಂದಿಗೆ ಉಲ್ಲೇಖಿಸಿದ್ದು, ಇಲ್ಲಿ ಸ್ತ್ರೀಯು ದಾನ ನೀಡಿದಳೆಂದು ಕಂಡುಬರುತ್ತದೆ. ಅಂದರೆ ಯಲೆಕೆಲಬೊಜಂಗರ ಈಶ್ವರಯ್ಯನ ಮಾಚಕ್ಕ ಎಂಬುವಳು ಬಾಳ್ಗುಳಿಯ ಐವತ್ತು ಮಹಾಜನರ ಸಮ್ಮುಖದಲ್ಲಿ ಶಿವಶಕ್ತಿ ಪಂಡಿತರ 'ಕಾಲಂ

ಕರ್ಚಿ' ಕಲಿದೇವರ ನೈವೇದ್ಯಕ್ಕೆ ೨೦ ಗದ್ಯಾಣವನ್ನು ದಾನ ಬಿಡುತ್ತಾಳೆಂದು ತಿಳಿಸುತ್ತದೆ.[೨೯] ಇದು ಕೂಡ ವಿಕ್ರಮಾದಿತ್ಯನನ್ನು ಸಾಮಂತ ವೀರಪಾಂಡ್ಯನನ್ನು ಬಿರುದುಗಳೊಂದಿಗೆ ಉಲ್ಲೇಖಿಸಿದೆ. ಆದರೆ ಇಲ್ಲಿ ವೀರಪಾಂಡ್ಯನ ದಂಡನಾಯಕ ತಿಕ್ಕಭಟ್ಟ ಎಂದು ಬಂದಿದೆ.[೩೦] ಇವನು ಸ್ಥಾನಿಕರ ಮತ್ತು ಬಾಗುಳಿಯ ಐವತ್ತು ಮಹಾಜನರ ಸಮ್ಮುಖದಲ್ಲಿ ದೇವರಗ್ರಾಸನಕ್ಕೆ ಸತ್ರದಲ್ಲಿ ದಿನವೂ ಐವರ ಊಟಕ್ಕೆ ಆಗಿ, ಮಿಕ್ಕಿದ್ದನ್ನು ಊರಿನ ಇತರರಿಗೆ ಹಂಚಿ, ತನಗೆ ಬಂದ ಆದಾಯದಲ್ಲಿ ಊರಿನ ಹಿರಿಯಕೆರೆಯ ಕೆಲಸಕ್ಕೆ ಉಪಯೋಗಿಸಲು ಒಂದು ಹೇರಿಗೆ ಒಂದು ಹಾಗ ಮತ್ತು ಮುನ್ನಡೆಕೆಲಸಕ್ಕೆ ಒಂದು ಪಾಗಮಲ್ಲದೆ, ಮತ್ತೊಂದು ಪಾಗಮುಂ, ಲಾವಣಿಗೆಯರಿಗೆ ಒಂದು ಪಣ, ಬ್ರಹ್ಮಜಿನಾಲಯದ ನೈವೇದ್ಯಕ್ಕೆ ತಿಂಗಳಿಗೆ ಎರಡು ಪಣವನ್ನು, ತಾನಲ್ಲದೆ ಶಿವಮಯ್ಯ ಎಂಬುವವನ ಕೈಯಿಂದ ದಾನ ಕೊಡಿಸುತ್ತಾನೆ. ಕಲ್ಲೇಶ್ವರ ದೇವಾಲಯದ ಪಶ್ಚಿಮದಲ್ಲಿಯ ಶಾಸನದಲ್ಲಿಯೂ ಸಹ ಈರ್ವರನ್ನು ಬಿರುದುಗಳಿಂದ ಉಲ್ಲೇಖಿಸಿದ್ದು, ವೀರಪಾಂಡ್ಯನ ಸಾಮಂತನಾದ ಬನ್ನಿಗೋಳದ(ಪ್ರಭುವರಸ) ಸೋಮರಸನನ್ನು ಬಿರುದುಗಳಿಂದ ಉಲ್ಲೇಖಿಸುತ್ತದೆ.[೩೧] ಮಹಾಸಾಮಂತಾಧಿಪತಿ, ಮಹಾಪ್ರಚಂಡದಂಡನಾಯಕ, ಮಹಾಪ್ರಧಾನ ದಂಡನಾಯಕ ಹೀಗೆ ಮುಂತಾದ ಬಿರುದುಗಳೊಂದಿಗೆ ಉಲ್ಲೇಖಿಸಿದ್ದು, ಇವನು ವಡ್ಡರಾವುಳದ ಸುಂಕವನ್ನಾಳುತ್ತಿದ್ದು, ವಡ್ಡರಾವುಳ ಸುಂಕದ ಲಕ್ಷದಲ್ಲಿ ದೇವರಗ್ರಾಸನಕ್ಕೆ, ಸತ್ರಕ್ಕೆ, ಆರುಪಣದ ಮುಪ್ಪಾಗದಲ್ಲಿ, ಒಂದು ಪಾಗವನ್ನು ದಾನ ನೀಡುತ್ತಾನೆ. ಇವನು ಸಹ ರಾಜನಷ್ಟೇ ಪ್ರಾಮುಖ್ಯತೆಯನ್ನು ಪಡೆದಿದ್ದನು. ಅದೇ ಅವರಣದ ಶಾಸನವು ಇಬ್ಬರನ್ನು ಸಮಸ್ತಪ್ರಶಸ್ತಿ, ಬಿರುದುಗಳೊಂದಿಗೆ ಉಲ್ಲೇಖಿಸಿದ್ದು,[೩೨] ವಶಿಷ್ಟಗೋತ್ರದ ಮಾರ್ತಡಯ್ಯನ ಮಗ, ದಾಸಯ್ಯನಾಯಕನು ಮಹಾಜನರ ಅಪ್ಪಣೆ ಪಡೆದು ಸರ್ವಭಾದೆಪರಿಹಾರ(ಂ) ಮ್ಮಾನ್ಯಮಾಗೆ, ಖಣ್ಡಕಕ್ಕೆ(ವೇದಶಾಸ್ತ್ರಗಳನ್ನು ಹೇಳುವವರು) ಬಿಟ್ಟ ಕರ್ಮಣ್ಯಗೇರಿಯ ಎರೆಯ ಹಸಲು, ೧೨ ಮತ್ತರ, ಮತ್ತು ಈ ಖಣ್ಡಕವನ್ನು ಪ್ರತಿವರ್ಷ ಹೇಳುವವರಿಗೆ ೩೦೦ ಕಮ್ಮ ಭೂಮಿಯನ್ನು ದಾನ ನೀಡುತ್ತಾನೆ. ಹಾಗೆಯೇ ಈ ಶಾಸನದಲ್ಲಿ ಬಿರುದುಗಳೊಂದಿಗೆ ರಾಜನನ್ನು ಉಲ್ಲೇಖಿಸಿದ್ದು,[೩೩] ಮನ್ನೆಯ ಕೆರೆಯ ನೆಲೆವೀಡಿನೊಳು ಸುಖದಿಂದ ಆಳುತ್ತಿರಲು, ಇವನ ಸಾಮಂತನಾದ ವೀರಪಾಂಡ್ಯದೇವನು ಆಡಳಿತವನ್ನು ನೋಡಿಕೊಳ್ಳುತ್ತಿದ್ದನು.(ಬಿರುದಾವಳಿಗಳೊಂದಿಗೆ) ಇಲ್ಲಿ ವಿಷ್ಣುಗೋತ್ರದ ಗುಜ್ಜರ(ಸಾಂತಿ) ಶಾಂತಿಕಟ್ಟೆಯು ಬಾಗಳಿಯ ಐವತ್ತು ಮಹಾಜನರ ಸಮ್ಮುಖದಲ್ಲಿ ಪಂಡಿತರ ಕಾಲನ್ನು ತೊಳೆದು, ಕಲಿದೇವರ ನೈವೇದ್ಯಕ್ಕೆ ಹಾಗು ಪುರಾಣ ಹೇಳುವ(ಓದುವ) ಉಪಾಧ್ಯಾಯರಿಗಾಗಿ ೩೦ ಕಮ್ಮ ತೋಟವನ್ನು ದಾನ ನೀಡುತ್ತಾನೆ.[೩೪] ಇದರಿಂದ ರಾಜರೊಂದಿಗೆ ಸ್ತ್ರೀಯರು ಸಹ ದಾನ, ಧರ್ಮಗಳನ್ನು ಬಿಡುತ್ತಿದ್ದರೆಂದು ಕಂಡುಬರುತ್ತದೆ.

ಅದೇ ಶಾಸನದಲ್ಲಿ ಎರಡನೆ ಜಗದೇಕಮಲ್ಲನನ್ನು ಪ್ರಾರಂಭದಲ್ಲಿ 'ಶ್ರೀ ಮತ್‌ಚ್ಯಾಳ್ಯಕ್ಯಪ್ರತಾಪ ಚಕ್ರವರ್ತ್ತಿ' ಎಂಬ ಬಿರುದಿನಿಂದ ಉಲ್ಲೇಖಿಸುತ್ತದೆ.[೩೫] ಈ ಬಿರುದಿನಿಂದ ಶಾಸನ ಪ್ರಾರಂಭವಾಗುತ್ತದೆ. ಶಾಸನದ ಕೆಳಗಿನ ಭಾಗ ತ್ರುಟಿತವಾಗಿರುವುದರಿಂದ ವಿವರಣೆ ಸ್ಪಷ್ಟವಿಲ್ಲ. ಅಲ್ಲಿಯ ಶಾಸನದಲ್ಲಿ ವಿಶ್ವಾಮಿತ್ರಗೋತ್ರದ ಕಾಳಿಮಯ್ಯನ ಮಗನಾದ ಸೋಮಣ್ಣನು ಕಲಿದೇವರ ಸೇವೆಗಾಗಿ, ಮತ್ತು ದೇವರ ಗ್ರಾಸನಕ್ಕೆ ಬಿಟ್ಟ ಕಮ್ಮ ಎಂದು ಉಲ್ಲೇಖವಾಗಿದೆ. ಇವನು ಯಾರೆಂದು ಉಲ್ಲೇಖಿಸುವುದಿಲ್ಲ. ಆದರೆ ಜಗದೇಕಮಲ್ಲನ ಆಳ್ವಿಕೆಯಲ್ಲಿ ಕಾಳಿಮರಸ ಅಥವಾ ಕಾಳಿದಾಸ ಎಂಬ ದಂಡನಾಯಕನಿದ್ದನು. ಅವನೆ ಈ ಕಾಳಿಮಯ್ಯನಾಗಿರಬಹುದು. ಏಕೆಂದರೆ ಶಾಸನದ ಹೆಚ್ಚಿನ ಭಾಗ ತ್ರುಟಿತವಾಗಿರುವುದರಿಂದ ಸರಿಯಾದ ಮಾಹಿತಿ ಒದಗುವುದಿಲ್ಲ. ಜಗದೇಕಮಲ್ಲನ ಇನ್ನೊಂದು ಶಾಸನ ಇಲ್ಲಿ ಕಂಡುಬರುತ್ತದೆ.[೩೬] ಆದರೆ ಅದು ಶೈವ ಶ್ಲೋಕದಿಂದ ಪ್ರಾರಂಭವಾಗಿ, ನಂತರ ಬಿರುದಾವಳಿಗಳನ್ನು ಉಲ್ಲೇಖಿಸುತ್ತದೆ. ಈ ಶಾಸನವು ವಿಕ್ರಮಾದಿತ್ಯ ಮತ್ತು ಸಾಮಂತನಾದ ವೀರಪಾಂಡ್ಯನನ್ನು ಬಿರುದಾವಳಿಗಳಿಂದ ಉಲ್ಲೇಖಿಸಿದ್ದು, ಕಾಲದ ಭಾಗ ತ್ರುಟಿತಾಗಿದೆ.[೩೭] ಬಿರುದಾವಳಿಗಳಿಂದ, ಮತ್ತು ತ್ರಿಭುವನಮಲ್ಲ ಎಂದು ಉಲ್ಲೇಖವಾಗಿರುವುದರಿಂದ, ವಿಕ್ರಮಾದಿತ್ಯನ ಕಾಲವೆಂದು ಗುರುತಿಸಲಾಗಿದೆ. ಇಲ್ಲಿ ಸಾಮಂತ ಆಳ್ವಿಕೆಯಲ್ಲಿ ಕಾಳಿಮಯ್ಯನೆಂಬುವವನು ಬ್ರಾಹ್ಮಣರ ಭೋಜನಕ್ಕೆ, ಬಾವಿಗೆ, ಅರವಟ್ಟಿಗೆಗೆ, ಸತ್ರಕ್ಕ ೪೫೦ ಕಮ್ಮ ಭೂಮಿಯನ್ನು ದಾನ ನೀಡಿರು ವುದಾಗಿ ಕಂಡುಬರುತ್ತದೆ. ಕಾಳಿಮಯ್ಯನೆಂಬುವವನು ವಿಕ್ರಮಾದಿತ್ಯನ ಪ್ರಸಿದ್ಧ ದಂಡಾಧಿಪತಿಯಾಗಿದ್ದನು.

ಹೀಗೆ ಚಾಲುಕ್ಯರು ಸಮಸ್ತ ಬಿರುದು, ಪ್ರಶಸ್ತಿಗಳೊಂದಿಗೆ, ದಾನ ಧರ್ಮಗಳನ್ನು ಕೈಗೊಂಡಿದ್ದರು. ಆದರೆ ಚಾಲುಕ್ಯರ ಅರಸರು ಹೆಚ್ಚಾಗಿ ಎಲ್ಲರೂ ಒಂದೇ ಬಿರುದುಗಳನ್ನು ಹೊಂದಿರುವುದರಿಂದ ಕೆಲವೊಂದು ಸಾರಿ ಪ್ರಶ್ನೆಗಳು ಉದ್ಭವಿಸುತ್ತವೆ. ಇಲ್ಲಿಯ ಬಹುತೇಕ ಶಾಸನಗಳಲ್ಲಿ ಸಮಸ್ತಭುವನಾಶ್ರಯ ಎಂಬ ಬಿರುದಿನೊಂದಿಗೆ ಉಲ್ಲೇಖವಾಗಿರುವುದನ್ನು ನೋಡಬಹುದಾಗಿದೆ.

೨. ವೈಷ್ಣವ ಶಾಸನಗಳು

ಶಾಸನಗಳು ಶೈವವಾಗಿದ್ದರೆ ಶಿವಸ್ತುತಿಯಿಂದಲೂ ವೈಷ್ಣವವಾಗಿದ್ದರೆ ವಿಷ್ಣುಸ್ತುತಿಯಿಂದಲೂ ಪ್ರಾರಂಭವಾಗುತ್ತದೆ. ವೈಷ್ಣವ ಶಾಸನಗಳಲ್ಲಿ ಈ ಸ್ತುತಿಯಿಂದ ಪ್ರಾರಂಭವಾಗುತ್ತದೆ.

ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣ್ಣವಂ|
ದಕ್ಷಿಣೋನ್ನತದಂಷ್ಟ್ರಾಗ್ರವಿಶ್ರಾಂತ ಭುವನಂ ವಪು:||

ಎಂಬ ಶ್ಲೋಕದೊಂದಿಗೆ ವಿಷ್ಣುವನ್ನು ಸ್ಮರಿಸುವಂತೆ ಉಲ್ಲೇಖಿಸುತ್ತವೆ. ಚನ್ನಕೇಶವ ದೇವಾಲಯದಲ್ಲಿರುವ ಶಾಸನ, ದೊಡ್ಡದಾಗಿದ್ದರೂ ಬಹುಪಾಲುಭಾಗ ತ್ರುಟಿತವಾಗಿದೆ. ಇಲ್ಲಿ ಜಗದೇಕಮಲ್ಲನನ್ನು ಉಲ್ಲೇಖಿಸಿದ್ದು, ಇವನ ಸಾಮಂತ ಪಾಂಡ್ಯದೇವನು ಆಳುತ್ತಿದ್ದನೆಂದು ಕಂಡುಬರುತ್ತದೆ.[೩೮] ನಂತರದ ಮುಂದುವರಿದ

ಭಾಗದಲ್ಲಿ ವೀರಕೇಶವದೇವರಿಗೆ ದೇವರ ಪುರಾಣವೃತ್ತಿಗೆ, ಆಯಿಂದ್ರಕ್ಕೆ ಪೊಂಗೆ(ಪೊನ್ನಿಗೆ) ಎರಡು ಗದ್ಯಾಣವನ್ನು ಬಾಗಳಿಯ ಮಹಾಜನರು ದಾನಬಿಡುತ್ತಾರೆ ಎಂದು ಉಲ್ಲೇಖವಾಗಿದೆ. ಅಂದರೆ ವೀರಕೇಶವ ಪುರಾಣವೃತ್ತಿಗೆ ಆರು, ಅಯಿಂದ್ರಕ್ಕೆ ನಾಲ್ಕು ಹೊನ್ನ(ಬಂಗಾರ) ಕೊಡುವರೆಂದು ತಿಳಿಸುತ್ತದೆ. ಇಲ್ಲಿ ಬಂಗಾರವನ್ನು ಸಹ ದಾನ ನೀಡಿದರೆಂದು ಕಂಡುಬರುತ್ತದೆ. ವಿಷ್ಣುವಿನ ಆರಾಧಕರಾಗಿದ್ದ ಬಾಗಳಿಯ ಮಹಾಜನರು ನಾಡು(ಬಾಗಳಿ) ಶ್ರೀಮಂತಿಕೆಯಿಂದ ಕೂಡಿತ್ತೆಂದು ಹೇಳಬಹುದು. ಈ ಶಾಸನದಲ್ಲಿ[೩೯] ಮೊದಲಿನ ಅಕ್ಷರಗಳು ತ್ರುಟಿತವಾಗಿವೆ. ನಂತರ ಸಾಲಿನಲ್ಲಿ ಭೂತ್ವೈಲೋಕೋ ಪರರ(ಂ) ಮ್ಯೋವಳನ ಭರಮತಿಕ್ಲೋಭೀತಾಂಭೋದಿತೋಯ ಎಂದಿದ್ದು, ಮುಂದಿನ ಭಾಗ ತ್ರುಟಿತವಾಗಿದೆ. ಆದ್ದರಿಂದ ಈ ಒಂದೇ ಸಾಲಿನಿಂದ ಇದನ್ನು ವಿಷ್ಣುವಿನ ಸುತ್ತಿಯೆಂದು, ವೈಷ್ಣವ ಶಾಸನವೆಂದು ಗುರುತಿಸಬಹುದು. ಆದರೆ ಈ ಶಾಸನದಲ್ಲಿ ತ್ರೈಲೋಕ್ಯಮಲ್ಲ ಎಂದು ಉಲ್ಲೇಖವಾಗಿರುವುದರಿಂದ ಒಂದನೆ ಸೋಮೇಶ್ವರನ ಆಳ್ವಿಕೆಯನ್ನು ಗುರುತಿಸಬಹುದು. ಇವನ ಮಹಾಸಾಮಂತನೊಬ್ಬ(ಹೆಸರು ಹಾಳಾಗಿದೆ) ಮತ್ತು ಪಳಿಯಣ್ಣನಾಲ್ಸಾಸಿರವನ್ನು ಆಳುತ್ತಿದ್ದು ೧೨ ಮತ್ತರ ಭೂಮಿಯನ್ನು ದಾನ ನೀಡಿದನೆಂದು ಕಂಡುಬರುತ್ತದೆ. ಆದರೆ ಯಾರಿಗೆ ಎಂದು ತಿಳಿಯುವುದಿಲ್ಲ. ಇನ್ನು ಈ ಶಾಸನ[೪೦] ಮೇಲೆ ಹೇಳಿದ ಶ್ಲೋಕಕ್ಕೆ, ಬದಲಾಗಿ ಸ್ವಲ್ಪ ಭಿನ್ನತೆಯಿಂದ ಪ್ರಾರಂಭವಾಗುತ್ತದೆ.

ಜಯಂತಿಬಾಣಾ ಸುರಮೌಲಾಲಿತಾ ದಶಾವಚೂಡಾ
ಮಣಿಚಕ್ರಚುಂಬಿನಃ, ಸುರಾಸುರಾಧಿಶಶಿಖಾ
ನ್ತಶಾಯಿನೋಭವಚ್ಛಿದತ್ರ್ಯಂಬಕಪಾದಪಾಂಸವ
ಕಲೀಶ ನಮಾದೀತ್ಯ ಹರ್ನ್ನಿಶಂ ಸಂಭವೇತ್

ಎಂಬ ವಿಷ್ಣುವಿನ ಶ್ಲೋಕದಿಂದ ಪ್ರಾರಂಭವಾಗುತ್ತದೆ. ಇದು ವಿಕ್ರಮಾದಿತ್ಯನನ್ನು ಉಲ್ಲೇಖಿಸಿದ್ದು ಇವನ ಸಾಮಂತ ಪಾಂಡ್ಯದೇವ ಆಳ್ವಿಕೆಯಲ್ಲಿ ಬಾಗುಳಿಯ ಐವತ್ತು ಮಹಾಜನರ ಸಮ್ಮುಖದೊಂದಿಗೆ ಅರಸಿಕೆರೆಯ ಕಲಿಯಮಗೌಡನ ಮಗಳು ಮತ್ತು ಪಿರಿಯಾಡಪೆರ್ಗ್ಗಡೆಯ ಹೆಂಡತಿಯಾದ ಬಾಚಲದೇವಿಯು ಶೈವರಾದ ಕಲಿದೇವರಿಗೆ ಪೂಜೆ ಮುಂತಾದ ಕಾರ್ಯಗಳಿಗೆ ದಾನನೀಡಿದರೆಂದು ಉಲ್ಲೇಖವಾಗಿದೆ. ಆದರೆ ಶಾಸನದ ಆರಂಭದಲ್ಲಿ ವಿಷ್ಣುವನ್ನು ಸ್ತುತಿಸಿದ್ದು, ಶಾಸನದ ಕೊನೆಯ ಭಾಗದಲ್ಲಿ ಕಲಿದೇವರ ಪೂಜಾಕಾರ್ಯಗಳಿಗೆ ದಾನ ನೀಡಿದರು ಎಂದು ಬಂದಿರುವುದರಿಂದ, ವಿಷ್ಣುವಿನ ಜೊತೆಗೆ ಶಿವನನ್ನು ಸಹ ಆರಾಧಿಸುತ್ತಿದ್ದರೆಂದು ಕಂಡುಬರುತ್ತದೆ. ಇಲ್ಲಿ ಅರಸಿಕೆರೆಯ ಗೌಡ ಎಂದು ಉಲ್ಲೇಖವಾಗಿದೆ. ಈ ಅರಸಿಕೆರೆಯ ಹರಪನಹಳ್ಳಿ ತಾಲೂಕಿನ ಒಂದು ಗ್ರಾಮ, ಇದು ಮೊದಲು ಬಾಗಳಿಯ ಆಡಳಿತಕ್ಕೆ ಒಳಪಟ್ಟಿತ್ತು. ಈ ಅರಸಿಕೆರೆಯ ಕಲಿಯಮಗೌಡನ ಮಗಳು, ಅಳಿಯಂದಿರು ಸೇರಿ ದೇವರಿಗೆ ದಾನ ನೀಡಿದರೆಂದು ಬರುವುದರಿಂದ, ಇವನ ಅರಸಿಕೆರೆಯ ಪ್ರಮುಖರಲ್ಲಿ ಮುಖ್ಯವಾದ ಗೌಡಿಕೆಯನ್ನು

ಹೊಂದಿದ್ದು, ಒಬ್ಬ ದೊಡ್ಡ ವ್ಯಾಪಾರಸ್ಥನಾಗಿದ್ದನೆಂದು ಹೇಳಬಹುದು. ಇವರು ವ್ಯಾಪಾರದಲ್ಲಿ ಬಂದ ಲಾಭದಲ್ಲಿ ದಾನವನ್ನು ಕೈಗೊಳ್ಳುತ್ತಿದ್ದರು. ಇನ್ನು ಈ ಶಾಸನದಲ್ಲಿ[೪೧] ವೈಷ್ಣವ ಶ್ಲೋಕವನ್ನು ಉಲ್ಲೇಖಿಸಿದ್ದರೂ, ವಿಷ್ಣುವನ್ನು 'ಶ್ರೀನಾರಿ ಪ್ರಿಯ'... ಎಂಬ ಸ್ತುತಿಯೊಂದಿಗೆ ಹೊಗಳಿರುವುದು ಕಂಡುಬರುತ್ತದೆ. ಶಾಸನದ ಬಹುಭಾಗ ವಿಷ್ಣುವಿನ ಹೊಗಳಿಕೆಯಿಂದ ಕೂಡಿದ ಸಾಲುಗಳಾಗಿವೆ. ವಿಷ್ಣುವನ್ನು ಶಾಸನದ ಮೊದಲಲ್ಲಿ ಸ್ತುತಿಸಿದ್ದು, ವಿಷ್ಣುದೇವರಿಗೆ ದಾನ ನೀಡಿರುವುದು ಕಂಡುಬರುತ್ತದೆ. ಉಳಿದ ಶಾಸನಗಳು ವಿಷ್ಣುವನ್ನು ಸ್ತುತಿಸಿದ್ದರೂ ಶಿವನಿಗೆ ದಾನ ನೀಡಿರುವುದನ್ನು ಉಲ್ಲೇಖಿಸುತ್ತವೆ.[೪೨] ಇಲ್ಲಿ ಚಾಳುಕ್ಯ ಜಗದೇಕಮಲ್ಲನ ಆಳ್ವಿಕೆಯನ್ನು ಉಲ್ಲೇಖಿಸಿದ್ದು,[೪೩] ಇವನ ಸಾಮಂತ ವೀರಪಾಂಡ್ಯನು ಆಡಳಿತವನ್ನು ನೋಡಿಕೊಳ್ಳುವಾಗ ಬಾಗುಳಿಯ ಐವತ್ತು ಮಹಾಜನರ ಸಮಕ್ಷಯದಲ್ಲಿ ಮಾಳಪಯ್ಯನ ಮಗನಾದ ಚಿದ್ದಣ್ಣನ ಪತ್ನಿಯಾದ ಧರ್ಮವ್ವೆ ಎಂಬುವವಳು ತಾನು ಬಾಗಳಿಯಲ್ಲಿ ಸ್ಥಾಪಿಸಿದ ಲಕ್ಷ್ಮೀನಾರಾಯಣ ದೇವರ ಪೂಜಾರ್ಥವಾಗಿ ಭೂದಾನ ನೀಡುತ್ತಾಳೆ ಮತ್ತು ದೇವರ ಪೂಜೆಯ ಸಮಯದಲ್ಲಿ ಬಂದ ಲಾಭದಲ್ಲಿ ಪುರಾಣ ಹೇಳುವವನಿಗೆ, ಶಾಸ್ತ್ರವ್ಯಾಖ್ಯಾನ ಮಾಡುವವನಿಗೆ, ಅಗ್ರಾಸನದ ಬ್ರಾಹ್ಮಣ ಭೋಜನಕ್ಕೆ ಮುಂತಾದ ಕೆಲಸಗಳಿಗೆ ವ್ಯಯ ಮಾಡಬೇಕೆಂದು ಉಲ್ಲೇಖವಾಗಿದೆ. ಇದರಲ್ಲಿ ಧರ್ಮವ್ವೆಯನ್ನು ಆಕೆಯ ಬುದ್ಧಿಮತ್ತೆಯನ್ನು ಅಲಂಕಾರವಾಗಿ ಹೊಗಳಿದೆ. ಈ ಶಾಸನ ಇಲ್ಲಿಯ ಎಲ್ಲಾ ಶಾಸನಗಳಿಗಿಂತ ದೊಡ್ಡ ಶಾಸನ. ಶಾಸನದ ಕೆಲವೊಂದು ಭಾಗ ತ್ರುಟಿತವಾಗಿದೆ. ಇದರಲ್ಲಿ ಬಾಗಳಿಯ ವರ್ಣನೆಯೂ ಬಂದಿದೆ. ಇನ್ನು ಉಳಿದ ಕೆಲವೊಂದು ವೈಷ್ಣವ ಶಾಸನಗಳು ಶಾಸನದ ಪ್ರಾರಂಭದಲ್ಲಿ ವಿಷ್ಣುವಿನ ಶ್ಲೋಕವನ್ನು ಹೇಳಿದ್ದು, ನಂತರದ ಭಾಗದಲ್ಲಿ ಶಿವನನ್ನು ಉಲ್ಲೇಖಿಸಿದುದ್ದನ್ನು ವ್ಯಕ್ತಪಡಿಸುತ್ತವೆ. ಬಾಗಳಿಯ ಕೆರೆಯಲ್ಲಿದ್ದ ಶಾಸನದಲ್ಲಿ[೪೪] ವಿಷ್ಣುವಿನ ಶ್ಲೋಕದಿಂದ ಪ್ರಾರಂಭವಾಗುತ್ತದೆ. ಆದರೆ ಶಾಸನದ ಬಹುಪಾಲು ಭಾಗ ತ್ರುಟಿತವಾಗಿರುವುದರಿಂದ, ಸರಿಯಾದ ಮಾಹಿತಿ ಒದಗುವುದಿಲ್ಲ. ಇಲ್ಲಿ ವಿಜಯಪಾಂಡ್ಯನು ಉಚ್ಚಂಗಿಯ ನೆಲೆವೀಡಿನೊಳು ಆಳುತ್ತಿದ್ದನೆಂದು ಕಂಡುಬರುತ್ತದೆ. ಇವನ ಸಾಮಂತ(ಹೆಸರು ಹಾಳಾಗಿದೆ) ಸೋಮನಾಥದೇವರಿಗೆ ಅಂಗಭೋಗ ಮತ್ತು ರಂಗಭೋಗಕ್ಕೆ ಚಾಮೆಯನ ಕೆರೆಯ ಕೆಳಗಿನ ಭೂಮಿಯನ್ನು, ಬಾಗುಳಿಯ ಐವತ್ತು ಮಹಾಜನರ ಸಮ್ಮುಖದಲ್ಲಿ ದಾನ ನೀಡಿದ ವಿವರವಿದೆ. ಇದೇ ಶಾಸನದ[೪೫] ಕೆಳಭಾಗದಲ್ಲಿ ಪುಟ್ಟಿಯಣ್ಣ ಎಂಬುವವನು ಮಠದ ಸೋಮನಾಥದೇವರಿಗೆ ಅಂಗಭೋಗಕ್ಕೆ ಮತ್ತು ನೈವೇದ್ಯಕ್ಕೆ, ಹಾಗೆಯೇ ಅಲ್ಲಿಯ ಭಟ್ಟವೃತ್ತಿಗೆ ಬಡಗಲು ಏರೆಯ ೨೨೦ ಕಮ್ಮ, ದಾನ ನೀಡಿದನೆಂದು ಕಂಡುಬರುತ್ತದೆ. ಹಾಗೆಯೇ ಶಾಸನದಲ್ಲಿ ಬಾಗಳಿಯ ವರ್ಣನೆಯೂ ಬಂದಿದ್ದು, ಆ ಭಾಗ ಹಾಳಾಗಿದೆ.[೪೬]

ಇನ್ನು ಇಲ್ಲಿಯ ಒಂದು ಶಾಸನದಲ್ಲಿ ಮೊದಲೆರಡು ಸಾಲುಗಳು ಬಿರುದುಗಳನ್ನು ಉಲ್ಲೇಖಿಸಿದ್ದು, ನಂತರ ಗರುಡಧ್ವಜ, ಗರುಡಲಾಂಛನಂ.... ಎಂದು ಉಲ್ಲೇಖವಾಗಿದೆ.[೪೭] ಇಲ್ಲಿ ಗರುಡ, ಗರುಡ ಲಾಂಛನ

[illegible]

ಎಂದಿರುವುದರಿಂದ ಇದನ್ನು ವೈಷ್ಣವ ಶಾಸನವೆಂದು ಗುರುತಿಸಲಾಗಿದೆ. ಶಾಸನದ ಮುಂದಿನ ಭಾಗ ತ್ರುಟಿತವಾಗಿದೆ. ಕಾಲದ ಉಲ್ಲೇಖವಿಲ್ಲ. ಆದರೆ ರಾಷ್ಟ್ರಕೂಟ ದೊರೆ ಇಂದ್ರವಲ್ಲಭ ಎಂದು ಹೆಸರಿಸಿದ್ದು, ಇವನಿಗೆ ರಟ್ಟಕಂದರ್ಪ ಎಂಬ ಬಿರುದಿತ್ತೆಂದು ಉಲ್ಲೇಖಿಸಿದೆ. ಇವನ ಸಾಮಂತನನ್ನು ಹೇಳಿದ್ದು, ಅವನನ್ನು 'ರೊಟ್ಟ' ಎಂದು ಕರೆದಿರುವುದು ಕಂಡಬರುತ್ತದೆ. ಇವನು ಬಾಗುಳಿಯ ಮಹಾಜನರ ಸಮ್ಮುಖದಲ್ಲಿ(ಉಭಯಸಮ್ಮತದೊಳಿದ್ದು) ಬಿಳಿಯರ ಬಾದಮ್ಮನಿಗೆ ಬೂದುಗೊಳ(ನ್ನಿತ್ತರು)ವನ್ನು ಕೊಟ್ಟನು. ನಂತರ ಬಾದಮ್ಮ ಎಂಬುವವನು ಬೃಹಸ್ಪತಿ ಎಂಬ ಗುರುವಿಗೆ, ಕೆರೆ ದತ್ತಿಯನ್ನು ಕೊಟ್ಟನು ಎಂದು ತಿಳಿಸುತ್ತದೆ. ಆ ಶಾಸನದ ಕೆಳಭಾಗದಲ್ಲಿ ನೇಗಿಲು ಚಿತ್ರವಿದೆ. ಆದ್ದರಿಂದ ಇದು ರಾಷ್ಟ್ರಕೂಟರ ಶಾಸನವೆಂದು ಸ್ಪಷ್ಟಪಡಿಸಬಹುದು. ಏಕೆಂದರೆ ರಾಷ್ಟ್ರಕೂಟರ ಶಾಸನಗಳಲ್ಲಿ ಇಂತಹ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಈ ಒಂದು ಶಾಸನದಲ್ಲಿ ಮೊದಲಿಗೆ ಶ್ರೀ ವೀರಕೇಶವ ದೇವರು ಎಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ.[೪೮] ಹೀಗೆ ಮೇಲೆ ಹೇಳಿದ ಶಾಸನಗಳನ್ನು ವೈಷ್ಣವ ಶಾಸನಗಳೆಂದು ಗುರುತಿಸಿಕೊಂಡು ಚರ್ಚಿಸಲಾಯಿತು.

ಧರ್ಮಸಮನ್ವಯ ಶಾಸನಗಳು

ಕರ್ನಾಟಕ ಧರ್ಮಸಮನ್ವಯ ಭೂಮಿ. ಅನೇಕ ಧರ್ಮಗಳಿಗೆ ಅದು ಆಶ್ರಯ ಸ್ಥಾನವಾಗಿದೆ. ಇದನ್ನಾಳಿದ ರಾಜರು ಸಹ ಧರ್ಮಸಹಿಷ್ಣುರು. ಮೂಲತಃ ತಮ್ಮ ಧರ್ಮವನ್ನಲ್ಲದೆ ಇತರ ಧರ್ಮಗಳನ್ನು ಸ್ವೀಕರಿಸಿದ್ದರು, ಗೌರವಕೊಡುತ್ತಿದ್ದರು. ಬೇರೆ ಬೇರೆ ದೇವರನ್ನು, ದೇವಾಲಯಗಳನ್ನು ಪ್ರತಿಷ್ಠಾಪಿಸಿ ದಾನದತ್ತಿಗಳನ್ನು ನೀಡಿದ್ದರು. ಪ್ರಾರಂಭದಲ್ಲಿಯೇ ಜೈನಧರ್ಮ ಕಾಲಿಟ್ಟು, ಮಧ್ಯಂತರದಲ್ಲಿ ತನ್ನ ಅಸ್ತಿತ್ವವನ್ನು ಕಡಿಮೆಗೊಳಿಸಿಗೊಂಡು, ವೈಷ್ಣವ ಮತ್ತು ಜೈನಧರ್ಮಕ್ಕೆ ದಾರಿಮಾಡಿಕೊಟ್ಟಿತು. ಇಂತಹ ಸಮಾನ ಭಾವನೆ, ಸಮನ್ವಯ ಸಂಸ್ಕೃತಿ ಕರ್ನಾಟಕದ ಸಹಜಗುಣ. ಇಂತಹ ಒಂದು ಶಾಸನ ಬೇಲೂರಿನಲ್ಲಿಯೂ ಕಂಡುಬರುತ್ತದೆ. ಶಾಸನದಲ್ಲಿ[೪೯] ಶಿವ, ವಿಷ್ಣು, ಜಿನ, ಬುದ್ಧ ಮೊದಲಾದ ನಾಮರೂಪಗಳು ಕನ್ನಡ ಶಾಸನಗಳಲ್ಲಿ ಮೂಡಿ ಬಂದಿವೆ. ಇಂತಹ ಶಾಸನಗಳು ಇಲ್ಲಿಯೂ ಕಂಡುಬಂದಿವೆ. ಈ ಒಂದು ಶಾಸನದಲ್ಲಿ ಮೊದಲಿಗೆ ರಾಷ್ಟ್ರಕೂಟರನ್ನು(ವೈಷ್ಣವ) ಉಲ್ಲೇಖಿಸಿದ್ದು, ನಂತರ ಚಾಲುಕ್ಯರ ದೊರೆಯನ್ನು ಉಲ್ಲೇಖಿಸುತ್ತದೆ. ಆದರೆ ಆಡಳಿತ ಕ್ರಮದಲ್ಲಿಯೂ ಒಂದೇ ರೀತಿ ಕಾಪಾಡಿಕೊಂಡುಬಂದಿರುವುದನ್ನು ಗಮನಿಸಬಹುದು. ಈ ಶಾಸನದಲ್ಲಿ[೫೦] ಮೊದಲಿಗೆ ಶೈವ ಶ್ಲೋಕದಿಂದ ಪ್ರಾರಂಭವಾಗಿ ಜಗದೇಕಮಲ್ಲನನ್ನು ಉಲ್ಲೇಖಿಸಿದ್ದು, ನಂತರ ವೈಷ್ಣವ ಶ್ಲೋಕದಿಂದ ಪ್ರಾರಂಭವಾಗುತ್ತದೆ. ಆದರೆ ಈ ಶಾಸನದಲ್ಲಿ ಮೊದಲು ಶೈವಶ್ಲೋಕದಿಂದ ಪ್ರಾರಂಭವಾಗುವ ಮೊದಲು ಈ ಉಲ್ಲೇಖಬರುತ್ತದೆ.

ಓಂ, ನಮಃ ಶಂಕರಾಯ ಪೂಜ್ಯಾನಾಮಪಿಪೂಜ್ಯಾಯ
ವೇಧಸಾಮಪಿ ವೇಧಸೇ, ಸಮಂಚತುಮ್ಮುಖೀಗಿತ ಬ್ರಹ್ಮನೇ, ಬ್ರಹ್ಮಣೇ

ಎಂದು ಉಲ್ಲೇಖವಾಗಿದೆ. ಆದರೆ ಇದು ಶಿವನನ್ನು ಸ್ತುತಿಸುವ ಶ್ಲೋಕವಾಗಿದೆ ಎಂದು ಹೇಳಬಹುದು. ಇನ್ನು ಈ ಶಾಸನವು ಸಹ ಇದೇ ರೀತಿಯಲ್ಲಿ ಉಲ್ಲೇಖವಾಗಿದೆ.[೫೧] ಇದರಿಂದ ಧರ್ಮಸಮನ್ವಯತೆಯನ್ನು ಸೂಚಿಸುವ ಶಾಸನಗಳು ಪ್ರಾಚೀನ ಕಾಲದಿಂಲೂ ಕಂಡುಬರುತ್ತವೆ. ಈ ಶಾಸನದಲ್ಲಿ ಶಿವನಿಗೆ ದಾನದತ್ತಿಗಳನ್ನು ನೀಡಿದರೆಂದು ತಿಳಿದುಬರುತ್ತದೆ. ಅಂದರೆ ಬಾಗಳಿಯ ದೇವರಾದ ಕಲ್ಲೇಶ್ವರನಿಗೆ, ಪೂಜೆಗಳಿಗೆ, ನೈವೇದ್ಯಕ್ಕೆ ದಾನಗಳನ್ನು ಬಿಡುತ್ತಿದ್ದರೆಂದು ಇದರಿಂದ ಸ್ಪಷ್ಟಪಡಿಸಬಹುದು. ಇಂತಹ ಸಮನ್ವಯತೆ ವಿಜಯನಗರದ ಅರಸರಲ್ಲೂ ಕಂಡುಬರುತ್ತದೆ.

೩. ಜೈನಶಾಸನಗಳು

ಬಾಗಳಿಯಲ್ಲಿ ಜೈನಶಾಸನಗಳು ಭಾಗಶಃ ಇಲ್ಲ. ಆದರೆ ಕೋಗಳಿ ಒಂದು ಜೈನ ಕ್ಷೇತ್ರವಾಗಿತ್ತು. ಬಳ್ಳಾರಿಯು ಸಹ ಜೈನ ಕೇಂದ್ರವಾಗಿತ್ತು ಎಂದು ಕಂಡುಬರುತ್ತದೆ. ಜೈನಬಸದಿಗಳು ಇವೆ, ಶಾಸನಗಳು ಮಾತ್ರ ಬೆರಳೆಣಿಕೆಯಷ್ಟು ಸಿಗುತ್ತದೆ. ಕಲ್ಲೇಶ್ವರ ದೇವಾಲಯದ[೫೨] ಶಾಸನವೊಂದರಲ್ಲಿ ಜೈನಗುರುಮ (ಹೇ)ನ್ದ್ರರದೇವಪಂಡಿತ ಎಂದು ಬಂದಿದೆ. ಆದರೆ ಶಾಸನದ ಭಾಗ ಹೆಚ್ಚು ಹಾಳಾಗಿರುವುದರಿಂದ ಸರಿಯಾದ ಉಲ್ಲೇಖವಿಲ್ಲ. ಇವನು ಯಾರು, ಏನು ಎಂಬುದನ್ನು ತಿಳಿಯಲು ಸಾಧ್ಯವಿಲ್ಲವಾಗಿದೆ. ಆದರೆ ಇಲ್ಲಿ ಸಾಮಂತ ಗಂಗಪೆರ್ಮಾಡಿಯನ್ನು ಉಲ್ಲೇಖಿಸಿರುವುದರಿಂದ, ಈ ಕಾಲಕ್ಕೆ ಎರಡನೆ ಭೂತುಗ ಕಾಣಿಸಿಕೊಳ್ಳುತ್ತಾನೆ. ಆದ್ದರಿಂದ ಈ ಮಹೇಂದ್ರ ಎಂಬ ಜೈನಗುರು ಇವನ ಆಶ್ರಯದಲ್ಲಿರುವ ಒಬ್ಬ ಗುರುಗಳಾಗಿರಬೇಕು. ಏಕೆಂದರೆ ಗಂಗರು ಜೈನರಾಗಿದ್ದರಿಂದ ಜೈನಾಚಾರ್ಯರಿಗೆ ಆಶ್ರಯ ನೀಡಿದ್ದರು.

ಈ ಶಾಸನದಲ್ಲಿ[೫೩] ವಿಕ್ರಮಾದಿತ್ಯನ ಕಾಲದಲ್ಲಿ ಇವನ ಸಾಮಂತ ಪಾಂಡ್ಯದೇವನು ನೊಳಂಬವಾಡಿಯನ್ನು ಆಳುವಾಗ, ಇವನ ದಂಡನಾಯಕ ತಿಕ್ಕಭಟ್ಟ ಎಂಬುವವನು ಬಾಗುಳಿಯ ಐವತ್ತು ಮಹಾಜನರ ಮತ್ತು ಸ್ಥಾನಿಕರಾದ ಶಿವಶಕ್ತಿ ಪಂಡಿತರ ಸನ್ನಿಧಾನದಲ್ಲಿ ದೇವರಗ್ರಾಸನಕ್ಕೆ, ಸತ್ರಕ್ಕೆ ದಿನವೂ ಐವರ ಊಟಕ್ಕೆ ಆಗಿ, ಮಿಕ್ಕಹಣವನ್ನು, ಊರಿನ ಹಿರಿಯ ಕೆರೆಯ ಕೆಲಸಕ್ಕೆ ವಿನಿಯೋಗಿಸಲು, ಹೇರಿಗೆ ಒಂದು ಹಾಗವನ್ನು, ಮತ್ತು 'ಬ್ರಹ್ಮಜಿನಾಲಯ'ದ ನೈವೇದ್ಯಕ್ಕೆ ತಿಂಗಳಿಗೆ ಎರಡು ಪಣವನ್ನು, ಊರಿನ ಶಿವಮಯ್ಯನ ಕೈಯಿಂದ ದಾನ ಕೊಡಿಸುತ್ತಾನೆ ಎಂದು ಉಲ್ಲೇಖವಾಗಿದೆ. ಆದರೆ ಇಲ್ಲಿ ಬ್ರಹ್ಮಜಿನಾಲಯ ಎಂದಿರುವುದರಿಂದ, ಶಿವದೇವಾಲಯಕ್ಕೆ ಮತ್ತು ಜೈನಬಸದಿಗೂ ಸೇರಿಸಿ ದಾನ ನೀಡಿರಬೇಕು. ಸ್ಥಾನಿಕರಾದ ವೈಷ್ಣವರಿಗೂ ದಾನನೀಡಿದನೆಂದು ಕಂಡುಬರುತ್ತದೆ. ಒಬ್ಬ ವ್ಯಕ್ತಿ ಮೂರು ಧರ್ಮಗಳನ್ನು ಪಾಲಿಸುವುದು ವ್ಯಕ್ತವಾಗುತ್ತದೆ. ಆದರೆ ಬಾಗಳಿಯಲ್ಲಿ ಒಂದು ಜೈನ ಬಸದಿಯಿದೆ. ಗರ್ಭಗುಡಿಯಲ್ಲಿ ಯಾವುದೇ ಶಿಲ್ಪವಿಲ್ಲ. ದ್ವಾರಬಾಗಿಲ

ಮೇಲೆ ತೀರ್ಥಂಕರರ ೨೪ ಶಿಲ್ಪಗಳನ್ನು ಬಳ್ಳಿಯಾಕಾರದಲ್ಲಿ ಕೆತ್ತಲಾಗಿದೆ. ಇದನ್ನು ಈಗ ಮೈಲಾರ ಲಿಂಗವೆಂತಲೂ(ಗುಡಿ) ಕರೆಯಲಾಗಿದೆ. ಹರಪನಹಳ್ಳಿಯ ಸುತ್ತಲಿನ ಕೆಲವು ಪ್ರದೇಶಗಳಲ್ಲಿ ಬೆರಳೆಣಿಕೆಯಷ್ಟು ಜೈನಶಾಸನಗಳು ಕಂಡುಬರುತ್ತವೆ. ಹೂಳಗುಂದಿ, ಕೋಗಳಿ, ಮಾನ್ಯರಮಸಲವಾಡ ಮುಂತಾದ ಪ್ರದೇಶಗಳಲ್ಲಿ ನೋಡಬಹುದು. ಮಾಡಲಗೇರಿಯಲ್ಲಿ ಹೆಚ್ಚಾಗಿ ಜೈನ ಮತಾವಲಂಬಿಗಳು ಬಂದು ಹೋಗುವುದನ್ನು ಈಗಲೂ ನೋಡಬಹುದು. ಅಲ್ಲಿ ಒಂದು ಜೈನಬಸದಿ ಇದೆ. ಒಂದು ಶಾಸನದಲ್ಲಿ[೫೪] ಜಿನಗನ್ಧೋದಕ ಎಂದು ಉಲ್ಲೇಖವಾಗಿದೆ. ಶಾಸನದ ಬಹುಭಾಗ ತ್ರುಟಿತವಾಗಿರುವುದರಿಂದ ಸರಿಯಾದ ವಿವರಣೆ ಸಿಗುವುದಿಲ್ಲ.

ಹೀಗೆ ಕೆಲವೊಂದು ಜೈನ ಶಾಸನಗಳನ್ನು ನೋಡಲಾಯಿತು. ಇನ್ನು ಇಲ್ಲಿಯ ಕೆಲವು ಶಾಸನಗಳಲ್ಲಿ ಪ್ರಾರ್ಥನಾ ಭಾಗದಲ್ಲಿ 'ನಮಸ್ತುಂಗ-ಶಿರಶ್ಚುಂಬಿ.... ಎಂಬ ಶ್ಲೋಕಕ್ಕೆ ಬದಲಾಗಿ ಇದರೊಂದಿಗೆ ಬೇರೆ ಬೇರೆ ಶ್ಲೋಕಗಳು ಬಂದಿವೆ.

ಜಯತ್ಯೇಷ ಮಹಾದೇವೋ, ವಿಶ್ವರಕ್ಷಾ ವಿಚಕ್ಷಃ|
ಯಸ್ಸಪ್ತಮುನಿ ಮೋದಾರ್ಥಮ ವಿರ್ಭೂತಃ ಕಲಾನಿನಿಧಿ||

ಹೀಗೆ ಉಲ್ಲೇಖವಾಗಿದೆ.[೫೫] ಇವುಗಳನ್ನು ಚಂಪೂ ರೀತಿಯಲ್ಲಿಯಲ್ಲಿಯ ಗದ್ಯ ಪದ್ಯಗಳಿಂದ ಕೂಡಿದ ಶಾಸನಗಳೆಂದು ಗುರುತಿಸಬಹುದು. ಹೀಗೆ ಇಲ್ಲಿಯವರೆಗೆ ಶೈವ, ವೈಷ್ಣವ, ಜೈನ ಶಾಸನಗಳನ್ನು, ಅವುಗಳ ದಾನದತ್ತಿಗಳ ವಿವರಗಳನ್ನು ನೋಡಲಾಯಿತು.

ಇನ್ನು ಕೆಲವೊಂದು ಗ್ರಾಮಗಳನ್ನು ಮಾನ್ಯವಾಗಿ ನೀಡಿದ ಕೆಲವು ಶಾಸನಗಳು ಕಂಡುಬಂದಿವೆ. ಪ್ರಾಚೀನ ಕಾಲದಿಂದಲೂ ಮಾನ್ಯವಾಗಿ ಕೊಡುವ ಪದ್ಧತಿ ಕಂಡುಬರುತ್ತದೆ. ಅಂದರೆ ಗ್ರಾಮಗಳನ್ನು ಮಾನ್ಯ ಕೊಡುವುದು, ಭೂಮಿಯನ್ನು ಕೊಡುವುದು ಅಥವಾ ಪ್ರಾಣಿಗಳನ್ನು ಕೊಡುವ ಪದ್ಧತಿ ಕಂಡುಬರುತ್ತಿತ್ತು. ಈಗ ಈ ಮಾನ್ಯ ಎಂಬ ಪದ ಬಳುವಳಿ ಅಥವಾ ಉಂಬಳಿ ಎಂಬ ಅರ್ಥ ಪಡೆದುಕೊಂಡಿದೆ. ಈಗಲೂ ಸಹ ಈ ಪದ್ಧತಿ ಕೆಲವೊಂದು ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ಹಳ್ಳಿಯಲ್ಲಿ ಪ್ರಾಣಿಗಳನ್ನು ಬಳುವಳಿಯಾಗಿ ನೀಡುವ ಪದ್ಧತಿ ಇದೆ. ಅದನ್ನು ಗ್ರಾಮ್ಯ ಭಾಷೆಯಲ್ಲಿ(ಬಳಲಿ) ಬಳುವಳಿ ಕೊಟ್ಟದ್ದು ಎಂದು ಕರೆಯುವ ವಾಡಿಕೆ ಇದೆ. ಹೀಗೆ ಮಾನ್ಯ ನೀಡಿದ ಗ್ರಾಮಗಳು ಈ ಶಾಸನಗಳಲ್ಲಿ ಉಲ್ಲೇಖವಾಗಿವೆ.

ಈ ಶಾಸನದಲ್ಲಿ[೫೬] ದಾನಮಾನ್ಯಂ ಕೊಟ್ಟಕೆಯ್ ಮತ್ತ.... ಎಂದಿದ್ದು ಮುಂದಿನ ಭಾಗ ತ್ರುಟಿತವಾಗಿದೆ. ಆದರೆ ಏನು ದಾನಕೊಟ್ಟರೋ, ಅಥವಾ ಮಾನ್ಯಕೊಟ್ಟರೆಂದು ಸ್ಪಷ್ಟತೆ ಇಲ್ಲ. ಇಲ್ಲಿ 'ಕೆಯ್' ಎಂದಿರು ವುದರಿಂದ ಗದ್ದೆ ಅಥವಾ ಭೂಮಿಯನ್ನು ಮಾನ್ಯ ನೀಡಿರಬೇಕೆಂದು ಹೇಳಬಹುದು. ಈ ಭೂಮಿಯನ್ನು ದೇವರಮಠಕ್ಕೆ ಮಾನ್ಯವಾಗಿ ಕೊಟ್ಟನೆಂದು ಸಹ ಹೇಳಬಹುದು. ಈ ಶಾಸನದಲ್ಲಿ(ತ್ರುಟಿತ) ದಾಸಯ್ಯ

ನಾಯಕ(೦) ಮಹಾಜನರ ಅನುಮತಿಯ ಮೇರೆಗೆ ಸರ್ವಬಾಧೆಪರಿಹಾರವಾಗಿ, ಮಾನ್ಯವಾಗಿ ಖಣ್ಡಿಕಕ್ಕೆ (ವೇದವನ್ನು ಹೇಳುವವರಿಗೆ)ಬಿಟ್ಟ ಎರೆಯ ಹಸಲು ೧೨ ಮತ್ತರು, ಭೂಮಿಯನ್ನು ಮಾನ್ಯ ನೀಡಿದರೆಂದು ಉಲ್ಲೇಖಿಸುತ್ತದೆ.[೫೭] ವಿದ್ಯಾಗುರುಗಳಿಗೆ, ಪಂಡಿತರಿಗೆ, ವೇದಶಾಸ್ತ್ರಗಳನ್ನು ಹೇಳಿಕೊಡುವವರಿಗೆ ಮಾತ್ರ, ಈ ಭೂಮಿಯನ್ನು(ಕಪ್ಪುಭೂಮಿ) ಮಾತ್ರ, ಸರ್ವಬಾಧೆಪರಿಹಾರ ಮಾನ್ಯವಾಗಿ ಬಿಟ್ಟರು ಎಂದು ಕಂಡುಬರುತ್ತದೆ. ಇದರಲ್ಲಿ ಸಂಪೂರ್ಣ ದೀಕ್ಷಿತರು ಅಮೃತದೇವರ ಅಂಗ,ರಂಗಭೋಗಕ್ಕೆಂದು ಕಲಿದೇವರ ಮಾನ್ಯದಲು ಕೂಡಿಬಿಟ್ಟ ೧೫೦ ಗದ್ದೆ ಕಮ್ಮ ಎಂದು ಉಲ್ಲೇಖಿಸುತ್ತದೆ.[೫೮] ಇದರ ಮುಂದುವರಿದ ಭಾಗದಲ್ಲಿ ಮಲ್ಲಿಕಾರ್ಜುನ ದೇವರ ಪೂಜೆಗೆ ಐವರು ಸೇರಿ ಮಂಟವಾಳದ ತೋಟವನ್ನು ಕಲಿದೇವರ ಮಾನ್ಯದೋಪಾದಿಯಲ್ಲಿ ಬಿಟ್ಟರು ಎಂದು ಕಂಡುಬರುತ್ತದೆ. ಈ ಶಾಸನದಲ್ಲಿ[೫೯] ಸೋಗಿಯ ವೀರಣ್ಣನಿಗೆ ಕಾಳಿಓಜನು ಮಾಡಿದ ೭೦೦ ಕಂಬ ಮಾನ್ಯವಾಗಿ ನೀಡಿದನು. ಶಾಸನ ತ್ರುಟಿತವಾಗಿದೆ. ಈ ಶಾಸನದ[೬೦] ಇನ್ನೊಂದು ಭಾಗದಲ್ಲಿ ಅಗ್ರಹಾರವಾದ ಬಾಗುಳಿಯಐವರು, ಶ್ರೀ ಭಲೇತ ಬ್ರಹ್ಮಾನಂದದೇವರ ದಿವ್ಯ, ಶ್ರೀಪಾದಪದ್ಮರಾದ ಕರುಮಪ್ಪ ಮನೋಹರ ದೇವರಿಗೆ, ಚಂಗೋನಹಳ್ಳಿಯ ನಾಗೇಶ್ವರದ ಬಡಗಣ ತೆವರಲ್ಲಿ(ದಿಬ್ಬ) ಒಂದು ಮನೆಯನ್ನು ಮಾನ್ಯವಾಗಿ ನೀಡಿದನೆಂದು ಉಲ್ಲೇಖಿಸುತ್ತದೆ. ಅಂದರೆ ಬಾಗುಳಿಯ ಮಹಾಜನರು, ಬ್ರಹ್ಮಾನಂದದೇವರಿಗೆ, ಮನೋಹರನಿಗೆ, ಚಂಗೋನಹಳ್ಳಿಯ ನಾಗೇಶ್ವರದ (ನಾಗೇಶ್ವರ ಎಂಬುದು ಮನೆಯ ಹೆಸರಿರಬೇಕು) ದಿಬ್ಬದ ಮನೆಯನ್ನು ಈ ದೇವರಿಗೆ ಮಾನ್ಯ ನೀಡಿದರೆಂದು ಕಂಡುಬರುತ್ತದೆ. ಇದೇ[೬೧] ಶಾಸನದ ಈ ಭಾಗದಲ್ಲಿ ಕಲಿದೇವರ ನಿತ್ಯಪೂಜೆಗೆ ಆವೂರ ಚಂಗನಹಳ್ಳಿಯ, ಕಪ್ಪುಭೂಮಿಯ ಕೆಳಗಣಕಪ್ಪುರಕಟ್ಟೆಯಬಡಗಲುಭಾಗ, ಊರೊಡೆಯನ ಮೈದಾನ (ಉಪ್ಪನ್ನುಸಂಗ್ರಹಿಸುವ ಭಾಗ) ಚಮಡೆಯ(ತೊಗಲು, ಚರ್ಮವನ್ನು ತಯಾರಿಸುವವನು) ೨ ಕಂಬ, ಗದ್ದೆ, ಪೂರ್ವದ ದಿಕ್ಕಿನ ದೇವಸುರರ ನಾಗದೇವನ ೧೭೦ ಕಂಬಗದ್ದೆ ಮತ್ತು ಹೆಚ್ಚಾದ ಭೂಮಿಯನ್ನು ಕ್ರಯವ ಕೊಟ್ಟು ಕೊಂಡು, ದೇವರಿಗೆ ಧಾರಾಪೂರ್ವಕವಾಗಿ ಸಾಕ್ಷಿ ಸಮೇತ ಮಾನ್ಯವಾಗಿ ಬಿಟ್ಟರು ಎಂದು ಉಲ್ಲೇಖಬರುತ್ತದೆ. ಇದರ ಇನ್ನೊಂದು[೬೨] ಭಾಗದಲ್ಲಿ ಹರಿಶ್ಚಂದ್ರದತ್ತಿಯ ಮಹಾಗ್ರಹಾರ ವಾದ ಬಾಗುಳಿಗೆ, ಬಾಗುಳಿಯ ಮಹಾಜನರಿಗೆ, ಹರಿಕಾರ ರೇವಣನ ಮಗಳು ಸೂಳೆ ಬೊಂಮವೆ (ಪಾದಪೂಜೆಯ ಕೊಟ್ಟು) ದೇವರ ಸನ್ನಿಧಾನಕ್ಕೆ ಮಣಿದು ಅರವಂಟಿಗೆಗೆ ಕೆರಬಾಗಿನ ಎರೆಯ ಕೆಯಿ, ಒಂದು ಮತ್ತರು, ೩೦೦ ಕಂಬಗಳನ್ನು ಮಾನ್ಯ ನೀಡಿದಳೆಂದು ಕಂಡುಬರುತ್ತದೆ. ಈ ಶಾಸನದಲ್ಲಿ[೬೩] ಮಹಾಗ್ರಹಾರವಾದ ಬಾಗುಳಿಯ ಐವರು ಬಿದಿರಹಳ್ಳಿಯ ಸ್ವಾಮಿ ದೇವರಿಗೆ, ಕಲಿದೇವರ ಹೆಸರಿನಲ್ಲಿ ಮಾನ್ಯದೋಪಾದಿಯಲ್ಲಿ ೧೨೦ ಕಂಬ ಗದ್ದೆ, ೩೦೦ ಎರೆಯ ಕೆಯಿ, ೧ ಮನೆಯನ್ನ ಮಾನ್ಯವಾಗಿ ಬಿಟ್ಟರು ಎಂದು ಸ್ಪಷ್ಟವಾಗಿ ಉಲ್ಲೇಖಿಸುತ್ತದೆ.(ಇಲ್ಲಿ ಉಲ್ಲೇಖವಾಗಿರುವ ಬಿದಿರಹಳ್ಳಿ, ಎಂಬ ಗ್ರಾಮ, ಹಡಗಲಿ ಬಳಿಯ, ಹೊಳೆ

ಆಚೆಗಿನ ಗ್ರಾಮವಾಗಿದೆ) ಅದೇ ಶಾಸನದ[೬೪] ಇನ್ನೊಂದು ಭಾಗದಲ್ಲಿ ಬಾಗುಳಿಯ ಐವರು ಮಹಾಜನರು ಸೇರಿ ಗೊರೂರವಿಷ್ಣುಭೈಸರಿಗೆ 'ಕಲಿದೇವರ ಮಾನ್ಯದೋಪಾದಿಯಲ್ಲಿ ೮೦ ಕಂಬ ತೋಟವನ್ನು ಮಾನ್ಯವಾಗಿ ಬಿಟ್ಟರು ಎಂದು ಉಲ್ಲೇಖವಾಗಿದೆ. ಇದರ ಮತ್ತೊಂದು ಭಾಗದಲ್ಲಿ ಆತ್ಮರಾಮಸ್ವಾಮಿಗಳಿಗೆ ಕಲಿದೇವರ ಮಾನ್ಯದೋಪಾದಿಯಲ್ಲಿ ೧೨೦ ಕಂಬ ತೋಟ ೩೦೦ ಎರೆಯ ಕೆಯಿಯನ್ನು, ಅದೇ ದಿನ ಆನಂದ ಸ್ವಾಮಿಗಳಿಗೆ ಇಷ್ಟೇ ಭೂಮಿಯನ್ನು ಬಾಗಳಿಯಲು ಮಾನ್ಯಮಾಡಿದರೆಂದು ವ್ಯಕ್ತವಾಗಿದೆ. ಇದರ ಇನ್ನೊಂದು ಭಾಗದಲ್ಲಿ[೬೫] ಅಪ್ಪರಸರಿಗೆ ದೇವರ ಮಾನ್ಯದೋಪಾದಿಯಲ್ಲಿ ೧೨೦ ಕಂಬ ಗದ್ದೆ, ೩೦೦ ಕೆಯಿ ಎರೆಯಭೂಮಿ, ಅದೇ ದಿನ ಕೋರೂರ ಹಿರಿಯಣ್ಣಗಳಿಗೆ ಅಷ್ಟೇ ಗದ್ದೆ, ಎರೆಹೊಲಹತ್ತು ಜ್ಞಾನನಿಧಿಯ್ಯತ್ತಯ್ಯಂಗೆ(ಗಳಿಗೆ) ಇಷ್ಟೇ ಭೂಮಿ, ಗದ್ದೆಯನ್ನು ಮತ್ತು ೩ ಮನೆಯನ್ನು ಮಾನ್ಯವಾಗಿ ಕೊಟ್ಟರೆಂದು ಉಲ್ಲೇಖಿಸುತ್ತದೆ. ಇಂತಹ ಐವರಲ್ಲಿ(ಬಾಗುಳಿಯಐವರಲ್ಲಿ) ಕುಮಾರ ಪಂಡಿತ ಮೊದಲಿಗನಾಗಿದ್ದನು. ಇನ್ನು ಈ ಶಾಸನದಲ್ಲಿ[೬೬] ಅನಾದಿಅಗ್ರಹಾರವಾದ, ಬಾಗುಳಿಯ ಮಹಾಜನರು, ಹೊಸವೂರ ಕೆರೆಯ ಕೆಂಗಾಡಿನ ೪ ಮತ್ತರು ಚಿಕಗೌಡಂಗೆ ಕೆರೆ ಮಾನ್ಯ ಮಾಡಿದರೆಂದು ಕಂಡುಬರುತ್ತದೆ. ಊರಿನ ಗೌಡನಿಗೆ ಕೆರೆಮಾನ್ಯ ಮಾಡಿದರೆಂದು ಹೇಳಲಾಗಿದೆ. ಇದರ ಮುಂದುವರಿದ ಭಾಗದಲ್ಲಿ ಚಿಕ್ಕ ಗೌಡಂಗೆ ಬಿಟ್ಟ ಮಾನ್ಯದಲ್ಲಿ ತೆರಿಗೆ ಕಟ್ಟಿ, ಆ ಮಾನ್ಯದ ಫಲವನ್ನು ಉಪಯೋಗಿಸಬೇಕು ಎಂದಿದೆ. ಕೊನೆಯ ಭಾಗದಲ್ಲಿ ಚಿಕಗೌಡಂಗೆ, ಕೆರೆಯ ಒಂದು ಭಾಗ, ಚಿಕ್ಕ ಗೌಡನಿಗೆ ಕೆರೆಯ ಎರಡು ಭಾಗ ಮಾನ್ಯ ಮಾಡಿದರೆಂದು ಕಂಡುಬರುತ್ತದೆ. ಈ ಒಂದು ಶಾಸನದಲ್ಲಿ ಇವರ ಗೌಡಿಕೆಗೆ ಬಿಟ್ಟ ಮಾನ್ಯದ ವಿವರವನ್ನು ತಿಳಿಸುತ್ತದೆ. ಆದರೆ ಮಾನ್ಯ ಮಾಡಿದ ಮಹಾಜನರು ನಾವು ಇದರ ಒಡೆತನಕ್ಕೆ ಹೋಗುವುದಿಲ್ಲ, ಎಲ್ಲಾ ಜವಾಬ್ದಾರಿ ಗೌಡರಿಗೆ ಎಂದು ಹೇಳಿಕೊಳ್ಳುತ್ತಾರೆ. ಅಂದರೆ 'ನಾವಿದರ ಗೋಡವೆಗೆ ಹೋಗುವುದಲ್ಲ' ಎಂದು ಉಲ್ಲೇಖವಾಗಿರುವುದನ್ನು ಕಾಣಬಹುದು. ಈ ಶಾಸನದಲ್ಲಿ[೬೭] ವಿರುಪಣ್ಣವೊಡೆಯನ ನಿರೂಪದಂತೆ ವೀರಣನು, ಹನುಮಂತದೇವರಿಗೆ ಕಲ್ಲಿನಾಥದೇವ ಸನ್ನಿಧಿಯಲ್ಲಿ ಒಂದು ವೊಕ್ಕಳ ಭೂಮಿಯನ್ನು ಮಾನ್ಯಕೊಡಬೇಕೆಂದು ವ್ಯಕ್ತವಾಗಿದೆ. ಇಲ್ಲಿ ಬಾಗಳಿ ಐವರು ಸೇರಿ ದೋಸೆಯೂರ ಕೆರೆಯೊಳಗಿನ ಕೆಂಗಾಡನ್ನು ಚಿಕ್ಕದೇವಿರ‍್ಯೆಯನವರು ಬೀರಣನಿಗೆ ಮಾನ್ಯಮಾಡಿದರೆಂದು ಕಂಡುಬರುತ್ತದೆ. ಬಾಗಳಿಯ ಜನರು ಮತ್ತು ಚಿಕ್ಕ ದೇವಿರ‍್ಯೆಯನವರು ಸೇರಿ ಮಾನ್ಯ ಮಾಡಿದರು. ಹೀಗೆ ಕೆರೆ, ಭೂಮಿ, ಗ್ರಾಮಗಳನ್ನು ಮಾನ್ಯ ಮಾಡಿದ ಶಾಸನಗಳ ಕೊನೆಯಲ್ಲಿ ಆ ಸೂರ್ಯಚಂದ್ರರಿರುವ ತನಕ ಇದನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಉಲ್ಲೇಖವಿದೆ. ಇನ್ನು ಈ ಶಾಸನದಲ್ಲಿ ವಿಜಯನಗರದ ಸದಾಶಿವರಾಯನನ್ನು ಉಲ್ಲೇಖಿಸಿದ್ದು, ರಾಜನಿಯೋಗದ ನಾಯಿಂದರಿಗೆ ಮಾನ್ಯ ಮಾಡಿದ ವಿವರವಿದೆ. ಇದರ ಪಾಠ ಹೀಗಿದೆ.

ರಾಜನಿಯೋಗದ ನಾಯಿಂದರಿಗೆ, ಮತ್ತೀತರಿಗೆ
ಕಾಣಿಕೆ, ಕಡಾಯ, ಬಿಟಿ, ಬಿರಾಡ, ಕೂಡಣ
ಏನೂಯಿಲ್ಲ ಎಂದು ಹೇಳಿ ಸರ್ವಮಾನ್ಯ
ದ ಶಾಸನ, ಕೂಟೂರ ಸೀಮೆಯೊಳಗಣ
ಬಾಗುಳಿಯ ನಾಯಿಂದಿರಿಗೆ ಕಾಣಿಕೆ ಕಡಾಯ ಬಿಟಿ
ಕೂಡಣ, ಲಿಂಗದೆರೆ, ಏನೂಯಿಲಾ ಎಂದು
ಕೂಡ ಸರ್ವಮಾನ್ಯ ಶಾಸನ

ಎಂದು ಉಲ್ಲೇಖವಾಗಿದೆ.[೬೮] ಅಂದರೆ ಇಲ್ಲಿ ಉಲ್ಲೇಖವಾಗಿರುವ ಕಾಣಿಕೆ, ಕಡಾಯ, ಬಿಟಿ, ಬಿರಾಡ, ಕೂಡಣ ಇವುಗಳು ನಾಯಿಂದರು ಉಪಯೋಗಿಸುವ ಸಾಮಾನುಗಳಿರಬೇಕು. ಇವುಗಳನ್ನು ರಾಜರು ಮಾನ್ಯವಾಗಿ ನೀಡಿರಬಹುದು. ಇದರ ಕೊನೆಯ ಭಾಗದಲ್ಲಿ ಈ ಮಾನ್ಯವನ್ನು ತಪ್ಪಿಸಿದವನಿಗೆ ಮಹಾ ಪಾಪಬರುತ್ತದೆ ಎಂದು ಕಂಡುಬರುತ್ತದೆ. ಇಲ್ಲಿ ಉಲ್ಲೇಖವಾಗಿರುವ ಪದಗಳು ಅಶ್ಲೀಲ ಪದಗಳಿಂದ ಕೂಡಿವೆ.

ಹೀಗೆ ಮಾನ್ಯನೀಡಿದ ಭೂಮಿ, ಗದ್ದೆ, ಕೆರೆ, ಗ್ರಾಮಗಳನ್ನು, ತೋಟಗಳನ್ನು ವಿವರಿಸಲಾಗಿದೆ. ಇನ್ನು ಕೆಲವು ಶಾಸನಗಳು ಶಾಸನೋಕ್ತ ಸ್ತ್ರೀಯರು ದಾನ ನೀಡಿದ ವಿವರಣೆಗಳನ್ನು ಉಲ್ಲೇಖಿಸುತ್ತವೆ. ಕಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ.೧೦೩೫ರ ಶಾಸನದಲ್ಲಿ[೬೯] ಹಾಡುಗಾರಳಾದ(ರಾದ) ಕಾಮವ್ವೆ ಮತ್ತು ನಾಗವೆಯ ಮಗಳಾದ ಪಾತ್ರದ ಸಿರಿಯವೆ(ಕಲಿದೇವರ ತೊತ್ತು) ಕಲ್ಲಕೇರಿಯ ತನ್ನ ಮನೆಯನ್ನು ದೇವರಿಗೆ ದಾನಕೊಟ್ಟು, ಆ ಮನೆಯೊಳಗೆ, ತಾನು ಮತ್ತು ತನ್ನ ವಂಶಜರು ಇರುವ ತನಕ, ಪ್ರತಿಯೊಬ್ಬರು ಸೂರ್ಯಚಂದ್ರರಿರುವ ತನಕ ದೇವರ ನಂದಾದೀವಿಗೆಗೆ ಆ ಮನೆಯಲ್ಲಿರುವವರು ಪ್ರತಿವರ್ಷ ಎರಡುಪಣಕೊಟ್ಟು, ಆ ಮನೆಯೊಳಗೆ ಸುಖದಿಂದ ಇರಬೇಕು ಎಂದು ಉಲ್ಲೇಖವಾಗಿದೆ. ನಂತರದಲ್ಲಿ ಈ ದಾನವನ್ನು ಕೊಟ್ಟವರು, ಈ ಧರ್ಮ್ಮವನಯ್ವದಿಂಬರು ಪ್ರತಿಪಾಳಿಸುವವರು ಎಂದು ಬರುತ್ತದೆ. ಆದರೆ ಈ ಶಾಸನದ ಕಾಲ ೧೦೩೫ದೆಂದಿದ್ದರೂ, ಕಾಮಲ್ವೆಯಿಂದ ಪ್ರಾರಂಭವಾಗುವ ಐದು ಸಾಲುಗಳು ಬೇರೆ ಕಾಲದವುಗಳೆಂದು ಬಂದಿರುವುದರಿಂದ, ಯಾವ ಕಾಲವೆಂದು ಸ್ಪಷ್ಟಪಡಿಸಿಲ್ಲ. ಇಲ್ಲಿ ಕಲಿದೇವರ ತೊತ್ತು ಎಂದು ಬಂದಿದೆ. 'ತೊತ್ತು' ಎಂದರೆ ಸೂಳೆ, ವೇಶ್ಯೆ ಎಂದಾಗುತ್ತದೆ. ಅಂದರೆ ಇವರು ದೇವರಿಗಾಗಿ ಮೀಸಲು ಎಂದು ಹೇಳಬಹುದು. ದೇವಾಲಯದಲ್ಲಿದ್ದುಕೊಂಡೇ ಜೀವನ ನಡೆಸುವ, ಸೂಳೆಯರು, ದೇವರಿಗೆ ದಾನನೀಡಿದರೆಂದು ಕಂಡುಬರುತ್ತದೆ. ಕಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಇನ್ನೊಂದು ಶಾಸನದಲ್ಲಿ[೭೦] ಗೌಡಿಕೆ ಮನೆತನದವರು ದಾನ ನೀಡಿದರೆಂದು ಉಲ್ಲೇಖವಾಗಿದೆ. ಬಾಚಲದೇವಿ ಮತ್ತು ಇವಳ ಗಂಡ ಪಿರಿಯಾಡರು ಸೇರಿ ದೇವರ ರಂಗಭೋಗಕ್ಕೆ ಬ್ರಾಹ್ಮಣರ ಅಗ್ರಾಸನಕ್ಕೆ, ಪುರಾಣ ಹೇಳುವವರಿಗೆ ಧಾರಾಪೂರ್ವಕವಾಗಿ ದಾನ ಮಾಡಿದಳು ಎಂದು ವ್ಯಕ್ತವಾಗಿದೆ. ತಮ್ಮ ತೇಜಸ್ವಾಮ್ಯದಿಂದುಳ್ಳ

ವರಮಾನ(ಗೌಡಿಕೆಯಿಂದ ಬರುವ ವರಮಾನ)ದಲ್ಲಿ ಬರುವ ಧನ ಮತ್ತು ಭೂಮಿಯನ್ನು ಗಾಣಿಗರಿಗೆ ಒಂದು ಮಾನ, ಅಸಗರೊಕ್ಕಲು, ನಿಬಂದಿ ಹಿಡಿಯದೆ ಸೀರೆಗೆ ಒಂದು,(ಮಡಿವಾಳರಿಗೆ) ಉಪ್ಪಿನ ಕಾವಲಿದೆರಿಗೆ ಪ್ರತೇಕಂ ಐದು ಪಣ, ಜೊತೆಗೆ ಆಯಾ ವ್ಯಾಪಾರಿಗಳಿಗೆ ಇಂತಿಷ್ಟು ಗದ್ಯಾಣ ಕೊಡಬೇಕೆಂದು ನೇಮಿಸಿ, ರಾಮೇಶ್ವರದ ತಂಡಿಗ ಗದ್ಯಾಣ ೩, ಉಪ್ಪಿನಿಕ ಗದ್ಯಾಣ ೧, ಬೋವಗದ್ಯಾಣ ೨, ಕಮ್ಮಾರಗದ್ಯಾಣ ೧, ಮಾದರ ಗದ್ಯಾಣ ೧, ಯಿನ್ನು ೧೩ ಗದ್ಯಾಣಗಳನ್ನು ಪ್ರತಿವರ್ಷದಾರೆ ನೆರೆಯ ಬೇಕೆಂದು ತಿಳಿಸಿ ದಾನ ಬಿಡುತ್ತಾಳೆ. ಕಲ್ಲೇಶ್ವರ ದೇವಾಲಯದಲ್ಲಿರುವ ಮತ್ತೊಂದು ಶಾಸನದಲ್ಲಿ[೨೨] ಮಹಾದೇವಿ ಮತ್ತು ಇವಳ ಗಂಡ ನಾದೇವಘೈಸರು ಸೇರಿ ವೀರಕೇಶವ ದೇವರ ರಂಗಭೋಗ, ಅಂಗಭೋಗಕ್ಕೆ ಗದ್ದೆಯನ್ನು ದಾನಬಿಡುತ್ತಾರೆ. ಹಾಗೆಯೇ ಕೊಳಗದ ಸೋಮಯ್ಯ ಎಂಬುವವನು ವೀರಕೇಶವದೇವರ ನಂದಾದೀವಿಗೆಗೆ ಮಣಲಕೆಯಿ ಕಳಲೆಗೆರೆಯೊಳಗೆ ೧ ಮತ್ತರು ಗದ್ದೆ ಭೂಮಿಯನ್ನು ದಾನನೀಡಿದನು. ಇದರಲ್ಲಿ ಉಲ್ಲೇಖವಾಗಿರುವ ಮಾಳಿಗೆಯ ನಾದೇವಘೈಸ, ಕೊಳಗದ ಸೋಮಯ್ಯ ಎಂಬುದು ಅವರ ವೃತ್ತಿಯನ್ನು ಸೂಚಿಸುವ ಪದಗಳಾಗಿವೆ. ಅದೇ ಆವರಣದ ಶಾಸನದಲ್ಲಿ[೨೩] ಯಲೆಕಲ ಬೊಜಂಗರ ಈಶ್ವರಯ್ಯನ ಮಾಚ್ಚಕ್ಕ ಎಂಬುವವಳು ಕಲಿದೇವರ ನೈವೇದ್ಯಕ್ಕೆ ೨೦ ಗದ್ಯಾಣ ದಾನ ನೀಡಿದಳೆಂದು ಉಲ್ಲೇಖವಿದೆ. ಆದರೆ ಇಲ್ಲಿ 'ಯೆಲೆಕೆಲೆ' ಎಂಬುವುದು ಯಾವ ಅರ್ಥವನ್ನು ಸೂಚಿಸುತ್ತದೆ ಎನ್ನುವುದು ಸ್ಪಷ್ಟಪಡಿಸಲಾಗುವುದಿಲ್ಲ. ಪ್ರಾಯಶಃ ಇದು ಅವರ ಮನೆತನ ಸೂಚಿತ ಪದವಾಗಿರಬಹುದು. ಇದೇ ಆವರಣದ ಇನ್ನೊಂದು ಶಾಸನದಲ್ಲಿ[೨೪] ಗುಜ್ಜರ ಶಾಂತಿಕಬ್ಬೆಯು, ದಾನ ನೀಡಿದಳೆಂದು ಬಂದಿದೆ. ಈಕೆಯನ್ನು ಸಕಳಗುಣಸಂಪನ್ನರಪ್ಪ, ಶ್ರೀವಿಷ್ಣುವ್ರಿದ್ಧಗೋತ್ರದಗುಜ್ಜರ ಶಾಂತಿಕಬ್ಬೆಯು ತನ್ನ ಗೊರವಡೆವಣಿಯಖಂಕಮ್ಮ ತೋಟವನ್ನು, ಮತ್ತು ಬಿಟ್ಟಳ್ಸಿರೆಲಗೇರಿಯ ಮನೆಯನ್ನು, ಪರೋಕ್ಷವಾಗಿ ದೇವರ ಮನೆಯನ್ನು ಪುರಾಣ ಹೇಳುವ ಉಪಾಧ್ಯಾಯರಿಗೆ ದಾನ ನೀಡಿದಳೆಂದು ಕಂಡುಬರುತ್ತದೆ. ಇದರಿಂದ ಇವಳು ದೇವಾಲಯದ ಸ್ಥಾನಿಕರಂತೆ(ನೈಷ್ಠಿಕರು) ದೇವಾಲಯದ ಆಗುಹೋಗುಗಳನ್ನು ನೋಡಿಕೊಳ್ಳುವವ(ಈಗಿನ ಬ್ರಹ್ಮಕುಮಾರಿ)ಳಾಗಿರಬೇಕು. ಏಕೆಂದರೆ ಇವಳ ಗೋತ್ರ ವಿಷ್ಣುಗೋತ್ರವಾಗಿದ್ದು, ಸ್ಥಾನಿಕರಂತೆ ಸಕಳಗುಳಸಂಪನ್ನರಪ್ಪ ಎಂಬ ಬಿರುದನ್ನು ಪಡೆದಿದ್ದಳು. ಅಲ್ಲಿನ ಮತ್ತೊಂದು ಶಾಸನದಲ್ಲಿ[೨೪] ವೀರಪಾಂಡ್ಯರ ಅತ್ತೆ ಕೇತಬ್ಬರಸಿ ಮತ್ತು ಹೆಂಡತಿ ನಾಗಿಯಾಂಡೆಯರು ಬ್ರಾಹ್ಮಣರ ಭೋಜನಕ್ಕೆ ಕಲಿದೇವರಿಗೆ ನರಸಿಂಹದೇವರಿಗೆ ಧನ, ಧಾನ್ಯಗಳನ್ನು ದಾನನೀಡಿದರು ಎಂದು ಉಲ್ಲೇಖಬರುತ್ತದೆ. ಆದರೆ ಈ ಶಾಸನದಲ್ಲಿ ಇವರನ್ನು ಕೇತಬ್ಬರಸಿಯರ್ಗ್ಗೆ, ನಾಗಿಯಾಂಡೆಯರ ಸಿಯರ್ಗ್ಗೆ, ಸೋವಲದೇವಿಯರ್ಗ್ಗೆ ಎಂದು ಉಲ್ಲೇಖಿಸಿದೆ. ಅಂದರೆ ಇವರಿಗೆ ಇಂತಿಷ್ಟು, ಎಂದು ತಮ್ಮ ರಾಜರು ದಾನವನ್ನು ಹಂಚಿಕೊಟ್ಟಿರ ಬೇಕು. ವೀರಪಾಂಡ್ಯ ತನ್ನ ಮದವಳಿಗೆಗೆ, ವಿಕ್ರಮಾದಿತ್ಯರಸ ತನ್ನ ಸತಿಗೆ, ಹೀಗೆ ದಾನವನ್ನು

[illegible]

ವಿಭಾಗಿಸಿಕೊಂಡು, ದಾನವನ್ನು ನೀಡಿರಬಹುದಾಗಿದೆ. ಇಲ್ಲಿಯ ಸೂರ್ಯನಾರಾಯಣ ದೇವಾಲಯದ ಮುಂದಿನ ಮಂಟಪದಲ್ಲಿನ ಶಾಸನದಲ್ಲಿ[೭೫] ಚಿದ್ದಣ್ಣನ ಪತ್ನಿಯಾದ ಧರ್ಮವ್ವೆ ಎಂಬುವವಳು ತಾನು ಬಾಗಳಿಯಲ್ಲಿ ಸ್ಥಾಪಿಸಿದ ಲಕ್ಷ್ಮೀನಾರಾಯಣ ದೇವರ ಪೂಜಾರ್ಥವಾಗಿ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಆ ದೇವಾಲಯದಲ್ಲಿ ಶಾಸ್ತ್ರವ್ಯಾಖ್ಯಾನ ಮಾಡುವವರಿಗೆ, ಪುರಾಣ ಹೇಳುವ ಉಪಾಧ್ಯಾಯರಿಗೆ, ಬ್ರಾಹ್ಮಣರ ಅಗ್ರಾಸನಕ್ಕೆ, ಉಳಿದೆಲ್ಲವು ದೇವರ ಅಗ್ರಾಸನಕ್ಕೆ, ಸರ್ವಬಾಧಾ ಪರಿಹಾರವಾಗಿ, ಸರ್ವಮಾನ್ಯ ಪಡೆದು ಹಿರಿಯಕೆರೆಯ ಕೆಳಗಿನ ತೋಟ, ಭೂಮಿ, ಗದ್ದೆ ಮತ್ತು ಬಾವಿಗಳನ್ನು ದಾನನೀಡಿದಳೆಂದು ಉಲ್ಲೇಖವಾಗಿದೆ. ಇದೇ ಶಾಸನದ ಮುಂದುವರಿದ ಭಾಗದಲ್ಲಿ ಧರ್ಮಷಡಂಗಿಯರ, ಮಗನಾದ ಪದ್ಮಣ್ಣನ ಮಗಳು ಧರ್ಮಕ್ಕನು, ತಾನು ಮಾಡಿಸಿದೆಡಗೇರಿಯ ಬಡಗವಾಗಿಲು ಲಕ್ಷ್ಮೀನಾರಾಯಣ ದೇವರ ರಂಗಭೋಗಕ್ಕೆ, ನೈವೇದ್ಯಕ್ಕೆ ೧೨೦ ತೋಟವನ್ನು ದಾನ ನೀಡಿದಳೆಂದು ಕಂಡುಬಂದಿದೆ. ನಂತರ ಕೊನೆಯ ಭಾಗದಲ್ಲಿ ಈ ದಾನದ ಧರ್ಮಮಂ ಪ್ರತಿಪಾಲಿಸಿದವರಿಗೆ ಗಂಗಾದೇವಿಯಲ್ಲಿ ಸಾವಿರ ಬ್ರಾಹ್ಮಣರಿಗೆ, ಸಾವಿರ ಕವಿಲೆಗಳನ್ನು ಕೊಟ್ಟ (ಫಲ)ಪುಣ್ಯ ಬರುತ್ತದೆ. ಈ ಧರ್ಮಕ್ಕೆ ಕೇಡುಮಾಡಿದವರಿಗೆ ಸಾವಿರ ಬ್ರಾಹ್ಮಣರನ್ನು, ಸಾವಿರ ಕಪಿಲೆಗಳನ್ನು ಕೊಂದ ಮಹಾಪಾಪ ಬರುತ್ತದೆಂದು ವ್ಯಕ್ತವಾಗಿದೆ. ಹೀಗೆ ಪ್ರಾಚೀನ ಕಾಲದಲ್ಲಿ ಸ್ತ್ರೀಯರು, ದಾನಧರ್ಮಗಳನ್ನು ಹೆಚ್ಚಾಗಿ ನೀಡುತ್ತಿದ್ದರೆಂದು, ಈ ಶಾಸನಗಳಿಂದ ತಿಳಿದುಬರುತ್ತದೆ. ಈಗಲೂ ಸಹ ತಮ್ಮ ಪೂರ್ವಜರು ನಡೆಸಿಕೊಂಡು ಬಂದ ಪೂಜಾಧಿಕಾರ್ಯಗಳನ್ನು ಮುಂದುವರಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

೨. ಆತ್ಮಬಲಿಯ(ಬಲಿದಾನ) ಶಾಸನಗಳು

ಕರ್ನಾಟಕದಲ್ಲಿ ಬಲಿದಾನ ಅಥವಾ ಬಲಿ ಪದ್ಧತಿ ಎನ್ನುವುದು ಪುರಾತನ ಕಾಲದಿಂದಲೂ ಬೆಳೆದುಕೊಂಡುಬಂದಿದೆ. ಅಂದರೆ ದೇವರಿಗೆ, ತಮ್ಮ ಅರಸರಿಗೆ, ತಮ್ಮ ಹರಕೆಯ ದೇವತೆಗೆ ತಾವುಗಳು ಹರಕೆಯನ್ನು ಹೊತ್ತುಕೊಂಡು ತಮ್ಮ ತಲೆಗಳನ್ನು ಅಥವಾ ದೇಹವನ್ನು ಅರ್ಪಿಸುವುದು, ಚಿತೆಯಲ್ಲಿ ಹಾರುವುದು, ಇಂತಹ ಆತ್ಮಬಲಿಯನ್ನು ನಾವು ಪ್ರಾಚೀನ ಕಾಲದಿಂದಲೂ ನೋಡುತ್ತಾ ಬಂದಿದ್ದೇವೆ. ಇದೊಂದು ಧರ್ಮದ ಹಿನ್ನೆಲೆಯಲ್ಲಿ ನಡೆಯುವ ಪದ್ಧತಿಯಾಗಿದೆ. ಇಂತಹ ಮರಣಕ್ಕೆ ಸಂಬಂಧಿಸಿದ ವಿಧಾನದ ಫಲಗಳನ್ನು ಪುರಾಣಗಳು, ಶಾಸನಗಳು, ಕೆಲವೊಮ್ಮೆ ಕಾವ್ಯಗಳು ಉಲ್ಲೇಖಿಸಿರುವುದು ಕಂಡುಬರುತ್ತದೆ. ಈ ರೀತಿಯ ಆತ್ಮಬಲಿದಾನಗಳಲ್ಲಿ ಕೆಲವೊಂದು ಪ್ರಕಾರಗಳನ್ನು ಗುರುತಿಸಿಕೊಳ್ಳಬಹುದು. ಧಾರ್ಮಿಕ ಆತ್ಮಬಲಿ, ಲೌಕಿಕ ಆತ್ಮಬಲಿ, ಶಿರಬಲಿ, ನಿಶಧಿಕಲ್ಲು, ನಂತರದಲ್ಲಿ ವೀರಗಲ್ಲು, ಮಹಾಸತಿಕಲ್ಲುಗಳೆಂದು ವಿಭಾಗಿಸಿಕೊಳ್ಳಬಹುದು.

ಪ್ರಾಚೀನ ಕನ್ನಡಿಗ ಯೋಧರು ಯುದ್ಧಗಳಲ್ಲಿ, ತಮ್ಮ ಪ್ರಾಣವನ್ನು ಲೆಕ್ಕಿಸದೆ ಒಡೆಯ(ರಾಜ)ನಿಗಾಗಿ ಅವರು ಮಹಾತ್ಯಾಗವನ್ನು ಮಾಡಿದ ಪದ್ಧತಿಗಳಿವೆ. ಇಂತಹ ಪದ್ಧತಿಗಳನ್ನು ಆತ್ಮಬಲಿಯ(self immlation) ಎಂದು ಕರೆಯಬಹುದಾಗಿದೆ. ಇಂತಹ ವೀರರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಗಳಲ್ಲಿ, ಶಾಸನಗಳಲ್ಲಿ ಸಾಮಾನ್ಯವಾಗಿ ಈ ಶ್ಲೋಕ ಉಲ್ಲೇಖವಾಗಿರುತ್ತದೆ.

ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿಸುರಾಂಗನಾ|
ಕ್ಷಣ ವಿಧ್ವಂಸಿನಿ, ಕಾಯೇಕಾಚಿಂತಾಮರಣೇ ರಣೆ||

ಎಂಬ ಸಂಸ್ಕೃತ ಶ್ಲೋಕ ಕಂಡುಬರುತ್ತದೆ. ಇಲ್ಲಿ ಯುದ್ಧದಲ್ಲಿ ಗೆದ್ದರೆ ಸಿರಿಸೊಬಗು, ಮಡಿದರೆ ಸುರಕನ್ನಿಕೆ, ನಿಮಿಷದಲಿ ಅಳಿಯುವುದು ಈ ಕಾಯ, ಕಾಳಗದಲಿ ಅಳಿವೆನೆಂಬ ಕೊರಗೇಕೆ ಎನ್ನುವಂತೆ, ಹಾಗೆಯೇ ಗೆದ್ದರೆ ಲಕ್ಷ್ಮಿ, ಸತ್ತರೆ ಅಪ್ಸರೆ, ಕ್ಷಣದಲಿ ನಾಶವಾಗುವ ಈ ದೇಹಕ್ಕೆ ಯೋಚನೆ ಏಕೆ? ಎನ್ನುವುದನ್ನು ಪ್ರಾಚೀನರು ಅರಿತಿದ್ದರು. ಆದ್ದರಿಂದ ಪ್ರಾಚೀನರು ತಮ್ಮ ಅರಸನಿಗಾಗಿ, ತನ್ನನ್ನೇ ಬಲಿ ಕೊಡುತ್ತಿದ್ದರೆಂದು ಹೇಳಬಹುದು. ಇಂತಹ ಪದ್ಧತಿಯನ್ನು ಶಾಸನಗಳಿಂದ ಸ್ಪಷ್ಟಪಡಿಸಬಹುದು. ಇಲ್ಲಿಯ ಕೆಲವು ಶಾಸನಗಳನ್ನು ಗಮನಿಸಿದಾಗ ಧ್ಯಾನ, ದಾನ, ಹರಕೆ ಮೊದಲಾದ ಧರ್ಮಮಾರ್ಗಗಳಲ್ಲಿ ನಡೆವ ಧರ್ಮವೀರನಿಗೆ ಸಾಧ್ಯವಾಗುವ ಮೋಕ್ಷ ಸಾಧನೆಯು ಧಾರ್ಮಿಕ ಬಲಿದಾನ ಮತ್ತು ಲೌಕಿಕ ಬಲಿದಾನ ಮಾರ್ಗಗಳಿಂದಲೂ ಸಾಧ್ಯವೆಂಬ ಭಾವನೆ ಬೆಳೆದು, ಕೊನೆಕೊನೆಗೆ ಯುದ್ಧ ಮಾರ್ಗದಲ್ಲಿ ಮಡಿದ 'ಯುದ್ಧವೀರ'ನಿಗೂ ಸಾಧ್ಯವೆಂಬ ವ್ಯಾಪ್ತಿ ಪಡೆಯಿತು. ಇದರಿಂದ ಗ್ರಾಮರಕ್ಷಣೆ, ದೇಶರಕ್ಷಣೆ, ಅವಶ್ಯಕತೆ, ಮೊದಲಾದ ಪೋಷಣೆಗಳು ಹುಟ್ಟಿಕೊಂಡು, 'ಧರ್ಮವೀರ'ನಿಗೆ ಸಮಾನವಾದ ಸ್ಥಾನ ಯುದ್ಧ ಬಲಿದಾನಗಳೆಂದು ವಿಭಾಗಿಸಿಕೊಂಡು ನೋಡಲಾಗಿದೆ.

೧. ಧಾರ್ಮಿಕ ಆತ್ಮಬಲಿ

ನಮ್ಮ ಸಂಸ್ಕೃತಿಯಲ್ಲಿ ಆತ್ಮಹತ್ಯೆ ಮಹಾಪಾಪವೆಂದು ಕರೆದು ನಿಷೇಧಿಸಿದೆ. ಆದರೆ ಇತ್ತೀಚೆಗೆ ಆತ್ಮಹತ್ಯೆ ಹೆಚ್ಚಾಗಿ ಇದೊಂದು ಬೇರೆ ಅರ್ಥ ಪಡೆದುಕೊಂಡಿದೆ. ಅದೇನೇ ಇರಲಿ, ಆದರೂ ನಮ್ಮ ಸ್ಮೃತಿ ಪುರಾಣ, ಇತಿಹಾಸಗಳು ಕೆಲವು ಬಗೆಯ ಆತ್ಮಹತ್ಯೆಗಳನ್ನು ಅಥವಾ ದೇಹತ್ಯಾಗಗಳನ್ನು ಒಪ್ಪಿ ಮನ್ನಿಸಿವೆ. ಇವುಗಳಿಗೆ ಒಂದು ಸ್ಥಾನ, ಅರ್ಥವನ್ನು ಕಲ್ಪಿಸಿವೆ.

ಚಾಲುಕ್ಯರ ಕಾಲದಲ್ಲಿ ಒಬ್ಬ ಅರಸ ನದಿಯಲ್ಲಿ ಹಾರಿ ತನ್ನ ದೇಹತ್ಯಾಗವನ್ನು ಮಾಡಿಕೊಂಡಿರುವುದನ್ನು ನಾವು ನೋಡಿದ್ದೇವೆ. ಅಂದರೆ ಒಂದನೇ ಸೋಮೇಶ್ವರನೂ ತನ್ನ ಜೀವನದ ಕೊನೆಯ ದಿನಗಳನ್ನು ಹಡಗಲಿಯ ಬಳಿ ಕುರುವತ್ತಿಯಲ್ಲಿ ಕಳೆದು, ಅಲ್ಲಿಯೇ ತುಂಗಭದ್ರೆಯಲ್ಲಿ ಜಲಸಮಾಧಿ ಹೊಂದಿದನು. ಇಂತಹ ಉಲ್ಲೇಖಗಳು, ನಿದರ್ಶನಗಳು ಕನ್ನಡ ಶಾಸನಗಳಲ್ಲಿ ಹಲವು ಕಡೆ ಕಂಡುಬರುತ್ತವೆ.

೨. ಶಿರಬಲಿ

ಶಾಸನಗಳಲ್ಲಿ ಹೆಚ್ಚಾಗಿ ಶಿರಬಲಿ ಎಂಬ ಪದ ಉಲ್ಲೇಖವಾಗಿರುವುದಿಲ್ಲ. ಇವುಗಳ ಬಗ್ಗೆ ಶಾಸನಗಳಲ್ಲಿ ವಿವರವೂ ಕಂಡುಬರುವುದಿಲ್ಲ. 'ಸಿಡಿ' ಎನ್ನುವ ಪದ, ಪಾವಡಿಗೆ ಚಲ್ಲಾಪಿಲ್ಲಿಯಾಗು, ಸ್ಫೋಟ, ಜಿಗಿ, ದೇವತೆಗಳ ಸೇವೆ, ಹೀಗೆ ಹಲವು ಅರ್ಥಗಳನ್ನು ನೀಡುತ್ತದೆ. ಆದರೆ ಇಲ್ಲಿ ಬಳಕೆಯಾಗುವ ಅರ್ಥ ದೇವತೆಗಳ ಸೇವೆ ಎಂದು. ಸಿಡಿ 'ದೈವಿ ಆರಾಧನೆಗೆ' ಸಂಬಂಧಿಸಿದ ಒಂದು ವಿಶೇಷ ಆಚರಣೆ, ದೇವತೆಗಳ ಹೆಸರಿನಲ್ಲಿ ಜನಪದರು ತಮ್ಮ ಹರಕೆ ಸಂಪ್ರದಾಯವನ್ನು ಸಲ್ಲಿಸುವ ವಿಧಾನ. ದೇವತಗೆಗಳ ಸಮ್ಮುಖದಲ್ಲಿಯೇ ನಡೆದಿದ್ದಾದರೆ, ಅವರು ನೋಡಿ ಪ್ರಸನ್ನರಾಗುವರೆಂಬ ಭಾವನೆಯಿಂದ ಈ ಆಚರಣೆಯನ್ನು ಅವರೆದುರಿನಲ್ಲಿಯೇ, ನಡೆಸಿಕೊಂಡು ಬಂದಿದ್ದಾರೆ. ಇದಕ್ಕೆ ಸಿಡಿತಲೆ, ಸಿಡಿಬಂಡಿ, ಸಿಡಿ ಆಟ, ಸಿಡಿಕಂಬ ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇದು ಮೊದಲು ವ್ಯಾಪಕ ಅರ್ಥವನ್ನು ಹೊಂದಿತ್ತು. ಈಗ ಅದು ಕೇವಲ ಒಂದೇ ಆಚರಣೆಗೆ ಸೀಮಿತವಾಗಿ ಉಳಿದುಬಿಟ್ಟಿದೆ. ಇದನ್ನು ಕುರಿತ ಲಿಖಿತ ಆಧಾರಗಳೇನೂ ಕಂಡುಬರುವುದಿಲ್ಲ. ಕಂಡಬಂದರೂ ಕೆಲವು ಮಾತ್ರ ಈ ಒಂದು ಶಾಸನದಲ್ಲಿ ಹೀಗೆ ಉಲ್ಲೇಖಿಸಲಾಗಿದೆ.[೬೬] ಅಕಟ ಎನ್ನುವವನು ತನ್ನ(ರಾಜ) ಮಹಾಸಾಮಂತ ಬೊಪ್ಪರಸರರಾಣಿ ಮಾಯಾದೇವಿ, ಗಂಡು ಮಗುವನ್ನು ಹೆತ್ತರೆ ಕೊಂಡಸ ಬಾವಿಯ ಬ್ರಹ್ಮದೇವರಿಗೆ (ಸಿಡಿತಲೆ)ಶಿರಬಲಿ ಕೊಡುವೆನೆಂದು ದೇಡೆಯನಾಯಕ ಹರಕೆ ಹೊತ್ತುಕೊಳ್ಳುತ್ತಾನೆ. ನಂತರ ರಾಣಿ ಗಂಡುಮಗುವಿಗೆ ಜನ್ಮವಿತ್ತಾಗ ಶಿರಬಲಿ ನೀಡುತ್ತಾನೆ. ತಲೆ ಕೊಡಬೇಕಾದ ವ್ಯಕ್ತಿ ಧ್ಯಾನಭಂಗಿಯಲ್ಲಿ ಕುಳಿತಿರುತ್ತಾನೆ. ಗಳ(ಬಿದುರಿನ ಕಂಬ) ಬಾಗಿಸಿ ಕಟ್ಟುತ್ತಾರೆ. ಇನ್ನೊಬ್ಬ ಹಿಂದಿನಿಂದ ಆತನ ತಲೆಯನ್ನು ಕತ್ತಿಯಿಂದ ಹಾರಿಸಿದಾಗ ತಲೆ ಮೇಲಕ್ಕೆ ಸಿಡಿಯುತ್ತದೆ. ಈ ರೀತಿ ಆತನ ಹರಕೆ ಸಿಡಿತಲೆ ಸಿಡಿಯುವುದರ ಮೂಲಕ ಈಡೇರುತ್ತದೆ. ಆದರೂ ಇದು ನೇರವಾಗಿ ಜನಪದರ ಸಿಡಿ ಆಚರಣೆಯ ಕುರಿತು ಹೇಳದಿದ್ದರೂ ಅದರ ಮೂಲ ಸ್ವರೂಪಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿಚಾರ ಮಾಡಲು(ಆಸ್ಪದ) ಅವಕಾಶ ಮಾಡಿಕೊಡುತ್ತದೆ. ಹೀಗೆ ತಾನು ನಂಬಿದ ಅರಸನಿಗೆ ಒಳ್ಳೆಯದಾಗಲಿ, ಮಕ್ಕಳಾಗಲಿ ಎಂದು ಬಯಸಿ ಕೆಲವು, ಹಲವು ರೀತಿಯ ಹರಕೆ ಹೊತ್ತು ದೇಹತ್ಯಾಗ, ಶಿರತ್ಯಾಗ ಮಾಡುತ್ತಿದ್ದರು. ಇದು ಪ್ರಾಚೀನ ಕಾಲದ ಸಿಡಿತಲೆ ಪರಂಪರೆ ಕುರಿತು ವರ್ಣಿಸುತ್ತದೆ. ಆದರೆ ಇತ್ತೀಚೆಗೆ ಇದು ಕಡಿಮೆಯಾಗಿ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಹೆಚ್ಚಾಗಿ ಕಂಡುಬರುತ್ತದೆ.

೩. ವೀರಗಲ್ಲುಗಳು

ವೀರಗಲ್ಲುಗಳು ಕನ್ನಡ ನಾಡಿನ ಶಾಸನಗಳಲ್ಲಿ ವೈಶಿಷ್ಟತೆಯನ್ನು ಪಡೆದುಕೊಂಡಿವೆ. ಇವುಗಳ ಜೊತೆಗೆ ಮಾಸ್ತಿಕಲ್ಲುಗಳನ್ನು ಸೇರಿಸಬಹುದು. ಸಾಮಾನ್ಯವಾಗಿ ವೀರಗಲ್ಲುಗಳು ವೀರನ ಪರಾಕ್ರಮಾದಿಗಳನ್ನು

ಉಲ್ಲೇಖಿಸುತ್ತವೆ. ಈ ವೀರಗಲ್ಲುಗಳನ್ನು ಮೂರು ಹಂತಗಳಲ್ಲಿ ನಿರ್ಮಿಸಿರುತ್ತಾರೆ. ಮೇಲಿನ ಹಂತದಲ್ಲಿ ಶಿವನ ಸಾನಿಧ್ಯದಲ್ಲಿರುವುದು ಚಿತ್ರಿತವಾಗಿರುತ್ತದೆ. ಮಧ್ಯದ ಹಂತದಲ್ಲಿ ಅವನನ್ನು ಕೈಲಾಸಕ್ಕೆ ಕೊಂಡೊಯ್ಯುತ್ತಿರುವ ದೇವತಾಸ್ತ್ರೀಯರು, ಕೆಳಗಿನ ಹಂತದಲ್ಲಿ ವೀರನ ಹೋರಾಟದ ಚಿತ್ರವಿರುತ್ತದೆ. ಈ ವಿಷಯವನ್ನು ಹೇಳುವ ಸಂಸ್ಕೃತ ಶ್ಲೋಕವೊಂದು ಅನೇಕ(ವೀರಗಲ್ಲು) ವೀರಶಾಸನಗಳ ಅಂತ್ಯದಲ್ಲಿ ಕಾಣಿಸಿಕೊಳ್ಳುತ್ತದೆ.

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನಿ, ಕಾಯೇ ಕಾ ಚಿಂತಾ ಮರಣೇ ರಣೇ||

ಎಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ. ಯುದ್ಧದಲ್ಲಿ ಗೆದ್ದು ಹಿಂದಕ್ಕೆ ಬರುವುದು ಅಥವಾ ಸೋತು ಪ್ರಾಣಬಿಡುವುದು, ಎರಡು ಒಂದೇ ಅರ್ಥವೆಂದು ಭಾವಿಸಿಕೊಂಡಿದ್ದರು. ಇದಕ್ಕೆ ಇನ್ನೊಂದು ಉದಾಹರಣೆಯಾಗಿ ಬಾದಾಮಿಯ ಕಪ್ಪೆ ಅರ್ಯಭರ್ಟನ ಶಾಸನವನ್ನು ಕೊಡಬಹುದು. ಅಂದರೆ ಪ್ರಾಚೀನ ಜನಗಳ ಕಣ್ಣಲ್ಲಿ ರಾಜನೊಬ್ಬ ಅದ್ಭುತ ವ್ಯಕ್ತಿ(ಶಕ್ತಿ)ಯಾಗಿದ್ದನು. ಇಂತಹ ರಾಜ ಅಥವಾ ಸಾಮಂತರನ್ನು ಶಾಸನದಲ್ಲಿ ರಚಿತವಾದ ಕಾಲ, ಮೊದಲು ಬರುತ್ತದೆ. ನಂತರ ನಾಯಕ ಎದುರಿಸಬೇಕಾಗಿ ಬಂದ ಹೋರಾಟದ ಸ್ವರೂಪ ಮತ್ತು ಅವನು ಅದನ್ನು ಎದುರಿಸಿ ಸುರಲೋಕ ಪ್ರಾಪ್ತನಾದ ಬಗೆಯನ್ನು ನಿರೂಪಿಸುತ್ತದೆ. ಇಂತಹ ವೀರಗಲ್ಲುಗಳು ಬಾಗಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಅಂದರೆ ಇಲ್ಲಿ ೨೫ ವೀರಗಲ್ಲುಗಳು ಇವೆ. ಈ ವೀರಗಲ್ಲುಗಳು ಉದಾತ್ತವಾದ ಉದ್ದೇಶದಿಂದ ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮಾರಕವಾಗಿ ನಿಲ್ಲಿಸಿರುವ ಕಲ್ಲುಗಳಾಗಿವೆ. ಇವುಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ದೃಶ್ಯಗಳೆಂದರೆ, ರಾಜನನ್ನು ಸ್ವರ್ಗಕ್ಕೆ ಕೊಂಡೊಯ್ಯುವುದನ್ನು ನೋಡಬಹುದು. ಇನ್ನು ಕೆಲವುಗಳು ಯುದ್ಧದಲ್ಲಿ ಮಡಿದವರಲ್ಲಿ ಎಷ್ಟೋ ಜನ ಯುವಕರೂ ದೊಡ್ಡ ದೊಡ್ಡ ಸ್ಥಾನಗಳನ್ನು ಅಲಂಕರಿಸಬೇಕಾಗಿದ್ದವರೂ ಇದ್ದರೆಂದು ಕಂಡುಬರುತ್ತದೆ. ಅವರಲ್ಲಿ ಕೆಲವರು ರಾಜರಿಗೆ ಬಲಗೈ ಇದ್ದಂತೆ ಇದ್ದವರೂ ಸಹ ಯುದ್ಧದಲ್ಲಿ ಮಡಿದಿರುವ ಚಿತ್ರಗಳಿವೆ. ಒಟ್ಟಾರೆ ವೀರನ ಚಿತ್ರಗಳೇ ಹೆಚ್ಚಾಗಿದ್ದರೂ, ಎಲ್ಲವನ್ನು ವೀಕ್ಷಿಸಿದಾಗ, ಗೋರಕ್ಷಣೆಗಾಗಿ ಮಡಿದ ವೀರರ ಸ್ಮಾರಕಗಳು, ಯುದ್ಧದಲ್ಲಿ ಹೋರಾಡಿ ನಾಡ ರಕ್ಷಣೆಗಾಗಿ ಸಾವನ್ನಪ್ಪಿದವರ ಸ್ಮರಣೆಗಾಗಿ ನಿಲ್ಲಿಸಿರುವ ಸ್ಮಾರಕಗಳು, ಕ್ರೂರ ಮೃಗಗಳ ಹಾವಳಿ ತಪ್ಪಿಸಲು, ಬೇಟೆ ಮಾಡಿ ಸ್ವರ್ಗಸ್ಥರಾದವರ ನೆನಪಿನಲ್ಲಿ ನಿಲ್ಲಿಸಿರುವ ಕಲ್ಲುಗಳೆಂದು ಗುರುತಿಸಬಹುದು. ಆದರೆ ಒಂದು ಅರ್ಥದಲ್ಲಿ ರಾಜರು ಶತ್ರುಗಳೊಂದಿಗೆ ಹೋರಾಡಿ ಮಡಿದ ಚಿತ್ರಗಳೇ ಹೆಚ್ಚಿನ ಕಲ್ಲುಗಳಲ್ಲಿ ಕಂಡುಬರುತ್ತವೆ. ಈಗ ಎಲ್ಲಾ ವೀರಗಲ್ಲುಗಳನ್ನು ಬಾಗಳಿಯ ವಸ್ತು ಸಂಗ್ರಾಲಯದಲ್ಲಿ ಕಾಣಬಹುದು. ಅವುಗಳನ್ನು ಹೀಗೆ ಗುರುತಿಸಲಾಗಿದೆ. ವಸ್ತು ಸಂಗ್ರಹಾಲಯದ ಒಳಭಾಗದಲ್ಲಿ ಎಡದಿಂದ ಬಲಕ್ಕೆ ನೋಡುತ್ತಾ ಹೋದರೆ ಈ ಎಲ್ಲಾ ವೀರಗಲ್ಲುಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಈ

[illegible]

ವೀರಗಲ್ಲಿನಲ್ಲಿ ಕುದುರೆಯ ಮೇಲೆ ಕುಳಿತ ವೀರನನ್ನು ಕಾಣಬಹುದು. ಇದು ೩ ಅಡಿ ಎತ್ತರವಾಗಿದೆ.(ಇದರ A.S.I.N-೬೨) ಈ ವೀರಗಲ್ಲಿನಲ್ಲಿ(೫೯) ೮ ಮಂದಿ ಸೈನಿಕರು ರಾಜರು, ಗುರಾಣಿ ಹಿಡಿದು ಯುದ್ಧ ಮಾಡುತ್ತಿರುವ ದೃಶ್ಯವಿದ್ದು, ನಾಲ್ಕು ಅಡಿ ಎತ್ತರದಲ್ಲಿದೆ. ಈ ವೀರಗಲ್ಲು(೬೮) ೫ ಅಡಿ ಎತ್ತರವಾಗಿದ್ದು, ಶಿವಲಿಂಗದ ಅಕ್ಕಪಕ್ಕದಲ್ಲಿ ದ್ವಾರಪಾಲಕರು, ನಡುವೆ ವೀರರು ನಿಂತಿರುವ ದೃಶ್ಯವನ್ನು ನೋಡಬಹುದಾಗಿದೆ. ಅಲ್ಲಿಯೇ ಇರುವ ವೀರಗಲ್ಲಿನಲ್ಲಿ(೬೩) ಶಿವ, ಪೂಜಾರಿ, ನಂದಿ ಇದ್ದು, ಮಧ್ಯಭಾಗದಲ್ಲಿ ದೇವತಾ ಸ್ತ್ರೀಯರು ರಾಜನನ್ನು ಸ್ವರ್ಗಕ್ಕೆ ಕೊಂಡೊಯ್ಯುವ ಚಿತ್ರವಿದೆ. ಈ ರಾಜನು ಕತ್ತಿ, ಗುರಾಣಿಗಳಿಂದ ಹೋರಾಡುತ್ತಿದ್ದನೆಂದು ಕಂಡುಬರುತ್ತದೆ. ಇದು ಸಹ(೬೫) ಮೇಲಿನ ವಿವರವನ್ನು ಹೇಳುವ ಚಿತ್ರವಾಗಿದೆ. ಈ ವೀರಗಲ್ಲಿನಲ್ಲಿ(೬೯) ಮೂವರು ವೀರರು ಕುದುರೆಯೊಂದಿಗೆ ಶತ್ರುಗಳನ್ನು ಸದೆಬಡಿಯುವ ದೃಶ್ಯವನ್ನು ನೋಡಬಹುದು. ಅಲ್ಲಿಯ ಮತ್ತೊಂದು ಕಲ್ಲಿನಲ್ಲಿ ವೀರನೊಬ್ಬ(೭೬) ಬಿಲ್ಲುಬಾಣಗಳಿಂದ ಕುದುರೆಯ ಮೇಲೆ ಕುಳಿತಿರುವುದನ್ನು ಚಿತ್ರಸಿದೆ. ಇದರಲ್ಲಿ ಮೇಲಿನ ಭಾಗ ಶಿವ, ನಂದಿಯನ್ನು ಹೊಂದಿದ್ದು, ಮಧ್ಯಭಾಗದಲ್ಲಿ ಅಪ್ಸರೆಯರು, ಕೆಳಗಿನ ಭಾಗದಲ್ಲಿ ರಾಜನು ಬಿಲ್ಲುಬಾಣ ಹಿಡಿದು ಹೋರಾಡುವ ದೃಶ್ಯವಿದೆ. ಇನ್ನು ಈ ವೀರಗಲ್ಲಿನಲ್ಲಿ ಸತಿಪತಿಗಳಿಬ್ಬರು ಕುದುರೆಯ ಮೇಲೆ ಕುಳಿತು ರಾಜನು ಕೈಯಲ್ಲಿ ಗುರಾಣಿ ಹಿಡಿದು ನಿಂತಿದ್ದಾನೆ. ಮತ್ತು ಶತ್ರುವಿನ ಕುದುರೆಯೊಂದಿಗೆ ಹೋರಾಡುವ ದೃಶ್ಯವಿದೆ.(೬೭), ಇದರಲ್ಲಿ ಮೇಲೆ ಶಿವನು, ಮಧ್ಯದಲ್ಲಿ ಅಪ್ಸರೆಯರು, ಕೊನೆಗೆ ಹೋರಾಡಿ ಮಡಿದ ವೀರನ ದೃಶ್ಯವಿದೆ. ಇದು ರಾಜನು ತನ್ನ ಆಯುಧಗಳೊಂದಿಗೆ ತಯಾರಾಗಿ ನಿಂತು, ಶತ್ರುಶೈನ್ಯವನ್ನು ಬಡಿದು ಹಿಮ್ಮೆಟ್ಟಿಸುವ ದೃಶ್ಯ, ಮಧ್ಯದಲ್ಲಿ ದೇವತೆಯರು, ಮೇಲಿನ ಭಾಗದಲ್ಲಿ ಶಿವನನ್ನು ಕಾಣಬಹುದು.(೬೦) ಇದು ಅದೇ ವಿವರಣೆಯನ್ನು ಹೇಳುವ ದೃಶ್ಯವಾಗಿದೆ.(೭೦) ಇದರಲ್ಲಿಯೂ ಸಹ ಅದೇ ವಿವರಣೆಯನ್ನು ಕಾಣಬಹುದು.(೭೪) ಇನ್ನು ಕಲ್ಲೇಶ್ವರ ದೇವಾಲಯದ ಎಡಭಾಗದಲ್ಲಿ ಮೂರು ವೀರಗಲ್ಲುಗಳಿವೆ. ಅವುಗಳು ಸಹ ಇದೇ ವಿವರಣೆಯನ್ನು ಹೇಳುವ ದೃಶ್ಯಗಳಾಗಿವೆ. ಹೀಗೆ ಇಲ್ಲಿಯ ವೀರಗಲ್ಲುಗಳು ಯುದ್ಧದಲ್ಲಿ ಮಡಿದವರ ಸ್ಮರಣೆಗಾಗಿ ನಿಲ್ಲಿಸಿರುವ ವೀರಸ್ಮಾರಕಗಳಾಗಿವೆ.

ತುರುಗೋಳ್ (ಗೋಗ್ರಹಣ)

ಯುದ್ಧ ಪ್ರಭೇದಗಳಲ್ಲಿ ಅತಿಮುಖ್ಯವಾದುದು (ತುರುಗೋಳ್)'ತುಱುಗೋಳ್'. (ತುರು+ಕೋಳ್, 'ಕೋಳ್' ಎಂಬುದು ತೆಗೆದುಕೊ ಎಂದರ್ಥದ 'ಕೊಳ್' ಧಾತುವಿನ ಭಾವನಾಮವಾಗಿದೆ) ಕಳ್ಳರು ಇದ್ದಕ್ಕಿದ್ದಂತೆಯೇ ಬಂದು ಊರಿನ ಮೇಲ ಧಾಳಿಮಾಡಿ ಗೋವುಗಳನ್ನು(ಮುಖ್ಯವಾಗಿ, ಹಸು, ಎಮ್ಮೆಗಳನ್ನು) ಅಟ್ಟಿಸಿಕೊಂಡು ಹೋಗುವುದನ್ನು ಪ್ರಾಚೀನ ಕಾಲದ ಸ್ಮಾರಕಗಳಿಂದ ತಿಳಿಯಬಹುದು. ಈ ಸಮಯದಲ್ಲಿ ಸೆರೆ ಹಿಡಿದ ತುರುಗಳನ್ನು ಮರಳಿಸುವ ಸಾಹಸದಲ್ಲಿ ಮಡಿದವರ ಸ್ಮಾರಕಗಳು ಹೆಚ್ಚಾಗಿ ದೊರಕುತ್ತವೆ.

ಪ್ರಾಚೀನ ಕಾಲದಿಂದಲೂ ಜನರಿಗಿಂತ, ಹಸುಗಳು, ಗೋವುಗಳು ದೇವರೆಂದು ಪೂಜಿಸುತ್ತಿದ್ದರು. ಇವುಗಳನ್ನು ರಕ್ಷಿತಸ್ಥಾನಗಳಲ್ಲಿ ಕಾಪಾಡಿಕೊಂಡು ಬರುತ್ತಿದ್ದರು. ಈಗಲೂ ಸಹ ಇಂತಹ ನಂಬಿಕೆ ಇದೆ. ಇವುಗಳಲ್ಲಿ ಮೂರು ಅಂಶಗಳನ್ನು ಕಾಣಬಹುದು. ಮೊದಲು ಗೋವುಗಳು ಪೂಜನೀಯವಾದುದು, ಇವು ಕಳೆದುಕೊಳ್ಳಲಾಗದ ಆಸ್ತಿ, ಇವುಗಳನ್ನು ಕಳೆದುಕೊಳ್ಳುವುದು(ಅಪಹರಿಸದಂತೆ ನೋಡಿಕೊಳ್ಳುವುದು) ಊರಿನ, ವ್ಯಕ್ತಿಯ ಮಾನಾವಮಾನದ ಪ್ರಶ್ನೆಯೂ ಆಗಿತ್ತು. ಆದ್ದರಿಂದ ಇವುಗಳನ್ನು ಕಾಪಾಡುವುದು ಆ ರಾಜನ ಧರ್ಮವಾಗಿತ್ತು. ಇಂತಹ ಗೋಗ್ರಹಣ ಅಥವಾ ತುರುಗೋಳ್‌ದ ಸ್ಮಾರಕಗಳು ಇಲ್ಲಿಯು ಕಂಡುಬಂದಿವೆ. ಈ ಸ್ಮಾರಕಶಿಲ್ಪ ವಸ್ತುಸಂಗ್ರಹಾಲಯದಲ್ಲಿದ್ದು, ೫ ಅಡಿ ಎತ್ತರದಲ್ಲಿರುವುದು ಕಂಡುಬರುತ್ತದೆ. ಇದರ ಮಧ್ಯಭಾಗದಲ್ಲಿ ಶಿವಪಾಲಕರಿದ್ದು ನಡುವೆ ಇಬ್ಬರು ರಾಜರಿದ್ದು, ಇವರ ಪಕ್ಕ ಸ್ತ್ರೀಯರು ಕಂಡುಬರುತ್ತಾರೆ. ಇವರೆಲ್ಲರ ನಡುವಿನ ಭಾಗದಲ್ಲಿ ೫ ಗೋವುಗಳು ಹೆದರಿಕೆಯಿಂದ ಯಾರನ್ನೋ ನೋಡುತ್ತಿರುವಂತೆ ನಿಂತಿರುವುದು ಕಂಡುಬರುತ್ತದೆ.(೬೮) ಈ ಕಲ್ಲಿನ(೬೬) ಕೆಳಭಾಗದಲ್ಲಿ ಗೋವುಗಳನ್ನು ಅಪಹರಿಸಿದವರೊಂದಿಗೆ, ವೀರರು ತಮ್ಮ ತಮ್ಮ ಗೋವುಗಳನ್ನು ಬಿಡಿಸಕೊಳ್ಳಲು, ಬಿಲ್ಲುಬಾಣಗಳಿಂದ ಹೋರಾಡುವ ದೃಶ್ಯವಿದೆ. ಇನ್ನೊಂದು ಕಲ್ಲಿನಲ್ಲಿ ರಾಜ ಕುದುರೆಯ ಮೇಲೆ ಹತ್ತಿ ಗೋವುಗಳನ್ನು ಬಿಡಿಸಲು, ತುರುಗೋಳ್ ಜನರೊಂದಿಗೆ ಹೋರಾಡುವುದನ್ನು ಚಿತ್ರಿಸುತ್ತದೆ. ಹೀಗೆ ಬಾಗಳಿಯಲ್ಲಿ ತುರುಗಳನ್ನು ಅಪಹರಿಸಿದವರೊಂದಿಗೆ ಹೋರಾಡಿ ಮಡಿದ, ವೀರರ ಸ್ಮರಣಾರ್ಥವಾಗಿ ನಿಲ್ಲಿಸಿರುವ ಶಾಸನಗಳು, ಸ್ಮಾರಕಗಳು ಕಂಡುಬರುತ್ತವೆ.

ಜೋಳವಾಚಿ(ಜೋಳವಾಳಿ)

ಕರ್ನಾಟಕದ ಕೆಲವು ಭಾಗಗಳಲ್ಲಿ ಜೋಳ ಪ್ರಮುಖವಾದ ಒಂದು ಬೆಳೆ. ಮತ್ತು ಒಂದು ಆಹಾರ ಪದಾರ್ಥ(ಧಾನ್ಯ). 'ಪಾಳಿ' ಎಂದರೆ ಕರ್ತವ್ಯ, ಕ್ರಮ ಅಥವಾ ಕ್ರಮಪಾಲನೆಯ ಧರ್ಮ.(ಇದನ್ನು ತೆಲುಗಿನಲ್ಲಿ ಪಾಡಿ ಎಂದು ಕರೆದರೆ, ಸಂಸ್ಕೃತದಲ್ಲಿ ಪಾಲಿ(ಪಾಳಿ) ಜೋಳವಾಳಿ ಎಂದರೆ(ಜೋಳಪಾಳಿ) ಅನ್ನದ ಕರ್ತವ್ಯ, ಅನ್ನದ ಋಣ ಎಂದರ್ಥ.(ಈಗಿನ ಉಪ್ಪಿನ ಹಂಗು ಇದ್ದಂತೆ. ಅಂದರೆ ಉಪ್ಪು ತಿಂದ ಮನೆಗೆ ಎರಡು ಬಗೆಯಬಾರದು) ತೆಲುಗಿನಲ್ಲಿ ಇದಕ್ಕೆ ಸಮಾನವಾದ ಉಕ್ತಿ ಎಂದರೆ ಜೊನ್ನಲು ಗೊನ್ನ ಋಣಂ.(ಜೊನ್ನಲು-ಜೋಳ) ಅನ್ನವನ್ನು ಕೊಟ್ಟು ಸಾಕಿದ ಒಡೆಯನಿಗೆ, ಕಷ್ಟಬಂದಾಗ ಅವನಿಂದ ಉಪಕೃತನಾಗಿರುವ ವ್ಯಕ್ತಿ ಒಡೆಯನಿಗೆ ಸಹಾಯ ಮಾಡಬೇಕು. ಯುದ್ಧವು ಒದಗಿದಾಗ ಅವನ ಪರವಾಗಿ, ಹೋರಾಡಬೇಕು, ಇದೇ ಜೋಳವಾಳಿ. ಇದು ಕರ್ತವ್ಯವನ್ನು ಪರಿಪಾಲಿಸುವ ವ್ಯಕ್ತಿಯನ್ನು ಸೂಚಿಸುತ್ತದೆ. ಪಂಪಭಾರತದಲ್ಲಿಯೂ ಹಲವು ಕಡೆ ಜೋಳದ ಪಾಳಿಯ ಪ್ರಸ್ತಾಪ ಬರುತ್ತದೆ.[೭೭] ಈ ಶಾಸನವೊಂದರಲ್ಲಿ ಜೋಳವಾಳಿಯ ಉಲ್ಲೇಖವಾಗಿದೆ.[೭೮] ಆದರೆ ಅದು ಚೋಳವಾಳಿಯ ಕುದುರೆಯ ಮೇಲಾಳ ಪೆಣದಿರಿದು

'ಸುರಲೋಕ ಪ್ರಾಪ್ತನಾದ ಗೋಳಿದೇವ' ಎಂದು ವ್ಯಕ್ತವಾಗಿದೆ. ಆದರೆ ಇದು ಜೋಳವಾಳಿಯೇ ಆಗಿರಬೇಕು. ಏಕೆಂದರೆ ಮುಂದೆ ವಾಳಿ ಎಂದು ಬಂದಿದೆ. ಆದ್ದರಿಂದ ಚೋಳದ ಬದಲು ಜೋಳವೇ ಆಗಿರಬೇಕು. ಇಲ್ಲವೆ ಮುದ್ರಣದೋಷವಾಗಿರಬೇಕು. ಶಾಸನ ತ್ರುಟಿತವಾಗಿರುವುದರಿಂದ ಭಾಷೆ ಮತ್ತು ಲಿಪಿಗಳು ಶುದ್ಧವಾಗಿಲ್ಲವಾದ್ದರಿಂದ ಸರಿಯಾಗಿ ಹೇಳುವುದು ಕಷ್ಟ. ಇದು ಏನೇ ಆಗಿದ್ದರೂ ಜೋಳವಾಳಿಯೆಂದೇ ಉಲ್ಲೇಖವಾಗಿರಬೇಕು. ಇಲ್ಲಿ ಏಚರಸನ ಮಗ ಗೂಳಿದೇವ ತನ್ನ ಒಡೆಯನಿಗಾಗ ರಥದ ಪಾಳಿಯಲ್ಲಿ ಕುದುರೆಯ ಮೇಲಿಂದ ಬಿದ್ದು ಸುರಲೋಕ ಪ್ರಾಪ್ತಾನಾಗಿರಬೇಕು. ಗೂಳಿದೇವ ಸುರಲೋಕ ಪ್ರಾಪ್ತನಾದನೆಂದಿರುವುದರಿಂದ, ಅನ್ನದ ಋಣಕ್ಕಾಗಿ ಯುದ್ಧದಲ್ಲಿ ಮಡಿಯಬಹುದು ಅಥವಾ ಗೆದ್ದು ಹಿಂದಕ್ಕೆ ಬರಬಹುದು. ಆದರೆ ಜೋಳವಾಳಿಯಲ್ಲಿ ಆತ್ಮಹತ್ಯೆಯ ಪ್ರಶ್ನೆ ಬರುವುದಿಲ್ಲ.

೩. ಲೌಕಿಕ ಆತ್ಮಬಲಿದಾನಗಳು

೧. ಮಹಾಸತಿಕಲ್ಲುಗಳು

ಇವುಗಳನ್ನು ಮಾಸ್ತಿ ಕಲ್ಲುಗಳು ಎಂತಲೂ ಕರೆಯುತ್ತಾರೆ. ಸಾಮಾನ್ಯವಾಗಿ ನಮ್ಮ ಪ್ರಾಚೀನ ಸಮಾಜ(ಸಂಸ್ಕೃತಿ)ದಲ್ಲಿ ಇದೊಂದು ಆಚರಣೆ, ಪದ್ಧತಿ ನಂಬಿಕೆಯಾಗಿತ್ತು. ದೇವನಿಗಾಗಿ ಕೈಗೊಳ್ಳುವ ಬಲಿದಾನ, ಪ್ರಿಯವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಪತಿಯ ಸಲುವಾಗಿ, ಸ್ತ್ರೀ ಅಥವಾ ಸತಿ ಕೈಗೊಂಡ ಪ್ರಾಣತ್ಯಾಗಕ್ಕೆ ನಮ್ಮಲ್ಲಿ ಅನೇಕ ನಿದರ್ಶನಗಳಿವೆ, ಶಾಸನಗಳಲ್ಲಿ ಉಲ್ಲೇಖಗಳು ಬಂದಿವೆ. ಸತಿಯ(ಮಹಾಸತಿ) ತನ್ನ ಒಡೆಯ ಅಥವಾ ಪತಿಗಾಗಿ, ಪತಿಯ ಯಾವುದೇ ರೀತಿಯ ಮರಣಾನಂತರ, ಮಡದಿ ಪ್ರಮುಖವಾಗಿ ಅಗ್ನಿಪ್ರವೇಶದ ಮೂಲಕ ಗೌಣವಾಗಿ, ಇತರ ವಿಧಾನಗಳ ಮೂಲಕ ತನ್ನ ಪ್ರಾಣವನ್ನು ಬಲಿಕೊಡುತ್ತಿದ್ದಳು. ಹೀಗೆ ಪ್ರಾಣವನ್ನು ಅರ್ಪಿಸುವವಳೇ ಮಹಾಸತಿ. 'ಮಾಸ್ತಿ' ಇದರ ತದ್ಭವರೂಪ ಮಹಾಸತಿ. ಇಂತಹ ಮಾಸ್ತಿ ಅಥವಾ ಮಾಸ್ತಿಕಲ್ಲುಗಳಲ್ಲಿ ಪ್ರಮುಖ ಕಾರಣಗಳನ್ನು ಹೆಸರಿಸಬಹುದು. ಮರಣ ಹೊಂದಿದ ವ್ಯಕ್ತಿಯು ಕೂಡ ಅವನಿಗಿಷ್ಟವಾದ ವಸ್ತುಗಳನ್ನು(ಮಡುಗುವುದು)ಇಡುವುದು. ಗಂಡ ಸಾಯುವುದರಿಂದ, ಗಂಡನಿಗೆ ಸ್ವರ್ಗಪ್ರಾಪ್ತಿಯಾಗುವುದಲ್ಲದೆ, ತಾನು ಸ್ವರ್ಗ ಪ್ರಾಪ್ತಿ ಪಡೆದು ಮುಂದಿನ ಜನ್ಮದಲ್ಲಿ ಮತ್ತೆ ಪತಿಪತ್ನಿಯರಾಗಿ ಹುಟ್ಟುವುದು. ಗಂಡನ ಮರಣದ ತರುವಾಯ ಸ್ತ್ರೀ ಬದುಕಿನಲ್ಲಿ ಎದುರಿಸಬಹುದಾದ ಜೀವರಕ್ಷಣೆ, ಮಾನರಕ್ಷಣೆಗಳ ಭಯ, ತಾನು ಮಡಿದ ನಂತರ ತನ್ನ ಮಡದಿ ಪುರುಷನ ವಶವಾಗಬಾರದು ಅಥವಾ ತನ್ನಿಂದ ಅಗಲಿರಬಾರದು ಎಂಬ ಪುರುಷನ ಸ್ವಾರ್ಥ.(ಭಾವನೆ) ಸತ್ತಪತಿಯೊಂದಗೆ ಪತ್ನಿಯನ್ನು ಮರಣಕ್ಕೆ ನೂಕಿ ಅವಳ ಆಸ್ತಿಯನ್ನು ಅಪಹರಿಸಿಕೊಳ್ಳುವ ಹಂಚಿಕೆ, ಇಂತಹ ಕಾರಣಗಳನ್ನು ಕೊಡಬಹುದು. ಏನೇ ಕಾರಣಗಳಿದ್ದರೂ ಪುರೋಹಿತ ಮತ್ತು ಪ್ರಭುಗಳ ಒತ್ತಾಯದ ಮೇರೆಗೆ ಮುಗ್ಧಸ್ತ್ರೀಯರು, ಬಲವಂತ ಒತ್ತಾಸೆಗಳಿಂದಾಗಿ, ಈ ಪದ್ಧತಿ ಹಿಂದೆ ಸಮಾಜದಲ್ಲಿ ಒಂದು ಮೌಲ್ಯವಾಗಿ ಪರಿಣಮಿಸಿತು.

ಇದರಲ್ಲಿ ಎರಡು ರೀತಿಯ ಮಾಸ್ತಿಕಲ್ಲುಗಳನ್ನು ಗುರುತಿಸಬಹುದು. ಸಹಗಮನ ಮತ್ತು ಅನುಗಮನ ಪದ್ಧತಿ. ಮರಣಹೊಂದಿದ ಪತಿಯ ಶವದೊಡನೆ, ಅಗ್ನಿಪ್ರವೇಶಗೈಯುವುದು ಸಹಗಮನವಾದರೆ, ದೂರದ ಪ್ರದೇಶದಲ್ಲಿ ಮಡಿದ, ಪತಿಯ ಶವ ಸಿಗದೇ ಹೋದರೆ, ಆತನ ಪ್ರಿಯವಾದ ಒಂದು ವಸ್ತುವಿನೊಡನೆ, ಅಗ್ನಿಪ್ರವೇಶ ಮಾಡುವುದು. ಇಲ್ಲಿ ಇಂತಹ ವಿವರಣೆ ಕೊಡುವ ಕೆಲವೊಂದು ಮಾಸ್ತಿಕಲ್ಲುಗಲ್ಲು ಕಂಡುಬಂದಿವೆ. ಇವುಗಳನ್ನು ಹೀಗೂ ಹೇಳಬಹುದು. ಸ್ತ್ರೀಯರು ಸಹ ರಾಜನೊಂದಿಗೆ ಕೈಗೂಡಿ ಯುದ್ಧದಲ್ಲಿ ಆಕ್ರಮಣಕಾರರನ್ನು ಎದುರಿಸಿ ಸಾವನ್ನಪ್ಪಿದ ವೀರ ಮಹಿಳೆಯರೆಂದು ಗುರುತಿಸಿ ನಿಲ್ಲಿಸಿರುವ ಕಲ್ಲುಗಳು. ಇನ್ನು ಕೆಲವೊಂದನ್ನು ಹೀಗೆ ವಿವರಿಸಬಹುದು. ತಾಯಂದಿರು ತಮ್ಮ ಮಕ್ಕಳನ್ನು ಕಳೆದುಕೊಂಡು, ಅವರ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳಿವೆ. ಈ ವೀರಗಲ್ಲೊಂದರ ಶಿಲ್ಪದಲ್ಲಿ 'ಹೇರು'ಗಳನ್ನು ಒತ್ತ ಎತ್ತುಗಳ ಹಿಂದೆ ಒಬ್ಬಳ ನಗ್ನ ಸ್ತ್ರೀಯ ಶಿಲ್ಪವಿದೆ. ಇದರಿಂದ ಒಂದು ಗ್ರಾಮದ ಮೇಲೆ ನೆರೆರಾಜ್ಯದವರು, ಕಳ್ಳರು ಅಥವಾ ಇತರರು ದಾಳಿಮಾಡಿದಾಗ ದನಕರುಗಳನ್ನು, ಸ್ತ್ರೀಯರನ್ನು ಅಪಹರಿಸುತ್ತಿದ್ದರೆಂದು ಕಂಡುಬರುತ್ತದೆ. ಇಂಥವರ ವಿರುದ್ಧ ಹೋರಾಡಿ ಮಡಿದವರ ನೆನಪಿಗಾಗಿ ನಿಲ್ಲಿಸುವ ಕಲ್ಲುಗಳನ್ನು ತುರುಗೋಳ್ ಹಾಗೂ ಪೆಣ್ಬುಯಲ್ ಗಳೆಂದು ಕರೆಯಲಾಗಿದೆ.(ಇವುಗಳನ್ನು ವೀರಗಲ್ಲುಗಳಲ್ಲಿ ಕಾಣಬಹುದು) ಆದ್ದರಿಂದ ಇವುಗಳನ್ನು ಮಾಸ್ತಿಕಲ್ಲುಗಳೆಂದು ಕರೆಯಲಾಗಿದೆ. ಆದರೆ ಬಾಗಳಿಯಲ್ಲಿ ಮಾಸ್ತಿಕಲ್ಲುಗಳು ತುಂಬಾ ಕಡಿಮೆ ಇವೆ. ಶಾಸನಗಳಲ್ಲಿಯೂ ವೀರಗಲ್ಲಗಳು, ಮಾಸ್ತಿಕಲ್ಲು, ಉಲ್ಲೇಖವಾಗಿರುವುದು ತೀರಾ ವಿರಳ.

೪. ಶಾಸನ ಸಾಹಿತ್ಯ

ಶಾಸನಗಳನ್ನು ಸಾಹಿತ್ಯ ದೃಷ್ಟಿಯಿಂದ ಅಧ್ಯಯನ ಮಾಡಿರುವುದು ಬಹಳ ಕಡಿಮೆ. ಮೊದಮೊದಲು ರಚಿತವಾದ ಶಾಸನಗಳು ಗದ್ಯರೂಪದಲ್ಲಿದ್ದವು. ಕನ್ನಡ ಸಾಹಿತ್ಯ ಬೆಳೆದಂತೆಲ್ಲಾ ಪ್ರಧಾನವಾಗಿ ಚಂಪೂಶೈಲಿ ಕಾಲಿಡತೊಡಗಿತು. ಕನ್ನಡ ಶಾಸನಗಳು ಬಹಳಮಟ್ಟಿಗೆ ಗದ್ಯದಲ್ಲಿ, ವೃತ್ತದಲ್ಲಿ ಕಂದಪದ್ಯಗಳಿಂದ ಕೂಡಿದ ಚಂಪೂರೂಪದಲ್ಲಿ ರಚಿತವಾಗಿರುತ್ತವೆ. ಇಲ್ಲಿಯ ಶಾಸನಗಳಲ್ಲಿ ಸಾಮಾನ್ಯವಾಗಿ ಮೊದಲಿಗೆ ಉಲ್ಲೇಖ ವಾಗಿರುವ ಶ್ಲೋಕದ (ನಮಸ್ತುಂಗ, ಶಿರಶ್ಚುಂಬಿ) ಬದಲಾಗಿ ಕೆಲವೊಂದು ಬೇರೆ ಬೇರೆ ಶ್ಲೋಕಗಳಿಂದ ಪ್ರಾರಂಭವಾಗುತ್ತವೆ. ಇವುಗಳನ್ನು ಛಂದಸ್ಸುಗಳಲ್ಲಿ ಯಾವ ಪ್ರಕಾರದ್ದು ಎಂದು ಹೇಳುವುದು ಸ್ವಲ್ಪ ಕಠಿಣ. ಶಾಸನಗಳಲ್ಲಿ ಬಳಕೆಯಾಗಿರುವ ಅನೇಕ ಪದ್ಯಗಳು ಛಂದಸ್ಸಿಗೆ ಒಳಪಡುವುದಿಲ್ಲ.

ಜಯತ್ಯೇಷ ಮಹಾದೇವೊ ವಿಶ್ವರಕ್ಷಾ ವಿಚಕ|
ಯಸ್ಸಪ್ತಮುನಿ ಮೋದಾರ್ಥಮವಿರ್ಭೂತ ಕಲಾನಿಧಿ :

ಈ ಶಾಸನದ ಶ್ಲೋಕವನ್ನು ಪ್ರಸ್ತಾರ ಹಾಕಿ ವಿಂಗಡಿಸಿದಾಗ ಸರಿಯಾದ ಅಂಶ ಸಿಗುವುದಿಲ್ಲ.[೭೮] ಇನ್ನು ಕೆಲವು ಶಾಸನಗಳು ತ್ರಿಪದಿಗಳಲ್ಲಿ ವೃತ್ತಗಳಲ್ಲಿ, ಕಂದಪದ್ಯಗಳಲ್ಲಿ ಉಲ್ಲೇಖವಾಗಿರುತ್ತವೆ. ಇವುಗಳನ್ನು

ಕೋಗಳಿ, ಹಿರೇಹಡಗಲಿ, ಹೂವಿನಹಡಗಲಿ, ನೀಲಗುಂದ, ಬಾಗಳಿ ಶಾಸನಗಳಲ್ಲಿ ಕಾಣಬಹುದು. ಕೋಗಳಿಯ ಒಂದು ಶಾಸನ ಕೋಗಳಿಯನ್ನು ತ್ರಿಪದಿಯಲ್ಲಿ ವರ್ಣಿಸಿದೆ.[೮೦]

‘ನಾಡುಗಳೊಳಗೆಲ್ಲ ನಾಡವೆತ್ತ ಸಮದ
ನಾಡುಗರ ಸದತಿಚೆಲ್ವ ಕೋಗಳಿ
ನಾಡು ನೋಡಲ್ಕೆ ಸೊಗಯಿಕ್ಕುಂ’

ಎಂದು ವರ್ಣಿಸಿರುವುದು ಕಂಡುಬರುತ್ತದೆ. ಇದು ಕಾವ್ಯಾತ್ಮಕ ರೀತಿಯಲ್ಲಿ ಉಲ್ಲೇಖವಾಗಿದೆ. ಮೋರಗೇರಿಯ ಒಂದು ಶಾಸನ ಕಂದಪದ್ಯದಲ್ಲಿ ಉಲ್ಲೇಖವಾಗಿದೆ.[೮೧]

ವಾರದಿಪರಿವೃತ ಧಾತಿ
ನಾರಿಯ ವದನದ ವೊಲೆಸವ ಕೆವಗಳಿನಾಡೋಳ್
ಮೋರಿಗೆರಿ ತಿಳಕಾಳಂ
ಕಾರಮನನುಕರಿ ಪುದನೆಜನಂ ಬಣ್ಣಿಸಿದೇಂ

ಎಂದು ಮೋರಗೇರಿಯನ್ನು ಅಲಂಕಾರಿಕ ಅಂಶಗಳಿಂದ ಬಣ್ಣಿಸಿದಂತೆ ವ್ಯಕ್ತವಾಗುತ್ತದೆ. ಬಾಗುಳಿ ಶಾಸನಗಳಲ್ಲಿ ಕೆಲವೊಂದು ಶಾಸನಗಳು ಕಂದಪದ್ಯಗಳಿಂದ, ವೃತ್ತಗಳಿಂದ, ಉಲ್ಲೇಖವಾಗಿದೆ.[೮೨] ಆದರೆ ಅವುಗಳ ಗಣ ವಿಂಗಡಣೆ ಸರಿಯಾಗಿ ಬರುವುದಿಲ್ಲ. ಈ ಶಾಸನದಲ್ಲಿ ‘ಕಂದ’ ಎಂದು ಶಾಸನದ ಮೊದಲಭಾಗದಲ್ಲಿ ಕಂಡುಬರುತ್ತದೆ.

ಕಲಿದೇವಸ್ವಾಮಿಗೆ ಕಂಪಲಿಯೊಳು
ತನ್ನಾಳ್ದನಿತ್ತದತ್ತಿಯಮನಿತಂಪಲರ
ಪಡೆದು ಮತ್ತ ಶಿಳಾಸಾಸನದೊಳು
ವಿಶೇಷದಿಂ ಬರೆಯಿಸಿದ ಅಂತಕನಾಂತರಿಬಲಕೆ

ಎಂದು ಕಂದಪದ್ಯದಿಂದ ಉಲ್ಲೇಖವಾಗಿದೆ.[೮೩] ಇಲ್ಲಿಯ ಮತ್ತೊಂದು ಶಾಸನದಲ್ಲಿ ಮೊದಲು ಕಂದಪದ್ಯದಿಂದ ಉಲ್ಲೇಖವಾಗಿರುವುದು ಕಂಡುಬರುತ್ತದೆ.[೮೪] ಇದರ ಮುಂದುವರಿದ ಭಾಗದಲ್ಲಿ ‘ವೃ’ ಎಂದು ಉಲ್ಲೇಖವಾಗಿದೆ. ಇದರ ಇನ್ನೊಂದು ಭಾಗದಲ್ಲಿ ‘ವ’ ಎಂದು ಉಲ್ಲೇಖವಾಗಿದೆ. ಹೀಗೆ ಒಂದು ಶಾಸನದಲ್ಲಿ ಛಂದಸ್ಸಿನ ವಿವಿಧ ಪ್ರಕಾರಗಳು ಕಂಡುಬರುತ್ತವೆ. ಇನ್ನು ಕೆಲವೊಂದು ಶಾಸನಗಳು ಕಾವ್ಯಾತ್ಮಕವಾಗಿ ಬಾಗಳಿಯನ್ನು, ಬಾಗಳಿಯ ಕಲಿದೇವರನ್ನು ಸುಂದರವಾಗಿ, ಅಲಂಕಾರವಾಗಿ ಉಲ್ಲೇಖಿಸಿರುವುದು ಕಂಡುಬರುತ್ತದೆ.

ಜಳನಿಧಿಯಂ ಪಳಂಚಲೆವನೇಕ ತಟಾಕದಿನಬ್ಜಷಣ್ಡದಿಂ
ಬೆಳದೆರಗಿರ್ದ್ದಕೆಯ್ವೊಲದಿನುನ್ನತ ಚಂಪಕಚೋಚಮೋಚಪಾ
ಟಳಪನಸಾಂಬಪೂಗವನನಾಗಲತಾಳಿಯಿ ನಗ್ರಹಾರಮ
ಗಳ ಮಣಿದರ್ಪ್ಪಣಂ ನೆಗಳ್ದ ಬಾಗಳಿಯೊಪ್ಪುವದೀ ದರಿತ್ರಯೊಳ್

[illegible]

ಈ ಶಾಸನ ಕಾವ್ಯಾತ್ಮಕವಾಗಿದ್ದರೂ,[೮೫] ಛಂದಸ್ಸನ್ನು ಸರಿಯಾದ ರೀತಿಯಲ್ಲಿ ಗುರುತಿಬಹುದು. ಅಂದರೆ ಇದು ವೃತ್ತಗಳಲ್ಲಿ ಒಂದಾದ ಚಂಪಕಮಾಲೆ ವೃತ್ತವನ್ನು ಗುರುತಿಸಬಹುದು. ಇದೊಂದು ಮಾತ್ರ ಸರಿಯಾದ ಮಾತ್ರಾಗಣಗಳಿಂದ ಕೂಡಿದೆ. 'ಲಘುನಾಲ್ಕಾಗಿರಲಂತುಚಂಪಕಮಾಲೆ' ಎಂದು ಹೇಳಲಾಗಿದೆ. ನಜಭಜಜಂಜರಂ ಎಂಬ(ಅಂಶಗಣ) ಅಕ್ಷರಗಳಿಂದ ಕೂಡಿದೆ. ಉಳಿದ ಕೆಲವೊಂದು ಶಾಸನಗಳು ಸರಿಯಾದ ಗಣ ವಿಂಗಡಣೆಗೊಳ್ಳುವುದಿಲ್ಲ. ಇನ್ನೂ ಕೆಲವೊಂದು ಶಾಸನಗಳು ಕೋಗಳಿಯಂತೆ ಬಾಗಳಿಯನ್ನು ಅಲಂಕಾರವಾಗಿ ವರ್ಣಿಸಿವೆ. ಈ ಒಂದು ಶಾಸನದಲ್ಲಿ ಬಾಗಳಿಯನ್ನು ಮತ್ತು ಅಲ್ಲಿನ ಕಲಿದೇವರನ್ನು ಹೀಗೆ ವರ್ಣಿಸಿರುವ ಉಲ್ಲೇಖ ಬರುತ್ತದೆ.[೮೬]

ಜಳನಿಧಿ ಪರಿವೃತ ಧಾತ್ರೀತಳದೊಳ್ ಭೂವನಿತೆಗೆಸೆವ
ಕುಂತಳ ಮೆಂತಂತಳವಡೆ ಕುಂತಳೆಪಯಕ್ಕಳಂಕೃತಬಾಳ್ಗು
ಳಿಪುರಂ ಸೊಗಯಿಸುಗು ಇದು ಪುಣ್ಯದೊದವು ಲೋಕಕ್ಕಿದುಸು
ಖ ದೊಂದೇಳ್ಗೆಯೆಂದು ಬಾಳ್ಗುಳಿಪುರದೊಳ್ ತ್ರಿದಶಮುನಿವಂದುನಿ
ಶಂ ಮುದದಿಂ ಶ್ರೀಕಲ್ಲಿನಾಥನಲ್ಲಿಯೆ ನಿನ್ದಂ ಕಯ್ವಾರದಯಾಚ
ಕಜನಮುಯ್ವಂ ನೋಡಲ್ಕೆ ಧನವನವನೀತಳದೊಳ್ ಕಯ್ವಾರ
ದೀವವರೆನಲಿಂದಯ್ವಲೆಂಬರ ಜಸಕ್ಕೆ ಸರಿಯಾರ್ಧರೆಯಾಳ್

ಎಂದು ಬಂದಿರುವುದರಿಂದ, ಬಾಗಳಿ ಎಂಬ ಪುರ ಪುಣ್ಯನಾಡಾಗಿತ್ತು. ಮತ್ತು ಸುಖದಿಂದ ಅಲ್ಲಿನ ಜನರು ವಾಸಿಸುತ್ತಿದ್ದರು ಎಂದು ಕಲಾತ್ಮಕವಾಗಿ ಉಲ್ಲೇಖಿಸಿದೆ. ಇನ್ನು ಕೆಲವು ಶಾಸನಗಳು ರಾಜನನ್ನು ಕಾವ್ಯಮಯವಾಗಿ ವರ್ಣಿಸಿವೆ. ಈ ಶಾಸನದಲ್ಲಿ[೮೭] ರಾಜನನ್ನು

'ಜಯಂತಿ ಬಾಣಾಸುರ ಮೌಳಿಲಾಳಿತಾದಶ್ಯ ಚೂಡಾಮಣಿ
ಚಕ್ರಚುಂಬಿನ ಸುರಾಸುರಾಧೀಶಶಿ ಖಾನ್ತಶಾಯಿನೋಭವಚ್ಛಿದ
ತ್ರ್ಯಂಬಕ ಪಾದಪಾಂಸವಃ ಕಲೀಶ ನಮಾಮೀತ್ಯ ಹರ್ನ್ನಿಶಂ ಸಂಭವೇತ್

ಇದು ಗಣದಲ್ಲಿ ವ್ಯತ್ಯಾಸವಾದರೂ ಪ್ರಸ್ತಾರದಲ್ಲಿ(ಮಾತ್ರೆ)ಗಳಲ್ಲಿ ಪರಿವರ್ಧಿನಿ ಷಟ್ಪದಿಗೆ ಹೋಲಿಕೆಯಾಗುತ್ತದೆ. ಹೀಗೆ ಇಲ್ಲಿಯ ಶಾಸನಗಳು ಹೆಚ್ಚಾಗಿ ಚಂಪೂಶೈಲಿಯಲ್ಲಿ ಗದ್ಯಪದ್ಯಾಗಳಿಂದ ಕೂಡಿದ್ದು, ವರ್ಣನಾತ್ಮಕವಾಗಿ, ಕಾವ್ಯಮಯವಾಗಿ ಬಾಗುಳಿಯನ್ನು ಮತ್ತು ಅಲ್ಲಿಯ ಅರಸರನ್ನು ಅಲಂಕಾರವಾಗಿ ವರ್ಣಿಸಿವೆ. ಪೊಸವಡಂಗಿಲೆ ಎಂಬ ಹಿರೇಹಡಗಲಿಯನ್ನು ಇದೇ ರೀತಿ ವರ್ಣಿಸಿವೆ.

'ಪೊಸಕಾವ್ಯಂ ಪೊಸಗೇಯಂ
ಪೊಸವಾದ್ಯ ಪೊಸವಿನೂತರಸಂ
ನೃತ್ತಂ ಪೊಸವಸ್ತು ಪೊಸವಿಳಾಸಂ ಪೊಸದೇಸೆ''[೮೮]

ಎಂದು ಬರುತ್ತದೆ. ಈ ಗ್ರಾಮದಲ್ಲಿರುವ ಎಲ್ಲವುಗಳು ಹೊಸತನದಿಂದ ಕೂಡಿದ್ದವು.

ಶಾಸನ ಭಾಷೆ

ಸಾಮಾನ್ಯವಾಗಿ ಒಂದು ಶಾಸನಕ್ಕೆ ಒಂದೇ ಭಾಷೆಯನ್ನು ಬಳಸುತ್ತಿದ್ದರೂ ಒಮ್ಮೊಮ್ಮೆ ಹಲವು ಭಾಷೆಗಳನ್ನು ಬಳಸಿರುವುದು ಉಂಟು. ಜಿನವಲ್ಲಭನ ಗಂಗಾಧರಂ ಶಾಸನದಲ್ಲಿ ಬಹು ಭಾಷೆಯನ್ನು ಬಳಸಿರುವುದು ಕಂಡುಬರುತ್ತದೆ. ಶಾಸನ ಭಾಷೆ ಯಾವುದೇ ಇರಲಿ ಪ್ರಾರಂಭದ ಸ್ತುತಿಪದ್ಯ, ಅಂತ್ಯದ ಫಲಶೃತಿ ಪದ್ಯ ಸಾಮಾನ್ಯವಾಗಿ ಸಂಸ್ಕೃತದಲ್ಲಿ ಬಂದಿರುತ್ತದೆ. ಅದರಲ್ಲಿ ನಮಸ್ತುಂಗ ಶಿರಶ್ಚುಂಬಿ ಎಂಬ ಸ್ತುತಿಪದ್ಯ ಮತ್ತು ಸ್ವದತ್ತಂ, ಪರದತ್ತಂ...ಫಲಶೃತಿ ಪದ್ಯಗಳ ಬಳಕೆ ಅಧಿಕ. ಸಂಸ್ಕೃತ ಶಾಸನಗಳಿದ್ದರೆ ಬಹುಭಾಗವನ್ನು ಸಂಸ್ಕೃತದಲ್ಲಿ ಬರೆದು ಸರ್ವರಿಗೂ ವೇದ್ಯವಾಗಲೆಂದು ಮುಖ್ಯವಾದ ವಿಷಯವನ್ನು, ದತ್ತಿ ವಿವರಣೆಯನ್ನು ಕೆಲವು ಸಲ ಕನ್ನಡದಲ್ಲಿ ಬರೆದಿರುವುದುಂಟು. ಕೆಲವು ಶಾಸನದ ಮೊದಲ ಸಾಲುಗಳು ಹಳಗನ್ನಡದಲ್ಲಿ ಉಲ್ಲೇಖವಾಗಿದ್ದು, ಶಾಸನದ ಕೊನೆ ಭಾಗದ ಸಾಲುಗಳು ನಡುಗನ್ನಡದಲ್ಲಿ ಉಲ್ಲೇಖವಾಗಿವೆ. 'ಹಾಡುವ ಕಾಮವೆ ನಾಗವೆಯ ಮಗಳಂ, ಶ್ರೀಕಲಿದೇವರ ತೊತ್ತು ಪಾತ್ರದ ಸಿರಿಯವೆ, ಕಲ್ಲಕೇರಿಯ ತನ್ನ ಮನೆಯನಾ ದೇವರಿಗೆ ಕೊಟ್ಟು, ಆ ಮನೆಯೊಳಗೆ ತಾನುಂ ತನ್ನ ವಂಶಜರಾದಿರ್ದೊಡೆಂ. ಆ ಚಂದ್ರಾರ್ಕತಾರಂ, ದೇವರ ನಂದಾದೀವಿಗೆಗೆ ವರ್ಷಪ್ರತಿ ಪಣವೆರಡುಂ ಕೊಟ್ಟು ಮನೆಯೊಳಗೆ ಸುಖದಿನಿಪ್ಪುದು ಎಂದು ಉಲ್ಲೇಖವಾಗಿದೆ. ಇದರ ಕಾಲ ೧೦೩೫ ಎಂದಿದೆ. ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಇದು ಹಳೆಗನ್ನಡ ಕಾಲ. ಆದರೆ ಶಾಸನದ ಭಾಷಾ ಪ್ರಯೋಗ, ತೀರಾ ನಡುಗನ್ನಡದ್ದಾಗಿದೆ. ಶಾಸನದಲ್ಲಿ ಕಾಣುವ ಅಂತ್ಯಾನುಸ್ವಾರಗಳೆಲ್ಲ ಬಿಟ್ಟುಹೋಗಿ ಹೊಸಗನ್ನಡದ ಸಮೀಪಕ್ಕೆ ಕಂಡುಬರುತ್ತದೆ. ಈ ಶಾಸನದಲ್ಲಿ[೮೯] ಭಾಷೆ ಹಳೆಗನ್ನಡದ್ದಾದರೂ ಸ್ಪಷ್ಟವಿಲ್ಲ. ಇದರಲ್ಲಿ ಕೊಲವಿದಕೆ ಭ್ರಿತ್ಯ ತಾರಾಯಣ, ಪ್ರಸವೊತ ತಕ್ಕೋಜಂ, ನೀತಿಸೋಂ... ಹೀಗೆ ಮುಂದುವರಿಯುತ್ತದೆ. ಆದರೆ ಕಾಲದ ಉಲ್ಲೇಖವಿಲ್ಲ. ಇಂತಹ ಭಾಷೆ, ಶುದ್ಧವಿಲ್ಲದ ಶಾಸನಗಳು ಕಂಡುಬರುತ್ತವೆ.[೯೦]

೧. ಶಾಸನ ಕವಿಗಳು

ಕನ್ನಡ ಶಾಸನ ಪ್ರಪಂಚಕ್ಕೆ ಸಾಹಿತ್ಯ ದೃಷ್ಟಿಯಿಂದ ಒಂದು ಮಹತ್ವದ ಸ್ಥಾನವನ್ನು ಕೊಟ್ಟವರು ಶಾಸನ ಕವಿಗಳು. ರಾಜರು, ಮಂತ್ರಿಗಳು, ಹಿರಿಯ ಅಧಿಕಾರಿಗಳು ಕವಿಗಳಿಗೆ, ವಿದ್ವಾಂಸರಿಗೆ ಆಶ್ರಯದಾತರಾಗಿದ್ದರು. ಎಷ್ಟೋ ಜನ ತಾವೇ ಸ್ವತಃ ಕವಿಗಳೂ ಆಗಿದ್ದರು. ಇವರು ಸಾಹಿತ್ಯವನ್ನು ಬಹುವಾಗಿ ಗೌರವಿಸುತ್ತಿದ್ದರಿಂದ ಸಾಹಿತ್ಯವು ಜನರ ಜೀವನದಲ್ಲಿ ಹಾಸುಹೊಕ್ಕಾಗಿದ್ದಿತು. ಅವರ ಜೀವನದ ಮೌಲ್ಯಗಳನ್ನು ನಿರ್ಧರಿಸುವ ಶಕ್ತಿ ಅದಕ್ಕಿದ್ದಿತು. ರಾಜಾಸ್ಥಾನಗಳಲ್ಲಿ, ಅಗ್ರಹಾರಗಳಲ್ಲಿ, ಊರುಗಳಲ್ಲಿ ಕಾವ್ಯಗೋಷ್ಠಿಗಳನ್ನು ನಡೆಸುತ್ತಿದ್ದರು. ಶಾಸನ ಕವಿಗಳನ್ನು ಸಂಸ್ಕೃತ ಕವಿಗಳೆನ್ನಬಹುದು. ಇವರು ಕನ್ನಡ ಕವಿಗಳಿಗೆ ಆದರ್ಶಪ್ರಾಯರಾಗಿದ್ದರು.

ಇಂತಹ ಕವಿಗಳು ಶಾಸನಗಳನ್ನು ಕಾವ್ಯಗಳಂತೆ ಬರೆಯುತ್ತಿದ್ದರು. ಅಂದರೆ ರಾಜಕೀಯ ಮತ್ತು ಸಾಮಾಜಿಕ ದಾಖಲೆಗಳಾದ ಶಾಸನಗಳನ್ನು ತಮ್ಮ ಪ್ರತಿಭಾ ಸ್ಪರ್ಶದಿಂದ ಸಾಹಿತ್ಯವನ್ನಾಗಿಸಿದ ಕವಿಗಳ ಸಂಖ್ಯೆ ವಿಫಲ. ಶಾಸನಗಳ ಮುಖ್ಯ ಉದ್ದೇಶ ಸಂಗತಿಗಳ ನಿರೂಪಣೆ. ಆದರೂ ಸಹ ಇವುಗಳನ್ನು ಕಾವ್ಯಾತ್ಮಕವಾಗಿ ನಿರೂಪಿಸಿದ್ದರು. ವೀರಗಲ್ಲು ಮಾಸ್ತಿಕಲ್ಲುಗಳಲ್ಲಿ ಬರುವ ಸಂಗತಿಗಳು ಎಂಥವರನ್ನೂ ಕರಗಿಸತಕ್ಕವು. ಆ ಶಾಸನಗಳನ್ನು ಓದುವಾಗ ಇವುಗಳನ್ನು ಬರೆಯುವ ಕವಿಗಳು ಭಾವಾನಿಷ್ಟರಾಗಿದ್ದರೆಂದು ಓದುಗರಿಗೆ ಅನ್ನಿಸುತ್ತದೆ. ಬಹುಪಾಲು ಶಾಸನಗಳು ಸಾಹಿತ್ಯ ದೃಷ್ಟಿಯಿಂದ ನೀರಸವಾಗಿದ್ದರೂ, ಕೆಲವು ಶಾಸನಗಳು ವಿಷಯ ನಿರೂಪಣಾ ಶೈಲಿಯಿಂದ ಓದುಗರಿಗೆ ಕಾವ್ಯದ ಅಂಶಗಳನ್ನು ತಲುಪಿಸುತ್ತವೆ. ಶೋಕ, ಕರುಣೆ, ಅದ್ಭುತ, ಹಾಸ್ಯ, ವೀರದಿಂದ ಭಕ್ತಿಭಾವಗಳನ್ನು ಕೆರಳಿಸುತ್ತವೆ. ಕೆಲವು ಶಾಸನಗಳಂತೂ ಪುಟ್ಟ ಕಾವ್ಯಗಳೇ ಸರಿ. ಆ ಕಾಲದ ಜಾಡನ್ನು ಹಿಡಿದು ಅವುಸಾಗಿರುವುದು ಕಂಡುಬರುತ್ತದೆ. ಕಾವ್ಯಗಳಂತೆಯೇ ಅವು ಸಮುದ್ರ ವರ್ಣನೆಯಿಂದ ಆರಂಭವಾಗಿರುವುದುಂಟು. ಮಧ್ಯ ಅಲ್ಲಲ್ಲಿ ಅವಕಾಶಗಳನ್ನು ಕಲ್ಪಿಸಿಕೊಂಡು ದೇಶವನ್ನು ಪರ್ವತಗಳನ್ನೂ ನದಿಗಳನ್ನು ಹೊಲಗಳನ್ನು ವರ್ಣಿಸಿರುವ ಶಾಸನಗಳು ಇವೆ. ವ್ಯಕ್ತಿ ಚಿತ್ರಗಳನ್ನು ಕೊಡವಾಗ ಉತ್ಪ್ರೇಕ್ಷೆ ಸಾಮಾನ್ಯವಾಗಿದ್ದರೂ, ಮನುಷ್ಯ ಸ್ವಭಾವವನ್ನು ಎಷ್ಟೋ ಶಾಸನಗಳು ಸಮರ್ಥವಾದ ರೀತಿಯಲ್ಲಿ ಹಿಡಿದಿಟ್ಟಿವೆ. ಸರಳ ಶೈಲಿಯ ಶಾಸನಗಳನ್ನು, ಪಾಂಡಿತ್ಯ ಪ್ರದರ್ಶನವೇ ಮುಖ್ಯವಾಗಿರುವ ಶಾಸನಗಳನ್ನು ಕಾಣಬಹುದು. ಇಂತಹ ಎಲ್ಲಾ ಕಾವ್ಯಾಂಶಗಳನ್ನು ಶಾಸನಗಳಲ್ಲಿ ಸೆರೆಹಿಡಿದು ಕಂಡರಿಸಿದವರು ಶಾಸನ ಕವಿಗಳು. ಶಾಸನಗಳನ್ನು ಬರೆದಿರುವ ಕವಿಗಳು ತಮ್ಮ ಹೆಸರನ್ನು ಹೇಳಿಕೊಂಡು ಬಂದಿರುವುದು ಕೆಲವರು ಮಾತ್ರ. ಅಂತವರನ್ನು ಶಾಸನದ ಕೊನೆಯ ಭಾಗದಲ್ಲಿ ಕಾಣಬಹುದು. ಆದರೆ ಕವಿಯಂತೆ(ಕವಿ ಪದದ ಪರ್ಯಾಯವಾಗಿ) ಲಿಪಿಕಾರ ರೂವಾರಿ ಎಂಬ ಪದಗಳು ಬಳಕೆಯಾಗಿರುವುದರಿಂದ, ಕವಿಯನ್ನು ಪ್ರತ್ಯೇಕಿಸುವುದು ಕಠಿಣ. ಕಲ್ಯಾಣ ಚಾಲುಕ್ಯರ ಕಾಲದ ರೂವಾರಿಗಳು ಶಿಲ್ಪಕಲೆಯಂತೆಯೇ, ಶಾಸನ ಬರೆಯುವುದನ್ನು(ಕೆತ್ತುವುದು) ಒಂದು ಕಲೆಯಾಗಿ ರೂಡಿಸಿಕೊಂಡಿದ್ದರು.

ಶಾಸನಗಳಿಗೆ ಬಳಸುವ ಫಲಕಗಳಲ್ಲಿ ಶಿಲೆ ಮತ್ತು ಲೋಹಪ್ರಮುಖವಾದುದು. ಕವಿ ರಚಿಸಿಕೊಟ್ಟ ಪಾಠವನ್ನು(ಪದ್ಯ) ಫಲಕಗಳ ಮೇಲೆ ಕೊರೆಯುವವರು ಶಿಲಾವಿದ್ಯಾ ಪ್ರವೀಣರಾದ ಕಲ್ಲುಕುಟಿಗರು ಮತ್ತು ಲೋಹವಿದ್ಯಾ ಪ್ರವೀಣರಾದ ಅಕ್ಕಸಾಲಿಗರು. ಕೆಲವು ಸಲ ಬಡಿಗ, ಕಮ್ಮಾರ ಮತ್ತು ಕಂಚಗಾರರೂ ಈ ಕಾರ್ಯವನ್ನು ಮಾಡುತ್ತಿದ್ದರು. ಶಾಸನಗಳನ್ನು ಕೆತ್ತುವ(ಅಕ್ಷರಶಿಲ್ಪ)ವರನ್ನು ಶಾಸನ ಭಾಷೆಯಲ್ಲಿ ರೂವಾರಿ ಎಂದೇ ಕರೆದಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ರೂವಾರಿಗಳ ಹೆಸರಿನ ಹಿಂದೆ ಕಲ್ಲು ಕುಟಿಗ, ಕಲ್ಲಂಕಡಿದಾತ, ಕಂಡರಣೆಕಾರ, ಸರಸ್ವತಿಗುಣಭಾತ್ರ, ಗಣಪುತ್ರ, ಗಣದಾಸಿ, ಶಾಸನಾಚಾರ್ಯ ಸೂತ್ರದಾರಿ,(ಗವುಂಡ) ರೂವಾರಿ ಎಂಬ ವಿಶೇಷಣಗಳು ಇರುತ್ತವೆ.[೯೧] ಇವುಗಳಿಂದ ಅಕ್ಷರ ಶಿಲ್ಪಿಯನ್ನು

[illegible]

ಗುರುತಿಸಲು ಸಾಧ್ಯ. ಇದಲ್ಲದೆ ಇವರ ಹೆಸರುಗಳಿಗೆ ಆಚಾರಿ, ಓಜ, ಶಿಲ್ಪಿ ಎಂಬ ಉಪಸರ್ಗಗಳಿರುತ್ತವೆ. ಈ ರೂವಾರಿಗಳು ಕನ್ನಡ ಅಕ್ಷರಗಳನ್ನು ಕೊರೆಯುವಲ್ಲಿ ಕೆಲವೊಂದು ಸಂಗತಿಗಳನ್ನು ಅರಿತಿರಬೇಕೆಂದು ಈ ಪದ್ಯದಲ್ಲಿ ಕಂಡುಬರುತ್ತದೆ.

ಪೊಕ್ಕಳು ತಲೆಕಟ್ಟು ಮನ
ನ್ತಕ್ಕರದಯವಮನರಿದು ಖಣ್ಡರಿಸಲುಕೀ
ಇಕ್ಕುಡನೆ ಬಲ್ಲನರಿಯೆ
ಮ್ಮಿರ್ಕ್ಕವರೆನ್ದೊಸೆದು ಧರಣಿಬಣ್ಣಿಸುತಿಕ್ಕುಂ[3]

ಎಂಬಂತಹ ಅಂಶಗಳನ್ನು ಅರಿತಿರಬೇಕು. ಲಿಪಿಕಾರನೂ ಸಹ ಇವನಂತೆಯೇ ಕಾಣಿಸಿಕೊಳ್ಳುತ್ತಾನೆ. 'ಬಳಸಿ ಬರೆಯಲು ಕಂಟಪತ್ರದ ಉಲುಹಗೆಡಗ್ಗಳಿಕೆ' ಎಂಬ ಕುಮಾರವ್ಯಾಸನ ವೀರನಾರಾಯಣನೇ ಲಿಪಿಕಾರ ಎಂಬ ಮಾತನ್ನು ಇಲ್ಲಿ ನೆನಪಿಸಬಹುದು. ಇವರನ್ನು ಶಾಸನಗಳಲ್ಲಿ ಗುರುತಿಸುವುದು ಕಷ್ಟದ ಕಾರ್ಯ. ಆದರೂ ಬರೆದಂ, ಲಿಖಿಸಿದಂ ಎಂಬ ಪದಗಳು ಬಳಕೆಯಿಂದ ಇವರನ್ನು ಗುರುತಿಸಬಹುದು. ಶಾಸನಗಳಲ್ಲಿ ಈ ಮೂವರು ಅವಶ್ಯವೆಂದು, ಕಂಡುಬರುತ್ತದೆ. ಶಾಸನ(ಗಳ) ಕೊನೆಯಲ್ಲಿ ವಾಕ್ಯದ ನಂತರ ಅಥವಾ ಮೊದಲು ಆ ಶಾಸನವನ್ನು ಬರೆದಾತನ ಹೆಸರು ಕಾಣಿಸಿಕೊಳ್ಳುತ್ತದೆ. ಇದು ಎಲ್ಲ ಶಾಸನಗಳಲ್ಲಿಯೂ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಮೇಲೆ ಹೇಳಿದ ಮಾತನ್ನೇ ಸುಲಭವಾಗಿ ಗುರುತಿಸುವುದಾದರೆ, ಒಂದು ಸೂಕ್ಷ್ಮತೆಯನ್ನು ಗಮನಿಸಬೇಕು. ಕಂಡರಣೆ, ಕಂಡರಿಸಿದಾತ ಎಂದು ಬಂದಾಗ ಅದು ಕಲ್ಲಿನ ಮೇಲೆ ಕಡೆದ, ಕಲ್ಲುಕುಟಿಗನಿಗೆ ಸಂಬಂಧಿಸಿದುದು ಎಂಬುದು ಸ್ಪಷ್ಟ. ಕೆಲವೊಮ್ಮೆ 'ಓವಝ'(ಓಜ) ಎಂದಿರದೆ, ಅವನ ಬಿರುದು ಕಂಡುಬರುತ್ತದೆ. ಇಲ್ಲಿ ವಿಗ್ರಹಗಳನ್ನು ಕಡೆದಾತ 'ರೂವಾರಿ' ಯಾದರೆ, ಓಜ ಎಂಬ ಪದ ಕಲ್ಲುಕುಟಿಗನಿಗೂ ಅನ್ವಯಿಸುತ್ತದೆ. ಆದರೆ 'ಬರೆದೋ, ಬರೆದಾತ' ಎಂಬ ಮಾತು ಬಂದಾಗ, ಅದು ಯಾರಿಗೆ ಅನ್ವಯಿಸುತ್ತದೆ ಎಂಬುದನ್ನು ಹೇಳುವುದು ಸಮಸ್ಯೆಯಾಗುತ್ತದೆ. ಇದರಿಂದ ಇಲ್ಲಿ ಮೂರು ಘಟ್ಟಗಳನ್ನು ಗುರುತಿಸಬಹುದು. ದಾನಪತ್ರವನ್ನು ಬರೆಯುವುದು, ಇದನ್ನು ಸಾಧಾರವಣವಾಗಿ ಒಬ್ಬ ಅಧಿಕಾರಿ, ಸೇನಭೋವ, ಕರಣಿಕ, ಲೇಖಕ ತಯಾರಿಸುತ್ತಾನೆ. ನಂತರ ಇದನ್ನು ಅಂದರೆ, ಇವನೇ ಕಲ್ಲನ್ನು ನಯಗೊಳಿಸಿ ಸಿದ್ಧಪಡಿಸಿದ ಮುಖದ ಮೇಲೆ ಉತ್ತಮ ಹಸ್ತಾಕ್ಷರವನ್ನು ಬರೆಯಬಲ್ಲ. ಲಿಪಿಕಾರಸುಣ್ಣದಿಂದಲೂ, ಬಣ್ಣದಿಂದಲೂ ಪ್ರತಿಮಾಡುತ್ತಾನೆ. ಆ ಬಳಿಕ ರೂವಾರಿ ಅಕ್ಷರಗಳನ್ನು ಕೆತ್ತುತ್ತಾನೆ. ರೂವಾರಿ ಉತ್ತಮ ಕಲೆಗಾರನಾಗಿದ್ದರೂ (ಅನಕ್ಷರಸ್ತರು) ಅವಿದ್ಯಾವಂತನಾಗಿರಬಹುದು. ಒಂದು ವೇಳೆ ಆತ ಸ್ವತಃ ಅಕ್ಷರಸ್ತನಾಗಿ, ಅಕ್ಷರಗಳನ್ನು ರೂಪಿಸಬಲ್ಲವನಾಗಿದ್ದಲ್ಲಿ. ಮಧ್ಯದ ಘಟ್ಟ ಅವಶ್ಯಕವೆನಿಸುವುದಿಲ್ಲ. ಶಾಸನದಲ್ಲಿ ಕೇವಲ 'ಬರೆದಾತ' ಎಂದಾಗ ಈ ಮೂವರಲ್ಲಿ ಇದು ಯಾರಿಗೆ ಅನ್ವಯಿಸುತ್ತದೆಂದು(ಮೇಲೆ ಹೇಳಿದ ಘಟ್ಟಗಳು)

[illegible]

ಹೇಳಲಾಗುವುದಿಲ್ಲ. ಆದರೆ ಓಜ ಎಂಬ ವಿಶೇಷಣವಿದ್ದರೆ ಆ ವ್ಯಕ್ತಿಯನ್ನು ಕಲ್ಲುಕುಟಿಗನೇ ಎಂದು ಹೇಳಬಹುದು. ಇಲ್ಲಿ ಬರುವ ಶಾಸನಗಳಲ್ಲಿ ಲಿಪಿಕಾರ ಮತ್ತು ರೂವಾರಿಗಳಿಬ್ಬರ ಉಲ್ಲೇಖಗಳು ಬಂದಿವೆ.

ಸರಸತರ ಮದುವೆಂದಕ್ಕರಿಗರ್ಬ್ಬಣ್ಣಿಪಿನವೀ
ಶಿಲಾಶಾಸನವು ಮುತ್ತಿ ನರ್ಸರಿಗೆ, ಯನನುಸರಸಿಬರದಂತೆ'

ಎಂಬ ಶಾಸನದ ಉಲ್ಲೇಖದಂತೆ, ಈ ಶಾಸನದಲ್ಲಿ ರೂವಾರಿಯನ್ನು ಹೀಗೆ ಬಣ್ಣಿಸುತ್ತದೆ.[೯೩]

ಬರೆಪದೊಳ್ ಹಸ್ತಿಸಿಂಗಂ ಹರಿಣಿಯ
ರೂಹಗೆಯಕ್ಕರಾವಳಿಯಿಂದಂ ಬರೆ
ಯಲತಿಜಾಣನೆಂದಡೆ ಪುರುದಿ(ಡಿ) ಸವೆಡೇಲವೊ ರೇವಣಾರ್ಯ್ಯ ನೊಳಂದಂ

ಎಂದಿದ್ದು, ಇದರ ಮುಂದುವರಿದ ಭಾಗದಲ್ಲಿ ಈತನನ್ನು ಕುರಿತು ಉಲ್ಲೇಖಿಸುತ್ತದೆ.

ದೆಂಟಣಿಬರೆವನೆಲೆಜಾ
ತ್ಥಕ ನಿನ್ನಳವೊ ಚಿತ್ರದ ಕರದೊಳ್‌ಪಂ|
ಕಂಟ್ಮದೊಳ್ ಬರೆವ ರೇವನ
ಕಂಟ್ಮಕಳೆಣಿಸ ನೋರ್ಪ್ಪೊಡೆಂದೇಕೈಕಂ

ಎಂಬ ಮಾತಿನಲ್ಲಿ(ರೂವಣ) ರೇವಣರ ಹಸ್ತ ಕೌಶಲದ ಸಿದ್ಧಿ ವ್ಯಕ್ತಗೊಂಡಿದೆ. ಹೀಗೆ ಕೆಲವರು ಪ್ರಾಣಿ-ಪಕ್ಷಿಗಳನ್ನು ಅಳವಡಿಸಿ ಸಾಲಂಕೃತ ಅಕ್ಷರಗಳನ್ನು ಬರೆಯುವುದನ್ನು ರೂಡಿಸಿಕೊಂಡಿದ್ದರು. ಇಲ್ಲಿ'ರೇವಣಾರ್ಯನೆಂಬ ಲಿಪಿಕಾರ ಚಿತ್ರದ ಕರದೊಳ್ಪಂ ಕಣ್ಮದೊಳ್' ಬರೆಯುತ್ತಿದ್ದನೆಂದು ಹೇಳಿದೆ. ಕೊನೆಗೆ ನಾಕೋಜ(ಶಿ) ಸಿವಾಪಾದಶೇಖರಂ; ಎಂದು ಉಲ್ಲೇಖವಾಗಿದೆ. ಇದನ್ನು ಶಾಸನದ ರೂವಾರಿ ನಾಕೋಜ ಎಂದು ಹೇಳಬಹುದು.[೯೪] ಇದನ್ನು ಬರೆದವನು ಬೇರೆ, ಕಂಡರಿಸಿದವನು ಬೇರೆ ಎಂದು ಗುರುತಿಸಬಹುದು. ಶಾಸನದ ಕೊನೆಯ ಭಾಗದಲ್ಲಿ ರೂವಾರಿ ತನ್ನ(ಹೆಚ್ಚುಗಾರಿಕೆಯನ್ನು)ನ್ನು ತಾನೇ ಹೊಗಳಿಕೊಂಡಿದ್ದಾನೆ. ಈ ಶಾಸನದ ಕೊನೆಯ ಭಾಗದಲ್ಲಿ ಶಾಸನವನ್ನು ಮಾಡಿದವನನ್ನು ಉಲ್ಲೇಖಿಸುತ್ತದೆ. ಇಲ್ಲಿ 'ಚನ್ನೋಜ ಮಾಡಿದ' ಎಂದು ಕಂಡುಬರುತ್ತದೆ.[೯೫] ಅಂದರೆ ಶಾಸನವನ್ನು ಕೆತ್ತಿದವನೇ ಎಂದು ಹೇಳಬಹುದು. ಏಕೆಂದರೆ "ಮಾಡಿದ" ಎಂದು ಬಂದಿರುವುದರಿಂದ ಶಾಸನವನ್ನು ಕೆತ್ತಿದವನು ಚನ್ನೊಜ ಎಂದು ಗೊತ್ತಾಗುತ್ತದೆ. ಇನ್ನು ಈ ಶಾಸನದಲ್ಲಿ ಇಬ್ಬರನ್ನು ಉಲ್ಲೇಖಿಸಿದೆ.

ಸರಸ್ವತಿಗೆ xx ಸಿಕೊಳಕರಣಿ
ಕಾಳಯ ಬರೆದ, ಕಣ್ಡರಿಸಿದ ಚಲು

ಎಂದು ಬಂದಿದೆ.[೯೬] ಅಂದರೆ ಲಿಪಿಕಾರ ಕಾಳಯನಾದರೆ(ಬರೆದವನು), ಕಂಡರಿಸಿದವನು(ರೂವಾರಿ) ಚಲು ಎಂದು ಹೇಳಬಹುದಾಗಿದೆ. ಇದು ತ್ರುಟಿತವಾಗಿರುವುದರಿಂದ ರೂವಾರಿಯ ಹೆಸರು 'ಚಲು' ಎಂದು

[illegible]

ಮಾತ್ರ ಕಾಣಿಸಿಕೊಳ್ಳುತ್ತದೆ. ಇದರಲ್ಲಿ ಲಿಪಿಕಾರನ ಬಗ್ಗೆ ತಿಳಿಸುತ್ತದೆ. ಶಾಸನದ ಕೊನೆಯಲ್ಲಿ 'ಚಟ್ಟೋಜಂಬರೆದಂ' ಎಂದಿದೆ.[೯೭] ಆದರೆ ಇಲ್ಲಿ ಓಜ ಎಂಬ ವಿಶೇಷಣವೂ ಈ ಹೆಸರಿನಲ್ಲಿ ಕಂಡು ಬರುತ್ತದೆ. ಮೇಲಿನ ಶಾಸನಗಳಲ್ಲಿ ನಾಕೋಜ, ಚನ್ನೋಜ ಎಂದು ಬಂದಿರುವುದರಿಂದ, ರೂವಾರಿ ಎಂದು ಸ್ಪಷ್ಟಪಡಿಸಬಹುದು. ಆದರೆ ಈ ಶಾಸನದಲ್ಲಿ 'ಚಟ್ಟೋಜ ಬರೆದಂ' ಎಂದಿರುವುದರಿಂದ, ಅದರಲ್ಲೂ ವಿಶೇಷವಾಗಿ 'ಬರೆದಂ' ಎಂದು ಬಂದಿರುವುದರಿಂದ ಲಿಪಿಕಾರನೇ ಇರಬೇಕು. ಮೇಲಿನವುಗಳಲ್ಲಿ 'ಮಾಡಿದ' ಎಂದು ಉಲ್ಲೇಖವಾದರೆ, ಇದರಲ್ಲಿ 'ಬರೆದಂ' ಎಂದು ಉಲ್ಲೇಖವಾಗಿರುವುದರಿಂದ ಹೀಗೆ ಹೇಳಬೇಕಾಗುತ್ತದೆ. ಆದರೂ 'ಓಜ' ಎಂಬ ವಿಶೇಷಣ ಬಂದಿರುವುದರಿಂದ, ಲಿಪಿಕಾರ ಮತ್ತು ರೂವಾರಿ ಎಂದು ಸಹ ಗುರುತಿಸಬಹುದು. ಇಬ್ಬರೂ ಸೇರಿ ಮಾಡಿರಬಹುದು. ಇನ್ನು ಈ ಶಾಸನದಲ್ಲಿ ಸ್ಪಷ್ಟವಾಗಿ ಇಬ್ಬರನ್ನು ಉಲ್ಲೇಖಿಸಿದೆ. ಕಾಳಯ ಬರೆದ(ಲಿಪಿಕಾರ) ಎಂದಿದ್ದರೆ, 'ಚಲು' ಎಂಬುವವನು ಕಂಡರಿಸಿದವನು (ರೂವಾರಿ) ಎಂದು ವ್ಯಕ್ತಪಡಿಸುತ್ತದೆ. ಈ ಶಾಸನದಲ್ಲಿ ರೂವಾರಿ ಛನ್ನೋಜನ ಮಗ ಹಂಪ ಮಾಡಿದನು ಎಂದು ಕಂಡುಬರುತ್ತದೆ. ಅಂದರೆ ಛನ್ನೋಜನ ಮಗ ಹಂಪಮಾಡಿದಂ ಎಂದು ಉಲ್ಲೇಖವಾಗಿದೆ.[೯೮] ಹೀಗೆ ಶಾಸನದಲ್ಲಿ ಕೊನೆಗೆ ಕಂಡುಬರುವ ಇವರಿಗೆ, ದಾನಗಳನ್ನು ನೀಡುತ್ತಿದ್ದರೆಂದು ಶಾಸನಗಳಲ್ಲಿ ವ್ಯಕ್ತವಾಗುತ್ತದೆ. ಯಾವುದೇ ಒಂದು ಕೆಲಸಕ್ಕೆ, ಶ್ರಮಕ್ಕೆ ತಕ್ಕಂತೆ ಬೆಲೆಸಿಕ್ಕರೆ, ಇನ್ನೊಂದು ಕೆಲಸಕ್ಕೆ ಅವಕಾಶ ಸಿಗುತ್ತದೆ. ಅಂದರೆ ಶಾಸನಗಳನ್ನು ಕೆತ್ತಿದವರಿಗೆ, ಬರದವರಿಗೆ ಶ್ರಮಕ್ಕೆ ಪ್ರತಿಯಾಗಿ, ಇವರಿಗೆ ಸಂಭಾವನೆ ರೂಪದಲ್ಲಿ ಭೂಮಿಯನ್ನು ಧಾನ್ಯಗಳನ್ನು ಕೊಟ್ಟು, ಇವರಿಗೆ ಆಶ್ರಯವನ್ನು ನೀಡಿದ್ದರು ಎಂದು ಕಂಡುಬರುತ್ತದೆ. ಸಂಭಾವನೆ ಪಡೆದ ಇವರು ಅದನ್ನು ದೇವಭೋಗ ಭಾವದಿಂದ ರಕ್ಷಿಸಬೇಕೆಂದು ಕೆಲವೊಂದು ಶಾಸನಗಳಲ್ಲಿ ಉಲ್ಲೇಖಬರುತ್ತದೆ. ಈ ಒಂದು ಶಾಸನದಲ್ಲಿ ಭಕ್ತಿಪೂರ್ವಕವಾಗಿ ಸಾಸನವೀ ಲಿಂಗವಮಾಡಿಸಿದರ್ ಮಂಗಳಶ್ರೀ ಎಂದಿದೆ.[೯೯] ಇನ್ನು ಕೆಲವು ಶಾಸನಗಳಲ್ಲಿ ಹೆಸರುಗಳು ಮಾತ್ರ ಕಂಡುಬಂದಿವೆ. ಏಕೆಂದರೆ ಇವರು ಯಾರು ಎಂಬುದನ್ನು ಸ್ಪಷ್ಟಪಡಿಸುವುದಿಲ್ಲ. ಪ್ರಾಯಶಃ ಇವರನ್ನು ಶಿಲ್ಪಿಗಳೆನ್ನಬಹುದಾಗಿದೆ.

ಈ ಶಾಸನದಲ್ಲಿ ಸ್ವಸ್ತಿ ಶ್ರೀ ನೊಳಂಬಕೊಳೆ ಏಚಮ್ಮ ಪ್ರತಿಮೆಯನ್ನು ಮಾಡಿದ ಎಂದು ಉಲ್ಲೇಖವಾಗಿದೆ.[೧೦೦] ಆದರೆ ಇವರು ಯಾರು, ಏನು ಎಂಬುದು ಸ್ಪಷ್ಟವಿಲ್ಲ. ನೊಳಂಬಕೊಳೆ ಏಚಮ್ಮನು, ಯಾವುದಾದರೂ ದೇವರ ಪ್ರತಿಮೆ ಮಾಡಿರಬಹುದು. ಇಲ್ಲಿ ನೊಳಂಬ ಎಂದಿರುವುದರಿಂದ ನೊಳಂಬರ ವಂಶದವರು ಆಗಿರಬಹುದು. ಇಲ್ಲವೆ ಏಚಮ್ಮನ ಹೆಸರೇ ನೊಳಂಬ ಎಂದು ಬಂದಿರಬಹುದು. ಇಲ್ಲಿ ಇನ್ನೊಂದು ಸಮಸ್ಯೆ ಎಂದರೆ 'ಏಚಮ್ಮ' ಎಂದಿದ್ದು ಸ್ತ್ರೀಯ ಹೆಸರು ಗುರುತಿಸಬಹುದು. ಆದರೆ ಮಾಡಿದ ಎಂದಿರುವುದರಿಂದ ಏಚಮ್ಮ' ಎಂಬುವವರು ಪುರುಷನಿರಬೇಕು ಎಂದು ಹೇಳಬಹುದು.

ಇಂತಹದ್ದೇ ಇನ್ನೊಂದು ಶಾಸನದಲ್ಲಿ ಮತೇಯರ್ ಮಾಡಿಸಿದ ಎಂದು ಉಲ್ಲೇಖವಾಗಿದೆ.[೧೦೧] ಇದು ತ್ರುಟಿತವಾಗಿದ್ದು ಶಾಸನ ಪಾಠ, ಭಾಷೆ, ಸ್ಪಷ್ಟವಾಗಿಲ್ಲ. ಇನ್ನೊಂದು ಶಾಸನದಲ್ಲಿ[೧೦೨] ಸರಸ್ವತಿ ಪ್ರತಿಮೆಯನ್ನು ಗಗಯ್ಯ, ಮಾಡಿಸಿದ ಎಂದು ಉಲ್ಲೇಖವಾಗಿದೆ. ಯಾರು ಎನ್ನುವುದು ತಿಳಿಯುವುದಿಲ್ಲ. ಇನ್ನು ಈ ಶಾಸನದಲ್ಲಿ ಅಯ್ಯಣ ಎಂಬ ಶಿಲ್ಪಿಯನ್ನು ಹೊಗಳಿದೆ.

ಸ್ವಸ್ತಿ ಅಯ್ಯಣ್ಣ ಬಣ್ಣರದಾಸಿ
ನಣ್ಣರ ತೊಳ್ತು ಕೆಳಗೆ ನೆಲ್ಲಾತಂ
ಪಿಸುಣ ಮೂಗರಿವೊ ಆಳ್ದನ
ದಣ್ಣೆಕೂಡಿ ಪುಣ್ಡರಿಯನವಾಮ...

ಎಂಬ ಉಲ್ಲೇಖ ಬಂದಿದೆ.[೧೦೩] ಆದರೆ ಇದರ ಅರ್ಥದಲ್ಲಿ ಸ್ಪಷ್ಟತೆ ಇಲ್ಲ. ಈ ಶಾಸನದಲ್ಲಿ ಅಣ್ಣಮಯ್ಯನು ಮಾಡಿಸಿದ ಎಂದು ಬಂದಿದೆ.[೧೦೪] ಇಂತಹ ಅನೇಕ ಶಾಸನಗಳು ಇಲ್ಲಿ ಉಲ್ಲೇಖವಾಗಿವೆ. ಅವುಗಳ ಸರಿಯಾದ ವಿವರಣೆ ಇಲ್ಲ. ಮಲ್ಲಯ್ಯ ಮಾಡಿಸಿದ,[೧೦೫] ಮಲಯಾರ ಕೊಮಾರ ಕಲ್ಲ ಶಿಖರ ಮಾಡಿಸಿದ.[೧೦೬] ಈ ಶಾಸನದಲ್ಲಿ ಉಲ್ಲೇಖಿಸುವ ಮಲಯಾರ ಕೊಮಾರ ಎಂಬುವವನ್ನು ಪ್ರಾಯಶಃ ಕಲಿದೇವರ ಶಿಖರವನ್ನು ಮಾಡಿಸಿರಬೇಕು ಏಕೆಂದರೆ, ಕಲ್ಲಶಿಖರ ಎಂದಿರುವುದರಿಂದ ಇದನ್ನು ಹೀಗೆ ಊಹಿಸಬಹುದು. ಮಲಯಾರ ಕಾವಯ್ಯ ಮಾಡಿಸಿದ್ದು,[೧೦೭] ಎಲೆಯಭುಜಂಗರ ಕಣ್ನಯ್ಯನ[೧೦೮] ಮಗ ನಕಯ್ಯ ಮಾಡಿಸಿದ ಲಿಂಗ' ಎಂದಿದೆ.[೧೦೯] ಮಲಯಾರ ಕಂಡಯ್ಯ ಮಾಡಿಸಿದ್ದು ಎಂಬ ಉಲ್ಲೇಖಬಂದಿದೆ.[೧೧೦] ತೋಣಕಲಿಯ ಮರಳಯನ ಮಗ ಮಾರ್ತ್ತಾಂಡಯ್ಯ ಮಾಡಿಸಿದ.[೧೧೧] ಇನ್ನು ಈ ಶಾಸನದಲ್ಲಿ ಶಿಲ್ಪಿ ಎಂದಿದ್ದು, ಕೇಸವಯ್ಯನು ಪಶ್ಚಿಮದ ಕಡೆಯ ಭಾಗವನ್ನು ಕಟ್ಟಿದ ಎಂದು ಬಂದಿದ್ದು, ಕೊನೆಯಲ್ಲಿ ಪಡುವಣದ ರೂವಾರಿ ಎಂದಿದೆ.[೧೧೨] ಇದರಿಂದ ಇಲ್ಲಿ ಶಿಲ್ಪಿಗಳನ್ನು ರೂವಾರಿ ಎಂದು ಕರೆಯಲಾಗಿದೆ. ಈ ಶಾಸನದಲ್ಲಿ ಆಚನಭಂಟ ಎಂಬ ರೂವಾರಿ, ದೇವಾಲಯದ ಮೂರು ಕಡೆಯ ಕೆಲಸವನ್ನು ಮಾಡಿದನೆಂದು ಕಂಡುಬರುತ್ತದೆ. ಇತನನ್ನು ಹೀಗೆ ವರ್ಣಿಸುತ್ತದೆ.[೧೧೩]

'ಸ್ವಸ್ತಿ ಶ್ರೀಮತ್ ಷದೆ ಗಗನದಾಸಿಪೇರಾನೆಮಲ್ಲಂ
ನಂಚರ ತೋಟ್ತು ಆಚನಭಣ್ಡಾಂ ಆನೆಗಳದೇ
ವನ ಮಹಾಮಂತ್ರರಾಜವೇ ಕಲಿದೇವಸ್ವಾಮಿ
ದೇಗುಲದ ಮೂಱು ದೆಸೆಯ ರೂವಾರವಂ ಮಾಡಿಸಿದ ಮಂಗಳ ಮಹಾಶ್ರೀ

ಎಂದು ಉಲ್ಲೇಖ ಬಂದಿದೆ. ಇವನು ಆನೆಯನ್ನು ಪಳಗಿಸಿಕೊಂಡು ಅದರೊಂದಿಗೆ ಇದ್ದುಕೊಂಡು ಕಲಿದೇವರ ಮೂರು ದಿಕ್ಕುಗಳ ಕಡೆಗೆ ರೂವಾರವಂ ಮಾಡಿಸಿದನು. ಇವನನ್ನು ಕ್ರಿಯಾಶೀಲ ಎಂದು ಕರೆಬಹುದು. ಹೀಗೆ ಉಲ್ಲೇಖವಾಗಿರುವ ಇವರನ್ನು ಶಿಲ್ಪಗಳೆಂದು ಕರೆಯಬಹುದಾಗಿದೆ. ಆದರೆ ಕೆಲವು ಶಾಸನಗಳಲ್ಲಿ ಮಾಡಿಸಿದ ಎಂದು ಬಂದರೆ, ಕೆಲವು ಶಾಸನಗಳಲ್ಲಿ 'ರೂವಾರ' ಎಂದು ಉಲ್ಲೇಖವಾಗಿದೆ.

[illegible]

ಇದರಿಂದ ಇವರಿಬ್ಬರಲ್ಲೂ ಪರಸ್ಪರ ಸ್ವಾಮ್ಯವಿರುವುದರಿಂದ ಇಬ್ಬರು ಒಂದೇ ಎಂದು ಹೇಳಬಹುದು. ಇನ್ನು ಕೆಲವರು ಶೀಘ್ರ ಲಿಪಿಕಾರ ಇದ್ದರೆಂದು ಉಲ್ಲೇಖಿಸುತ್ತವೆ. ನಂದಿಬೇವೂರ ಒಂದು ಶಾಸನದಲ್ಲಿ 'ರಾಜೋಜನ(ಸಿ) ಶೀಘ್ರಲಿಖಿತ' ಎಂದು ಉಲ್ಲೇಖವಾಗಿದೆ.[೧೧೪] ಅವಸರದ ಬರವಣಿಗೆಯೂ ನಮ್ಮ ಪ್ರಾಚೀನ ದೃಷ್ಟಿಯಲ್ಲಿ ಒಂದು ಸಿದ್ಧಿಯನಿಸಿತ್ತು. ಇಂತಹ ಲಿಪಿಕಾರರನ್ನು ಗಮನಿಸಿದಾಗ ಈಗಿನ ಶೀಘ್ರ ಲಿಪಿಕಾರರನ್ನು(steno) ನೆನಪಿಸಬಹುದು. ಇನ್ನು ಕೆಲವು ಶಾಸನಗಳಲ್ಲಿ ಬಹುಲಿಪಿ ಬರಹಗಾರರು ಕಂಡುಬರುವುದನ್ನು ಗಮನಿಸಬಹುದು. ಇದೊಂದು ಹೆಮ್ಮೆಯ ಸಂಗತಿ ಎನ್ನಬಹುದು. ಮೈಲಾರದ ಒಂದು ಶಾಸನದಲ್ಲಿ ಮೂವರನ್ನು ಕಾಣಬಹುದು. ೧೦೪೬ ಶಾಸನದಲ್ಲಿ, ಶಾಸನವನ್ನು ರಚಿಸಿದವನು ನಾಗವಾರ, ನಾಗಮ್ಮನೆಂಬವವನು ಬರೆದ, ಚಾವುಂಡೋಜ ಎಂಬುವವನು ಕೆತ್ತಿದ ಎಂದು ಉಲ್ಲೇಖ ವಾಗಿದೆ.[೧೧೫] ಅಂದರೆ ಇಲ್ಲಿ ಕವಿ, ಲಿಪಿಕಾರ, ರೂವಾರಿಗಳನ್ನು ಕಾಣಬಹುದು. ಈ ಶಾಸನದಲ್ಲಿ 'ಕೊಂಡಯಾಚಾರಿ' ಎಂದು ಬರುತ್ತದೆ.[೧೧೬] ಇಲ್ಲಿ ಆಚಾರಿ ಎಂದಿರುವುದರಿಂದ, ಇವನು ರೂವಾರಿಯೇ ಇರಬೇಕು. ಇಂತಹ ಕವಿಗಳನ್ನು, ಶಿಲ್ಪಿಗಳನ್ನು, ಲಿಪಿಕಾರರನ್ನು, ರೂವಾರಿಗಳನ್ನು ಎಲ್ಲಾ ಶಾಸನಗಳಲ್ಲಿ ಚರ್ಚಿಸಲಾಯಿತು. ಇನ್ನು ಬಾಗಳಿಯಲ್ಲಿ ಒಬ್ಬ ಕವಿ ಇದ್ದನೆಂದು ಕಂಡುಬರುತ್ತದೆ. ಅವನು ದೇವಕವಿ ಎಂದು ಬರುತ್ತದೆ. ಇತನು ಸಹ ಸಾಹಿತ್ಯ ಕೃತಿಯನ್ನು ರಚಿಸಿದ್ದನೆಂದು ಕಂಡುಬರುತ್ತದೆ.

ದೇವಕವಿ(ದೇಪ)

> ಎಲ್ಲಬಲ್ಲವರಿಲ್ಲ ಬಲ್ಲವರು?
> ಬಲ್ಲವರು ಬಹಳಿಲ್ಲ
> ಎಲ್ಲರಿಗಲ್ಲ ಸಾಹಿತ್ಯ

ಎನ್ನುವ ತ್ರಿಪದಿಯಂತೆ ಈ ಕವಿಯು ಸಹ ಸಾಹಿತ್ಯವನ್ನು ರಚಿಸಿದ್ದಾನೆ. ಈತನನ್ನು ಬಾಗಳಿಯ ದೇವಕವಿ ಎಂದು ಕರೆಯಲಾಗಿದೆ. ಇವನು ಪಾಳೆಯಗಾರರ ಕಾಲದಲ್ಲಿ ಬದುಕಿದ್ದನೆಂದು ತಿಳಿದುಬರುತ್ತದೆ.[೧೧೭] ಕ್ರಿ.ಶ.೧೫೦೯ರಲ್ಲಿ ಮತ್ತು ಮೊದಲ ಪಾಳೆಯಗಾರನಾದ ದಾದಯ್ಯ ನಾಯಕ ಆಶ್ರಯ ಪಡೆದು ಬಾಗಳಿಯ ಕಲ್ಲಿನಾಥ ದೇವಾಲಯದಲ್ಲಿದ್ದನು.[೧೧೮] ನಮಗೆ ಉಪಲಬ್ದವಿರುವ ಸಾಹಿತ್ಯವನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡರೆ ಒಬ್ಬ 'ಅಂತ್ಯಜನ', ಮಹಾತ್ಮವನ್ನೇ ಕುರಿತು ಸ್ವತಂತ್ರಕಾವ್ಯ ರಚನೆ ಮಾಡಿರುವವನು. ಬಾಳ್ಗುಳಿಯ ಕಲಿದೇವನ ಆರಾಧಕನೂ(ಪ್ರಾಯಶಃ ತೆಲುಗುಬಾಳಿನ ಸಂತತಿಗೆ ಸೇರಿದವನೂ) ಆಗಿರುವ 'ದೇವಕವಿ' ಇವನು ಬಾಗಳಿಯಲ್ಲಿ ವಾಸವಾಗಿದ್ದನು. (ತರಳುಬಾಳು ಹುಣ್ಣಿಮೆ ಜೂನ್ ೧೧ರ ಸಂಚಿಕೆ)[೧೧೯] ಇವನು 'ಬಾಳ್ಗುಳಿಯ ಕಲಿದೇವ ನಿಂತು ಸುರಿದೊಲುದೇವ ಪೇಳ್ದಂ'[೧೨೦] ಎಂದು ಹೇಳುತ್ತಾ, ತಾನು ಬಾಗಳಿಯ ಗ್ರಾಮದವನೆಂದೂ, ಕಲಿದೇವನೆಂದರೆ ಅಲ್ಲಿನ ಕಲ್ಲೇಶ್ವರ ದೇವನೆಂದೂ, ಆ ದೇವರು ತನ್ನಲ್ಲಿ ಪ್ರೇರಿಸಿದಂತೆ ತಾನು ಹೇಳಿರುವುದಾಗಿಯೂ, ಹೇಳುತ್ತಾ ತನ್ನ ಅಭಿಮಾನವನ್ನು ವ್ಯಕ್ತಿಪಡಿಸಿಕೊಂಡಿರು

ವನಲ್ಲದೆ, ತನ್ನ ಹೆಸರು ದೇವನೆಂದು ಹೇಳಿಕೊಂಡು, ೧೧-೫-೧೫೮೭ರಲ್ಲಿ[೧೨೧] ಸಿದ್ದಲಿಂಗ ಚಾರಿತ್ರ್ಯ ಅಥವಾ ಮರುಳುಸಿದ್ಧ ಕಾವ್ಯವನ್ನು ಬರೆದನು. ಈ ದೇವಕವಿಯ ಬಗ್ಗೆ ವಹದೇವ ಬಣಕಾರರು(ದಿವಂಗತ) ತಮ್ಮ ವಚನದಲ್ಲಿ ಇವನ ಜಾತಿ ವಿಷಯ ಪ್ರಸ್ತಾಪಿಸಿದ್ದಾರೆ. ಆದರೆ ಈ ಕಾವ್ಯ ನಮಗೆ ದೊರೆತಿಲ್ಲ. ಅದರ ಕೆಲವೊಂದು ವಿಮರ್ಶೆಗಳು ಸಿಕ್ಕಿವೆ. ದೇವಕವಿಯ ಕುರಿತು ಕೆಲವೊಂದು ಮಾಹಿತಿಗಳು ದೊರೆತಿವೆ. ಈತ ಕವಿಯೂ ಆಗಿದ್ದನು, ಚರಿತ್ರೆಕಾರನೂ ಆಗಿದ್ದನು. ಇವನು ಗ್ರಾಮೀಣ ಬದುಕಿನ ಮಣ್ಣಿನ ಸೊಗಡನ್ನು ಅನುಭವಿಸಿದವನು. ಹಳ್ಳಿಯಲ್ಲಿ ನೆಲೆಯೂರಿನಿಂತು ಜಾತೀಯತೆ, ಮೇಲು-ಕೀಳು ಭಾವನೆ, ಮೂಢನಂಬಿಕೆ, ಕಂದಾಚಾರ ದ್ವೇಷ, ಕೀಳು ಭಾವನೆ, ಮತ್ಸರಗಳನ್ನು ನೋಡಿ ಅನುಭವಿಸಿದವನು. ಅವೈಜ್ಞಾನಿಕ ಜೀವನ ವಿದಾನದಿಂದ ಜಿಡ್ಡುಗಟ್ಟಿದ ಸಮಾಜದಲ್ಲಿ ಮಾದಿಗ ಜಾತಿಯಲ್ಲಿ ಜನಿಸಿದ ಮರುಳಸಿದ್ಧರನ್ನು ಕಾವ್ಯ ನಾಯಕನನ್ನಾಗಿ ಆರಿಸಿಕೊಂಡು ಇವನನ್ನು ಮಹಾ ಮಾನವತಾದಿ ಎಂದು ವೈಭವೀಕರಿಸಿ ಹೇಳಿದ್ದಾನೆ.[೧೨೨] ಇಂದಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಆರ್ಥಿಕ ವಲಯಗಳಲ್ಲಿ, ಸಮಗ್ರ ಬದಲಾವಣೆಯಾಗಬೇಕೆಂದು 'ಹೋರಾಡಿದ ಪ್ರಾತಃ ಸ್ಮರಣಿಯರಲ್ಲಿ' ಇವನನ್ನು ಸೇರಿಸಿದರೆ ಅತಿಶಯೊಕ್ತಿ ಆಗಲಾರದು. ಈತ ಅಂತಹ ಪ್ರೌಢನಲ್ಲ, ಪ್ರಬುದ್ಧನೂ ಅಲ್ಲ, ತನ್ನ ತೊದಲು ನುಡಿಗಳಿಂದ 'ಮರುಳುಸಿದ್ಧಚರಿತ್ರೆ'ಯನ್ನು ಹೆಣೆದು ನಿಜಸಂಗತಿಗಳನ್ನು ಇಷ್ಟಾದರೂ ಉಳಿಸಿರುವುದಕ್ಕೆ ನಾವು ಕೃತಜ್ಞರಾಗಬೇಕು. ಈ ದೃಷ್ಟಿಯಿಂದ ಮೇಲಿನ ವಾಕ್ಯವನ್ನು ಸರಿದೂಗಿಸಬಹುದು.

ಸಾಮಾನ್ಯವಾಗಿ ಧಾರ್ಮಿಕ ಚರಿತ್ರೆಗಳು, ಪವಾಡಗಳಿಂದ, ದೇವಲೋಕದ ಬಾಂಧವ್ಯದಿಂದ ಕೂಡಿರುವ ಜಗತ್ತಿನ ಒಂದು ಸಂಪ್ರದಾಯವಾಗಿದೆ.[೧೨೩] ಇವುಗಳನ್ನು ರೂಢಿಸಲು ಕವಿಗಳು ಕಲ್ಪಿಸುವ ಕಲ್ಪನೆಗಳು, ಕೆಲವೊಂದು ಸಮಂಜಸವಾಗಿಯೂ, ಕೆಲವೊಂದು ಅಸಮಂಜಸವಾಗಿರುವುದನ್ನು ನೋಡಿದ್ದೇವೆ. ಅಂದರೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ನೋಡಿದಾಗ ಲೌಕಿಕ ಹಾಗೂ ಆಗಮಿಕ ಪ್ರಕಾರಗಳಲ್ಲಿ ಸಾಹಿತ್ಯ ರಚನೆಯಾಗಿದೆ. ಆದರೆ[೧೨೪] ದೇವಕವಿಯ ಕಾವ್ಯ ಆಗಮಕಕ್ಕೆ ಸ್ವಲ್ಪ ಹತ್ತಿರವಾದರು ಪವಾಡಗಳಿಗೂ, ದೇವಲೋಕದ ಬಾಂಧವ್ಯಕ್ಕೆ ಮಹತ್ವವನ್ನು ಕೊಟ್ಟಿದ್ದರೂ, ಈ ಯುಗದಲ್ಲಿ ನಾವು ಚಾರಿತ್ರಿಕ ಸಂಗತಿಗಳಿಗೆ ಗಮನವೀಯ ಬೇಕಾಗುತ್ತದೆ. ಈ ದೃಷ್ಟಿಯಲ್ಲಿ ದೇವಕವಿ ದುರ್ಬಲನೇ ಆಗಿದ್ದನು. ಅವನು ಬರೆದ ಕಾವ್ಯ ಮಾತ್ರ ಉತ್ತಮವಾಗಿದೆ ಎಂದು ಪರಿಗಣಿಸಬಹುದು.

ಮರುಳಸಿದ್ಧ ಕಾವ್ಯ(ಸಿದ್ಧಲಿಂಗ ಚಾರಿತ್ರ್ಯ)

'ವೀರಶೈವಾಚಾರ್ಯ'ರಲ್ಲೊಬ್ಬರಾದ ಮರುಳಸಿದ್ಧರ ಜೀವನ ಚರಿತ್ರೆಯಿದು. ಈ ಕಾವ್ಯವು ಆರು(ಸಂಧಿ) ಸಾಲುಗಳುಳ್ಳ ವಾರ್ಧಕ ಷಟ್ಪದಿಯಲ್ಲಿ ಸರಳವಾದ ಶೈಲಿಯಲ್ಲಿದೆ. ಶಾಲಿವಾಹನ ಶಕ ೧೫೦೯ನೇ ಸರ್ವಜಿತ

[illegible]

[illegible]

[illegible]

ಸಂವತ್ಸರದ ವೈಶಾಖಶುದ್ಧ ೧೫ ೧೫೮೨ರ ಮೇ ತಿಂಗಳಂದು ಇದನ್ನು ರಚಿಸಿದನು. ಇದರ ಒಂದು ಪದ್ಯದಲ್ಲಿ[೧೨೭]

ಎಸೆವಷ್ಟುದಶವರ್ಣದರ್ಥಲಂಕಾರರಸ|
ಪೊಸಕಾವ್ಯಚದುರಲಕ್ಷಣಪ್ರಾಸ|
ಪದರತಿ|ವಿಷಮಸಮಗಣನೇಮವೆಸೆವ
ವಣಂಗಳೊಳ್‌ಗೆಸವಪ್ರಕಾರಂಗಳ|
ಪಶುಪತಿಸ್ವಯಂಭು|ಬಾಳ್ಗುಳಿಯಕಲಿದೇವನಿಂ|
ತುಸುರಿದೊಲುದೇವಕೇಳ್ದಂಹರನಕೃತಿರಸವ

ಎಂದಿದೆ. ಕವಿಯು ಗುರುವು ಬಾಳ್ಗುಳಿಯ ಕಲಿದೇವನೆಂದು ಈ ಗ್ರಂಥವನ್ನು ಬರೆದಿರುವವನು, ದೇವನೆಂದು ಗೊತ್ತಾಗುತ್ತದೆ. ಆದರೆ ಕವಿಯ ದೇಶ ಮತ್ತು ಜೀವನ ಚರಿತ್ರೆಯ ವಿಷಯ ಎಲ್ಲಿಯೂ ಬಂದಿಲ್ಲ.[೧೨೮]

ಈ ಕಾವ್ಯದ ಮುಖ್ಯಬಿಂದು ಉಜ್ಜನೀ ಸದ್ಧರ್ಮ ಸಿಂಹಾಸನ ಶ್ರೀ ತರಳಬಾಳು ಗುರುಪೀಠ ಸ್ಥಾಪಕನೂ ಆದ ಮರುಳಸಿದ್ಧನು. ಇವನ ಶಿಷ್ಯನಾದ ಶಿವಶರಣ ಗದ್ದುಗೆಯ ರಾಮಿ, ತಂದೆಯು ಗುರು ಮಾಡಿದ ಬೋಧನೆಗಳನ್ನು ಸಂಗ್ರಹಿಸಿ 'ಗುರುಬೋಧೆ' ಎಂಬ ಗ್ರಂಥ ಬರೆದಿದ್ದಾನೆ. ಇದರ ಆಧಾರದ ಮೇಲೆ ಮರುಳಸಿದ್ಧ ಎಂಬ ಕಾವ್ಯ ರಚಿಸಿ, ಇದಕ್ಕೆ ಕವಿಯೇ ಸಿದ್ದಲಿಂಗನ ಚರಿತ್ರೆ, ಸಿದ್ದಲಿಂಗನ ಕೃತಿ, ಮರಳಸಿದ್ಧೇಶ್ವರ ಚರಿತ ಎಂಬ ಹೆಸರುಗಳನ್ನು ಸೂಚಿಸಿದ್ದಾನೆ. ಇದನ್ನು ಅ.ನ.ಕೃ ಸಂಪಾದಿಸಿದ ಮರುಳಸಿದ್ಧಕಾವ್ಯ ಎಂಬ ಗ್ರಂಥದ ಪ್ರಸ್ತಾಪನೆಯಲ್ಲಿ ನೋಡಬಹುದು.[೧೨೭] ಪ್ರಾಯಶಃ ಕನ್ನಡ ಸಾಹಿತ್ಯ ಲೋಕಕ್ಕೆ ಇದೇ ಪ್ರಥಮವೆನ್ನಬಹುದೇನೋ, ಇದರ ಆಧಾರದ ಮೇಲೆ ಸಾಂಗತ್ಯಗಳು ರಚಿಸಲ್ಪಟ್ಟಿವು. 'ದೇವ' ಮತ್ತು 'ದೇಪ' ಎಂಬ ಹೆಸರಿನ ಕೆಲವೊಂದು ಜಿಜ್ಞಾಸೆಗಳು ವಿದ್ವಾಂಸರನ್ನು ಚರ್ಚೆಗೆ ಈಡುಮಾಡಿದೆ.

ಸಿದ್ಧಲಿಂಗನ ಚರಿತ್ರೆ, ಸಿದ್ಧಲಿಂಗನಕೃತಿ, ಮರುಳಸಿದ್ಧೇಶ್ವರನ ಚರಿತೆ, ಸಿದ್ಧೇಶ್ವರನ ಕೃತಿ ಎಂಬ ವಿವಿಧ ಹೆಸರನ್ನು ದೇಪಕವಿಯೂ ಹೇಳಿರುವಾಗ ಸಂಪಾದಕರು "ದೇವ ಕವಿಯ ಮರುಳಸಿದ್ಧಕಾವ್ಯ" ಎಂದು ಏಕೆ ಕರೆದರೊ? ಬರೆದವನು ದೇಪ ಅಥವಾ ದೇವ ಎಂದು ಶ್ರೀನಿವಾಸರಾಯರು ಅಭಿಪ್ರಾಯಪಟ್ಟಿದ್ದಾರೆ. ೧-೧೬ನೇ ಪದ್ಯದಲ್ಲಿ ಕವಿಯ ಹೆಸರು ದೇಪ ಎಂದಿದೆ. ಮತ್ತೊಂದೆಡೆ ಪದ್ಯ ೬-೮೨ರಲ್ಲಿ ದೇವ ಎಂದಿದೆ. ಇದರ ಪ್ರಸ್ಥಾವನೆಯಲ್ಲಿ

ಪೇಳಿದನು ದೇವಸುತ ಪೇಳೆನುತಲೀಕೃತಿಯ
ಶಾಲಿವಾಹನಶಕಂ ಸಾಗುತಿರೆ ಸಾವಿರದ
ಮೇಲೆ ಐನೂರ ದಂಭೈನೆಯ ಸರ್ವಜಿತ ಸಂವತ್ಸರವೆಂದಿನಿಸುವಾ

ಪೇಳೆಯಾಳು ವೈಶಾಖ ಶುದ್ಧ ಪೌರ್ಣಮಿಯೊಳಗಾ
ವೇಳೆಯಾಳು ಮರುಳಸಿದ್ದೇಶ್ವರನ ಕೃತಿಯ ಕೇಳಿ ಶರಣರು ಸತತ....

ಎಂದು ಬರೆದಿದ್ದಾನೆ.[೧೨೮] ಆದುದರಿಂದ ಪೇಳಿದನು ದೇವಸುತ ಪೇಳೆನುತಲೀ ಕೃತಿ. ದೇವಸುತನೆಂಬುವ ಕಲಿದೇವರ ಪ್ರೇರಣೆಯಿಂದ ದೇಪನು ಈ ಕೃತಿಯನ್ನು ರಚಿಸಿರಬಹುದು. ಅಥವಾ ದೇಪನು ದೇವನೆಂಬುವನ ಸುತನಾಗಿರಬಹುದು (ಕಲಿದೇವರ ಮಗನಂತೆ). ಆದ್ದರಿಂದ ಈ ಕವಿಯ ಹೆಸರು ದೇಪಕವಿ. ದೇವಕವಿಯಲ್ಲ ಎಂದು ಹೇಳಿದರೂ ಹೆಚ್ಚಾಗಿ ದೇವ ಕವಿಯೆಂದೇ ವಿದ್ವಾಂಸರು ಬಳಸಿದ್ದಾರೆ. ಬಾಗುಳಿಯ ಕಲಿದೇವ ದೇಪಕವಿಯ ಗುರುವೆಂದು ಗೊತ್ತಾಗುತ್ತದೆ.[೧೨೯] ಇದು ಹುಲ್ಲೂರು ಶ್ರೀನಿವಾಸರಾಯರ ಹೇಳಿಕೆ. ಇದು ಸರಿಯಾಗಿಲ್ಲ, ಬಾಳ್ಗುಳಿ ಗ್ರಾಮವು ಹರಪನಹಳ್ಳಿಯಿಂದ ಉತ್ತರ ದಿಕ್ಕಿನಲ್ಲಿ ನಾಲ್ಕು ಮೈಲಿ ಅಂತರದಲ್ಲಿದೆ. ಇದು ಇಮ್ಮಡಿ ವೀರಬಲ್ಲಾಳನಿಗೆ ಒಮ್ಮೆ ಉಪರಾಜಧಾನಿಯಾಗಿತ್ತು.[೧೩೦] ೧೦೦೮ನೇ ವರ್ಷಕ್ಕೂ ಮುಂಚೆಯೇ ಸ್ಥಾಪಿತವಾಗಿದ್ದ, ಕಲ್ಲೇಶ್ವರ ದೇವರಿಗೆ 'ಕಲಿದೇವ' ಎಂಬ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿದೆ.[೧೩೧] 'ಪಶುಪತಿ ಸ್ವಯಂಭು ಬಾಳ್ಗುಳಿಯ ಕಲಿದೇವನಿಂತು ಸುರಿದವೊಲು' ಅಂದರೆ ಬಾಗಲಿ(ಈಗ ಬಾಗಳಿ) ಗ್ರಾಮದ ಸ್ವಯಂಭು ಕಲಿದೇವಸ್ವಾಮಿಯು ಕರುಣಿಸಿದುದರಿಂದ ದೇಪ ಕವಿಯು ಈ ಚರಿತ್ರೆಯನ್ನು ರಚಿಸಿದನು ಎಂದು ವ್ಯಕ್ತವಾಗುತ್ತದೆ. ಕಲಿದೇವನು ದೇಪನ(ಕವಿ) ಗುರುವಲ್ಲ ದೇವನ(ಕವಿ) ಆರಾಧ್ಯದೇವರು. ನಮ್ಮ ಕಲ್ಪನೆಯಲ್ಲಿ ಇದು ಹರಿಹರ, ರಾಘುವಾಂಕ, ಚಾಮರಸ, ಕುಮಾರವ್ಯಾಸ ಮೊದಲಾದ ಕವಿಪುಂಗವರ ಗ್ರಂಥಗಳ ಪಂಕ್ತಿಯಲ್ಲಿ ಬರುವಂತಹ ಉತ್ತಮ ಕಾವ್ಯ ಅಲ್ಲದಿದ್ದರೂ, ಚರಿತ್ರೆಯ ದೃಷ್ಟಿಯಿಂದ ಬಹುಮುಖ್ಯವಾದ ಗ್ರಂಥವಾಗಿದೆ. ಇದನ್ನು ಬರೆದ ಕವಿಯೇ ಸಿದ್ಧಲಿಂಗ ಚರಿತೆ, ಮರುಳು ಸಿದ್ಧಚರಿತೆ ಎಂದು ಹೇಳಿದ್ದಾನೆ(ದೇವ). ಅದುದರಿಂದ ಕಾವ್ಯಾಂಶಕ್ಕಿಂತಲೂ, ಚಾರಿತ್ರಿಕ ಅಂಶಗಳೇ ಹೆಚ್ಚಿವೆ. ನಮ್ಮಲ್ಲಿ ಚಾರಿತ್ರಿಕ ಗ್ರಂಥಗಳು ಬಹಳ ಕಡಿಮೆ. ಭಾರತೀಯರ ಧಾರ್ಮಿಕ ವಿಷಯಗಳಲ್ಲದೆ, ಗ್ರಂಥಗಳನ್ನು ರಚಿಸಿರುವುದು ಬಹಳ ಅಪರೂಪ. ಒಟ್ಟಾರೆ ದೇವಕವಿ ಮತ್ತು ಚರಿತ್ರಕಾರನೂ ಹೌದು. ಇವನೇ ಮರುಳಸಿದ್ಧನ ಚರಿತ್ರೆಯನ್ನು ಮೊದಲು ಕಟ್ಟಿಕೊಟ್ಟನು.

ಸ್ವಲ್ಪ ಕಾವ್ಯದ ಒಳಹೊಕ್ಕಾಗ

ಇದು ಮರುಳಸಿದ್ಧರ ಜೀವನಿತಿಹಾಸವನ್ನು ನಿರೂಪಿಸುವ ಕೃತಿಯಾಗಿದೆ. ಯಾರ ತಲೆಯಲ್ಲಿ ಯಾವಾಗಲೂ ಜಾತಿ ವಂಶಗಳ ದುರಭಿಮಾನವಿರುತ್ತದೆಯೋ ಅವರು ಯಾವಾಗಲೂ ತಾವು 'ಸತ್ಕುಲ ಸಂಭೂತರೆಂದು ಕೊಂಡೇ ವ್ಯವಹರಿಸುತ್ತಾರೆ.[೧೩೨] ಇದಕ್ಕೆ ಮಹಾಮಹಾ ಕವಿಗಳ ಉದಾಹರಣೆಗಳನ್ನು ಕೊಡಬಹುದು. ಅಂದರೆ ಈ ಕಾವ್ಯದಲ್ಲಿ ಕೆಳಜಾತಿಯ(ಮಾದಿಗ) ಒಬ್ಬ ವ್ಯಕ್ತಿಯನ್ನು ಇಡೀ ಕಾವ್ಯದಲ್ಲಿ ವಸ್ತುವಾಗಿಸಿಕೊಂಡ ದೇವಕವಿಯನ್ನು ಒಂದು ಅಮೂಲ್ಯ ರತ್ನವೆಂದು ಪರಿಗಣಿಸಬಹುದು. ಇಲ್ಲಿ

[illegible]

ಜಾತಿಯ ತೊಡಕೇ ಕಾಣದೇ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದ ಕಾವ್ಯವಾಗಿದೆ.[೧೩೩] ಕವಿಯು ಕಾವ್ಯದ ಆರಂಭದಲ್ಲಿ ಕವಿಯು ಆಗಮಿಕ ಕಾವ್ಯಗಳ ಪರಂಪರೆಗನುಗುಣವಾಗಿ ದೇವರುಗಳಾದ ಶ್ರೀಗಿರಿಯ ಮಲ್ಲೇಶ. ಶ್ರೀವಿಘ್ನೇಶ, ಶ್ರೀವೀರಭದ್ರೇಶ್ವರ, ಷಣ್ಮುಖ, ಪರಶಿವ ಇವರನ್ನು ಭಕ್ತಿಯಿಂದ ಸ್ತುತಿಸಿದ್ದಾನೆ. ಹನ್ನೆರಡನೇ ಶತಮಾನದ ಶಿವಶರಣರಾದ ಅಲ್ಲಮಪ್ರಭು, ಅಜಗಣ್ಣ, ಕಲಕೇತಯ್ಯ ಇನ್ನೂ ಮುಂತಾದವರನ್ನು ಸ್ಮರಿಸಿಕೊಂಡಿದ್ದಾನೆ. ಶೈವ ಕವಿಗಳಾದ ಹರಿಹರ, ಬಾಣ, ಉದ್ಭಟ, ಪದ್ಮರಸರನ್ನು ಕೃತಜ್ಞತಾ ಪೂರ್ವಕವಾಗಿ ನೆನೆಸಿದ್ದಾನೆ.[೧೩೪]

ದೇವಕವಿಯು ಹಬ್ಬಿಸಿದ ಚರಿತ್ರೆಯ ಹಂದರದ ಮೇಲೆ ಆನೆಕೊಂಡದ ರೇವಣ್ಣ ಸಿದ್ಧಕವಿ ಸಿರಿಗೆರೆಯ ಗುರುಸಿದ್ಧಸ್ವಾಮಿ, ರಾಮಗಿರಿಯ ನಾಗಭೂಷಣ, ಗೊಂಗಡಿ ವೀರಭದ್ರಯ್ಯ, ಚತುರಾಚಾರ್ಯರ ಪುರಾಣ, ಗುರುರಾಜ ಚರಿತ್ರೆ, ನಂದೀಶ ಕವಿಯ ಮರುಳಾರಾಧ್ಯ ವಿಜಯ ಕತೃಗಳು ಮತ್ತು ಕೃತಿಗಳು ಇದಕ್ಕೆ ಹೊರತಾಗಿಲ್ಲ. ಆದರೆ ಈ ಕಾವ್ಯ ಕೃತಿ ಬಹಳ ವಾದ-ವಿವಾದಗಳನ್ನು ಉಂಟುಮಾಡಿದೆ. ಕೆಲವು ಕವಿಗಳು ದೇವಕವಿಯ ಈ ಕೃತಿಯನ್ನು ಪ್ರತಿಯೊಂದು ಹಂತದಲ್ಲಿ ಖಂಡಿಸಿದ್ದಾರೆ.[೧೩೫] ಇದು ಏನೇ ಇರಲಿ, ಇದರ ವಸ್ತು, ವಿಷಯ ಗಮನಿಸಲಾಗಿದೆ. ವೈಜ್ಞಾನಿಕವಾಗಿ ಹಾಗೂ ಸಮಗ್ರವಾಗಿ ಮರಳಸಿದ್ಧರ ಚಾರಿತ್ರ್ಯವು ಬೆಳಕು ಕಾಣಲು ಹಾಗೂ ವಿಮರ್ಶಕರಿಗೆ ಹೆಚ್ಚು ಆಹಾರವನ್ನು ಒದಗಿಸಲು ಕಾರಣೀಭೂತರಾದವರು ಹಿಂದಿನ ತರಳಬಾಳು ಜಗದ್ಗುರುಗಳಾದ ಲಿಂಗೈಕ್ಯ ಪೂಜ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು. ಅವರ ಸ್ಮರಣೆಯೇ ಒಂದು ಪುಣ್ಯ. ಇವರ ಶಿಷ್ಯರಾದ ಶರಣ ಮಹಾದೇವ ಬಣಕಾರರು ಶ್ರೇಷ್ಠ ಕೃತಿಗಳ ಸಾಲಿನಲ್ಲಿ ನಿಲ್ಲಬಲ್ಲ ಮಹಾಕಾವ್ಯಗಳ ಸಕಲ ಲಕ್ಷಣಗಳನ್ನೊಳಗೊಂಡ "ವಿಶ್ವಬಂಧು ಮರುಳಸಿದ್ಧಕಾವ್ಯ' ವನ್ನು ಭಾಮಿನಿ ಷಟ್ಪದಿಯಲ್ಲಿ ಸಹೃದಯರು ತಲೆದೂಗುವಂತೆ ರಚಿಸಿದ್ದಾರೆ.[೧೩೬] ಸಮಾಜದಲ್ಲಿ ಆಳವಾಗಿ ಬೇರೂರಿರುವ ಅನಿಷ್ಠ, ಮತ್ತು ಜೀವವಿರೋಧಿ ಪದ್ಧತಿಗಳನ್ನು, ಬೇರು ಸಹಿತ ಕಿತ್ತೊಗೆಯುವ ಉದ್ದೇಶದಿಂದ, ಮರುಳಸಿದ್ಧ ಚರಿತ್ರೆಯಲ್ಲಿ ಪವಾಡಗಳ ಮೂಲಕ, ಪ್ರತಿಭಟನೆಯ ಕಹಳೆಯನ್ನು ಊದಿದ್ದಾನೆ. ವರ್ಣಾಶ್ರಮ ಪದ್ಧತಿಯಲ್ಲಿ ಬೆಳೆದು ಬಂದ ಬಲಿಷ್ಠ, ಮತ್ತು ಕ್ರೂರ ಸಮಾಜವನ್ನು ಎದುರಿಸಲು, ಅಸಮರ್ಥನಾದ ಸಂದರ್ಭದಲ್ಲಿ, ಮರುಳಸಿದ್ಧ ಪವಾಡಗಳ ಮೂಲಕ ಕೆಟ್ಟ ಸಂಪ್ರದಾಯಗಳಿಗೆ ಸವಾಲು ಹಾಕಿದ್ದಾನೆ.[೧೩೭] ಇವನು ಪವಾಡಗಳಿಗೆ ಪರಿಪೂರ್ಣ ನಂಬಿಕೆ ಇಟ್ಟವನೆಂದು, ಆದರೆ ಮಾದಿಗರ ಸಂಜಾತನೂ, ಅಖಂಡಮಾನವ ಪ್ರೇಮಿಯೂ ಸಕಲ ಜೀವಿಗಳಿಗೆ ಲೇಸನ್ನು ಬಯಸಿದ ವಿಶ್ವಬಂಧು ಮರುಳಸಿದ್ಧರ ಜೀವನ ಚರಿತ್ರೆಯನ್ನು ದೇವಕವಿಯ ಹೊರತು ಇನ್ನಾರೂ ಈ ಮೊದಲು ಆಯ್ಕೆ ಮಾಡಿ ಕೊಂಡಿಲ್ಲವಾದ್ದರಿಂದ ಕವಿಯ ಕೀರ್ತಿಯು ಕಿರೀಟಕ್ಕೆ ಬಂದು ರತ್ನವಿಟ್ಟಂತಾಗಿದೆ. ಇದರಿಂದ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದ ಮರುಳಸಿದ್ಧರ ಜೀವನವು ಒಂದು ಉತ್ತಮ ಸಾಧನವಾಗಿದೆ ಕವಿಗೆ.

ನಮ್ಮಲ್ಲಿ ಕಾಡುತ್ತಿರುವ ಬಡತನ, ಅಜ್ಞಾನಗಳಿಂದ ಬಳಲುತ್ತಿರುವ, ಬಹುತೇಕ ಸಮುದಾಯವನ್ನು ಬಂಡವಾಳವನ್ನಾಗಿಸಿಕೊಂಡು ಕೆಲವೇ ಬುದ್ಧಿವಂತರು ಮೂಢನಂಬಿಕೆ, ಕಂದಾಚಾರ, ಜಾತಿಮತಗಳನ್ನು ಬಿತ್ತಿಬೆಳೆದು ಧರ್ಮ, ದೇವರ ಹೆಸರಿನಲ್ಲಿ ಜನರನ್ನು, ಪ್ರಾಣಿಗಳನ್ನು ಸುಲಿಯುತ್ತಾ ತಾವು ಸುಖವಾಗಿ ಬಾಳುತ್ತಾ ಬಂದಿರುವುದನ್ನು ನಮ್ಮ ಇತಿಹಾಸದ ಪುಟಗಳು ಸಾರಿ ಹೇಳುತ್ತವೆ. ಇಲ್ಲಿ ಇದನ್ನು ಗಮನಿಸಿದಾಗ ಹಿಂದಿನ ಕಾಲದ ಊಳಿಗಮಾನ್ಯ ಪದ್ಧತಿ ನೆನಪಾಗುತ್ತದೆ. ಹೀಗೆ ಆಡಳಿತದ ಹೆಸರಿನಲ್ಲಿ ಸುಲಿಗೆ, ಶೋಷಣೆ, ದರ್ಪ-ದೌರ್ಜನ್ಯಗಳಿಂದ ಜನತೆಯನ್ನು ಮುಕ್ತಗೊಳಿಸಿ ಸತ್ಯ, ನ್ಯಾಯ, ನಿಷ್ಠೆ, ಪ್ರೀತಿ, ವಿಶ್ವಾಸಗಳ ಅರಿವನ್ನು ಬಿತ್ತಿ ಜನರ ಸೇವೆಯೇ ಜನಾರ್ಧನ ಸೇವೆಯೆಂದು, ಸೇವೆ ಮಾಡಿದ ಮರುಳಸಿದ್ಧರ ಜೀವನದಲ್ಲಿ ದೇವಕವಿಯು ತನ್ನ ಎಲ್ಲಾ ಧ್ಯೇಯ ಧೋರಣೆಗಳನ್ನು ಕಂಡು ತುಂಬು ಹೃದಯದಿಂದ ಹೆಣೆದಿದ್ದಾನೆ. ಈ ಕವಿಯು ಬದುಕಿದ್ದ ಕಾಲದಲ್ಲಿ ಹಿಂಸಾ ಪ್ರವೃತ್ತಿ ಹೆಚ್ಚಿತ್ತು. ಇದನ್ನು ಕಂಡು ರೋಸಿ ಹೋದ ಕವಿ ಮರುಳಸಿದ್ಧರ ಜೀವನ ಸಾಧನೆಗಳಲ್ಲಿ ತನ್ನ ಆಶಯಗಳನ್ನು ಕಂಡುಕೊಂಡು ಸಂತುಷ್ಟನಾಗಿದ್ದಾನೆ. ಹಿಂಸೆಯನ್ನು ಕಂಡು ಬಸವಣ್ಣನೂ ಕೂಡ ಕಣ್ಣೀರು ಸುರಿಸಿದ್ದಾರೆ. ಅವರ ಒಂದು ವಚನದಲ್ಲಿ[೧೩೮]

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ, ಅಳು ಕಂಡಾ| ವೇದವನೋದಿದವರ
ಮುಂದೆ ಅಳು ಕಂಡಾ| ಶಾಸ್ತ್ರವ
ಕೇಳಿದವರ ಮುಂದೆ ಅಳು ಕಂಡಾ|
ನೀನತ್ತದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ|

ಎಂಬ ವಚನದಲ್ಲಿ ಮನನೊಂದಿದ್ದಾರೆ.

ಒಟ್ಟಾರೆ ದೇವಕವಿಯ ಕಾವ್ಯ, ಕಾವ್ಯಪ್ರತಿಭೆಯಿಂದ ವಿಶ್ವಬಂಧು-ಮರುಳಸಿದ್ಧನ ಜೀವನವು ಓದುಗರಿಗೆ ಹೃದಯಮುಟ್ಟುವಂತೆ ಇದೆ. ಇವನ ಹರಿಹರ ಕವಿಯ ಕಾವ್ಯದ ಪರಂಪರೆಯನ್ನೇ ಈ ಗ್ರಂಥದಲ್ಲಿ ಅಳವಡಿಸಿದ್ದಾನೆ. ಹರಿಹರ ಶಿಷ್ಯ ಹಾಗೂ ಅಳಿಯನಾದ ರಾಘವಾಂಕನಿಗೆ ಹೇಳಿದ 'ದೇವರನ್ನು ಸ್ತುತಿಸುವ ನಾಲಿಗೆಯಲ್ಲಿ ನರರನ್ನು ಸ್ತುತಿಸುವುದು ಉಚಿತವಲ್ಲ' ಎಂಬ ಮಾತನ್ನು ನೆನಪಿಸಿಕೊಂಡಂತೆ, ಇಲ್ಲಿ ದೇವಕವಿಯೂ ಸಹಿತ ತನ್ನ ಕಾವ್ಯದ ತಿರುಳನ್ನು ಭೂಲೋಕದ ಜನರಿಗೆ, ಮಾನವನನ್ನು ದೇವಮಾನವನ್ನಾಗಿಸುವ ಮರುಳಸಿದ್ಧರನ್ನು ಪರಶಿವನೆಂದೇ ಪರಿಗಣಿಸಿದ್ದಾನೆ.

ಈ ಕೃತಿಯು ಭಾರತೀಯ ಧಾರ್ಮಿಕ ಗ್ರಂಥಗಳಲ್ಲಿ ಕಾವ್ಯತ್ವದ ಜೊತೆ ಜೊತೆಗೆ ಚರಿತ್ರೆಯನ್ನು ಒಟ್ಟಿಗೆ ಮೇಳೈಸಿಕೊಂಡಿರುವ ಅಪರೂಪದ ಕೃತಿಗಳಲ್ಲಿ ಇದೂ ಒಂದಾಗಿದೆ. ಹೀಗೆ ಆಗಮಿಕ ಪರಂಪರೆಯಲ್ಲಿ ಈ ಕೃತಿಯನ್ನು ರಚಿಸಿ ಆ ಕಾಲದಲ್ಲಿ ಜನಪ್ರಿಯವಾಗಿದ್ದ ಷಟ್ಪದಿಗಳ ಛಂದಸ್ಸಿನಲ್ಲಿ ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ. ಧಾರ್ಮಿಕ ಗ್ರಂಥವಾದರೂ ಇದರಲ್ಲಿ ಕಾವ್ಯರಸಗಳು ತಮ್ಮ ಇತಿಮಿತಿಯಲ್ಲಿ

ಬಳಕೆಯಾಗಿದೆ.(ಇದು ಲಯ) ಈ ಷಟ್ಪದಿಯ ಕಾವ್ಯವು ಲಯ, ಗೇಯಗಳಿಗೆ ಬಗ್ಗುವ ಕಾವ್ಯವಾಗದೆ ದೇಶಿಯ ಪದಗಳು ಹಾಸುಹೊಕ್ಕಾಗಿವೆ. ಅಲಂಕಾರ ದೃಷ್ಟಿಯಿಂದ ಕಾವ್ಯ ಸೊಗಸಾಗಿದೆ.

ಗುರುಪರಂಪರೆಯ ಮೂಲ ಪುರುಷ ಶ್ರೀ ಮರುಳಸಿದ್ಧ ೧೨ನೇ ಶತಮಾನದ ಈತನನ್ನು ಕುರಿತು ಕ್ರಿ.ಶ.೧೫೮೭ರಲ್ಲಿ ಮರುಳಸಿದ್ಧಕಾವ್ಯವನ್ನು ಬರೆದು ಇದನ್ನು ಬಾಗುಳಿಯ ಕಲ್ಲೇಶ್ವರ ದೇವಾಲಯದಲ್ಲಿ ಓದಿದನೆಂದು ಹೇಳಿಕೊಂಡಿದ್ದಾನೆ. ಇದು ಪ್ರಾಯಶಃ ನಂಬಲು ಸಾಧ್ಯವಾಗದಿರಬಹುದು. ಆದರೆ ಈತ ಅವೈಜ್ಞಾನಿಕ ಕಾಲದಲ್ಲಿದ್ದುದರಿಂದ ಪವಾಡಗಳಿಗೆ ಹೆಚ್ಚು ಪ್ರಾಧ್ಯನತೆ ನೀಡಿದ್ದಾನೆ.

ಪ್ರೌಢದೇವರಾಯನ ಕಾಲದಲ್ಲಿ ಸಿದ್ಧಮಲ್ಲ ಬಾಗಳಿ ದೊರೆ ಬಸವನಾಯಕನಿಗೆ, ಆತನ ಮಂತ್ರಿ ಓಂಕಾರ ನಾಯಕನಿಗೆ ಮಕ್ಕಳ ಫಲವನ್ನು ಕರುಣಿಸಿದನಂತೆ (ಅದು ಹಣವನ್ನು ತೆಗೆದುಕೊಂಡು) ಕಾಲ-೧೬೫೦. ಆದರೆ ಒಂದು ಮಾತು ಈ ಕೃತಿಯನ್ನು ಹಲವು ದೃಷ್ಟಿಗಳಿಂದ ವ್ಯಾಸಂಗ ಮಾಡುವವರಿಗೆ ಲಾಭವುಂಟು. ಲಿಂಗಾಗಿ ಧರ್ಮದ ನಿಜವಾದ ಇತಿಹಾಸವನ್ನು ತಿಳಿಯಬೇಕೆನ್ನುವವರಿಗೆ ಇದು ಅತ್ಯಾಮೂಲ್ಯ ಆಕರ ಗ್ರಂಥವಾಗಬಹುದು.

೨. ಶಾಸನ ಲಿಪಿ

ಮಾನವನ ಸಾಂಸ್ಕೃತಿಕ ವಿಕಾಸದಲ್ಲಿ ಲಿಪಿಯ ಉಗಮ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಮನುಷ್ಯನು ತನ್ನ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು, ಮತ್ತೊಬ್ಬನಿಗೆ ತಿಳಿಸಲು ಭಾಷೆಯನ್ನು ಸೃಷ್ಟಿಸಿಕೊಂಡನು. ಆ ಭಾಷೆಯನ್ನು ಬಹುಕಾಲ ಉಳಿಯುವಂತೆ ಬರಹದ ರೂಪದಲ್ಲಿ ದಾಖಲಿಸುವ ಪ್ರಯತ್ನದ ಫಲವಾಗಿ ಲಿಪಿಯು ಸೃಷ್ಟಿಯಾಯಿತು.

ಕರ್ನಾಟಕದಲ್ಲಿ ಮೊದಲು ಲಿಪಿ ಕಂಡುಬಂದುದು ಅಶೋಕನ ಶಾಸನಗಳ ಬ್ರಾಹ್ಮಿ ಲಿಪಿಯಿಂದ. ನಂತರ ಕನ್ನಡ ಲಿಪಿಯ ಬೆಳವಣಿಗೆಯಲ್ಲಿ ಕದಂಬರ ಲಿಪಿಯ ಪಾತ್ರ ಮಹತ್ವವಾದುದು. ನಂತರದಲ್ಲಿ ಹಲ್ಮಿಡಿ, ತಾಳಗುಂದದ ಶಾಸನಗಳಲ್ಲಿ ಲಿಪಿಯ ವೈವಿಧ್ಯವೂ ಕಂಡುಬಂದಿತು. ಇದರಿಂದ ಬರುಬರುತ್ತಾ, ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಬಂದಿತು. ಆಯಾ ಅರಸು ಮನೆತನಗಳ ಕಾಲಕ್ಕೆ ಬದಲಾವಣೆ ಹೊಂದುತ್ತಾ ಬಂದಿತು. ಗಂಗರ ಕಾಲದ ಲಿಪಿಯಲ್ಲಿ ತಲೆಕಟ್ಟನ್ನು ಸ್ವಲ್ಪ ಉದ್ದವಾಗಿ ಬಳಸುವುದು ಕಂಡುಬಂದರೆ, ರಾಷ್ಟ್ರಕೂಟರ ಕಾಲಕ್ಕೆ ಇದರಲ್ಲಿ ಬದಲಾವಣೆ ಹೊಂದಿತು. ಮತ್ತೆ ಚಾಲುಕ್ಯರ ಕಾಲದಲ್ಲಿ ಅತಿ ಸುಲಭವಾಗಿ ಕಾಣಿಸಿಕೊಂಡಿತು. ಫ್ಲೀಟರು ಈ ಲಿಪಿಯನ್ನು ಹಳಗನ್ನಡ ಲಿಪಿ ಎಂದು ಕರೆದಿದ್ದಾರೆ. ಈ ಶಾಸನಗಳಲ್ಲಿ ಕೆಲವೊಂದು ರಾಷ್ಟ್ರಕೂಟರ ಮತ್ತು ಹೊಯ್ಸಳರ ಕಾಲದ ಲಿಪಿಗಳನ್ನು ಬಿಟ್ಟರೆ, ಉಳಿದೆಲ್ಲವೂ ಕಲ್ಯಾಣ ಚಾಲುಕ್ಯರಕಾಲದ ಲಿಪಿಗಳಾಗಿವೆ. ಇವು ಒಂಭತ್ತನೆ ಶತಮಾನದಿಂದ ಇಚೇಗೆ


[illegible]

ಕಂಡುಬಂದ ಲಿಪಿಗಳಾದ್ದರಿಂದ, ಈ ಲಿಪಿಯಲ್ಲಿ ಇಂದಿನ ಕನ್ನಡ ಲಿಪಿಯ ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಅಕ್ಷರಗಳು ದುಂಡಾಗುವ ಪ್ರವೃತ್ತಿಯನ್ನು ಇಲ್ಲಿ ಗಮನಿಸಬಹುದು. ಇವರು ಬಳಪದ ಕಲ್ಲಿನ ಮೇಲೆ ಬರೆಯುತ್ತಿದ್ದರಿಂದ, ಆ ಕಲ್ಲು ಮೃದುವಾಗಿರುವುದರಿಂದ ಅಕ್ಷರಗಳನ್ನು ಗುಂಡಾಗಿ ಕೊರೆಯುವ ಪ್ರವೃತ್ತಿ ಕಂಡುಬರುತ್ತದೆ. ಬಾಗಳಿಯ ಶಾಸನಗಳಲ್ಲಿ ರಾಷ್ಟ್ರಕೂಟರ ಕೆಲವು ಶಾಸನಗಳು ಕಂಡುಬರುತ್ತವೆ. ಇವರ ಕಾಲಕ್ಕೆ ಅಸ್ತಿತ್ವದಲ್ಲಿದ್ದ ಲಿಪಿಯು ಬಾದಾಮಿ ಚಾಲುಕ್ಯರ ಲಿಪಿಗಿಂತಲೂ ಮತ್ತಷ್ಟು ದುಂಡಾಗಿರುವುದು ಕಂಡುಬರುತ್ತದೆ. ಈ ಲಿಪಿಯ ಕೆಲವೊಂದು ಅಕ್ಷರಗಳನ್ನು ಇಲ್ಲಿ ಗುರುತಿಸಲಾಗಿದೆ. ಈ ಲಿಪಿಯಲ್ಲಿ ಅ, ಆ, ಎ, ಒ, ಖ, ಗ, ಣ, ಥ, ಯ, ರ, ಸ ಮತ್ತು ಱ, ೞ (ರ, ಳ) ಗಳು ಇಂದಿನ ಲಿಪಿ ಸ್ವರೂಪಕ್ಕೆ ತೀರಾ ಹತ್ತಿರವಾಗಿದ್ದು, ತಮ್ಮ ಖಚಿತ ಸ್ವರೂಪವನ್ನು ಪಡೆದುಕೊಂಡಿರುವುದನ್ನು ಗಮನಿಸಬಹುದು. ಆದರೆ ರಳ, ಕುಳ, (ೞ ಱ) ಷಕಟರೇಪಗಳು ಮಾತ್ರ ಬದಲಾಗಿರಲಿಲ್ಲ. ಆದ್ದರಿಂದ ಇವರ ಲಿಪಿಯಲ್ಲಿ ಅಕ್ಷರಗಳು (ತಲೆಕಟ್ಟು) ಮತ್ತಷ್ಟು ಸ್ಪಷ್ಟವಾಗಿವೆ. ಕ್ರಿ.ಶ.೯೮೭ರ ಶಾಸನದಲ್ಲಿಯ[೧೩೯] ಕೆಲವು ಅಕ್ಷರಗಳು ಬೇರೆ ಬೇರೆ ಸ್ವರೂಪಗಳಲ್ಲಿ ಕಂಡುಬರುವುದನ್ನು ಗುರುತಿಸಬಹುದು. ಅ ಆ ಬ ಲ ಕ ತ ರ ಥ ಚ


ಬಾಗಳಿಯ ಶಾಸನಗಳಲ್ಲಿ ಬರುವ ಅಕ್ಷರಗಳು (ಲಿಪಿ) ಅಲಂಕಾರಿಕವಾಗಿ ದುಂಡಾಕಾರಾವಾಗಿ ಉಲ್ಲೇಖವಾಗಿರುವುದು ಕಂಡುಬರುತ್ತದೆ. ಇವು ಚಾಳುಕ್ಯರ (ಕಲ್ಯಾಣ) ಕಾಲದ ಲಿಪಿಗಳಾಗಿದ್ದರೂ ಸಹ ಒಂದೊಂದು ಶಾಸನದಲ್ಲಿ ಅಕ್ಷರಗಳ ವ್ಯತ್ಯಾಸ ಕಾಣುತ್ತದೆ. ವಸ್ತುಸಂಗ್ರಹಾಲಯದಲ್ಲಿರುವ ೧೬ ಶಾಸನಗಳಲ್ಲಿ ಎಡಭಾಗದಿಂದ ಮೂರನೆಯ ಶಾಸನ (A.S.I.No.100)ದಲ್ಲಿ ಕೆಲವೊಂದು ಅಕ್ಷರಗಳು ಹೀಗೆ ಉಲ್ಲೇಖವಾಗಿವೆ. ಇಲ್ಲಿ ನಮಸ್ತು ಎನ್ನುವುದು




ಎಂದು ಉಲ್ಲೇಖವಾಗಿವೆ. ಶಾಸನ ೧೦೫ರಲ್ಲಿ ಶ, ಶಾ.ಶಿ. ಎಂಬ ಅಕ್ಷರಗಳು ದುಂಡಾಗಿ ಸುರುಳಿಯಕಾರದಲ್ಲಿ ಕಂಡುಬರುತ್ತವೆ.



ಇದೇ ಶಾಸನದ ೫ನೇ ಸಾಲಿನಲ್ಲಿ ಯ, ಕ, ತ, ಟ, ಕಾ, ಅ, ಗ, ಓ ಅಕ್ಷರಗಳು ಹೀಗೆ ಉಲ್ಲೇಖವಾಗಿವೆ.




ಕೊನೆಯ ಸಾಲಿನಲ್ಲಿ ಹೀಗೆ ಕಂಡುಬಂದಿವೆ.




ಶಾಸನ ೯೫ರಲ್ಲಿ  ಹೀಗೆ ಕಂಡುಬರುತ್ತದೆ. ಆದರೆ ಇಲ್ಲಿ ಚೌಕಾಕಾರದಲ್ಲಿ ಬರೆಯಲ್ಪಟ್ಟಿವೆ.

ಶಾಸನ (೧೦೦)ರಲ್ಲಿ ಮೊದಲಿನ ಅಕ್ಷರಗಳು ಹೀಗೆ ಕಂಡುಬರುತ್ತವೆ.




ಶಾಸನ (೯೯)ರಲ್ಲಿ ಎರಡು ಕಾಲದ ಲಿಪಿಗಳಿವೆ. ಒಂದು ಕ್ರಿ.ಶ.೧೦೩೫ ಎಂದಿದೆ. ಇನ್ನೊಂದು ಭಾಗದಲ್ಲಿ ನಂತರ ಕಾಲದಲ್ಲಿನ ಲಿಪಿಗಳೆಂದು ಗುರುತಿಸಬಹುದು. ಮೊದಲು ಹೀಗೆ ಕಂಡುಬರುತ್ತವೆ.



ಇವು ೧೦೩೫ರ ಕಾಲದಲ್ಲಿ ಹೀಗೆ ಹೊಸಗನ್ನಡಕ್ಕೆ ಹತ್ತಿರದ ಲಿಪಿಗಳಾಗಿ ಕಾಣತೊಡಗಿದವ. ಇದರ ಮುಂದುವರಿದ ಭಾಗದಲ್ಲಿ ಅಂದರೆ ಕಾಲದ ಸ್ಪಷ್ಟತೆ ಇಲ್ಲ



ಇವುಗಳು ಸ್ಪಷ್ಟವಾಗಿ ಕನ್ನಡದ ಅಕ್ಷರಗಳಾಗಿ ಗೋಚರಿಸುತ್ತವೆ. ಶಾಸನ (೧೦೨)ರಲ್ಲಿ ಹೀಗೆ ದುಂಡಾಗಿ ಸುರಳಿಯಾಕಾರದಲ್ಲಿ ಕಂಡುಬರುತ್ತವೆ.



ಒಟ್ಟಾರೆ ಇಲ್ಲಿಯ ಬಹುಪಾಲು ಶಾಸನಗಳು ಇಂತಹ ಲಿಪಿಗಳನ್ನು ಹೊಂದಿ ಬೇರೆ ಬೇರೆ ಶಾಸನಕ್ಕೆ ಅಕ್ಷರಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಹೀಗೆ ಮುಂತಾದವುಗಳನ್ನು ಗುರುತಿಸಬಹುದು. ಇದು ರಾಷ್ಟ್ರಕೂಟರ ಶಾಸನವಾದರೂ ಕೆಲವೊಂದು ಅಕ್ಷರಗಳು ಚಾಲುಕ್ಯರ ಕಾಲದ ಅಕ್ಷರಗಳಂತೆ ಕಂಡುಬರುತ್ತವೆ. ವಿಶೇಷವೆಂದರೆ ಇವರ ಕಾಲದ 'ಟ' ಎನ್ನುವ ಅಕ್ಷರ 'ಹ' ಎಂಬ ಅಕ್ಷರವನ್ನು ಗುರುತಿಸುವಂತಿದೆ. ಇದನ್ನು ನೋಡಿದ ತಕ್ಷಣವೇ 'ಹ' ಎಂದು ಹೇಳವಷ್ಟು ಸ್ಪಷ್ಟವಾಗಿದೆ. ಇನ್ನು ಚಾಲುಕ್ಯರಕಾಲದ ಅಕ್ಷರಗಳು ತುಂಬಾ ಅಲಂಕಾರವಾಗಿ ಬಳಕೆಯಾಗಿವೆ. ಅಂದರೆ ಅಕ್ಷರ ಕೊನೆಗೆ ದೀರ್ಘವಾದ ಗೆರೆ, ವೃತ್ತಗಳು ಇನ್ನು ಕೆಲವುಗಳಲ್ಲಿ ಪಕ್ಷಿಗಳಂತೆ ಕಂಡುಬರುತ್ತದೆ. ಮತ್ತು ಲಿಪಿಯ ತಲೆಕಟ್ಟು ಅರ್ಧಚಂದ್ರಾಕಾರದಂತೆ (ಬಾಗುತ್ತಿರುವುದು) ಬಾಗಿರುವುದನ್ನು ಗಮನಿಸಬಹುದು. ಇವರ ಲಿಪಿಯಲ್ಲಿ ಇ, ಗ, ಘ, ಠ, ಥ, ಯ, ರ, ಲ, ವ ಮುಂತಾದ ಅಕ್ಷರಗಳು ಇಂದಿನ ಲಿಪಿಗೆ ಅಕ್ಷರಗಳಿಗೆ ಹತ್ತಿರದಂತೆ ಕಾಣಿಸಿಕೊಳ್ಳುತ್ತದೆ. ಇಲ್ಲಿಯ ಶಾಸನಗಳಲ್ಲಿ ಕೆಲವೊಂದು ಅಕ್ಷರಗಳು ಸುರುಳಿಯಾಕಾರದಂತೆ ಕಂಡುಬರುತ್ತವೆ. ಉದಾಹರಣೆಗೆ ಯ ಎಂಬ ಅಕ್ಷರ ಕೆಲವು ಶಾಸನಗಳಲ್ಲಿ ಒಂದೇ ರೀತಿಯಿಂದ ಕಂಡುಬಂದರೆ (ವ.ಸಂ.ಶಾಸನ, ೧೦೫) ರ ಶಾಸನದಲ್ಲಿ[೧೪೦] ಯ ಸುರುಳಿಯಾಕಾರದಲ್ಲಿದೆ. ಇದರ ಮುಂದುವರಿದ ಭಾಗದಲ್ಲಿ 'ಕ' ಎಂಬ ಅಕ್ಷರವೂ ಸಹ ಸುರುಳಿಯಾಕಾರಂದತೆ ಕಂಡುಬಂದಿದೆ. ಅದು ಹೀಗೆ ಕಾಣಿಸಿಕೊಳ್ಳುತ್ತದೆ. ಇದರ ಕೊನೆಯ ಭಾಗದಲ್ಲಿ ಪುನಃ 'ಕ' ಎಂಬುವುದು ಹೀಗೆ ಅಲಂಕಾರವಾಗಿದೆ. ಇದರಂತೆ 'ಗ', 'ಓ' ಮತ್ತು 'ಅ' ಎಂಬ ಅಕ್ಷರ ದೊಡ್ಡ 'ಆ' ಎಂಬಂತೆ ಕಂಡುಬಂದರೆ 'ಓ' ಎಂಬುವುದು ಒಂದು ಬಾತು ಕೋಳಿಯಂತೆ ಕಂಡುಬರುತ್ತದೆ. ಇಂತಹ ಅನೇಕ ಅಕ್ಷರಗಳು ಇದೇ ರೀತಿ ಬೇರೆ ಬೇರೆ ಅಲಂಕಾರಗಳಿಂದ ಕಂಡುಬಂದಿವೆ. ಹೀಗೆ ಅಕ್ಷರಗಳು ಅಲಂಕೃತಲಿಪಿಗಳಿಂದ ಕೂಡಿವೆ. ಇವುಗಳ ಮೂಲಕ ರೂಪವನ್ನು ಗಮನಿಸಿದಾಗ ಸುರುಳಿಯಾಕಾರವಾಗಿ, ಅಲಂಕಾರಗೊಂಡಿವೆ. ಇನ್ನು ಈ ಶಾಸನ ಮೊದಲ ಭಾಗದಲ್ಲಿ ಕೆಲವೊಂದು ಚಿಹ್ನೆಗಳು ಕಂಡುಬರುತ್ತವೆ. ಅವು ನಕ್ಷತ್ರಕಾರದ ಚಿಹ್ನೆ, ಶಂಖದ ಚಿಹ್ನೆ, ಚಕ್ರದ ಚಿಹ್ನೆ, ನೇಗಿಲ ಚಿಹ್ನೆಗಳು ಕಂಡುಬಂದಿದೆ.[೧೪೧] ಅವುಗಳನ್ನು ಹೀಗೆ ಗುರುತಿಸಲಾಗಿದೆ. ಒಂದೇ ಶಾಸನದಲ್ಲಿ (ಕ,ದೇ ಒಳಗೆ ಗೋಡೆಯಲ್ಲಿನ ಆನೆ ಶಿಲ್ಪದ ಕೆಳಗೆ) ಮೂರು ಚಿಹ್ನೆಗಳು ಕಂಡುಬಂದಿವೆ. ಅವು ಗದೆ, ಶಂಖ, ಚಕ್ರದ ಚಿಹ್ನೆಗಳಾಗಿವೆ. ಇವುಗಳನ್ನು ಹೀಗೆ ಗುರುತಿಸಲಾಗಿದೆ. ಇವು ಶಾಸನದ ಮೊದಲಿಗೆ ಕಂಡು ಬರುತ್ತವೆ. ಕೊನೆ ಭಾಗದಲ್ಲಿ ಹೂವಿನ (ಪದ್ಮ) ಚಿತ್ರವಿದೆ.

ಇದರ ಉಲ್ಲೇಖ ಗಮನಿಸಿದರೆ ಈ ಎಲ್ಲಾ ಆಯುಧಗಳನ್ನು(ಆನೆಯ) ಮಾವಡಿಗನು ಬಳಸುತ್ತಿರಬೇಕು ಎನಿಸುತ್ತದೆ. ಕಲ್ಲೇಶ್ವರ ದೇವಾಲಯದ ಬಳಿಯ ಶಿಥಿಲ ದೇವಾಲಯದ ಪಶ್ಚಿಮದಲ್ಲಿರುವ ಶಾಸನದ ಕೊನೆಯ ಭಾಗದಲ್ಲಿ ನೇಗಿಲ ಚಿತ್ರವಿದೆ.[೧೪೨] ಈಗ ಇದನ್ನು ಮ್ಯೂಸಿಯಂಗೆ ಸ್ಥಳಾಂತರಿಸಿದ್ದು, ಅದು ಮ್ಯೂಸಿಯಂ ಹೊರಭಾಗದಲ್ಲಿದೆ. ಇಲ್ಲಿಯವರೆಗೆ ಶಾಸನಗಳ ವಿಷಯಾವಳಿಗಳನ್ನು ದೀರ್ಘವಾಗಿ

ಚರ್ಚಿಸಲಾಯಿತು. ಇನ್ನು ಇಲ್ಲಿಯ ಕೆಲವು ಶಾಸನಗಳು ಚಿಕ್ಕ ಶಾಸನಗಳಾಗಿದ್ದು, ಅವುಗಳ ಅರ್ಥ, ವಿವರಣೆ, ಭಾಷೆ, ಯಾವುದನ್ನು ಸ್ಪಷ್ಟವಾಗಿ ತಿಳಿಯುವುದು ಸಾಧ್ಯವಿಲ್ಲ. ಕೆಲವೊಂದನ್ನು ತಕ್ಕಮಟ್ಟಿಗೆ ಸ್ಪಷ್ಟೀಕರಿಸಲು ಪ್ರಯತ್ನಿಸಲಾಗಿದೆ.

ಕಲ್ಲೇಶ್ವರ ದೇವಾಲಯದ ನವರಂಗದ ಬಲಭಾಗದ ದೇವಕೋಷ್ಟದ ಕೆಳಗಿರುವ ಶಾಸನದಲ್ಲಿ

ಶ್ರೀಕಲಿದೇವಸ್ವಾಮಿಯಂ
ಧವಳಸಿಂಗ ಭಳಾರರ್
ನಿತ್ಯಪೂಜೆಯಿಂದರ್ಚ್ಚಿ
ಸುತಂ ಭಕ್ತಿ ಪೂರ್ಬ್ಬಕ
ಸಾಸನವೀ ಲಿಂಗವ ಮಾ
ಡಿಸಿದರ್ ಮಂಗಳ

ಎಂದು ಉಲ್ಲೇಖವಿದೆ.[೧೪೩] ಇಲ್ಲಿ ಧವಳಸಿಂಗಭಳೂರರ ನಿತ್ಯ ಕಲದೇವರಪೂಜೆಮಾಡುವ ಭಕ್ತಿಯಿಂದಲೇ, ಲಿಂಗವನ್ನು ಮಾಡಿಸಿದರು ಎಂದು ಕಂಡುಬರುತ್ತದೆ. ಯಾವುದೋ ಒಂದು ದೇವರ ಲಿಂಗವನ್ನು ಮಾಡಿಸಿರಬೇಕು. ಕಲ್ಲೇಶ್ವರ ದೇವಾಲಯದ ಗರ್ಭಗೃಹದ ಹಿಂಬದಿಯ ಕಪೋತದ ಮುನಿಶಿಲ್ಪದ ಎಡಪಕ್ಕದಲ್ಲಿಯ ಶಾಸನದಲ್ಲಿ ಹೀಗೆ ಉಲ್ಲೇಖವಿದೆ.[೧೪೪]

ಶ್ರೀಮಹಾಬಲಿ
ವಂಸ ಆದಿಪೆಂಪ
ದೇಂ ನಿರ್ಗ್ಗುಂದ ಗ್ರಾಮೋ
ಉಪವಸನ ಪು
ತ್ರಂ ದಸವಮದೆ

ಎಂದು ವ್ಯಕ್ತವಾಗಿದೆ. ಇದು ಮಹಾಬಲಿವಂಶದ ಪೆಂಪದೇವನ ಪುತ್ರ ದಸವರ್ಮನು ನೀಲಗುಂದ ಗ್ರಾಮದವನಾಗಿರಬಹುದಾಗಿದೆ. ಇದರ ಹೆಚ್ಚಿನ ವಿವರವನ್ನು ಅಧ್ಯಾಯ ಎರಡರಲ್ಲಿ ಕೊಡಲಾಗಿದೆ.[೧೪೫] ಅಲ್ಲಿಯ ನೈರುತ್ಯದ ಅಧಿಷ್ಠಾನದ ಶಾಸನದಲ್ಲಿ ಅಯ್ಯ ಣ್ಣರದಾಸಿ ನಣ್ಬರತೊಳ್ತು ಕೆಲಗೆನೆಲ್ಲಾತಂ ಪಸುಣಮೂಗರಿವೊ, ಆಳ್ದನದಣ್ಡೆಕೂಡಿ ಪುಣ್ಡರಿಯನ ವಾಮ...ಎಂದು ಉಲ್ಲೇಖವಾಗಿದೆ. ಇಲ್ಲಿ ಅಯ್ಯಣ್ಣನನ್ನು ಹೊಗಳಿದೆಯಾದರೂ, ಈತ ಯಾರು ಎಂಬುದ ಸ್ಪಷ್ಟವಿಲ್ಲ. ಕಲ್ಲೇಶ್ವರ ದೇವಾಲಯದ ದಕ್ಷಿಣಕ್ಕೆ ಇರುವ ಶಾಸನದ ಪಕ್ಕದಲ್ಲಿಯ ಶಾಸನದಲ್ಲಿ ಮೆನಕಾಕರಮಾಡಿಸಿದವೇದಬಷಮಾಸಿದ ಎಂದಿದೆ.[೧೪೬] ಇವರ ವಿವರವೇ ಸ್ಪಷ್ಟವಾಗಿಲ್ಲ. ಅಲ್ಲಿಯೇ ಇನ್ನೊಂದು ಶಾಸನದಲ್ಲಿ ಮಲ್ಲಯ್ಯ ಮಾಡಿಸಿದ ಎಂದಿದೆ.[೧೪೭] ಆದರೆ ಏನು ಮಾಡಿಸಿದ, ಈತ ಯಾರು ಎಂಬುದನ್ನು ಸರಿಯಾಗಿ ತಿಳಿಯಲು ಸಾಧ್ಯವಿಲ್ಲ. ಇದೇ ಶಾಸನದ ಪಕ್ಕದಲ್ಲಿ ಮಲೆಯಾಜಿರ ಕುಮಾರ ಕಲಸಿಕರ ಮಾಡಿಸಿದ[೧೪೮] ಎಂದಿದೆ. ಇದು ಪ್ರಾಯಶಃ ಮಲೆಯಾಳರ ಕುಮಾರ ಎಂಬುವವನು ಕಲಿದೇವರ ಶಿಖರಕ್ಕೆ ಏನಾದರೂ

[illegible]

ಮಾಡಿಸಿಕೊಟ್ಟಿರಬೇಕು, ಇಲ್ಲವೆ ದೇವಾಲಯದ ಶಿಖರವನ್ನು ಮಾಡಿಸಿಕೊಟ್ಟಿರಬೇಕು ಎಂಬುದನ್ನು ಊಹಿಸಬಹುದು. ಇದೇ ಶಾಸನದ ಪೂರ್ವಕ್ಕೆ ಮಲೆಯಾಳ ವಿಕ್ರಮಾದಿತ್ಯ ಎಂದಿದೆ.[೧೪೯] ಇವನು ಯಾರೆಂಬುದು ತಿಳಿಯುವುದಿಲ್ಲ. ಅದೇ ಜಾಗದಲ್ಲಿಯ ಶಾಸನದಲ್ಲಿ ಮಲಯಾಳ ಕಾವಯ್ಯ ಮಾಡಿಸಿದ್ದು ಎಂದು ವ್ಯಕ್ತವಾಗಿದೆ.[೧೫೦] ಇದೇ ಶಾಸನದ ಪೂರ್ವಕ್ಕೆ ಎಲೆಯಬುಜಂಗರ ಕಣ್ಣಯ್ಯನ ಮಗ ನಕಯ್ಯ ಮಾಡಿಸಿದ ಎಂದು ಉಲ್ಲೇಖವಾಗಿದೆ.[೧೫೧] ನವರಂಗದ ಹಿಂಬದಿಯ ಗೋಡೆಯ ಶಾಸನದಲ್ಲಿ ಎಲೆಯಭುಜಂಗ ಕನ್ನಯ ಮಾಡಿಸಿದ್ದು ಎಂಬ ಉಲ್ಲೇಖ ಕಂಡುಬರುತ್ತದೆ.[೧೫೨] ಇದರಂತೆ ೧೧೧೫ ರ ಶಾಸನದಲ್ಲಿ ಯೆಲೆಕೆಲಬೊಜಂಗರ ಈಶ್ವರಯ್ಯನ ಮಾಚಕ್ಕ ಎಂಬುವವಳು ದೇವರ ನೈವೇದ್ಯಕ್ಕೆ ಭೂಮಿಯನ್ನು ದಾನ ನೀಡಿದಳೆಂದು ಉಲ್ಲೇಖವಿದೆ.[೧೫೩] ಆದರೆ ಇಲ್ಲಿ ಯೆಲೆಕಲ ಬೊಜಂಗರ ಎಂದಿದ್ದರೆ ಮೇಲಿನ ಶಾಸನದಲ್ಲಿ ಎಲೆಯಭುಜಂಗರ ಎಂದಿರುವುರಿಂದ ಇಬ್ಬರೂ ಒಂದೇ ಎನ್ನುವ ಧ್ವನಿ ಉಂಟಾಗುತ್ತದೆ. ಕಲ್ಲೇಶ್ವರ ದೇವಾಲಯದ ಗರ್ಭಗೃಹದ ಮೇಲೆ ನೈರುತ್ಯ ದಿಕ್ಕಿನ ಕಪೋತದಲ್ಲಿಯ ಶಾಸನದಲ್ಲಿ ಜಗದೇಕಮಲ್ಲನೊಳಂಬಚಾರಿ ಎಂದಿದೆ.[೧೫೪] ಇವನ ಸರಿಯಾದ ಮಾಹಿತಿ ಇಲ್ಲದ ಕಾರಣ ಇವನು ಯಾರೆಂದು ತಿಳಿಯುವುದಿಲ್ಲ. ಅದೇ ಶಾಸನದ ದಕ್ಷಿಣಕ್ಕೆ ಶ್ರೀಮತ್ತಕಹೀನ ಕೇಸವಯ್ಯ ಪುಸಿಯಿಲ್ಲದಾತ ಲಟ್ಟನದಣ್ಣ ಪಡುವಣದಿಸೆಯರುವಾರವಮ ಎಂದಿದೆ.[೧೫೫] ಇವನು ಅದೇ ಗ್ರಾಮದ ಶೆಟ್ಟಿಯಾಗಿರಬೇಕು. ಆದರೆ ಪಡುವಣದೆಸೆಯ ರೂವಾರಿ ಎಂದಿರುವುದರಿಂದ, ಈತ ಪಡುವಣದ ಭಾಗವನ್ನು ಮಾತ್ರ ಮಾಡುತ್ತಿರಬಹುದಾಗಿದೆ. ಇನ್ನು ಅದೇ ದೇವಾಲಯದ ಗರ್ಭಗೃಹದ ಹಿಂಬದಿಯ ಪಟ್ಟಿಕೆಯ ಶಾಸನದಲ್ಲಿ ನೊಟಿಂಬಕೊಳೆ ಏಚಮ್ಮ ಮಾಡಿದ ಪ್ರತಿಮೆ ಎಂದಿದೆ.[೧೫೬] ಆದರೆ ಯಾವ ಪ್ರತಿಮೆ ಎಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಅದೇ ಶಾಸನದ ಕೆಳಗೆ ಗಗಯ್ಯ ತ್ರಿಮಾಡಿಸಿದ ಸರಸ್ವತಿಯ ಪ್ರತಿಮೆ ಮಂಗಳ ಮಹಾಶ್ರೀ ಎಂದಿದೆ.[೧೫೭] ಗಗಯ್ಯನು ಸರಸ್ವತಿ ಪ್ರತಿಮೆಯನ್ನು ಮಾಡಿಸಿರಬಹುದಾಗಿದೆ. ಅಲ್ಲಿಯೇ ದಕ್ಷಿಣ ಪಟ್ಟಿಕೆಯ ಮುಂದಕ್ಕೆ ಇರುವ ಶಾಸನದಲ್ಲಿ ಎಜಿಗಾರತ ಪುಣ್ಯಕ್ಕೆ ಮಾಡಿ ಕೊಟ ಎಂದಿದೆ.[೧೫೮] ಯಾವುದೋ ಒಂದು ಶಿಲ್ಪವನ್ನು ಪುಣ್ಯಕ್ಕೆ ಮಾಡಿಕೊಟ್ಟಂತೆ ಅರ್ಥವಾಗುತ್ತದೆ. ಅಲ್ಲಿಯೇ ನೈರುತ್ಯದ ಅಧಿಷ್ಠಾನದಲ್ಲಿ ಶಿಲ್ಪಿ ಅಯ್ಯಣ್ಣನನ್ನು ಹೊಗಳಿರುವ ಉಲ್ಲೇಖವಿದೆ.[೧೫೯] ತ್ರುಟಿತವಾಗಿದ್ದು, ಸರಿಯಾದ ವಿವರಣೆ ಇಲ್ಲ. ಅದೇ ಅಧಿಷ್ಠಾನದ ಉಮಾಮಹೇಶ್ವರ ಶಿಲ್ಪದ ಮೇಲೆ ಉಮಾಮಹೇಶ್ವರ ದೇವರು, ನಾರಾಯಣ ದೇವರು ಮಾಡಿಸಿದ ಎಂದು ಉಲ್ಲೇಖವಿದೆ.[೧೬೦] ದೇವಾಲಯದ ಕಪೋತದ ಮಲೆ ಮುನಿಶಿಲ್ಪದ ಎಡಪಕ್ಕದಲ್ಲಿ ಶಾಸನದಲ್ಲಿ ಸೋಮಸಿಂಗರ್ ಜವಸಿಗರ್ ಎಂದಿದೆ.[೧೬೧] ಯಾರು ಎಂಬುದು ವಿವರವಾಗಿಲ್ಲ. ಅದೇ ಕಪೋತದ ದಕ್ಷಿಣ ಪಟ್ಟಿಕೆ ಮೇಲೆ ಶ್ರೀಮತು ಕೆಚೆಲಿಬೆಲನ ಮಗ ಆಚಂಣಂನಂಟಂ ತೋಱ್ಱುಳು,

ಬದಿರದಾಸಿ ಚಂದ್ರಸಿಂಗನ್ನಿರದೇಹೃತಂ ಎಂದು ಉಲ್ಲೇಖವಾಗಿದೆ. ಕೆರೆ ಅಬೆಲನಮಗ ಆಚಂಣನ ಉಲ್ಲೇಖವಾಗಿದೆ.[೧೬೨] ಕಲ್ಲೇಶ್ವರ ದೇವಾಲಯದ ತ್ರಿವಿಕ್ರಮ ಶಿಲ್ಪದ ಮುಂದಿನ ಶಾಸನದಲ್ಲಿ ಮಲಯಾಳ ಕಣ್ಣಯ್ಯ ಮಾಡಿಸಿದ್ದು, ಎಂಬು ಉಲ್ಲೇಖವಿದೆ.[೧೬೩] ಇನ್ನು ನರಸಿಂಹಸ್ವಾಮಿ ದೇವಾಲಯದ ಮುಂದಿನ ಕಟಾಂಜನ ಕಲ್ಲಿನಲ್ಲಿನ ಶಾಸನದಲ್ಲಿ

ನಂದಿಬೇಊರ ಕುವಕುಂಟೆಫಣಿಯಪನು
ನಾರಸಿಹ್ಮದೇವರ ಪದಕ್ಕೆ ನಮಸ್ಕರ

ಎಂದು ಉಲ್ಲೇಖವಾಗಿದೆ [೧೬೪] ಅಂದರೆ ನಂದಿಬೇಹೂರ ಫಣಿಯಪ್ಪ ಎಂಬುವವನು ನರಸಿಂಹದೇವರ ಪಾದಕ್ಕೆ ನಮಸ್ಕರಿಸಿದನೆಂದು ಕಂಡುಬರುತ್ತದೆ. ಕುರುವತ್ತಿಯ ಒಂದು ಶಾಸನದಲ್ಲಿ ಇಂತಹ ಉಲ್ಲೇಖ ಬರುತ್ತದೆ.[೧೬೫] ಕಲ್ಲೇಶ್ವರ ದೇವಾಲಯಕ್ಕೂ ನರಂಗಕ್ಕೂ ಮದ್ಯ ಹಾಸುಕಲ್ಲಿನ ಮೇಲೆ ನಂದಿಬೇಊರ ಕುವಕುಂಟೆ ಫಣಿಯ್ಯನಾ ಬಿಂನಾಹ ಎಂಬ ಉಲ್ಲೇಖವಿದೆ.[೧೬೬] ಪ್ರಾಯಶಃ ಕಲಿದೇವರಿಗೆ ಪ್ರಾರ್ಥಿಸಿಕೊಂಡಿರ ಬೇಕು ಭಿನ್ನವಿಸಿಕೊಳ್ಳುವುದು ಅದೇ ಶಾಸನದ ಕೆಳಗೆ ಶ್ರೀ ಗಣಾದಿಪತಯೋ ನಾಮಃ ಶ್ರೀ ಗದುಗಿನ ಅಕ್ಕಸಾಮೊರ ಕಾಮಾಚೈಯನಲೆಮಕಳೊಶ್ರವಣ ಸುಧ ಸೋಮರ ದ್ವಿಸಬಂದು ಬಾಗುಳಿಯ ಕಲ್ಲೇಶ್ವರಗೆ ಮಾಡಿದ ನಮಸ್ಕರ ಎಂಬ ಉಲ್ಲೇಖವಿದೆ.[೧೬೭] ಗದುಗಿನ ಕಾಮೊಚ್ಯಯನ ಮೊಮ್ಮಕ್ಕಳು (ಅಕ್ಕಸಾಲಿಗರು) ಶ್ರಾವಣ ಶುದ್ಧ ಸೋಮವಾರ ದಿವಸ ಬಂದು ಬಾಗಳಿಯ ಕಲಿದೇವರಿಗೆ ನಮಸ್ಕಾರ ಮಾಡಿದರೆಂದು ಕಂಡುಬರುತ್ತದೆ. ಇನ್ನು ಈ ಕೆಳಗೆ ಹೇಳಿರುವ ಶಾಸನಗಳ ಕಾಲದ ಉಲ್ಲೇಖ ಕಂಡುಬರುವುದಿಲ್ಲ. ಕಲ್ಲೇಶ್ವರ ದೇವಾಲಯದ ನವರಂಗದ ಹಾಸುಬಂಡೆಯ ಶಾಸನದಲ್ಲಿ ಮಹದೇವನಾಗತ್ತಿ, ಮೈದುರ ಅಕ್ಕಸಾಲೆಯರ, ವಿರೂಜನ ಮೊಮ್ಮಕ್ಕಳು, ಬೊಮ್ಮನಹಾಳಿ ಅಕಸಾಲೆ ಬಸವೋಜನ, ಮೊಮಗ ಗದುಗಿನ ಉಜಿನಿ ಬಾಗಳಿಗೆ ಬಂದು ಯಿದ, ಎಂದು ಉಲ್ಲೇಖ ಬಂದಿದೆ.[೧೬೮] ಬೊಮ್ಮನಹಾಳಿಯ ಬಸವೋಜನ ಮೊಮ್ಮಗ ಮತ್ತು ಅಕ್ಕಸಾಲಿಗರ ಮಹದೇವನಾಗತ್ತಿ ಮೈದುರರಾದ ವಿರೋಜನ ಮೊಮ್ಮಕ್ಕಳು ಬಾಗಳಿಗೆ ಮತ್ತು ಗದುಗಿನ ಉಜಿನಿಗೆ ಬಂದು ಹೋಗಿದ್ದರೆಂದು ಕಂಡುಬರುತ್ತದೆ. ಪ್ರಾಯಶಃ ಇವರು ತಮ್ಮ ತಮ್ಮ ಕಾಯಕದ ನಿಮಿತ್ತ ಬಂದಿರಬೇಕು ಎಂದು ಹೇಳಬಹುದು. ಇದೇ ದೇವಾಲಯದ ಗರ್ಭಗೃಹದ ಹಿಂಬದಿಯ ಪಟ್ಟಿಕೆಯ ಮೇಲೆ ಇರುವ ಶಾಸನದಲ್ಲಿ ಶತವೊ ಯರಮ್ಯಾತನೆಯ ಮತೇಯರ್ ಮಾಡಿಸಿ ಎಂದಿದೆ.[೧೬೯] ಈತ ಯಾರು ಎನನ್ನು ಮಾಡಿಸಿದನೋ ಎಂಬುದನ್ನು ತಿಳಿಸುವುದಿಲ್ಲ. ನವರಂಗದ ಹಾಸುಬಂಡೆಯ ಮೇಲೆ ವುಜಿನಿ ನರಸರನ ಬಿನ್ನಹ ಎಂದಿದೆ.[೧೭೦] ಈತನೂ ದೇವರಲ್ಲಿ ಬಿನ್ನವಿಸಿಕೊಂಡಿರಬೇಕು. ಈ ದೇವಾಲಯದ ಅಂತರಾಳದ ಎಡಗೋಡೆಯ ಹೊರಗೋಡೆಯ ಶಾಸನದಲ್ಲಿ ವೀರ ಶಾಸನವನ್ನು ಉಲ್ಲೇಖಿಸಿದ್ದು, ಮಹಾಬಲಿವಂಶದ ಏಚರಸನ ಮಗ ಗೂಳಿದೇವ ಚೋಳರ

[illegible]

ಕುದುರೆಯೊಳನ್ನು ಎದುರಿಸಿ ಸತ್ತಂತೆ ಎಂಬ ವಿವರವನ್ನು ಕೊಡುತ್ತದೆ.[೧೭೧] ಆದರೆ ಭಾಷೆ ಮತ್ತು ಲಿಪಿಗಳೆರಡೂ ಸ್ಪಷ್ಟವಾಗಿಲ್ಲ. ಅದೇ ದೇವಾಲಯದನವರಂಗದ ಹಿಂಬದಿಯ ಗೋಡೆಯ ಮೇಲೆ ಒಂದು ಶಾಸನವಿದೆ. ಆದರೆ ಅದರ ಅರ್ಥ ಸ್ಪಷ್ಟವಿಲ್ಲ. ಆದಿ ಪೆಂಪೆಸೂಂ, ಆದಾಸೋಜಸಾಮಾದಿಸವೊಸ ಪ್ರಸನ್ನ, ಸತಮೇತಸವೋ ತೊಮಹಾರಸರನ ಪುತ್ರದಸವಮ್ಮತೂ, ನಿರ್ಗ್ಗುನ್ದಗ್ರಾಮ ಎಂದಿದೆ. ನೀಲಗುಂದ ಗ್ರಾಮದ ದಸವರ್ಮನೆಂಬುವನ ಉಲ್ಲೇಖವಾಗಿದೆ.[೧೭೨] ಉಮಾಮಹೇಶ್ವರ ಶಿವಲಿಂಗಶಿಲ್ಪದ ಬಳಿ ಕೊಡಕೂಭವ ಎಂದಿದೆ[೧೭೩] ಇದೇನೆಂಬುವುದು ತಿಳಿಯಲು ಸಾಧ್ಯವಿಲ್ಲ. ಅಲ್ಲಿಯೇ ನಟರಾಜಶಿಲ್ಪದ ಮೇಲೆ ಮಾರಸಿಂಗ ಎಂದಿದೆ.[೧೭೪] ಇದು ನವರಂಗದ ಬಲಭಾಗದ ಕೋಷ್ಟಕ ಕೆಳಭಾಗದಲ್ಲಿ ಕೊಣ್ಡಚಾಯಾಬಾರಿಯನ್ನು ಹೀಗೆ ಉಲ್ಲೇಖಿಸುತ್ತದೆ. ಸ್ವನ್ತ ಆಚುಗಂ ತೊಡರೆ ಮುರಾರಿ, ಜಲಕೆ ಬಲುಗ(ಂ)ಣ್ಡಂ ಪಿಸುಣಮುಗಾರಿವೊ, ಅಣ್ಣನಚಂಪ, ಕೆಲಗೆಜುಕೊರ್ಪ್ಪ ಕೊಣ್ಡಯಚಾರಿ ಎಂದು ಬರುತ್ತದೆ.[೧೭೫] ತ್ರಿವಿಕ್ರಮಶಿಲ್ಪದ ಮುಂದೆ ಮಾದವಯ್ಯನ ಮಗ ಜೋಗಮ ಎಂಬ ಉಲ್ಲೇಖವಿದೆ.[೧೭೬] ಅಲ್ಲಿಯೆ ಮಹಿಷಮರ್ದಿನಿಯಶಿಲ್ಪದ ಮುಂದೆ ತೊಣಕಲಿಯ ಮರುರೆಯನ ಮಗ ಮಾರ್ತ್ತಣ್ಡಯ ಮಾಡಿಸಿದ ಎಂಬ ಉಲ್ಲೇಖವಿದೆ.[೧೭೭] ಏನು ಮಾಡಿಸಿದನೆಂದು ತಿಳಿಯುವುದಿಲ್ಲ. ಹೀಗಾಗಿ ಈವರೆಗೆ ತಿಳಿಸಲಾದ ಎಲ್ಲಾ ಶಾಸನಗಳು ಸರಿಯಾದ ವಿವರಣೆಯನ್ನು ಕೊಡುವುದಿಲ್ಲ. ಇವು ಸಾಧ್ಯವಾದಷ್ಟು ಒಂದು ಅಥವಾ ಎರಡು ಸಾಲುಗಳಲ್ಲಿ ಮಾತ್ರ ಉಲ್ಲೇಖವಾಗಿವೆ.

ಅಡಿಟಿಪ್ಪಣಿಗಳು

೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಎಚ್.ತಿಪ್ಪೇರುದ್ರಸ್ವಾಮಿ, ಪು.೨೩೮

೨. ಬ.ಜಿ.ಶಾ.ಸಂ., ಕುರುವತ್ತಿ, ಶಾಸನ ೨೦

೩. " ಹೊಳಗುಂದಿ " ೯೩

೪. ಕ.ಶಾ.ಸಾ.ಅಧ್ಯಯನ, ಚಿ.ನ.ಮೂ., ಪು.೧೩೫

೫. ಬ.ಜಿ.ಶಾ.ಸಂ. ಬಾಗಳಿ ಶಾಸನ ೯೬, ಕ್ರಿ.ಶ.೯೯೧

೬. " " " ೧೦೩, ಕ್ರಿ.ಶ.೧೧೦೭

೭. " " " ೧೧೬, ಕ್ರಿ.ಶ.೧೧೨೨

೮. " " " ೧೦೮, ಕ್ರಿ.ಶ.೧೧೯೩

೯. ಚಾಲುಕ್ಯರ ಇತಿಹಾಸ ಕರ್ನಾಟಕ ಇತಿಹಾಸ ಮಾಲಿಕೆ, ಎ.ಎಸ್.ನಂಜುಂಡಸ್ವಾಮಿ, ಪು.೮೨

೧೦. ಬ.ಜಿ.ಶಾ.ಸಂ. ಕುಡುತಿನಿ ಶಾಸನ ೩೨, ಕ್ರಿ.ಶ.೯೭೬

೧೧. " " " ಕಂಚುಗಾರ ಬೆಳಗಲ್ಲು " ೩೮ ಕ್ರಿ.ಶ.೯೮೭

೧೨. " " " ಬಾಗಳಿ " ೧೩೦ ಕ್ರಿ.ಶ.೯೯೧

೧೩. " " " " " ೯೭ ಕ್ರಿ.ಶ.೧೦೧೮

೧೪. " " " " " ೧೨೨ ಕ್ರಿ.ಶ.೧೦೭೯

೧೫. " " " " " ೧೮೦ ಕ್ರಿ.ಶ.೧೧೦೮

೧೬. " " " " " ೧೭೯ ಕ್ರಿ.ಶ.೧೧೧೯

೧೭. " " " " " ೧೧೭ ಕ್ರಿ.ಶ.೧೧೪೮

೧೮. " " " " " ೧೧೫ ಕ್ರಿ.ಶ.೧೧೫೩

೧೯. " " " " " ೧೧೬ ಕ್ರಿ.ಶ.೧೧೯೩

೨೦. " " " " " ೧೨೬ ಕ್ರಿ.ಶ.೧೫೫೦

೨೧. " " " " " ೧೧೧ ಇಲ್ಲ

೨೨. " " " " " ೧೩೬ ಕ್ರಿ.ಶ.೧೦೧೮

೨೩. " " " " " ೯೯ ಕ್ರಿ.ಶ.೧೦೩೫

೨೪. " " " " " ೧೩೨ ಕ್ರಿ.ಶ.೧೦೬೮

೨೫. " " " " " ೧೦೨ ಕ್ರಿ.ಶ.೧೧೦೩

೨೬. South Indian Inscrpitions Vol.xi, Part II, No.124

೨೭. ಬ.ಜಿ.ಶಾ.ಸಂ. ಬಾಗಳಿ ಶಾಸನ ೧೦೩, ಕ್ರಿ.ಶ.೧೧೦೭

೨೮. " " " " " ೧೦೫ ಕ್ರಿ.ಶ.೧೧೦೮

೨೯. " " " " " ೧೨೭ ಕ್ರಿ.ಶ.೧೧೧೦

೩೦. " " " " " ೧೦೬ ಕ್ರಿ.ಶ.೧೧೧೫

೩೧. " " " " " ೧೦೭ ಕ್ರಿ.ಶ.೧೧೧೫

೩೨. " " " " " ೧೦೮ ಕ್ರಿ.ಶ.೧೧೨೨

೩೩. " " " " " ೧೧೦ ಕ್ರಿ.ಶ.೧೧೨೨

೩೪. " " " " " ೧೧೨ ಕ್ರಿ.ಶ.೧೧೨೬

೩೫. " " " " " ೧೧೨ ಕ್ರಿ.ಶ.೧೧೨೬

೩೬. " " " " " ೯೮ ಕ್ರಿ.ಶ.೧೧೪೭

೩೭. " " " " " ೧೧೪ ಕ್ರಿ.ಶ.೧೧೪೮

೩೮ " " " " " ೧೨೮ ಇಲ್ಲ

೩೯. " " " " " ೧೮೩ ಕ್ರಿ.ಶ.೧೦೧೫ ೪೪

೪೦. " " " " " ೧೩೧ ಕ್ರಿ.ಶ.೧೦೪೮ ೪೯

೪೧. " " " " " ೧೦೦ ಕ್ರಿ.ಶ.೧೦೭೯

೪೨. " " " " " ೧೮೪ ಕ್ರಿ.ಶ.೧೧೬೦

೪೩. " " " " " ೧೧೭ ಇಲ್ಲ

೪೪. " " " " " ೧೮೪ ಕ್ರಿ.ಶ.೧೧೬೦

೪೫. " " " " " ೯೫ ಕ್ರಿ.ಶ.೧೧೭೪

೪೬. " " " " " ೯೫ ಕ್ರಿ.ಶ.೧೧೮೪

೪೭. " " " " " ೧೦೪ ಇಲ್ಲ

೪೮. " " " " " ೧೨೬ ಇಲ್ಲ

೪೯. ಕರ್ನಾಟಕ ಶಾಸನಗಳ ಸಂಸ್ಕೃತಿ ಸಮೀಕ್ಷೆ, ಎಚ್.ತಿಪ್ಪೇರುದ್ರಸ್ವಾಮಿ, ಪು.

೫೦ ಬ.ಜಿ.ಶಾ.ಸಂ. ಬಾಗಳಿ ಶಾಸನ ೯೭, ಕ್ರಿ.ಶ.೧೦೧೮

೫೧ " " " " " ೧೩೬ ಕ್ರಿ.ಶ.೧೦೧೮

೫೨ " " " " " ೧೨೫ ಕ್ರಿ.ಶ.೯೭೨

೫೩ " " " " " ೧೦೭ ಕ್ರಿ.ಶ.೧೧೧೫

೫೪ " " " " ಮಾಡಲಗೇರಿ ೯೩ ಇಲ್ಲ

೫೫ " " " " ಬಾಗಳಿ ೯೩ ಕ್ರಿ.ಶ.೧೨೧೨

೫೬ " " " " " ೧೨೫ ಕ್ರಿ.ಶ. ೯೭೨

೫೭ " " " " " ೧೧೦ ಕ್ರಿ.ಶ. ೧೧೨೨

೫೮. ಅದೇ ,, ಶಾಸನ ೧೨೯ ಕ್ರಿ.ಶ.೧೨೦೯

೫೯. ,, ೧೩೫ ,, ೧೨೩೧ ಈ ಶಾಸನದಲ್ಲಿ ಬೇರೆ ಬೇರೆ ಕಾಲದ ಶಾಸನಗಳು ಕಂಡುಬರುತ್ತವೆ. ಅಂದರೆ, ಒಂದೇ ಕಲ್ಲಿನಲ್ಲಿ ಪೂರ್ವದ ಮುಖ, ಪಶ್ಚಿಮದ ಮೂಖ, ಉತ್ತರ ಮುಖ, ದಕ್ಷಿಣದ ಮುಖ. ಹೀಗೆ ಗುರುತಿಸಲಾಗಿದೆ.

೬೦. ಅದೇ ,, ೧೩೫ (ದಕ್ಷಿಣ ಮುಖ) ಕ್ರಿ.ಶ.೧೨೩೨

೬೧. ,, (ಪಶ್ಚಿಮ ಮುಖ) ,,

೬೨. ,, (ಉತ್ತರ ಮುಖ) ,,

೬೩. ,, ೧೩೩ (ಉತ್ತರ ಮುಖ) ,, ೧೨೮೭

೬೪. ,, ೧೩೩(ಉತ್ತರ ಮುಖ) ,, ೧೨೯೧

೬೫. ,, ೧೩೩(ದಕ್ಷಿಣ ಮುಖ) ಇಲ್ಲ

೬೬. ,, ೧೨೩ - ,,

೬೭. ,, ೧೭೮ - ,, ೧೪೦೦

೬೮. ,, ೧೮೫ - ,, ೧೫೪೭

೬೯. ,, ೯೯ - -

೭೦. ,, ೧೦೦ - ಕ್ರಿ.ಶ.೧೦೭೯

೭೧. ,, ೧೦೪ ಇಲ್ಲ

೭೨. ,, ೧೦೬ - ಕ್ರಿ.ಶ.೧೧೧೫

೭೩. ,, ೧೧೨ - ಕ್ರಿ.ಶ.೧೧೨೬

೭೪. ,, ೧೧೫ ,, ೧೧೫೩

೭೫. ,, ೧೮೪ ,, ೧೧೬೦

೭೬. ಜಾನಪದ ಚಿಂತನ, ಪ್ರೊ.ಬಸವರಾಜ, ಪೋಲಿಸ್ ಪಾಟೀಲ, ಪು.೧೨೨

೭೭. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-

೭೮. ಅದೇ ,, ೧೪೬ ಇಲ್ಲ

೭೯. ,, ೧೧೭ ಕ್ರಿ.ಶ.೧೨೧೨

೮೦. ,, ನೀಲಗುಂದ ಶಾಸನ-೭೮ ಕ್ರಿ.ಶ.೧೦೭೯

೮೧. ,, ಮೊರಗೇರಿ-೭೧-೨೮ ,, ೧೦೪೬

೮೨. ,, ಬಾಗಳಿ-೯೭, ಕ್ರಿ.ಶ.೧೦೧೮

೮೩. ,, ೧೩೬ ,, ೧೦೧೮

೮೪. ,, ೧೮೪ ,, ೧೧೬೦

೮೫. ,, ೧೮೪ ,,

೮೬. ,, ೧೦೦ ಕ್ರಿ.ಶ.೧೦೭೯

೮೭. ,, ೧೦೦ ಕ್ರಿ.ಶ.೧೦೭೯

೮೮. ,, ಹಿರೇಹಡಗಲಿ ಶಾಸನ-೫೨, ೧೦೫೭

೮೯. ,, ೧೪೬ ಇಲ್ಲ

೯೦. ,, ೧೪೮

೯೧. ,, ೧೦೬

೯೨. ಮಾರ್ಗ ಸಂಪುಟ-೨, ಎಂ.ಎಂ.ಕಲಬುರ್ಗಿ, ಪುಟ-

೯೩. ಬ.ಜಿ.ಶಾ.ಸಂ ಬಾಗಳಿ ಶಾಸನ-೧೩೨ ಕ್ರಿ.ಶ.೧೦೬೮

೯೪. ,,

೯೫. ,, ೯೬ ,, ೯೯೧

೯೬. ,, ೧೦೫ ,, ೧೧೦೮

೯೭. ,, ೧೨೫ ,, ೯೭೨

೯೮. ,, ೧೩೦ ಕ್ರಿ.ಶ.೯೮೭

೯೯. ,, ೧೬೫ ,, ೧೦೧೮

೧೦೦. ,, ೧೪೭ ,, ೧೨೦೦

೧೦೧. ,, ೧೪೮ ,, ೧೨೦೦

೧೦೨. ,, ೧೪೯ ,, ೧೨೦೦

೧೦೩. ,, ೧೫೩ ,, ೧೨೦೦

೧೦೪. ,, ೧೫೫ ,,

೧೦೫. ,, ೧೫೮ ,, ೧೧೦೦

೧೦೬. ,, ೧೫೯ ,,

೧೦೭. ,, ೧೬೧ ,,

೧೦೮. ,, ೧೬೨ ,,

೧೦೯. ,, ೧೬೪ ,,

೧೧೦. ,, ೧೭೧ ಕ್ರಿ.ಶ.೧೨೦೦

೧೧೧. ,, ೧೭೩ ,,

೧೧೨. ,, ೧೭೫ ,,

೧೧೩. ,, ೧೭೬ ,, ೧೧೦೦

೧೧೪. ,, ನಂದಿಬೇವೂರು ,,

೧೧೫. ,, ಮೈಲಾರ ,,

೧೧೬. ,, ಬಾಗಳಿ ೧೬೭ ಇಲ್ಲ

೧೧೭. ಚಿಕ್ಕೆರೂರು ಗ್ರಂಥ(ಹರಪನಹಳ್ಳಿ), ಅಪ್ರಕಟಿತ, ಪು.೫೦

೧೧೮. ಉ.ದುರ್ಗ, ಸಾಂ.ಅಧ್ಯಯ, ಎಂ.ಕೊಟ್ರೇಶ್, ಎಂ.ಫಿಲ್ ಪ್ರಬಂಧ(ಅಪ್ರಕಟಿತ)

೧೧೯. ತರಳುಬಾಳು ಹುಣ್ಣಿಮೆ ಸಂಚಿಕೆ, ಜೂನ್ -೧೯೮೩, ಬೆಂ.ಪೂ.೨೯

೧೨೦. ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ, ತರಳುಬಾಳು ಗ್ರಂಥಮಾಲೆ-೧೪, ಸಂ.ಎಚ್ .ದೇವಿರಪ್ಪ ಮತ್ತು ಮಹದೇವ ಬಣಕಾರ, ಪು.೯

೧೨೧. ದೇವಕವಿಯ ಕುರಿತು ವಿಶ್ವಬಂಧು ಮರುಳಸಿದ್ಧ ಕಾವ್ಯ, ಮಹದೇವ ಬಣಕಾರ ವಿರಚಿತ(ಭಾಮಿನಿ ಷಟ್ಪದಿ), ಪು.೫೫

೧೨೨. ಬೆಳಕು ಬೀರಿದ ದೇವಕವಿ- ಜಿ.ಬಸವಂತಪ್ಪ, ತರಳುಬಾಳು ಹುಣ್ಣಿಮೆ-೧೯೯.(ಹರಪನಹಳ್ಳಿ) ಇದು ದೇವಕವಿಯನ್ನು ಕುರಿತು ಬರೆದ ಲೇಖನವಾಗಿರುವುದರಿಂದ ಇದನ್ನು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ.

೧೨೩. ವಿಶ್ವಬಂಧು ಮರಳಸಿದ್ಧಕಾವ್ಯ, ಸಂ.ಎಚ್ .ದೇವಿರಪ್ಪ

೧೨೪. ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ. ಮುಗಳಿ

೧೨೫. ಮರುಳಸಿದ್ಧ ಚಾರಿತ್ರ್ಯ, ಎಚ್ .ದೇವಿರಪ್ಪ, ಪು-೩೮

೧೨೬. ಹರಪನಹಳ್ಳಿ ಪಾಳೆಯಗಾರರು, ಕುಂ.ಬಾ.ಸದಾಶಿವಪ್ಪ, ಪು.೭೮

೧೨೭. ವೀರಶೈವ ಸಾಹಿತ್ಯ, ಸ್ಮರಣಸಂಚಿಕೆ, ೨೦೦೧-೦೨, ಹೊಸಪೇಟೆ

೧೩೮. ಚಿಕ್ಕೇರೂರು ಗೋವಿಂದಚಾರ್ಯ ಗ್ರಂಥ(ಅಪ್ರಕಟಿತ), ಪು-೫೦

೧೨೯. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ-೩, ಹರಿಹರನ ಗಿರಿಜಾ ಕಲ್ಯಾಣ, ಪು.೩೧೫

೧೩೦. ಸಂಶೋಧನ ಲೇಖನಗಳು, ಮರುಳಸಿದ್ಧಕಾವ್ಯ ವಿಮರ್ಶೆ, ಸಂ.ಲಕ್ಷಣ ತೆಲಗಾವಿ ಮತ್ತು ಎಂ.ವಿ.ಶ್ರೀನಿವಾಸ, ಪು.೧೩೮

೧೩೧. ಬಳ್ಳಾರಿ ಜಿಲ್ಲಾ ಶಾಸನ, ಸಂ.ಬಾಗಳಿ ಶಾಸನ ಸಂಖ್ಯೆ-೧೦೦(ಹ.ಹಳ್ಳಿ)

೧೩೨. ಬೆಳಕು ಬೀರಿದ ದೇವಕವಿ, ಜಿ.ಬಸವಂತಪ್ಪ, ಪು.೧೯೯,(ತ.ಬಾ.ಹು)

೧೩೩. "ಸತ್ಕುಲ ಸಂಭೂತ" ಅಂದರೆ ಒಳ್ಳೆಯ ಕುಲದಲ್ಲಿ ಹುಟ್ಟಿವರನು. ಸಂಕ್ಷಿಪ್ತ ಕನ್ನಡ ನಿಘಂಟು. ಕನ್ನಡ ಸಾಹಿತ್ಯ ಪರಿಷತ್ತು.(ಈ ಪದವನ್ನು ಬಳಸಿರುವುದು ಕಾವ್ಯದ ದೃಷ್ಟಿಯಿಂದ. ಏಕೆಂದರೆ ಈ ಕಾವ್ಯ ಜಾತಿಯ ಬಗ್ಗೆ ಇರುವ ನಂಬಿಕೆಯನ್ನು ಖಂಡಿಸುತ್ತದೆ. ಮಾನವ ಎಂದ ಮೇಲೆ ಮಾನವೀಯತೆ, ಕರುಣೆ, ಮನುಷ್ಯತ್ವವನ್ನು ಇಟ್ಟುಕೊಂಡರಬೇಕೇ ವಿನಃ ಜಾತಿ ಅಲ್ಲ)

೧೩೪. ಬೆಳಕು ಬೀರಿದ ದೇವಕವಿ, ಜಿ.ಬಸವಂತಪ್ಪ(ಹರಪನಹಳ್ಳಿ), ಪು.೧೨೮

೧೩೫. ಸಮಗ್ರ ಕನ್ನಡ ಸಾಹಿತ್ಯಚರಿತ್ರೆ, ಸಂ.೩ ಬೆಂ. ಪುಟ-೩೫೫

೧೩೬. ಬೆಳಕು ಬೀರಿದ ದೇವಕವಿ, ಬಸವಂತಪ್ಪರ ಲೇಖನ, ಪುಟ.೧೨೯

೧೩೭. ,, ಪು.೧೨೮

೧೩೮. ,,

೧೩೯. ವಚನ ಕಮ್ಮಟ-ಸಂ.ಕೆ.ಮರುಳಸಿದ್ದಪ್ಪ, ಕೆ.ರಂ.ನಾಗರಾಜ, ಬೆಂ.ವಿ.ವಿ, ವಚನ ಸಂ-೨೨೨

೧೪೦. ಬ.ಜಿ.ಶಾ.ಸಂ ಬಾಗಳಿ ಶಾಸನ ೧೩೦ ಕ್ರಿ.ಶ.೯೮೭

೧೪೧. ಬಾಗಳಿಯ ವಸ್ತು ಸಂಗ್ರಹಾಲಯದಲ್ಲಿರುವ ಶಾಸನ ಸಂಖ್ಯೆ

೧೪೨. ----

೧೪೩. ಬ.ಜಿ.ಶಾ.ಸಂ ಬಾಗಳಿ ಶಾಸನ-೧೭೬, ಕ್ರಿ.ಶ.೧೧೦೦

೧೪೪. ,, ೧೨೬ ಇಲ್ಲ

೧೪೫. ,, ಶಾಸನ ೧೦೧೮ ಕ್ರಿ.ಶ.೧೦೧೮

೧೪೬. ,, ೧೫೪ ,, ೧೧೦೦

೧೪೭. ಇತಿಹಾಸ ಅಧ್ಯಾಯ-೨, ಮಹಾಬಲಿ ವಂಶಿಯರು.

೧೪೮. ಬ.ಜಿ.ಶಾ.ಸಂ, ಬಾಗಳಿ ಶಾಸನ-೧೨೭ ಕ್ರಿ.ಶ.೧೧೦೦

೧೪೯. ,, ೧೫೮ ,,

೧೫೦. ,, ೧೫೯ ,,

೧೫೧. ,, ೧೬೦ ,,

೧೫೨. ,, ೧೬೧ ,,

೧೫೩. ,, ೧೬೨ ,,

೧೫೪. ,, ೧೬೪ ,,

೧೫೫. ,, ೧೦೬ ಕ್ರಿ.ಶ. ೧೧೧೫

೧೫೬. ,, ೧೭೪ ಕ್ರಿ.ಶ. ೧೧೦೦

೧೫೭. ,, ೧೭೫ ,,

೧೫೮. ,, ೧೪೭ ,,

೧೫೯. ,, ೧೪೯ ಕ್ರಿ.ಶ.೧೨೦೦

೧೬೦ ,, ೧೫೨ ,,

೧೬೧. ,, ೧೫೩ ,,

೧೬೨. ,, ೧೬೮ ,,

೧೬೩. ,, ೧೫೦ ,,

೧೬೪. ,, ೧೫೧ ,,

೧೬೫. ,, ೧೭೧ ,,

೧೬೬. ,, ೧೪೦ ಕ್ರಿ.ಶ.೧೬೦೦

೧೬೭. ,, ಕುರುವತ್ತಿ ಶಾಸನ-೧೨, ಕ್ರಿ.ಶ.೧೬೦೦

೧೬೮. ,, ಬಾಗಳಿ ಶಾಸನ ೧೪೨ ಕ್ರಿ.ಶ.೧೬೦೦

೧೬೯. ,, ೧೪೮ ,,

೧೭೦. ,, ೧೪೩ ಇಲ್ಲ

೧೭೧. ,, ೧೪೮ ,,

೧೭೨. ,, ೧೪೪ ,,

೧೭೩. ,, ೧೪೬ ,,

೧೭೪. ,, ೧೬೩ ,,

೧೭೫. ,, ೧೭೦ ,,

೧೭೬. ,, ೧೬೯ ,,

೧೭೭. ,, ೧೬೭ ,,

◆◆

ಅಧ್ಯಾಯ ೫

ಶಾಸನ ಶಿಲ್ಪಗಳು

೧ ದಾನಶಾಸನ ಶಿಲ್ಪ

೨ ವೀರಶಾಸನ ಶಿಲ್ಪ

೩ ಮಹಾಸತಿ ಶಾಸನಶಿಲ್ಪ

ಕರ್ನಾಟಕ ಬಹುಪಾಲು ಶಾಸನಗಳಿಗೆ ಮೂಲ ಪ್ರೇರಣೆ ಧರ್ಮಗಳು ಎಂದರೆ ತಪ್ಪಾಗಲಾರದು. ಇದರೊಂದಿಗಿನ ಶಿಲ್ಪಗಳಿಗೂ ಧರ್ಮಗಳೇ ಪ್ರೇರಣೆಯಾಗಿವೆ. ಆದರೆ ಶಾಸನ ಬೇರೆ, ಶಾಸನಶಿಲ್ಪಗಳು ಬೇರೆ. ಶಾಸನ ಪಾಠದಲ್ಲಿ ಅರಸರ ಆಡಳಿತ ಕ್ರಮ, ವಂಶಾವಳಿ, ದಾನದತ್ತಿಗಳು ಮುಂತಾದ ವಿವರಗಳನ್ನು ತಿಳಿಸಿದರೆ ಶಾಸನಶಿಲ್ಪಗಳು ಆ ವಿವರವನ್ನು ಸಾಂಕೇತಿಕವಾಗಿ ಪ್ರತಿಬಿಂಬಿಸುತ್ತವೆ. ವೀರಗಲ್ಲುಗಳು ಸಹ ಬೇರೆ ಅರ್ಥವನ್ನು ಕೊಡುತ್ತವೆ. ಅಂದರೆ ಅರಸರ ಆಡಳಿತ, ಯುದ್ಧ ವಿವರಗಳನ್ನು ತಿಳಿಸುತ್ತವೆ. ಶಾಸನಶಿಲ್ಪಗಳು ಆಯಾ ಪರಿಸರಕ್ಕೆ ತಕ್ಕಂತೆ ಆಯಾ ಧರ್ಮಕ್ಕೆ ತಕ್ಕಂತೆ ಅಂದಿನ ಜನಜೀವನದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಡಾ.ಎಂ.ಚಿದಾನಂದಮೂರ್ತಿಯವರು ತಮ್ಮ ಅಧ್ಯಯನದಲ್ಲಿ ಕೆಲವೊಂದು ಶಾಸನಶಿಲ್ಪಗಳನ್ನು ಚರ್ಚಿಸಿದ್ದಾರೆ. ಶಾಸನಗಳಂತೆಯೇ ಶಾಸನಶಿಲ್ಪಗಳು ಅಷ್ಟೇ ಮುಖ್ಯ ವೆಂಬುದನ್ನು ಅರಿತು ಡಾ.ಡಿ.ವಿ.ಪರಮಶಿವಮೂರ್ತಿವರು ಕನ್ನಡ ಶಾಸನಶಿಲ್ಪಗಳ ಅಧ್ಯಯನ ಕೈಗೊಂಡು ಶಾಸನಶಿಲ್ಪಗಳ ಅಧ್ಯಯನಕ್ಕೆ ಒಂದು ಹೊಸ ತಿರುವನ್ನು ಕೊಟ್ಟಿದ್ದಾರೆ. ಇದರಿಂದ ಶಾಸನ ಪಾಠದಂತೆ ಶಾಸನಶಿಲ್ಪವೂ ಬಹಳಮುಖ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಶಾಸನಪಾಠ ಅಕ್ಷರಸ್ಥರಿಗಾದರೆ, ಶಾಸನಶಿಲ್ಪ ಅನಕ್ಷರಸ್ಥರಿಗೆ ಎಂದು ಹೇಳಬಹುದು. ಏಕೆಂದರೆ ಆ ಶಿಲ್ಪಗಳನ್ನು ಕಂಡೊಡನೆಯೇ ಏನನ್ನು ಹೇಳುತ್ತದೆ ಮತ್ತು ಯಾವ ಧರ್ಮಕ್ಕೆ ಸಂಬಂಧಿಸಿದೆ ಎಂದು ಹೇಳಬಹುದು. ಆದ್ದರಿಂದ ಶಾಸನಶಿಲ್ಪಗಳನ್ನು ಅಧ್ಯಯನದ ಸಂದರ್ಭದಲ್ಲಿ ಕಡೆಗಣಿಸುವಂತಿಲ್ಲ.

ನಮ್ಮ ಪ್ರಾಚೀನ ಶಿಲ್ಪ ಶಾಸ್ತ್ರಗ್ರಂಥಗಳಾದ ಮಾನಸಾರ, ಮಯಮತ ಅಂಶುಮದ್ಭೇದಾಗಮ, ಶಿಲ್ಪಸಂಗ್ರಹ ಮೊದಲಾದವುಗಳಲ್ಲಿ ಉಬ್ಬುಶಿಲ್ಪದ ಬಗ್ಗೆ ಏನನ್ನು ಹೇಳಿಲ್ಲ. ಚಾಲುಕ್ಯ ವಾಸ್ತುಶಿಲ್ಪ ಎಂಬ ಕೃತಿಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಅಂಶಗಳು ಕಂಡುಬರುತ್ತವೆ.[೧] 'ಶಿಲ್ಪ' ಎಂಬುದು ನಾಲ್ಕು ದಿಕ್ಕುಗಳಿಂದಲೂ ನೋಡಬಹುದಾದ ಆಕೃತಿಯಾಗಿರುತ್ತದೆ. ಇದನ್ನು ಯಾವ ಬದಿಯಲ್ಲಿಯಾದರೂ ನಿಂತು ನೋಡಿದರೆ ಅದರ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಳ್ಳಬಹುದು, ಇಲ್ಲವೆ ಅದನ್ನು ಯಾವ ಕಡೆಗೆ ಬೇಕಾದರೂ ತಿರುಗಿಸಿ ನೋಡಬಹುದು. ಇದನ್ನು 'ದುಂಡುಶಿಲ್ಪ' ಅಥವಾ ಪೂರ್ಣಶಿಲ್ಪ ವೆಂದು ಕರೆಬಹುದು. ಆದರೆ ಉಬ್ಬುಶಿಲ್ಪ ಹೀಗಿರುವುದಿಲ್ಲ. ಇದಕ್ಕೆ ಸ್ವತಂತ್ರವಾದ ಮೈ ಇರುವುದಿಲ್ಲ. ಇದು ಒಂದು ಹಿನ್ನೆಲೆಯೊಂದಿಗೆ ಅಂಟಿಕೊಂಡಿರಲೇಬೇಕು. ಅಲ್ಲದೆ ಇದನ್ನು ಎದುರಿನಲ್ಲಿ ನಿಂತು ನೋಡಬಹುದೇ ಹೊರತು, ಶಿಲ್ಪವನ್ನು ನೋಡುವಂತೆ, ಯಾವ ಬದಿಯಿಂದಲಾದರೂ ನೋಡಲು ಸಾಧ್ಯವಿಲ್ಲ. ಇವುಗಳನ್ನು ಅದರ ಹಿನ್ನೆಲೆಯಿಂದ ತೀರಾ ಮುಂದಕ್ಕೆ ಚಾಚಿರುವಂತೆಯೂ ಕೆತ್ತಲಾಗುವುದಿಲ್ಲ.

[illegible]

ಕೈಗಳನ್ನು, ಆಯುಧಗಳನ್ನು ಮತ್ತು ಇತರೆ ಭಾಗಗಳನ್ನು ಪೂರ್ಣಶಿಲ್ಪದ ರೀತಿಯಂತೆ ಕೆತ್ತಲಾಗುವುದಿಲ್ಲ. ಇಲ್ಲಿ ಕೈಗಳು, ಆಯುಧಗಳು ಮುಂತಾದವು ಪೂರ್ಣವಾಗಿ ಹಿನ್ನೆಲೆಯೊಂದಿಗೆ ಅಂಟಿರುತ್ತವೆ. ಇಂತಹ ಪ್ರಕಾರಕ್ಕೆ ಶಾಸನ ಶಿಲ್ಪ ಸೇರುತ್ತದೆ. ಈ ಶಾಸನ ಶಿಲ್ಪದಲ್ಲಿ ಒಂದು ಘಟನೆಗೆ ಸಂಬಂಧಿಸಿದ ಒಂದು ಘಟನೆಯನ್ನು ಒಂದು ಭಂಗಿಯನ್ನು ಕೆತ್ತಿದರೆ, ಶಾಸನಶಿಲ್ಪದಲ್ಲಿ ಏಕಕಾಲದಲ್ಲಿ ಹಲವು ಘಟನೆಗಳನ್ನು ಚಿತ್ರಿಸಬಹುದು. ವೀರಗಲ್ಲುಗಳು ಮತ್ತು ಮಾಸ್ತಿಗಲ್ಲಿನ ಶಿಲ್ಪಗಳಲ್ಲಿ ಈ ಪ್ರಕಾರದ ತಂತ್ರವನ್ನೇ ನಾವು ಪ್ರಧಾನವಾಗಿ ಕಾಣಬಹುದು. ಶಾಸನ ನೆಡುವ ಪದ್ಧತಿ ಬೆಳೆದು ಬಂದಂತೆಲ್ಲ ಶಾಸನಗಳ ಸ್ವರೂಪದಲ್ಲಿ ಬದಲಾವಣೆ ಕಂಡುಬಂದಿತು. ಅನೇಕ ರೀತಿಯ ಮಜಲುಗಳನ್ನು ಪಡೆಯಲು ಪ್ರಾರಂಭಿಸಿತು.[೨] ಸ್ವರೂಪದ ದೃಷ್ಟಿಯಿಂದ ಶಾಸನದ ತಲೆಯ ಮೇಲೆ ಮತಕ್ಕನುಗುಣವಾಗಿ ಬೇರೆ ಬೇರೆ ಚಿತ್ರಗಳಿರುತ್ತವೆ. ಆದರೆ ಆಕಳು, ಕರು, ಖಡ್ಗ, ಸೂರ್ಯ, ಚಂದ್ರರ ಚಿತ್ರ ಸರ್ವಸಾಮಾನ್ಯವಾಗಿರುತ್ತದೆ. ಇಂತವುಗಳನ್ನು ಶಾಸನ ಶಿಲ್ಪಗಳೆಂದು ಕರೆಯಬಹುದು. ಇಂತಹ ಶಾಸನಶಿಲ್ಪಗಳು ಇಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಇವುಗಳನ್ನು ದಾನ ಶಾಸನಶಿಲ್ಪ, ವೀರ ಶಾಸನಶಿಲ್ಪ, ಮಹಾಸತಿ ಶಾಸನಶಿಲ್ಪಗಳೆಂದು ವಿಭಾಗಿಸಿಕೊಂಡು ಚರ್ಚಿಸಲಾಗಿದೆ.

೧. ದಾನ ಶಾಸನಶಿಲ್ಪ

ಶಾಸನಗಳಲ್ಲಿ ಕೆಲವು ದಾನಗಳನ್ನು ಮಹಾದಾನ ಎಂದು ಕರೆಯಲಾಗಿದೆ. ಅವುಗಳಲ್ಲಿ ಧಾನ್ಯಗಳು, ಲೋಹಗಳು, ಪ್ರಾಣಿಗಳನ್ನು ದಾನ ನೀಡುವುದು ಒಂದು. ದಾನಶಾಸನಶಿಲ್ಪವನ್ನು ಐದು ವಿಧವಾಗಿ ವಿಂಗಡಿಸಬಹುದು. ಜೈನ ದಾನಶಾಸನಶಿಲ್ಪ ಶೈವ ದಾನಶಾಸನಶಿಲ್ಪ, ವೈಷ್ಣವ ದಾನಶಾಸನಶಿಲ್ಪವೆಂದು. ಧಾರ್ಮಿಕ ದೃಷ್ಟಿಯಿಂದ ಮೂರು ವಿಭಾಗಗಳನ್ನಾಗಿಯೂ ವೈವಿಧ್ಯತೆಯ ದೃಷ್ಟಿಯಿಂದ ಧರ್ಮಸಮನ್ವಯ ಶಾಸನಶಿಲ್ಪವೆಂದು, ವಿಶೇಷತೆ ದೃಷ್ಟಿಯಿಂದ, ಗೋಸಹಸ್ರ ದಾನ ಶಾಸನಶಿಲ್ಪವೆಂದು ವಿಂಗಡಿಸಬಹುದು. ದಾನಶಾಸನಶಿಲ್ಪದಲ್ಲಿ ವಿವರವನ್ನು ನಿರೂಪಿಸಲು ಸಾಧ್ಯವಾಗುವುದಿಲ್ಲ. ಬರಹದಲ್ಲಿ ದಾನದ ವಿವರ ನೀಡುವಂತೆ, ಶಿಲ್ಪದಲ್ಲಿ ವಿವರಗಳನ್ನು ನೀಡಲು ತಾಂತ್ರಿಕವಾಗಿಯೇ ಅಸಾಧ್ಯವಾದುದು. ಹೀಗಾಗಿ ಸಾಂಕೇತಿಕವಾಗಿ ದಾನದ ಅಂಶಗಳನ್ನು ಮಾತ್ರ ನಿರೂಪಿಸಲು ಸಾಧ್ಯವಾಗುತ್ತದೆ.

ಶೈವ ದಾನಶಾಸನ ಶಿಲ್ಪ

ಇಲ್ಲಿ ಶೈವ ಮತ್ತು ವೀರಶೈವವೆಂಬ ಪ್ರತ್ಯೇಕತೆ ಬೇಕಾಗುವುದಿಲ್ಲ. ಇದಕ್ಕೆ ಕಾರಣ ಶಾಸನಶಿಲ್ಪಗಳು ಒಂದಕ್ಕೊಂದು ಪೂರಕವಾಗಿ ಬೆಳೆದುಬಂದಿರುವುದರಿಂದ ಇವುಗಳನ್ನು ಸೇರಿಸಿ ಹೇಳಲಾಗಿದೆ. ಶೈವ ದಾನ ಶಾಸನಶಿಲ್ಪಕ್ಕೂ, ವೀರಶೈವ ದಾನಶಾಸನಶಿಲ್ಪಕ್ಕೂ ವ್ಯತ್ಯಾಸಗಳನ್ನು ಗುರುತಿಸುವುದು ಬಹಳ ಕಷ್ಟ. ಈ ಧರ್ಮದ ಶಾಸನಗಳನ್ನು ಒಂದೆಡೆ ಸೇರಿಸಿದಾಗ ಒಂದು ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ. ಹತ್ತು ಅಥವಾ ಹನ್ನೊಂದನೆ ಶತಮಾನದ ಶಾಸನಗಳಲ್ಲಿ ಶಿವಲಿಂಗದ ಪೂಜೆ ಮಾಡುತ್ತಿರುವ ಯತಿಗಳ

[illegible]

[illegible]

[illegible]

[illegible]

ತಲೆಗೂದಲು ಕಾಲಿನ ಹಿಮ್ಮಡಿಯವರೆಗೂ ಉದ್ದವಾಗಿ ಇಳಿಬಿದ್ದಿರುವುದನ್ನು ಕಾಣಬಹುದು. ಪ್ರಾಯಶಃ ಇವರೆಲ್ಲ ಶೈವ ಧರ್ಮೀಯರೆಂದು ಹೇಳಬಹುದು. ಕಾಪಾಲಿಕ ಯತಿಗಳಿಗೆ ತಲೆಗೂದಲು ಹೀಗೆಯೇ ಉದ್ದವಾಗಿ ಇಳಿಬಿದ್ದಿರುತ್ತದೆಯೆಂಬುದಕ್ಕೆ ಪ್ರಾಚೀನ ಆಧಾರಗಳಿವೆ. ಈ ಕಾರಣದಿಂದಾಗಿ ಶಾಸನ ಪಾಠದ ಅಭ್ಯಾಸದಲ್ಲಿ ತೊಡಕುಗಳಿರುವಂತೆ, ಶಾಸನಶಿಲ್ಪದ ಅಭ್ಯಾಸದಲ್ಲಿ ತೊಡಕಾಗುವುದಿಲ್ಲ. ಈ ಉಪವಿಭಾಗದಲ್ಲಿ ಶೈವ-ವೀರಶೈವದ ವ್ಯತ್ಯಾಸವನ್ನು ಪರಿಗಣಿಸದೆ ಎಲ್ಲವನ್ನು ವಿವರಿಸಲಾಗಿದೆ.

ಶೈವ ಶಾಸನಶಿಲ್ಪವನ್ನು ಶಿವಲಿಂಗದ ಚಿತ್ರಣ, ಶಿವಲಿಂಗದ ಜೊತೆ ಆಕಳು ಮತ್ತು ನಂದಿಶಿಲ್ಪ ಮತ್ತು ಮಂಟಪದಲ್ಲಿ ಶಿವಲಿಂಗ, ಭಕ್ತ ಹಾಗೂ ಆಕಳ ಶಿಲ್ಪಗಳಿರುವುದು ಕಂಡುಬರುತ್ತವೆ. ಈ ವಿವರಣೆಯು ಬಾಗಳಿಯ ಶಾಸನಶಿಲ್ಪಗಳಲ್ಲಿ ಕಂಡುಬರುತ್ತವೆ.

ಶಿವಲಿಂಗದ ಚಿತ್ರಣ : ಶೈವ ಧರ್ಮಕ್ಕೆ ಸಂಬಂಧಿಸಿದಂತೆ ದಾನ ಶಾಸನಗಳಲ್ಲಿ ಶಿವಲಿಂಗದ ಚಿತ್ರ ಬಹಳ ಸಾಮಾನ್ಯವಾಗಿರುತ್ತದೆ. ಶಿವಲಿಂಗದ ಅಕ್ಕಪಕ್ಕ ಸೂರ್ಯ ಚಂದ್ರರ ಚಿತ್ರವಿದ್ದು, ಕೆಲವು ಶಾಸನಶಿಲ್ಪಗಳಲ್ಲಿ ರೇಖೆಯಲ್ಲಿಯೇ ಶಿವಲಿಂಗವನ್ನು ಚಿತ್ರಿಸಿರುತ್ತಾರೆ. ವಸ್ತುಸಂಗ್ರಹಾಲಯದಲ್ಲಿರುವ ಇಲ್ಲಿಯ ಶಾಸನಶಿಲ್ಪಗಳಲ್ಲಿ ಬಹುಪಾಲು ಶಿಲ್ಪಗಳು ಶಿವಲಿಂಗವನ್ನು ಹೊಂದಿವೆ.[೩] ಇವುಗಳಲ್ಲಿ ಹೆಚ್ಚಾಗಿ ಮಧ್ಯದಲ್ಲಿ ಶಿವಲಿಂಗ ಪಕ್ಕದ ಎರಡೂ ಕಡೆಗೆ ನಂದಿ ಮತ್ತು ಆಕಳು(ಕರು) ಶಿಲ್ಪ ಕಂಡುಬರುತ್ತವೆ. ಬಾಗಳಿಯ ವಸ್ತು ಸಂಗ್ರಾಲಯದ ಬಲಭಾಗದಲ್ಲಿರುವ ೧೬ ಶಾಸನ ಶಿಲ್ಪಗಳಲ್ಲಿ ಶಿವಲಿಂಗವಿದೆ. ಇಲ್ಲಿಯ ವಸ್ತುಸಂಗ್ರಹಾಲಯದಲ್ಲಿರುವ ಶಾಸನವೊಂದರಲ್ಲಿ ಹೂವಿನಿಂದ ಅಲಂಕೃತವಾದ ಕಿರೀಟವನ್ನು ಧರಿಸಿದ ಶಿವಲಿಂಗವಿದ್ದು ಮೇಲ್ಭಾಗದಲ್ಲಿ ಎರಡು ಚಾಮರಗಳು ಹಾಗೂ ಸೂರ್ಯಚಂದ್ರರನ್ನು ಕಾಣಬಹುದು. ಶಿವಲಿಂಗದ ಜೊತೆ ಆಕಳು ಮತ್ತು ನಂದಿಯ ಶಿಲ್ಪ. ಕೆಲವು ಶಾಸನಗಳಲ್ಲಿ ಶಿವಲಿಂಗದ ಪಕ್ಕದಲ್ಲಿ ಕರುವಿಗೆ ಹಾಲು ಕುಡಿಸುತ್ತಿರುವ ಹಸುವಿನ ಶಿಲ್ಪವಿರುವುದು ಕಂಡುಬರುತ್ತದೆ. ವಸ್ತುಸಂಗ್ರಹಾಲಯದ ದಾನ ಶಾಸನಶಿಲ್ಪವೊಂದರಲ್ಲಿ ಹೂವಿನ ಕಿರೀಟ ಧರಿಸಿದ ಶಿವಲಿಂಗ ಮತ್ತು ಅಕ್ಕಪಕ್ಕ ನಂದಿ ಮತ್ತು ಕರುವಿಗೆ ಹಾಲುಣಿಸುತ್ತಿರುವ ಆಕಳ ಸುಂದರವಾದ ಶಿಲ್ಪವಿದೆ.

ಶಿವಲಿಂಗ-ನಂದಿ-ಆಕಳು : ಬಾಗಳಿಯ ವಸ್ತುಸಂಗ್ರಹಾಲಯದಲ್ಲಿರುವ ಬಲಭಾಗದ ಶಾಸನಗಳಲ್ಲಿ ಮತ್ತು ವಸ್ತು ಸಂಗ್ರಹಾಲಯದ ಹೊರಗಿನ ಶಾಸನಗಳ ಮೇಲೆ ಮಧ್ಯದಲ್ಲಿ ವಿವಿಧ ಕೆತ್ತನೆಯಿಂದ ಕೂಡಿದ ಶಿವಲಿಂಗ ಮತ್ತು ಎರಡು ಪಕ್ಕೆಲೆಗಳಲ್ಲಿ ನಂದಿ ಮತ್ತು ಆಕಳು ತನ್ನ ಕರುವಿಗೆ ಹಾಲು ಕುಡಿಸುತ್ತಿರುವ ಶಿಲ್ಪಗಳು ಕಂಡುಬಂದಿವೆ. ಎಲ್ಲಾ ಶಿಲ್ಪಗಳಲ್ಲಿ ನಂದಿ ತನ್ನ ಒಂದು ಕಾಲನ್ನು ಸ್ವಲ್ಪ ಮುಂದು ಚಾಚಿ ಮಲಗಿರುವುದು ಕಂಡುಬರುತ್ತದೆ.[೪]

[illegible]

ಮಂಟಪದಲ್ಲಿ ಶಿವಲಿಂಗ-ಭಕ್ತಿ-ನಂದಿ-ಆಕಳು : ಬಾಗಳಿಯ ಕಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ.೧೦೧೮ರ ಶಾಸನದಲ್ಲಿ ಮಹಾಮಂಟಪವನ್ನು ದೇವಾಲಯದಂತೆ ಕೆತ್ತಿದ್ದು, ಮಧ್ಯದಲ್ಲಿ ಕಿರೀಟದಾರಿ ಯಾದ ಶಿವಲಿಂಗ ಮತ್ತು ಮಂಟಪದ ಒಳಗೆ ಈರ್ವರು ಭಕ್ತರು, ಒಬ್ಬ ಕೈಮುಗಿದು ನಿಂತಿದ್ದಾನೆ, ಇನ್ನೊಬ್ಬ ಕೈಯಲ್ಲಿ ಚಾಮರವಿಡಿದು ನಿಂತಿದ್ದಾನೆ. ಮಂಟಪದ ಹೊರಗಡೆ ಎರಡು ದೇವರ ಶಿಲ್ಪಗಳಿದ್ದು, ಇದರ ಪಕ್ಕದಲ್ಲಿ ನಂದಿ ಮತ್ತು ಆಕಳು ಶಿಲ್ಪಗಳಿವೆ.[೫]

ಶಿವಲಿಂಗ-ಭಕ್ತ-ಆಕಳ ಶಿಲ್ಪ : ಈ ಶಾಸನ ಶಿಲ್ಪದಲ್ಲಿ ಹೆಚ್ಚು ಶಿವಲಿಂಗ ಅದರ ಬಳಿ ಕೈ ಮುಗಿದು ನಿಂತ ಅಥವಾ ಕುಳಿತ ಭಕ್ತ ಮತ್ತು ಹಸುವಿನ ಶಿಲ್ಪ ಕಂಡುಬರುತ್ತದೆ.[೬]

ಯತಿ-ಶಿವಲಿಂಗ-ನಂದಿ-ಅಕಳು : ವಸ್ತುಸಂಗ್ರಹಾಲಯದಲ್ಲಿರುವ ಶಾಸನಗಳಲ್ಲಿ(೧೦೦ಕ್ಕೆ ೯೫ ಭಾಗ) ಕಿರೀಟ ಧಾರಿಯಾದ ಶಿವಲಿಂಗ ಇದರ ಪಕ್ಕದಲ್ಲಿ ಎಡಭಾಗಕ್ಕೆ, ನೀಳವಾದ ಉದ್ದನೆಯ ಕೂದಲನ್ನು ಹೊಂದಿದ್ದ ಯತಿ ಕೈಮುಗಿದು ನಿಂತಿದ್ದಾನೆ. ಶಿವಲಿಂಗದ ಮೇಲೆ ಸೂರ್ಯ-ಚಂದ್ರ ಮತ್ತು ಅಕ್ಕಪಕ್ಕಕ್ಕೆ ನಂದಿ, ಹಾಲುಣಿಸುತ್ತಿರುವ ಆಕಳು. ಇಂತಹ ಶಾಸನ ಶಿಲ್ಪಗಳೇ ಹೆಚ್ಚಾಗಿ ಕಂಡುಬರುತ್ತವೆ. ಇವುಗಳು ವಸ್ತು ಸಂಗ್ರಹಾಲಯದ ಬಲಭಾಗದ ಕೋಣೆಯಲ್ಲಿದೆ.[೭]

ಶಿವಲಿಂಗ-ಯತಿ-ಆಕಳು : ವಸ್ತುಸಂಗ್ರಾಲಯದಲ್ಲಿರುವ ಒಂದು ಶಾಸನ ಶಿಲ್ಪದಲ್ಲಿ ಕಿರೀಟಕಾರಿಯಾದ ಶಿವಲಿಂಗ ಮೇಲೆ ಸೂರ್ಯಚಂದ್ರ ಮತ್ತು ಎಡಭಾಗದಲ್ಲಿ ಯತಿಯ ಕೈಮುಗಿದು ನಿಂತಿದ್ದು, ಬಲಭಾಗ ದಲ್ಲಿ ಆಕಳು ಕರುವಿಗೆ ಹಾಲು ಕುಡಿಸುತ್ತಿರುವ ಶಿಲ್ಪವಿರುವುದು ಕಂಡುಬರುತ್ತದೆ. ಆದರೆ ಇಲ್ಲಿ ನಂದಿ ಶಿಲ್ಪವಿಲ್ಲ. ಇಂತಹ ವಿವರಣೆಯನ್ನು ಹೊಂದಿದ ಶಾಸನಶಿಲ್ಪ ವಸ್ತುಸಂಗ್ರಹಾಲಯದ ಬಲಭಾಗದಲ್ಲಿ (ಹೊರಗೆ) ಕಂಡುಬರುತ್ತದೆ.[೮] ಆದರೆ ಇಲ್ಲಿ ಆಕಳು ಶಿಲ್ಪವಿಲ್ಲ. ಇಲ್ಲಿಯೇ ಇರುವ ಇನ್ನೊಂದು ಶಾಸನಶಿಲ್ಪದಲ್ಲಿ ನಡುವೆ ಶಿವಲಿಂಗವಿದ್ದು, ಶಿವಲಿಂಗದ ಪಕ್ಕದಲ್ಲಿ ಒಂದು(ತೆಂಗಿನ ಮರದಂತೆ), ಮರವಿದ್ದು, ಯತಿ ಶಿರಬಾಗಿ ಲಿಂಗಕ್ಕೆ ನಮಿಸುತ್ತಿದ್ದಾನೆ. ಪಕ್ಕದಲ್ಲಿ ನಂದಿ ಮತ್ತು ಆಕಳು ಶಿಲ್ಪವಿದೆ. ಇವೆಲ್ಲವುಗಳ ಮೇಲೆ ಮಧ್ಯದಲ್ಲಿ ಗಣೇಶನ ಶಿಲ್ಪವಿದೆ.[೯]ಗಣೇಶ ಶುಭದ ಸಂಕೇತವಾಗಿ ಇಲ್ಲಿ ಮೂಡಿದೆ.

ಯತಿ-ಶಿವಲಿಂಗ-ಆಕಳು : ವಸ್ತುಸಂಗ್ರಹಾಲಯದಲ್ಲಿರುವ ಇನ್ನೊಂದು ಶಾಸನಶಿಲ್ಪದಲ್ಲಿ ಯತಿಯು ಶಿವಲಿಂಗದ ಪಕ್ಕದಲ್ಲಿ ನಿಂತು, ನಮ್ಮ ಎದುರಿಗೆ ಕಾಣುವ ಹಾಗೆ ಕೈಮುಗಿದು ನಿಂತಿದ್ದಾನೆ. ನಂದಿಯ ಶಿಲ್ಪವಿಲ್ಲ, ಆದರೆ ಯತಿಯ ಮುಖ ಟಗುರುವಿನ ರೂಪ ಹೊಂದಿದೆ.[೧೦]

ಶಿವಲಿಂಗ-ಆಕಳು : ವಸ್ತುಸಂಗ್ರಹಾಲಯದಲ್ಲಿರುವ(ಹೊರಗೆ ಬಲಭಾಗದಲ್ಲಿ) ಶಾಸನಶಿಲ್ಪವೊಂದರಲ್ಲಿ ಶಿವಲಿಂಗವಿದ್ದು ಇದಕ್ಕೆ ವೃತ್ತಾಕಾರದ ಚೌಕಟ್ಟನ್ನು ಕೆತ್ತಲಾಗಿದ್ದು ಎಡಭಾಗದಲ್ಲಿ ಆಕಳು ತನ್ನ ಕರುವಿಗೆ ಹಾಲುಣಿಸುತ್ತಿರುವುದು, ಮೇಲೆ ಸೂರ್ಯ ಮತ್ತು ಚಂದ್ರನಶಿಲ್ಪಗಳಿವೆ. ಇಲ್ಲಿ ನಂದಿಯಶಿಲ್ಪವಿಲ್ಲ.[೧೧]

ಯತಿ-ಶಿವಲಿಂಗ-ಆಕಳು-ನಂದಿ : ವಸ್ತುಸಂಗ್ರಹಾಲಯದಲ್ಲಿರುವ(ಬಲಭಾಗ) ಶಾಸನಶಿಲ್ಪವೊಂದರಲ್ಲಿ ಕಿರೀಟ ಧಾರಿಯಾದ ಶಿವಲಿಂಗ ಪಕ್ಕದಲ್ಲಿಯೇ ಯತಿ ಇದ್ದು, ಅವನ ಕೇಶರಾಶಿ ಹಿಂಭಾಗವನ್ನು ಸಂಪೂರ್ಣವಾಗಿ ಮುಚ್ಚಿಕೊಳ್ಳುವಂತೆ, ಮೊಣಕೈವರೆಗೆ ಅಗಲವಾಗಿ ಹರಡಿಕೊಂಡಂತಿದೆ. ಯತಿಯು ಕೈಕಟ್ಟಿ ನಿಂತಿದ್ದಾನೆ. ಪಕ್ಕದಲ್ಲಿ ನಂದಿ, ಗೆಜ್ಜೆಹಾರಗಳೊಂದಿಗೆ ಕೂಡಿದ್ದು, ಆಕಳು ತನ್ನ ಕೊರಳಿನಲ್ಲಿ ಒಂದು ಹಾರಹೊಂದಿದ್ದು, ಕರುವಿಗೆ ಹಾಲು ಕುಡಿಸುತ್ತಿದೆ.[೧೨] ಕಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಒಂದು ಶಾಸನಶಿಲ್ಪದಲ್ಲಿ ಯತಿಯ ತಲೆಯ ಮೇಲೆ ದುಂಡಾಕಾರದ ಪೇಟೆ ಇದ್ದು, ಶಿವಲಿಂಗಕ್ಕೆ ಪೂಜೆ ಮಾಡುತ್ತಿರುವುದು ಕಂಡುಬರುತ್ತದೆ. ಇವನ ಗಡ್ಡವನ್ನು ಬಿಟ್ಟಿದ್ದು, ಕೌಪೀನ ಧಾರಿಯಾಗಿರುವನು. ಬೆನ್ನ ಮೇಲೆ ಮುಡಿಯ ಗಂಟನ್ನು (ಬಹುಶಃ ಹರಕೆಯ ಗಂಟು) ಹೊತ್ತಿರುವನು. ತೋಳು ಮತ್ತು ಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಕಿವಿಯಲ್ಲಿ ಆಭರಣ ಜೋತಾಡುತ್ತಿದೆ. ಪಕ್ಕದಲ್ಲಿ ಸೂರ್ಯ, ಚಂದ್ರ ಮತ್ತು ನಂದಿ, ಆಕಳು(ಕರು) ಶಿಲ್ಪವಿದೆ.[೧೩]

ಗಣೇಶ-ಆಕಳು-ಮಹಿಷಾರು ಮರ್ಧಿನಿ : ವಸ್ತುಸಂಗ್ರಹಾಲಯದ ಎಡಭಾಗದ ಒಂದು ಶಾಸನ ಶಿಲ್ಪದ, ಮಂಟಪದಲ್ಲಿ ಸುಂದರವಾದ ಆಕಳು ತನ್ನ ಕರುವಿಗೆ ಹಾಲನ್ನು ಕುಡಿಸುತ್ತಿದೆ. ಆಕಳ ಮುಂದಿನ ಮಂಟಪದಲ್ಲಿ ಮಹಿಷಾಸುರಮರ್ಧಿನಿ ಶಿಲ್ಪವಿದ್ದು, ಆಕಳ ಹಿಂಭಾಗದ ಮಂಟಪದಲ್ಲಿ ಗಣೇಶನ ಶಿಲ್ಪವಿದೆ. ಈ ಎಲ್ಲಾ ಮಂಟಪಗಳು ಸುಂದರ ಕೆತ್ತನೆಯಿಂದ ಕೂಡಿವೆ.[೧೪]

ವಿಷ್ಣು-ಆಕಳು-ಕತ್ತಿ : ಅಲ್ಲಿಯೇ ವಸ್ತುಸಂಗ್ರಹಾಲಯದ ಎಡಭಾಗದಲ್ಲಿರುವ ಒಂದು ಶಾಸನಶಿಲ್ಪದ ಮಂಟಪದಲ್ಲಿ ವಿಷ್ಣುವು ಕೈಯಲ್ಲಿ ದಂಡ ಮತ್ತು ಶಂಖ-ಚಕ್ರವನ್ನು ಹಿಡಿದು ಕುಳಿತಿರುವನು. ವಿಷ್ಣುವಿನ ಬಲಭಾಗದಲ್ಲಿ ಆಕಳು ಹಾಲು ಕರುವಿಗೆ ಕುಡಿಸುತ್ತಿರುವುದು, ಎಡಭಾಗದಲ್ಲಿ ಶಾಪಶಯದ ಸಂಕೇತವಾಗಿ ಕತ್ತಿಯ ಶಿಲ್ಪವಿದೆ. ಇವುಗಳ ಮೇಲೆ ಸೂರ್ಯಚಂದ್ರರನ್ನು ಕಾಣಬಹುದು.[೧೫] ಅಲ್ಲಿಯೇ ಬಲಭಾಗದಲ್ಲಿ ಕಿರೀಟಧಾರಿಯಾದ ಶಿವಲಿಂಗ, ಎದುರು ನೋಡುತ್ತಾ ಕೈಮುಗಿಯುತ್ತಿರುವ ಯತಿ, ಅಕ್ಕಪಕ್ಕದಲ್ಲಿ ನಂದಿ, ಆಕಳು ಶಿಲ್ಪಗಳಿದ್ದು, ಮೇಲೆ ಸೂರ್ಯಚಂದ್ರರ ಪಕ್ಕದಲ್ಲಿ ಒಂದು ಕತ್ತಿಯ ಶಿಲ್ಪವಿದೆ.[೧೬] ಇವೆರಡರ ಪಾಠವನ್ನು ಗಮನಿಸಿದಾಗ ಇವು ರಾಷ್ಟ್ರಕೂಟರ ಶಾಸನ ಶಿಲ್ಪಗಳಾಗಿವೆ. ಹೀಗೆ ಬಾಗಳಿಯ ದಾನ ಶಾಸನಗಳಲ್ಲಿ ಶಿವಲಿಂಗ, ಮಂಟಪ, ಯತಿಗಳು ಮುಂತಾದ ಶಿಲ್ಪಗಳಲ್ಲಿ ಹಲವಾರು ವಿಷಯಗಳನ್ನು ಗುರುತಿಸಬಹುದು. ಇದರಿಂದ ಶೈವ ಶಾಸನಶಿಲ್ಪಗಳಿಗೆ ಅಧಿಕವಾದ ಕಾಲದ ಹರವು ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯರ ಮತ್ತು ಹೊಯ್ಸಳರ ಅವಧಿಯ ಶೈವದಾನಶಾಸನ ಶಿಲ್ಪಗಳು ಬಹಳ ಸುಂದರವಾಗಿ ಮೂಡಿಬಂದಿವೆ.

ಧರ್ಮಸಮನ್ವಯ ಶಾಸನಶಿಲ್ಪ

ಧರ್ಮ ಸಮನ್ವಯತೆ ಎಂಬುದು ಪ್ರಾಚೀನ ಕಾಲದಿಂದಲೂ ಕಂಡುಬರುತ್ತದೆ. ಈಗಲೂ ಸಹ ಅನ್ಯಧರ್ಮಗಳನ್ನು ಗೌರವಿಸುವುದು, ಪೋಷಿಸುವುದು ಕಂಡುಬರುತ್ತದೆ. ಶೈವ, ವೈಷ್ಣವ ಧರ್ಮಗಳು ಅನ್ಯೋನ್ಯವಾಗಿ ಬೆಳೆಯಬೇಕು, ಬಾಳಬೇಕು ಎಂಬ ದೃಷ್ಟಿಯಿಂದ ಎರಡೂ ಧರ್ಮದ ಅಂಶಗಳನ್ನು ಒಂದೇ ಶಾಸನದಲ್ಲಿ ಚಿತ್ರಿಸಿದ ಶಿಲ್ಪಗಳು ನಮಗೆ ದೊರೆಯುತ್ತವೆ. ಆದರೆ ಇಲ್ಲಿ ವೈಷ್ಣವ ಮತ್ತು ಜೈನ ಶಾಸನಶಿಲ್ಪಗಳು ಕಂಡುಬರುವುದಿಲ್ಲ. ಸಮನ್ವಯತೆಯ ಶಿಲ್ಪ ಒಂದು ಮಾತ್ರ ಕಂಡುಬರುತ್ತದೆ. ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ನಿಲ್ಲಿಸಿರುವ ಒಂದು ಶಾಸನಶಿಲ್ಪದಲ್ಲಿ, ಸುಂದರವಾದ ಕಂಬಗಳಿಂದ ಕೂಡಿದ, ಸೂಕ್ಷ್ಮ ಕೆತ್ತನೆಯ ಮಂಟಪದಲ್ಲಿ, ಮಂಟಪದ ಮಧ್ಯದಲ್ಲಿ ಕಿರೀಟದಾರಿಯಾದ ಶಿವಲಿಂಗ, ಇದರ ಪಕ್ಕದಲ್ಲಿ ಇಬ್ಬರು ಯತಿಗಳು ನಿಂತಿದ್ದು, ಮಂಟಪದ ಕಂಬದ ಪಕ್ಕದಲ್ಲಿ ಎರಡು ದೇವರ ಶಿಲ್ಪಗಳಿದ್ದು ಇವುಗಳ ಪಕ್ಕದಲ್ಲಿ ನಂದಿ ಮತ್ತು ಹಾಲುಕುಡಿಸುತ್ತಿರುವ ಹಸುವಿನ ಶಿಲ್ಪವಿದ್ದು, ಇವೆಲ್ಲವುಗಳ ಮೇಲೆ, ಅಂದರೆ ಮಂಟಪದ ಅಕ್ಕಪಕ್ಕದಲ್ಲಿ ವಿಷ್ಣು, ನಾರಾಯಣ, ಗಣಪತಿ, ಕಾರ್ತಿಕೇಯರ ಶಿಲ್ಪವಿರುವುದು ಕಂಡುಬರುತ್ತದೆ.

೨. ವೀರಶಾಸನ ಶಿಲ್ಪ

ಕರ್ನಾಟಕದಲ್ಲಿ ದಾನಶಾಸನಗಳಷ್ಟೆ ಮಹತ್ವ ಪಡೆದ ವೀರಗಲ್ಲುಗಳು ಅನೇಕ ರೀತಿಯಿಂದ ವೈಶಿಷ್ಟಪೂರ್ಣವಾಗಿವೆ. ಇವುಗಳ ಶಿಲ್ಪವನ್ನು ಶಾಸನ ಸಹಿತಶಿಲ್ಪ ಮತ್ತು ಶಾಸನರಹಿತ ಶಿಲ್ಪಗಳೆಂದು ವಿಂಗಡಿಸಬಹುದು. ಶಾಸನವಿರಲಿ ಇಲ್ಲದಿರಲಿ, ಇವುಗಳ ಉದ್ದೇಶ ಒಂದೇ ಆಗಿರುತ್ತದೆ. ಈ ವೀರಗಲ್ಲುಗಳ ವಿಷಯ ಮತ್ತು ಅವುಗಳ ಮೇಲಿರುವ ಶಿಲ್ಪದ ಆಧಾರದಿಂದ ಹಲವು ವಿಧವಾಗಿ ವಿಂಗಡಿಸಿ ಅಧ್ಯಯನ ಮಾಡಬಹುದು. ವ್ಯಕ್ತಿ-ವ್ಯಕ್ತಿಗಳ ಹೋರಾಟಶಿಲ್ಪ. ವ್ಯಕ್ತಿ ಪ್ರಾಣಿಗಳ ಹೋರಾಟ ಶಿಲ್ಪ, ಪ್ರಾಣಿ ಪ್ರಾಣಿಗಳ ಹೋರಾಟಶಿಲ್ಪ ಮತ್ತು ವೀರಸ್ತಂಭಗಳಶಿಲ್ಪ ಎಂದು ನಾಲ್ಕು ಮುಖ್ಯ ಭಾಗಗಳಲ್ಲಿ ನೋಡಬಹುದು.

ವ್ಯಕ್ತಿ-ವ್ಯಕ್ತಿಗಳ ಹೋರಾಟಶಿಲ್ಪ

ಬಾಗಳಿಯ ವಸ್ತುಸಂಗ್ರಹಾಲಯದಲ್ಲಿರುವ ಅನೇಕ ಶಿಲ್ಪಗಳು ವ್ಯಕ್ತಿ-ವ್ಯಕ್ತಿಯೊಡನೆ ಹೋರಾಡುತ್ತಿರುವ ಶಿಲ್ಪಗಳೇ ಆಗಿವೆ. ವ್ಯಕ್ತಿ-ವ್ಯಕ್ತಿ ಹೋರಾಡುತ್ತಿರುವ ಶಿಲ್ಪವೆಂದರೆ ತನ್ನ ಪ್ರಾಣ ರಕ್ಷಣೆಗಾಗಿಯೆ, ಶತೃಗಳ ಜೊತೆ ಹೋರಾಡುತ್ತಿರುವುದನ್ನು ಸೂಚಿಸುವ ಶಿಲ್ಪಗಳಾಗಿರುತ್ತವೆ.

ಬಾಗಳಿಯ ವಸ್ತುಸಂಗ್ರಾಲಯದಲ್ಲಿರುವ ವೀರಶಾಸನಶಿಲ್ಪಗಳನ್ನು ಬಾಗಿಲಿನ ಬಲಭಾಗದಿಂದ ಗಮನಿಸುತ್ತಾ ಹೋದರೆ ಕ್ರಿ.ಶ.೯೮೭ರ ಶಾಸನದಲ್ಲಿ ಕಲ್ಲಿನ ಅರ್ಧಭಾಗ ವೀರರು ಶತೃಗಳೊಂದಿಗೆ ಬಿಲ್ಲುಬಾಣಗಳನ್ನು

ಹಿಡಿದು ಹೋರಾಡುವ ಚಿತ್ರಕಂಡುಬರುತ್ತದೆ.[೧೭] ಉಳಿದ ಅರ್ಧಭಾಗ ಶಾಸನ ಪಾಠವಿದೆ. ಇದರ ಮೇಲ್ಭಾಗದಲ್ಲಿ ಕುದುರೆ, (ನಂದಿ)ಹಸು, ಸೂರ್ಯಚಂದ್ರರ ಶಿಲ್ಪಗಳಿವೆ. ಅಲ್ಲಿಯೇ ಇದರ ಮುಂದಿನ ಶಿಲ್ಪದಲ್ಲಿ ವೀರ ಕತ್ತಿ, ಗುರಾಣಿ ಹಿಡಿದು ತನ್ನ ಎದುರಾಳಿಗಳೊಡನೆ ಹೋರಾಡುತ್ತಿರುವ ಚಿತ್ರವಿರುವುದು ಕಂಡುಬರುತ್ತದೆ. ಅಲ್ಲಿಯೇ ಪಕ್ಕ ಮತ್ತು ವೀರಶಾಸನ ಶಿಲ್ಪದ ಕಲ್ಲಿನಲ್ಲಿ ಶಿವಲಿಂಗ ವೀರ ತನ್ನ ಶತ್ರುಗಳೊಡನೆ ಹೋರಾಡುವುದು ಕಂಡುಬರುತ್ತದೆ. ಇದರ ಎದುರು ಭಾಗದ ಶಾಸನಶಿಲ್ಪದಲ್ಲಿ ಇಬ್ಬರು ವೀರರು ತಮ್ಮ ಕುದುರೆಗಳ ಮೇಲಿಂದ, ಎದುರಾಳಿಯೊಡನೆ ಬಿಲ್ಲು ಬಾಣಗಳನ್ನು ಹಿಡಿದು ಹೋರಾಡುತ್ತಿರುವ ದೃಶ್ಯ ಕಂಡುಬರುತ್ತದೆ. ಇದರ ಪಕ್ಕದ ಶಿಲ್ಪದಲ್ಲಿ ರಾಜ ಒಬ್ಬನೆ ಎದುರಾಳಿಯನ್ನು ಎದುರಿಸುತ್ತಿರುವ ಚಿತ್ರ ಕಂಡುಬರುತ್ತದೆ. ಇದೇ ಶಿಲ್ಪದ ಪಕ್ಕದ ಕಲ್ಲಿನಲ್ಲಿ ವೀರ ಬಿಲ್ಲು, ಬಾಣ, ಕತ್ತಿಗುರಾಣಿ ಹಿಡಿದು ಹೋರಾಡುತ್ತಿರುವ ದೃಶ್ಯವಿದೆ.[೧೮] ಅಲ್ಲಿಯೇ ಮತ್ತೊಂದು ಶಾಸನಶಿಲ್ಪದಲ್ಲಿ ಮೂವರು ವೀರರು ತಮ್ಮ ಎದುರಾಳಿ ಕುದುರೆಗಳೊಂದಿಗೆ ಹೋರಾಡುವ ಶಿಲ್ಪವಾಗಿದೆ.[೧೯] ಇದರ ಪಕ್ಕದ ಶಿಲ್ಪದಲ್ಲಿ ಒಬ್ಬ ವೀರ ಸಾದಾ ಮನುಷ್ಯನಾಗಿ ನಿಂತಿದ್ದಾನೆ. ಕೈಯಲ್ಲಿ ಯಾವುದೇ ಆಯುಧಗಳಿಲ್ಲ.[೨೦] ವಸ್ತುಸಂಗ್ರಹಾಲಯದ ಎದುರಿನ ಭಾಗದ ವೀರಗಲ್ಲಿನಲ್ಲಿ ೮ ಮಂದಿ ಸೈನಿಕರು, ವೀರರು, ಗುರಾಣಿ ಹಿಡಿದು ಯುದ್ಧ ಮಾಡುತ್ತಿರುವ ದೃಶ್ಯ ಕಂಡುಬರುತ್ತದೆ.[೨೧] ಇದರ ಹೊರಭಾಗದಲ್ಲಿ ಒಬ್ಬ ವೀರ ಬಿಲ್ಲುಬಾಣ ಹಿಡಿದು ನಿಂತಿದ್ದಾನೆ.[೨೨]

ವಸ್ತುಸಂಗ್ರಹಾಲಯದ ಪಕ್ಕದ ಹೊಲದಲ್ಲಿ ಒಂದು ಹುಣಿಸೆ ಮರದ ಕೆಳಗೆ ಮೂವರು ವೀರರು ಕೈಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು, ಎದುರಾಳಿಯೊಡನೆ ಉಗ್ರವಾಗಿ ಹೋರಾಡುತ್ತಿರುವ ದೃಶ್ಯವಿದೆ.(ಇದು ಹಾಳಾಗಿದೆ) ಇದರ ಮುಂದಿನ ಒಂದು ಶಿಲ್ಪದಲ್ಲಿ ಒಬ್ಬ ವೀರ ಕುದುರೆಯ ಮೇಲೆ ಕುಳಿತು, ಒಂದು ಕೈಯಲ್ಲಿ ಕುದುರೆಯ ಲಗಾಮನ್ನು ಹಿಡಿದು ಒಂದು ಕೈಯಲ್ಲಿ ಕತ್ತಿ ಹಿಡಿದು ಕುಳಿತಿದ್ದಾನೆ. ಇವನ ಹಿಂದೆ ಒಬ್ಬ ವೀರ ಕುದುರೆಯ ಮೇಲೆ ಕುಳಿತಿರುವ ಚಿತ್ರವಿದೆ. ಕುದುರೆಯ ಕಾಲ ಕೆಳಗೆ ಇಬ್ಬರು ವೀರರು ಬಿಲ್ಲುಬಾಣಗಳನ್ನು ಹಿಡಿದು ಹೋರಾಡುತ್ತಿದ್ದಾರೆ. ಹೀಗೆ ವಸ್ತು ಸಂಗ್ರಹಾಲಯದಲ್ಲಿ ಹಲವಾರು ವೀರಗಲ್ಲುಗಳಲ್ಲಿ ವೀರರು ಹೋರಾಡುವ ಶಿಲ್ಪಗಳನ್ನು ನೋಡಬಹುದಾಗಿದೆ.

ತುಱುಗೋಳ್ ಶಿಲ್ಪಗಳು

ತುರುಗೋಳ್ ಶಿಲ್ಪಗಳು ಎಂದರೆ ದನ-ಕರುಗಳ ರಕ್ಷಣೆಗಾಗಿ ಶತ್ರುಗಳೊಡನೆ ಹೋರಾಡುತ್ತಿರುವ ಶಿಲ್ಪಗಳಾಗಿರುತ್ತವೆ. ರನ್ನ ಕವಿಯು ತನ್ನ ಗದಾಯುದ್ಧದಲ್ಲಿ ಒಂದು ಗದ್ಯ ಹೀಗೆ ಬರುತ್ತದೆ.

ತುಱುಗೋಳೊಳ್ ಪೆಣ್ಣುಯ್ಯಲೊ
ಳೆಱುವಸದೊಳ್ ನಂಟನೆಡಜೊಳೂಜಳಿವಿನೊಳಂ

ತರೆಸಂದು ಗಂಡುತನಮನೆ
ನಱಿಪದವಂ ಗಂಡನಲ್ಲನೆಂತುಂ ಷಂಡಂ

ಎಂದು ಹೇಳಿದ್ದಾನೆ.[೨೩] ಈ ಮೇಲಿನ ಪದ್ಯದ ಆಧಾರದಿಂದ ಆ ಕಾಲದಲ್ಲಿ ತುರುಗಳನ್ನು ರಕ್ಷಿಸುವುದು, ಸ್ತ್ರೀಯರ ಮಾನ ಕಾಪಾಡುವುದು, ಊರುಗಳನ್ನು ರಕ್ಷಿಸುವುದು, ಗಂಡಸರ ಪರಮ ಕರ್ತವ್ಯವೆಂದು ತಿಳಿದುಬರುತ್ತದೆ. ಇಂತಹ ವಿವರವನ್ನು ಹೇಳುವ ತುರುಗೋಳ ಶಿಲ್ಪಗಳು ಇಲ್ಲಿ ಕೆಲವೊಂದು ಕಂಡುಬಂದಿವೆ(ಇಲ್ಲಿ ಷಕಟರೇಷದ ಬದಲು 'ರ' ಬಳಸಲಾಗಿದೆ).

ವಸ್ತುಸಂಗ್ರಾಲಯದ ಬಾಗಿಲಿನ ಎದುರಿಗೆ ಕಂಡುಬರುವ ಈ ಶಾಸನ ಶಿಲ್ಪ ೫ ಅಡಿ ಎತ್ತರವಾಗಿದ್ದು, ಬಹಳ ಸುಂದರವಾಗಿದೆ.[೨೪] ನಾಲ್ಕು ಹಂತ ಹೊಂದಿದ ಶಾಸನಶಿಲ್ಪದಲ್ಲಿ ಮೊದಲಹಂತದಲ್ಲಿ ಇಬ್ಬರು ವೀರರು ಶತ್ರುಗಳೊಂದಿಗೆ ಹೋರಾಡುತ್ತಿರುವಂತೆ, ಅವರ ಕಾಲ ಬಳಿ ಶಿರ ಕತ್ತರಿಸಿದ ಮೂರು ಹೆಣಗಳು. ಎರಡನೆ ಹಂತದಲ್ಲಿ ಲಕ್ಷಣವಾಗಿರುವ ಐದು ದನಗಳು, ಮೂರನೆ ಹಂತದಲ್ಲಿ ಎರಡು ಮಂಟಪದಲ್ಲಿ ಸ್ವರ್ಗಕ್ಕೆ ಹೊರಟ ವೀರರು, ನಾಲ್ಕನೆ ಹಂತದಲ್ಲಿ ಸ್ವರ್ಗಪ್ರಾಪ್ತಿಯನ್ನು ತಿಳಿಸುತ್ತವೆ. ಎರಡನೆ ಹಂತ ಮತ್ತು ಮೂರನೆ ಹಂತದ ಮಧ್ಯೆ ಏಳು ಹೂವುಗಳನ್ನು ತುಂಬಾ ಸುಂದರವಾಗಿ ಚಿತ್ರಿಸಲಾಗಿದೆ. ಆಯುಧಗಳು ಮತ್ತು ಅವರ ಹೋರಾಟದ ಭಂಗಿ ಬಹಳ ಸುಂದರವಾಗಿ ಮೂಡಿಬಂದಿದೆ. ಅಲ್ಲಿಯೇ ಮುಂದಿನ ಶಿಲ್ಪದಲ್ಲಿ[೨೫] ಮೊದಲ ಭಾಗದಲ್ಲಿ ವೀರರನ್ನ ಕೊಂಡ್ಯೊಯುವ ದೃಶ್ಯ, ಮಧ್ಯದಲ್ಲಿ ವೀರ ಮತ್ತು ಅಪ್ಸರೆಯರು, ಕೆಳಭಾಗದಲ್ಲಿ ನಾಲ್ಕು ತುರುಗಳನ್ನು ಅಪಹರಿಸಲು ಬಂದ ಶತ್ರುಗಳೊಡನೆ, ಅವುಗಳನ್ನು ಬಿಡಿಸಿಕೊಳ್ಳಲು ಬಿಲ್ಲುಬಾಣಗಳಿಂದ ಹೋರಾಡುತ್ತಿರುವ ದೃಶ್ಯ ಕಂಡುಬರುತ್ತದೆ. ಅಲ್ಲಿಯೇ ಪಕ್ಕದ ಶಿಲ್ಪದಲ್ಲಿ[೨೬] ವೀರ ಕುದುರೆಯ ಮೇಲೆ ಕುಳಿತು ತುರುಗಳನ್ನು ಅಪಹರಿಸಲು ಬಂದ ಸಾಮಾನ್ಯರೊಡನೆ ಕತ್ತಿಯಿಂದ ಹೋರಾಡುತ್ತಿರುವ ಚಿತ್ರವನ್ನು ನೋಡಬಹುದು.

ವ್ಯಕ್ತಿ-ಪ್ರಾಣಿ-ಹೋರಾಟ

ಮಾನವನು ಪ್ರಾಣಿಗಳನ್ನು ಬೇಟೆಯಾಡುವುದು ಬಹಳ ಪ್ರಾಚೀನ ಕಾಲದಿಂದಲೂ ಬಂದ ಪದ್ಧತಿ. ಈ ಬೇಟೆಗಳಲ್ಲಿ ಆಹಾರಕ್ಕಾಗಿ ಕೆಲವರು ಬೇಟೆಯಾಡಿದರೆ, ಮತ್ತೆ ಕೆಲವರು ಮೋಜಿಗಾಗಿ, ಕಾಲಹರಣೆಗಾಗಿ ಅಥವಾ ತಮ್ಮ ಶೌರ್ಯ ಪ್ರದರ್ಶನಕ್ಕಾಗಿ ಬೇಟೆಯಾಡುತ್ತಿದ್ದರು. ಹಲವು ಕನ್ನಡ ಕಾವ್ಯಗಳಲ್ಲಿ ರಾಜ-ಮಹಾರಾಜರು ಮತ್ತು ಇತರರು ಬೇಟೆಯಾಡುತ್ತಿದ್ದ ವಿಧಾನಗಳು, ಅವರ ವೈಭೋಗಗಳ ವರ್ಣನೆ ಕಂಡುಬರುತ್ತದೆ.

ಶಾಸನ ಶಿಲ್ಪಗಳಲ್ಲಿ ಕೂಡ ನಾವು ಹಲವಾರು ಪ್ರಾಣಿ ಬೇಟೆಯ ಚಿತ್ರಗಳನ್ನು ನೋಡಬಹುದು. ಬೇಟೆಯಾಡಲು ಮತ್ತೊಂದು ಕಾರಣವೂ ಇರುತ್ತದೆ. ಕೆಲವು ಪ್ರಾಣಿಗಳು ಊರಿಗೆ ನುಗ್ಗಿ, ಜನಗಳಿಗೆ ದನಗಳಿಗೆ

ತೊಂದರೆ ಕೊಡುವುದಲ್ಲದೆ, ಕಷ್ಟದಿಂದ ಬೆಳೆದ ಬೆಳೆಗಳನ್ನು ನಾಶಪಡಿಸುತ್ತವೆ. ಇಂತಹ ಪ್ರಾಣಿಗಳ ಕಾಟವನ್ನು ತಡೆಯಲಾರದೆ ಅವನ್ನು ಬೇಟೆಮಾಡಿ ಕೊಂದು ಹಾಕಿದ ಅಥವಾ ಕೊಲ್ಲಲು ಹೋಗಿ ತಾವೇ ಮರಣವನ್ನಪ್ಪಿದ ಘಟನೆಗಳನ್ನು ತಿಳಿಸುವ ಶಾಸನ ಶಿಲ್ಪಗಳು ನಮ್ಮಲ್ಲಿ ದೊರೆಯುತ್ತವೆ. ಈ ರೀತಿ ಮರಣ ಹೊಂದಿದವರು ವೀರರೇ ಎಂದು ಜನ ನಂಬಿದ್ದರು. ಹೀಗಾಗಿ ಇವರಿಗೂ ವೀರಗಲ್ಲುಗಳನ್ನು ನೆಡುವ ರೂಢಿ ಬೆಳೆದುಬಂದಿತು. ಈ ಭಾಗದಲ್ಲಿ ವೀರನು ನೇರವಾಗಿ ಪ್ರಾಣಿಗಳೊಂದಿಗೆ ಹೋರಾಡುವ ಶಾಸನಶಿಲ್ಪಗಳನ್ನು ಮಾತ್ರ ಅಂಗೀಕರಿಸಲಾಗಿದೆ. ಈ ರೀತಿಯ ಶಾಸನಶಿಲ್ಪಗಳು ಬೇಟೆಯಾಡುತ್ತಿರುವ ವ್ಯಕ್ತಿ ಮತ್ತು ಪ್ರಾಣಿ ಶಿಲ್ಪಗಳನ್ನು ಒಳಗೊಂಡಿರುತ್ತವೆ. ಈ ರೀತಿಯ ಶಾಸನಗಳು ಹೆಚ್ಚಾಗಿ ಬರಹ ರಹಿತವಾಗಿರುತ್ತವೆ. ಬರಹವಿದ್ದರೂ ಸಂಕ್ಷಿಪ್ತವಾಗಿದ್ದು, ಶಿಲ್ಪದ ಭಾಗವೇ ಪ್ರಮುಖವಾಗಿ ನಮ್ಮ ಗಮನ ಸೆಳೆಯುತ್ತದೆ.

ವಸ್ತು ಸಂಗ್ರಹಾಲಯದಲ್ಲಿರುವ ವೀರಗಲ್ಲೊಂದು ಅಪರೂಪದ ಬೇಟೆಯ ವಿವರವನ್ನು ನೀಡುತ್ತದೆ. ಈ ವೀರಗಲ್ಲು ಮೂರು ಹಂತವನ್ನು ಹೊಂದಿದ್ದು ಕೆಳಗಿನ ಹಂತ ಬಹುಪ್ರಮುಖವಾಗಿದೆ. ಇಲ್ಲಿ ವೀರನು ಬಲಿಷ್ಠವಾದ ಹುಲಿಯನ್ನು ಎದುರಿಸುತ್ತಿದ್ದಾನೆ. ಇವನ ಹಿಂದೆ ಆರು ಜನ ಸೈನಿಕರಿದ್ದು ಎಲ್ಲರ ಕೈಯಲ್ಲಿಯೂ ಗುರಾಣಿ ಹಾಗು ಕತ್ತಿಗಳಿವೆ. ವೀರನೂ ಸಹ ಕತ್ತಿಯಿಂದಲೇ ಹುಲಿಯನ್ನು ಎದುರಿಸುತ್ತಿದ್ದಾನೆ. ಹುಲಿಯು ಒಬ್ಬನನ್ನು ಕೊಂದು ಹಾಕಿದೆ. ಹೆಣವೊಂದು ಹುಲಿಯ ಕಾಲುಗಳ ಮಧ್ಯೆ ಬಿದ್ದಿದೆ. ಹುಲಿಯ ಹಿಂಭಾಗ ಮರದ ಮೇಲೆ ಬಿಲ್ಲು ಹಿಡಿದವನೊಬ್ಬನು ಕುಳಿತಿರುವನು. ನೇರವಾಗಿ ಎದುರಿಸುವ ಮುನ್ನ ಈ ರೀತಿಯ ವಿಧಾನಗಳಿಂದ ಹುಲಿಯನ್ನು ಸಾಯಿಸಲು ನೇರವಾಗಿ ಎದುರಿಸುತ್ತಿದ್ದರು. ಅವನ ಹಿಂಬದಿಯಲ್ಲಿ ಮತ್ತೊಬ್ಬನು ಮರದ ಮೇಲಿಂದ ಬಾಣವನ್ನು ಹುಲಿಯತ್ತ ಗುರಿಯಿಟ್ಟು ಹೊಡೆಯುತ್ತಿರುವ ಶಿಲ್ಪ ಕಂಡುಬರುತ್ತದೆ. ಇದೊಂದು ಮಾತ್ರ ಪ್ರಾಣಿ ಬೇಟೆಯ ಶಿಲ್ಪವಾಗಿದೆ.

ಮಹಾಸತಿ ಶಾಸನಶಿಲ್ಪ

ಪತಿಯು ಕಾರಣಾಂತರಗಳಿಂದ ಮಡಿದಾಗ ಸತಿಯೂ ಕೂಡ ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುತ್ತಿದ್ದಳು. ಇವಳು ಪತಿಭಕ್ತಿಯನ್ನು ತೋರಿಸುವ ಸ್ತ್ರೀಯಾಗಿರುತ್ತಿದ್ದಳು. ಈ ಶಿಲ್ಪಗಳಲ್ಲಿ ಸತಿಯು ತನ್ನ ಪತಿ ಸಾವಿನ ನಂತರ ಬದುಕಿರಬಾರದು ಎಂಬ ಸಾಮಾಜಿಕ ಕಟ್ಟಳೆಗಳು, ಸಂಪ್ರದಾಯಗಳು, ಶೋಷಣೆಯ ಅಂಶಗಳು ಬಲವಾದ ಪ್ರೇರಣೆಯನ್ನು ನೀಡುತ್ತಿದ್ದವು, ಗಂಡನ ಹಿಂದೆಯೇ ಸತಿ ಹೋಗದವಳಿಗೆ ಸಮಾಜದಲ್ಲಿ ಅಷ್ಟಾಗಿ ಗೌರವವಿರಲಿಲ್ಲ. ಅಲ್ಲದೆ ಪ್ರಾಚೀನ ಕಾಲದಲ್ಲಿ ಪತಿ ಇಲ್ಲದೆ ಸತಿಗೆ ಬದುಕು ಹಾಗೂ ರಕ್ಷಣೆಗೆ ಅನ್ಯಮಾರ್ಗವಿಲ್ಲದೆ ಈ ರೀತಿ ಆಚರಣೆಯನ್ನು ಅನಿವಾರ್ಯವಾಗಿ ಯಾದರೂ ಆಚರಿಸಬೇಕಾಗಿತ್ತು. ಕರ್ನಾಟಕದ ಮಹಿಳೆಯರು ಈ ಪದ್ಧತಿಯನ್ನು ನಿರಾಕರಿಸಿದ್ದ ಬಗ್ಗೆ

ಶಾಸನಗಳಲ್ಲಿ ಎಲ್ಲೂ ಉಲ್ಲೇಖ ದೊರೆಯುವುದಿಲ್ಲ. ಇದರಿಂದಾಗಿ ಕರ್ನಾಟಕದಲ್ಲಿ ಸತಿಪದ್ಧತಿಯನ್ನು ಆನಂದದಿಂದ ಸ್ವೀಕರಿಸಿದ್ದರು, ಅನುಮೋದಿಸಿದ್ದರೆಂದು ತಿಳಿಯಬೇಕಾಗಿಲ್ಲ. ಶಾಸನಗಳನ್ನು ಸತಿಪದ್ಧತಿ ಆಚರಣೆ ಮುಗಿದ ನಂತರ ಹಾಕಿಸುತ್ತಿದ್ದರಿಂದ ಬೇಕೆಂದೆ ಅವರಲ್ಲಿ ನಿರಾಕರಣೆಯ ಅಂಶಗಳನ್ನು ಪ್ರಕಟಪಡಿಸುತ್ತಿರಲಿಲ್ಲ. ಅಥವಾ ನಿರಾಕರಿಸಿದ ಉಲ್ಲೇಖಗಳು ನಮಗೆ ಇನ್ನೂ ದೊರೆಯದೇ ಇರಬಹುದು.

ಮಹಾಸತಿಯ ಶಿಲ್ಪಗಳಲ್ಲಿ ಎರಡು ಪ್ರಕಾರಗಳನ್ನು ಗುರುತಿಸಬಹುದು. ಸಹಗಮನ ಮತ್ತು ಅನುಗಮನ ಶಿಲ್ಪಗಳೆಂದು. ಸಹಗಮನದಲ್ಲಿ ಪತಿಯು ಮಡಿದಾಗ ಅವನ ಶವದ ಜೊತೆಯಲ್ಲಿಯೇ ಚಿತೆಗೆ ಬಿದ್ದು ಅಥವಾ ಸಮಾಧಿಯಲ್ಲಿ ಹುಗಿಸಿಕೊಂಡು ಪ್ರಾಣಬಿಡುತ್ತಿದ್ದ ಆಚರಣೆ ಸಹಗಮನವೆನಿಸುತ್ತದೆ. ಈ ರೀತಿಯ ಘಟನೆಗಳನ್ನು ತಿಳಿಸುವ ಶಾಸನಶಿಲ್ಪಗಳು ನಮಗೆ ಹೆಚ್ಚು ದೊರೆಯುವುದಿಲ್ಲ. ಶಾಸನಶಿಲ್ಪಗಳಲ್ಲಿ ಸಹಗಮನವನ್ನು ಸೂಚಿಸುವ ಶಿಲ್ಪವಾಗಲೀ ಅಥವಾ ಪಾಠವಾಗಲಿ, ಇಲ್ಲದಿದ್ದ ಪಕ್ಷದಲ್ಲಿ ಇಂತಹ ಶಾಸನಶಿಲ್ಪವನ್ನು ಅನುಗಮನ ಶಿಲ್ಪವೆಂದು ಕರೆಯಬಹುದು. ಇಂತಹ ವಿವರವನ್ನು ಹೊಂದಿದ ಶಾಸನಶಿಲ್ಪ ಇಲ್ಲಿ ಕಂಡುಬರುತ್ತದೆ.

ವಸ್ತು ಸಂಗ್ರಾಲಯದ ಎಡಭಾಗದಿಂದ ಗಮನಿಸುತ್ತಾ ಹೊರಟರೆ ಒಂದು ಮಹಾಸತಿ ಶಾಸನಶಿಲ್ಪ ಕಂಡುಬರುತ್ತದೆ. ಅದರಲ್ಲಿ ಒಬ್ಬ ವೀರನ ಹಿಂದೆ ಸತಿಯು ಕೈಯಲ್ಲಿ ಕತ್ತಿಯನ್ನು ಹಿಡಿದು ನಿಂತಿದ್ದಾಳೆ.[೨೭] ಅಂದರೆ ತನ್ನ ಗಂಡನಿಗೆ ಯುದ್ಧದಲ್ಲಿ ಸಹಕರಿಸುತ್ತಿದ್ದಾಳೆ ಎಂದು ಕಂಡುಬರುತ್ತದೆ. ಹಾಗೆಯೇ ಮುಂದುವರಿದು ನೋಡುತ್ತಾ ಹೊರಟರೆ, ಬಲಭಾಗದಲ್ಲಿ ವೀರನ ಎದುರಿಗೆ ಒಬ್ಬ ಸ್ತ್ರೀ ನಿಂತಿದ್ದಾಳೆ. ವೀರ ಕುದುರೆಯ ಮೇಲೆ ಕುಳಿತು, ಕೈಯಲ್ಲಿಕ ಕತ್ತಿ ಹಿಡಿದ ಶಿಲ್ಪವಿದೆ. ಆದರೆ ಬಾಗಳಿಯಲ್ಲಿ ಮಹಾಸತಿ ಶಾಸನ ಶಿಲ್ಪಗಳು ಕಂಡುಬರುವುದು ತೀರ ವಿರಳ. ಇನ್ನು ಇಲ್ಲಿ ಸುಂದರವಾದ ಆಭರಣಗಳೊಂದಿಗೆ ಕೆತ್ತಿದ ಒಂದು ವೀರಶಾಸನಶಿಲ್ಪ ವಸ್ತು ಸಂಗ್ರಾಲಯದಲ್ಲಿದೆ. ಇದರಲ್ಲಿ ಹೋರಾಡುತ್ತಿರುವ ವೀರನ ಕೇಶಾಲಂಕಾರ ಮತ್ತು ಉಡುಗೆಗಳು ಅಲಂಕಾರಗಳಿಂದ ಕೂಡಿದ್ದು, ಅಪ್ಸರೆಯರು ಆಭರಣಗಳನ್ನು ಸುಂದರವಾಗಿ ಅಲಂಕರಿಸಿಕೊಂಡು ವೀರನನ್ನು ಮೇಲಕ್ಕೆ ಕೊಂಡ್ಯೊಯುವ ಚಿತ್ರಣವಿದೆ.[೨೮] ವೀರನನ್ನು ಕೊಂಡೊಯ್ಯುವ ಮಂಟಪವೂ ಕೂಡ ಅಲಂಕಾರ ಕೆತ್ತನೆಯಿಂದ ಕೂಡಿದ್ದು ಪಕ್ಕದಲ್ಲಿ ಎರಡು (ಪದ್ಮ)ದ ಹೂವುಗಳನ್ನು ಹೊಂದಿದೆ. ಒಟ್ಟಿಗೆ ಇದೊಂದು ತುಂಬಾ ಸುಂದರವಾದ ವೀರಶಾಸನ ಶಿಲ್ಪವೆಂದು ಹೇಳಬಹುದಾಗಿದೆ. ಇದನ್ನು ಶಾಸನಶಿಲ್ಪದ ಸಾಂಸ್ಕೃತಿಕ ವಿವರವೆಂದು ಹೇಳಬಹುದು. ಇನ್ನು ಇಲ್ಲಿಯ ಶಾಸನ ಶಿಲ್ಪವೊಂದರಲ್ಲಿ ಹೇರುಗಳನ್ನು ಹೊತ್ತು ಎತ್ತುಗಳ ಹಿಂದೆ ಒಂದು ನಗ್ನ ಸ್ತ್ರೀಯ ಶಿಲ್ಪವಿದೆ. ಇದೊಂದು ಪೆಣ್ಬುಯಲ್ ವೀರಗಲ್ಲಿನ ಶಿಲ್ಪವೆಂದು ಗುರುತಿಸಬಹುದಾಗಿದೆ. ಏಕೆಂದರೆ ಒಂದು ಗ್ರಾಮದ ಮೇಲೆ ನೆರೆರಾಜ್ಯದವರು, ಕಳ್ಳರು ಅಥವಾ ಇತರರು ದಾಳಿ ಮಾಡಿದಾಗ ದನಕರುಗಳನ್ನು ಸ್ತ್ರೀಯರು

ಅಪಹರಿಸುತ್ತಿದ್ದರು. ಇಂತಹವರ ವಿರುದ್ಧ ಹೋರಾಡಿ ಮಡಿದವರ ನೆನಪಿಗಾಗಿ ನಿಲ್ಲಿಸುತ್ತಿದ್ದ ಶಾಸನಗಳು ತುರುಗೋಳ್ ಹಾಗು ಪೆಣ್ಬುಯಲ್ ವೀರಗಲ್ಲುಗಳು. ತುರುಗೋಳ್ ವೀರಗಲ್ಲಿನಲ್ಲಿ ದನಗಳನ್ನು ಒಂದು ಮೂಲೆಯಲ್ಲಿ ಅಥವಾ ಒಂದು ಪಕ್ಕದಲ್ಲಿ ಚಿತ್ರಿಸಲಾಗಿರುತ್ತದೆ. ಇವು ಒಂದರಿಂದ ಹತ್ತು ಸಂಖ್ಯೆಯವರೆಗೂ ಇರುತ್ತವೆ. ದನಗಳನ್ನು ರಕ್ಷಿಸಿ ಹಿಂತಿರುಗಿಸಿದ ಅಥವಾ ಆ ಸಮಯದಲ್ಲಿ ಪ್ರಾಣ ನೀಗಿಕೊಂಡ ಘಟನೆಯನ್ನು ಈ ಶಿಲ್ಪಗಳು ಸಾಂಕೇತಿಕವಾಗಿ ನಿರೂಪಿಸುತ್ತವೆ. ಪೆಣ್ಬುಯಲ್ ವೀರಗಲ್ಲಿನ ಶಿಲ್ಪದಲ್ಲಿ ಸ್ತ್ರೀಯರು ಒಂದು ಮೂಲೆಯಲ್ಲಿ ಬೆತ್ತಲೆಯಾಗಿ ನಿಂತಿರುತ್ತಾರೆ. ಇಂತಹ ವೀರಗಲ್ಲುಗಳಲ್ಲಿ ಸ್ತ್ರೀಯರು ತಮ್ಮ ಮರ್ಮಸ್ಥಳಗಳನ್ನು ಮುಚ್ಚಿಕೊಂಡು ಭಯಭೀತರಾಗಿ ನಿಂತಿರುತ್ತಾರೆ. ಇವರ ಪಕ್ಕದಲ್ಲಿ ದನಗಳೂ ಇರುತ್ತವೆ. ಕೊನೆಗೆ ನಗ್ನ ಸ್ತ್ರೀಯನ್ನು ಅಪಹರಿಸಿದಂತೆ ಮತ್ತು ಅವರನ್ನು ಬಿಡಿಸಲು ವೀರ ಹೋರಾಡುತ್ತಿರುವಂತೆ ಚಿತ್ರ ಮೂಡಿಬಂದಿದೆ.

ಹೀಗೆ ಇಲ್ಲಿನ ಶಾಸನಶಿಲ್ಪಗಳನ್ನು ಚರ್ಚಿಸಲಾಯಿತು. ಆದರೆ ಇಲ್ಲಿ ಹೆಚ್ಚಾಗಿ ಒಂದೇ ರೀತಿಯಿಂದ ಕೂಡಿದ ಶಾಸನ ಶಿಲ್ಪಗಳು ಕಂಡುಬರುತ್ತವೆ.

ಅಡಿಟಿಪ್ಪಣಿಗಳು

೧. ಡಾ.ಕೆ.ಶಿವರಾಮಕಾರಂತ, ಚಾಲುಕ್ಯ ವಾಸ್ತುಶಿಲ್ಪ, ಪು.೧೨.

೨. ಡಾ.ಡಿ.ವಿ.ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಪು.೯

೩. ಬಾಗಳಿಯ ವಸ್ತುಸಂಗ್ರಹಾಲಯದಲ್ಲಿರುವ ಆರು ಶಾಸನಶಿಲ್ಪಗಳಲ್ಲಿ ಶಿವಲಿಂಗ, ನಂದಿ ಮತ್ತು ಆಕಳು ಶಿಲ್ಪ ಮಾತ್ರ ಕಂಡುಬರುತ್ತದೆ. ವಸ್ತುಸಂಗ್ರಹಾಲಯದ ಹೊರಗಿನ ಶಾಸನಶಿಲ್ಪಗಳು ಬ.ಜಿ.ಶಾ.ಸಂ. (ಶಾಸನ ೯೬), ಕ್ರಿ.ಶ.೯೯೧

೪. ಕಲ್ಲೇಶ್ವರ ದೇವಾಲಯದ ದಕ್ಷಿಣಕ್ಕಿರುವ ಶಾಸನ (ಬ.ಜಿ.ಶಾ.ಸಂ.ಶಾ.೯೭) ಕ್ರಿ.ಶ.೧೦೧೮

೫. ವಸ್ತುಸಂಗ್ರಹಾಲಯದಲ್ಲಿರುವ (ಒಳಗಿನ ಬಲಭಾಗ) ಶಾಸನಗಳು

ಬ.ಜಿ.ಶಾ.ಸಂ.೧೦೦ ಕ್ರಿ.ಶ.೧೦೭೯
ಬ.ಜಿ.ಶಾ.ಸಂ.೧೦೨ ಕ್ರಿ.ಶ.೧೧೦೩
ಬ.ಜಿ.ಶಾ.ಸಂ.೧೦೩ ಕ್ರಿ.ಶ.೧೧೦೭
ಬ.ಜಿ.ಶಾ.ಸಂ.೧೦೪ ಇಲ್ಲ
ಬ.ಜಿ.ಶಾ.ಸಂ.೧೦೫ ಕ್ರಿ.ಶ.೧೧೧೫
ಬ.ಜಿ.ಶಾ.ಸಂ.೧೦೬ ಕ್ರಿ.ಶ.೧೧೧೫
ಬ.ಜಿ.ಶಾ.ಸಂ.೧೦೬ ಕ್ರಿ.ಶ.೧೧೨೦

೬. ವಸ್ತುಸಂಗ್ರಹಾಲಯದಲ್ಲಿರುವ (ಒಳಗಿನ ಬಲಭಾಗ) ಶಾಸನಗಳು

ಬ.ಜಿ.ಶಾ.ಸಂ.೧೧೦ ಕ್ರಿ.ಶ.೧೧೨೨
ಬ.ಜಿ.ಶಾ.ಸಂ.೧೧೯ ಕ್ರಿ.ಶ.೧೧೪೪

ಬ.ಜಿ.ಶಾ.ಸಂ.೧೧೨ ಕ್ರಿ.ಶ.೧೧೨೨

ಬ.ಜಿ.ಶಾ.ಸಂ.೧೧೩ ಕ್ರಿ.ಶ.೧೩೮೭

ಬ.ಜಿ.ಶಾ.ಸಂ.೧೧೪ ಕ್ರಿ.ಶ.೧೧೪೮

ಬ.ಜಿ.ಶಾ.ಸಂ.೧೧೫ ಕ್ರಿ.ಶ.೧೧೫೩

ಬ.ಜಿ.ಶಾ.ಸಂ.೧೧೬ ಕ್ರಿ.ಶ.೧೧೯೩

೭. ವಸ್ತುಸಂಗ್ರಹಾಲಯದಲ್ಲಿರುವ (ಬಲಭಾಗದಲ್ಲಿ ೧೪ನೇ ಶಾಸನ) ಕ್ರಿ.ಶ.೧೦೭೯(೧೦೦)

೮. ವಸ್ತುಸಂಗ್ರಹಾಲಯದಲ್ಲಿರುವ (ಒಳಗಿನ ಬಲಭಾಗದಲ್ಲಿ ೧೧ನೇ ಶಾಸನ) ಕ್ರಿ.ಶ.೧೧೦೩(೧೦೨)

೯. ವಸ್ತುಸಂಗ್ರಹಾಲಯದಲ್ಲಿರುವ (ಬಲಭಾಗದಲ್ಲಿ ಶಾಸನ) ಕ್ರಿ.ಶ.೧೧೯೩(೧೧೬)

೧೦. ವಸ್ತುಸಂಗ್ರಹಾಲಯದಲ್ಲಿರುವ (ಹೊರಗಿನ ಬಲಭಾಗದಲ್ಲಿರುವ ಶಾಸನ) ಇದರಲ್ಲಿ ಲಿಪಿಯೇ ಸ್ಪಷ್ಟವಿಲ್ಲ ಕ್ರಿ.ಶ.೯೪೪-೪೫(೧೨೪)

೧೧. ವಸ್ತುಸಂಗ್ರಹಾಲಯದಲ್ಲಿರುವ (ಹೊರಗಿನ ಬಲಭಾಗದಲ್ಲಿರುವ ಶಾಸನ) ಕ್ರಿ.ಶ.೧೧೨೨(೧೧೭)

೧೨. ಕಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಶಾಸನ ಕ್ರಿ.ಶ.೧೧೫೩(೧೧೫)

೧೩. ವಸ್ತುಸಂಗ್ರಹಾಲಯದಲ್ಲಿರುವ (ಹೊರಗಿನ ಎಡಭಾಗದಲ್ಲಿರುವ ಶಾಸನ) ಕಾಲದ ಉಲ್ಲೇಖವಿಲ್ಲ(ಶಾ.೧೨೬)

೧೪. ವಸ್ತುಸಂಗ್ರಹಾಲಯದಲ್ಲಿರುವ (ಹೊರಗಿನ ಎಡಭಾಗದಲ್ಲಿರುವ ಶಾಸನ) ಕಾಲದ ಉಲ್ಲೇಖವಿಲ್ಲ

೧೫. ವಸ್ತುಸಂಗ್ರಹಾಲಯದಲ್ಲಿರುವ (ಹೊರಗಿನ ಬಲಭಾಗದ ಶಾಸನ) ಕ್ರಿ.ಶ.೧೦೧೮(೧೩೬)

೧೬. ವಸ್ತುಸಂಗ್ರಹಾಲಯದಲ್ಲಿರುವ (ಒಳಗಿನ ಭಾಗದಲ್ಲಿ ಶಾಸನ) ಕ್ರಿ.ಶ.೯೮೬(೧೧೯)

೧೭. ವಸ್ತುಸಂಗ್ರಹಾಲಯದಲ್ಲಿರುವ ಒಳಗಿರುವ ವೀರಗಲ್ಲು (A.S.I.೬೦)

೧೮. ವಸ್ತುಸಂಗ್ರಹಾಲಯದಲ್ಲಿರುವ ಒಳಗಿರುವ ವೀರಗಲ್ಲು (A.S.I.೭೦)

೧೯. ವಸ್ತುಸಂಗ್ರಹಾಲಯದಲ್ಲಿರುವ ಒಳಗಿರುವ ವೀರಗಲ್ಲು (A.S.I.೫೦)

೨೦. ವಸ್ತುಸಂಗ್ರಹಾಲಯದಲ್ಲಿರುವ ಒಳಗಿರುವ ವೀರಗಲ್ಲು (A.S.I.೭೭)

೨೧. ವಸ್ತುಸಂಗ್ರಹಾಲಯದಲ್ಲಿರುವ ಹೊರಗಿನ (ಬಲಭಾಗ) ವೀರಗಲ್ಲು

೨೨. ರನ್ನನ ಸಾಹಸಭೀಮವಿಜಯ, ಪು.೩೫

೨೩. ವಸ್ತುಸಂಗ್ರಹಾಲಯದಲ್ಲಿರುವ ಒಳಗಿರುವ ವೀರಗಲ್ಲು (A.S.I.೬೮)

೨೪. ವಸ್ತುಸಂಗ್ರಹಾಲಯದಲ್ಲಿರುವ ಒಳಗಿರುವ ವೀರಗಲ್ಲು (A.S.I.೬೬)

೨೫. ವಸ್ತುಸಂಗ್ರಹಾಲಯದಲ್ಲಿರುವ ಬಲಭಾಗದದಿಂದ ೩ನೇ ವೀರಗಲ್ಲು(A.S.I.೭೪)

೨೬. ವಸ್ತುಸಂಗ್ರಹಾಲಯದಲ್ಲಿರುವ ಒಳಗಿರುವ ಮಾಸ್ತಿಕಲ್ಲು (A.S.I.೫೮)

೨೭. ವಸ್ತುಸಂಗ್ರಹಾಲಯದಲ್ಲಿರುವ ವೀರಗಲ್ಲು (A.S.I.೬೩)


೨೮. ವಸ್ತುಸಂಗ್ರಹಾಲಯದಲ್ಲಿರುವ ಬಲಭಾಗದ ವೀರಗಲ್ಲು (ಶಾ.ಸಂ.೧೧೯) ಕ್ರಿ.ಶ.೯೮೭



ವಸ್ತುಸಂಗ್ರಹಾಲಯದಲ್ಲಿ(ಬಲಭಾಗ)



ಕಲ್ಲೇಶ್ವರ ದೇವಾಲಯದಲ್ಲಿ



ಕಲ್ಲೇಶ್ವರ ದೇವಾಲಯದ ಆವರಣದಲ್ಲಿ



ವಸ್ತುಸಂಗ್ರಹಾಲಯದಲ್ಲಿ(ಬಲಭಾಗ)







ವಸ್ತುಸಂಗ್ರಹಾಲಯದಲ್ಲಿ (ಎಡಭಾಗ)



ವಸ್ತುಸಂಗ್ರಹಾಲಯದಲ್ಲಿ




ವಸ್ತುಸಂಗ್ರಹಾಲಯದಲ್ಲಿ










ಕಲ್ಲೇಶ್ವರ ದೇವಾಲಯದ ಆವರಣದಲ್ಲಿ



ವಸ್ತುಸಂಗ್ರಹಾಲಯದಲ್ಲಿರುವ ಹೊರಗಿನ ಎಡಭಾಗದಲ್ಲಿ




ವಸ್ತುಸಂಗ್ರಹಾಲಯದಲ್ಲಿರುವ ಹೊರಗಿನ ಬಲಭಾಗದಲ್ಲಿ



ವಸ್ತುಸಂಗ್ರಹಾಲಯದಲ್ಲಿ



ವಸ್ತುಸಂಗ್ರಹಾಲಯದಲ್ಲಿ



ವಸ್ತುಸಂಗ್ರಹಾಲಯದಲ್ಲಿ











ವಸ್ತುಸಂಗ್ರಹಾಲಯದಲ್ಲಿ




ವಸ್ತುಸಂಗ್ರಹಾಲಯದಲ್ಲಿ-ವಿಷ್ಣು ಲಕ್ಷ್ಮಿ



ವಸ್ತುಸಂಗ್ರಹಾಲಯದಲ್ಲಿ ತುರಗೋಳ್ ಶಾಸನಶಿಲ್ಪ




ವಸ್ತುಸಂಗ್ರಹಾಲಯದಲ್ಲಿ ವೀರಗಲ್ಲು



ವಸ್ತುಸಂಗ್ರಹಾಲಯದಲ್ಲಿ ಹುಲಿ ಬೇಟೆ ವೀರಗಲ್ಲು



ವಸ್ತುಸಂಗ್ರಹಾಲಯದಲ್ಲಿ




ವಸ್ತುಸಂಗ್ರಹಾಲಯದಲ್ಲಿ ವೀರ ಮತ್ತು ಮಾಸ್ತಿಶಿಲ್ಪ



ಬಾಗಳಿ ಕೆರೆಯ ಪಕ್ಕದ ರಸ್ತೆ ಬದಿ ಇರುವ ವೀರಗಲ್ಲು







ಬಾಗಳಿ ಕೆರೆಯ ಪಕ್ಕದ ರಸ್ತೆ ಬದಿ ಇರುವ ವೀರಗಲ್ಲು



ವಸ್ತುಸಂಗ್ರಹಾಲಯದಲ್ಲಿರುವ ದ್ವಾರಪಾಲಕ







ವಸ್ತುಸಂಗ್ರಹಾಲಯದಲ್ಲಿರುವ ಉಮಾಮಹೇಶ್ವರ (ಕಲ್ಯಾಣ ಚಾಳುಕ್ಯ)




ವಸ್ತುಸಂಗ್ರಹಾಲಯದಲ್ಲಿರುವ ಉಮಾಮಹೇಶ್ವರ (ಹೊಯ್ಸಳ ಶೈಲಿ)







ವಸ್ತುಸಂಗ್ರಹಾಲಯದಲ್ಲಿರುವ ನಾಗಕನ್ಯೆ



ವಸ್ತುಸಂಗ್ರಹಾಲಯದಲ್ಲಿರುವ ನವಿಲು ಮತ್ತು ಷಣ್ಮುಖ

ಅಧ್ಯಾಯ ೬

ಸಂಸ್ಕೃತಿ

೧ ದೇವಾಲಯಗಳು

೨ ಮಠಗಳು

೩. ಶಿಲ್ಪಗಳು

'ಸಂಸ್ಕೃತಿ' ಎಂಬ ಪದಕ್ಕೆ ಒಂದು ನಿಖರವಾದ ಅರ್ಥ ಅಥವಾ ವ್ಯಾಖ್ಯಾನ ಕೊಡುವುದು ಬಹಳ ಕಷ್ಟ. ಒಬ್ಬೊಬ್ಬ ವಿದ್ವಾಂಸರು ಒಂದೊಂದು ರೀತಿ ಹೇಳಿರುವರು. ಅವರವರ ತಿಳುವಳಿಕೆಗೆ ಅನುಸಾರವಾಗಿ ಬಳಸಿರುವ ಪದ ಇದು. ಹಂತಹಂತವಾಗಿ ಬರುವ ಅಂತರಂಗದ ವಿಕಾಸ, ನಡೆ-ನುಡಿ, ಆಚಾರ-ವಿಚಾರ, ಸಮಾಜದೊಡನೆ ಸಹಯೋಗ, ಸೌಜನ್ಯದ ಮಾರ್ಗ, ನಂಬಿಕೆ-ಸಂಪ್ರದಾಯ, ಮೌಲ್ಯಗಳ ದೃಷ್ಟಿ; ಸಂಸ್ಕೃತಿಯಲ್ಲಿ ಅಡಕವಾಗಿವೆ. ಒಟ್ಟಾರೆ ಮಾನವ ಸಮುದಾಯದ ಸಂಪ್ರದಾಯದಿಂದ ಹಿಡಿದು, ವೈಯಕ್ತಿಕವಾದ ಆಚರಣೆಗಳವರೆಗೂ ಮತ್ತು ಉದಾತ್ತವಾದ ಬಯಕೆಯವರೆಗೂ ಇದರ ವ್ಯಾಪ್ತಿ ಹರಿಡಿವೆ.[೧] ಮಾನವನಿಗೆ ಒಂದು ಸಂಸ್ಕಾರ ಎನ್ನುವುದು ಮುಖ್ಯ. ಈ ಅಧ್ಯಾಯದಲ್ಲಿ ಬಾಗಳಿಯ ಸಂಸ್ಕೃತಿ ಬಗೆಗೆ ಚರ್ಚಿಸಲಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಪರಂಪರೆಯು ಶ್ರೀಮಂತವೂ, ವೈವಿಧ್ಯಮಯವೂ ಆಗಿದೆ. ಸಾಂಸ್ಕೃತಿಕ ಪರಂಪರೆಯ ಕೆಲವು ಅಂಗಗಳಾದ ಧರ್ಮಗಳು, ಸಾಮಾಜಿಕ ಸಂಸ್ಥೆಗಳು. (ಜಾನಪದ್ಯ)ಜಾನಪದ ಕಲೆಗಳು, ವೈಜ್ಞಾನಿಕ ಪರಂಪರೆ, ಸಾಹಿತ್ಯಕ ಪರಂಪರೆ ಮತ್ತು ವಾಸ್ತುಶಿಲ್ಪ, ಮೂರ್ತಿಶಿಲ್ಪ, ವರ್ಣಚಿತ್ರಕಲೆ, ನೃತ್ಯ, ನಾಟಕ, ಸಂಗೀತ, ಜಾನಪದ ಸಾಹಿತ್ಯ ಇತರ ವಿಷಯಗಳಲ್ಲಿ ವೈವಿದ್ಯಮಯವಾಗಿದೆ.[೨] ಇದು ಅನ್ಯ ಸಂಸ್ಕೃತಿಗಳ ಹಾಗೂ ಉಪಸಂಸ್ಕೃತಿಗಳ ಸಂಗಮವಾಗಿದೆ. ಈ ಎಲ್ಲಾ ಅಂಶಗಳನ್ನು ಕಂಡುಹಿಡಿಯಲು ಭಾಷೆಯೊಂದೇ ಅಲ್ಲದೆ, ಬೇರೆ ಲಕ್ಷಣಗಳಿಂದ ಗುರುತಿಸಬಹುದು. ಇವೆಲ್ಲವುಗಳಿಂದಲೂ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿವೆ.[೩] ಇದರಿಂದ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನವು ಹೊರತಾಗಿಲ್ಲ. ನಮ್ಮ ಸಂಸ್ಕೃತಿಯ ಶೇಷವೇ ಹಳ್ಳಿ ಎಂದರೆ ತಪ್ಪಾಗಲಾರದು. ಏಕೆಂದರೆ ಆ ಹಳ್ಳಿಯಲ್ಲಿ ದೇವಾಲಯಗಳಿವೆ, ಶಾಸನಗಳಿವೆ, ವಾಸ್ತುಶಿಲ್ಪಗಳಿವೆ, ಜನಪದವಿದೆ. ಇವೆಲ್ಲವುಗಳಲ್ಲಿ ಸಂಸ್ಕೃತಿಯ ಅಂಶಗಳನ್ನು ಗುರುತಿಸಬಹುದು.

ಕರ್ನಾಟಕದಲ್ಲಿ ದೇವಾಲಯಗಳ ಇತಿಹಾಸ ಕ್ರಿ.ಶ.ಕ್ಕಿಂತ ಹಿಂದಿಯೇ ಪ್ರಾರಂಭವಾಗುತ್ತದೆ. ಪ್ರಾಚೀನ ದೇವಾಲಯವೆಂದರೆ ತಾಳಗುಂದದ ಪ್ರಣವೇಶ್ವರ ದೇವಾಲಯವನ್ನು ಗುರುತಿಸಬಹುದು. ದಕ್ಷಿಣ ಕರ್ನಾಟಕದ ದೇವಾಲಯಗಳ ಕ್ಷೇತ್ರಕಾರ್ಯ ವ್ಯಾಪಕವಾಗಿ ನಡೆದಿರುವಂತೆ ಉತ್ತರ ಕರ್ನಾಟಕದಲ್ಲಿ ನಡೆದಿಲ್ಲವೆನ್ನಬಹುದು. ಹೀಗಾಗಿ ಇಲ್ಲಿನ ಸಮೀಕ್ಷೆಗೆ ಅಲ್ಲಲ್ಲಿ ದೊರೆತು ಪ್ರಕಟಗೊಂಡಿರುವ ಶಾಸನಗಳೇ ಪ್ರಮುಖ ಆಕರಗಳಾಗಿವೆ.

ನಮ್ಮ ಅಧ್ಯಯನದ ಅವಧಿಯ ಶಾಸನಗಳಲ್ಲಿ ಕಾಣಬರುವ ದೇವಾಲಯಗಳು ಅಂದಿನ ಜನಜೀವನದಲ್ಲಿ ಪ್ರಮುಖ ಪಾತ್ರವಹಿಸಿವೆ. ಇವು ಕೇವಲ ಭಕ್ತಿಯ ಕೇಂದ್ರಗಳಾಗಿರದೆ, ಅಂದಿನ ಸಾಮಾಜಿಕ, ಆರ್ಥಿಕ, ಕಾರ್ಯಕಲಾಪಗಳನ್ನು ನಿಭಾಯಿಸುವ ಸಂಸ್ಥೆಗಳಾಗಿದ್ದವು. ಬಾಗಳಿಯಲ್ಲಿರುವ ದೇವಾಲಯಗಳಲ್ಲಿ ಶಾಸನ ಉಲ್ಲೇಖ ದೇವಾಲಯಗಳು, ಏಳು ದೇವಾಲಯಗಳಿದ್ದು, ಇತರೆ ಹದಿಮೂರು ದೇವಾಲಯಗಳಿವೆ. ಇವು ಭಿನ್ನ(ವರ್ಗಗಳಿಗೆ) ಧರ್ಮಗಳಿಗೆ ಸೇರಿದವುಗಳಾಗಿವೆ. ಇವುಗಳನ್ನು ಆಯಾ ಮತ ಧರ್ಮಗಳ ಹಿನ್ನೆಲೆಯಲ್ಲಿ ಗುರುತಿಸುವುದಾದರೆ ಶೈವ, ವೈಷ್ಣವ, ಜೈನ ದೇವಾಲಯಗಳೆಂದು ಗುರುತಿಸಬಹುದು. ದೇವಾಲಯಗಳು ಮತ್ತು ಅವುಗಳ ಪೋಷಣೆಯಲ್ಲಿ ಅಂದಿನ ಅರಸು ಮನೆತನಗಳು ಪ್ರಮುಖ ಪಾತ್ರವಹಿಸಿವೆ. ಇವುಗಳ ನಿರ್ಮಾಣ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ದಾನದತ್ತಿಗಳ ಮೂಲಕ ಅವುಗಳಿಗೆ ರಕ್ಷಣೆ ಒದಗಿಸಿದರು. ಆದ್ದರಿಂದ ಇಲ್ಲಿಯ ದೇವಾಲಯಗಳಲ್ಲಿ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಮತ್ತು ನೊಳಂಬ ಕಾಲದ ದೇವಾಲಯಗಳನ್ನು ಗುರುತಿಸಲಾಗಿದೆ. ಬಾಗಳಿಯಲ್ಲಿರುವ ಬೇರೆ ಬೇರೆ ಕಾಲದ, ವಿವಿಧ ಮತ ಧರ್ಮಗಳ ದೇವಾಲಯಗಳು ಮತ್ತು ಅವುಗಳಿಗೆ ದತ್ತಿ ನೀಡಿದ ಶಾಸನಗಳನ್ನು ಹೀಗೆ ಗುರುತಿಸಬಹುದು.

ಅ. ಶೈವ ದೇವಾಲಯಗಳು

೧. ಕಲ್ಲೇಶ್ವರ ದೇವಾಲಯ

೨. ಚನ್ನಬಸವೇಶ್ವರ

೩. ಇಷ್ಟಲಿಂಗೇಶ್ವರ

೪. ಸಂಗನಬಸವೇಶ್ವರ

ಆ. ವೈಷ್ಣವ ದೇವಾಲಯಗಳು

೧. ಉಗ್ರನರಸಿಂಹ

ಇ. ಜೈನ ಬಸದಿಗಳು

ಬಾಗಳಿಯಲ್ಲಿ ಶೈವ ದೇವಾಲಯಗಳೇ ಹೆಚ್ಚು ಕಂಡುಬರುತ್ತವೆ. ಕಲ್ಯಾಣ ಚಾಲುಕ್ಯರ ಸುದೀರ್ಘ ಆಳ್ವಿಕೆಯಿಂದ ಈ ಭಾಗದಲ್ಲಿ ಹೆಚ್ಚಿನ ದೇವಾಲಯಗಳು ಮತ್ತು ದೇವಾಲಯಗಳಿಗೆ ನೀಡಿದ ದಾನದತ್ತಿ ಇವರದ್ದೇ ಆಗಿದೆ. ಇಲ್ಲಿನ ಬಹುಪಾಲು ದೇವಾಲಯಗಳು ತ್ರಿಕೂಟ ರಚನೆಯಾಗಿವೆ. ಈ ಗ್ರಾಮದ ಶಾಸನಗಳಲ್ಲಿ ಇಲ್ಲಿನ ಬಹುಪಾಲು ದೇವಾಲಯಗಳ ಉಲ್ಲೇಖವಿದ್ದು, ಕೆಲವು ದೇವಾಲಯಗಳ ಬಗ್ಗೆ ಯಾವ ವಿವರವೂ ದೊರಕುವುದಿಲ್ಲ.

ಶೈವ ದೇವಾಲಯಗಳು

೧. ಕಲ್ಲೇಶ್ವರ ದೇವಾಲಯ

ಕ್ರಿ.ಶ.೧೦೧೮ ಶಾಸನವೊಂದರಲ್ಲಿ[೪] ಈ ದೇವಾಲಯದ ಉಲ್ಲೇಖ ಬಂದಿರುವುದರಿಂದ ಇದನ್ನು ೧೦ನೇ ಶತಮಾನದಲ್ಲಿ ನಿರ್ಮಿಸಿರಬಹುದೆಂದು ಹೇಳಬಹುದು. ಆದರೆ ಈ ಶಾಸನದಲ್ಲಿ ದೇವಾಲಯದ ಸ್ಥಾಪನೆಯ ವಿಚಾರವೇನೂ ಕಂಡುಬರದಿರುವುದರಿಂದ ಇದು ಈ ಕಾಲಕ್ಕಿಂತ ಮುಂಚೆಯೇ ಕಟ್ಟಿರಬಹುದೆಂದು ಊಹಿಸಲು ಅವಕಾಶವಿದೆ. ಕ್ರಿ.ಶ.೧೦೧೮ರಲ್ಲಿ ಆರನೆಯ ವಿಕ್ರಮಾದಿತ್ಯ ತನ್ನ ೫೧ನೇ ವಯಸ್ಸಿನಲ್ಲಿ ಕಟ್ಟಿಸಿದನೆಂದು[೫], ಆಗ ಈ ಗ್ರಾಮಕ್ಕೆ 'ಬಾಳಗುಳಿ' ಎಂದು ಹೆಸರಿತ್ತು. ಕ್ರಿ.ಶ.೧೧೧೫-೧[೬]ರಲ್ಲಿ ಈ ದೇವಸ್ಥಾನಕ್ಕೆ ಈ ಊರನ್ನು ದತ್ತಿಕೊಟ್ಟಿದ್ದರಿಂದ, ಹೊಯ್ಸಳ ದೊರೆ ೨ನೇ ಬಲ್ಲಾಳನ ಕಾಲಕ್ಕೆ ಬಾಗಳಿ ಎಂದು ಹೆಸರಾಗಿ ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು.[೭] ಈ ಗ್ರಾಮದಲ್ಲಿನ ದೇವಾಲಯಗಳ ಬಗ್ಗೆ ಕೆಲವು ವಿದ್ವಾಂಸರು ತಮ್ಮದೇ ಆದ ಹೇಳಿಕೆಗಳನ್ನು ನೀಡಿರುವರು. ಅವುಗಳು ಈ ಕೆಳಗಿನಂತಿವೆ.

ಡಾ.ಚಂದ್ರಶೇಖರ ಅವರು ಬಾಗಳಿಯು ಕಲ್ಯಾಣಿ ಚಾಲುಕ್ಯರ ವಾಸ್ತುಶಿಲ್ಪ ಕಲೆಯ ಪ್ರಯೋಗಶಾಲೆ ಎಂದು, ಚಾಲುಕ್ಯರ-ಹೊಯ್ಸಳರ ಶಿಲ್ಪಕಲೆಯ ಸಂಗಮವೆಂದು, 'ಕರ್ನಾಟಕದ ಖಜುರಾಹೊ' ಎಂದು ಕರೆದಿದ್ದಾರೆ.[೮]

ಚನ್ನವೀರ ಕಣವಿಯವರು 'ಬಾಗಳಿಯ ಕಲ್ಲೇಶ್ವರ ದೇವಸ್ಥಾನದ ಶಿಲ್ಪ ಕಲಾವೈಭವವನ್ನು ಕಂಡು ತುಂಬಾ ಪುಳಕಿತರಾಗಿ ಕರ್ನಾಟಕ ಇತಿಹಾಸ ಕಲೆ, ಸಂಸ್ಕೃತಿಯು ಇಂಥ ದೇವಾಲಯಗಳಲ್ಲಿ ಹಾಗೂ ಇಲ್ಲಿಯ ಹಲವಾರು ಶಾಸನ, ವೀರಗಲ್ಲುಗಳಲ್ಲಿ ಪ್ರತಿಬಿಂಬಿತವಾಗಿದೆ.[೯]

ಬಾಗಳಿ ಕಲ್ಲೇಶ್ವರ ದೇವಸ್ಥಾನವನ್ನು ಇಂದು ನೋಡುವ ಸದವಕಾಶ ಬಂದಿದೆ. ದೇವಾಲಯ ಅದ್ಭುತವಾಗಿದೆ. ಶಿಲ್ಪ ಸೌಂದರ್ಯ ಅಮೋಘವಾಗಿದೆ ಎಂದಿದ್ದಾರೆ.[೧೦] 'ರೇ' ಅವರು ಈ ದೇವಾಲಯವನ್ನು ಈ ಜಿಲ್ಲೆಯ ಮೊದಲನೆಯ ವಿಧವೆಂದು ಅಭಿಪ್ರಾಯಪಟ್ಟಿದ್ದಾರೆ.[೧೧]

ಒಟ್ಟಿಗೆ ಈ ದೇವಾಲಯವು ಅದ್ಭುತವಾಗಿದೆ. ಏಕೆಂದರೆ ಇಲ್ಲಿ ಶಿಲ್ಪಿಯು ಕೆತ್ತನೆಗೆ ಬಳಸಿರುವ ಬಳಪದ ಕಲ್ಲು, ಅದರ ನುಣುಪು ಎಲ್ಲವೂ ವೈವಿಧ್ಯಮಯವಾಗಿದೆ. ಬಾಗಳಿಯ ಎಲ್ಲಾ ದೇವಾಲಯಗಳಿಗೆ ಕಲ್ಲೇಶ್ವರ ದೇವಸ್ಥಾನವು ಕಳಸಪ್ರಾಯವಾಗಿದೆ. ಬಳಪದ ಕಲ್ಲಿನಿಂದ ಸುಂದರವಾಗಿ ಅರಳಿನಿಂತ ಈ ದೇವಸ್ಥಾನ ಆಕರ್ಷಕವಾಗಿದೆ. ಗ್ರಾಮದ ಈಶಾನ್ಯ ದಿಕ್ಕಿಗೆ ಕೆರೆಯದಂಡೆಯ ಪಕ್ಕದಲ್ಲಿ ಪೂರ್ವಾಭಿಮುಖ

ವಾಗಿದ್ದು, ಮುಖ್ಯ ದೇವಾಲಯ ೧೦ನೇ ಶತಮಾನದ ಮಧ್ಯಭಾಗದಲ್ಲಿ ರಚನೆಯಾಗಿದೆ.[೧೨] ಇದರ ಉತ್ತರಕ್ಕೆ ನರಸಿಂಹದೇವಸ್ಥಾನ ಮತ್ತು ಪೂರ್ವಕ್ಕೆ ಸೂರ್ಯದೇವಾಲಯಗಳಿವೆ.

ಕಲ್ಲೇಶ್ವರ ದೇವಾಲಯವು ಅಂತರಾಳ, ಸಭಾಮಂಟಪ, ಮುಖಮಂಟಪಗಳನ್ನು ಹೊಂದಿದೆ. ಆದರೆ ಗರ್ಭಗೃಹದಲ್ಲಿ ಮೂಲಮೂರ್ತಿ ಇಲ್ಲ. ಈಗಿರುವ ಮೂರ್ತಿ ನಂತರದ ಕಾಲದ್ದು. ಇಲ್ಲಿನ ಮುಖ್ಯದೇವಾಲಯ ೧೦ನೇ ಶತಮಾನದ್ದು. ಸೂರ್ಯದೇವಾಲಯ ಕ್ರಿ.ಶ.೯೮೭[೧೩]ರಲ್ಲಿ, ನರಸಿಂಹ ದೇವಾಲಯ ೧೧ನೇ ಶತಮಾನದ ಆದಿಭಾಗದಲ್ಲಿ ಸ್ಥಾಪಿಸಲಾಗಿದೆ.[೧೪] ಒಂದೇ ದೇವಾಲಯ ವಿವಿಧ ಕಾಲಘಟ್ಟದಲ್ಲಿ ವಿಸ್ತರಣೆಯಾಗಿದೆ. ರಾಷ್ಟ್ರಕೂಟರ ಮತ್ತು ಕಲ್ಯಾಣಿ ಚಾಲುಕ್ಯರ ಅವಧಿಯ ದೇವಾಲಯಗಳಿವೆ. ಕಲ್ಲೇಶ್ವರ ದೇವಾಲಯದ ಅಂತರಾಳ, ನವರಂಗ ರಾಷ್ಟ್ರಕೂಟರ ಕಾಲದ್ದಾಗಿದ್ದು, ಇದರ ಗರ್ಭಗೃಹದ ಬಾಗಿಲು ಐದು ಶಾಖೆಗಳನ್ನು ಒಳಗೊಂಡಿದೆ. ಲತಾ ಶಾಖೆ, ವಜ್ರಶಾಖೆ, ಜಾಲಂಧರ ಶಾಖೆ ಇದು ಗಾಳಿ ಬೆಳಕಿಗೆ ಅನುವು ಮಾಡಿಕೊಡುವುದಲ್ಲದೆ, ನಕ್ಷತ್ರ ಮಾದರಿಯಲ್ಲಿ ಬಹಳ ಭವ್ಯವಾಗಿದೆ. ನಾಗದಂಪತಿಗಳ ನೃತ್ಯಶಾಖೆ, ಲತಾಶಾಖೆ, ವಜ್ರಶಾಖೆಯ ಬಳಿಯಲ್ಲಿ ವಿವಿಧ ವಾದ್ಯಗಳೊಂದಿಗೆ ಭರತನಾಟ್ಯದ ಭಂಗಿಗಳು ಕೆತ್ತಲ್ಪಟ್ಟಿವೆ.

ಅಂತರಾಳ : ಅಂತರಾಳದ ಮೇಲ್ಭಾವಣೆ ಅಥವಾ ಗೋಡೆಗಳಲ್ಲಿ ಯಾವುದೇ ಕೆತ್ತನೆಯಿಲ್ಲ. ಇದರ ವೈಶಿಷ್ಟವೆಲ್ಲ ಮೈಗೂಡಿರುವುದು ಬಾಗಿಲು ಮತ್ತು ಲಲಾಟದಲ್ಲಿ. ಬಾಗಿಲ ಕೆಳಗಡೆ ಈ ಎಲ್ಲಾ ಶಾಖೆಗಳಿಗೆ ಹೊಂದಿಕೊಂಡು ಶೈವದ್ವಾರಪಾಲಕರಿದ್ದಾರೆ. ಈ ದ್ವಾರವು ರತ್ನಶಾಖೆ, ವಿದ್ಯಾಧರ ಹಾಗೂ ಜಾಲಂಧ್ರಗಳಿಂದ ಅಲಂಕೃತಗೊಂಡಿದೆ. ಆದರೆ ಅಂತರಾಳ ವಿತಾನ(ಮುಚ್ಚಿಗೆ)ದಲ್ಲಿ ಪದ್ಮವಿದೆ. ದ್ವಾರಪಾಲಕರ ಎರಡೂ ಬದಿಯಲ್ಲಿ ಎರಡು ಕಂಬಗಳ ಮೇಲೆ ಮಕರ ತೋರಣವಿದ್ದು, ಕೀರ್ತಿ ಮುಖದಿಂದ ಕೊನೆಗೊಂಡಿದೆ. ಮೇಲೆ ಬಾಗಿಲಿನಲ್ಲಿ ಮೊದಲಿನ ಎರಡು ಶಾಖೆಗಳು ಮುಂದುವರಿದಿದ್ದು, ಮಧ್ಯದಲ್ಲಿ ಗಜಲಕ್ಷ್ಮಿಯಿದೆ. ನಂತರ ಮೂರನೇ ಶಾಖೆ ಜಾಲಂಧರದ ಮಧ್ಯ ಭಾಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ತ್ರಿಮೂರ್ತಿಗಳ ಸುಂದರ ಕೆತ್ತನೆಯಿದೆ. ಈ ಚಿಕ್ಕಮೂರ್ತಿಗಳ ಕೆತ್ತನೆ, ಸೊಗಸುಗಾರಿಕೆಯಲ್ಲಿ ನೋಡಿದಷ್ಟು ಮನಕ್ಕೆ ಆನಂದವನ್ನು ತರುತ್ತವೆ. ನಂತರದ ಬಾಗಲಿಗೆ ಹೊಂದಿಕೊಂಡು ಎರಡು ಬದಿಯಲ್ಲಿ ಗೋಡೆಗಂಬಗಳಿವೆ. ಈ ಕಂಬಗಳ ಕೆಳಭಾಗ ದ್ವಾರಪಾಲಕರು, ಗಜ, ಸಿಂಹ ಮತ್ತು ನೃತ್ಯಗಾರರಿಂದ ಸುಂದರವಾಗಿ ಕೆತ್ತಲ್ಪಟ್ಟಿದೆ. ಈ ಎರಡೂ ಕಂಬಗಳು ಹೊತ್ತುನಿಂತಂತೆ ಮಕರ ತೋರಣವಿದೆ. ಇದು ಐದು ಕಮಾನುಗಳನ್ನು ಒಳಗೊಂಡಿದ್ದು, ಎರಡು ಮಕರಗಳು ಅಭಿಮುಖವಾಗಿವೆ, ಕಮಾನುಗಳ ಅಲಂಕೃತ ತೋರಣಗಳು ಮಕರಗಳ ಬಾಯಿಂದ ಹೊರಟು ಆಕರ್ಷಕವಾಗಿವೆ. ಎರಡೂ ಕಡೆಯ ಕಮಾನುಗಳಲ್ಲಿ ಬ್ರಹ್ಮ ಮತ್ತು ವಿಷ್ಣುವಿನ ಮೂರ್ತಿಗಳು ಕಮಲದ ಮೇಲೆ ಪದ್ಮಾಸನ ಹಾಕಿ ಅಂಜಲಿ ಮುದ್ರೆಯಲ್ಲಿ ಕುಳಿತು ಶಿವನನ್ನು

ಸ್ತುತಿಸುತ್ತಿದ್ದಾರೆ. ಮಧ್ಯದ ಮೂರು ಕಮಾನುಗಳಲ್ಲಿ ಶಿವನ ಮರ್ದನಾಸುರ ವಧೆ, ಗಜಾಸುರ ವಧೆ ಮತ್ತು(ಅಪಸ್ಮಾರನ) ನರ್ತಿಸುವ ನಟರಾಜ ಭಂಗಿಗಳು ಮನಮೋಹಕವಾಗಿವೆ. ಎರಡು ಬದಿಯಲ್ಲಿ ನಂದಿ ಮತ್ತು ಭೃಂಗಿಯ ಶಿಲ್ಪಗಳಿವೆ.

ಸಭಾಮಂಟಪ : ಈ ದೇವಾಲಯದ ಸಭಾಮಂಟಪ ಬಹಳ ವೈಶಿಷ್ಟಪೂರ್ಣವಾಗಿದೆ. ಅದರ ಬಲಗೋಡೆಯಲ್ಲಿ ಒಂದು ಆನೆಯ ಶಿಲ್ಪವಿದ್ದು, ಅದರ ಹಿಂಗಾಲುಗಳನ್ನು ಸರಪಳಿಯಿಂದ ಕಟ್ಟಿ ಹಾಕಲಾಗಿದೆ. ಆನೆಯ ಮುಂದೆ ಮಾವಟಿಗನನ್ನು ಚಿತ್ರಿಸಲಾಗಿದೆ. ಆನೆ ಅವನ ಧೋತರವನ್ನು ಎಳೆಯುತ್ತಿದೆ. ಮಾವುತನು ನಾಚಿಕೆಯಿಂದ ತನ್ನ ಧೋತರವನ್ನು ಹಿಂದಕ್ಕೆ ಎಳೆದುಕೊಳುತ್ತಿರುವ ದೃಶ್ಯ ಸುಂದರವಾಗಿ ಮೂಡಿಬಂದಿದೆ. ಇವನನ್ನು ಕ್ರಿಯಾಶೀಲವೆಂದು ಕರೆಯಬಹುದು. ಎಡ ಭಾಗದಲ್ಲಿ ಒಂದು ಚಿಕ್ಕ ಕೋಟೆಯಿದ್ದು ಆ ಕೋಟೆಯ ಗೋಡೆಯಲ್ಲಿ ಸಾಲಾಗಿ ಯುದ್ಧಕ್ಕೆ ಹೊರಟಿರುವ ಅಶ್ವದಳದ ಚಿತ್ರವಿದೆ. ಅದಕ್ಕೆ ಎದುರಾಗಿ ವೀರನೊಬ್ಬ ಖಡ್ಗ ಗುರಾಣಿ ಹಿಡಿದು ಎದುರಿಸುತ್ತಿದ್ದಾನೆ. ಹೀಗೆ ಸಭಾಮಂಟಪ ನಾಲ್ಕು ಆಧಾರ ಕಂಬಗಳನ್ನು ಒಳಗೊಂಡಿದೆ. ಇದಕ್ಕೆ ದಕ್ಷಿಣಾಭಿಮುಖವಾಗಿ ಮತ್ತು ಪೂರ್ವಾಭಿಮುಖವಾಗಿ ಎರಡು ಬಾಗಿಲುಗಳಿವೆ. ಸಭಾಮಂಟಪದ ಪೂರ್ವಬಾಗಿಲು ಮಹಾಮಂಟಪಕ್ಕೆ ಹೊಂದಿಕೊಂಡಿದ್ದು, ಮಂಟಪಕ್ಕೂ ದೇವಾಲಯದ ಸೌಂದರ್ಯಕ್ಕೂ ಕಳಸಪ್ರಾಯವಾಗಿದೆ. ಇದು ಆರು ಶಾಖೆಗಳಿಂದ ಕೂಡಿದ್ದು, ಬಾಗಿಲ ಕೆಳಗೆ ಮೊದಲಿನ ಮೂರು ಶಾಖೆಗೆ ಹೊಂದಿಕೊಂಡಂತೆ ಶಿವದ್ವಾರಪಾಲಕರಿದ್ದಾರೆ. ನಂತರದ ನಾಲ್ಕು ಶಾಖೆಗಳಿಗೆ ಹೊಂದಿಕೊಂಡಂತೆ ರತಿ ಮನ್ಮಥರ ಮೂರ್ತಿಗಳು ಕಂಡುಬರುತ್ತವೆ.

ಮೇಲೆ ಬಾಗಿಲಲ್ಲಿ ಮೊದಲೆರಡು ಶಾಖೆಗಳು ಮುಂದುವರಿದಿದ್ದು, ನಡುವೆ ಲಲಾಟದಲ್ಲಿ ಜೋಡಿ ಆನೆಗಳಿಂದ ಅಲಂಕೃತಗೊಂಡಿರುವ ಗಜಲಕ್ಷ್ಮಿಯಿದೆ. ನಂತರ ಎರಡು ಕಡೆ ಕಲಶ ರೀತಿಯ ಗೊಂಡೆಗಳು ಜೋತುಬಿದ್ದಿವೆ. ಈ ಬಾಗಿಲು ಅಳತೆಗೆ ತಕ್ಕಂತೆ ಕಪೋತ ಭವ್ಯವಾಗಿ ಶೃಂಗರಿಸಲ್ಪಟ್ಟಿದೆ. ಕಪೋತದ ಒಳಗೆ ತಲೆ ಎತ್ತಿ ನೋಡಿದರೆ ಕಪೋತಕ್ಕೆ ಆಧಾರವಾದಂತೆ ಪಟ್ಟಿಯ ಸರಳುಗಳು ಚಿಕ್ಕ ಚಿಕ್ಕ ಗುಂಡುಗಳಂತೆ ಹೊಂದಿಕೆಯಾಗಿವೆ. ಈ ಸೌಂದರ್ಯ ಆಧುನಿಕ ಕಾಲದ ವೆಲ್ಡಿಂಗ್ ಮಾಡಿದ 'ಪೊಲ್ಡಿಂಗ್ ಡೋರ್' ಮಾಡಿದಷ್ಟು ಸುಂದರವಾಗಿದೆ. ಕಪೋತದ ಎದುರುಭಾಗ ತೋರಣದಿಂದ ಅಲಂಕರಿಸಿದ್ದು, ನಡುವೆ ಸುಂದರ ಕಮಲದ ಮೇಲೆ ಕೀರ್ತಿಮುಖವಿದೆ. ಕಪೋತದ ಮೇಲೆ ಎರಡು ಕಡೆ ಹೊಯ್ಸಳ ಲಾಂಛನಕ್ಕಿಂತ ಭಿನ್ನವಾದ ಅಂದರೆ, ಹುಲಿಯ ಬದಲು ಸಿಂಹವನ್ನು ಮರ್ಧಿಸುವ ವೀರ ಮತ್ತು ಅವನ ಪಕ್ಕದಲ್ಲಿ ದಂಡಧಾರಿಯಾದ ಗುರುವನ್ನು ಚಿತ್ರಿಸಲಾಗಿದೆ. ನಡುವೆ ಋಷಿಗಳು ಅಸೀನರಾಗಿದ್ದಾರೆ. ಅವರ ಕರದಲ್ಲಿ ಜಪಮಾಲೆಗಳಿವೆ. ನಡುವೆ ಎರಡು ಸ್ತ್ರೀಮೂರ್ತಿಗಳು ಇವೆ. ಇವರನ್ನು 'ಋಷಿಗಣ' ಎಂದು ಕರೆದರೂ ತಪ್ಪಾಗಲಾರದು. ಇದರ ಮೇಲೆ 'ದೇವಗಣ'ವಿದೆ. ನಡುವೆ ಬ್ರಹ್ಮ, ವಿಷ್ಣು, ಮಹೇಶ್ವರ

ಶ್ರೀಮೂರ್ತಿಗಳು ಎರಡು ಬದಿಯಲ್ಲಿ ಪಂಚ ಶೈವದ್ವಾರಪಾಲಕರಿಂದ ಅಲಂಕೃತವಾಗಿವೆ. ಬಾಗಿಲಿನ ಪಕ್ಕದಲ್ಲಿ ದೊಡ್ಡದಾದ ಗೋಡೆಗಂಬಗಳಿದ್ದು, ಅವುಗಳ ಮೇಲೆ ವಿಮುಖವಾದ ಶರಭಗಳನ್ನು ನೇತು ಹಾಕಿದಂತೆ ಕೆತ್ತಲಾಗಿದೆ. ಇದನ್ನು ಕೈಲಾಸ ದ್ವಾರದಂತೆ ಕೆತ್ತಲಾಗಿದ್ದು, ಹಾಗೆಯೇ ಕಂಗೊಳಿಸುತ್ತದೆ.

ದಕ್ಷಿಣಬಾಗಿಲು : ಈ ದ್ವಾರವು ಬಹಳ ವೈವಿಧ್ಯಮಯವಾಗಿದ್ದು ವಿಶಿಷ್ಟ ರೀತಿಯಲ್ಲಿ ಕೆತ್ತಲ್ಪಟ್ಟಿದೆ. ಈ ಬಾಗಿಲು ಏಳು ಶಾಖೆಗಳನ್ನು ಒಳಗೊಂಡಿದೆ. ವಜ್ರಶಾಖೆ, ನಾಗಶಾಖೆ, ನರ್ತನಶಾಖೆ, ವಾದ್ಯಗಾರರನ್ನೊಳಗೊಂಡ ಪ್ರೇಮಕಾಮ ಭಾವದ ಭಂಗಿಯ ಚಿತ್ರಗಳಿವೆ. ಪೂರ್ಣಕಂಬವಿರುವ ಗೋಡೆಗಂಬ, ಪ್ರತಿಬಳುಕಿನಲ್ಲಿ ನೃತ್ಯಗಾರರನ್ನು ಸಂಗೀತಗಾರರನ್ನೊಳಗೊಂಡ ಲತಾಶಾಖೆ, ಸಿಂಹಶಾಖೆ ಇದು ದೇಹರಚನೆಯಲ್ಲಿ ಏಕ ಪ್ರಕಾರದ ಸಿಂಹವನ್ನು ಹೋಲುತ್ತಿದ್ದರೆ, ಮುಖಗಳು ವೈವಿಧ್ಯಮಯವಾಗಿವೆ. ಉದಾ - ಮನುಷ್ಯ, ಆನೆ, ಶರಭ, ಹಸು, ಆಡು ಇತ್ಯಾದಿ. ನೇರವಾದ ಲತಾಶಾಖೆ ಬಾಗಿಲಿನ ಕೆಳಗಿನ ಭಾಗ ಎಲ್ಲಾ ಶಾಖೆಗಳಿಗೆ ಹೊಂದಿಕೊಂಡಂತೆ ಒಂದೊಂದು ಸ್ತ್ರೀಮೂರ್ತಿಗಳಿವೆ. ಒಂದು ಕೈಯಲ್ಲಿ ಕಮಂಡಲ, ಇನ್ನೊಂದು ಕೈಯಲ್ಲಿ ಹೂವನ್ನು ಹಿಡಿದು ನಿಂತಿದ್ದಾರೆ. ಇವುಗಳ ಪ್ರಮಾಣಬದ್ಧ ಅಂಗಸೌಷ್ಟವ, ಆಭರಣಗಳ ಅಲಂಕಾರ ವಸ್ತುವಿನ್ಯಾಸ, ಕೇಶಶೃಂಗಾರ ಭಾರತೀಯ ಸ್ತ್ರೀಯ ಸ್ಪಷ್ಟ ಸೌಂದರ್ಯ ಕಲ್ಪನೆ ಮೂಡಿಸುತ್ತವೆ. ದೇವಾಲಯ ಪ್ರವೇಶಿಸುವ ಭಕ್ತರಿಗೆ ಪನ್ನೀರಿನ ಪ್ರೇಕ್ಷಣೆ ಭಾವನೆಯನ್ನು ತರುವಂತಿದೆ. ಬಾಗಿಲ ಮೇಲೆ ಎಲ್ಲಾ ಶಾಖೆಗಳು(ಮತ್ತೊಂದು) ಮುಂದುವರಿದಿದ್ದು ಮಧ್ಯದಲ್ಲಿ ಸುಂದರವಾದ ಗಜಲಕ್ಷ್ಮಿಯಿದೆ. ಇದರ ಮೇಲೆ ಗೋಪುರಾಕೃತಿಯ ಮಂಟಪದ ಮಧ್ಯ ಶಿವನ ನಾಟ್ಯಭಂಗಿಯ ಶಿಲ್ಪವಿದೆ. ಒಂದು ಕಡೆ ಗಣಪತಿ ಮತ್ತೊಂದು ಕಡೆ ರುಂಡಧಾರಿಯಾದ ವ್ಯಕ್ತಿಯ ಚಿತ್ರಗಳಿವೆ. ಸೂಕ್ಷ್ಮ ಕೆತ್ತನೆಯ ವೀಕ್ಷಣೆ ಸೋಜಿಗವೆನಿಸುತ್ತದೆ. ಇದರ ಅಲಂಕಾರಕ್ಕೆ ಭಾದೆ ಬಾರದಿರಲೆಂದು ಮೂರನೇ ಶಾಖೆಯಲ್ಲಿ ಮಿಥುನಶಿಲ್ಪಗಳನ್ನು ಕೆತ್ತಲಾಗಿದೆ.

ಮಹಾಮಂಟಪ : ಇದು ಒಂದು ದೊಡ್ಡದಾದ ಸಭಾಗೃಹವಾಗಿದ್ದು, ಐವತ್ತೆರೆಡು ವಿವಿಧ ರೀತಿಯ ಕಂಬಗಳಿಂದ ಕೂಡಿದ್ದು, ಹನ್ನೆರಡು ಕಂಬ ಅಧಿಷ್ಠಾನದಲ್ಲಿ ಬೇರೆ ಬೇರೆ ಚಿತ್ರಗಳಿಂದ ಕೆತ್ತಲ್ಪಟ್ಟಿವೆ. ಅದರಲ್ಲಿ ನವರಂಗದ ನಾಲ್ಕು ಕಂಬ ಚೌಕ ಮತ್ತು ವೃತ್ತಾಕಾರದಲ್ಲಿವೆ. ವೃತ್ತಾಕಾರದಲ್ಲಿ ಮೂಲ ಅಲಂಕಾರವಿದೆ. ಇದು ಹೊಯ್ಸಳರ ಕಾಲದಲ್ಲಿ ನಿರ್ಮಿತವಾಗಿದೆ ಎಂದು ಕಂಡುಬರುತ್ತದೆ. ಎಲ್ಲಾ ಕಡೆಗೂ ಮುಕ್ತವಾಗಿ ತೆರೆದಿದ್ದು ಪ್ರತಿಭಾಗದಲ್ಲೂ ಚೌಕಾಕಾರವನ್ನು ಹೊಂದಿದೆ.[೧೫] ಒಟ್ಟು ಹನ್ನೆರಡು ಮೂಲೆಗಳನ್ನು ಒಳಗೊಂಡಿದೆ. ಇದು ಎಲ್ಲಾ ಕಡೆಗೂ ಕಕ್ಷಾಸನ ಹೊಂದಿದೆ. ಕಕ್ಷಾಸನದ ಹೊರಭಾಗ ಮೊದಲು ಮೂಲಸ್ಥಾನ, ಉಪಾನ, ಒಂದು ದೊಡ್ಡಪದ್ಮ, ಎರಡು ನೇರವಾದ ಒಳಮುಖ ಒಳಗೊಂಡಿದೆ. ಕಪೋತವು ಯಾವುದೇ ಕೆತ್ತನೆ ಇಲ್ಲದೆ ಕೂಡು ಸಂಯೋಜನೆ ಹೊಂದಿದೆ. ಮೇಲೆ ಒರೆಯಾದ ಸಾದಾ ಆಸನವಿದೆ. ಹೊರ ಭಾಗದ ಕಂಬಗಳೆಲ್ಲ ಕಕ್ಷಾಸನದಲ್ಲಿ ಇವೆ. ಈ ಕಂಬಗಳಿಂದ ಇನ್ನೊಂದು

ತುದಿಯಲ್ಲಿರುವ ಕಂಬಗಳು ನೆಲದ ಮೇಲೆ ನಿಂತಿದ್ದರೂ ಕಕ್ಷಾಸನಕ್ಕೆ ಹೊಂದಿಕೊಂಡಿದೆ. ಮೇಲ್ಛಾವಣಿಯ ಹೊರಭಾಗವು ಕಕ್ಷಾಸನದ ಮೇಲೆ ಬಾಗಿದ ಸಜ್ಜಾದಂತಿದ್ದು ಆಕರ್ಷಕವಾಗಿದೆ. ಅದರ ಮೇಲೆ ಪದ್ಮದಿಂದ ಕೂಡಿದ ಪ್ರಸ್ತಾರದ ಶಿಲಾಕೂಟವಿದೆ. ಈ ಮಂಟಪದ ಪ್ರತಿಯೊಂದು ಕಂಬವೂ ಬೇರೆ ಬೇರೆ ವಿನ್ಯಾಸವನ್ನು ಹೊಂದಿದ್ದರೂ ಸಾಮೂಹಿಕವಾಗಿ ಈ ಕಂಬಸಾಲುಗಳು ಅತ್ಯಂತ ಸುಂದರವೆನಿಸುತ್ತವೆ. ಕೆಲವು ಕಂಬಗಳು ಚೌಕ, ಅಷ್ಟಪೈಲು, ಕೆಲವು ವರ್ತುಲ, ಕೆಲವು ನಕ್ಷತ್ರ, ಕೆಲವು ಗಂಟೆಯಾಕಾರದವು. ಕೆಲಕಂಬಗಳ ತಳದಲ್ಲಿ ಸುಂದರ ಕುಸುರಿ ಕೆಲಸದ ಬಳ್ಳಿಯ ಮಧ್ಯ ಲತಾಂಗಿಯು ನರ್ತಿಸುತ್ತಾಳೆ.[೧೭] ಕಂಬಗಳ ಸೌಂದರ್ಯ ನೋಡುತ್ತಾ ನಿಂತರೆ ಅವು ಮುಗ್ಧರನ್ನಾಗಿಸುತ್ತವೆ. ನೋಡಿದಷ್ಟು ನೋಡಬೇಕೆನಿಸುತ್ತದೆ. ಕಂಬದ ಅಡಿಪಾಯದ ಅರೆಗಳು ಕುಸಿಯದಂತೆ ಸಮಭಾರಕ್ಕಾಗಿ ಕಬ್ಬಿಣದ ಬೆಸುಗೆಗಳನ್ನು ಈಗಲೂ ಅಲ್ಲಲ್ಲಿ ನೋಡಬಹುದು. ಸುಂದರ ಮತ್ತು ಭವ್ಯವಾಗಿಯೂ ಕಾಣಿಸುತ್ತವೆ. ಹೀಗೆ ನವರಂಗ ಅಥವಾ ಮುಖಮಂಟಪ ಎಡ, ಬಲಭಾಗದಲ್ಲಿ ದ್ವಾರಪಾಲಕರಿದ್ದು ದ್ವಾರವು ರತ್ನಶಾಖೆ, ನಾಗಶಾಖೆ, ವಿದ್ಯಾಧರ ಶಾಖೆ ಹಾಗೂ ಕಂಬಶಾಖೆ, ಬಳ್ಳಿಶಾಖೆ, ಪುಷ್ಪಶಾಖೆಗಳಿಂದ ಅಲಂಕೃತಗೊಂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಉತ್ತರಾಂಗದಲ್ಲಿ ಧ್ಯಾನಸಕ್ತರಾಗಿರುವಂತೆ ಗಣಪ ಮತ್ತು ಶಿವನ ರೂಪಗಳನ್ನು ಬಿಡಿಸಲಾಗಿದೆ. ತೆರೆದ ಮಹಾಮಂಟಪದ(ಹಿಂದೆ ವಿವರ ಹೇಳಿದೆ) ಒಳಭಾಗದಲ್ಲಿ ಸುತ್ತಲೂ ಕಕ್ಷಾಸನವಿದೆ. ಕಕ್ಷಾಸನದ ಮೇಲೆ ಹಾಗೂ ಮಹಾಮಂಟಪದಲ್ಲಿ ಒಟ್ಟು ೭೪ ಕಂಬಗಳಿದ್ದರೂ ಕಂಬಗಳು ಹೆಚ್ಚು ಅಲಂಕೃತವಾಗಿವೆ. ಇಲ್ಲಿನ ಕಂಬಗಳಲ್ಲಿ ಒಂಬತ್ತು ಮಾದರಿಯ ಕಂಬಗಳಿದ್ದು ಅವುಗಳು ಚೌಕ, ಅಷ್ಟ ಮುಖ, ನಕ್ಷತ್ರಾಕಾರ, ಗಂಟೆಯಾಕಾರವಾಗಿವೆ. ಎರಡು ಅರೆ(ಅರ್ಧ) ಕಂಬಗಳ ಮೇಲೆ ಮಕರ ತೋರಣ ಇರುವಂತೆ ಮಾಡಿ ಇದರ ಮಧ್ಯದಲ್ಲಿ ಧಾರ್ಮಿಕ ಹಾಗೂ ಲೌಕಿಕ ಶಿಲ್ಪಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ನೃತ್ಯಾಶಿವ, ನೃತ್ಯಗಣಪ, ಹಿರಣ್ಯಕಶ್ಯಪನನ್ನು ಕೊಲ್ಲುವ ನರಸಿಂಹ, ರತಿ, ಮನ್ಮಥ, ಭೈರವಿ, ಸರಸ್ವತಿ, ನೃತ್ಯದಲ್ಲಿ ತೊಡಗಿದ ಸ್ತ್ರೀ, ದರ್ಪಣ ಸುಂದರಿ, ಜೋಳನ್ನು ಕೈಯಲ್ಲಿ ಹಿಡಿದಿರುವ ಸ್ತ್ರೀ ಹಾಗೂ ಕೊಂತಿಯೊಂದಿಗಿನ ಸ್ತ್ರೀ ಪ್ರಮುಖವಾಗಿವೆ. ಮಧ್ಯದಲ್ಲಿ ಮುಚ್ಚಿಗೆ ನಾಲ್ಕು ಹಂತಗಳಿದ್ದು, ಅದರಲ್ಲಿ ರೇಖಾಕೃತಿಗಳ ಮತ್ತು ಪುಷ್ಪಗಳ ಅಲಂಕರಣೆ ಮಾಡಲಾಗಿದೆ. ಕೆಳಗಿನ ಹಂತದಲ್ಲಿ ಎರಡು ಕೀರ್ತಿಮುಖಗಳನ್ನು ಹಾಗೂ ಅವುಗಳ ಬದಿಗೆ ಲಂಬವಾಗಿ ಆಗ್ನೇಯ ನೈರುತ್ಯ ಭಾಗದಲ್ಲಿ ಕೋತಿಯೊಂದಿಗೆ ಸ್ತ್ರೀ ವೃತ್ತಾಕಾರದ ಮುಚ್ಚಿಗೆಯ ಮೇಲ್ಭಾಗದಲ್ಲಿ ಜನಾರ್ಧನ ಹಾಗೂ ಕಮಲ ಪುಷ್ಪಗಳ ಅಲಂಕರಣೆ ಇದೆ. ಪ್ರವೇಶದ್ವಾರವು ನವರಂಗದ ದಕ್ಷಿಣಕ್ಕಿದೆ. ಇದರ ದ್ವಾರವು ವಿವಿಧ ಶಾಖೆಗಳಿಂದ ಕೂಡಿದ್ದು ಮೇಲ್ಭಾಗದಲ್ಲಿ ಪೂರ್ಣ ಕುಂಭದ ಆಕಾರ, ಕೆಳಭಾಗದಲ್ಲಿ ದುಂಡಾಕಾರ, ಮೂರು ಶಾಖೆ ಹೊಂದಿದ್ದು, ಲಲಾಟದವರೆಗೂ

ಮುಂದುವರೆದಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಗಜಲಕ್ಷ್ಮಿಯ ಮೇಲ್ಭಾಗದ ಉತ್ತರಾಂಗದ ಮಧ್ಯದಲ್ಲಿ ಅನಂತ ಪದ್ಮನಾಭವಿದ್ದು, ಈತನ ಪಕ್ಕದಲ್ಲಿ ವಾದ್ಯದವರು, ನೃತ್ಯದವರು ಇದ್ದಾರೆ. ಇದರ ಮೇಲ್ಭಾಗದ ಕಪೋತ, ಕೆಳಭಾಗದ ಕುಡ್ಯವು ಪುಷ್ಪಗಳಿಂದ ಅಲಂಕೃತಗೊಂಡಿದೆ. ಸ್ತಂಭಗಳಿಂದ ಹೊರ ಹೊಮ್ಮಿದ ಸಿಂಹ ತೋರಣವಿದ್ದು ಇದರ ಮಧ್ಯದಲ್ಲಿ ನಾಟ್ಯ ಶಿವನಿದ್ದಾನೆ. ಪುರುಷ ವಾದ್ಯದವರು, ಸ್ತ್ರೀ ನರ್ತಕಿಯರು ಶಿವನ ಪಕ್ಕದಲ್ಲಿ ಇದ್ದಾರೆ. ಎಡಭಾಗದಲ್ಲಿ ನಿಂತ ಗಣೇಶ, ಬಲಭಾಗದ ಲಿಂಗವೊಂದರ ಬಳಿ ಇಬ್ಬರು ಪುರುಷರಿದ್ದಾರೆ. ಹಾಗೂ ಚಾಮರ ಹಿಡಿದ ಸ್ತ್ರೀ ಅಂಜಲಿ ಮುದ್ರೆಯಲ್ಲಿರುವ ಪುರುಷ ಮತ್ತು ಕತ್ತಿ ಗುರಾಣಿ ಹಿಡಿದ ಪುರುಷನೊಬ್ಬನ ಶಿಲ್ಪ ಇದೇ ಭಾಗದಲ್ಲಿದೆ. ಈ ದ್ವಾರದ ಶ್ರೇಷ್ಠ ಭಾಗವೆಂದರೆ ದ್ವಾರಬಂಧದ ಮೇಲ್ಭಾಗದಲ್ಲಿ ಪಟ್ಟಿಕೆಯಂತೆ ಅಡ್ಡವಾಗಿರುವ ಭಾಗವನ್ನು 'ಲಲಾಟ' ಎಂದು ಕರೆಯಬಹುದು. ಈ ಭಾಗವನ್ನು 'ಮಸೂರ'ಕ ಪತಂಗ ಎಂದು ಕರೆಯಲಾಗಿದೆ. ಇದರಲ್ಲಿ ಮಧ್ಯೆ ಚೌಕ ಅಥವಾ ಆಯತಾಕಾರದ ದಪ್ಪ ಫಲಕವಿರುವುದು, ಇದನ್ನು ಮಂಗಳಫಲಕ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಲಲಾಟ ಫಲಕ ಎಂದು ಸಾಮಾನ್ಯವಾಗಿ ಕರೆಯುವುದು ರೂಢಿ. ಇದರ ಮೇಲೆ ಬಹುಪಾಲು ಆ ದೇವಾಲಯದ ಮೂಲ ಮೂರ್ತಿಗೆ ಸಂಬಂಧಿಸಿದ ಬಿಂಬವು ಇರುತ್ತದೆ. ಈ ಬಿಂಬಕ್ಕೆ ಲಲಾಟಬಿಂಬ ಕರೆಯಬಹುದು. ಈ ಬಿಂಬವು ಯಾವ ದೇವಾಲಯ ಯಾವ ಧರ್ಮಕ್ಕೆ ಸೇರಿದೆ ಎಂಬುದನ್ನು ಸೂಚಿಸುತ್ತದೆ. ಶಿವಾಲಯಗಳಲ್ಲಿ ಲಿಂಗ ಅಥವಾ ಶಿವನ ರೂಪಗಳಿದ್ದರೆ, ವೈಷ್ಣವ ದೇವಾಲಯಗಳಲ್ಲಿ ವಿಷ್ಣುವಿನ ವಾಹನ ಗರುಡನನ್ನು ಕೆತ್ತಿರುತ್ತಾರೆ.

ದೇವಾಲಯದ ಎಡಬದಿಯಲ್ಲಿರುವ ಐದು ಶಿವಲಿಂಗಗಳು ಕಪ್ಪುಶಿಲೆಯಿಂದ ಕೆತ್ತಲ್ಪಟ್ಟಿವೆ. ಆದರೆ ಈಗ ಇವು ಎಲ್ಲಾ ದೇವಾಲಗಳಲ್ಲಿ ಕಂಡುಬರದೆ, ಕೇವಲ ಎರಡು ದೇವಾಲಯಗಳಲ್ಲಿವೆ. ಇವು ಒರಟಾದ ಕಲ್ಲಿನಿಂದ ಕೂಡಿವೆ. ಇವು ಗರ್ಭಗೃಹವನ್ನಷ್ಟೇ ಹೊಂದಿವೆ. ಈ ದೇವಾಲಯದ ಬಲಭಾಗದಲ್ಲಿ ಶಾಸನಗಳಿವೆ. ಇದರ ಬಲಭಾಗದಲ್ಲಿ ಚಿಕ್ಕ ಗರ್ಭಗುಡಿಯೊಳಗೆ ಎರಡು ಮೂರ್ತಿಗಳಿದ್ದು, ಒಂದು ಸೂರ್ಯ ಮೂರ್ತಿ, ಇನ್ನೊಂದು ವಿಷ್ಣು ಮೂರ್ತಿಯಾಗಿದೆ. ಇವುಗಳ ಕೆಲವೊಂದು ಭಾಗ ಹಾಳಾಗಿವೆ. ಇವು ದಕ್ಷಿಣಕ್ಕೆ ಮುಖಮಾಡಿನಿಂತ ವಿಗ್ರಹಗಳಾಗಿವೆ. ದೇವಾಲಯದ ಎದುರುಗಡೆ ದೀಪಸ್ತಂಭ, ಎತ್ತರವಾಗಿನಿಂತ ವಿಗ್ರಹಗಳು, ದೀಪಸ್ತಂಭ ಎತ್ತರವಾದ ಕಟ್ಟೆಯ ಮೇಲೆ ಇದೆ. ಇದರ ಪಕ್ಕದಲ್ಲಿ ಒಂದು ಕಲ್ಲಿನ ಬಾವಿ ಚೌಕಾಕಾರವಾಗಿದೆ. ಇದರಲ್ಲಿ ಈಗಲೂ ನೀರಿದೆ. ಇದಕ್ಕೆ ಮಜ್ಜನ ಬಾವಿ ಎಂದು ಕರೆಯುತ್ತಾರೆ. ದೀಪಸ್ತಂಭದ ಮೇಲೆ ಯಾವುದೇ ಕೆತ್ತನೆ ಇಲ್ಲ. ಹೀಗೆ ಕಲ್ಲೇಶ್ವರ ದೇವಾಲಯವು ಚಾಲುಕ್ಯರ ವಾಸ್ತು ಶಿಲ್ಪಕ್ಕೆ ಉತ್ತಮ ಉದಾಹರಣೆಯಾಗಿದೆ. ಈ ದೇವಾಲಯದ ಜೊತೆಗೆ ದೇವಸ್ಥಾನದ

[illegible]

[illegible]

ಉತ್ತರ ಭಾಗದಲ್ಲಿ ಶಿವಲಿಂಗಗಳು ಕಂಡಬಂದಿವೆ. ಅವುಗಳು ಸೀತೇಶ್ವರಲಿಂಗ, ರಾಮಲಿಂಗ, ವಿಷ್ಣುಲಿಂಗ ಮತ್ತು ವಿರೂಪಾಕ್ಷಲಿಂಗ ಎಂದು ಕರೆಯುತ್ತಾರೆ. ಈ ಗುಡಿಗಳು ಅಪೂರ್ಣವಾಗಿದ್ದು ನಂತರ ಕಾಲದಲ್ಲಿ ಸೇರ್ಪಡೆಯಾಗಿವೆ ಎಂದು ಕಂಡುಬರುತ್ತದೆ.

ಮಹಾಮಂಟಪದ ಕಂಬಗಳ ಮದನಿಕೆಯರು

ಮಂಟಪದ ಮಧ್ಯಭಾಗದಲ್ಲಿ ನಾಲ್ಕು ಕಂಬಗಳು ಬಹಳ ಸುಂದರ ಕೆತ್ತನೆಯಿಂದ ಕೂಡಿವೆ. ಅವುಗಳ ಕೆಳಭಾಗದಲ್ಲಿ ಚೌಕಾಕೃತಿಯಿಂದ ಕೂಡಿದ ನಾಲ್ಕು ಮದನಿಕೆ ಮೂರ್ತಿಗಳಿವೆ. ಅವು ಸುಂದರ ಚಿಕ್ಕ ಮಂಟಪಗಳ ನಡುವೆ ಇದ್ದು, ಚಿಕ್ಕಕಂಬಗಳ ಮೇಲೆ ಮಕರತೋರಣ ಕೀರ್ತಿಮುಖದಿಂದ ಕೊನೆಗೊಂಡಿವೆ. ಬಲಗಡೆಯ ಕಂಬಗಳಿಂದ ಆರಂಭಿಸಿದರೆ ಈ ಕೆಳಗಿನ[೭] ಶಿಲಾಬಾಲಿಕೆಯರನ್ನು ಕಾಣಬಹುದು.

ಸುಂದರಿ ಮತ್ತು ಚೇಳು : ಇಲ್ಲಿ ಅಲಂಕರಿಸಿಕೊಳ್ಳುತ್ತಿರುವ ಯುವತಿಯು ತನ್ನ ಸೀರೆಯ ಮೇಲೆ ಚೇಳು ಇರುವುದನ್ನು(ಮೇಲಕ್ಕೆ ಬರುವುದು) ಗಮನಿಸಿ ತನ್ನ ಸೀರೆಯನ್ನು ಎಡಗೈಯಲ್ಲಿ ಹಿಡಿದು ರಭಸವಾಗಿ ಕೊಡುವುತ್ತಾಳೆ. ಚೇಳು ಸೀರೆಯ ತುದಿಗೆ ಅಂಟಿಕೊಂಡಿದೆ. ಚೇಳಿನ ಭಯದಿಂದ ಸೀರೆಯನ್ನು ಕೊಡವಿಕೊಳ್ಳುವುದರ ಜೊತೆಗೆ ಹೆಣ್ಣಿನ ನಗ್ನ ಸೌಂದರ್ಯವನ್ನು ಶಿಲ್ಪಿ ತೋರಿಸಿದ್ದಾನೆ. ಸುಂದರವಾದ ಅಂಗ ಸೌಷ್ಟವ ಹೊಂದಿದ್ದು, ಸುಂದರ ಸ್ತ್ರೀಯ ಲಕ್ಷಣಗಳನ್ನು ಇಲ್ಲಿ ತೋರಿಸಲಾಗಿದೆ.

ದರ್ಪಣ ಸುಂದರಿ : ಈ ಕಂಬದಲ್ಲಿ ಯುವತಿಯೋರ್ವಳು ತನ್ನ ಅಲಂಕಾರವನ್ನು ಮುಗಿಸಿಕೊಂಡು ದರ್ಪಣದಲ್ಲಿ ತನ್ನ ಸೌಂದರ್ಯದ ಸೊಬಗನ್ನು ಸವಿಯುತ್ತಿದ್ದಾಳೆ. ಬಲಗಾಲನ್ನು ನೆಲಕ್ಕೆ ಊರಿ ನಿಂತಿದ್ದು ಎಡಗಾಲನ್ನು ಸ್ವಲ್ಪ ಮೇಲೆತ್ತಿ ಕೊಂಡು ಓರೆಯಾಗಿ ನಿಂತಿದ್ದಾಳೆ. ಎಡಗಡೆ ಸೇವಕಿ ಅವಳ ಅಲಂಕಾರಕ್ಕಾಗಿ ಹಾರವನ್ನೆತ್ತಿಕೊಂಡು ಸಿದ್ಧವಾಗಿ ನಿಂತಿದ್ದಾಳೆ.

ನರ್ತಕಿ : ಯುವತಿಯು ತನ್ನ ಎಡಗಾಲನ್ನು ಸ್ವಲ್ಪ ಮೇಲೆತ್ತಿ ನಾಟ್ಯಭಂಗಿಯಲ್ಲಿ ನಿಂತಿದ್ದಾಳೆ. ಎರಡೂ ಪಕ್ಕದಲ್ಲಿ ಮೃದಂಗವಾದಕರಿದ್ದಾರೆ.

ನರ್ತಕಿ : ತನ್ನ ಪ್ರಿಯಕರನ ನಿರೀಕ್ಷೆಯಿಂದ ಕೈಯಲ್ಲಿ ಹಾರಹಿಡಿದುಕೊಂಡು ನರ್ತನದ ಒಂದು ಭಂಗಿಯಲ್ಲಿ ನಿಂತಿದ್ದಾಳೆ.

ಗಣಪತಿ : ಬಲಗಡೆಯ ಇನ್ನೊಂದು ಕಂಬದ ವಿಗ್ರಹಗಳು ದೇವತಾ ಮೂರ್ತಿಗಳಾಗಿವೆ. ಪಶ್ಚಿಮಾಭಿಮುಖ ವಾಗಿ ತನ್ನ ಎಡಗಾಲನ್ನು ಸ್ವಲ್ಪ ಒರೆಯಾಗಿ ಚಾಚಿ ತನ್ನ ಬಲಗಾಲನ್ನು ಸ್ವಲ್ಪ ಹಿಂದಕ್ಕೆ ಸರಿಸಿಕೊಂಡು ಗಣಪತಿ ನಿಂತಿದ್ದಾನೆ.

ನರಸಿಂಹ : ಉಗ್ರನರಸಿಂಹ ಹಿರಣ್ಯಕಶ್ಯಪನನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಕರಳು ಬಗೆಯುತ್ತಿದ್ದಾನೆ. ಅವನ ಎಡಗಡೆ ಗರುಡವಿದೆ. ಬಲಗಡೆಗೆ ಪ್ರಹ್ಲಾದ ಕೈಮುಗಿದು ನಿಂತಿದ್ದಾನೆ.

ನಟರಾಜ : ನಟರಾಜನು ತನ್ನ ಕೈಗಳಲ್ಲಿ ತ್ರಿಶೂಲ, ಡಮರುಗ, ರುದ್ರಾಕ್ಷಿ ಸರವನ್ನು ಹಿಡಿದಿರುವನು. ಎರಡು ಕಡೆ ಮೃದಂಗವಾದಕರಿದ್ದಾರೆ.

ದುರ್ಗೆ : ಈ ವಿಗ್ರಹದ ಮುಖದಲ್ಲಿ ಗಾಂಭೀರ್ಯವಿದ್ದು ದುರ್ಗೆಯು ಕಿರೀಟ ಧಾರೆಯಾಗಿ ನಿಂತಿದ್ದಾಳೆ. ಕೈಯಲ್ಲಿ ತ್ರಿಶೂಲ, ಖಡ್ಗ, ಡಮರುಗ, ರುಂಡ ಮತ್ತು ನಾಗಗಳು ಇವೆ. ಬಲಗಡೆಗೆ ಮೃದಂಗ ವಾದಕನಿದ್ದರೆ, ಎಡಗಡೆಗೆ ಸ್ತ್ರೀಯೊಬ್ಬಳು ಅರತಿ ಎತ್ತಿ ಹಿಡಿದ್ದಾಳೆ.

ಅಲಂಕಾರ : ಎಡಭಾಗದ ಪೂರ್ವ ಕಂಬದ ಪಶ್ಚಿಮ ಭಾಗದಲ್ಲಿ ತರುಣಿಯೊಬ್ಬಳು ಎದುರು ಮುಖವಾಗಿ ನಿಂತು, ತನ್ನ ಅಲಂಕಾರವನ್ನು ಪ್ರದರ್ಶಿಸುತ್ತಿದ್ದಾಳೆ.

ನೃತ್ಯಗಾತಿ : ಇದೇ ಕಂಬದ ದಕ್ಷಿಣಭಾಗದಲ್ಲಿ ತರುಣಿಯೊಬ್ಬಳು ನೃತ್ಯಭಂಗಿಯಲ್ಲಿ ತನ್ನ ಎಡಗಾಲನ್ನು ಸ್ವಲ್ಪ ಮೇಲೆತ್ತಿ ನಿಂತಿರುವ ಶಿಲ್ಪ ಬಹಳ ಸುಂದರವಾಗಿದೆ.

ರಸಿಕ ಶಬರಿ : ಈಕೆಯ ದೇವರ ಪೂಜೆಗೆ ಪುಷ್ಪಗಳನ್ನು ಸಂಗ್ರಹಿಸುತ್ತಿರುವಂತೆ ತೋರುತ್ತದೆ. ಎಡಗೈಯಲ್ಲಿ ಬುಟ್ಟಿ ಹಿಡಿದಿದ್ದಾಳೆ. ಬಲಗೈಯಿಂದ ಪುಷ್ಪ ಕೀಳುವ ಭಾಗ ಮುರಿದುಹೋಗಿದೆ.

ಸುಂದರಿ ಮತ್ತು ಕಪಿ : ಸುಂದರ ಯುವತಿಯು, ಕಪಿಯ ಕೀಟಲೆಗೆ ಒಳಗಾಗಿದ್ದಾಳೆ. ಅವಳ ಸೀರೆಯನ್ನು ಎಳೆಯುತ್ತಾ, ಅವಳೆಡೆಗೆ ನೋಡಿ ಕಪಿ ಹಲ್ಲು ಕಿರಿಯುತ್ತಿದೆ. ಅವಳ ಸೀರೆ ಜಾರುವುದರಿಂದ ಅವಳು ಲಜ್ಜೆಯಿಂದ ತನ್ನ ಕಾಲನ್ನು ಅಡ್ಡಲಾಗಿಟ್ಟು ಕೊಂಡಿದ್ದಾಳೆ. ಎಡಗೈಯಲ್ಲಿ ತನ್ನ ಸೀರೆಯನ್ನು ಎಳೆದುಕೊಳ್ಳುತ್ತಾ ಬಲಗೈಯಲ್ಲಿರುವ ಹೂಗೊಂಚಲಿನಿಂದ ಕಪಿಯನ್ನು ಹೊಡೆಯುತ್ತಿದ್ದಾಳೆ. ಇದೇ ರೀತಿಯ ಶಿಲ್ಪವನ್ನು ಹೊಯ್ಸಳ ಕಲೆಯಲ್ಲಿ ಕಾಣಬಹುದು. ಕಪಿ ಒಂದು ನಿಮಿತ್ತ ಮಾತ್ರ.

ರತಿ ಮನ್ಮಥರು : ಎಡಗಡೆ ಕಂಬದ ಪಶ್ಚಿಮ ಭಾಗದಲ್ಲಿ ರತಿ ಮನ್ಮಥರು ನಿಂತ ಭಂಗಿಯ ಚಿತ್ರವಿದೆ. ಮನ್ಮಥ ಒಂದು ಕೈಯಲ್ಲಿ ಕುಸುಮ ಬಾಣ ಮತ್ತೊಂದು ಕೈಯಲ್ಲಿ ಧನಸ್ಸು ಹಿಡಿದಿದ್ದಾನೆ.

ಮೃದಂಗನೃತ್ಯಗಾರ್ತಿ : ಈ ನೃತ್ಯಗಾತಿಯು ತನ್ನ ಎಡಗೈಯಲ್ಲಿ ಮೃದಂಗವನ್ನಿಟ್ಟುಕೊಂಡು ಬಲಗೈಯಿಂದ ಬಾರಿಸುತ್ತಾ ನೃತ್ಯ ಮಾಡುತ್ತಿದ್ದಾಳೆ.

ಸರಸ್ವತಿ : ಈಕೆಯ ಎಡಗೈಯಲ್ಲಿ ಚಿನ್ಮುದ್ರೆಯಿದೆ. ಬಲಗೈಯಲ್ಲಿ ಮಣಿಸರವಿದೆ. ಎರಡೂ ಕಡೆ ಚಾಮರಬೀಸುವ ಸ್ತ್ರೀಯರಿದ್ದಾರೆ.

ನಾಗವೀಣೆ ನೃತ್ಯ : ಉದ್ದನೆಯ ತೆಳ್ಳನೆಯ ನಾಗವೀಣೆಯನ್ನು ಎಡಗೈಯಲ್ಲಿ ಹಿಡಿದು, ಬಲಗೈಯಿಂದ ಬಾರಿಸುತ್ತ ನೃತ್ಯ ಮಾಡುತ್ತಿದ್ದಾಳೆ.

ಹೀಗೆ ನಾಲ್ಕು ಕಂಬದಲ್ಲಿರುವ ಈ ಶಿಲ್ಪಗಳನ್ನು ಗಮನಿಸುತ್ತಾ ಹೋದರೆ ನಮಗೆ ಬೇಲೂರಿನ ಚನ್ನಕೇಶವದೇವಾಲಯದ ನವರಂಗದ ದೇವಸ್ಥಾನದ ಹೊರಭಾಗದಲ್ಲಿ ಕೆತ್ತಿರುವ ಶಿಲ್ಪಗಳು ನೆನಪಾಗುತ್ತವೆ.

ಭುವನೇಶ್ವರಿ : ಈ ನಾಲ್ಕು ಮದನಿಕ ಕಂಬಗಳ ಮಧ್ಯ ಭಾಗವನ್ನು 'ರಂಗಮಂಟಪ' ಅಥವಾ ಭುವನೇಶ್ವರಿ ಎಂದು ಕರೆಯಬಹುದು. ಇದರ ಮೇಲ್ಛಾವಣಿ ಬಹಳ ಸುಂದರವಾಗಿ ಕೆತ್ತಲ್ಪಟ್ಟಿದೆ. ಅರ್ಧಗೋಳಾಕೃತಿಯ ಮೇಲ್ಛಾವಣಿ ನಾಲ್ಕು ಹಂತಗಳನ್ನು ಒಳಗೊಂಡಿದ್ದು, ಪ್ರತಿ ಹಂತದಲ್ಲೂ ಚಿಕ್ಕ ಚಿಕ್ಕ ಅರ್ಧಗೋಳಾಕೃತಿಗಳಿದ್ದು, ಅವುಗಳ ಮಧ್ಯ ಹೂ ಮೊಗ್ಗಿನ ರೀತಿ ಗುಂಡುಗಳನ್ನು ಜೋಡಿಸಲಾಗಿದೆ. ಕೆಳಗಿನ ಹಂತದಲ್ಲಿ ಎಂಟು ಕೀರ್ತಿ ಮುಖಗಳು ಅಲಂಕರಿಸಲ್ಪಟ್ಟು, ಅಷ್ಟದಿಕ್ಕಪಾಲಕರಿಗೆ ಪ್ರಭಾವಳಿ ಒದಗಿಸಿದೆ. ಅವುಗಳ ಮೇಲೆ ಅಷ್ಟದಿಕ್ಕಪಾಲಕರು ತಮ್ಮ ಸತಿಯರ ಸಮೇತ ವಾಹನ ರೂಢರಾಗಿ ಆಯುಧಗಳನ್ನು ಹಿಡಿದಿದ್ದಾರೆ. ಮೂರನೆ ಹಂತದಲ್ಲಿ ಆಗ್ನೇಯ ಮತ್ತು ನೈರುತ್ಯ ದಿಕ್ಕಿನಲ್ಲಿ ನರ್ತಕಿಯರ ವಿಗ್ರಹಗಳನ್ನು ಜೋಡಿಸಲಾಗಿದ್ದರೆ, ವಾಯುವ್ಯ ಮತ್ತು ಈಶಾನ್ಯ ದಿಕ್ಕಿನಲ್ಲಿ ಸುಂದರಿ ಮತ್ತು ಕಪಿಯ ಕೆತ್ತನೆ ಅಲಂಕರಣಗೊಂಡಿವೆ. ಒಂದು ದೊಡ್ಡದಾದ ಕಮಲದ ಮೊಗ್ಗು ಜೋತು ಬಿದ್ದ ಶಿಲ್ಪವು ಕಳೆದ ಶತಮಾನದ ಕೊನೆವರೆಗೂ ಇದ್ದಿತ್ತು. ಆದರೆ ಈಗದು ಇಲ್ಲ. ಆದ್ದರಿಂದ ದಿಕ್ಕಸೂಚಕದ ಈ ಭಾಗವನ್ನು ಭುವನೇಶ್ವರಿ ಎನ್ನಿಸಿದೆ. ಇನ್ನೂ ಮಹಾಮಂಟಪದಲ್ಲಿ ಮೂರು ಅಡಿ ಎತ್ತರದ ನಂದಿ ಮನಮೋಹಕವಾಗಿದೆ. ಸರಳವಾದ ಗೆಜ್ಜೆ, ಹಾರ, ನಡುವೆ ಗಂಟೆ, ಅದರ ಗಾಂಭೀರ್ಯಕ್ಕೊಂದು ಮೆರೆಗು ನೀಡಿದ ಪ್ರಮಾಣಬದ್ಧ ಅವಯವಗಳು. ಆಕರ್ಷಕ ಮುಖ ಮಂಡಲ ನೋಡುಗರ ಮನಸೂರೆಗೊಳ್ಳುವಂತಿದೆ.

೨. ಇಷ್ಟಲಿಂಗ ದೇವಾಲಯ

ಇದು ಕೆರೆಯಕೋಡಿಯ ಹತ್ತಿರ ಒಂದು ದಿಬ್ಬದ ಮೇಲೆ ಇದೆ. ಈ ದಿಬ್ಬದ ಎತ್ತರ ಸುಮಾರು ಮೂರು ಮೀಟರು ಇದೆ. ಈ ದಿಬ್ಬದ ಮೇಲೆ ಒಂದು ಅಪರೂಪದ ಈಶ್ವರ(ಮೂರ್ತಿ) ಲಿಂಗವಿದೆ. ಈ ದೇವಾಲಯ ಗರ್ಭಗೃಹ ಮತ್ತು ಅಂತರಾಳ ಹೊಂದಿದೆ. ಸಾಮಾನ್ಯವಾಗಿ ಈಶ್ವರ ಲಿಂಗದ ಪೀಠದ ಕೆಳಗೆ ಯಾವ ಶಿಲ್ಪವಿರುವುದಿಲ್ಲ. ಆದರೆ ಈಶ್ವರ ಲಿಂಗದ ಪೀಠದ ಕೆಳಗೆ ಒಂದು ಸಿಂಹವನ್ನು ಕೆತ್ತಲಾಗಿದೆ. ಈ ಸಿಂಹವು ಪೀಠದ ಭಾರವನ್ನು ತನ್ನ ಶಿರದ ಮೇಲೆ ಹೊತ್ತಂತೆ ಕೆತ್ತಲಾಗಿದೆ. ಗರ್ಭಗೃಹ ದ್ವಾರ ಚೌಕಟ್ಟು, ಜಾಲಂಧರದಿಂದ ಕೂಡಿದ್ದು, ಕಲಾತ್ಮಕವಾಗಿದೆ. ಇಲ್ಲಿಯೂ ಸುಂದರ ರಂಧ್ರಗಳಲ್ಲಿ ಸಣ್ಣ ಬಿಂಬಗಳನ್ನು ಕಲಾ ಪ್ರೇಮಿಗಳು ತೂರಿಸಿದ್ದಾರೆ.! ಈಗ ಅಳಿದುಳಿದಿರುವ ಗರ್ಭಗುಡಿ ಮತ್ತು ಅದರ

ಎತ್ತರ ದಿಬ್ಬವನ್ನು ನೋಡಿದಾಗ ಇದೊಂದು ತುಂಬಾ ಪ್ರಮುಖವಾದ ದೇವಾಲಯವಾಗಿರಬೇಕು ಎನಿಸುತ್ತದೆ. ಕೆರೆಯ ಕೆಳಗೆ ಕಲ್ಲೇಶ್ವರ ಕೆರೆಯ ನೀರಿನ ಮಧ್ಯ ಇನ್ನೊಂದು ಸುಂದರ ಈಶ್ವರ ದೇವಾಲಯವನ್ನು ಚಾಲುಕ್ಯರು ನಿರ್ಮಿಸಿದ್ದಾರೆ.

ಇದು ಯಾವುದೇ ರೀತಿಯ ರಕ್ಷಣೆ ಇಲ್ಲದೆ ದನಗಾಹಿಗಳ ಮತ್ತು ಇತರರ ಕೈಗೆ ಸಿಕ್ಕು ವಿರೂಪ ಗೊಂಡಿದೆ. ಈಗ ಚಿಕ್ಕ ಗರ್ಭಗುಡಿಯೊಂದನ್ನು ಮಾತ್ರ ನೋಡಲು ಸಾಧ್ಯವಾಗಿದೆ. ಇದನ್ನು ೧೧ನೇ ಶತಮಾನದಲ್ಲಿ ನಿರ್ಮಿಸಲಾಗಿದೆ.

೩. ಸೂರ್ಯದೇವಾಲಯ

ಕಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಬಾವಿಯ ಪಕ್ಕದಲ್ಲಿ ಮಹಾಮಂಟಪದ ಎದುರಿನಲ್ಲಿಯೇ ಒಂದು ಚಿಕ್ಕ ಆಕರ್ಷಕ ಗುಡಿ ಇದೆ. ಇದೇ ಸೂರ್ಯದೇವಾಲಯ ದೇವಾಲಯವಿದೆ. ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಈ ಮೂರ್ತಿ ಕಿರೀಟ ಮುಕುಟಧಾರಿಯಾಗಿದೆ. ಇದು ಗರ್ಭಗೃಹ ಅಂತರಾಳವನ್ನೊಳಗೊಂಡಿದ್ದು, ಹೊರಭಾಗವೆಲ್ಲ ಗೋಡೆಗಂಭಗಳಿಂದ ಶೃಂಗರಿಸಿದೆ. ಮಕರ ಕುಂಡಲ, ಕಂಠಾಭರಣ, ಯಜ್ಞೋಪವೀತಗಳಿದ್ದು, ಎಡಗಾಲಿನ ಮೇಲೆ ಇಳಿಬಿದ್ದ ಉಪವೀತ, ವೈಜಯಂತಿಹಾರ ಮತ್ತು ಉದರಬಂಧವನ್ನು ಈ ಮೂರ್ತಿಧರಿಸಿದೆ. ದ್ವಿಭೂಜದಾರಿಯಾದ ಈ ಮೂರ್ತಿಗೆ ಭುಜಬಂಧ ಕೇಯಾರ ಕೈ ಕಡಗಗಳಿದ್ದು, ಕೈಗಳಲ್ಲಿ ಕಮಲಗಳನ್ನು ಹಿಡಿದು ಸಮಭಂಗಿಯಲ್ಲಿ ನಿಂತಿದ್ದಾನೆ. ಮಣಿಸರ ದಿಂದ ಅಲಂಕೃತವಾದ ಇಳಿವಸ್ತ್ರ ಇದ್ದು ದಪ್ಪನೆಯ ಕಾಲ್ಕಡಗ, ಸೊಂಟಪಟ್ಟಿಯನ್ನು ಧರಿಸಿದ್ದಾನೆ. ಸುತ್ತಲು ಮಕಟ ತೋರಣದ ಪ್ರಭಾವಳಿ ಇದೆ. ಮೂರ್ತಿಯ ಎಡಗಾಲಿನ ಬಳಿ ಇರುವ ಉಷೆಯ ಎಡಗೈಯಲ್ಲಿ ಚಾಮರ, ಬಲಗೈಯನ್ನು ಕಟ್ಯಾವಲಂಬಿತವಾಗಿರುವಂತೆ ಕೆತ್ತಲಾಗಿದೆ. ಇದೇ ರೀತಿ ಈ ಮೂರ್ತಿಯ ಬಲಗಾಲಿನ ಬಳಿ ಇರುವ ಪ್ರತ್ಯಷೆಯು ತನ್ನ ಬಲಗೈ ಚಾಮರ ಹಿಡಿದು, ಎಡಗೈ ಕಟ್ಯಾವಲಂಬಿತವಾಗಿರುವ ರೀತಿಯಲ್ಲಿ ಕೆತ್ತಲಾಗಿದೆ. ಪೀಠದಲ್ಲಿ ಸಪ್ತಕುದುರೆಗಳನ್ನು ಓಡಿಸುತ್ತಿರುವ ಅರುಣನಿದ್ದು, ಆ ರಥವೇರಿದ ಮೇಲೆ ಸೂರ್ಯ ಐದು ಅಡಿ ಎತ್ತರದಲ್ಲಿ ನಿಂತಿದ್ದಾನೆ. ಸುತ್ತಲೂ ಸರ್ಪಾಲಂಕೃತ ಪ್ರಭಾವಳಿ ಇದ್ದು, ಅದರಲ್ಲಿ ದ್ವಾದಶ, ಆದಿತ್ಯ, ಶ್ರೀದೇವಿ, ಭೂದೇವಿಯರ ಉಬ್ಬುಶಿಲ್ಪಗಳನ್ನು ಸುಂದರವಾಗಿ ಕೆತ್ತಲಾಗಿದೆ. ಸೂರ್ಯನ ಮೂರ್ತಿ, ಅವಳ ಚಲುವಿಕೆ ಕಣ್ಮನಗಳಿಗೆ ಆನಂದವನ್ನುಂಟು ಮಾಡುವಂತಿದೆ. ಈ ಮೂರ್ತಿ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದ್ದು ಎಂದು ಗುರುತಿಸಬಹುದು. ಕ್ರಿ.ಶ.೯೮೭ ರಲ್ಲಿ ನಿರ್ಮಿಸಿದ್ದರೆಂದು ತಿಳಿಯುತ್ತದೆ. ಅಂದರೆ ಅಹವಮಲ್ಲನ ಆಳ್ವಿಕೆಯಲ್ಲಿ ಈ ಪ್ರಾಂತ್ಯದಲ್ಲಿ ಅತ್ಯಂತ ಪ್ರಾಚೀನವಾದದ್ದಾದರೆ, ಹಂಪೆಯಲ್ಲಿ ಕಂಪಿಲರಾಯನಿಂದ ನಿರ್ಮಿಸಿದ ಸೂರ್ಯ ದೇವಾಲಯವು ಈಚಿನದು. ಇದು ಸುಮಾರು ೧೪ನೇ

ಶತಮಾನದೆಂದು ಊಹಿಸಲಾಗಿದೆ. ಆದರೆ ಇದು ಒಂದು ವಿಶೇಷತೆಯನ್ನು ಪಡೆದಿದೆ" ಎನ್ನುತ್ತಾರೆ. ಮಹಾಮಂಟಪದ ಮುಂದೆ ಸೂರ್ಯ ದೇವಾಲಯವಿದೆ. ಮಂಟಪಕ್ಕಿಂತ ಅರ್ಧ ಅಡಿಯಷ್ಟು ಎತ್ತರ ಕಡಿಮೆ ಇದೆ. ಯುಗಾದಿ ಪಾಡ್ಯದಂದು ಅಥವಾ ಏಪ್ರಿಲ್ ಎರಡನೇ ವಾರದಲ್ಲಿ ಸೂರ್ಯನ ಕಿರಣಗಳು ನೇರವಾಗಿ ಬೀಳುತ್ತವೆ ಎಂಬ ಕಥೆಯನ್ನು ಕಟ್ಟುತ್ತಾರೆ. ಇದು ಸುಳ್ಳು. ಏಕೆಂದರೆ ಪೂರ್ವಕ್ಕೆ ಬಾಗಿಲು ಇರುವುದರಿಂದ ಸೂರ್ಯ ಉದಯಿಸುವಾಗಲೇ ಕಿರಣಗಳು ಎದುರಿಗೆ ಬೀಳವುದು ಸಹಜ. ಈ ದೇವಾಲಯದ ಬಾಗಿಲು ಪಶ್ಚಿಮಾಭಿಮುಖವಾಗಿರುವುದರಿಂದ, ಸೂರ್ಯನ ಕಿರಣಗಳು ಇದರ ಗರ್ಭಗುಡಿಯ ಹಿಂದಕ್ಕೆ ಬೀಳುತ್ತವೆ.

ವೈಷ್ಣವ ದೇವಾಲಯಗಳು

೧. ಚನ್ನಬಸವೇಶ್ವರ ದೇವಾಲಯ

ಚಾಲುಕ್ಯರು ಸರ್ವಧರ್ಮಗಳನ್ನು ಅನುಸರಿಸುವ ಅರಸರಾಗಿದ್ದರು. ಆದ್ದುದರಿಂದ ಶೈವ, ವೈಷ್ಣವ, ಜೈನ ದೇವಾಲಯಗಳನ್ನು ನಿರ್ಮಿಸಿದರು. ಇವುಗಳಲ್ಲಿ ಸ್ಥಾನಿಕ ಮತ್ತು ಆಸೀನ ಮೂರ್ತಿಗಳೆಂದು ಗುರುತಿಸಲಾಗಿದೆ. ಇದು ದ್ವೀಪದಂತೆ ಇರುವುದು ಕಂಡುಬರುತ್ತದೆ. ಏಕೆಂದರೆ ಕೆರೆ ತುಂಬಿದಾಗ ಇದರ ಸುತ್ತಲೂ ನೀರು ಬಂದಿರುತ್ತದೆ.

ಈ ದೇವಾಲಯವು ಕೆರೆಯ ನೀರಿನ ಅಂಚಿಗೆ ಹೊಂದಿಕೊಂಡಿರುವ ದೇವಾಲಯವಾಗಿದೆ. ಇದು ಗರ್ಭಗುಡಿಯನ್ನು ಮಾತ್ರ ಹೊಂದಿದೆ. ಚತುರ್ಭುಜದಾರಿಯಾದ ಚನ್ನಬಸವೇಶ್ವರ ಮೂರ್ತಿ ಸಮಭಂಗಿಯಲ್ಲಿ ನಿಂತಿದೆ. ಕಿರೀಟ ಮುಕುಟಧಾರಿಯಾದ ಮೂರ್ತಿಯ ಕಿವಿಯಲ್ಲಿ ಮಕರ ಕುಂಡಲಗಳಿದ್ದು, ಹಿಂಬದಿಯಲ್ಲಿ ಶಿರಶ್ಚಕ್ರವಿದೆ. ತಲೆಗೂದಲು ಭುಜದ ಎರಡೂ ಬದಿಗೂ ಇಳಿಬಿದ್ದಿವೆ. ಕೊರಳಲ್ಲಿ ಕಂಠಹಾರ ಹಾಗೂ ವಿಭಿನ್ನ ಬಗೆಯ ಹಾರಗಳಿದ್ದು ಉದರಬಂಧ, ಯಜ್ಞೋಪವೀತ ಮೊಣಕಾಲಿನಿಂದ ಇಳಿಬಿದ್ದಹಾರವನ್ನು ಈ ಮೂರ್ತಿ ಧರಿಸಿದೆ. ಕೈಗಳಲ್ಲಿ ಕೇಯೂರ, ಕೈಗಡಗಳಿದ್ದು, ಶಂಖ, ಚಕ್ರಗಳನ್ನು ಮೇಲಿನ ಕೈಗಳಲ್ಲಿ ಹಿಡಿದಿದೆ. ಕೆಳಗಿನ ಕೈಗಳು ಅರ್ಧಕ್ಕೆ ಭಗ್ನವಾಗಿವೆ. ಇದರಿಂದ ಆ ಕೈಗಳಲ್ಲಿ ಹಿಡಿದ ಆಯುಧಗಳು ಕಾಣುವುದಿಲ್ಲ. ಧೋತಿ ವಿಭಿನ್ನ ಬಗೆಯ ಮಣಿಸರಗಳಿಂದ ಅಲಂಕೃತಗೊಂಡಿದ್ದು, ಕಾಲಿನಲ್ಲಿ ಕಡಗಗಳಿವೆ. ಎಡ ಮತ್ತು ಬಲಗಾಲಿನ ಬಳಿ ಅಲಂಕೃತಗೊಂಡ ಚಾಮರಧಾರಣಿಯರಿದ್ದಾರೆ. ಪ್ರಭಾವಳಿ ಕೃಷ್ಣನ ದಶಾವತಾರಗಳನ್ನು ಕೆತ್ತುವುದರ ಮೂಲಕ ಅದನ್ನು ಅಲಂಕಾರಯುಕ್ತವಾಗಿ ಕಾಣುವಂತೆ ಶಿಲ್ಪಿ ತೋರಿಸಿದ್ದಾನೆ. ಗರ್ಭಗೃಹದಲ್ಲಿ ಸುಂದರ ನಂದಿ ವಿಗ್ರಹವಿದೆ. ಬಾಗಿಲು ಮೂರು ಶಾಖೆಗಳನ್ನು ಒಳಗೊಂಡಿದ್ದು, ಎರಡೂ ಕಡೆ ಸ್ತ್ರೀ ಮೂರ್ತಿಗಳು, ಪಕ್ಕದಲ್ಲಿ ಶಿವದ್ವಾರ ಪಾಲಕರಿದ್ದಾರೆ. ಮೇಲೆ ಲಲಾಟದಲ್ಲಿ ಕಪೋತವಿದ್ದು

ಎರಡೂ ಕಡೆ ಸಿಂಹಗಳು ಹೊತ್ತು ನಿಂತಂತೆ ಚಿತ್ರಿಸಲಾಗಿದೆ. ಕೇವಲ ಗರ್ಭಗುಡಿ ಮತ್ತು ಮುಂದಿನ ಮಂಟಪಕ್ಕೆ ಸುತ್ತಲೂ ಇಳಿಜಾರು ಚಪ್ಪಡಿಗಳನ್ನು ಛಾವಣಿ ಎತ್ತರದಿಂದಲೇ ಜೋಡಿಸಲಾಗಿದೆ ಇದು ಇದರ ವೈಶಿಷ್ಟತೆ ಎನ್ನಬಹುದು. ಇದರ ಕಾಲವನ್ನು ಹನ್ನೊಂದನೆಯ ಶತಮಾನವೆಂದು ಗುರುತಿಸಬಹುದು. ಇದರ ಮೇಲ್ಛಾವಣಿಯನ್ನು ಗಮನಿಸಿದಾಗ ಜೈನ ಬಸದಿಯಕಾರದಂತೆ ಕಂಡುಬರುತ್ತದೆ.

೨. ಲಕ್ಷ್ಮೀನಾರಾಯಣ ದೇವಾಲಯ

ಇದು ಹನ್ನೊಂದನೆಯ ಶತಮಾನದಾಗಿದ್ದು, ಬಾಗಳಿಯಲ್ಲಿರುವ ಅತ್ಯಂತ ಸುಂದರವಾದ ಗುಡಿಗಳಲ್ಲಿ ಇದು ಒಂದು. ಚತುರ್ಭುಜದಾರಿಯಾದ ಈ ಮೂರ್ತಿ ಪೀಠದ ಮೇಲೆ ಲಲಿತಾಸನದ ಭಂಗಿಯಲ್ಲಿ ಕುಳಿತಿದ್ದು, ಸುಮಾರು ನಾಲ್ಕುವರೆ ಅಡಿ ಎತ್ತರವಾಗಿದೆ. ಈ ದೇವಾಲಯವು ಗರ್ಭಗುಡಿ ಮತ್ತು ಅಂತರಾಳವನ್ನು ಹೊಂದಿದೆ. ಸುಂದರವಾದ ಲಕ್ಷ್ಮೀನಾರಾಯಣನ ತೊಡೆಯ ಮೇಲೆ ದೇವಿ ಕುಳಿತಿದ್ದಾಳೆ. ಕಿರೀಟದಲ್ಲಿ ಅಥವಾ ಕಿರೀಟದಾರಿಯಾದ ನಾರಾಯಣನಿಗೆ ಶಿರಶ್ಚಕ್ರವಿದ್ದು, ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಕಂಠಾಭರಣ, ಕೊರಳಹಾರ, ಉದರಬಂಧ, ಯಜ್ಞೋಪವೀತ ಹಾಗು ವೈಜಯಂತಿ ಹಾರಗಳಿಂದ ಅಲಂಕೃತವಾಗಿದೆ. ಭುವಕೀರ್ತಿ, ಕೇಯುರ, ಕೈಕಡಗಳಿದ್ದು, ನಡುಬಂಧ(ಪಟ್ಟಿ) ಹಾಗೂ ಅಲಂಕಾರಿಕ ದೋತಿಯಿದೆ. ಕಾಲಿನಲ್ಲಿ ಕಡಗ ಪಾದರಸಗಳಿದ್ದು, ಮೇಲಿನ ಕೈಗಳಲ್ಲಿ ಶಂಖ, ಗದೆ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು ಎಡಗೈ ಲಕ್ಷ್ಮೀಯನ್ನು ಅಲಂಗಿಸಿಕೊಂಡು ಸುಂದರವಾಗಿದೆ. ಅದರಲ್ಲಿ ಲಕ್ಷ್ಮೀಯ ಶಿಲ್ಪವಂತು ನೋಡಲು ಮನಮೋಹಕವಾಗಿದೆ. ನಾರಾಯಣನ ತೊಡೆಯ ಮೇಲೆ ಲಲಿತಾಸನದಲ್ಲಿ ಲಕ್ಷ್ಮೀ ಕುಳಿತಿದ್ದಾಳೆ. ಕಂಠಾಭರಣ, ಕೊರಳ ಹಾರ, ಯಜ್ಞೋಪವೀತ, ಕುಚಬಂಧವಿದ್ದು, ವಿಷ್ಣುವಿನ ಕೈಮೇಲೆ(ತನ್ನ ಉದರದ ಬಳಿಯೇ) ಹಾಕಿದ ರೀತಿ ಅದ್ಭುತವಾಗಿದೆ. ನಡುಪಟ್ಟಿ ಸೀರೆ, ಕಾಲಿನಲ್ಲಿ ಕಾಲ್ಕಡಗ, ಪಾದರಸ(ಹೂವು)ಗಳಿಂದ ಕೂಡಿದ ಮೂರ್ತಿ ಅಲಂಕೃತವಾಗಿದೆ. ಈಕೆಯ ಕೇಶ ಶೃಂಗಾರ ಆಧುನಿಕ ಕಾಲದ ಕೇಶ ಶೃಂಗಾರವನ್ನು ನಾಚಿಸುವಷ್ಟು ಅಂದವಾಗಿದೆ. ಇದರ ಪೀಠದಲ್ಲಿ ಗರುಡನ ಶಿಲ್ಪವಿದ್ದು, ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ.

೩. ಕನಕೇಶ್ವರ ದೇವಾಲಯ

ಈ ದೇವಸ್ಥಾನದ ಗರ್ಭಗೃಹ ಅಂತರಾಳದ ಸುತ್ತ ಪ್ರದಕ್ಷಿಣಾ ಪಥವಿದೆ. ಇದು ಒರಟು ಕಲ್ಲಿನಿಂದ ಕಟ್ಟಿದ ಭವ್ಯವಾದ ಹಾಗೂ ಸುಂದರ ದೇವಸ್ಥಾನವಾಗಿದ್ದು, ಮೂಲ ವಿಗ್ರಹವಿಲ್ಲ. ವಿಷ್ಣುವಾಹನ ಗರುಡ ಪೀಠದಲ್ಲಿರುವುದರಿಂದ ಇದನ್ನು ವೈಷ್ಣವ ದೇವಾಲಯ ಎನ್ನಬಹುದು. ಈಗ ಈಶ್ವರ ಲಿಂಗವಿದ್ದು, ಕನಕೇಶ್ವರ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಇದು ೬೪ ಕಂಬಗಳನ್ನು ಹೊಂದಿದೆ. ಇದರಲ್ಲಿ

ಈಶ್ವರ ಮೂರ್ತಿ ಇದೆ. ಇದರ ಮೇಲ್ಭಾವಣಿ ಗಚ್ಚು ಗಾರೆಯಿಂದ ಕೂಡಿದೆ. ಇದರಲ್ಲಿ ಒಂದು ಶಾಸನವಿದ್ದು, ಅದು ಹಾಳಾಗಿದೆ. ಇಂದು ಜನಗಳ ವಾಸಸ್ಥಾನವಾಗಿದೆ. ಇದರ ಪಾಣಿ ಪೀಠದ ಬಲಭಾಗದಲ್ಲಿ ಸಿಂಹದ ಮುಖವಿದೆ. ಅಂತರಾಳದ ಬಲಗೋಡೆಯಲ್ಲಿ ೩ ದ್ವಾರ ಬಾಗಿಲುಗಳಿದ್ದು ಅವು ಪಶ್ಚಿಮಾಭಿಮುಖವಾಗಿವೆ.

೪. ಉಗ್ರನರಸಿಂಹ ದೇವಾಲಯ

ಕಲ್ಲೇಶ್ವರ ದೇವಾಲಯದ ಆರವಣರದಲ್ಲಿ ಮಹಾಮಂಟಪಕ್ಕೆ ಹೊಂದಿಕೊಂಡು ಉಗ್ರನರಸಿಂಹನ ದೇವಾಲಯ ಇದೆ. ಈ ದೇವಾಲಯದ ಸುತ್ತಲೂ ಕಟ್ಟಿರುವ ಕಲ್ಲುಸೀಮೆ ಮತ್ತು ಕಲ್ಲಿನಚಪ್ಪಡಿ, ಇದರ ರಚನೆ ಕಲ್ಲೇಶ್ವರ ದೇವಾಲಯಕ್ಕೆ ಹೊಂದಿಲ್ಲ. ಆದ್ದರಿಂದ ಇದು ಹೊಯ್ಸಳ ಕಾಲದ ತಲವಿನ್ಯಾಸ ಹೊಂದಿದೆ.

ಇದು ಮಹಾಮಂಟಪದ ಉತ್ತರಕ್ಕೆ ಹೊಂದಿಕೊಂಡು ಗರ್ಭಗೃಹ, ಅಂತರಾಳ ಮತ್ತು ಚಿಕ್ಕದಾದ ಮುಖಮಂಟಪ ಹೊಂದಿದೆ. ಮಾನವನ ದೇಹ, ಸಿಂಹಮುಖ ತಲೆಯನ್ನು ಹೊಂದಿದ ಈ ನರಸಿಂಹ ಮೂರ್ತಿಗೆ ಹದಿನಾಲ್ಕು ಕೈಗಳಿವೆ. ಉದರಬಂಧ, ಎದೆಹಾರ, ಯಜ್ಞೋಪವೀತ, ಭುಜಕೀರ್ತಿ, ಕೇಯೂರ ಗಳಿಂದ ಅಲಂಕೃತವಾಗಿರುವ ಈ ಮೂರ್ತಿಯು ಆಯುಧಗಳನ್ನು ಹಿಡಿದಿದೆ. ಅವುಗಳು ಈ ಕೆಳಗಿನಂತಿವೆ.

ಎಡಗೈಯಲ್ಲಿ ಕುರುಳಿನಹಾರ, ಧನಸ್ಸು, ಶಂಖ, ಗದೆ, ಪಾಶ, ಹಿರಣ್ಯ ಕಶ್ಯಪನ ಕಿರೀಟವನ್ನು ಹಿಡಿದಿದೆ, ಬಲಗೈಯಲ್ಲಿ ಕರುಳಿನಹಾರ, ಧನಸ್ಸು, ಚಕ್ರ, ಅಂಕುಶ, ಅಂಬು. ಹೀಗೆ ಅಲಂಕೃತನಾದ ನರಸಿಂಹ ಎತ್ತರವಾದ ಪೀಠದಲ್ಲಿ ಗರುಡನು (ಹನುಮಾಸನದಲ್ಲಿ) ಕುಳಿತಿದ್ದು, ಎರಡು ಕಡೆ ಪುರುಷ ಮೂರ್ತಿಗಳು ಕೈಜೋಡಿಸಿ ನಿಂತಿದ್ದಾರೆ. ನರಸಿಂಹ ಪದ್ಮಪೀಠದ ಮೇಲೆ ಬಲಗಾಲೂರಿ ನಿಂತಿದ್ದು, ಎಡಗಾಲನ್ನು ಸ್ವಲ್ಪ ಮೇಲೆ ಎತ್ತಿ ಅರ್ಧ ಪದ್ಮಾಸನ ರೀತಿಯಲ್ಲಿ ತೊಡೆಯ ಮೇಲೆ ಹಿರಣ್ಯಕಶ್ಯಪನನ್ನು ಮಲಗಿಸಿಕೊಂಡು ಕರುಳು ಬಗೆಯುವ ಭಂಗಿ ಕಂಡುಬರುತ್ತದೆ.

ಇಲ್ಲಿ ನರಸಿಂಹ ಮೂರ್ತಿಯಂತೆ ಹಿರಣ್ಯಕಶ್ಯಪನ ಮೂರ್ತಿಯು ಸಹ ಅಲಂಕರಿಸಲ್ಪಟ್ಟಿದೆ. ಚತುರ್ಭುಜದಾರಿಯಾಗಿರುವ ಈ ಮೂರ್ತಿಯ ಮೇಲಿನ ಕೈಗಳಲ್ಲಿ ಗುರಾಣಿ, ಕೈಗಳಲ್ಲಿ ಅಂಬು, ಧೋತಿಯ ಮುಂಭಾಗ ಕಾಲಿನ ಮಧ್ಯದಲ್ಲಿ ಇಳಿಬಿದ್ದಿದ್ದು, ಕಾಲಿನಲ್ಲಿ ಕಾಲ್ಕಡಗ ಮತ್ತು ಪಾದಹೂವುಗಳಿವೆ. ಹಾಗೆಯೇ ಕಾಲಿನ ಬೆರಳುಗಳಲ್ಲಿ ಉಂಗುರಗಳಿವೆ. ಈ ಮೂರ್ತಿಯ ಎಡಗಾಲಿನ ಬಳಿ ಪದ್ಮ ಮತ್ತು ಫಲಹಿಡಿದ ಸ್ತ್ರೀ ಮತ್ತು ತಂಬೂರಿ ಹಿಡಿದ ನಾರದನಿದ್ದು, ಬಲಗಾಲ ಬಳಿ ಅಂಜಲಿ ಮುದ್ರೆಯಲ್ಲಿ ಸ್ತ್ರೀ ಹಾಗೂ ಪುರುಷ ಶಿಲ್ಪಗಳಿವೆ. ಪಾಣಿಪೀಠದಲ್ಲಿ ಅಂಜಲಿ ಮುದ್ರೆಯಲ್ಲಿರುವ ಗರುಡನ ಶಿಲ್ಪವಿದೆ.

[illegible]

[illegible]

[illegible]

[illegible]

[illegible]

[illegible]

[illegible]

[illegible]

ಈ ಗರುಡನ ಎಡಭಾಗಕ್ಕೆ ಮತ್ತು ಪ್ರಹ್ಲಾದನ ಬಲಭಾಗಕ್ಕೆ ಹನುಮಂತನಿದ್ದು, ಈ ಎರಡು ಶಿಲ್ಪಗಳು ಸಹ ಅಂಜಲಿ ಮುದ್ರೆಯಲ್ಲಿರುವುದು ಈ ಮೂರ್ತಿಯ ವಿಶೇಷವಾಗಿದೆ.

ನರಸಿಂಹನು ಕಿರೀಟವನ್ನು ಧರಿಸಿದ್ದು, ಅದು ಬಹಳ ಅಲಂಕರಣದಿಂದ ಕೂಡಿದೆ. ಅದರ ಮೇಲೆ ಛತ್ರಯಿದ್ದು ಪ್ರತ್ಯೇಕ ಪ್ರಭಾವಳಿಯನ್ನು ಹೊಂದಿಲ್ಲ. ಆದರೂ ಮಕರ ತೋರಣವಿದ್ದು, ಮೇಲೆ ಕೀರ್ತಿಮುಖವಿದೆ. ತೋರಣದ ನಡುವೆ ವಿಷ್ಣುವಿನ ದಶಾವತಾರದ ಚಿತ್ರಗಳು ಕೆತ್ತಲ್ಪಟ್ಟಿವೆ. ಅವು ಕ್ರಮವಾಗಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಬಲರಾಮ, ಬುದ್ಧ ಮತ್ತು ಕಲ್ಕಿ ಅವತಾರಗಳಿವೆ. ಹೀಗೆ ಈ ಶಿಲ್ಪ ನಿಜಕ್ಕೂ ಅದ್ಭುತವೇ ಆಗಿದೆ. ಇದರ ಒಂದೊಂದು ಭಾಗದ ಕೆತ್ತನೆಯು ತುಂಬಾ ಸೂಕ್ಷ್ಮ ಮತ್ತು ನೈಜತೆಯಿಂದ ಕೂಡಿದೆ. ಈ ಮೂರ್ತಿ ನೋಡಿದರೆ ಹರಿ ದಶಾವತಾರವೆತ್ತಲು ಕಾರಣವಾದ ಕಥೆ ನೆನಪಾಗುತ್ತದೆ. ಇದು ಕಲ್ಯಾಣಿಚಾಲುಕ್ಯರ ಅತ್ಯಂತ ಶ್ರೇಷ್ಠ ಶಿಲ್ಪಗಳಲ್ಲಿ ಇದು ಒಂದೆಂದರೆ ಅತಿಶಯೋಕ್ತಿ ಆಗಲಾರದು. ಶಿಲ್ಪಗಳು ತಮ್ಮ ಕಲಾನೈಪುಣ್ಯತೆಯನ್ನು ಧಾರೆ ಎರೆದು ನಿರ್ಮಿಸಿರುವ ಇಲ್ಲಿನ ನರಸಿಂಹ ಕಲಾ ಪ್ರಪಂಚಕ್ಕೆ ಒಂದು ಶ್ರೇಷ್ಠ ಕಾಣಿಕೆ ಎಂದರೂ ಸರಿ. ಪ್ರಾಯಶಃ ಇಂತಹ ಸುಂದರ, ಸೂಕ್ಷ್ಮ, ನೈಜತೆಯನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ.

೫. ಜೈನ ಬಸದಿ

ಬಾಗಳಿ ಸರ್ವಧರ್ಮಗಳ ಕೇಂದ್ರವಾಗಿತ್ತೆನ್ನಲು ಇಲ್ಲಿನ ದೇವಾಲಯಗಳೇ ಆಧಾರಗಳಾಗಿವೆ. ಏಕೆಂದರೆ ಕಲ್ಲೇಶ್ವರ ದೇವಾಸ್ಥಾನ, ಲಕ್ಷ್ಮೀನಾರಾಯಣ, ಚನ್ನಬಸವೇಶ್ವರ, ಸಂಗನಬಸವೇಶ್ವರ, ಇಷ್ಟಲಿಂಗ, ಕನಕೇಶ್ವರ ದೇವಾಲಯಗಳ ಜೊತೆಗೆ ಜೈನ ಬಸದಿಗಳು ಇರವುದು ಇದಕ್ಕೆ ಸಾಕ್ಷಿಯಾಗಿವೆ.

ಕೋಗಳಿ-೫೦೦ ಗ್ರಾಮಗಳ ನಾಡಾಗಿದ್ದು, ಜೈನರ ಕೇಂದ್ರವಾಗಿತ್ತು. ಕ್ರಿ.ಶ.೫೪೯-೫೭೦ರ ವರೆಗೆ ಆಳಿದ ಗಂಗದೊರೆ ದುರ್ವಿನೀತನು ಕೋಗಳಿಯಲ್ಲಿ ಬಸದಿಯನ್ನು ನಿರ್ಮಿಸಿದನು ಎಂದು ಈ ಪದ್ಯ ಹೇಳುತ್ತದೆ.

“ಇದು ದುರ್ವಿನೀತನಿಂದಂ
ಮೊದಲೊಳ್ ಬಸದಿಯಿದ ನಾಡಮತ್ತರಘುಳೆಯಂ|
ವಿದಿತಯಶರಿನ್ನ್ರಕೀರ್ತಿಗೆ
ಉದಿತೋದಿತಮಾಗೆ ಮಾಡಿದರ್ ಕೋಗಳಿಯೊಳ್”[೧೯]

ಎಂದು ಬರುತ್ತದೆ. ಈತನ ಕಾಲದಿಂದ ಹಿಡಿದು ಕ್ರಿ.ಶ.೫೫೫-೬೦೫ವರೆಗೆ ಹಲವು ಶತಮಾನದವರೆಗೆ ಬಹುಶಃ ಹೊಯ್ಸಳ ವಂಶದ ಅಂತ್ಯದವರೆಗೆ ಉತ್ತುಂಗ ಸ್ಥಿತಿಯಲ್ಲಿದ್ದು, ಇದೊಂದು ಜೈನರ ಪುಣ್ಯಕ್ಷೇತ್ರವಾಗಿತ್ತು. ಈ ನಾಡಿನಲ್ಲಿ ಬಾಗಳಿಯೂ ಒಂದು ಶೈವ ಕೇಂದ್ರವಾಗಿತ್ತು ಎನ್ನಬಹುದು.

ಈ ದೇವಾಲಯದ ಮೂರ್ತಿ ಕಾಯೋತ್ಸರ್ಗ ಭಂಗಿಯಲ್ಲಿ ಪೀಠದ ಮೇಲೆ ನಿಂತಿರುವ ಮೂರ್ತಿ ದ್ವಿಭುಜಧಾರಿಯಾಗಿದೆ. ಇದು ಗರ್ಭಗೃಹ ಅಂತರಾಳವನ್ನು ಮಾತ್ರ ಹೊಂದಿದೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ಪಂಚಶಾಖೆಗಳಿದ್ದು, ವಜ್ರಾಕಾರದ ಕೆತ್ತನೆ, ಹೂಬಳ್ಳಿಗಳ ಕೆತ್ತನೆಗಳಿವೆ. ಲಲಾಟ ಬಿಂಬದಲ್ಲಿ ತೀರ್ಥಂಕರನ ವಿಗ್ರಹ, ಇದರ ಇಕ್ಕೆಲಗಳಲ್ಲಿ ಯಕ್ಷ, ಯಕ್ಷಿಣಿಯರು, ಇವರ ಸುತ್ತಲು ಪ್ರಭಾವಳಿ ಇದೆ. ಗರ್ಭಗೃಹದೊಳಗೆ ತೀರ್ಥಂಕರನ ಪೀಠ ಮಾತ್ರವಿದ್ದು, ಮೂಲ ವಿಗ್ರಹವಿಲ್ಲ. ಪೀಠದಲ್ಲಿ ಐದು ಸಿಂಹದ ಮುಖಗಳಿವೆ. ಪ್ರಸ್ತುತ ಪೀಠದ ಮೇಲೆ ಭೈರವ, ಭೈರವಿಯ ಜೋಡಿ ವಿಗ್ರಹ ಅಲ್ಲದೆ, ಇದರ ಮುಂಭಾಗದಲ್ಲಿ ಭೈರವನ ವಿಗ್ರಹವಿದೆ. ಇದಕ್ಕೆ ಕಪ್ಪುಶಿಲೆ ಬಳಸಲಾಗಿದೆ. ಅಂತರಾಳದ ಪ್ರವೇಶದಲ್ಲಿ ಯಕ್ಷದ್ವಾರಪಾಲಕರ ವಿಗ್ರಹಗಳು ಪ್ರಭಾವಳಿ ಕೀರ್ತಿಮುಖಗಳಿಂದ ಕೂಡಿದೆ. ಇದರ ಪ್ರವೇಶದ್ವಾರದಲ್ಲಿ ಪಂಚಶಾಖೆಗಳಿದ್ದು, ಒಂಬತ್ತು ಹಂತದ ಜೋಡಿ ಶಿಲ್ಪಗಳಿವೆ. ಜಾಲಂಧರ, ವಜ್ರಾಕಾರದ ಕೆತ್ತನೆ, ಜೈನ ತೀರ್ಥಂಕರರ ವಿಗ್ರಹ, ಇದರ ಸುತ್ತಲೂ ಸುತ್ತುಗಳಿವೆ. ಇದರ ಪಾರ್ಶ್ವದಲ್ಲಿ ೮-೧೬-೮ ಭಾಗದ ಪಟ್ಟಿಕೆಗಳುಳ್ಳ ಕಂಬಗಳಿವೆ. ಲಲಾಟ ಬಿಂಬದ ಚೌಕಟ್ಟಿನಲ್ಲಿ ಯಕ್ಷ ಯಕ್ಷಿಣಿಯರ ಮಧ್ಯ ತೀರ್ಥಕರನು ಕುಳಿತ ವಿಗ್ರಹವಿದೆ. ಇದರ ಇಕ್ಕೆಲೆಗಳಲ್ಲಿ ಇಳಿಬಿದ್ದ ಪದ್ಮಗಳಿವೆ. ಇದರ ಮೇಲೆ ಸರಗಳ ಕೆತ್ತನೆ. ಕಚ್ಚಾ ಕೀರ್ತಿಮುಖಗಳಿವೆ. ಹೊರಬಾಗಿಲು ಇಪ್ಪತ್ನಾಲ್ಕು ತೀರ್ಥಂಕರರನ್ನೊಳಗೊಂಡ ಶಾಖೆ ಮತ್ತು ಬಾಗಿಲ ಮೇಲೆ ತೀರ್ಥಂಕರರ ಸಂಕೇತವಿದೆ. ಈ ಸಮೂಹ ದೇವಾಲಯಗಳಲ್ಲಿ ಬಸದಿ ಇರುವುದರಿಂದ ಹಿಂದೆ ಇದೊಂದು ದೊಡ್ಡ ಅಗ್ರಹಾರವಾಗಿದ್ದು, ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಈಗಲೂ ಜೈನ ಬಸದಿಯ ಸ್ಥಳವೆಂದು ಕರೆಯುವ ಜಾಗ ಸರಕಾರಿ ಶಾಲೆಯ ಆವರಣ ಮತ್ತು ಅದರ ಪಕ್ಕದಲ್ಲಿ ಎತ್ತರವಾದ ಮಣ್ಣು ದಿನ್ನೆಯಾಗಿದೆ. ಈ ದೇವಾಲಯ ಬಾಗಳಿಯ ಒಳಭಾಗದಲ್ಲಿರುವುದರಿಂದ ಇದನ್ನು ಹೆಚ್ಚು ಜನ ಗಮನಿಸುವುದಿಲ್ಲ.

ಬಾಗಳಿ ಗ್ರಾಮದ ಸುತ್ತಮುತ್ತಲೂ ಕೆಲವು ಗ್ರಾಮಗಳಲ್ಲಿ ಜೈನ ಬಸದಿಗಳಿವೆ. ಹೆಚ್ಚು ಜೈನರು ಆಗಮಿಸುತ್ತಿರುವ ಮಾಡಲಗೇರಿಯನ್ನು ನೋಡಿದಾಗ ಇದು ಸಹ ಜೈನರ ಕೇಂದ್ರವಾಗಿತ್ತೇನೋ ಎನ್ನಲು ಅಲ್ಲಿಯ ಬಸದಿಗಳನ್ನು ಉದಾಹರಿಸಬಹುದು. ಏಕೆಂದರೆ ಈಗಲೂ ಅಲ್ಲಿ ಜೈನ ಸನ್ಯಾಸಿಗಳು ವಾಸಿಸುತ್ತಾರೆ. ಇಲ್ಲಿಯ ಒಂದು ಶಾಸನದಲ್ಲಿ[೨೦] (ಕಾಲತ್ರುಟಿತವಾಗಿದೆ) ನಾಕರಸ ಮತ್ತು ಅವನ ಹೆಂಡತಿ ಲಕ್ಷ್ಮೀದೇವಿಯು ಅತ್ತಿಮೇಶ್ವರ ದೇವರ ನೈವೇದ್ಯ, ಅಂಗಭೋಗ ಮತ್ತು ನಂದಾದೀವಿಗೆಗೆ ದಾನಬಿಟ್ಟರೆಂದು 'ಅಯಿನೂರ್ವರ ಸಂಘ, 'ಜಿನಗನ್ಧೋದಕ', 'ಅತ್ತಿಮೆನಾಯಕ'ರ ಉಲ್ಲೇಖಬರುತ್ತದೆ. ವಿಜಯ ಪಾಂಡ್ಯ ದೇವನ ಆಳ್ವಿಕೆಯಲ್ಲಿ, ಪಾಂಡ್ಯ ಅರಸರು ಜೈನರಾಗಿರಬೇಕು. ಏಕೆಂದರೆ ಅವರ ಉಲ್ಲೇಖಗಳು ಹೆಚ್ಚು ಜೈನ ಶಾಸನಗಳಿಂದ ಬಂದಿರುತ್ತವೆ. ಹರಪನಹಳ್ಳಿ ಕೋಟೆಯೊಳಗೆ ಒಂದು ಜೈನ ಬಸದಿಯಿದೆ. ಈಗಲೂ ಇಲ್ಲಿ ಅನೇಕ ಜೈನ ಕುಟುಂಬಗಳು ಕಂಡುಬರುತ್ತವೆ.

ಜೈನರ ಉಲ್ಲೇಖಗಳು ಅನೇಕ ಶಾಸನಗಳಲ್ಲಿ ಬಂದಿರುವುದರಿಂದ ಬಾಗಳಿ ಒಂದು ಜೈನ ಕೇಂದ್ರವಾಗಿತ್ತು ಎನ್ನಬಹುದು. ಕಲ್ಲೇಶ್ವರ ದೇವಾಲಯದ ಪಶ್ಚಿಮದಲ್ಲಿರುವ ಇಲ್ಲಿಯ ಒಂದು ಶಾಸನದಲ್ಲಿ ಜೈನಗುರು 'ಮಹೇಂದ್ರದೇವ ಪಂಡಿತ' ಎಂದು ಉಲ್ಲೇಖವಾಗಿದೆ.[೨೦]

ಕ್ರಿ.ಶ.೯೭೨ ಶಾಸನದಲ್ಲಿ ರಾಷ್ಟ್ರಕೂಟರ ದೊರೆಖೊಟ್ಟಿಗದೇವನ ಆಳ್ವಿಕೆಯಲ್ಲಿ ಅವನ ಸಾಮಂತ ಗಂಗವಂಶದ ಪೆರ್ಮ್ಮಾನಡಿಗಳ್ ಆಳುತ್ತಿದ್ದನೆಂದು, ಮಠವೊಂದಕ್ಕೆ ದಾನ ನೀಡಿದಂತೆ ಹಾಗೂ ಮಿಂಚುಂಗೆರೆಯ ಜೈನಗುರು (ಮಹೇಂನ್ದ್ರ) ಮಹೇಂದ್ರ ದೇವ ಪಂಡಿತನ ಉಲ್ಲೇಖವಿದೆ. ಪ್ರಾಯಶಃ ಇಲ್ಲಿಯೂ ಒಬ್ಬ ಜೈನಗುರು ಇದ್ದನೆಂದು ಕಂಡುಬರುತ್ತದೆ.

ತ್ರಿಕೂಟ ದೇವಾಲಯ - (ಸಂಗನ ಬಸವೇಶ್ವರ ದೇವಾಲಯ)

ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಅನೇಕ ತ್ರಿಕೂಟ ದೇವಾಲಯಗಳು ನಿರ್ಮಾಣವಾಗಿವೆ. ಇವು ಚಾಲುಕ್ಯರ ಎರಡನೆ ಹಂತದ ನಿರ್ಮಾಣವೆನ್ನಬಹುದು. ಭಿತ್ತಿಯ ಮೇಲೆ ಎದ್ದು ಕಾಣುವ ವಿಮಾನದ ವಿನ್ಯಾಸವನ್ನು ಗಮನಿಸಿದರೆ ತ್ರಿಕೂಟಾಚಲ ಪ್ರವೃತ್ತಿಯ ಉಗಮ ಇಲ್ಲಿಯೇ ಆಗಿರಬಹುದು. ಆದ್ದರಿಂದ ಈ ದೇವಾಲಯವು ಅವರ ಕಾಲದ್ದೇ ಆಗಿದೆ. ಕಲ್ಲೇಶ್ವರ ದೇವಸ್ಥಾನದ ನಂತರ ಬರುವ ಅತ್ಯಂತ ಸುಂದರವಾದ ದೇವಾಲಯ ಕೆರೆ ಅಂಚಿಗೆ ಹೊಂದಿಕೊಂಡಿದೆ. ದಕ್ಷಿಣಕ್ಕೆ ಪ್ರವೇಶದ್ವಾರವಿದ್ದು, ಈ ದೇವಸ್ಥಾನದ ಮಧ್ಯದಲ್ಲಿ ಸುಮಾರು ೧೦ ಅಡಿ ವ್ಯಾಸವುಳ್ಳ ನಾಲ್ಕು ಕಂಬಗಳ ರಂಗಮಂಟಪವಿದೆ. ಇದರಲ್ಲಿ ಮೂರು ಗರ್ಭಗೃಹಗಳಿವೆ. ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹಗಳು ಪೂರ್ವ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ಕಡೆಗೆ ಹೊಂದಿದ್ದು, ರಂಗಮಂಟಪಕ್ಕೆ ಕೂಡಿಕೊಂಡಿವೆ.

ಪೂರ್ವದ ಗರ್ಭಗುಡಿಯಲ್ಲಿ ಪದ್ಮಗಳನ್ನು ಹಿಡಿದು ನಿಂತಿರುವ ಸೂರ್ಯನಾರಾಯಣ ಮೂರ್ತಿಯಿದೆ. ಇದರ ಕೆಲವು ಭಾಗಗಳು ಭಗ್ನಗೊಂಡಿವೆ. ಇದರ ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದ ಜಾಲಂಧರ ಮತ್ತು ಕಂಬಶಾಖೆಗಳಿವೆ. ಜಾಲಂದರ ಕೆಳಗೆ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿದ್ದು, ಅವುಗಳು ನಾಲ್ಕು ಕೈಗಳನ್ನು ಹೊಂದಿವೆ. ಮೇಲಿನ ಕೈಗಳಲ್ಲಿ ಪದ್ಮ ಒಂದು ಅಭಯ, ಇನ್ನೊಂದು ಗದೆ. ಮಕರ ತೋರಣದ ಪ್ರಭಾವಳಿ, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ, ಮೇಲೆ ದ್ರಾವಿಡ ಮಾದರಿಯ ಶಿಖರ ಪಟ್ಟಿಕೆ ಇದೆ. ಗರ್ಭಗೃಹದೊಳಗೆ ಸುಮಾರು ಒಂದು ಅಡಿ ಎತ್ತರದ ಅಶ್ವಗಳನ್ನು ಹೊಂದಿದ(ಸೂರ್ಯ ಪೀಠ) ಅರುಣ ಸಾರಥ್ಯವಿದೆ. ಸಮಭಂಗಿಯ ಸೂರ್ಯನಾರಾಯಣ ಮೂರ್ತಿ ನಾಲ್ಕು ಕೊರಳ ಹಾರ, ಕೈಕಡಗ, ಕಿರೀಟ ಮುಕುಟಗಳನ್ನು ಧರಿಸಲಾಗಿದೆ. ಸುತ್ತಲೂ ಮಕರ ತೋರಣದ ಪ್ರಭಾವಳಿ ಅಷ್ಟದಿಕ್ ಪಾಲಕರ ಕೆತ್ತನೆಗಳು, ಇನ್ನೊಂದೆಡೆಗೆ ಕೀರ್ತಿಮುಖವಿದೆ. ಪದ್ಮಗಳನ್ನು ಹಿಡಿದಿರುವ ಎರಡು ಕೈಗಳನ್ನು

ಹೊಂದಿರುತ್ತಾನೆ. ಸೂರ್ಯನ ಎರಡು ಕೈ ಕೆಳಗೆ ಶ್ರೀದೇವಿ, ಭೂದೇವಿಯ ಉಬ್ಬುಶಿಲ್ಪಗಳಿವೆ.(ಸೂರ್ಯನ ಬಲಭಾಗದ ಕೈ ಹಾಳಾಗಿದೆ) ಇದರ ಗರ್ಭಗೃಹ ನಾಲ್ಕು ಕಂಬಗಳಿಂದ ಕೂಡಿದೆ. ಒಂಬತ್ತು ಅಂಕಣಗಳಿಂದ ಕೂಡಿದ ಸಭಾಮಂಟಪ ಮಧ್ಯದಲ್ಲಿ ಅರಳುವ ಪದ್ಮ ಮನಮೋಹಕವಾಗಿದೆ. ಭುವನೇಶ್ವರಿ ಕೆಳಗೆ ಸುಮಾರು ಆರು ಚೌಕ ಹಾಸುಬಂಡೆ, ನಾಲ್ಕು ಮೂಲೆಗೆ ಕಲ್ಯಾಣಿ ಚಾಲುಕ್ಯರ ಕಾಲದ ಘಂಟೆಯ ವೃತ್ತಾಕಾರದ ಕಂಬಗಳಿವೆ. ಹೀಗೆ ಸೂರ್ಯನಾರಾಯಣ ದೇವಾಲಯ ಅಲಂಕರಿಸಲ್ಪಟ್ಟಿದೆ.

ಪಶ್ಚಿಮ ಗರ್ಭಗೃಹದಲ್ಲಿ ಪೂರ್ವಾಭಿಮುಖವಾಗಿ ಹೊಳೆಪಿನಿಂದ ಕೂಡಿದ ಸಂಗಮೇಶ್ವರ ಲಿಂಗವಿದೆ. ಅನಂತರ ಅಂತರಾಳವಿದ್ದು ಇದರ ಬಾಗಿಲು ಬಹಳ ಸುಂದರವಾಗಿದೆ. ಗರ್ಭಗುಡಿಯ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು, ಪಂಚಶಾಖೆಗಳಿವೆ. ಇದರಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಶಾಖೆ ಒಂದು ಲಲಾಟಬಿಂಬದಲ್ಲಿ ಶಿಖರ ಪಟ್ಟಿಕೆ ಇದೆ. ಸಂಗಮೇಶ ಶಿವಲಿಂಗವು ಕಪ್ಪು ಶಿಲೆಯ ಕಂತಿ ಮಾಡಿದ್ದು, ಪಾಣಿ ಪೀಠದ ಮೇಲೆ ಸುಮಾರು ಎರಡು ಅಡಿ ಎತ್ತರವಾಗಿದೆ. ಭುವನೇಶ್ವರಿ ಪದ್ಮವಿದ್ದು, ಗೋಡೆಯಲ್ಲಿ ಅರ್ಧಪಟ್ಟಿಕೆಗಳಿವೆ. ಅಂತರಾಳ ಪ್ರವೇಶದ್ವಾರವು ವಿವಿಧ ಭಂಗಿಯ ನೃತ್ಯಗಾರರ ಮತ್ತು ಜಾಲಂದರ, ಸುತ್ತಳಿಯ, ಹೂವಿನ ಆಕಾರದ ಮೂರು ಶಾಖೆಗಳನ್ನು ಜಾಲಂದರದ ಕೆಳಸ್ತರದಲ್ಲಿ ಶೈವ ದ್ವಾರಪಾಲಕರ ಉಬ್ಬುಕೆತ್ತನೆಗಳಿವೆ. ಇವು ನಾಲ್ಕು ಕೈಗಳನ್ನು ಹೊಂದಿದ್ದು, ಜಾಲಂದರ ಕೆಳಗಡೆ ಅಭಯ ಜಾಲಂಧರಗಳಿವೆ. ಸುತ್ತಲೂ ಅರ್ಧತೋರಣ, ಮಕರ ತೋರಣದ ಪ್ರಭಾವಳಿ ಕೆಳಗಡೆ ಅರ್ಧಕಂಬಗಳಿವೆ.

ಲಲಾಟ ಬಿಂಬದಲ್ಲಿ ಗಜಸರಸ್ವತಿ, ದ್ರಾವಿಡ ಮಾದರಿಯ ಶಿಖರ ಪಟ್ಟಿಕೆ ಇದೆ. ಇದರ ಇಕ್ಕೆಲಗಳಲ್ಲಿ ದೇವಕೋಷ್ಠಗಳಿವೆ. ಬಲಭಾಗ ದೇವಕೋಷ್ಠದಲ್ಲಿ ಗಣೇಶ ವಿಗ್ರಹವಿದೆ. ಎಡಭಾಗದಲ್ಲಿ ಶಿವಪಾರ್ವತಿ ಮೂರ್ತಿ ಇದೆ. ಅಂತರಾಳದ ಭುವನೇಶ್ವರಿಯಲ್ಲಿ ಪದ್ಮ ಹಾಗೂ ನಾಲ್ಕು ಮೂಲೆಗಂಬಗಳಿವೆ. ದೇವ ಕೋಷ್ಠದ ಮೇಲೆ ಶಿಖರ ಪಟ್ಟಿಕೆ ಇದೆ.

ಉತ್ತರದ ಗರ್ಭಗೃಹದ ಪ್ರವೇಶದ್ವಾರದಲ್ಲಿ ಪಂಚಶಾಖೆಗಳಿವೆ. ಕಂಬಶಾಖೆ ಮತ್ತು ಜಾಲಂದರ ಶಾಖೆಗಳ ಕೆಳಗಡೆಗೆ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಈ ವೈಷ್ಣವ ದ್ವಾರಪಾಲಕರ ಕೈಗಳಲ್ಲಿ ಚಕ್ರ, ಶಂಖ, ಗದೆ, ಅಭಯ ಹಸ್ತಗಳಲ್ಲಿ ಇವೆ. ಸುತ್ತಲೂ ಪ್ರಭಾವಳಿ, ಕೀರ್ತಿಮುಖ, ಕಿರೀಟ ಮುಕುಟ, ಸಾದಾ ಸೊಂಟಹಾರ, ಕಾಲ್ಗಡಗ, ಕೈಗಡಗ, ಕೊರಳ ಹಾರ, ನಡುಪಟ್ಟಿ ಧರಿಸಲಾಗಿದೆ. ಇವೆರಡರ ಇಕ್ಕೆಲಗಳ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ, ದ್ರಾವಿಡ ಶೈಲಿಯಲ್ಲಿ ಶಿಖರ ಪಟ್ಟಿಕೆ ಇದೆ. ಮುಂಚಾಚಿದ ಚಜ್ಜ ಇದೆ. ಗರ್ಭಗೃಹದೊಳಗೆ ಸುಮಾರು ಒಂದೂವರೆ ಅಡಿ ಎತ್ತರದ ಪೀಠದಲ್ಲಿ ಗರುಡ, ಗರುಡ ಪೀಠದ ಮೇಲೆ ಸುಮಾರು ನಾಲ್ಕು ಅಡಿ ಎತ್ತರದ ವಿಷ್ಣುಶಿಲ್ಪವೂ ಸಮಭಂಗಿಯಲ್ಲಿದೆ. ಶಂಖ, ಚಕ್ರ ಹಿಡಿದಿರುವ ಕೈಗಳಿದ್ದು, ಇನ್ನೆರಡು ಕೈಗಳು ಹಾಳಾಗಿವೆ. ಕಾಲ್ಗಡಗ, ದೋತಿ, ಸೊಂಟಪಟ್ಟಿ, ಯಜ್ಞೋಪವೀತ

ಸೊಂಟಪಟ್ಟಿ, ನಡುಪಟ್ಟಿ ಇದೆ. ಕೊರಳಹಾರ, ಕೈಕಡಗ ಧರಿಸಲಾಗಿದೆ. ಈ ಮೂರು ಗರ್ಭಗೃಹಗಳಿಗೆ ನಾಲ್ಕು ಸುಂದರ ಕಂಬಗಳಿಂದ ಅಲಂಕರಿಸಿದ ರಂಗಮಂಟಪವಿದೆ. ಮೇಲ್ಛಾವಣಿ ಆಕರ್ಷಕ ಕಮಲದಿಂದ ಕೂಡಿದ್ದು, ಮಂಟಪದ ಕೆಳಗೆ ಎರಡೂವರೆ ಅಡಿ ಎತ್ತರದ ನಂದಿ ಬಹಳ ಸೊಗಸಾಗಿದೆ. ಸಭಾ ಮಂಟಪದ ನೈರುತ್ಯಕ್ಕೆ ಸಪ್ತಮಾತೃಕೆಯರ ಶಿಲ್ಪಗಳಿವೆ.

ತ್ರೈಪುರಷರನ್ನು ಹೊಂದಿದ ಈ ದೇವಾಲಯ ನೋಡಲು ಮನಮೋಹಕವಾಗಿದೆ. ಇದು ನೀಲಗುಂದದ ತ್ರಿಕೂಟ ದೇವಾಲಯಕ್ಕೆ ಹೋಲಿಕೆಯಾಗಬಹುದು. ಸಂಡೂರಿನ[೨೧] ನಾರಿಹಳ್ಳದಲ್ಲಿ ತ್ರೈಪುರುಷ ದೇವಾಲಯ ವಿದೆ. ದೇವಾಲಯದಲ್ಲಿರುವ ಶಾಸನವು ಚಾಲುಕ್ಯರ ವಂಶಾವಳಿಯನ್ನು ತಿಳಿಸುತ್ತದೆ. ಇನ್ನೂ ಕಲ್ಲೇಶ್ವರ ದೇವಾಲಯದಲ್ಲಿರುವ ಕೆಲವು ಶಿಲ್ಪಗಳು. ಮುಖ್ಯವಾಗಿ ಉಮಾಮಹೇಶ್ವರ ಶಿಲ್ಪ, ಮಹಿಷಾಸುರ ಮರ್ಧಿನಿ, ಸರಸ್ವತಿ ಶಿಲ್ಪಗಳು ನೋಡಲು ತುಂಬಾ ಸೊಗಸಾಗಿವೆ.[೨೨]

ಉಮಾಮಹೇಶ್ವರ ಶಿಲ್ಪಗಳು

ಇದು ಹನ್ನೊಂದನೆಯ ಶತಮಾನದ ಶಿಲ್ಪವಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲದ ಕೆಲವು ದೇವಾಲಯಗಳ ಭಿತ್ತಿಗಳಲ್ಲಿ ಕಂಡುಬಂದಿವೆ. ಮಹಾಮಂಟಪದ ನಾಲ್ಕು ಕಂಬಗಳ ಕೆಳಭಾಗದ ಚೌಕಾಕೃತಿಯಿಂದ ಕೂಡಿದ ಭಾಗದಲ್ಲಿ ಇದನ್ನು ಕೆತ್ತಲಾಗಿದೆ.

ಶಿವನ ತೊಡೆಯ ಮೇಲೆ ಕುಳಿತ ಉಮಾದೇವಿಗೆ ದುಂಡಾಕಾರವಾಗಿ ಅಲಂಕರಿಸಿದ ತಲೆಗೂದಲು, ಅದರ ಹಿಂಭಾಗದಲ್ಲಿ ಕಲಾತ್ಮಕ ಶಿರಶ್ಚಕ್ರ ಕಟ್ಟಿರುವಂತಿದೆ. ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಕಂಠಾಭರಣ, ಕೊರಳಹಾರ, ಭುಜಕೀರ್ತಿ, ಕೇಯೂರ, ಕೈಗಡಗ, ಎಡಗೈಯಲ್ಲಿ ಫಲ, ಬಲಗೈನಿಂದ ಶಿವನ ಬೆನ್ನಿನ ಹಿಂಭಾಗ ಬಳಸಿಕೊಂಡಿದ್ದಾಳೆ. ಮೊಣಕಾಲಿನಿಂದ ಕೆಳಗೆ ಇಳಿಬಿದ್ದಿರುವ ಮಣಿಸರದ ಹಾರ, ಕಾಲಿನಲ್ಲಿ ಕಡಗ, ಪಾದರಸಗಳಿವೆ. ಕಾಲ ಕೆಳಭಾಗದಲ್ಲಿ ಸಿಂಹವಿದೆ. ಕಿರೀಟ ಮುಕುಟಧಾರಿಯಾದ ಮಹೇಶ್ವರ ಚತುರ್ಭುಜದಾರಿಯಾಗಿದ್ದು, ಇವನ ಪಕ್ಕಕ್ಕೆ ಉಮೆಯು ಕುಳಿತಿದ್ದಾಳೆ. ಕಿರೀಟದ ಹಿಂಭಾಗ ಶಿರಶ್ಚಕ್ರವಿದ್ದು, ಮಂದಹಾಸ ಬೀರುತ್ತಿರುವ ಮುಖ, ಕಿವಿಯಲ್ಲಿ ವೃತ್ತಾಕಾರದ ಓಲೆಗಳಿವೆ. ಮೇಲಿನ ಬಲಗೈಯಲ್ಲಿ ತ್ರಿಶೂಲವಿದ್ದು, ಎಡಗೈ ಮೇಲ್ಭಾಗ ತ್ರುಟಿತವಾಗಿರುವುದರಿಂದ ಆ ಕೈಯಲ್ಲಿ ಹಿಡಿದ ಆಯುಧ ಗೋಚರಿಸುವುದಿಲ್ಲ. ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು, ಕೆಳಎಡಗೈಯು ಉಮೆಯನ್ನು ಆಲಂಗಿಸಿದಂತಿದೆ. ಮಣಿಗಳ ಅಲಂಕಾರ ಕುಚಬಂಧವಿದ್ದು ಒಂದು ಭಾಗವು ಕಾಲ ಮಧ್ಯದಲ್ಲಿ ಇಳಿಬಿದ್ದಿದೆ. ಕಾಲಿನಲ್ಲಿ ಕಡಗ ಪಾದರಸ ಹಾಗೂ ಕಾಲಿನ ಬೆರಳುಗಳಲ್ಲಿ ಉಂಗುರಗಳಿವೆ. ವೃತ್ತಾಕಾರದ ಮುಖ, ನೀಳವಾದ ಮೂಗು, ಎದ್ದು ಕಾಣುವ ಹುಬ್ಬು, ಉಬ್ಬಿದ ಕೆನ್ನೆ ಹಾಗೂ ತುಟಿಗಳು, ಸೌಮ್ಯ

ಸ್ವಭಾವವನ್ನು ಪ್ರತಿಬಿಂಬಿಸುವ ಈ ಮೂರ್ತಿ ದಾಂಪತ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಕಪ್ಪು ಹಸಿರು ಶಿಲೆಯಿಂದ ಕೂಡಿದ ಈ ಶಿಲ್ಪ ಬಾಗಳಿಯ ವಸ್ತುಸಂಗ್ರಹಾಲಯದಲ್ಲಿದೆ.

ಮಹಿಷಾಸುರ ಮರ್ದಿನಿಯ ಶಿಲ್ಪ

ನಮ್ಮ ಸಂಪ್ರದಾಯದಲ್ಲಿ ಹೆಣ್ಣು ದೇವತೆಯನ್ನು, ರುದ್ರೆ, ಗಾಯತ್ರಿ, ಕಾಳಿ, ಶಕ್ತಿ, ದುರ್ಗೆ ಹೀಗೆ ಹಲವಾರು ಹೆಸರುಗಳಿಂದ ಕರೆಯಲಾಗಿದೆ. ಇಂತಹ ಶಕ್ತಿ ದೇವತೆಗಳಲ್ಲಿ ಮಹಿಷಾಸುರ ಮರ್ದಿನಿಯೂ ಒಂದು. ಈ ಶಿಲ್ಪ ಕಲ್ಲೇಶ್ವರ ದೇವಾಲಯದ ಮಹಾಮಂಟಪದಲ್ಲಿದ್ದು ಈಗ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರವಾಗಿದೆ. ಕಿರೀಟಧಾರಿಯಾದ ಈ ಶಿಲ್ಪ ಚತುರ್ಭುಜಧಾರಿಯಾಗಿದ್ದು, ಕಿವಿಯಲ್ಲಿ ಚಕ್ರಕುಂಡಲಗಳಿವೆ. ಹಾಗೆಯೇ ಕೊರಳಲ್ಲಿ ವಿವಿಧ ಬಗೆಯ ಸರಗಳಿದ್ದು, ಕೈಯಲ್ಲಿ ಕೇಯೂರ ಕಡಗಗಳಿವೆ. ಮೇಲಿನ ಕೈಗಳಲ್ಲಿ ಶಂಖ, ಚಕ್ರ. ಕೆಳಗಿನ ಬಲಗೈಯಲ್ಲಿ ತ್ರಿಶೂಲವಿದೆ. ಆ ತ್ರಿಶೂಲವು ಮಹಿಷಾಸುರನಿಗೆ ತಾಗಿದ ರೀತಿಯಲ್ಲಿದೆ. ಎಡಗೈನಿಂದ ಆತನ ತಲೆಯನ್ನು ಹಿಡಿದು ಕೊಳ್ಳಲಾಗಿದೆ. ಆಲೀಢಭಂಗಿಯಲ್ಲಿರುವ ಈ ಮೂರ್ತಿಯ ಎಡಗಾಲು ಅಸುರನ ಎದೆಯ ಬಳಿ ಇದೆ. ಬಲಗಾಲು ಪೀಠದ ಮೇಲಿದ್ದು, ಕಾಲಿನಲ್ಲಿ ಕಡಗಗಳಿವೆ. ಸುತ್ತಲೂ ಅಲಂಕಾರಯುಕ್ತ ಪ್ರಭಾವಳಿ ಇದೆ. ಇದೇ ಲಕ್ಷಣವನ್ನು ಹೋಲುವ ಮತ್ತೊಂದು ಮೂರ್ತಿಯು ವಸ್ತುಸಂಗ್ರಹಾಲಯದಲ್ಲಿದೆ. ಹೀಗೆ ಇದನ್ನು ನಾಜೂಕು ಕೆತ್ತನೆಯ ಸುಂದರ ವಿಗ್ರಹವೆನ್ನಬಹುದು. ಇದನ್ನು[೧೨] ವಿಶೇಷವಾಗಿ ದೇವಾಲಯದ ಗೋಡೆಗಳ ಮೇಲ್ಭಾಗದಲ್ಲಿ ಮತ್ತು ಶಿಖರದ ವಿವಿಧ ಸ್ತರಗಳಲ್ಲಿ ಅಳವಡಿಸುತ್ತಿದ್ದರು. ಇದು ದೊಡ್ಡ ಶಿಲ್ಪವಾದರೂ ದ್ರಾವಿಡ ಶೈಲಿಗೆ ಸೇರಿದೆ. ಹೀಗೆ ವಾಸ್ತುವಿನ್ಯಾಸಗಳನ್ನೊಳಗೊಂಡ ಶಿಲ್ಪಗಳನ್ನು ಉಬ್ಬುಗಂಬಗಳ ಮೇಲೆ ದೇವಕೋಷ್ಠಕಗಳಲ್ಲಿ ಅಳವಡಿಸಿದ್ದಾರೆ.

ಸರಸ್ವತಿ

ಕಲ್ಯಾಣಿ ಚಾಲುಕ್ಯರು ಕಲೆ ಮತ್ತು ವಿದ್ಯಾಪೋಷಕರೂ ಆಗಿದ್ದರು. ಇವರು ವಿದ್ಯಾ ದೇವತೆಯಾದ ಸರಸ್ವತಿಯನ್ನು ಪೂಜಿಸುತ್ತಿದ್ದರು. ಬಾಗಳಿಯಲ್ಲಿರುವ ಸರಸ್ವತಿ ಮೂರ್ತಿ ಇವರ ಕಾಲದ್ದೇ ಆಗಿದ್ದು, ಕಲ್ಲೇಶ್ವರ ದೇವಾಲಯದಲ್ಲಿದ್ದ ಈ ಮೂರ್ತಿಯನ್ನು ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರಿಸಲಾಗಿದೆ. ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಈ ಶಿಲ್ಪ ಕರಂಡ ಮುಕುಟದಾರಿಯಾಗಿದ್ದು, ಕಿವಿಯಲ್ಲಿ ಕುಂಡಲಗಳಿವೆ. ಕೊರಳಲ್ಲಿ ಕಂಠಹಾರ, ಎದೆಹಾರ ವೈಜಯಂತಿಹಾರಗಳಿದ್ದು, ಕುಚಬಂಧವಿದೆ. ಹಾಗೆಯೇ ಭುಜಕೀರ್ತಿ ಕೇಯೂರ ಕೈಕಡಗಗಳಿವೆ. ಚತುರ್ಭುಜ ದಾರಿಯಾದ ಈ ಮೂರ್ತಿಯ ಮೇಲಿನ ಕೈಗಳಲ್ಲಿ ಅಂಕುಶ, ಪಾಶ ಕೆಳಗಿನ ಕೈಗಳಲ್ಲಿ ಅಕ್ಷಯ ಮಾಲೆ, ಪುಸ್ತಕಗಳಿದ್ದು ಬೆರಳುಗಳಲ್ಲಿ ಉಂಗುರಗಳಿವೆ.

ಅಲಂಕೃತ ನಡುಬಂಧ, ಕಾಲ್ಕಡಗ, ಪಾದರಸವಿದ್ದು, ಸುತ್ತಲೂ ಪ್ರಭಾವಳಿಯಿದೆ. ಆ ಪ್ರಭಾವಳಿಯ ಮೇಲ್ಭಾಗ ತ್ರುಟಿತವಾಗಿದೆ. ಇದು ಕಲ್ಯಾಣಿಚಾಲುಕ್ಯರ ಒಂದು ಉತ್ತಮವಾದ ಮೂರ್ತಿಯಾಗಿದೆ.

ಕಲ್ಯಾಣಿ ಚಾಲುಕ್ಯರ ಅಥವಾ ಈ ಶೈಲಿಯ ಶಿಲೆಯ ಕೆಲವು ಲಕ್ಷಣಗಳು

ಕಲ್ಯಾಣಿ ಚಾಲುಕ್ಯರ ವಾಸ್ತುಶಿಲ್ಪವು ಮೂಲತಃ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪ ಸಂಪ್ರದಾಯದಿಂದಲೇ ಆರಂಭವಾದರೂ ಕೊನೆಗೆ ಇವರು ತಮ್ಮದೇ ಆದ ಅಂಶಗಳಿಂದ ಹೊಸರೂಪಗಳನ್ನು ಮಾಡಿಕೊಂಡರು.(೩೨) ಹಿತಮಿತವಾದ ಕುಸುರಿ ಕೆಲಸಕ್ಕೆ ಪ್ರಾಧಾನ್ಯತೆಯನ್ನು ನೀಡಿದರು. ಗೋಪುರ ಅಥವಾ ಶಿಖರಗಳನ್ನು ವೇಸರ ಶೈಲಿಯಲ್ಲಿ ನಿರ್ಮಿಸಿದರು. ಅದು ಕಪ್ಪುಮಿಶ್ರಿತ ಬಳಪದ ಕಲ್ಲನ್ನು ದೇವಾಲಯಗಳ ನಿರ್ಮಾಣಕ್ಕೆ ಉಪಯೋಗಿಸಿದ್ದು ದೇವಾಲಯದ ಮಹತ್ವದ ಅಂಶ. ಇವರ ಕಾಲದಲ್ಲಿ ಕೆಂಪು ಉಸುಗು ಕಲ್ಲಿನಲ್ಲಿಯೂ ದೇವಾಲಯ ನಿರ್ಮಾಣವಾದವು. ಉದಾ.ಕುಕ್ಕನೂರಿನ ಕಲ್ಲೇಶ್ವರ ದೇವಾಲಯವನ್ನು ಹೆಸರಿಸಬಹುದು. ಬಳಪದ ಕಲ್ಲು(saop stone) ಅತ್ಯಂತ ಸೂಕ್ಷ್ಮ ಹಾಗೂ ಕುಸುರಿನ ಕೆಲಸವನ್ನು ಮಾಡಲು ರೂವಾರಿಗಳಿಗೆ ಹೆಚ್ಚು(ಅಲಂಕಾರಕ್ಕೆ) ಅನುಕೂಲವಾದ್ದರಿಂದ ಈ ಕಾಲದ ದೇವಾಲಯಗಳಲ್ಲಿಯ ವಿವಿಧ ಭಾಗಗಳು ಹೆಚ್ಚು ಅಲಂಕಾರಿಕವಾಗಿರುವುದು ಕಂಡುಬರುತ್ತದೆ. ರತ್ನಾಭರಣಗಳಲ್ಲಿ ಕಂಡುಬರುವ ನಯಗಾರಿಕೆ ಹಾಗೂ ಸೂಕ್ಷ್ಮಕೆತ್ತನೆಯ ಕೆಲಸವನ್ನು ದೇವಾಲಯಗಳ ದ್ವಾರ ಮತ್ತು ಮೂರ್ತಿಶಿಲ್ಪಗಳಲ್ಲಿ ಕಾಣುತ್ತೇವೆ.

ಈ ಕಾಲದ ಹೆಚ್ಚಿನ ದೇವಾಲಯಗಳು ನಿರಂಧಾರ ಪ್ರಕಾರಗಳು. ಇವುಗಳಲ್ಲಿ ಏಕಕೂಟ ದೇವಾಲಯಗಳೇ ಹೆಚ್ಚು. ಇವರ ದೇವಾಲಯಗಳ ತಲವಿನ್ಯಾಸದಲ್ಲಿ ಹೊಸ ಹೊಸ ಬಗೆಯ ಆಕಾರಗಳನ್ನು ಕಾಣಬಹುದು. ಬಾಗಳಿ ಕಲ್ಲೇಶ್ವರ ದೇವಾಲಯ ಬಹುಕೋನವಾಗಿದೆ. ಆದರೂ ಚತುರ್‌ಕಾರವಾಗಿದೆ ಎಂದು 'ರೇ' ಅವರು ಅಭಿಪ್ರಾಯ ಪಡುತ್ತಾರೆ.[೩೩]

ಚಾಲುಕ್ಯರ ಅವಧಿಯಲ್ಲಿನ ದೇವಾಲಯಗಳ ನಿರ್ಮಾಣವನ್ನು ತಜ್ಞರು ನಾಲ್ಕು ಹಂತಗಳಲ್ಲಿ ವಿಂಗಡಿಸುತ್ತಾರೆ.[೩೪] ಆರಂಭದ ಹಂತ - ಈ ಅವಧಿಯಲ್ಲಿ ಚಾಲುಕ್ಯರ ಸ್ಥಪತಿ ಮತ್ತು ಶಿಲ್ಪಿಯು ಹಿಂದಿನ ಬಾದಾಮಿ ಚಾಲುಕ್ಯರ ಶೈಲಿಯ ಪ್ರಭಾವವನ್ನೇ ಮುಂದುವರಿಸಿದ್ದಾನೆ. ಅಷ್ಟೇ ಅಲ್ಲದೆ ಮರಳುಗಲ್ಲನ್ನೇ ಮಾಧ್ಯಮವನ್ನಾಗಿ ಉಪಯೋಗಿಸಿದ್ದಾನೆ.

ಎರಡನೆಯ ಹಂತ - ಈ ಹಂತದಲ್ಲಿ ಬಳಪದ ಕಲ್ಲನ್ನು ಶಿಲ್ಪಿಯು ಅದರ ಗುಣದಿಂದ ಪ್ರಭಾವಿತನಾಗಿ ಪೂರ್ಣರೂಪದಲ್ಲಿ ಬಳಸಲು ಪ್ರಾರಂಭಿಸಿದನು. ಪಟ್ಟದಕಲ್ಲಿನ ಪ್ರಭಾವದಿಂದ ವಿಮುಕ್ತನಾದ ಸ್ಥಪತಿಯು ಶಿಖರ, ತಲವಿನ್ಯಾಸ ಮತ್ತು ಶಿಲ್ಪಗಳಲ್ಲಿ ತನ್ನತನವನ್ನು ಒಡಮೂಡಿಸಲು ಸ್ಪಷ್ಟವಾಗಿ ಪ್ರಯತ್ನಿಸಿದ್ದಾನೆ. ಇಲ್ಲಿ ನಯ, ನಾಜೂಕು, ಕುಸುರಿ ಕೆಲಸ ಕಾಣಲು ಸಿಗುತ್ತದೆ.

[illegible]

ಮೂರನೆಯ ಹಂತ - ಈ ಹಂತದಲ್ಲಿ ಕುಸುರಿ ಕೆಲಸ ಗೋಡೆಗಂಬಗಳ ವೈವಿಧ್ಯತೆ, ಒರೆ ಕಪೋತಗಳು, ದೇವಾಲಯದ ಹೊರಗೋಡೆಯನ್ನು ಹೆಚ್ಚು ಆಕರ್ಷಕವಾಗಿಸಿವೆ. ಚಾಡದಾನಾಪುರದ ಮುಕ್ತೇಶ್ವರ, ಹರಳಿಹಳ್ಳಿಯ ಸೋಮೇಶ್ವರ(ಧಾರವಾಡ ಜಿಲ್ಲೆ) ಇದಕ್ಕೆ ಉದಾಹರಣೆ.

ನಾಲ್ಕನೆಯ ಹಂತ - ಈ ಹಂತದಲ್ಲಿ ಸ್ಥಪತಿಯು ದೇವಾಲಯವನ್ನು ತುಂಬಾ ಆಕರ್ಷಕವಾಗುವ ರೀತಿಯಲ್ಲಿ ಅದರ ಪ್ರತಿಯೊಂದು ಭಾಗವನ್ನು ಕುಸುರಿ ಕೆಲಸದಿಂದ ಸಿಂಗರಿಸಿದ್ದಾನೆ. ಶಿಖರವನ್ನು ಬಳ್ಳಿಗಳಿಂದ ಸುಂದರ ಶಿಲ್ಪಗಳಿಂದ ಸಿಂಗರಿಸಿದ್ದರೆ, ಹೊರಮೈಯನ್ನು ಗೋಡೆಗಂಬಗಳಿಂದ, ದೇವಕೋಷ್ಟಗಳಿಂದ ಅಂದಗೊಳಿಸಿದ್ದಾನೆ. ದೇವಾಲಯದ ಮಹಾಮಂಟಪವು(ಕ.ದೇ.ಬಾಗಳಿ) ಅನುಪಮ ಹಾಗೂ ವೈವಿಧ್ಯ ಶೈಲಿಯ ಸ್ತಂಭ ಅದ್ಭುತವೆನಿಸಿದರೆ, ಅರ್ಧಮಂಟಪ, ಅಂತರಾಳ ಮಂಟಪಗಳ ದ್ವಾರಗಳು ಕುಸುರಿ ಕೆಲಸದಿಂದಾಗಿ ಸುಂದರವಾಗಿವೆ. ದೇವಶಿಲ್ಪಗಳು ಸಮಪ್ರಮಾಣದಲ್ಲಿದ್ದು, ಹಿತಮಿತ ಪ್ರಭಾವಳಿಯಿಂದ ಕೂಡಿದ್ದು ತುಂಬಾ ಪ್ರಭಾವಿತವಾಗಿವೆ. ಇಟಗಿಯ ಮಹದೇವ ದೇವಾಲಯ, ಕಾಶಿ ವಿಶ್ವೇಶ್ವರ, ಹಡಗಲಿಯ ಕುರುವತ್ತಿ ಮಲ್ಲಿಕಾರ್ಜುನ, ನೀಲಗುಂದ ಭೀಮೇಶ್ವರ ದೇವಾಲಯಗಳು ಇದಕ್ಕೆ ಪ್ರತಿನಿಧಿಗಳು. ಹೀಗೆ ಆ ಅವಧಿಯ ಶಿಲ್ಪಿಗಳು ಈ ಹಂತದಲ್ಲಿ ದೇವಾಲಯಗಳ ನಿರ್ಮಾಣ ಮಾಡಿ ಪ್ರಖ್ಯಾತಿ ಪಡೆದಿದ್ದರು. ಬಾಗಳಿಯ ಶಿಲ್ಪದ ವೈಭವವನ್ನು ಕಂಡು ಹಲವು ವಿದ್ವಾಂಸರು ಬಗೆಬಗೆಯಲ್ಲಿ ವರ್ಣಿಸಿದ್ದಾರೆ.

ಬಾಗಳಿಯ ದೇವಾಲಯದಲ್ಲಿರುವ ನರಸಿಂಹದೇವಾಲಯದ ಅವತಾರ ಮೂರ್ತಿಯು ಹನ್ನೆರಡು ಬಾಹುಗಳನ್ನು ಪಡೆದಿದ್ದು, ಹಿರಣ್ಯಕಶ್ಯಪುವಿನ ಕರಳನ್ನು ಬಗೆಯುತ್ತಿದ್ದಾನೆ. ಈ ದೃಶ್ಯದ ಚಿತ್ರಣವು ಅಸಾಧಾರಣವಾದುದು. ಇದಕ್ಕೆ ಶಿಲ್ಪಿಗೆ ಇರಬಹುದಾದ ಕಲ್ಪನಾ ಶಕ್ತಿ ಅವಶ್ಯಕವಾಗಿರಬೇಕು. ಆದರೆ ಉಗ್ರನರಸಿಂಹಸ್ವಾಮಿಯು ಇಲ್ಲಿ ದೈವಶಕ್ತಿಯಂತೆ ತೋರುವುದಿಲ್ಲ. ಮೊನಚಾದ ಉಗುರುಗಳು ಭಯವನ್ನು ಮೂಡಿಸುವುದರಲ್ಲಿ ಹಿಂದೆ ಉಳಿಯುತ್ತವೆ. ಸಮಾಂತರವಾದ ರೇಖೆಗಳ ತರಹ ಕೇಸರಗಳನ್ನು ಸಂಕೇತಿಸುತ್ತದೆ. ಸ್ವಾಮಿಯ ಪಾದಗಳ ಬಳಿ ಎರಡೂ ಕಡೆಗಳಲ್ಲಿ ಭಕ್ತರು ಚಕಿತರಾಗಿ ನೋಡುತ್ತಿದ್ದಾರೆ.[೨೧]

ಚಾಲುಕ್ಯರ ಯುಗದಲ್ಲಿ ಕೊನೆಯವರಾದ ಕಲ್ಯಾಣಿಚಾಲುಕ್ಯರು, ವಾತಾಪಿಯ ಚಾಲುಕ್ಯರು ಹಾಗೂ ರಾಷ್ಟ್ರಕೂಟರಂತೆ ಕೆಲವೇ ಸ್ಥಳಗಳಲ್ಲಿ ತಮ್ಮ ವಾಸ್ತುಸಂಧನೆಯನ್ನು ಕೇಂದ್ರಿಕರಿಸಲಿಲ್ಲ. ಬದಲಾಗಿ ಸಾಮ್ರಾಜ್ಯದ ಪ್ರಮುಖ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದರು. ಅವುಗಳಲ್ಲಿ ಬಾಗಳಿಯ ಕಲ್ಲೇಶ್ವರ ದೇವಾಲಯ ಒಂದಾಗಿದೆ.[೨೨]

ದ್ವಾರಗಳಲ್ಲಿಯೇ ಜಾಲಾಂಧ್ರಗಳನ್ನು ಅಳವಡಿಸಿರುವ ಉದಾಹರಣೆ, ಬಾಗಳಿಯ ಕಲ್ಲೇಶ್ವರ ದೇವಾಲಯದ ಅಂತರಾಳದ್ವಾರ ಎರಡು ಅರ್ಧಕಂಬಗಳ ಮಧ್ಯೆ ಜೋಡಿಸಲಾಗಿದ್ದು, ಇದರಲ್ಲಿ ನಾಲ್ಕು ನಾಲ್ಕು

ದ್ವಾರಶಾಖೆಗಳು ಇವೆ. ಇವುಗಳಲ್ಲಿ ಮೂರನೆ ಭಾಗದಲ್ಲಿ ದ್ವಾರಪಾಲಕರಿದ್ದಾರೆ. ಅರ್ಧಕಂಬಗಳ ಮೇಲ್ಭಾಗಗಳ(ಗದ) ಮೇಲೆ ಮಕರ ತೋರಣವನ್ನು ಅಳವಡಿಸಲಾಗಿದೆ. ಇದೇ ದೇವಾಲಯದ ಅರ್ಧಮಂಟಪದ ದ್ವಾರದಲ್ಲಿ ದ್ವಾರಪಾಲಕರಲ್ಲದೆ, ರತಿ-ಮನ್ಮಥರ ಶಿಲ್ಪಗಳನ್ನು ಕೆತ್ತಿದ್ದಾರೆ. ಇವುಗಳ ಮೇಲೆ ತೋರಣಗಳಿದ್ದು, ಮೇಲ್ಭಾಗದಲ್ಲಿ ಕೀರ್ತಿಮುಖ[೨೮]ವಿದೆ. ಐಹೊಳೆಯನ್ನು ಬಗೆಬಗೆಯ ವಾಸ್ತು ಮತ್ತು ಶಿಲ್ಪಕಲೆಯ ಪ್ರಯೋಗಶಾಲೆಯೆಂದು ಕರೆಯುವುದುಂಟು. ಬಾಗಳಿಯು ಕಲ್ಯಾಣಿ ಚಾಲುಕ್ಯರ ವಾಸ್ತು ಶಿಲ್ಪಕಲೆಯ ಪ್ರಯೋಗ ಶಾಲೆ ಎಂದರೆ ತಪ್ಪಾಗಲಾರದು.

ದೇವಾಲಯಗಳಿಗೆ ನೀಡಿದ ದಾನ ದತ್ತಿಗಳು

ಸಾಮಾನ್ಯವಾಗಿ ಯಾವ ವ್ಯಕ್ತಿ ದೇವರು ಮತ್ತು ದೇವಾಲಯಗಳನ್ನು ಪ್ರತಿಷ್ಠಾಪಿಸುತ್ತಾನೋ ಅವನ ಹೆಸರಿನಿಂದ ಆ ದೇವಾಲಯ ಅಥವಾ ಆ ದೇವರನ್ನು ಕರೆಯಲಾಗುತ್ತಿತ್ತು. ಇದಕ್ಕೆ ದೇವಸ್ಥಾನವನ್ನು ಕಟ್ಟಿಸಿದವನ ಹೆಸರು ದೇವರಿಗೆ ಬಂದು, ಕಟ್ಟಿಸಿದವನು ದೇವರೇ ಆಗಿಬಿಡುತ್ತಾನೆ ಎಂಬ ನಂಬಿಕೆಯಾಗಿತ್ತು.[೨೯] ಹೀಗೆ ಕರ್ನಾಟಕ ಚರಿತ್ರೆಯಲ್ಲಿ ಅನೇಕ ರಾಜಮನೆತನಗಳ, ಅರಸರು ದೇವಾಲಯಗಳನ್ನು ಕಟ್ಟಿಸಿ ನೋಡಿಕೊಳ್ಳುವುದಕ್ಕೆ ಆಡಳಿತದಲ್ಲಿ ವಿವಿಧ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಇವರಲ್ಲಿ ಅಧಿಕಾರಿಗಳು, ವರ್ತಕರು, ಸಾಮಾನ್ಯ ಜನರು ಯಾವ ಬೇಧ-ಭಾವವಿಲ್ಲದೆ ಸಾಮುಹಿಕವಾಗಿಯೂ, ವೈಯಕ್ತಿಕವಾಗಿಯೂ, ದಾನ-ದತ್ತಿಗಳನ್ನು ಬಿಟ್ಟಿದ್ದಾರೆ. ದೇವಸ್ಥಾನಗಳಿಗೆ ಬಿಡುವ ದಾನದ ವಸ್ತುಗಳಲ್ಲಿ ಭೂಮಿ, ನಿವೇಶನ, ಹಣ, ದವಸ, ಧಾನ್ಯ, ಎಣ್ಣೆಗಾಣ, ಸುಂಕ ಮೊದಲಾದವು ಸೇರಿದ್ದವು.[೩೦] ಇದರಿಂದ ದೇವಾಲಯಗಳು ವಿಫಲ ಬೆಳವಣಿಗೆಯನ್ನು ಹೊಂದುತ್ತಿದ್ದವು. ಬಂದ ದತ್ತಿ(ದಾನ)ಗಳನ್ನು ರಕ್ಷಿಸಲು ಅನೇಕ ಧರ್ಮದರ್ಶಿಗಳಿರುತ್ತಿದ್ದರು. ಬಿಟ್ಟ ದಾನ(ದತ್ತಿ)ಗಳ ರಕ್ಷಣೆಯನ್ನು ಅರಸರು, ಅಧಿಕಾರಿಗಳು, ಗಾವುಂಡರು, ವ್ಯಾಪಾರಿಗಳು ಮಾಡುತ್ತಿದ್ದರು.[೩೧]

ಇವರು ಒಂದಾದರೂ ಗುಡಿಯನ್ನು ಕಟ್ಟಿಸಬೇಕು ಇಲ್ಲವೆ ಕಟ್ಟಿಸಿದ ಗುಡಿಗಳಿಗೆ ದಾನವನ್ನಾದರೂ ಕೊಡಬೇಕು ಎಂಬುವುದು ಅಂದಿನವರ ಧಾರ್ಮಿಕ ಭಾವನೆಯಾಗಿತ್ತು. ಪ್ರಾಯಶಃ ಇದಕ್ಕೆ ಇರಬೇಕು ವಿಜಯನಗರದ ಪ್ರೌಢಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರಾಮಾತ್ಯನು ಮಹಾಗಣಪತಿಯನ್ನು ಸ್ಥಾಪಿಸಿ ಅದಕ್ಕೆ ದತ್ತಿಬಿಟ್ಟ ಸಂಗತಿ ಈ ಶಾಸನದಲ್ಲಿ ಹೇಳಿದೆ. ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಅವನಿಗೆ ಉದಾತ್ತ ವಿಚಾರದ ಸಂಸ್ಕೃತಿಯನ್ನು ಅವನಿಗೆ ಅರಿವಾಗುವಂತೆ

ಕೆರೆಯಂ ಕಟ್ಟಿಸು, ಭಾವಿಯಂ ಸವೆಸು; ದೇವಾಗಾರಮಂ ಮಾಡಿಸ
ಜ್ಜರೆಯೊಳ್ ನಿಲ್ಕದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ|
ರ್ಗೆರುವೆಚ್ಚಾಗಿರು, ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿರಿದೆದೆತಾ
ಮೆರದಳ್ಪಾಲೆರೆವೆಂದು ತೊಟ್ಟು ಕಿವಿಯಾಳ್ ಲಕ್ಷ್ಮೀಧರಾಮಾತ್ಯನಾ|[೩೨]

ಎಂದು ಅವನಿಗೆ ಹೇಳುತ್ತಿದ್ದಳಂತೆ. ಇಂತಹ ಮಾತು ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಜನಜೀವನದಲ್ಲಿ ಕಂಡುಬಂದಿವೆ. ಇಂತಹ ದಾನಗುಣವನ್ನು ಹೊಂದಿ, ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿದ ಹೊಯ್ಸಳರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರ ಅರಸರು, ವೈಯಕ್ತಿಕವಾಗಿ ಕುಟುಂಬದ ಸದಸ್ಯನಾಗಿ, ಸಮುದಾಯದ ಜೀವಿಯಾಗಿ ದಾನ ನೀಡಿರುವುದನ್ನು ಇಲ್ಲಿಯ ಶಾಸನಗಳು ಪ್ರಸ್ತಾಪಿಸುತ್ತವೆ.

ರಾಷ್ಟ್ರಕೂಟರು ನೀಡಿದ ದಾನ-ದತ್ತಿಗಳು

ಈ ದಾನದ ವಿವರಗಳನ್ನು ಹೇಳುವಾಗ ಒಂದು ವಿಷಯ ಸ್ಪಷ್ಟಪಡಿಸಬೇಕಾಗುತ್ತದೆ. ಸಾಮಾನ್ಯವಾಗಿ ಈ ಶಾಸನಗಳಲ್ಲಿ ದಾನಿಯು ಇಂತಿಷ್ಟು ಭೂಮಿಯನ್ನು ದೇವಾಲಯಕ್ಕೂ, ಸಂಸ್ಥೆಗೋ ದಾನವಾಗಿ ನೀಡಿದಾಗ ಸೂಕ್ಷ್ಮವಾಗಿ ಅದನ್ನು ಅಂಗರಂಗಭೋಗಗಳಿಗೆಂದೋ, ಪೂಜೆಪುನಸ್ಕಾರಗಳಿಗೆಂದೋ ನೀಡುತ್ತಿದ್ದರು. ಆದರೆ, ಅದನ್ನು ಯಾವ ರೀತಿಯಲ್ಲಿ ವಿನಿಯೋಗಿಸಬೇಕು ಎಂಬ ವಿವರ ಶಾಸನದಲ್ಲಿ ಕಂಡುಬರುವುದಿಲ್ಲ.

ರಾಷ್ಟ್ರಕೂಟರ ದೊರೆ ಕನ್ನರದೇವನು ಆಳುತ್ತಿದ್ದಾಗ, ರೊಟ್ಟಯ್ಯನು ಬಾಗಳಿಯ ಊರೊಡೆಯ ಪಶುಪತಿ(ಶಿವ) ಭಟ್ಟನಿಗೆ 'ಬಾಬಂದಿ'ಯ ಸಂಬಂಧದರಾಜದ್ರವ್ಯವೆಲ್ಲ ಬಿಡುತ್ತಾನೆ.[೩೩] (ಶಾಸನ ತ್ರುಟಿತವಾಗಿರುವುದರಿಂದ ದಾನದ ಕಾರಣ ತಿಳಿದು ಬರುವುದಿಲ್ಲ) ದೋರಪಯ್ಯ ಎಂಬುವನು ಬಾಗಳಿಯ ಊರೊಡೆಯ ಪಶುಪತಿಭಟ್ಟನಿಗೆ ದಾನ ಕೊಟ್ಟನೆಂದು ಉಲ್ಲೇಖಿಸುತ್ತದೆ. ಮಾಹಿತಿ ಸ್ಪಷ್ಟವಾಗಿಲ್ಲ.

ಇದೇ ವಂಶದ ಅರಸನಾದ ಮೂರನೆಯ ಕೃಷ್ಣನು ದೇಕಮ್ಮನ ದೇವಾಲಯಕ್ಕೆ ಇದ್ದ ದತ್ತಿಯನ್ನು ನವೀಕರಿಸಿದ್ದುದನ್ನು ಶಾಸನ ತಿಳಿಸುತ್ತದೆ.[೩೪] ಇವನಂತೆಯೇ ಎರಡನೆಯ ಕೃಷ್ಣನು ಸಂಡೂರಿನ ಸಮೀಪವಿರುವ ಕುಮಾರಸ್ವಾಮಿ ದೇವರಿಗೆ ದತ್ತಿಬಿಟ್ಟಿದ್ದನ್ನು ಈ ಶಾಸನ ತಿಳಿಸುತ್ತದೆ. ಇವನ ಕಾಲಕ್ಕೆ ಸಂಡೂರಿನ ಕುಮಾರಸ್ವಾಮಿ ದೇವಾಲಯ ಪ್ರಸಿದ್ಧಿ ಪಡೆದಿತ್ತು. ಆದ್ದರಿಂದ ಇವನು ಭಕ್ತಿಪೂರ್ವಕವಾಗಿ ದೇವರ ನೈವೇದ್ಯಕ್ಕೆ(ಪ್ರೀತ ತಟಾಕ) (ಕೆರೆಯಪಳ್ಳಿ) ಈಗಿನ ಕೆರ್ನಳ್ಳಿ ಗ್ರಾಮವನ್ನು ದೇವರಿಗೆ ದಾನ ಬಿಡುತ್ತಾನೆ[೩೫] ಎಂದು ಉಲ್ಲೇಖಬರುತ್ತದೆ. ಇದೇ ರೀತಿ ಬಾಗಳಿಯ ಶಾಸನದಲ್ಲಿ ರಾಜ ಇಂದ್ರವಲ್ಲಭನಲ್ಲಿದ್ದ(ರಟ್ಟ ಕಂದರ್ಪ) ರೊಟ್ಟ ಎಂಬುವವನು ಬಾಗುಳಿಯ ಐವತ್ತು ಮಹಾಜನರ ಸಮ್ಮುಖದಲ್ಲಿ ಬಿಳಿಯರ ಬಾದಮ್ಮನಿಗೆ ಬೂದುಗೊಳವನ್ನು ಕೊಟ್ಟನು. ಬಾದಮ್ಮ ಕೆರೆಗೆ ದತ್ತಿಯನ್ನು ಕೊಟ್ಟಳೆಂದು ಉಲ್ಲೇಖ ಬರುತ್ತದೆ.[೩೬] ಆದರೆ ಹೂವಿನ ಹಡಗಲಿ ತಾಲೂಕಿನಲ್ಲಿ ಬೂದುನೂರು ಎಂಬ ಹೆಸರಿನ ಗ್ರಾಮವಿದೆ. ಇದೇ ಬೂದುಗೊಳ(ಆಗಿರಬಹುದೇ) ಆಗಿರುವುದೇ, ಆದರೆ ಇದಕ್ಕೆ ಸ್ಥಳನಾಮದ ಅಧ್ಯಯನಕಾರರು

ಬೇರೆಯ ಅರ್ಥಕೊಟ್ಟಿದ್ದಾರೆ. ಅಂದರೆ ಇದರ ವಿಶೇಷ ಅಲ್ಲಿ ಬೂದಿಯನ್ನು ಹೆಚ್ಚು ಉಪಯೋಗ ಮಾಡುವುದು, ಇಲ್ಲವೆ ದೊಡ್ಡದೊಂದು ತಗ್ಗು ತೆಗೆದು ಅದರಲ್ಲಿ ಒಂದು ಕಲ್ಲನ್ನು ಇಟ್ಟು ಮೇಲೆ ಬೂದಿಹಾಕುವುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಇಂಥಹ ವಿಷಯವನ್ನು ಉಲ್ಲೇಖಿಸುವ ಶಾಸನ[೩೭] ಮೂರನೆಯ ಕೃಷ್ಣನ ಆಳ್ವಿಕೆಯಲ್ಲಿ ಕತ್ಯರನು ಅಜವರ್ಮ್ಮನೆಂಬುವವನಿಗೆ 'ಒಡ್ಡವಡಂಗೆಲ' ಎಂಬ ಗ್ರಾಮದಾನ ಬಿಡುತ್ತಾನೆ. ಒಡ್ಡವಡಂಗ್ಗೆಲ್ಲಾ ಊರಿನ ದಾನಗಳನ್ನು(ಬಿಡುತ್ತಾ) ಪಡೆದ. ಒಡ್ಡವಡಂಗೆಲ್ಲ ಇದು ಒಂದು ಗ್ರಾಮದ ಹೆಸರು. ಕ್ರಿ.ಶ.೧೦೯೦[೩೮]ರಲ್ಲಿ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಹೂವಿನ ಹಡಗಲಿಗೆ ಪೂವಿನ ಪೊಸವಾಡಂಗಿಲೆ ಎಂದಿತ್ತು. ನಂತರ 'ಪ' ಕಾರವು 'ಹ'ಕಾರವಾಯಿತು. ನಂತರ ಹೂವಿನ ಹಡಗಲಿಯಾಯಿತು.[೩೮] ಆದರೆ ಹಿರೇಹಡಗಲಿಗೆ 'ಪೊಸವಡಂಗಿಲೆ' ಎಂಬ ಹೆಸರಿತ್ತು ಎಂಬುದು ಈ ಪದ್ಯದಿಂದ ತಿಳಿಯುತ್ತದೆ.

'ಪೊಸ ಕಾವ್ಯಂ ಪೊಸಗೇಯಂ
ಪೊಸವಾದ್ಯಂ ಪೊಸ ವಿನೂತರಸವಂ ವೃತ್ತಂ
ಪೊಸ ವಸ್ತು ಪೊಸ ವಿಳಾಸಂ
ಪೊಸ ದೇಸೆ ಸಮಂತು ಪೊಸವಡಂಗಿಲೆಗೆಲ್ಲಾ'[೩೯]

ಹೀಗೆ ಎರಡು ಗ್ರಾಮಗಳೂ ಪೂವಿನ ಪೊಸವಾಡಂಗಿಲೆ ಹೂವಿನ ಹಡಗಲಿಯಾದರೆ, ಪೊಸವಡಂಗಿಲೆ ಹಿರೇಹಡಗಲಿಯಾದರೆ, ಇಲ್ಲಿ ಬರುವ 'ಒಡ್ಡವಡಂಗೆಲ' ಯಾವುದು ಎಂಬುದು ಊಹಿಸಲು ಅಸಾಧ್ಯವಾಗಿದೆ. ಆದರೆ 'ಒಡ್ಡ' ಎಂದರೆ ದೊಡ್ಡ ಎಂಬ ಅರ್ಥಬರುತ್ತದೆ. ಆದ್ದರಿಂದ ದೊಡ್ಡವಡಂಗೆಲವೆಂದರೆ ಹೂವಿನ ಹಡಗಲಿಯಾಗಿರಬೇಕು. ಕುಂ.ಬಾ.ಸ. ಅವರು ಪೂವಿನ ಪೊಸವಡಂಗಿಲೆಯನ್ನು ಹೂವಿನ ಹಡಗಲಿ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಏಕೆಂದರೆ ಹಿರೇಹಡಗಲಿ ಶಾಸನದಲ್ಲಿ ಇದಕ್ಕೆ ಪೊಸವಡಂಗಿಲೆ > ಹಿರೇಹಡಗಲಿ ಎಂದು ಉಲ್ಲೇಖಬರುತ್ತದೆ. ಆದರೆ ಹೂವಿನ ಹಡಗಲಿಗಲ್ಲ ಎಂದು ಹೇಳಬಹುದು. ಇಲ್ಲಿಯ ಶಾಸನದಲ್ಲಿ 'ಪೂವಿನ ವಡಂಗಿಲೆ' ಎಂದು ಉಲ್ಲೇಖಿತವಾಗಿದೆ.[೪೦] ಶಾಸನದ ವಿವರದಲ್ಲಿ ಪೂವಿನ ಪೊಸವಡಂಗಿಲೆ ಎಂದು ಅರ್ಥೈಸಿದ್ದಾರೆ. ಪ್ರಾಯಶಃ ಇದು 'ಹೂವಿನ ಹಡಗಲಿ' ಇರಬೇಕೇ ವಿನಃ ಹಿರೇಹಡಗಲಿ ಆಗಿರಲಾರದು. ಆದರೆ ಶಾಸನದಲ್ಲಿ ಪೂವಿನ ಪೊಸ ವಡಂಗಿಲೆ ಎಂದು ಬಂದಿದೆ. ಇವುಗಳು ಏನೇ ಇದ್ದರೂ ಪೂವಿನವಡಂಗಿಲೆ ಎನ್ನುವುದು ಈಗಿನ ಹಿರೇಹಡಗಲಿಯಾಗಿದೆ. ಆದರೆ ಇಲ್ಲಿ ಉಲ್ಲೇಖವಾಗಿರುವ ಒಡ್ಡವಂಗೆಲ ಹೆಸರು ಏನನ್ನು ಸೂಚಿಸುತ್ತದೆಂದು ಸ್ಪಷ್ಟವಿಲ್ಲ.

ಪೂವಿನ ವಡಂಗಿಲೆ > ಹೂವಿನ ಹಡಗಲಿ

ಪೊಸ ವಡಂಗಿಲೆ > ಹಿರೇಹಡಗಲಿ

ಒಡ್ಡವಡಂಗೆಲ > ಒಡ್ಡವಡಜ್ಗೆಲೆ ದೊಡ್ಡವಡಂಗಿಲೆ > ಹೂವಿನ ಹಡಗಲಿ

ಹೊಯ್ಸಳರು ನೀಡಿದ ದಾನ-ದತ್ತಿಗಳು

ಬಳ್ಳಾರಿ ಜಿಲ್ಲೆ ೧೧೮೯ರ ಸುಮಾರಿಗಾಗಲೇ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಇವರು, ಉಚ್ಚಂಗಿ ಪಾಂಡ್ಯರನ್ನು ಸಾಮಂತರನ್ನಾಗಿ ಮಾಡಿಕೊಂಡಿದ್ದರು. ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದ ಇವರು ಚಾಲುಕ್ಯರಂತೆಯೇ ಇವರ ಕಾಲದಲ್ಲಿ ದೇವಾಲಯಗಳಿಗೆ, ಬಸದಿಗಳ ನಿರ್ಮಾಣಕ್ಕೆ ರಾಜಾಶ್ರಯದ ಕೊರತೆ ಇರಲಿಲ್ಲ. ರಾಜರು, ರಾಣಿಯರು, ಮಂತ್ರಿಗಳು, ದಂಡನಾಯಕರು, ದೇವಾಲಯಗಳನ್ನು ಕಟ್ಟಿಸಿ ಕೊಡುಗೆಗಳನ್ನು ನೀಡಿದರು. ಆದರೆ ಇವರು ದೇವಾಲಯಗಳನ್ನು ಪದರಗಲ್ಲುಗಳಿಂದ ನಿರ್ಮಿಸಿದ್ದರು. ಕಲ್ಯಾಣಿ ಚಾಲುಕ್ಯರ ಆಶ್ರಯದಲ್ಲಿ ಪದರಗಲ್ಲು ಮಾಧ್ಯಮದ ಬಳಕೆಯ ಒಂದು ನಿರ್ದಿಷ್ಟ ಶೈಲಿಯು, ಕರ್ನಾಟಕದ ಉತ್ತರ ಭಾಗಗಳಲ್ಲಿ ರೂಪುಗೊಂಡಿತ್ತು.[೬೨] ಆದ್ದರಿಂದ ಹೊಯ್ಸಳರು ಮಾದರಿಗಾಗಿಯೊ ಕಲಾವಿದರಿಗಾಗಿಯೊ ಉತ್ತರ ಭಾಗದ ಕಡೆಗೆ ನೋಡಿದ್ದುದು ಸಹಜವಾಗಿಯೇ ಇದೆ. ಇವರಿಂದಾಗಿ ಕಲ್ಯಾಣಿ ಚಾಲುಕ್ಯ ಶೈಲಿಗೆ ನೂತನ ಜೀವದಾನವು ದೊರಕಿತು. ಚಾಲುಕ್ಯರ ಕಾಲದಲ್ಲಿ ಸ್ಥಾಪಿತವಾಗಿದ್ದ ವಾಸ್ತುಶಿಲ್ಪ ಒಲವುಗಳನ್ನು ಹೊಯ್ಸಳರು ಹೆಚ್ಚು ಕಡಿಮೆ ಇದ್ದಂತೆಯೇ ಅಳವಡಿಸಿಕೊಂಡರು. ಕರ್ನಾಟಕದ ಬೇರೆ ಯಾವುದೇ ರಾಜವಂಶದಂತೆ ಹೊಯ್ಸಳರು ತಮ್ಮದೇ ಆದ ಕೆಲವು ವಾಸ್ತುಶಿಲ್ಪ ಶೈಲಿ, ವಾಸ್ತು ಅಲಂಕಾರಗಳನ್ನು ಬೆಳೆಸಿದರು. ಒಂದು ವಿಶಿಷ್ಟ ಹೊಯ್ಸಳ ಛಾಯೆ ಅವರ ಶೈಲಿಯಲ್ಲಿ ಕಾಣಿಸಿಕೊಂಡಿತು.

ಹೊಯ್ಸಳ ದೊರೆ ಎರಡನೆಯ 'ವೀರಬಲ್ಲಾಳ ದೇವರು ಶ್ರೀಮತ್ ಹರಿಶ್ಚಂದ್ರದತ್ತಿಯಗ್ರಹಾರ ಬಾಳ್ಗುಳಿಯ ನೆಲೆವೀಡಿನೊಳು' ಆಳುತ್ತಿದ್ದನೆಂದು ತಿಳಿಸಲಾಗಿದೆ. ಈ ಶಾಸನದಲ್ಲಿ ಕ್ರಿ.ಶ.೧೧೯೩ರಲ್ಲಿ ಹೊಯ್ಸಳ ಚಕ್ರವರ್ತಿ ಬಾಗಳಿಯ ನೆಲೆವೀಡಿನಲ್ಲಿದ್ದಾಗ ಈ ಸ್ಥಳ ಕಲಿದೇವಸ್ವಾಮಿಯ ಖಂಡಸ್ಫುಟಿತ ಜೀರ್ಣೋದ್ಧಾರ(ದೇವಾಲಯದ ಎಲ್ಲಾ ಭಾಗಗಳು) ಮುಂತಾದವುದಕ್ಕೆ ಅಲ್ಲಿನ ಐವತ್ತು ಮಹಾಜನರ ಕಾಲನ್ನು ತೊಳೆದು ನಂದಿ ಬೇಹೂರ ಸೀಮೆ(ಅಂದರೆ ಬಾಗಳಿ ಒಂದು ಹೋಬಳಿ ಗ್ರಾಮವಾಗಿತ್ತು. ೩೩ ಹಳ್ಳಿಗಳು ಸೇರಿದ್ದವು)ಯವರೆಗೆ ಸಮಸ್ತ ಭೂಮಿಯನ್ನು ದಾನ ನೀಡಿದನೆಂದು ಉಲ್ಲೇಖಿಸುತ್ತದೆ.[೬೩] ಈ ಶಾಸನ ಹೊಯ್ಸಳ ವಂಶಾವಳಿಯನ್ನು ತಿಳಿಸುತ್ತದೆ. ನಂತರ ೧೧೯೭ರಲ್ಲಿ(ಕುರುವತ್ತಿ) ಶ್ರೀಮದಾಹಮಲ್ಲೇಶ್ವರ ದೇವಾಲಯದ ಖಂಡ ಸ್ಫುಟಿತ ಜೀರ್ಣೋದ್ಧಾರಕ್ಕೆ 'ಬೆಣ್ಣೆಯೂರು ೧೨ರ ಮಕ್ಕರಬೆ'ಯನ್ನು ಬಿಡುತ್ತಾನೆ.[೬೪] ಕ್ರಿ.ಶ.೧೨೦೬ರಲ್ಲಿ ಸಂಡೂರಿನ ಶಾಸನದಲ್ಲಿ ಹಿಂದೆ ರಾಷ್ಟ್ರಕೂಟ ದೊರೆ ೩ನೇ ಕೃಷ್ಣನು ಸ್ವಾಮಿದೇವರಿಗೆ ನೀಡಿದ(ಕೆರೆಯಪಳ್ಳಿ) ಗ್ರಾಮವನ್ನು ಪುನರ್ದತ್ತಿಯಾಗಿ ನೀಡುತ್ತಾನೆ.[೬೫](ಕೆರ್ನಳ್ಳಿ ಗ್ರಾಮ) ಈ ಗ್ರಾಮದಿಂದ ಅರಸರಿಗೆ ಸಲ್ಲುತ್ತಿದ್ದ ತೆರಿಗೆ ಆದಾಯ ಮೊದಲಾದವುಗಳನ್ನು ಕುಮಾರಸ್ವಾಮಿ ದೇವಾಲಯಕ್ಕೆ ಸಲ್ಲುವಂತೆ ಮಾಡುತ್ತಾನೆ.

ಇದೇ ಕಾಲದಲ್ಲಿ ಕುರುವತ್ತಿಯ ಇನ್ನೊಂದು ಶಾಸನದಲ್ಲಿ ೧೨೦೬-೦೭ರಲ್ಲಿ ಪಾಂಡ್ಯದೇವನ ಅನುಮತಿಯಂತೆ ದಾಸಿಮಣ್ಣನಾಯಕರು, ಲೋಕಾಭರಣ ದೇವರ ಕಾಲನ್ನು ತೊಳೆದು ಅಹವಮಲ್ಲೇಶ್ವರ ದೇವರಿಗೆ ಮಕರಬ್ಬಿ ಗ್ರಾಮವನ್ನು ಮಾನ್ಯ ನೀಡುತ್ತಾನೆ.[೪೬]

ಹಿರೇಹಡಗಲಿ ಶಾಸನದಲ್ಲಿ ಇವನ ಹಿರಿಯರಾಣಿ ಪದುಮಲದೇವಿ ಪೊಸವಡಂಗಿಲೆ(ಹಿರೇಹಡಗಲಿ) ಯನ್ನು ಆಳುತ್ತಿದ್ದಳು. ಮಹಾಜನರ ಸಮ್ಮತಿಯೊಂದಿಗೆ ಹಿರಿಯಕೆರೆಗೆ ಮತ್ತು ತುಂಬಿನಕೆರೆಗಳಿಗೆ ಭೂದಾನ ಮಾಡಿದ ಉಲ್ಲೇಖವಿದೆ. ಈ ಶಾಸನದಲ್ಲಿ ಈಕೆಯನ್ನು ಕಾವ್ಯಮಯವಾಗಿ ವರ್ಣಿಸಿದೆ.[೪೭] ಇವನಂತೆಯೇ ೨ನೇ ವೀರನರಸಿಂಹ ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿದನು.[೪೮] ಕ್ರಿ.ಶ.೧೨೨೦ರಲ್ಲಿ ಅಧಿಕಾರಕ್ಕೆ ಬಂದು ಕೇವಲ ೧೮ ವರ್ಷ ಆಳ್ವಿಕೆ ನಡೆಸಿದನು.

ಇವನ ಮೊದಲ ಉಲ್ಲೇಖ ಕೊಟ್ಟೂರಿನ ಶಾಸನದಲ್ಲಿ ಬರುತ್ತದೆ.[೪೯] ಇವನು ನೀಲಗುಂದದ ಭೀಮೇಶ್ವರ ದೇವರ ಸೇವೆಗೆ ಹಳ್ಳಿಯನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.[೫೦] ಬಾಗಳಿ ಶಾಸನದಲ್ಲಿ ಇವನ ಕಾಲದಲ್ಲಿ ೧೨೨೮ ಬಮ್ಮಯ್ಯ ದಂಡನಾಯಕನು ಬಾಗಳಿಯ ಕಲಿದೇವರಿಗೆ ಭೂಮಿಯನ್ನು ದಾನಬಿಡುತ್ತಾನೆ.[೫೧] ಇನ್ನೊಂದು ಶಾಸನದಲ್ಲಿ ಬಾಗಳಿಯ ಕಲಿದೇವಸ್ವಾಮಿ ದೇವಾಲಯಕ್ಕೆ ಚಂಗನಹಳ್ಳಿಯ ಕಪ್ಪುಗೆರೆ ಕೆಳಗೆ ಕ್ರಯಕೊಟ್ಟು ಗದ್ದೆ ಖರೀದಿಸಿ ದಾನಬಿಡುತ್ತಾನೆ.[೫೨] ಆದರೆ, ಇಲ್ಲಿಯ ಒಂದು ಶಾಸನದಲ್ಲಿ ಹೊಯ್ಸಳ ದೊರೆ ೩ನೇ ನರಸಿಂಹನ ಕಾಲದಲ್ಲಿ ಮೊಗವಾಡ ಮಾಚರಸ ಹರಿಕಾರ ಬೆಟೆಯನಾಯಕನ ಮಗ ಹೆಗ್ಗಡೆ ಚಂದಯ್ಯ ನೀಲಗಿರಿಯ ನೀಲೇಶ್ವರ ಪೂಜಾರ್ಥವಾಗಿ ಭೂದಾನ ಮಾಡಿದ ಎಂದು ಉಲ್ಲೇಖ ಬರುತ್ತದೆ.[೫೩]

ಉಚ್ಚಂಗಿ ಮೂವತ್ತರಲ್ಲಿ ಹೊಯ್ಸಳ ದೊರೆ ವೀರನರಸಿಂಹನು ಕಲಿದೇವರಿಗೆ ಭೂಮಿಯನ್ನು ದಾನಕೊಟ್ಟವಿವರವಿದೆ.[೫೪] ಹೀಗೆ ಬಾಗಳಿಯ ಶಾಸನದಲ್ಲಿ ಹೊಯ್ಸಳ ಅರಸರು ನೀಡಿದ ದಾನಗಳ ಬಗೆಗೆ ಅನೇಕ ವಿವರಗಳಿವೆ.

ಕಲ್ಯಾಣಿ ಚಾಲುಕ್ಯರ ಕೊಡುಗೆಗಳು

ಕ್ರಿ.ಶ.೯ನೇ ಶತಮಾನದಲ್ಲಿ ಅಧಿಕಾರಕ್ಕೆ ಬಂದ ಇವರು(೯೭೩) ಅನೇಕ ವಾಸ್ತುಶಿಲ್ಪ ಸಿದ್ಧಿಗಳ ಪೋಷಕರಾಗಿ ದೇವಾಲಯಗಳು ಮತ್ತು ಬಸದಿಗಳಿಗೆ ಆಶ್ರಯ ನೀಡಿದರು. ಶೈವಧರ್ಮವು ಇಲ್ಲಿ ಪ್ರಧಾನವಾಗಿದ್ದರಿಂದ, ಸಹಜವಾಗಿಯೇ ಪಾಶುಪತ ಕಾಳಾಮುಖ ಮತ್ತು ಕಾಪಾಲಿಕಪಂಥೀಯರು ಬಹುಸಂಖ್ಯೆಯಲ್ಲಿ ಅನುಯಾಯಿಗಳನ್ನು ಪಡೆದಿದ್ದರು.[೫೫] ಇವರ ಕಾಲದಲ್ಲಿ ಸಾಧ್ಯವಾದಷ್ಟು ಶಿವದೇವಾಲಯ ಗಳು ನಿರ್ಮಾಣಗೊಂಡವು. ಇವರ ಆಶ್ರಯದಲ್ಲಿ ದೇವಾಲಯ ನಿರ್ಮಾಣವನ್ನು ರಾಜರು, ರಾಣಿಯರು,

ದಂಡನಾಯಕರು, ಸಂಸ್ಥೆಗಳು ಮತ್ತು ವರ್ತಕರು ವಿಪುಲ ಪ್ರಮಾಣದಲ್ಲಿ ಕೈಗೊಂಡರು. ಬಸದಿಗಳ ಜೊತೆ ವಿಷ್ಣು ದೇವಾಲಯಗಳನ್ನು ನಿರ್ಮಾಣಮಾಡಿದರೆಂದು ಹಿಂದೆಯೇ ತಿಳಿಸಲಾಗಿದೆ. ವಾಸ್ತುಶಿಲ್ಪ ಕಲೆಯು ಶಾಸ್ತ್ರೀಯವಾಗಿ ಬೆಳೆದು, ಅರಳಿ ಹೆಚ್ಚು ಪ್ರಸಿದ್ಧಿ ಪಡೆದುದು ಇವರ ಕಾಲದಲ್ಲಿಯೇ.

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ದೊರೆಯುವ ಮೊದಲ ಶಾಸನ (೨ನೇ ತೈಲಪನ). ಕ್ರಿ.ಶ.೯೭೬ ಕುಡುತಿನಿ ಶಾಸನದಿಂದ ತಿಳಿಯುತ್ತದೆ.[೫೬] ಇವನು ಕಂಚಗಾರ-ಬೆಳಗಲ್ಲು(ಲ್ಲಿ)ಯ ಮೂರು ಶಿವದೇವಾಲಯಗಳಿಗೆ ಪೂರ್ವದ ಸ್ಥಾನಮಾನ್ಯ ನಡೆಯುವಂತೆ ಮಾನ್ಯ ಮಾಡಿದನೆಂದು ಉಲ್ಲೇಖ ಬರುತ್ತದೆ.[೫೭] ಬಾಗಳಿಯ ಶಾಸನದಲ್ಲಿ ಕ್ರಿ.ಶ.೯೮೭ರಲ್ಲಿ ಬಾಗುಳಿಯ ಐವತ್ತು ಮಹಾಜನರು, ದುಗ್ಗಿಮಯ್ಯ ಪ್ರತಿಷ್ಠಾಪಿಸಿದ ಆದಿತ್ಯ ದೇವರಿಗೆ ತೋಟವನ್ನು ನೀಡುತ್ತಾರೆ ಎಂದು ತಿಳಿಸುತ್ತದೆ.[೫೮] ಇವನ ನಂತರದ ಅರಸರು ಸಹ ದೇವಾಲಯಗಳಿಗೆ ದಾನ ನೀಡಿದರು. ಇಲ್ಲಿಯ ಎಲ್ಲಾ ದೇವಾಲಯಗಳು ಇವರ ಕಾಲದ್ದೆ ಆಗಿರುವುದರಿಂದ ಇವರ ದಾನಗಳೇ ಹೆಚ್ಚಾಗಿ ಕಂಡುಬರುತ್ತವೆ.

ದೇವಾಲಯಗಳ ಅಂಗಭೋಗ - ರಂಗಭೋಗಗಳಿಗೆ ನೀಡಿದ ದಾನಗಳು

ಇವುಗಳ ಹೆಸರೇ ಸೂಚಿಸುವಂತೆ, ದೇವರ ವಿಗ್ರಹಕ್ಕೆ ಪರಿಮಳ ದ್ರವ್ಯಗಳನ್ನು ಲೇಪಿಸುವ ಉಪಚಾರ. ಅಂದರೆ ದೇವರ ಅಂಗಕ್ಕೆ ಸಂಬಂಧಪಟ್ಟ ಸ್ನಾನ, ಪೂಜೆ, ನೈವೇದ್ಯ, ತಾಂಬೂಲಗಳ ಸಮರ್ಪಣಾಕಾರ್ಯ ಅಂಗಭೋಗವಾದರೆ, ದೇವರ ಮೂರ್ತಿಯ ಎದುರಿನಲ್ಲಿ ನೃತ್ಯ, ಸಂಗೀತ ಮೊದಲಾದವುಗಳ ಮೂಲಕ ಸಲ್ಲಿಸುವ ಸೇವೆ ಅಥವಾ ದೇವಸ್ಥಾನದ ಗರ್ಭಗೃಹದ(ನವರಂಗ) ಮುಂಭಾಗ ಅಥವಾ ರಂಗಮಂಟಪದಲ್ಲಿ ನಡೆಸುವ ದೇವರ ಸೇವೆಗೆ ರಂಗಭೋಗವೆಂದು ಕರೆಯುತ್ತಾರೆ.[೫೯]

ಹಿಂದೆ ಅರಸರ ಕಾಲದಲ್ಲಿ ರಾಜ ತನ್ನ ರಾಜ್ಯದ ಸರ್ವಸಂಪತ್ತುಗಳ ಪ್ರಭು ಮತ್ತು ದೇವ ಎಂದು ಪರಿಗಣಿಸಲ್ಪಟ್ಟಿದ್ದನು. ಅಂದರೆ ದೇವರು ಆಸೆಪಟ್ಟ ವಸ್ತುಗಳೆಲ್ಲವೂ ಅರ್ಪಿತವಾಗಬೇಕು. ಅವುಗಳಲ್ಲಿ ಹೆಣ್ಣು ಒಂದು. ಅವಳಿಗೆ 'ಸೂಳೆ' ಎಂದು ಸಂಭೋದಿಸಿಲಾಗಿದೆ.[೬೦] ಇವರಿಗೆ ಪೊದ್ದಿ>ಪೊಟ>ಬೊಡ್ಡಿ ಎಂಬ ವಿಶೇಷಣಗಳೂ ಉಂಟು. ಪ್ರಾಯಶಃ ಚಾಲುಕ್ಯರ ಮನೆತನಕ್ಕೆ ಸಂಬಂಧಪಟ್ಟ ರಾಜನರ್ತಕಿಯರೇ, ಸೂಳೆಯರಂದು ಪರಿಗಣಿಸಲ್ಪಟ್ಟರು.

ಬಾಗಳಿಯಲ್ಲಿ ಬರುವ ಶಾಸನಗಳನ್ನು ನೋಡಿದಾಗ ಇಲ್ಲಿಯ ದೇವಾಲಯಗಳಲ್ಲಿ ಅಂಗಭೋಗ ಮತ್ತು ರಂಗಭೋಗಕ್ಕೂ ಹೆಚ್ಚು ಪ್ರಾಧಾನ್ಯತೆ ಇತ್ತು ಎಂದು ಶಾಸನಗಳಿಂದ ತಿಳಿದುಬರುತ್ತದೆ.[೬೧] ಬಾಗಳಿಯ ಕಲ್ಲೇಶ್ವರ ದೇವಾಲಯದ ನವರಂಗವು ಸುಂದರವಾಗಿದೆ. ಆದರೆ ಇದು ೬೦ ಅಡಿ ಅಗಲ, ೬೦ ಅಡಿ ಉದ್ದವಾಗಿದ್ದು, ಅನೇಕ ಕಂಬಗಳನ್ನು ಒಳಗೊಂಡಿದೆ, ಕಂಬಗಳನ್ನು ಸಾಲು ಸಾಲಾಗಿ

[illegible]

ನಿಲ್ಲಿಸಿರುವುದೇ ಪ್ರಧಾನವಾಗಿ ಕಾಣುತ್ತದೆ. ಇದು ರಂಗಭೋಗಕ್ಕೆ ಹೆಚ್ಚು ಪ್ರಾಶಸ್ತವಿದ್ದ ದೇವಾಲಯ. ನೃತ್ಯಭಂಗಿಯಲ್ಲಿರುವ ನರ್ತಕಿಯರ ಶಿಲ್ಪಗಳನ್ನು ಕೆತ್ತಿದ್ದಾರೆ. ರಂಗಭೋಗಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ವೇದಿಕೆಯ ಸುತ್ತಲಿನ ನಾಲ್ಕು ಕಂಬಗಳಲ್ಲಿ ಮತ್ತು ಅವುಗಳ ಮುಂದಿನ, ಹಿಂದಿನ ಕಂಬಗಳಲ್ಲಿ ನೃತ್ಯಕ್ಕೆ ಸಂಬಂಧಪಟ್ಟ ಶಿಲ್ಪಗಳನ್ನು ಈ ದೇವಾಲಯದಲ್ಲಿ ಕಾಣಬಹುದು. ದೇವಾಲಯಗಳಿಗೆ ಹೆಣ್ಣನ್ನು ಬಿಡುವ ಸಂಪ್ರದಾಯ ಮೊದಲಿನಿಂದಲೂ ನಡೆದುಬಂದಿದೆ. ಕರ್ನಾಟಕದಲ್ಲಿ ಈ ಸಂಪ್ರದಾಯ ಯಾವಾಗ ಆರಂಭವಾಯಿತೋ ಸರಿಯಾದ ಮಾಹಿತಿ ಇಲ್ಲದಿದ್ದರೂ ಕ್ರಿ.ಶ.೭೭೮-೭೯ ಪಟ್ಟದಕಲ್ಲು ಶಾಸನದಲ್ಲಿ ಉಲ್ಲೇಖವಾದಂತಹ 'ದೇವಾಲಯದ ಸೂಳೆ'ಯೇ ಕರ್ನಾಟಕದ ಪ್ರಥಮ ದೇವದಾಸಿಯಾಗಿದ್ದಾಳೆ.[೬೨] ಇವಳಿಗೆ ದೇವಾಲಯಗಳಿಗೆ ಬರುವ ಹಣ, ಭೂಮಿಯನ್ನು ಬಿಟ್ಟುಕೊಡುತ್ತಿದ್ದರು.

'ದೇವರ ನಿವೇದ್ಯ ಕಾಲದೊಳು ವಿತ್ತಕ್ಕಂ' ಎನ್ನುವಾಗ ಮುಂಜಾನೆಯ ನೈವೇದ್ಯದ ನಂತರ ರಂಗಭೋಗದವರಿಂದ ನಿರ್ದಿಷ್ಟ ಕಾರ್ಯಕ್ರಮವು ಪ್ರಸ್ತುತವಾಗುತ್ತಿತ್ತು ಎಂಬುದು ಸ್ಪಷ್ಟವಿಚಾರ. ನಂತರ ನಿಯೋಜಿತ ಪದ್ಧತಿಯಂತೆ ತನ್ನ ಸೇವೆಯನ್ನು ರಂಗಭೋಗದವಳು ಸಲ್ಲಿಸುತ್ತಿದ್ದಳು ಎಂದು ಹೇಳಬಹುದು. (ರಂಗಭೋಗದ) ನೃತ್ಯದ ಮೂಲಕ ರಂಗಭೋಗಕ್ಕೆ ಮುಡಿಪಾಗಿದ್ದ ಸ್ತ್ರೀಯನ್ನು ಪಾತರ>ಪಾತ್ರದ ಎಂದು ಕರೆಯಲಾಗಿದೆ.[೬೩] ಇಲ್ಲಿ ಅಂಗಭೋಗ ಮತ್ತು ರಂಗಭೋಗದ ವಿಷಯವನ್ನು ಮಾತ್ರ ವಿವರಿಸಲಾಗಿದೆ.

ಕ್ರಿ.ಶ.೧೧೪೮ ರಲ್ಲಿ ಪುಟ್ಟಯಣ್ಣನು ಸೋಮನಾಥದೇವರ ಅಂಗಭೋಗಕ್ಕೆ ಭೂದಾನ ನೀಡಿದನೆಂದು ಬರುತ್ತದೆ. ಇದನ್ನು ಬಾಗುಳಿಯ ಐವತ್ತು ಮಹಾಜನರ ಸಮ್ಮುಖದಲ್ಲಿ ಅಂಗಭೋಗ ನೈವೇದ್ಯಕ್ಕೆ ಎತ್ತರದ ಎರೆಹೊಲ, ಮತ್ತು ಇಲ್ಲಿಯ ಭಟ್ಟ ವೃತ್ತಿಗೆ ನಾಯಕನಕೆರೆ. ಮೂಡಲದ ಭೂಮಿಯನ್ನು ದಾನಬಿಡುತ್ತಾನೆ.[೬೪]

ಅಂಗಭೋಗದವರು ರಂಗಭೋಗದವರಿಗಿಂತ(ಸೂಳೆಯರಿಗಿಂತ) ಮೇಲ್ಮಟ್ಟದವರಾಗಿದ್ದರು.[೬೫] ದೇವಸ್ಥಾನಕ್ಕೆ ಅದರ ಅಂತಸ್ತು, ಅಲ್ಲಿರುವ ಉಪಗರ್ಭಗೃಹಗಳ ಸಂಖ್ಯೆಗಳಿಗೆ ಅನುಗುಣವಾಗಿ ಈ ಅಂಗ ಭೋಗದವರ ಸಂಖ್ಯೆ ಹೆಚ್ಚು ಕಡಿಮೆಯಾಗುತ್ತಿತ್ತು. ಈ ಗ್ರಾಮದಲ್ಲಿ ೧೨ ಜನ ಅಂಗಭೋಗದ ಸೂಳೆಯರಿದ್ದರೆಂದು ಬರುತ್ತದೆ.[೬೬] ಇವರಿಗೆ ಗರ್ಭಗೃಹದ ಸೂಳೆಯರೆಂದು, ಇವರಿಗೆ ಹೆಚ್ಚಿನ ಪ್ರಾಮುಖ್ಯತೆ ಇದ್ದು, ಎಡ, ಬಲ ಇಲ್ಲವೆ ಎದುರಿನ ಗರ್ಭಗೃಹದ ಅಂಗಭೋಗ ಸೂಳೆಯರಿಗೆ ಮಾತ್ರ, ರಂಗಭೋಗ ಸೂಳೆಯರ ಸಮಾನ ಸ್ಥಾನವಿದ್ದಿತ್ತೆಂದು ದಾನದ ಪ್ರಮಾಣದಿಂದ ಊಹಿಸಬಹುದು.[೬೭] ಇದರಲ್ಲಿ ಕಾಲದ ಮಾಹಿತಿ ಇಲ್ಲ. ನಾದೇವಘೈಸನ ಹೆಂಡತಿ ಮಹಾದೇವಿಯಕವ್ವೆ ಶ್ರೀ ವೀರಕೇಶವ ದೇವರ ಅಂಗಭೋಗಕ್ಕೆ ಮತ್ತು ರಂಗಭೋಗ, ನೈವೇದ್ಯಕ್ಕೆ ಧಾರಾಪೂರ್ವಕ ಮಾಡಿ ತಮ್ಮ ಭೂಮಿಯ ಉತ್ತರದ ಭಾಗವನ್ನು

ಭೂಮಿದಾನ ನೀಡುತ್ತಾಳೆ.[೬೭] ಕ್ರಿ.ಶ.೧೧ನೇ ಶತಮಾನದಲ್ಲಿ(ಕಾಲದ ಉಲ್ಲೇಖ ಸರಿಯಿಲ್ಲ, ಊಹಿಸಿದ್ದು) ಪುಣ್ಯದಿನದಲ್ಲಿ ತಿಕಣಯ್ಯ(ದಂಡನಾಯಕ)ನು ವೀರಕೇಶವ ದೇವರ ಅಂಗಭೋಗಕ್ಕೆ ಮತ್ತು ರಂಗಭೋಗಕ್ಕೆ ಮೊದಲಕೆರೆ ಗದ್ದೆ ಮತ್ತು ಬೆಂದೆಯಕೆರೆಯ ಪಡುವಣ ಕೋಡಿಯ ಮಣಲಭೂಮಿ(ಮರಳು)ಯನ್ನು ೨೦೦ ಕಮ್ಮ ಬಿಡುತ್ತಾನೆ. ನಂತರ ಇದೇ ಶಾಸನದ ಕೆಳಗೆ, ನರಸಿಂಹದೇವನು ವೀರಕೇಶವದೇವರಿಗೆ, ದೇವರ ಅಂಗಭೋಗ ಮತ್ತು ರಂಗಭೋಗಕ್ಕೆ ಪಡುವಣ ಭೂಮಿಯನ್ನು ದಾನಬಿಟ್ಟನೆಂದು ಉಲ್ಲೇಖಿಸುತ್ತದೆ.[೬೮]

ಊಹಿಸಿದ ಕಾಲ(ಚಾಲುಕ್ಯರ ಜಗದೇಕಮಲ್ಲ) ಭಟ್ಟರ ಮಾದಿಯಣ್ಣ ದೇವರ(ಕಲಿದೇವ) ರಂಗಭೋಗಕ್ಕೆ, ನೈವೇದ್ಯಕ್ಕೆ ಸುಗಂಧ ದ್ರವ್ಯಗಳನ್ನು ಧಾರಾಪೂರ್ವಕವಾಗಿ ಬಿಟ್ಟನೆಂದು ಬರುತ್ತದೆ.[೬೯] ಕ್ರಿ.ಶ.೧೧೯೩ರಲ್ಲಿ ವೀರಬಲ್ಲಾಳನು, ಬಾಗಳಿಯ ಶ್ರೀಸ್ವಯಂಭುಕಲಿದೇವರ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಸಮಸ್ತ ಭೂಮಿಯನ್ನು ದಾನ ನೀಡಿದನು. ಇದರಿಂದ ಹೊಯ್ಸಳರು ಸಹ ಇವುಗಳಿಗೆ ವಿಶೇಷ ಗಮನಹರಿಸಿದ್ದರೆಂದು ತಿಳಿಯುತ್ತದೆ.[೭೦] ಉಲ್ಲೇಖಿತ ಕಾಲ - ಕ್ರಿ.ಶ.೧೨೧೨ರಲ್ಲಿ ವೀರಜಗದಾಳ್ವ ಬಮ್ಮಿಅರಸನು ತಮ್ಮ ಆರಾಧ್ಯ ಅರಸನಬೀಡಿನ ಸೋಮಯಾಜ್ಯ ಹಿರಿಯಣ್ಣನ ಸನ್ನಿಧಿಯಲ್ಲಿ ಶ್ರೀ ಸ್ವಯಂಭುಕಲಿದೇವರ ಅಂಗಭೋಗಕ್ಕೆ ಮತ್ತು ರಂಗಭೋಗಕ್ಕೆ ಮತ್ತು ಅಲ್ಲಿಯ ಮಹಾಜನಕ್ಕೆ (ನಂದಿಬೇವೂರವರೆಗಿನ) ಅರಸನ ಮನೆಯ ಮೇಲಾಳಿಕೆ ಸಹಿತ ಸೇರಿ 'ಆವೂರ ಚತುರಾಘಾಟ ಸೀಮೆಯಿಂದೊಳ ಸಮಸ್ತ ಭೂಮಿ'ಯನ್ನು ಧಾರಾಪೂರ್ವಕವಾಗಿ ಬಿಡುತ್ತಾನೆ.[೭೧] ಕ್ರಿ.ಶ.೧೨೯೦ರಲ್ಲಿ ಜಿಲ್ಲೆಯ ನಾರಾಯಣನ ಪುತ್ರ ಸುಪರ್ಣ್ಣವೇಗಾಮೃತಪಟ್ಟವರ್ಧನ ದೀಕ್ಷಿತರು, ಸುಪರ್ಣ ವೇಗಾಮೃತೇಶ್ವರ ದೇವರನ್ನು ತಾವೇ ಪ್ರತಿಷ್ಠೆ ಮಾಡಿಸಿ, ದೇವರ ಅಂಗಭೋಗ ಮತ್ತು ರಂಗಭೋಗಕ್ಕೆ(೦) ಕ್ಕೆಂದು ಶ್ರೀಕಲಿದೇವರಿಗೆ ಮಾನ್ಯವಾಗಿ ೧೫೦ ಕಮ್ಮಗದ್ದೆ ಬಿಟ್ಟರು.[೭೨] ಇದರಲ್ಲಿ ಇನ್ನೊಂದು ಉಲ್ಲೇಖ- ಬೆಣ್ಣೆಯ ಹಯಣ್ಣನ ಮಗ ಚಾಮುಂಡನು ತಾನು ಮಾಡಿದ ಮಲ್ಲಿಕಾರ್ಜುನ ದೇವರ ಅಂಗಭೋಗ, ರಂಗಭೋಗಕ್ಕೆಂದು ಐವರಿಗೆ ಪಾದಪೂಜೆ ಮಾಡಿ, ಕಲಿದೇವರಿಗೆ ಮಾನ್ಯದೋಪಾದಿಯಲ್ಲಿ, ಮಂಡವಾಳದ ತೋಟ, ಪಡುವಲು, ಬಡಗಲು ಹಳ್ಳ ಮೂರು ಓಣಿಯ ಹುಣಿಸೆಯ ಮರದ ೧೫೦ ಕಮ್ಮ ಭೂಮಿದಾನ ಬಿಡುತ್ತಾನೆ.[೭೩]

ಕ್ರಿ.ಶ.೧೨೪೬ರಲ್ಲಿ(ಶ್ರೀಮದ್) ಶ್ರೀಮತುಹರಿಶ್ಚಂದ್ರದತ್ತಿಅಗ್ರಹಾರ, ಬಾಗುಳಿಯ ಅಶೇಷ ಮಹಾಜನಗಳ ಸಮ್ಮುಖದಲ್ಲಿ ಕಡೆಮನೆಯ ಗೋಪಣ್ಣನ ಮಗ ಸದಾಶಿವ, ೧೦೦ ಕಮ್ಮಭೂಮಿ,[೭೪] ಗೋಮೇನ ವಿಠ್ಠಣ- ೨೦ ಕಂಬ ತೋಟ, ಪರಿಮಿತ ನಾಚಂಣ, -ಒಂದು ಕಮ್ಮ, ಕೊಳಗದ ಚವುಡಯ್ಯ - ಎರಡು ಮತ್ತರು

ಭೂಮಿ ಮತ್ತು ಒಂದು ಮನೆಯನ್ನು ಶ್ರೀ ಮತು(ಕಲಿ) ಸದಾಶಿವದೇವರ ಅಂಗಭೋಗ ಮತ್ತು ರಂಗಭೋಗ ಬಿಡುತ್ತಾರೆ.[೨೫] ಕ್ರಿ.ಶ.೧೧೯೯ರಲ್ಲಿ ತ್ರಿಭುವನಮಲ್ಲ ಆಳ್ವಿಕೆಯಲ್ಲಿ ಪೆರ್ಗ್ಗಡೆ ಕಾವರಾಜನು ದೇವರ ರಂಗಭೋಗಕ್ಕೆ ಗದ್ಯಾಣ ಎರಡನ್ನು ಬಿಟ್ಟನು ಎಂದು ಉಲ್ಲೇಖಿಸುತ್ತದೆ.[೨೬]

ವಿಜಯಪಾಂಡ್ಯದೇವರ ಕಾಲದಲ್ಲಿ ಪ್ರಿಯಪುತ್ರನಾದ, ಮಹಾಜನ ಐವರ ಸಮ್ಮುಖದಲ್ಲಿ ಸಂಕಣ್ಣನು ಶ್ರೀಮತ್‌ದಿವ್ಯಲಿಂಗ, ನೀಲೇಶ್ವರ ದೇವರ ರಂಗಭೋಗ ಮತ್ತು ನೈವೇದ್ಯಕ್ಕೆ, ನಂದಾದೀವಿಗೆಗೆ ರಾಸಿಪಂಡಿತರ ಕಾಲನ್ನು ತೊಳೆದು ಭೂಮಿಯನ್ನು(ತೋಟ) ದಾನಬಿಡುತ್ತಾನೆ.[೨೭]

ಮೂರನೆಯ ನರಸಿಂಹನ ಕಾಲದಲ್ಲಿ ಬಾಗುಳಿಯ ನೀಲಗಿರಿಯ ನೀಲೇಶ್ವರ ದೇವರಿಗೆ, ಶ್ರೀಮತ್ ದತ್ತಿಯಮಹಾಅಗ್ರಹಾರ ಬಾಗಳಿಯ ಮಾಚರಸನ ಹರಿಕಾರ ಬೆಟೆಯನಾಯಕನ ಮಗ, ಹೆಗ್ಗಡೆ ಚಂದಯ್ಯ ಆ ದೇವರ ಅಂಗಭೋಗ ರಂಗಭೋಗಕ್ಕೆ ತನ್ನ ತೋಟ ಒಳಗೆ ಒಳ್ಳೆಯ ತೋಟದ ಭಾಗವನ್ನು ೧೦೦ ಕಮ್ಮ ಭೂಮಿಯನ್ನು ಬಾಗುಳಿಯ ಮಹಾಜನರ ಸಮ್ಮುಖದಲ್ಲಿ ಬಿಡುತ್ತಾನೆ.[೨೮] ಕ್ರಿ.ಶ.೧೧೪೦ರಲ್ಲಿ ಚಾಲುಕ್ಯ ಜಗದೇಕಮಲ್ಲನು ಆಳುತ್ತಿದ್ದಾಗ ಬಾಗುಳಿಯ ಐವತ್ತು ಮಹಾಜನರ ಸಮ್ಮುಖದಲ್ಲಿ ಮಾಳಪ್ಪಯ್ಯ ಮಗನಾದ ಬೆದ್ದಣನ ಪತ್ನಿಯಾದ ಧರ್ಮಿಯಕ್ಕ(ಪದ್ಮಣ್ಣನ ಮಗಳು) ತಾನು ಮಾಡಿಸಿದ ಶ್ರೀ ಲಕ್ಷ್ಮೀನಾರಾಯಣ ದೇವರ ರಂಗಭೋಗಕ್ಕೆ(೦) ಮತ್ತು ನೈವೇದ್ಯಕ್ಕೆ ಖಂಡಸ್ಪುಟಿತವಾಗಿ ಜೀರ್ಣೋದ್ಧಾರಕ್ಕಾಗಿ ಭೂಮಿಯನ್ನು ದಾನ ಬಿಡುತ್ತಾಳೆ.[೨೯] ಇಲ್ಲಿಯವರೆಗೆ ತಿಳಿಸಿದ ಶಾಸನಗಳಲ್ಲೆಲ್ಲಾ ಅಂಗಭೋಗ ಮತ್ತು ರಂಗಭೋಗ ಎಂಬ ಉಲ್ಲೇಖಬಂದರೆ, ಹಡಗಲಿ ಶಾಸನದಲ್ಲಿ 'ದೇವಭೋಗ'ಕ್ಕೆ ಬಿಟ್ಟ ಭೂಮಿ ಎಂದಿದೆ.[೩೦] ಇದು ಅಂಗಕ್ಕೊ ಅಥವಾ ರಂಗಕ್ಕೊ ತಿಳಿಸುವುದು ಕಷ್ಟವಾದರೆ, ಕೆಲವೊಂದು ಶಾಸನಗಳಲ್ಲಿ 'ಭೋಗದ ಸೂಳೆ' ಎಂದು ಉಲ್ಲೇಖಬರುತ್ತದೆ.[೩೧] ಇದು ಯಾವುದು ಎಂದು ಗುರುತಿಸಲು ಅಸಾಧ್ಯ. ಪ್ರಾಯಶಃ ಅಂಗಭೋಗವೇ ಇರಬೇಕು.

ಹೀಗೆ ಈ ಶಾಸನಗಳು ದೇವರ ಕೆಲಸಕಾರ್ಯಗಳಿಗೆ ಬಿಟ್ಟ ದಾನಗಳು. ಅವು ಅಂಗ ಮತ್ತು ರಂಗಭೋಗಗಳಿಗೆ ಮಾತ್ರ ಸಂಬಂಧಿಸಿದವುಗಳಾಗಿವೆ. ಆದರೆ ಇಲ್ಲಿ ಬಂದಿರುವ ಉಲ್ಲೇಖಗಳಷ್ಟು ಪ್ರಾಯಶಃ ಕರ್ನಾಟಕದ ಯಾವ ಶಾಸನಗಳಲ್ಲಿ ಬಂದಿರಲಿಕ್ಕಿಲ್ಲವೆನಿಸುತ್ತದೆ. ಅಂತಹ ವಿಪುಲವಾದಂತಹ ಅಂಗ-ರಂಗ, ಭೋಗ ಕುರಿತಾದ ಮಾಹಿತಿಯು ಇಲ್ಲಿನ ಶಾನಗಳಿಂದ ಲಭ್ಯವಾಗುತ್ತದೆ. ಆದರೆ ಕರ್ನಾಟಕದ ದೇವಾಲಯಗಳಲ್ಲಿ ರಂಗಭೋಗದ ಬಗ್ಗೆ ಅಧ್ಯಯನ ನಡೆಸಿದ ಅಧ್ಯಯನಕಾರರು ವ್ಯಾಪಕವಾದಂತಹ ಮಾಹಿತಿಯನ್ನು ಒದಗಿಸಿಲ್ಲವೆಂದು ತಿಳಿಯಬಹುದು.

ದೇವಾಲಯಗಳಿಗೆ ಬಿಟ್ಟ ದೇವದಾಸಿಯರು (ಸೂಳೆಯರು)

'ಸೂಳೆ' ಎನ್ನುವ ಪದ ಕೇಳಿದರೆ 'ಅಸಹ್ಯ' ಎನ್ನುವ ಇಂದಿನ ಸಮಾಜಕ್ಕೂ 'ಸೂಳೆ' ಎಂದು ಕರೆದ ಹಿಂದಿನ ಸಮಾಜಕ್ಕೂ ತುಂಬಾ ವ್ಯತ್ಯಾಸವಿದೆ. ಏಕೆಂದರೆ ಹಿಂದಿನ ಕಾಲಕ್ಕೆ 'ಸೂಳೆ' ಎಂದರೆ, ಗೌರವ ಸೂಚಕಪದವಾಗಿ ಬಳಕೆಯಾಗಿದೆ. ಅವಳಿಗೂ ಸಮಾಜದಲ್ಲಿ ಒಂದು ಸ್ಥಾನಮಾನವನ್ನು ಕಲ್ಪಿಸಿಕೊಡುತ್ತಿದ್ದರು, ಕೊಟ್ಟಿದ್ದರು. ಆದರೆ ಇಂದಿನ ಸಮಾಜದಲ್ಲಿ 'ಸೂಳೆ' ಎಂದರೆ ಏನೋ ಒಂದು ರೀತಿಯ ಕೆಟ್ಟ ಭಾವನೆಯಿಂದ ಕಾಣುವ ಪದ್ಧತಿ ಬೆಳೆದುಕೊಂಡಿದೆ. ಜನಪದರಲ್ಲಿಯಂತೂ ಇದಕ್ಕೆ ಸ್ಥಾನವೇ ಇಲ್ಲವೆಂದು ಹೇಳುವುದನ್ನು ನಾವು ಗಮನಿಸಿದ್ದೇವೆ. ಜನಪದರ ಈ ಹಾಡಿನಲ್ಲಿ ಸೂಳೆಯ ಸ್ಥಾನವನ್ನು ಗಮನಿಸಿದರೆ-

ಸೂಳೆಗೆ ಹೋದವನು ಏನಾದ| ಎಂತಾದ
ಕಾಡುನಾಯಾದ ಕಪಿಯಾದ| ಆ ಮುರವ
ಸೂಳೆಯ ಕಾಲಿಗೆ ಕೆರವಾದ[೮೨]

ಇದನ್ನು ನೋಡಿದರೆ ಸಾಕು, ಇಂದಿನ ಸೂಳೆಯರ ಸ್ಥಾನಮಾನವನ್ನು, ಹಿಂದಿನ ಸಮಾಜದಲ್ಲಿ ವಿವಾಹ ವ್ಯವಸ್ಥೆ ಉದಯವಾದಂದಿನಿಂದ ಅಸ್ತಿತ್ವಕ್ಕೆ ಬಂದ ಗೃಹಿಣಿ ಸಮಾಜದ ಜೊತೆ ಜೊತೆಯಲ್ಲಿಯೇ ಸೂಳೆಯರ ವ್ಯವಸ್ಥೆ ಬೆಳೆದು ಬಂದಿದೆ. ಈ ವರ್ಗಕ್ಕೆ ಸಂಬಂಧಿಸಿದ ಸಾಧಾರಣಾ, ಚಾರಾ, ನಟಿ ಎಂಬ ಪದಗಳು ಕಂಡುಬರುತ್ತವೆ. ದೇವತೆಗಳಿಗೂ ದಾನವರಿಗೂ ನಡೆದ ಯುದ್ಧದಲ್ಲಿ ಮಡಿದ ದೇವತೆಗಳ ಹೆಂಡತಿಯರು, ದಾನವರ ಬಲತ್ಕಾರಕ್ಕೆ ಒಳಗಾಗಲು ಅವರಿಗೆ ದೇವೇಂದ್ರನು ನೀವು ಈಗ ಅರಮನೆ ಯಲ್ಲಿಯೂ, ದೇವಾಲಯಗಳಲ್ಲಿಯೂ ಭಕ್ತಿಯಿಂದ, ವೇಶ್ಯಾ ಧರ್ಮವನ್ನನುಸರಿಸುತ್ತ ನಡೆಯಿರಿ ಎಂದು ಆದೇಶ ನೀಡಿದನೆಂದು ತಿಳಿಸುತ್ತದೆ.[೮೩] ವಾತ್ಸಾಯನನ ಕಾಮಸೂತ್ರದಲ್ಲಿ ಇದಕ್ಕೆ ವಿವಿಧ ರೀತಿಯ ಅರ್ಥಗಳನ್ನು ನೀಡಿದೆ.[೮೪] ಆದರೆ ಪ್ರಾಚೀನ ಶಾಸನಗಳಲ್ಲಿ ಸಿಗುವ ಉಲ್ಲೇಖಗಳ ಬಲದಿಂದ ವ್ಯಕ್ತಿಯೊಬ್ಬನಿಗೆ ಇದ್ದ, ದೇವರ ಹೆಸರಿನಲ್ಲಿ ಬಿಟ್ಟ, ಹಣಕ್ಕಾಗಿ ದೇಹ ಮಾರುವ ಇವರನ್ನು ವ್ಯಕ್ತಿ ಸೂಳೆ, ಸಮಾಜಸೂಳೆ, ದೇವ ಸೂಳೆ ಎಂದು ಕರೆಯಬಹುದು. ಸಮಾಜದಲ್ಲಿ ಇವರ ಮಕ್ಕಳಿಗೂ ಗೌರವವಿತ್ತು. ಹೀಗೆ ವ್ಯಕ್ತಿಯ ಭೋಗವಸ್ತು ವ್ಯಕ್ತಿಸೂಳೆಯಾದರೆ, ದೇವರ ಭೋಗಕ್ಕೆ ಒಪ್ಪಿಸಲ್ಪಟ್ಟವಳು ದೇವಸೂಳೆ, ಇವಳು ಭೋಗಕ್ಕೆ ಮಾತ್ರ ಸೀಮಿತವಾಗಿರದೆ ಧಾರ್ಮಿಕ ಕ್ಷೇತ್ರಗಳಲ್ಲಿಯೂ ಭಾಗವಹಿಸುತ್ತಿದ್ದಳು. ಅಂದರೆ ದೇವಾಲಯ ನಿರ್ಮಾಣ, ಪೂಜೆ, ಜೀರ್ಣೋದ್ಧಾರ ಮುಂತಾದ ಮಹತ್ವದ ಕಾರ್ಯಗಳಲ್ಲಿಯೂ ಭಾಗವಹಿಸುವವಳನ್ನು ಸಮಾಜ ಸೂಳೆ ಎಂದು ಗುರುತಿಸಬಹುದು.[೮೫]

ಇಲ್ಲಿಯ ಶಾಸನವೊಂದರಲ್ಲಿ ಬಾಗುಳಿಯ ಕಲಿದೇವರ ಸ್ವಾಮಿ ದೇವರ ಸೇವೆಗೆ 'ಪನ್ನಿರ್ವರ್ಸೂಳೆಯರಿಗೆ, 'ಸೂಳೆವಾಳಂಗೆ ವಂಚಿಗಂಗಂ', 'ಪಱಿಕಾರರ್ಗ್ಗ', 'ಪಾತ್ರಕ್ಕಂ', ದೇಸಿಗಚ್ಛಾತ್ರದ ಭೋಜನಕ್ಕೆ', ಭೂಮಿಯನ್ನು ದಾನ ನೀಡಿದ ಎಂದು ಉಲ್ಲೇಖಿಸುತ್ತದೆ. ಇಂಥಹ ಉಲ್ಲೇಖ ಇನ್ನೊಂದು ಶಾಸನದಲ್ಲಿ ಕಂಡುಬರುತ್ತದೆ.[೮೬]

[illegible]

[illegible]

[illegible]

[illegible]

[illegible]

ದೇವಸ್ಥಾನದ ಸಾಂಸ್ಕೃತಿಕ(ಕಾರ್ಯಕ್ರಮದಲ್ಲಿ) ಜೀವನದ ಅಂಗದಲ್ಲಿ ನಟವನಷ್ಟೇ, ಸಮಸ್ಯಾತ್ಮಕ ವ್ಯಕ್ತಿಯಾಗಿ ಗುರುತಿಸಲ್ಪಟ್ಟವನು 'ಸೂಳೆವಳ' ಇವನನ್ನು ಶಾಸನಗಳು ಸೂಳೆವಳ, ಸೂಳೆವಾಳ, ಸೂಳಾಯಿತ ಎಂದು ಕರೆದಿವೆ.[೮೭] ಸೂಳೆಯರ ಉಲ್ಲೇಖ ಪ್ರಸಂಗದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಪದವಿದು.[೮೮] ಆದರೆ ಇವನು ಸೂಳೆಯರಂತೆ ದೇವಸ್ಥಾನಕ್ಕೆ ಬಿಟ್ಟ ಪುರುಷನೋ, ಸೂಳೆಯರ ವಂಶಕ್ಕೆ ಸಂಬಂಧಿಸಿದ ಹಿರಿಯ ಮುಖಂಡನೋ, ಸೂಳೆಯರ ತೆರಿಗೆ ಇತ್ಯಾದಿಗಳನ್ನು ಆಕರಿಸಲು ಸರಕಾರದಿಂದ ನಿಯೋಜಿತನಾದ ಅಧಿಕಾರಿಯೊ, ದೇವಾಲಯದ ಅಧಿಕಾರಿಗಳಿಂದ ಸೂಳೆಯರ ಮೇಲ್ವಿಚಾರಣೆಗಾಗಿ ನಿಯಮಿಸಲ್ಪಟ್ಟನೋ ಎಂದು ಸರಿಯಾಗಿ ತಿಳಿಯುವುದು ಕಷ್ಟ. ಆದರೆ ಈ ಶಾಸನದಲ್ಲಿ ಬಾಳ್ಗುಳಿಯ ಕಲಿದೇವಸ್ವಾಮಿ ದೇವಾಲಯದ ಸೂಳೆವಳನಿಗೆ ದತ್ತಿ ಕೊಡುವುದು ಎಂದಿದೆ.[೮೮] ಸಾಮಾನ್ಯವಾಗಿ ದೇವಸ್ಥಾನದ ಸೂಳೆಯರಿಗೆ ದತ್ತಿ ಕೊಡುವಾಗ ಅವರಷ್ಟೇ ಸಮಾನಮಟ್ಟದಲ್ಲಿ ಇವನಿಗೂ ದತ್ತಿ ಬಿಟ್ಟುಕೊಡಬೇಕೆಂದು ಕಂಡುಬರುತ್ತದೆ. ಇಂತಹದ್ದೇ ಉಲ್ಲೇಖ ಮೊರಗೇರಿ ಶಾಸನದಲ್ಲಿ ಬಂದಿದೆ. ಸೂಳೆವಾಳ ಗೋವಿಂದಯ್ಯನಿಗೆ ೧೨ ಮತ್ತರು ಎಂದಿದೆ.[೮೯] ಇವುಗಳಿಂದ ಮೇಲೆ ಹೇಳಿದ ವಿವರವೇ ಸರಿಯಾಗಿರಬಹುದು. ಅಂದರೆ ಸೂಳೆಯರಿಗೆ ಬಂದ ದಾನದಂತೆ, ಇವನಿಗೆ ದಾನವನ್ನು ಕೊಡುವುದು ಕಂಡುಬರುತ್ತಿತ್ತು. ಆದರೆ ಇಲ್ಲಿ ಪರಿಕಾರ ಎಂದರೆ, ಪರಿಕಾರ ಜೋರಾಗಿ ಓಡುವವನು, ವೇಗಶಾಲಿ, ಆನೆಯನ್ನು ನಡೆಸಿಕೊಂಡು ಹೋಗುವವನು ಎಂದು ಕಂಡುಬರುತ್ತದೆ. (ಕನ್ನಡ ನಿಘಂಟು ಪು.೭೫೨)ರಲ್ಲಿ ಇದರ ಅರ್ಥವೇ ಸರಿಯಾಗಿದೆನ್ನಿಸುತ್ತದೆ. ವೇಗಶಾಲಿ, ಓಡುವವನು ಎಂದಿದ್ದು ನಂತರ ಆನೆಯನ್ನು ನಡೆಸಿಕೊಂಡು ಹೋಗುವವನು ಎಂದಾದರೆ ಆನೆ ನಿಧಾನವಾಗಿ ನಡೆಯುವ ಪ್ರಾಣಿ ಅದರಂತೆ ಅವನು ನಡೆಯಬೇಕಾದರೆ ನಿಧಾನವಾಗಿಯೇ ನಡೆಯಬೇಕಲ್ಲವೆ? ಆದ್ದರಿಂದ ಸೂಳವಳ ಎಂದರೆ ಸೂಳೆಯರ ಜೊತೆಗಿರುವ, ಸೂಳೆಯರ ಮೇಲ್ವಿಚಾರಕ ಎಂದಾಗುತ್ತದೆ. ದಾನಗಳನ್ನು ಸ್ವೀಕರಿಸುವ ಪನ್ನಿರ್ವಸ್ಸೂಳೆಯಗ್ರ್ಗ, ಸ್ಸೂಳೆವಳಗಂ- ಪರಿಕಾರರ್ಗ್ಗೆ, 'ಪಾತ್ರಕ್ಕಂ' ಎಂದು ದಾನದ ವಿವರಣೆಯನ್ನು ಉಲ್ಲೇಖಿಸುತ್ತದೆ.[೯೦] ಈ ಶಾಸನದಲ್ಲಿ ಇವರೆಲ್ಲ ದಾನ ಪಡೆದ ವಿವರ ಬಂದಿದೆ. ಇಂತಹದ್ದೇ ಉಲ್ಲೇಖ ಹಿರೇಮೇಗಳಗೇರಿಯ ಶಾಸನದಲ್ಲಿ ಬೇರೆ ಬೇರೆಯಾಗಿ ದಾನ ನೀಡಿದ ಎಂದು ಬರುತ್ತದೆ. ಪಱಿಕಾಜಗ್ರ್ಗ, 'ಪಾತ್ರಕ್ಕಂ' ಕಂಬದ ನಾಲ್ವರ್ ಸೂಳೆಯರ್ ಎಂದಿದೆ.[೯೧] ಹೀಗೆ ದೇವಾಲಯದಲ್ಲಿ ಸೂಳೆಯರನ್ನು ದಾನವಾಗಿ ಕೊಡುವುದು ಪ್ರಾರಂಭವಾದ ಮೇಲೆ ಅಂಗಭೋಗದ ಸೂಳೆಯರು, ರಂಗಭೋಗದ ಸೂಳೆಯರು, ಕಂಬದ ಸೂಳೆ, ಮಾಡದ ಸೂಳೆ, ಚಾಮರದ ಸೂಳೆ, ಓಲಗದ ಸೂಳೆ ಎಂದು ಗುರುತಿಸಬಹುದು.

ಬಾಗಳಿಯ ಇನ್ನೊಂದು ಶಾಸನದಲ್ಲಿ 'ಪ(೦)ನ್ನಿವರ್ಸ್ಸೂಳೆಯರ್ಗ್ಗೆ, ಸ್ಸೂಳೆವಳಗಂ, ವಂಚಿಗಂಗಂ, ಪರಿಕಾರರ್ಗ್ಗೆ, ಪಾತ್ರಕ್ಕಂ, ದೇಸಿಗ ಛಾತ್ರ ಭೋಜನಕ್ಕೆಮೆಂದು ಉಲ್ಲೇಖಿಸುತ್ತದೆ.[೯೨] ಇದು ಮೇಲಿನ

ವಿವರಣೆನ್ನೇ ಕೊಡುತ್ತದೆ. ಇದು ಬಾಗಳಿಯ ಕಲಿದೇವಸ್ವಾಮಿಯ ವಣಿಗ ಪರೆಕಾಜಿರಿಗೆ ಕೆಲವೊಂದು ಭೂಮಿಯನ್ನು ದಾನ ಬಿಟ್ಟ ವಿವರವಿದೆ. ಪ್ರಾಯಶಃ ಇಲ್ಲಿ ಮೂರು ಭೋಗ ವಸ್ತುಗಳಿಗೆ ಬಿಟ್ಟ ವಿವರವಿದೆ. ಸೂಳೆಯರಿಗೆ, ಸೂಳೆವಳನಿಗೆ, ಕಲಿದೇವರಿಗೆ ನೀಡಿದ ದಾನವೆಂದು ಹೇಳಬಹುದು. ಇವೆರಡು ಒಂದೇ ಗ್ರಾಮದ ಶಾಸನದಲ್ಲಿ ಇರಬೇಕಾದರೆ, ಬಹುಶಃ ಅದು ಹಿಂದಿನ ಕಾಲಕ್ಕೆ ಅಂದರೆ ಸುಮಾರು ೯-೧೦ನೇ ಶತಮಾನದಲ್ಲಿ ಸೂಳೆಗಾರಿಕೆ ಅತಿ ಹೆಚ್ಚು ಇದ್ದಿತ್ತೆಂದು ಕಂಡುಬರುತ್ತದೆ.[೯೪] ವಿಶೇಷವಾಗಿ ಚಾಲುಕ್ಯರ ಕಾಲದಲ್ಲಿ ಈ ಪದ್ಧತಿ ಹೆಚ್ಚಿತ್ತು. ಅದು ಬಾಗಳಿಯಲ್ಲಿ ಹೆಚ್ಚು ದೇವದಾಸಿಯರಿದ್ದರೆಂದು ಶಾಸನಗಳ ಉಲ್ಲೇಖಗಳಿಂದ ತಿಳಿದುಬರುತ್ತದೆ. ಆದರೆ ಈ ಎರಡೂ ಶಾಸನಗಳು ಒಂದೇ ಅರ್ಥವನ್ನು ನೀಡುತ್ತವೆ. ಎರಡರಲ್ಲಿಯೂ ಒಂದೇ ಉಲ್ಲೇಖ ಒಂದೇ ಪದಗಳ ಬಳಕೆಯಾಗಿದೆ. ಆದರೆ ಬಾಗಳಿಯ ಇನ್ನೊಂದು ಶಾಸನದಲ್ಲಿ ಪಾತ್ರದವರು ಎಂದು ಉಲ್ಲೇಖವಾಗಿದೆ.

ಹಾಡುವ ಕಾಮವೆ, ನಾಗವೆಯ ಮಗಳುಂ
ಶ್ರೀ ಕಲಿದೇವರ ತೊತ್ತು ಪಾತ್ರದ ಸಿರಿ(ಯ)ವ್ವೆಕ
ಲ್ಲಕೇರಿಯ, ತನ್ನ ಮನೆಯನಾ ದೇವರಿಗೆ ಕೊಟ್ಟು
ಆ ಮನೆಯೊಳಗೆ ತಾನುಂ, ತನ್ನ ವಂಶಜ
ರಾರಿದ್ರ್ಡಡಂ ಆಚಂದ್ರಾರ್ಕತಾರಂಬರು ದೇವರ
ನಂದಾದೀವಿಗೆಗೆ ವರ್ಷಪ್ರತಿ ಪಣವೆರಡಂ ಕೊಟ್ಟು

ಹೀಗೆ ಉಲ್ಲೇಖವಾಗಿದೆ.[೯೫] ಇಲ್ಲಿ ಪಾತ್ರದ(ಪಾತರ>ಹಾದರ) ವ್ಯಭಿಚಾರ ಎಂದು ಕಂಡುಬಂದರೂ, 'ಪಾತ್ರ'ವೆಂಬ ಪದ ಉಚ್ಚಮಟ್ಟದಲ್ಲಿ ನಿಲ್ಲಲ್ಲು ಪ್ರಯತ್ನಪಟ್ಟಿದೆ ಶಾಸನಗಳಲ್ಲಿ. ಇಲ್ಲಿ 'ಪಾತ್ರ' ಶಬ್ದ ನೃತ್ಯಾದಿಗಳಲ್ಲಿ ಪರಿಣಿತಳಾದವಳು. 'ಸೂಳೆ' ಅಂಗ, ರಂಗಭೋಗಕ್ಕೆ ಸಂಬಂಧಿಸಿದ ಉಳಿದ ಕಾರ್ಯವನ್ನು ನಿರ್ವಹಿಸುವವಳು. ಶಾಸನಗಳಲ್ಲಿ 'ಪಾತ್ರಂ', 'ಸೂಳೆ' ಎಂದು ಉಲ್ಲೇಖವಾಗುತ್ತದೆ.[೧೧೮] ಪಾತ್ರದ ಸೂಳೆ ಅಂದರೆ ನರ್ತನದ 'ಸೂಳೆ' ಎಂದೇ ವ್ಯಕ್ತವಾಗುತ್ತದೆ. ಇಲ್ಲಿ ಬಾಗುಳಿಯ ಕಲಿದೇವಸ್ವಾಮಿ ದೇವಾಲಯದಲ್ಲಿ 'ಪಾತ್ರ'ದವರಿದ್ದಂತೆ ಬರುತ್ತದೆ. 'ಕಲಿದೇವರ ತೊತ್ತು' ಪಾತ್ರದ ಸಿರಿಯವೆಯನ್ನು ಉಲ್ಲೇಖಿಸುತ್ತದೆ.

ಹಾಡುಗಾರರಾದ ಕಾಮವ್ವೆ(ನಾಗವ್ವೆಯ ಮಗಳು) ವಾದ್ಯಗಾರರಾಗಿರುವ ವಂಶದ, ಪರಿಕಾರರುಗಳು ಇರಬೇಕು. ದೇವನ ಪ್ರೀತ್ಯರ್ಥವಾಗಿ ಸಂಗೀತ ಸೇವೆ ಸಲ್ಲಿಸುವವರನ್ನು ಶಾಸನಗಳು 'ಓಲಗದ ಸೂಳೆ' ಯರೆಂದೂ, ಪಾಡುವವರು(ಹಾಡುವವರು) ಕರೆದಿದೆ. ಇವರೆಲ್ಲರೂ ಸಂಗೀತ ಸಮುದಾಯವನ್ನು ನಿಯೋಜಿಸುವವರು. ಇವರಲ್ಲಿ ಹಾಡುವ ಗುಂಪೊಂದು ಇರುತ್ತಿತ್ತು. ಈ ಶಾಸನದಲ್ಲಿ 'ಕಲಿದೇವರ ತೊತ್ತು', ನಾಗವ್ವೆಯ ಮಗಳು ಹಾಡುವ ಕಾಮವ್ವೆಯ ಉಲ್ಲೇಖವಿದೆ. ಅಂದರೆ ತಾಯಿ ನೃತ್ಯಗಾತಿಯಾದರೆ ಮಗಳು ಹಾಡುವುದು. ಸೂಳೆಯರು ವಂಶಪರೆಂಪರೆಯಾಗಿ ಕೆಲವೊಮ್ಮೆ ಮುಂದುವರಿಯುತ್ತಿದ್ದರು. ತಮ್ಮ

ಮಕ್ಕಳು ಕನ್ಯೆಯರಾದ ಮೇಲೆ ದೇವಾಲಯಕ್ಕೆ ಸೂಳೆಯರೆಂದು ದಾನ ಬಿಡುತ್ತಿದ್ದರು. ಶ್ರೀ ಕಲಿದೇವರ 'ತೊತ್ತು' 'ಪಾತ್ರದ ಸಿರಿಯವ್ವೆ' ಎಂದುಬರುತ್ತದೆ. ಇವಳು ದೇವರಿಗೆ ಸಂಬಂಧಿಸಿದವಳು. ಇವರನ್ನು ದಾಸಿ, ಸೇವಕಿ 'ತೊತ್ತು' ಎಂಬ ಪದಕ್ಕೆ ಅರ್ಥಕೊಡಬಹುದು. ಏಕೆಂದರೆ ಕಲಿದೇವರ 'ತೊತ್ತು' ಎಂಬ ಉಲ್ಲೇಖವಾಗಿರುವುದರಿಂದ, ಅವಳು ಅವನ(ತೊತ್ತು) ಅವಳು ದೇವರ ತೊತ್ತು. 'ದೇವರ ಆಸ್ತಿ' ದೇವರ ಸೂಳೆ, ದಾಸಿ, ಸೇವಕಿ ಎಂದು ಹೇಳಬೇಕಾಗುತ್ತದೆ. ಹೀಗೆ ಇವರು ದೇವರ ಸೂಳೆಯರಾದರೂ ಕಲಿದೇವರಿಗೆ ಹಾಡುವ ಕಾಮವ್ವೆ, ನಾಗವ್ವೆಯ ಮಗಳುಂ ಶ್ರೀ ಕಲಿದೇವರ ತೊತ್ತು 'ಪಾತ್ರದ ಸಿರಿಯವ್ವೆ' ಕಲ್ಲಕೇರಿಯ ತನ್ನ ಮನೆಯನ್ನು ದೇವರಿಗೆ ಕೊಟ್ಟು, ಆ ಮನೆಯೊಳಗೆ(ಸುಖದಿನಿಪ್ಪರು) ತಾನುಂ, ತನ್ನ ವಂಶಜರಾರಿರ್ದ್ದಡಂ ಆ ಚಂದ್ರಾರ್ಕ ತಾರಂಬರಂ, ದೇವರ ನಂದಾದೀವಿಗೆಗೆ ವರ್ಷಪ್ರತಿ ಪಣವೆರೆಡು, ಕೊಟ್ಟು. ಆ ಮನೆಯೊಳಗೆ ಸುಖದಿನಿಪ್ಪರು ಎಂದು ಬರುತ್ತದೆ. ಇಲ್ಲಿ 'ಪಾತ್ರದ ಸಿರಿಯವ್ವೆ' ಸಾಮಾನ್ಯ ಸ್ತ್ರೀಯಾಗಿದ್ದು, ಅದೂ ಪಾತರದವಳಾಗಿದ್ದೂ ತಾನು ವಾಸಿಸುತ್ತಿದ್ದ ಮನೆಯನ್ನೇ ದೇವರಿಗೆ ಬಿಡುತ್ತಾಳೆ. ಆ ಮನೆಯಲ್ಲಿ ತನ್ನ ವಂಶಜರಾದರೂ ಇದ್ದರೆ, ಅವರು ಪ್ರತಿವರ್ಷ ಎರಡು ಪಣವನ್ನು ದೇವರ ನಂದಾದೀವಿಗೆಗೆ ಕೊಡಬೇಕೆಂದು ಕರಾರು ಹಾಕಿ, ಈ ಧರ್ಮವನ್ನು ಬಾಗಳಿಯ ಮಹಾಜನರು ರಕ್ಷಿಸಬೇಕೆಂದು ಕೇಳಿಕೊಂಡಿದ್ದಾಳೆ. ಇನ್ನೊಂದು ಶಾಸನದಲ್ಲಿ[೯೬] ಅರಸಿಕೆರೆಯ ಮಹಾಪ್ರಭು ಕಲಿಯಮಗೌಡನ ಮಗಳು(ಕಣಕ ಪಿರಿಯಾಡ ಪೆರ್ಗ್ಗಡೆಯ ಹೆಂಡತಿ) ಮನೋವಲ್ಲಭೆ, ಅಭಿನವಪಾರ್ವತಿಯೆನಿಸಿದ, ಬಾಚಲದೇವಿ ಅರಸಿಕೆರೆಯ ಗೌಡಿಕೆಯಿಂದ ಬರುತ್ತಿದ್ದ ಲಾಭವನ್ನು ಶ್ರೀ ಸ್ವಯಂಭುದೇವರ ಭೋಗಕ್ಕೆ(ಅಂಗ ಮತ್ತು ರಂಗಭೋಗ) ಶಿವಭಕ್ತಿ ಪಂಡಿತರ ಕಾಲನ್ನು ತೊಳೆದು ಭೋಗಕ್ಕೆ, ೧ ಕೊಳ, ಅರಸಿಕೆರೆಯ ಬಡಗಣ ಜವಲಗೆರೆ ಭೂಮಿ, ಕಿಸುಮತ್ತರು ಒಂದು ಭೂಮಿ, ಮಾಚಿಸೆಟ್ಟಿಯ ಬಡಗಲು ಕೆರೆ ಎರಡು ಮತ್ತರು, ಹುಣಿಸೆ ತೆಂಕಲುಗದ್ದೆ, ೬೦೦ ಕಮ್ಮ, ಮೂಡಲಗದ್ದೆ, ಹೊಸ ಕೆರೆಯ ಮೂಡಲಗದ್ದೆ ೨೦೦ ಕಮ್ಮ, ನೀಲಗುಂದ ಹೆದ್ದಾರಿಯ ಪಡುವಲು ಭೂಮಿ ಮತ್ತು ಅಗಸರಿಗೆ, ಗಾಣಿಗರಿಗೆ ಮೊದಲಾದುವುಗಳನ್ನು ದಾನಬಿಡುತ್ತಾಳೆ. ಇವೆಲ್ಲವನ್ನು ದಾನ ಮಾಡಿದರೆ ಸರ್ವಭಾದೆ(ರೋಗ) ಪರಿಹಾರವಾಗುವುದೆಂದು ದೇವರ ಅಂಗಭೋಗಕ್ಕೂ ಮತ್ತು ರಂಗಭೋಗಕ್ಕೂ ತನ್ನ ಗೌಡಿಕೆಗೆ ಸಂಬಂಧಿಸಿದ ಆಸ್ತಿಯನ್ನು, ತನಗೆ ಮಕ್ಕಳು ಇಲ್ಲದ್ದರಿಂದ, ದೇವರಿಗೆ ಎಲ್ಲವನ್ನು ದಾನ ನೀಡಿದರೆ ಎಲ್ಲವೂ ಸುಖಮಯವಾಗುವುದೆಂಬ ನಂಬಿಕೆಯಿಂದ ದೇವರ ಪೂಜಾಕಾರ್ಯಗಳಿಗೆ ದಾನ ಬಿಡುತ್ತಾಳೆ. ಅಂದರೆ ಈ ಶಾಸನದಲ್ಲಿ ಮುಂಜಾನೆ ನೈವೇದ್ಯದ ನಂತರದಲ್ಲಿ ಪಾತ್ರದವರಿಂದ ನಿರ್ದಿಷ್ಟ ಕಾರ್ಯಕ್ರಮವು ಪ್ರಸ್ತುತವಾಗಬೇಕು ಎಂಬುದು ತಿಳಿದುಬರುತ್ತದೆ. ದೇವಾಲಯದ ಪ್ರಧಾನ ನರ್ತಕಿಯಾದ, ಪಾತ್ರದವಳು ದೇವರ ನೈವೇದ್ಯದ ನಂತರ ನಿಯೋಜಿತ ಪದ್ಧತಿಯಂತೆ ತನ್ನ ಸೇವೆಯನ್ನು ಸಲ್ಲಿಸುತ್ತಿದ್ದಳು. ಇದರಿಂದ ಪಾತ್ರದವರು ರಂಗಭೋಗ ಪರಿವಾರದ

[illegible]

ಮುಖ್ಯರು, ರಂಗಭೋಗದ ಆಕರ್ಷಣೆಯು ಇವರಾಗಿದ್ದರು. ಇವರು ನೃತ್ಯದ ಮೂಲಕ ರಂಗಭೋಗಕ್ಕೆ ಮುಡಿಪಾಗಿದ್ದವರು ದೇವಾಲಯಗಳಿಂದ ಬದುಕಿಗೆ ಆಸರೆ ಪಡೆದಿದ್ದರು. ತಮ್ಮ ಕಲೆಯನ್ನು ಮುಂದುವರಿಸಿ ಕೊಂಡು ಬೆಳೆಯುತ್ತಾ ಸಾರ್ಥಕ ಜೀವನ ನಡೆಸುತ್ತಾ ತಮ್ಮನ್ನು ಪ್ರೋತ್ಸಾಹಿಸಿದ ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿ ಕೃತಾರ್ಥರಾಗಿದ್ದಾರೆ.

ಕಲ್ಯಾಣಿ ಚಾಲುಕ್ಯರ ಕಾಲದ ರಂಗಭೋಗಕ್ಕೆ ಸಂಬಂಧಿಸಿದ ಮುಖ್ಯ ದೇವಾಲಯವೆಂದರೆ ಬಾಗಳಿಯ ಕಲ್ಲೇಶ್ವರ ದೇವಾಲಯ. ಇದು ಅತ್ಯಂತ ವಿಶಾಲವಾದ ಉದ್ದನೆಯ ನವರಂಗವನ್ನು ಹೊಂದಿರುವ ಈ ದೇವಾಲಯ ಕೆಲವು ಕಂಬಗಳಲ್ಲಿ ನೃತ್ಯ ಭಂಗಿಯಲ್ಲಿ ಸ್ತ್ರೀ ಶಿಲ್ಪಗಳಿವೆ. ಗರ್ಭಗೃಹದ ದ್ವಾರಬಂಧದ ಪಟ್ಟಿಕೆ ನೃತ್ಯಮೂರ್ತಿ ಶಿವ ಹಾಗೂ ಅಕ್ಕಪಕ್ಕಗಳಲ್ಲಿ ಉಮಾ ಮತ್ತು ಗಂಗೆ, ನೃತ್ಯ ಭಂಗಿಗಳಲ್ಲಿ ಚಿತ್ರಿತವಾಗಿದ್ದಾರೆ. ಈ ಕಂಬಗಳ ಅಲಂಕಾರ ಪ್ರಭಾವಳಿಗಳಲ್ಲಿ ನೃತ್ಯಭಂಗಿಗಳಿರುವ ಮದನಿಕೆಯರು ಕಂಡುಬರುತ್ತಾರೆ. ಇಲ್ಲಿ ಕಂಡುಬರುವ ಸ್ತ್ರೀ ಅರ್ಧಮಾತ್ರಕರಣದಲ್ಲಿ ಇರುವಂತೆ ಕೆತ್ತಲಾಗಿದೆ. ಅಕ್ಕಪಕ್ಕದಲ್ಲಿ ಪುರುಷರಲ್ಲಿ ಎಡಭಾಗದವನು ಮೃದಂಗವನ್ನು, ಬಲಭಾಗದವನು (ಅನವದ್ಧ)ಕೋಲಿನಂತಹ ವಾದ್ಯವನ್ನು ಕೋನದ ಸಹಾಯದಿಂದ ನುಡಿಸುತ್ತಿರುವುದನ್ನು ಕಾಣಬಹುದು. ಈ ಎರಡು ವಾದ್ಯಗಳು ನರ್ತನಕ್ಕೆ ಹೆಚ್ಚಾಗಿ ಉಪಯೋಗವಾಗುತ್ತಿದ್ದವು. ಪ್ರಾಯಶಃ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಮದನಿಕೆಯರನ್ನು ಕ್ರಿ.ಶ.೧೧ನೇ ಶತಮಾನದ ಆರಂಭಕ್ಕೆ ಕಾಣಬಹುದು. ಬಾಗಳಿಯ ದೇವಾಲಯದ ನವರಂಗದ ಕಂಬಗಳಲ್ಲಿ ಕೆತ್ತಲಾದ ಶಿಲ್ಪಗಳು ಮದನಿಕೆಯರ ಮೂಲ ರೂಪವನ್ನು ಪಡೆದಿವೆ. ದೇವಾಲಯದ ಒಳಗೆ ಕಂಬಗಳಲ್ಲಿ ಕೆತ್ತಲಾಗಿರುವ ಈ ಸ್ತ್ರೀಮೂರ್ತಿಗಳು, ಮದನಿಕೆಯರ ಲಕ್ಷಣಗಳನ್ನು ಒಳಗೊಂಡಿವೆ. ಆದ್ದರಿಂದ ಇವರನ್ನು ಬಾಗಳಿಯ ಮದನಿಕೆಯರು ಎನ್ನುತ್ತಾರೆ. ಇಲ್ಲಿಯ ಶಾಸನವೊಂದರಲ್ಲಿ 'ಸೂಳೆ' ಹರಿಕಾರ ರೇವಣ್ಣನ ಮಗಳು ದೇವರ ಪೂಜಾಕಾರ್ಯಗಳಿಗೆ ಕೆರೆಗಳನ್ನು ಮಾನ್ಯವಾಗಿ ಬಿಟ್ಟಿದ್ದಾಳೆ. ಇಲ್ಲಿ ಹರಿಕಾರ ರೇವಣ್ಣನ ಮಗಳು ಸೂಳೆಯಾಗಿದ್ದಳೆಂದು ಉಲ್ಲೇಖವಾಗಿದೆ.[೯೭]

ದೇವಾಲಯಗಳ ನಿರ್ಮಾಣ ಮತ್ತು ದಾನ

ಕರ್ನಾಟಕದಲ್ಲಿ ದೇವಾಲಯಗಳು 'ವಾಸ್ತು'ವಿನ, ಕಟ್ಟಡಗಳಿಂದ ನಿರ್ಮಾಣವಾಗುತ್ತಿದ್ದವು. ಇದು ಮುಂದೆ 'ವಾಸ್ತುಶಿಲ್ಪ' ಎಂಬ ಅರ್ಥದೊಂದಿಗೆ ಕಟ್ಟಡಗಳ ನಿರ್ಮಾಣ ಎಂದಾಯಿತು.[೯೮] 'ಶಿಲ್ಪಿ' ಎಂದರೆ ಮೂರ್ತಿಗಳನ್ನು ಕಡೆಯುವ, ನಿರ್ಮಾಣ ಮಾಡುವ ಸ್ಥಪತಿ ಎಂದು ಗುರುತಿಸಿಕೊಂಡವು. ದೇವಾಲಯದ ವಾಸ್ತುಶಿಲ್ಪಕ್ಕೂ ನಮ್ಮ ಗ್ರಂಥಗಳಿಗೂ ದೈವಿಕ ಮೂಲವನ್ನು ಕಂಡುಕೊಳ್ಳುತ್ತಾರೆ. ವಾಸ್ತುಶಿಲ್ಪದ ಹುಟ್ಟನ್ನು 'ಮಾನಸಾರ'ದಲ್ಲಿ ಬ್ರಹ್ಮನ ನಾಲ್ಕು ಮುಖಗಳಿಂದ ವಿಶ್ವಕರ್ಮ, ಮಯ, ತ್ವಷ್ಟ್ರು ಮತ್ತು ಮನು ಹುಟ್ಟಿದರು. ಇವನ ನಾಲ್ಕು ಜನ ಮಕ್ಕಳು ಕ್ರಮವಾಗಿ ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ ಮತ್ತು

[illegible]

ತಕ್ಷಕ ಎಂಬುವರು ವಾಸ್ತುಶಿಲ್ಪದ ಕಲೆಯನ್ನು ಬೆಳೆಸಿದರೆನ್ನುತ್ತದೆ. ಪ್ರಾಯಶಃ ಇದು ಅರ್ಥವತ್ತಾದ ನಿರೂಪಣೆ ಆಗಿದೆ.(ವಿವರಕ್ಕೆ ಕ.ಸಂ.ಸ., ಪು.೫೨೬ರಲ್ಲಿ ನೋಡಿ)

ನಮ್ಮಲ್ಲಿ ದೇವಾಲಯದ ವಾಸ್ತುಶಿಲ್ಪ ಬೆಳೆದುಬಂದ ದಾರಿಯನ್ನು ಗುರುತಿಸಿದರೆ ಕ್ರಿ.ಶ.೩ನೇ ಶತಮಾನದ ಶಾತವಾಹನರ ಕಾಲದ ಬೌದ್ಧ ಧರ್ಮದ ಚೈತ್ಯಸ್ತೂಪ, ವಿಹಾರಗಳು, ಬ್ರಹ್ಮಗಿರಿ, ಬನವಾಸಿ, ಸನ್ನತಿಯನ್ನು ನೆನೆಯಬಹುದು. ನಂತರ ಚಾಲುಕ್ಯ ಪೂರ್ವಯುಗ ೫ನೇ ಶತಮಾನದವರೆಗೆ ಗುರುತಿಸಬಹುದು. ಚಾಲುಕ್ಯ ಯುಗ ೬ ರಿಂದ ೧೦ನೇ ಶತಮಾನದವರೆಗೆ. ಇದರಲ್ಲಿ ರಾಷ್ಟ್ರಕೂಟರು ಕಾಣಿಸಿಕೊಳ್ಳುತ್ತಾರೆ. ಹೊಯ್ಸಳಯುಗ ೧೧ನೇ ಶತಮಾನದಿಂದ ೧೩ನೇ ಶತಮಾನದ ಕೊನೆಯ ಘಟ್ಟ. ವಿಜಯನಗರದ ಕಾಲವನ್ನು ೧೪ನೇ ಶತಮಾನದಿಂದ ಈಚೆಗೆ ಸೇರಿಸಬಹುದು. ಮುಸ್ಲಿಂ ವಾಸ್ತುಶಿಲ್ಪ - ವಿಜಯನಗರದ ಕಾಲದಲ್ಲಿಯೇ ಬೆಳೆದರೂ ಇದು ಸ್ವತಂತ್ರವಾಗಿ ಬೆಳೆಯಿತು.[೯] ಇವೆಲ್ಲವುಗಳಲ್ಲಿ ಬಾದಾಮಿ ಚಾಲುಕ್ಯರ ಕಲೆ, ವಾಸ್ತು ದೇವಾಲಯಗಳ ನಿರ್ಮಾಣಕ್ಕೆ ಹೆಚ್ಚು ಪ್ರಸಿದ್ಧಿ ಪಡೆಯಿತು. ಇವರ ನಂತರ ಕಲ್ಯಾಣಿ ಚಾಲುಕ್ಯರು ಇವರ ಪದ್ಧತಿ ಅನುಸರಿಸಿ ಅನೇಕ ದೇವಾಲಯಗಳನ್ನು ನಿರ್ಮಿಸಿ ಶೈವ, ವೈಷ್ಣವ, ಜೈನ ಪ್ರೋತ್ಸಾಹ ನೀಡಿದರು. ಇವರ ಕಾಲದ ಕೆಲವು ದೇವಾಲಯಗಳನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಇಟಗಿಯ ಮಹದೇವ ದೇವಾಲಯ ಕುಕ್ಕನೂರಿನ ಕಲ್ಲೇಶ್ವರ, ಲಕ್ಕುಂಡಿಯ ಕಾಶೀ ವಿಶ್ವೇಶ್ವರ, ನೀಲಗುಂದದ ಭೀಮೇಶ್ವರ, ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯ, ಬಾಗಳಿಯ ಕಲ್ಲೇಶ್ವರ ದೇವಾಲಯಗಳನ್ನು ಉಲ್ಲೇಖಿಸಬಹುದು. ಕ್ರಿ.ಶ.೧೦೭೬ನೇ ವರ್ಷವು ಸಾಮಾನ್ಯವಾಗಿ ದಕ್ಷಿಣ ಭಾರತ ಇತಿಹಾಸದಲ್ಲಿ ವಿಶೇಷವಾಗಿ ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣವಾದ ವರ್ಷ. ಏಕೆಂದರೆ ೬ನೇ ವಿಕ್ರಮಾದಿತ್ಯನು ಚಾಲುಕ್ಯ ಸಿಂಹಾಸನವನ್ನು ಪಡೆದು ಚಾಲುಕ್ಯ ಶಕೆಯನ್ನು ಪ್ರಾರಂಭಿಸಿದನು. ಐವತ್ತಕ್ಕೂ ಹೆಚ್ಚು ವರ್ಷ ಆಳಿ, ಅವನ ಆಡಳಿತದ ಸಾಧನೆಗಳಲ್ಲಿ ಸಾಂಸ್ಕೃತಿಕ ಸಾಧನೆಯೂ ಒಂದಾಗಿತ್ತು. ಇವನ ನಂತರ ಪಟ್ಟಕ್ಕೆ ಬಂದವರೂ ಇವನಂತೆ ದೇವಾಲಯಗಳಿಗೆ ಪೋಷಣೆ ನೀಡುವುದನ್ನು ಮುಂದುವರಿಸಿದರು. ಇವರ ಕಾಲದ ದೇವಾಲಯಗಳು ಬೃಹದಾಕಾರ ಮತ್ತು ಅಲಂಕಾರಿಕವಾದವುಗಳು. ಮೊದಲ ಹಂತದಲ್ಲಿಯೇ ಕಲ್ಯಾಣಿ ಚಾಲುಕ್ಯರ ವಾಸ್ತುಶಿಲ್ಪದ ಮುಂದಿನ ಹಂತವೂ ಬಹುಸಂಖ್ಯೆಯ ಶಿವಾಲಯಗಳಿಗೆ, ಜೈನಬಸದಿಗಳಿಗೆ ಪ್ರಸಿದ್ಧವಾಯಿತು. ಈ ಅರಸರು ಶೈವಧರ್ಮಕ್ಕೆ ಆಶ್ರಯ ನೀಡಿದ್ದು, ರಾಜಮನೆತನದ ಸದಸ್ಯರು ಸೇನಾನಾಯಕರು, ಸದಸ್ಯರು, ವರ್ತಕ ಸಮುದಾಯದವರು ಶಿವಾಲಯಗಳನ್ನು ಕಟ್ಟಿಸಿದುದ್ದಲ್ಲದೆ, ಅವುಗಳಿಗೆ ಉದಾರವಾಗಿ ದಾನಧರ್ಮ ಮಾಡಿದನ್ನು ಶಾಸನಗಳು ತಿಳಿಸುತ್ತವೆ. ಸೂರ್ಯ ಮತ್ತು ಸಪ್ತಮಾತೃಕೆಯರನ್ನು ಗೌರವಿಸಿದ್ದರು. ತ್ರಿಕೂಟ ಗರ್ಭಗೃಹಗಳಲ್ಲಿ ಸೂರ್ಯನನ್ನು ಪ್ರತಿಷ್ಠಾಪಿಸಿದರೆ,

ನವರಂಗ, ದೇವಕೋಷ್ಟಕಗಳಲ್ಲಿ ಸಪ್ತಮಾತೃಕೆಯರಿಗೆ ಸ್ಥಾನವನ್ನು ನೀಡಿರುವುದನ್ನು ಗಮನಿಸಿದ್ದೇವೆ.[೧೦೦] ಇಲ್ಲಿಯ ಶಾಸನಗಳಲ್ಲಿ ದೇವಾಲಯಗಳಿಗೆ ನೀಡಿದ ದಾನಗಳನ್ನು ಹೀಗೆ ನೋಡಬಹುದು.

ಚಾಮೆಯನು ಕೆರೆಯ ಕೆಳಗಿನ ಭೂಮಿಯನ್ನು ಸೋಮನಾಥದೇವರ ಸೇವೆಗೆ ಬಾಗುಳಿಯ ಮಹಾಜನರ ಸಮ್ಮುಖದಲ್ಲಿ ದಾನ ನೀಡಿದ್ದನೆಂದು ಬರುತ್ತದೆ.[೧೦೧] ಶಾಸನ ತ್ರುಟಿತವಾಗಿರುವುದರಿಂದ ಸರಿಯಾದ ಮಾಹಿತಿ ತಿಳಿದುಬರುವುದಿಲ್ಲ. ಬಾಗುಳಿಯ ಕಲಿದೇವಸ್ವಾಮಿಗೆ ಬಿಕ್ಕಿಗ-೭೦ ರೊಳಗಣ ನಾರಣೋಝರ ಶಂಕರೋಝರ, ನಾಚಿಮಯ್ಯನ ಕೆರೆಗಳು ಯೋಗೇಶ್ವರ ಹೊಲದ ಸಮಸ್ತ ಭೂಮಿಯನ್ನು ದೇವರ ನೈವೇದ್ಯ ಮತ್ತು ನಂದಾದೀವಿಗೆಗೆ ದಾನನೀಡಿದನು.[೧೦೨] ಇದೇ ಶಾಸನದಲ್ಲಿ ಬಿಕ್ಕಿಯ ಭೀರಭಟ್ಟನು ಬಾಗುಳಿಯ ಕಲಿದೇವರಿಗೆ ಮಹಾಜನರ ಸಮ್ಮುಖದಲ್ಲಿ ಭೂಮಿಯನ್ನು ಮತ್ತು ಕೆರೆಯನ್ನು ದಾನಬಿಡುತ್ತಾನೆ.[೧೦೩] ಈ ಶಾಸನವು ವಿಶ್ವಾಮಿತ್ರಗೋತ್ರದ ಕಾಳಿಮಯ್ಯನ ಮಗನಾದ ಸೋಮಣ್ಣನು ಕಲಿದೇವರ ಸೇವೆಗಾಗಿ ಭೂದಾನ ಮಾಡಿದ ಎಂದಿದ್ದು, ಮತ್ತು ದೇವರ ಅಗ್ರಾಸನಕ್ಕೆ(ಪ್ರಧಾನವಾದ ಪೀಠ) ಕೆರೆ ದಾನಬಿಟ್ಟ ಎಂದು ಉಲ್ಲೇಖವಾಗುತ್ತದೆ.[೧೦೪] ಇಲ್ಲಿ ಕಲಿದೇವರ (ಸ್ವಾಮಿಗೆ), ನೈವೇದ್ಯಕ್ಕೆ, ನಂದಾ ದೀವಿಗೆಗೆ ತಿಂಗಳಿಗೆ ಎರಡು ಪಣಬಿಟ್ಟನೆಂದು ಬರುತ್ತದೆ.[೧೦೫] ಮುಂದುವರೆದು ಕಲಿದೇವರ ಸ್ವಾಮಿಯ ಅಗ್ರಾಸನಕ್ಕೆ ಒಂದೊಂದು ವೀಸ ದಾನ ಬಿಡುತ್ತಾನೆ.[೧೦೬] ಇದು ಶ್ರೀವೀರಕೇಶವ ದೇವರ ನಂದಾದೀವಿಗೆಗೆ ಮಹಾಜನಗಳು ಬಿಟ್ಟರು.[೧೦೭] ಶ್ರೀಸ್ವಯಂಭುಕಲಿದೇವರ ನಂದಾದೀವಿಗೆಗೆ ಬಿಟ್ಟದಾನದ ವಿವರವಿದೆ.[೧೦೮] ಕಲಿದೇವರ ನೈವೇದ್ಯಕ್ಕೆ ಬಿಟ್ಟ ಗದ್ಯಾಣ ಎಂದು ಉಲ್ಲೇಖಿಸುತ್ತದೆ.[೧೦೯] ಇಲ್ಲಿಯೂ ಸಹ ದೇವರ ನೈವೇದ್ಯಕ್ಕೆ ಅಗ್ರಾಸನಕ್ಕೆ ನೀಡಿದ ದಾನದ ಬಗ್ಗೆ ತಿಳಿಯುತ್ತದೆ.[೧೧೦] ದೇವರ ಅಗ್ರಾಸನಕ್ಕೆ ಬಿಟ್ಟ ದಾನವೆಂದಿದೆ.[೧೧೧] ದಿವ್ಯಲಿಂಗ ಶ್ರೀ ಸ್ವಯಂಭು ಕಲಿದೇವರಸ್ವಾಮಿಯ ನೈವೇದ್ಯಕ್ಕೆ ನೀಡಿದ-೩೦ ಕಮ್ಮ ಎಂದಿದೆ.[೧೧೨] ಕಲಿದೇವರ ವಿವಿಧ ರೀತಿಯ ಪೂಜೆ, ಸೇವೆಗಾಗಿ ನೀಡಿದ ತೋಟದ ಉಲ್ಲೇಖವಿದೆ.-೧೧೪[೧೧೩] ಕಲಿದೇವರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಬಿಟ್ಟ ದಾನದ ವಿವರವಿದೆ-೧೧೬[೧೧೪] ಇಲ್ಲಿಯೂ ಸಹ ಕಲಿದೇವರ ಸೇವೆಗೆ ನೀಡಿದ ಭೂಮಿ ದಾನ ಎಂದು ಬರುತ್ತದೆ-೧೭.[೧೧೫] ಇದು ವಿಶೇಷವಾಗಿಯೇ ಉಲ್ಲೇಖಿಸಿದೆ. ಶ್ರೀಸ್ವಯಂಭು ಕಲಿದೇವರ ರಾತ್ರಿನೈವೇದ್ಯ ಪೂಜೆಗಳಿಗೆ ಬಿಟ್ಟ ವಿವಿಧ ರೀತಿಯ ದಾನಗಳನ್ನು ಉಲ್ಲೇಖಿಸುತ್ತದೆ.[೧೧೬] ಇದರಲ್ಲಿ ಸ್ವಯಂಭು ಕಲಿದೇವರ ನಂದಾದೀವಿಗೆಗೆ ಬಿಟ್ಟಗದ್ಯಾಣ-೧೪ ಎಂದು ಉಲ್ಲೇಖ ಬರುತ್ತದೆ. ಒಂದೇ ಶಾಸನದಲ್ಲಿ ಎರಡು ರೀತಿಯ ಉಲ್ಲೇಖಗಳು ಬಂದಿವೆ. ೧. ಕಲ್ಲಿನಾಥದೇವರ ನಂದಾದೀವಿಗೆಗೆ ತಿಂಗಳು ಒಂದು ಕೆಮ್ಮ, ಕಲ್ಲಿನಾಥದೇವರ ಗಂದಕ್ಕೆ, ಎರಡು ತಾರಗಳನ್ನು ಬಿಟ್ಟುದ್ದುದನ್ನು ಉಲ್ಲೇಖಿಸುತ್ತದೆ. ಕಲಿದೇವರಸ್ವಾಮಿಯ ದೇಗುಲವನ್ನು ಮೂರು ಕಡೆಯ

[illegible]

ದೆಸೆಯಿಂದ ಮಾಡಿಸಿದನೆಂದು ಉಲ್ಲೇಖ ಬಂದಿದೆ.[೧೧೭] ಹೀಗಾಗಿ ಇಲ್ಲಿಯ ಹೆಚ್ಚು ಶಾಸನಗಳು ದೇವರಿಗೆ ಬಿಟ್ಟ ಹಾಗೂ ಮಾನ್ಯಮಾಡಿದ ಉಲ್ಲೇಖಗಳು ಬರುತ್ತವೆ.

ದೇವಾಲಯಗಳ ಆಡಳಿತ

ಹೀಗೆ ದೇವಾಲಯಗಳನ್ನು ಕಟ್ಟಿಸಿದ ವ್ಯಕ್ತಿಗಳು ಅದರ ಚಟುವಟಿಕೆಗಳು ನಡೆದುಕೊಂಡು ಹೋಗಲು ದೇವಾಲಯಗಳಲ್ಲಿ ಸ್ಥಾನಗಳನ್ನು ಕಲ್ಪಿಸಲಾಗಿತ್ತು. ಅವು ನೈಷ್ಠಿಕ ಸ್ಥಾನಗಳು. ಈ ನಾಡಿನ ಉದ್ದಕ್ಕೂ ಪಾಶುಪತ - ಕಾಳಾಮುಖ ಶೈವ ದೇವಾಲಯಗಳನ್ನು ಕಾಣುತ್ತೇವೆ. ನೈಷ್ಠಿಕ ಬ್ರಹ್ಮಚಾರಿಗಳಾದ ಶೈವ ಸ್ಥಾನಚಾರ್ಯ, ಸ್ಥಾನಪತಿ, ಗುರುಗಳು ದೇವಾಲಯಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇಲ್ಲಿಯ ಶಾಸನಗಳಲ್ಲಿ ಕಲಿದೇವರ ಸ್ಥಾನಪತಿ, ಸ್ಥಾನಾಚಾರ್ಯ, ಸ್ಥಾನಿಕ ಎಂದು ಇವರನ್ನು ಸಂಭೋದಿಸಿವೆ.

ಈ ಸ್ಥಾನಾಚಾರ್ಯಗಳಲ್ಲಿ ಬ್ರಹ್ಮಚಾರಿಗಳಿಗೆ ಮಾತ್ರ ಅವಕಾಶವಿತ್ತು. ಇವರು ಯಮ, ನಿಯಮ, ಧ್ಯಾನಮರಣ, ಜಪಸಮಾಧಿ, ಶೀಲಸಂಪನ್ನರು, ವ್ರತ, ಜಪ, ಹೋಮಾದಿ ಅನುಷ್ಠಾನರು ಆಗಿರುತ್ತಿದ್ದರು. ತಮ್ಮ ವಿದ್ವತ್ತು, ತಪಸ್ಸು ಮತ್ತು ನೈಷ್ಠಿಕ ಬ್ರಹ್ಮಚರ್ಯದಿಂದಾಗಿ ಸಮಾಜದಲ್ಲಿ ಗೌರವ ಪಡೆದು, ಪೂಜಾಸ್ಥಾನದಲ್ಲಿದ್ದರು. ಇವರ ಅನುಮತಿ ಇಲ್ಲದೆ ದೇವಾಲಯದ ಯಾವ ಕೆಲಸ ಕಾರ್ಯಗಳು ನಡೆಯುವಂತಿರಲಿಲ್ಲ, ದೇವಾಲಯಗಳಿಗೆ ದಾನ ಬಿಡುವುದಾಗಲಿ ಇತರ ಯಾವುದೇ ಧರ್ಮಕಾರ್ಯ ಕೈಗೊಳ್ಳುವುದಾಗಲಿ ಇವರ ಪಾದಪೂಜೆಯಿಂದ ಪ್ರಾರಂಭವಾಗಬೇಕಿತ್ತು. ಅದನ್ನೆ ಶಾಸನಗಳು 'ಕಾಲಂಕರ್ಚ್ಚಿ' ಎಂದು ಕರೆದಿವೆ. ಇವುಗಳನ್ನು ಈ ಶಾಸನಗಳಲ್ಲಿ ಕಾಣಬಹುದು. ಈ ಶಾಸನದಲ್ಲಿ ಸೋಮಸಿಂಘಭಳಾರರು ಸ್ಥಾನಚಾರ್ಯರಾಗಿದ್ದು, ಅವರ 'ಕಾಲಂಕರ್ಚಿ' ಮಹಾಜನರ ಸಮ್ಮುಖದಲ್ಲಿ ಕಲಿದೇವರಿಗೆ ಕೆರೆಯನ್ನು ಧಾರೆ ಎರೆದವನು ಭೀರಭಟ್ಟನೆಂದು ಉಲ್ಲೇಖ ಬರುತ್ತದೆ.[೧೧೮]

ಸ್ಥಾನಾಚಾರ್ಯ್ಯರನ್ನು ಶಾಸನಗಳು ಹೀಗೆ ಉಲ್ಲೇಖಿಸಿವೆ. 'ಯಮನಿಯಮಾನನಾನುಷ್ಠಾಣ', 'ಪರಾಯಣ', 'ಜಪಸಮಾಧಿ', 'ಸಕಳಾಗಮ', 'ಶಾಸ್ತ್ರಪರಮತತ್ವಜ್ಞಾನ', ಸಕಳಗುಣ ಸಂಪನ್ನರಪ್ಪ, ಶ್ರೀಮತ್ ಎಂದು ಉಲ್ಲೇಖಿಸಿ, ಶಿವಶಕ್ತಿ ಪಂಡಿತರ ಕಾಲನ್ನು ತೊಳೆದು' ಕಲಿದೇವರಿಗೆ ಧಾರಪೂರ್ವಕವಾಗಿ ದಾನ ಬಿಟ್ಟಿರುವುದನ್ನು ತಿಳಿಸುತ್ತದೆ. ಇನ್ನು ಕೆಲವೊಂದು ಶಾಸನಗಳಲ್ಲಿ ಬಾಗುಳಿಯ ಮಹಾಜನರನ್ನು ಸ್ಥಾನಚಾರ್ಯರೆಂದು ಕರೆದಿವೆ. ಇಲ್ಲಿ ಅವರ ಸಮ್ಮುಖದಲ್ಲಿ ಮಹಾಜನರ 'ಕಾಲಂಕರ್ಚಿ' ನೀಡಿದ ದಾನದ ವಿವರವಿದೆ. ಈ ಶಾಸನದಲ್ಲಿ ಶಿವಶಕ್ತಿಜೀಯರ ಕಾಲನ್ನು ತೊಳೆದು' ಬಿಟ್ಟ ದಾನ ಎಂದು ಪ್ರತಿಪಾದಿಸುತ್ತದೆ. ಇದು ಹಿಂದೆಯೇ ತಿಳಿಸಿದ ಹಾಗೆ ಶಿವಶಕ್ತಿಪಂಡಿತರ'ನ್ನು ಉಲ್ಲೇಖಿಸುತ್ತದೆ.[೧೧೯] ಇದರಲ್ಲಿ ಸಕಳಾಗಮ ಕುಶಲರಪ್ಪ, ಶಿವಶಕ್ತಿ ಪಂಡಿತರ ಸನ್ನಿಧಾನದಲ್ಲಿ ಕಲಿದೇವರ ದಿವ್ಯ ಪಾದದೊಳ್ ಬಿಟ್ಟ ದಾನದ

ವಿವರವಿದೆ. ಈ ಶಾಸನದಲ್ಲಿ ಕೆಲವೊಂದು ಪದಗಳು ಬಂದಿದ್ದು ವಿಶೇಷವೆನಿಸಿವೆ. ಇಲ್ಲಿ 'ಖಣ್ಡಣಿಕ'ರು ಎಂದು ಉಲ್ಲೇಖವಾಗಿದೆ.[೧೨೦] ಖಣ್ಡಕೆಯರು ಎಂದರೆ ಸ್ಥಾನಿಕರು ಎಂದರ್ಥ ಬರುತ್ತದೆ. ಇಲ್ಲಿ 'ಖಣ್ಡಕೆಯ ಸ್ಥಾನಿಕರು, ಪೇಳ್ವುದು ಪರಸ್ಥಾನದವರಿಗಿಲ್ಲೀ ಎಂದಿದೆ. ಖಣ್ಡಕವೆಂದರೆ ವೇದವನ್ನು ಭಾಗವಾಗಿ ಪಠಿಸುವುದು. ಈ ಕಾರ್ಯವನ್ನು ಸಾಮಾನ್ಯವಾಗಿ ಯಾರಾದರೂ ಮಾಡಬಹುದು. ಆದರೆ ಈ ಶಾಸನದಲ್ಲಿ ಖಣ್ಡಕವನ್ನು ವರ್ಷಕ್ಕೆ ಒಬ್ಬರೇ ಹೇಳಬೇಕು' ಮತ್ತು ಇವರೇ(ಸ್ಥಾನಿಕರು) ಹೇಳಬೇಕು. ಪರಸ್ಥಳದವರು ಹೇಳುವಂತಿಲ್ಲವೆಂದು ಕಟ್ಟುಪಾಡು ವಿಧಿಸಿರುತ್ತಾರೆ. ಇವರ ಕಟ್ಟುಪಾಡುಗಳನ್ನು ನೋಡಿದಾಗ, ಇದನ್ನು ವರ್ಷಕ್ಕೊಮ್ಮೆ ಹೇಳಬಹುದಾದ ಕಾರಣಿಕಕ್ಕೆ ಅನ್ವಯಿಸಬಹುದೆ? ಚರ್ಚಿಸಬೇಕಾದ ವಿಷಯ. ಕಾರಣೀಕ ಎಂದರೆ ಕೆಲವು ದೇವಸ್ಥಾನಗಳ ವಾರ್ಷಿಕ ಉತ್ಸವದಲ್ಲಿ ದೈವಾವೇಶದಿಂದ ಪೂಜಾರಿ ಹೇಳುವ ಭವಿಷ್ಯ ಸೂಚಕ ವಾಕ್ಯ. ಆದ್ದರಿಂದ ಖಣ್ಡಕ ಮತ್ತು ಕಾರಣಿಕ ಒಂದೇ ಎನ್ನಬಹುದೇ, ಈ ಶಾಸನದಲ್ಲಿ ಹೇಳಿರುವ ಹಾಗೆ ಖಣ್ಡಕವನ್ನು ಸ್ಥಾನಿಕರು ಮಾತ್ರ ಹೇಳಬೇಕು. ಆದರೆ 'ಖಣ್ಡಕ' ಎಂಬ ಪದದ ಅರ್ಥದ ಬಗ್ಗೆ ಬೇರೊಂದು ಅರ್ಥವಿರಬಹುದೆಂಬ ಊಹೆಯನ್ನು ಮಾಡಬಹುದು. ಈ ಶಾಸನದಲ್ಲಿ ಖಣ್ಡಕಕ್ಕೆ ಬಿಟ್ಟ ಕರ್ಮಣ್ಯಗೇರಿಯ ಎರೆಯ ಹನ್ನೆರಡು ಮತ್ತರು ಭೂಮಿಯನ್ನು ದಾಸಯನಾಯಕ ಬಿಟ್ಟನೆಂದು ತಿಳಿಸುತ್ತದೆ.[೧೨೧]

ಈ ಶಾಸನದಲ್ಲಿ ಸ್ತ್ರೀ ಸ್ಥಾನಿಕಳಿದ್ದಳೆಂದು ಕಂಡುಬರುತ್ತದೆ. ಜೊತೆಗೆ ಶಿವಶಕ್ತಿ ಪಂಡಿತರು ಇದ್ದರು. ಸಕಳಗುಣಸಂಪನ್ನರಪ್ಪ ಶ್ರೀ ವಿಷ್ಣುಗೋತ್ರದ ಗುಜ್ಜರ 'ಸಾಂತಿಕಬ್ಬೆ' ಎಂದು ಉಲ್ಲೇಖವಿದೆ.[೧೨೨] ಪ್ರಾಯಶಃ ಬಾಗಳಿಯಲ್ಲಿ ಸ್ತ್ರೀಯರು ಸಹ ಸ್ಥಾನಿಕರಾಗಿ ದೇವಾಲಯಗಳಿಗೆ ತಮ್ಮ ಸೇವೆಯನ್ನು ಮುಡಿಪಾಗಿಟ್ಟಿದ್ದರು ಎಂದು ತಿಳಿದುಬರುತ್ತದೆ.[೧೨೩] ಇದು ಬಾಗಳಿಯ ಮಹಾಜನರನ್ನು ಸ್ಥಾನಿಕರೆಂದು ವರ್ಷಕ್ಕೆ ಎರಡು ಪಣ ಗದ್ಯಾಣ ಬಿಡುವುದಾಗಿ ಎಂದು ತಿಳಿದುಬರುತ್ತದೆ.[೧೨೪] ಇದರಲ್ಲಿ ಸರ್ವಗುಣ ಸಂಪನ್ನರಪ್ಪ ಶ್ರೀ 'ಶಿವಶಕ್ತಿಪಂಡಿತ'ರೆಂದು ಉಲ್ಲೇಖಿಸುತ್ತದೆ.(ಇವರನ್ನು) 'ಪೊನ್ಮೊಖ್ಖಿಸೆಟ್ಟಿಯು' ಈ ಪಂಡಿತರ ಕಾಲನ್ನು ತೊಳೆದು ದೇವರಿಗೆ ದಾನ ನೀಡಿದನೆಂದು ತಿಳಿದುಬರುತ್ತದೆ.[೧೨೫] ಬಾಗಳಿಯ ಪ್ರಮುಖ ಮಹಾಜನರ(ನ್ನು) 'ಕಾಲಂಕರ್ಚಿ' ಕಾಳಿಮಯ್ಯನು ನೀಡಿದ ಭೂಮಿದಾನವನ್ನು ಉಲ್ಲೇಖಿಸುತ್ತದೆ.[೧೨೬] ಇದು ಸ್ಥಾನಿಕರ ಹೊಗಳಿಕೆ ನಿರೂಪಿಸುತ್ತದೆ. ವೇದವೇದಾನ್ತಧ್ಯಯನಧಾರಣಪಾರಾವಾರತೀರ, ಪ್ರಾಪ್ತ ಮತಿ ವಿಶೇಷಯ<ಶ> ಜ್ಞ ತಾಕಾವಿಭಾಶಿತರ್ , ಶ್ರೀಮನ್ನಾರಾಯಣ ಶ್ರೀಪಾದ ಪದ್ಮಾಸದಾರಾಧನ ಕ್ರಮಸಂಪೂರ್ಣ್ನ ಚಿತ್ತರಪ್ಪರೆಂದು ತಿಳಿಸುತ್ತಾ ಮಹಾಜನರ 'ಕಾಲಂ ಕರ್ಚಿ' ವರ್ಷಕ್ಕೆ ಮೂರುಪಣ ಗದ್ಯಾಣವನ್ನು ದೇವರಿಗೆ ನೀಡಿದ್ದರೆಂದು ಬರುತ್ತದೆ.[೧೨೭]

ಈ ಶಾಸನದಲ್ಲಿ ಇಬ್ಬರು ಸ್ಥಾನಿಕರನ್ನು ಉಲ್ಲೇಖಿಸುತ್ತದೆ. ಶ್ರೀ ನರಸಿಂಘನು ಸೋಮಸಿಂಘ ಭಳಾರರ ಕಾಲನ್ನು ತೊಳೆದು' ದಾನ ನೀಡಿದನೆಂದು ಉಲ್ಲೇಖಿಸಿದರೆ, ಭೀರಭಟ್ಟನು ಅದೇ ಸೋಮಸಿಂಘ ಭಳಾರರ 'ಕಾಲಂಕರ್ಚಿ' ಕೆರೆಯನ್ನು ದಾನನೀಡಿದನೆಂದು ತಿಳಿದುಬರುತ್ತದೆ. ಒಂದೇ ಹೆಸರಿನ ವ್ಯಕ್ತಿಯನ್ನು ಇಬ್ಬರು ಕರೆದು ತಂದು 'ಕಾಲಂಕರ್ಚಿ' ದಾನಬಿಟ್ಟರೆಂದು ತಿಳಿಯಬಹುದು. ಈ ಶಾಸನದಲ್ಲಿಯೂ ಸಹ ಶಿವಶಕ್ತಿ ಪಂಡಿತರ 'ಕಾಲಂಕರ್ಚಿ' ಎಂದಿದೆ.

ಇದು ಬಾಗುಳಿಯ ಮಹಾಜನರ ಕಾಲನ್ನು ತೊಳೆದು ದೇವರ ಪೂಜೆಗೆ ತಿಂಗಳಿಗೆ ಒಂದು ಪಣದಂತೆ ಕೆರೆಯನ್ನು ರಿಷಿಯಣ್ಣನು ಬಿಡುತ್ತಾನೆ.[೧೨೮] ಇದರ ಮುಂದುವರೆದ ಭಾಗದಲ್ಲಿ ನೀಲೇಶ್ವರ ಪಂಡಿತರ 'ಕಾಲಂಕರ್ಚಿ' ಪೆರ್ಗ್ಗಡೆ ಕಾವರಾಜನು ದೀಪಾವಳಿಯ ದಿನ ಮಹಾಜನರು ಕೊಡುವ ಗದ್ಯಾಣದಲ್ಲಿ ಒಂದು ಗದ್ಯಾಣ ದೇವರಿಗೆ[೧೨೯] ಬಿಡುತ್ತಾನೆ.

ಇದರಲ್ಲಿ ಬಾಗಳಿಯ ಕೆಲವು ಜನ ಶ್ರೀಮಂತರು(ಸೆಟ್ಟಿ) ಸೇರಿ ನೀಲೇಶ್ವರ ದೇವರಿಗೆ ನಾಗರಾಶಿಪಂಡಿತರ ಕಾಲನ್ನು ತೊಳೆದು, ಕಂಚಿಮೆಕೆರೆಯ ಗದ್ದೆಯ, ನೂರು ಮತ್ತರನ್ನು ದಾನ ನೀಡುತ್ತಾರೆಂದು ಉಲ್ಲೇಖಿಸುತ್ತದೆ.[೧೩೦] ಈ ಶಾಸನ ತ್ರುಟಿತವಾಗಿರುವುದರಿಂದ ಇದರಲ್ಲಿ ರಾಶಿ ಪಂಡಿತವೆಂದಿದೆ. ಮೊದಲಿನ ಎರಡು ಅಕ್ಷರಗಳು ತ್ರುಟಿತವಾಗಿವೆ. ಪ್ರಾಯಶಃ ಇದು ನಾಗರಾಶಿಪಂಡಿತರೆಂದು ಇರಬಹುದು. ಇಲ್ಲಿ ಹೊನ್ನಬಾಚಯ್ಯ ಎಂಬುವವನು ದೇವರಿಗೆ ಬಿಟ್ಟ ನೂರು ಕಮ್ಮ ಎಂದಿದೆ ಸರಿಯಾದ ಮಾಹಿತಿ ಇಲ್ಲ.[೧೩೧] ನೀಲಗುಂದದ ಒಂದು ಶಾಸನದಲ್ಲಿ ಸ್ಥಾನಿಕರ ವರ್ಣನೆ ಬರುತ್ತದೆ.

ದೇವಾಲಯಗಳಿಗೆ ದಾನ ನೀಡಿದ ಸ್ತ್ರೀಯರು

ವಿಶ್ವದ ಇತಿಹಾಸದಲ್ಲಿ ಭಾರತಕ್ಕೆ ವಿಶಿಷ್ಟವಾದ ಸ್ಥಾನವಿದೆ. ಭಾರತದ ಸಾಂಸ್ಕೃತಿಕ ಇತಿಹಾಸ ಅತ್ಯಂತ ಪ್ರಾಚೀನವಾದುದು, ಮತ್ತು ಆ ಸಾಂಸ್ಕೃತಿಕ ಉತ್ತುಂಗಾವಸ್ಥೆಯಲ್ಲಿ ಭಾರತೀಯ ಸಮಾಜಜೀವನದ ವಿವಿಧ ಕ್ಷೇತ್ರಗಳಲ್ಲಿ ಆರ್ಜಿಸಿದ ಸಾಧನೆಗಳಿಂದ ಇದು ವಿಶ್ವಕ್ಕೆ ಜ್ಯೋತಿಯಾಗಿ ಬೆಳಗಿತು. ಈ ಜ್ಯೋತಿಯ ಬೆಳಕಿನಲ್ಲಿ ಪ್ರಾಚೀನ ಕಾಲದ ಸ್ತ್ರೀಯರು, ಅವರಿಗೆ ಇದ್ದ ಗೌರವಗಳನ್ನು ನಾವಾಗಲೇ ಕಂಡಿದ್ದೇವೆ. ಶಾಸನಗಳಲ್ಲಿಯೂ ಸಹ ಅವರಿಗೆ ಉನ್ನತ ಸ್ಥಾನಮಾನವಿರುವುದನ್ನು ಉಲ್ಲೇಖಿಸುತ್ತವೆ. ಅದರಲ್ಲಿ ರಾಜ ಮನೆತನದ ಸ್ತ್ರೀಯರು ಹಾಗೂ ಸಾಮಾನ್ಯ ಸ್ತ್ರೀಯರು ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿ, ಸಾಧಕಿಯರಾಗಿ, ಸಿದ್ಧೆಯರಾಗಿ, ಸಹಭಾಗಿಗಳಾಗಿ, ಕೆಲವೊಂದು ಸಾರಿ ಪುರುಷರನ್ನು ಮೀರಿಸಿ ಅಮರರಾದ್ದುದು, ಸಾಮಾನ್ಯವಾದುದಲ್ಲ. ಪ್ರಸ್ತುತ ಬಾಗಳಿಯ ಶಾಸನೋಕ್ತ ಸ್ತ್ರೀಯರು ನೀಡಿದಂತಹ ದಾನದ ವಿವರವನ್ನು ಈ ರೀತಿಯಾಗಿ ತಿಳಿಯಬಹುದು.

ಕ್ರಿ.ಶ.೧೦೩೫ರಲ್ಲಿ ನಾಗವ್ವೆಯ ಮಗಳಾದ ಕಾಮವ್ವೆಯ ಕಲಿದೇವರ ನಂದಾದೀವಿಗೆಗೆ, ಸೂರ್ಯಚಂದ್ರರಿರುವ ತನಕ ಆಗುವಂತೆ ವರ್ಷ ವರ್ಷಕ್ಕೂ ಸರಿಯಾಗಿರುವಂತೆ ಎರಡು ಪಣವನ್ನು ದಾನಬಿಡುತ್ತಾಳೆ.[೧೩೧] ಇದೇ ಶಾಸನದಲ್ಲಿ ಮುಂದುವರಿದ ಭಾಗದಲ್ಲಿ ಪಾತ್ರದ ಸಿರಿಯವ್ವೆ(ಕಲಿದೇವರ ತೊತ್ತು) ತನ್ನ ಮನೆಯನ್ನು ದಾನಬಿಡುತ್ತಾಳೆ.[೧೩೨] ೧೦೭೯ರಲ್ಲಿ(ಪೆರ್ಗ್ಗಡೆಯ ಹೆಂಡತಿ) ಬಾಚಲದೇವಿಯು ಬಾಗುಳಿಯ ಕಲಿದೇವರ ಪೂಜೆ ಮತ್ತು ಬೇರೆ ಬೇರೆ ಕೆಲಸ ಕಾರ್ಯಗಳಿಗೆ ತನ್ನ ಭೂಮಿಯನ್ನು ದಾನ ನೀಡುತ್ತಾಳೆ.[೧೩೩] (೬ನೇ ವಿಕ್ರಮಾದಿತ್ಯನ ಕಾಲ) ಈ ಶಾಸನದಲ್ಲಿ, ಕಾಲದ ಉಲ್ಲೇಖವಿಲ್ಲ. ನಾದೇವ ಘೈಸನ ಹೆಂಡತಿ ಮಹಾದೇವಿ, ವೀರಕೇಶವ ದೇವರ ನೈವೇದ್ಯಕ್ಕೆ ಭೂಮಿಯನ್ನು ದಾನ ಬಿಡುತ್ತಾಳೆ.[೧೩೪]

ಇಲ್ಲಿ ೧೧೧೫ರಲ್ಲಿ ಯೆಲೆಕೆಲ ಬೊಜಂಗರಈಶ್ವರಯ್ಯನಮಾಚಕ್ಕಳು ಬಾಗುಳಿಯ ಕಲಿದೇವರ ಸ್ವಾಮಿಗೆ ಐವತ್ತು ಮಹಾಜನರ ಸಮ್ಮುಖದಲ್ಲಿ ದೇವರ ನೈವೇದ್ಯಕ್ಕೆ ೨೦ ಗದ್ಯಾಣವನ್ನು ನೀಡುತ್ತಾಳೆ.[೧೩೫] ಇದು ೧೧೨೨ರಲ್ಲಿ, ಗುಜ್ಜರ ಶಾಂತಿಕಬ್ಬೆ ಕಲಿದೇವರ ಸ್ವಾಮಿಯ ನೈವೇದ್ಯಕ್ಕೆ ೩೦ ಕಮ್ಮ ಭೂಮಿಯನ್ನು ದಾನ ನೀಡುತ್ತಾಳೆ ಎಂದು ನಿರೂಪಿಸುತ್ತದೆ.[೧೩೬]

ಈ ಶಾಸನದಲ್ಲಿ ೧೫೫೦ರಲ್ಲಿ ಬಾಗುಳಿಯ ಪಟ್ಟಣ ಸ್ವಾಮಿಯಾದ ಲಕ್ಕಿಸೆಟ್ಟಿಯ ಹೆಂಡತಿ ಲಿಂಗಮ್ಮನು ತನ್ನ ಮಗನಿಗೆ ಶುಭವಾಗಲೆಂದು ಕಲಿದೇವರಿಗೆ ನೈವೇದ್ಯಕ್ಕೆ ದಾನ ಬಿಡುತ್ತಾಳೆ. ಇದು ತಾಯಿ ಮಗನ ಪ್ರೀತಿ, ಮಮತೆಯನ್ನು ಉಲ್ಲೇಖಿಸುತ್ತದೆ.[೧೩೭]

೧೧೬೦ರಲ್ಲಿ ಚಿದ್ದಣನ ಪತ್ನಿಯಾದ ಧರ್ಮವ್ವೆಯು ಬಾಗುಳಿಯಲ್ಲಿ ತಾನು ಸ್ಥಾಪಿಸಿದ ಲಕ್ಷ್ಮೀ ನಾರಾಯಣ ದೇವರ ಪೂಜಾರ್ಥವಾಗಿ ಭೂಮಿಯನ್ನು ದಾನ ಬಿಡುತ್ತಾಳೆ.[೧೩೮] ಹೀಗೆ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಅನೇಕ ದೇವಾಲಯಗಳನ್ನು ಸ್ಥಾಪಿಸಿ ದಾನ ನೀಡಿರುವ ಸ್ತ್ರೀಯರ ಉಲ್ಲೇಖಗಳು ಬರುತ್ತವೆ. ಇಂತೆಯೇ ಹಡಗಲಿ, ಕುರುವತ್ತಿ, ಹಿರೇಹಡಗಲಿ ಶಾಸನಗಳಲ್ಲಿ ದಾನ ನೀಡಿದ ಉಲ್ಲೇಖಗಳು ಕಂಡುಬರುತ್ತವೆ. ಹೀಗೆ ಸ್ತ್ರೀಯರು ಸಹ ಪ್ರಾಚೀನ ಕಾಲದಲ್ಲಿ ದಾನದತ್ತಿಗಳನ್ನು ನೀಡಿ ತಮ್ಮ ಹೆಸರನ್ನು ಶಾಸನಗಳಲ್ಲಿ ಬರೆಸಿಟ್ಟ ಉಲ್ಲೇಖಗಳು ಬಂದಿವೆ.

ಮಠಗಳು

ಕರ್ನಾಟಕದ ಇತಿಹಾಸವನ್ನು ಗಮನಿಸಿದರೆ ಬಹುತೇಕ ದೇವಾಲಯಗಳಿಗೆ ಹೊಂದಿಕೊಂಡೇ ಮಠಗಳಿರುತ್ತಿದ್ದವು. ಇಲ್ಲಿ ಬರುವ ಶಾಸನಗಳಲ್ಲಿ ಹೆಚ್ಚಿನ ಮಠಗಳೇನು ಕಂಡುಬರುವುದಿಲ್ಲ. ಈ ಒಂದು ಶಾಸನದಲ್ಲಿ ಕ್ರಿ.ಶ.೯೭೨ರಲ್ಲಿ ರಾಷ್ಟ್ರಕೂಟ ಖೊಟ್ಟಿಗದೇವನ ಆಳ್ವಿಕೆಯಲ್ಲಿ ಅವನ ಸಾಮಂತ

ಗಂಗಪೆರ್ಮಾನಡಿಯಿದ್ದ ಉಲ್ಲೇಖವಿದೆ.[೧೩೯] ಶಾಸನ ತ್ರುಟಿತವಾಗಿರುವುದರಿಂದ ಸರಿಯಾದ ಮಾಹಿತಿ ಇಲ್ಲ. ಬಸದಿಗಳನ್ನಾಳ್ವಮಿಂಚುಕೆರೆಯ ದೇವರ ಮಠಕ್ಕೆ, ದಾನ ನೀಡಿದಂತೆ ಕಂಡುಬರುತ್ತದೆ. ಇದೇ ಶಾಸನ ಮುಂದುವರೆದು ಬಾಗುಳಿಯ ಮಹಾಜನ ಮಠಗಳೊಳಗಿದ್ದು ಎಂದು, ಮುಂದಿನ ಸಾಲುಗಳು ತ್ರುಟಿತವಾಗಿವೆ. ಬಾಗಳಿಯ ಪಕ್ಕದ ಹರಪನಹಳ್ಳಿಯಲ್ಲಿ ಕೆಲವು ಮಠಗಳಿವೆ. ಆದರೆ ಬಾಗಳಿಯಲ್ಲಿ ಯಾವುದೇ ಮಠವಿಲ್ಲವೆಂದು ಕಂಡುಬರುತ್ತದೆ. ಈ ಒಂದನ್ನು ಬಿಟ್ಟರೆ ಬೇರೆ ಯಾವುದೇ ಮಾಹಿತಿ ಇಲ್ಲ. ಈ ಮಠದ ಯಾವುದೇ ಅವಶೇಷಗಳು ಕಂಡುಬರುವುದಿಲ್ಲ. ಆದರೆ ಇಲ್ಲಿ ಜನಪದ ನಂಬಿಕೆಯೊಂದು ಇದೆ. ಇಲ್ಲಿ ಐದು ಮಂದಿ ಪವಾಡ ಪುರುಷರಿದ್ದರು. ಅವರನ್ನೆ ಮಠಾಧಿಪತಿಗಳೆಂದು ಕರೆಯುತ್ತಾರೆ. ಅವರುಗಳಲ್ಲಿ ಕೂಲಹಳ್ಳಿಯ ಮದ್ದಾನಸ್ವಾಮಿ, ನಾಯಕನ ಹಟ್ಟಿ ತಿಪ್ಪೇರುದ್ರಸ್ವಾಮಿ. ಅರಸಿಕೆರೆಯ ಕೋಲಸಾಂತಯ್ಯ, ಹರಪನಹಳ್ಳಿ ಕೆಂಪಯ್ಯ ಸ್ವಾಮಿ, ಕೊಟ್ಟೂರಿನ ಕೊಟ್ಟೂರೇಶ್ವರ ಎಂದು ಹೇಳುತ್ತಾರೆ. ವಿಶೇಷವೆಂದರೆ ಕಲ್ಲೇಶ್ವರ ದೇವಾಲಯದ ಪಕ್ಕದಲ್ಲಿರುವ ಪಂಚಲಿಂಗಗಳ ಆಲಯಗಳು ಈ ಮಠಾಧಿಪತಿಗಳ ಆಶ್ರಮಗಳಾಗಿದ್ದವು. ಅವರು ಇಲ್ಲಿ ವಾಸಿಸುತ್ತಿದ್ದರು. ನಂತರ ತಮ್ಮ ತಮ್ಮಲ್ಲಿ ಬಿರುಕುಗಳುಂಟಾಗಿ ಬೇರೆ ಬೇರೆ ಸ್ಥಳಗಳಲ್ಲಿ ಹೋಗಿ ನೆಲಸಿದ್ದರೆಂದು ತಿಳಿದುಬರುತ್ತದೆ.[೧೪೦] ಇವರಲ್ಲಿ 'ಮದ್ದಾನಸ್ವಾಮಿ ಮಠ' ಕೂಲಹಳ್ಳಿಯಲ್ಲಿ ಈಗಲೂ ಇದೆ. ಅಲ್ಲಿ ದಾಸೋಹಗಳು ನಡೆಯುತ್ತವೆ. ಅಲ್ಲಿಯೂ ಸಹ ಚಾಲುಕ್ಯರ ಕಾಲದ ದೇವಾಲಯಗಳಿವೆ. ಆದರೆ ಮದ್ದಾನಸ್ವಾಮಿ ಮಠವೆಂದು ಕರೆದರೆ ಈಗ ಅದು ಗೋಣಿಬಸಪ್ಪ ಅಥವಾ ಕೂಲಹಳ್ಳಿ 'ಗೋಣಿಬಸವೇಶ್ವರ' ಎಂದು ಬದಲಾಗಿದೆ. ಮದ್ದಾನ ಸ್ವಾಮಿಯ ಪವಾಡ ಕಥೆಯನ್ನು ಈಗಲೂ ಅಲ್ಲಿ ಹೇಳುತ್ತಾರೆ. ಆ ಕಥೆಯಂತೆ ಇಂದಿಗೂ ಅಲ್ಲಿಯ ಜನ ನಡೆದುಕೊಳ್ಳುತ್ತಾ ಬಂದಿದ್ದಾರೆ. ಆದರೆ ಈ ಮಠಾಧಿಪತಿಗಳು ಎಲ್ಲರು ಜಂಗಮರೆಂದು ಊಹಿಸಬಹುದು. ಇಂತಹ ದೇವಸ್ಥಾನದ ಮಠಗಳು ಅಂದಿನ ಪ್ರಮುಖ ವಿದ್ಯಾಕೇಂದ್ರಗಳಾಗಿದ್ದರಿಂದ ಅವು ಸ್ಥಾನಾಚಾರ್ಯ, ತಪೋಧನ, ವಿದ್ಯಾರ್ಥಿಗಳ ವಾಸಸ್ಥಾನದ ನೆಲೆಗಳಾಗಿದ್ದವು. ದಾನದತ್ತಿ ಬಿಡುವ ಸಂದರ್ಭದಲ್ಲಿ ಸ್ಥಾನಮಾನ್ಯರೊಂದಿಗೆ ಪಂಚಮಠ ಸ್ಥಾನದ ತಪೋಧನರ ಉಲ್ಲೇಖ ಬಂದಿದೆ.[೧೪೦] ಕುಡುತಿನ ಶಾಸನದಲ್ಲಿ ಹೀಗೆ ಬರುತ್ತದೆ. 'ಸ್ಥಾನಾಚಾರ್ಯ, ಸ್ಥಾನದಐದುವರ್ಗ, ಪಂಚಮಠದ ತಪೋಧನರಿಗೆ ಬಿಟ್ಟದಾನ' ಎಂದಿದೆ.[೧೪೧] ಇದರಲ್ಲಿಯೇ ಇನ್ನೊಂದು ಶಾಸನದಲ್ಲಿ ಸ್ವಾಮಿದೇವರ ತಪೋವನಾಧಿಪತಿಗಳು, ಸ್ಥಾನದ ಐದುವರ್ಗಕ್ಕೆ ತೋಟವನ್ನು ದಾನವಾಗಿ ಬಿಟ್ಟರು ಎಂದು ಉಲ್ಲೇಖ ಬರುತ್ತದೆ.[೧೪೩] ಪ್ರಾಯಶಃ ಇವುಗಳನ್ನು ಬಿಟ್ಟರೆ ಬೇರೆ ಎಲ್ಲೂ ಇಂತಹ ಉಲ್ಲೇಖ ಬಂದಿಲ್ಲವೆನಿಸುತ್ತದೆ. ಉಚ್ಚಂಗಿದುರ್ಗದ ಶಾಸನದಲ್ಲಿ ಪಂಚಮಠದ ಉಲ್ಲೇಖ ಬರುತ್ತದೆ.[೧೪೪] ಈ ಶಾಸನಗಳಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ

ಮತ್ತು ಪುರಾಣದ ಗುರುಗಳಿಗೆ, ಪಾಠ ಹೇಳಿ ಕೊಡುವವರಿಗೆ ದಾನದತ್ತಿ ನೀಡಿದ ಉಲ್ಲೇಖಗಳು ಬರುತ್ತವೆ.

ಸಾಮಾನ್ಯವಾಗಿ ಪ್ರಾಚೀನ ಕಾಲದಲ್ಲಿ ವಿದ್ಯೆಗೆ ಒಂದು ಗೌರವ, ಉಚ್ಚಮಟ್ಟದ ಸ್ಥಾನವನ್ನು ಕಲ್ಪಿಸಲಾಗಿತ್ತು. ವಿದ್ಯೆ ಅಂದಿನ ಕಾಲಕ್ಕೆ ಅಷ್ಟು ಬೆಳವಣಿಗೆ ಪಡೆಯದಿದ್ದರೂ ಅದನ್ನು ದೇವಾಲಯಗಳಲ್ಲಿ, ಮಠಗಳಲ್ಲಿ, ಅಗ್ರಹಾರಗಳಲ್ಲಿ, ಘಟಿಕಾಸ್ಥಾನಗಳಲ್ಲಿ ನಡೆಯುತ್ತಿತ್ತು. ಅಂದಿನ ವಿದ್ಯೆಗೆ ಮಡಿವಂತಿಕೆಯೂ ಇತ್ತು. ಅದು ವಿದ್ಯಾವಂತ ಬ್ರಾಹ್ಮಣರಿಗೆ ಮೀಸಲಾಗಿತ್ತು ಎಂದು ಶಾಸನಗಳಲ್ಲಿ ಕಂಡುಬರುತ್ತದೆ. ದೇವಾಲಯಗಳು ಅಂದಿನ ವಿದ್ಯಾರ್ಥಿಗಳಿಗೆ ತಪೋಧನಕ್ಕೆ ಮಠಗಳಾಗಿದ್ದವು.

ಹೀಗೆ ದೇವಾಲಯಗಳ ಜೀರ್ಣೋದ್ಧಾರ[೧೪೫] ಪೂಜೆ-ಪುನಸ್ಕಾರ[೧೪೬], ವಿದ್ಯಾಪ್ರಸಾರ[೧೪೭], ಸತ್ರ[೧೪೮] ಮುಂತಾದ ಖರ್ಚುಗಳನ್ನು ಸರಿದೂಗಿಸಲು ಆರ್ಥಿಕ ಸಹಾಯವನ್ನು ದೇವಾಲಯಗಳಿಗೆ ದಾನ ನೀಡುವವರು, ಇಂಥಿಂಥ ಕೆಲಸಕ್ಕೆ ಇಂತಿಷ್ಟೆಂದು ನಿಗದಿಪಡಿಸಿ ಕೊಡುತ್ತಿದ್ದರು. ಇವುಗಳಲ್ಲಿ ದೇವರ ನೈವೇದ್ಯ[೧೪೯], ನಂದಾದೀವಿಗೆ[೧೫೦], ದೇವಾರ್ಚನೆ[೧೫೧], ತ್ರಿಕಾಲ ಪೂಜೆಗೆ[೧೫೨], ದೂಪದೀಪ, ಪಾತ್ರ ಪಾಳಿಗೆ[೧೫೩], ಪಾಡುವವರಿಗೆ[೧೫೪], ಖಂಡಸ್ಫುಟಿತ ಜೀರ್ಣೋದ್ಧಾರ[೧೫೫], ನೈಷ್ಠಿಕ ತಪೋಧನರ ದಾನಕ್ಕೆ[೧೫೬], ಅತಿಥಿ ಅಭ್ಯಾಗತ ಗ್ರಾಸಕ್ಕೆ[೧೫೭] ಮೊದಲಾದವುಗಳಿಗೆ ಸೇರಿರುತ್ತಿದ್ದವು.

ದೇವಾಲಯಗಳಿಗೆ ಬಿಟ್ಟ ದಾನಗಳಲ್ಲಿ ರಂಗಭೋಗವೂ ಒಂದು. ಇದರಿಂದ ಗೀತ, ವಾದ್ಯ, ನೃತ್ಯದ ಹಿನ್ನೆಲೆಯಲ್ಲಿ ಸ್ತ್ರೀ ಪ್ರವೇಶಕ್ಕೆ ಅವಕಾಶ ದೊರೆಯಿತು. ಇದರಿಂದ ಸ್ಥಾನಾಚಾರ್ಯರ ಮತ್ತು ತಪೋಧನರ ನೈತಿಕ ಅಧಃ ಪತನವಾಯಿತು. ಇಂಥವರನ್ನು ಶಾಸನಗಳು ನೇರವಾಗಿ ಖಂಡಿಸಿವೆ. ದೇವಾಲಗಳಿಗೆ ಬಿಟ್ಟ ದಾನಗಳನ್ನು ರಕ್ಷಿಸುವುದು ಅಂದಿನ ಎಲ್ಲ ಜನರ ಕರ್ತವ್ಯವಾಗಿತ್ತು. ಕೆಲವೊಂದು ಶಾಸನಗಳಲ್ಲಿ ದಾನ-ದತ್ತಿಗಳನ್ನು ಅಪಹರಿಸುತ್ತಿದ್ದರೆಂದು ಮತ್ತು ಅವರಿಗೆ ತಕ್ಕ ಶಿಕ್ಷೆಯನ್ನು ಕೊಡಿಸಿದುದನ್ನು ಶಾಸನಗಳು ಉಲ್ಲೇಖಿಸುತ್ತವೆ.[೧೫೯] ಇಂತಹ ಪ್ರತಿಯೊಂದು ಕೆಲಸಗಳನ್ನು ನಿರ್ವಹಿಸಲು ಪರಿಚಾರಕ ವರ್ಗವಿರುತ್ತಿತ್ತು. ಇವರಲ್ಲಿ ಪೂಜೆ ಮಾಡುವ ಪೂಜಾರಿ, ಪೂಜೆಗೆ ಹೂವನ್ನು ಒದಗಿಸುವ ಮಾಲೆಕಾರ, ಹೂದೋಟವನ್ನು ನೋಡಿಕೊಳ್ಳುತ್ತಿದ್ದ ತೋಟದ ತಳಾರ, ಪೂಜಾ ಸಮಯ ಮತ್ತು ನಂತರ ಹಾಡುವವರು, ದೇವಾಲಯಕ್ಕಂಟಿಕೊಂಡ ಮಠಗಳು ಇರುತ್ತಿದ್ದರಿಂದ ಅಲ್ಲಿನ ಸ್ಥಾನಾಚಾರ್ಯ, ತಪೋಧನ, ವಿದ್ಯಾರ್ಥಿಗಳು ಹಾಗೂ ಅತಿಥಿ ಅಭ್ಯಾಗತರು, ಆಹಾರಾದಿಗಳ ಕೆಲಸಕ್ಕೆ ಅಡಿಗೆಯಾಳುಗಳು, ತಪೋಧನಕ್ಕೆ, ಸತ್ರ ದಾನದತ್ತಿ ನೀಡಿದ ವಿವರಗಳು ಕಂಡುಬರುತ್ತದೆ. ದೇವಾಲಯಕ್ಕೆ ಬಿಡಲಾಗುತ್ತಿದ್ದ ವಿವಿಧ ದಾನಗಳಲ್ಲಿ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಬಿಟ್ಟ ದಾನವೂ ಒಂದು. ಈ ಕೆಲಸಕ್ಕೆ ಬಡಗಿ, ಶಿಲ್ಪಿಗಳನ್ನು ನಿಯಮಿಸಿಕೊಳ್ಳುತ್ತಿದ್ದರೆಂದು ಈ ಶಾಸನಗಳು ಉಲ್ಲೇಖಿಸುತ್ತವೆ.[೧೬೦]

ಇಲ್ಲಿಯ ದೇವಾಲಯಗಳ ಸಾಮಾನ್ಯ ವಾಸ್ತುಶಿಲ್ಪ

ಕಲ್ಯಾಣ ಚಾಲುಕ್ಯರ ದೇವಾಲಯಗಳು ಹೆಚ್ಚು ಚತುರಸ್ರಾಕಾರದ ತಲವಿನ್ಯಾಸದ ಕಟ್ಟಡಗಳಾಗಿವೆ. ಇವು ಹೆಚ್ಚಾಗಿ ಪೂರ್ವಾಭಿಮುಖವಾಗಿದ್ದು, ನಿರಾಂಧಾರ ಮಾದರಿಯಲ್ಲಿವೆ. ಹೆಚ್ಚು ದೇವಾಲಯಗಳು ಏಕಕೂಟವಾಗಿವೆ. ಅಧಿಷ್ಠಾನದ ಎತ್ತರವು ದೇವಾಲಯದಿಂದ ದೇವಾಲಯಕ್ಕೆ ಬೇರೆಯಾಗಿದ್ದು, ಅದು ಸಾಮಾನ್ಯವಾಗಿ ಮೂರರಿಂದ ಐದು ಅಡಿಗಳಷ್ಟಿರುತ್ತದೆ. ಹೆಚ್ಚಿನ ವಿವರ ದೇವಾಲಯಗಳಲ್ಲಿ ಹೇಳಿದೆ. ಆದರೂ ಇವರು ಕೆಂಪು ಅಥವಾ ಕಂದು(ಕಪ್ಪು) ವರ್ಣದ ಕಲ್ಲಿನಲ್ಲಿ ವಾಸ್ತುಶಿಲ್ಪಗಳನ್ನು ರಚಿಸಿದ್ದರು. ರಾಷ್ಟ್ರಕೂಟರ ಮರುಳುಗಲ್ಲುಗಳನ್ನಲ್ಲದೆ, ಕಡೆಯುವುದಕ್ಕೆ ತುಂಬಾ ಕಠಿಣವಾದ ಬೆಸಾಲ್ಟ್ ಶಿಲೆಯನ್ನು ಉಪಯೋಗಿಸುತ್ತಿದ್ದರು. ಆದ್ದರಿಂದ ಅವರ ವಾಸ್ತುಶಿಲ್ಪಗಳಲ್ಲಿ ಸುಂದರ ಮತ್ತು ಸೂಕ್ಷ್ಮ ಕೆತ್ತನೆ ಕಂಡುಬರುವುದಿಲ್ಲ. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಗುಹಾಲಯಗಳು, ದೇವಾಲಯಗಳು ಚಾಲುಕ್ಯರ ಕಲಾ ಪ್ರೌಢಿಮೆಯನ್ನು ನೋಡಬಹುದು. ಇವು ಚಾಲುಕ್ಯರ ಪ್ರೌಢಿಮೆಯನ್ನು ಸಾರಿದರೆ, ಅಜಂತಾ ಎಲ್ಲೋರ ಎಲಿಫೆಂಟಾ ಗುಹಾಲಯ ಮತ್ತು ದೇವಾಲಯಗಳು ರಾಷ್ಟ್ರಕೂಟರ ಕಲಾಕೌಶಲ್ಯತೆಯನ್ನು ಸಾರುತ್ತವೆ. ಅತ್ಯಂತ ಸಮರ್ಪಕ ಮತ್ತು ದೈತ್ಯಾಕಾರದ ಶಿಲ್ಪಗಳನ್ನು ಸೃಷ್ಟಿಸಿರುವುದು ಆಯಾ ಕಾಲದ ಸ್ಥಪತಿಗಳ, ಶಿಲ್ಪಗಳು ಮತ್ತು ಕುಶಲ ಕರ್ಮಿಗಳ ಜಾಣ್ಮೆಯನ್ನು ಮತ್ತು ಅವರ ವೈಜ್ಞಾನಿಕ ದೃಷ್ಟಿಯನ್ನು ಸಂಕೇತಿಸುತ್ತದೆ.

ಮಿಥುನ ಶಿಲ್ಪಗಳು

ಚಾಲುಕ್ಯರ ದೇವಾಲಯಗಳಲ್ಲಿ ಮಿಥುನ ಶಿಲ್ಪಗಳು ಕಂಡುಬರುವುದು ತೀರಾ ಕಡಿಮೆ. ಇದ್ದರೂ ಅಲ್ಲೊಂದು, ಇಲ್ಲೊಂದು ಗೌಣ ಸ್ಥಾನದಲ್ಲಿರುತ್ತವೆ. ಆದರೆ ಬಾಗಳಿ ಕಲ್ಲೇಶ್ವರ ದೇವಾಲಯದ ಹೊರಗಡೆ ಗೋಡೆಯ ಕೊನೆಯ ಹಂತ ಮತ್ತು ಶಿಖರದ ಮಧ್ಯದಲ್ಲಿ ಹಲವಾರು ಮಿಥುನಶಿಲ್ಪಗಳಿವೆ. ಸುಮಾರು ೨೩ ಇರಬಹುದು. ದೇವಾಲಯದ ಉತ್ತರ ಭಾಗದಲ್ಲಿ ಒಂದು ಲಜ್ಜಾಗೌರಿ ಶಿಲ್ಪವಿದೆ. ಈ ಶಿಲ್ಪಗಳ ವಿಷಯ ವೈವಿಧ್ಯತೆಯನ್ನು ಹೇಳಲು ವಿವರಣೆ ಸಾಲದು. ಪ್ರಾಯಶಃ ಇವುಗಳ ಸುಂದರ ಕೆತ್ತನೆಯನ್ನು ನೋಡಿಯೇ ಆನಂದವನ್ನು ಪಡೆಯಬೇಕು. ಕೆಲವು ಶಿಲ್ಪಗಳು ಸಂಕೀರ್ಣವಾಗಿದ್ದು, ಹೆಚ್ಚಿನ ಗಮನಸೆಳೆದಿವೆ. ಇವು ಶೃಂಗಾರ ಮತ್ತು ಪ್ರಣಯ ಶಿಲ್ಪಗಳಾಗಿದ್ದು, ಲೈಂಗಿಕ ಶಿಲ್ಪಗಳೆನ್ನಬಹುದು. ವಾತ್ಸಾಯನ ಕಾಮಸೂತ್ರದ ವಿವರವನ್ನು ಮೀರಿಸುವಂತೆ ವಿವಿಧ ಭಂಗಿಗಳಿಂದ ಕೂಡಿವೆ.

ಇಲ್ಲಿಯ ಕೆಲವೊಂದು ಶಿಲ್ಪಗಳು ವಿಶಿಷ್ಟವಾಗಿದ್ದು ವರ್ಣಿಸಲು ಅಸಾಧ್ಯವಾಗಿದೆ. ಇವುಗಳನ್ನು ಮೊದಲಿಗೆ ಇ.ಎನ್.ಕಾಟ್‌ಕರ್ ಅವರು ಒಂದು ರೀತಿಯಲ್ಲಿ ಪ್ರಶಂಸಿಸಿ ಬರೆದಿದ್ದಾರೆ.[೧೬೧] ಕೋನಾರ್ಕ್

ಮತ್ತು ಭುವನೇಶ್ವರ ದೇವಾಲಯಗಳನ್ನು ನೋಡಿಯೇ ನಂತರ ಇವುಗಳ ಬಗ್ಗೆ ಹೇಳಿರಬೇಕು. ಇಲ್ಲಿಯ ಬಹುಪಾಲು ಶಿಲ್ಪಗಳು ವಿಕೃತವಾಗಿ ಪುರುಷಾರ್ಥಗಳಲ್ಲಿ ಒಂದಾದ ಕಾಮವನ್ನು(ಚಿತ್ರಿಸಿ) ಮನದಲ್ಲಿ ಚಿತ್ರಸಿರುವಂತೆ ಚಿತ್ರಣವನ್ನು ನೀಡುತ್ತವೆ. ಇಂತಹ ಅರೆಯುಬ್ಬು ಶಿಲ್ಪಗಳನ್ನು ಕಂಡಾಗ ಕೆಲವು ಶಿಲ್ಪಗಳಲ್ಲಿ ಪುರುಷ ತನ್ನ (ಲಿಂಗವನ್ನು) ಬಾಯಲ್ಲಿ ಮತ್ತು ಅದನ್ನು ತನ್ನ ತಲೆಯ ಮೇಲೆ ಬರುವಂತೆ ಚಿತ್ರಿತವಾಗಿರುವುದು ಕಂಡುಬರುತ್ತದೆ. ಇನ್ನೊಂದು ಶಿಲ್ಪದಲ್ಲಿ ತನ್ನ (ಲಿಂಗ) ಶಿಶ್ನಕ್ಕೆ ದಾರಕಟ್ಟಿ ಅದನ್ನು ತನ್ನ ಹೆಗಲ ಮೇಲೆ ಹಾಕಿ ಕೊಂಡಿರುತ್ತಾನೆ.

ಇನ್ನೂ ಕೆಲವು ಶಿಲ್ಪಗಳಲ್ಲಿ ಸ್ತ್ರೀ ಪುರುಷರು ಆಲಿಂಗನದಲ್ಲಿ ತೊಡಗಿರುವುದು, ವಿಚಿತ್ರವೆಂದರೆ ಸ್ತ್ರೀಯ ಮುಂದೆ ಪುರುಷ ಡಮರುಗವನ್ನು ತನ್ನ (ಲಿಂಗ) ಶಿಶ್ನದಿಂದ ಬಾರಿಸುತ್ತಿರುವುದು ಅಸಹ್ಯವೆನ್ನಿಸುವಷ್ಟು ರೀತಿಯಲ್ಲಿ ಮೂಡಿಬಂದಿದೆ. ಒಂದರಲ್ಲಿ ಸ್ತ್ರೀಯು ಬಾಗಿ ನಿಂತಿದ್ದಾಳೆ ಪುರುಷ ಅವಳ ಬೆನ್ನ ಹಿಂದೆ ತನ್ನ (ಲಿಂಗ) ಶಿಶ್ನವನ್ನು ಹಿಡಿದು ನಿಂತಿದ್ದಾನೆ.

ಇನ್ನೊಂದ ಶಿಲ್ಪದಲ್ಲಿ ಸ್ತ್ರೀ ಪುರುಷ ಆಲಿಂಗನದಲ್ಲಿ ತೊಡಗಿದ್ದಾರೆ. ಅವರ ಕೆಳಗೆ ಇನ್ನೊಬ್ಬ ಸ್ತ್ರೀಯು ಪುರುಷನ ಕಾಲನ್ನು ಹಿಡಿದು ಎಳೆಯುತ್ತಿದ್ದಾಳೆ. ಇವುಗಳನ್ನು ವಿವರಿಸಲು ಸಾಧ್ಯವಿಲ್ಲ. ಎಲ್ಲವೂ ಪ್ರಣಯ ಶಿಲ್ಪಗಳೇ ಆಗಿವೆ. ಇಲ್ಲಿರುವ 'ಲಜ್ಜಾಗೌರಿ' ತಲೆಯ ಭಾಗ ಪದ್ಮದಿಂದ ಕೂಡಿದ್ದು ನಗ್ನವಾಗಿದೆ.

ಆದರೆ ಈ ದೇವಾಲಯದ ವಿನ್ಯಾಸಕಾರನು ಈ ಸುಂದರ ದೇವಾಲಯಕ್ಕೆ ದೃಷ್ಟಿಯಾಗದಿರಲೆಂಬ ಉದ್ದೇಶದಿಂದ ಇವುಗಳನ್ನು ಕೆತ್ತಿರಬಹುದೇನೊ? ಪ್ರಾಯಶಃ ಇವುಗಳನ್ನು ಮತ್ತು ಶಾಸನಗಳಲ್ಲಿ ಬರುವ ದೇವದಾಸಿ, ಸೂಳೆಯರನ್ನು ಗಮನಿಸಿದಾಗ ಕರ್ನಾಟಕದಲ್ಲಿಯೇ ಬಾಗಳಿಯಲ್ಲಿ ಹೆಚ್ಚು ದೇವದಾಸಿಯರಿದ್ದ ರೆಂದು ತಿಳಿಯಬಹುದು.

ಇಲ್ಲಿಯ ಬಹುಪಾಲು ಶಿಲ್ಪಗಳು ವಿಕೃತವಾದ ಲೈಂಗಿಕ ಶಕ್ತಿಯನ್ನು ಮೂಡಿಸುವ, ಕಾಮವನ್ನು ಪ್ರೇರೇಪಿಸುವಂತೆ ವಿವಿಧ ರೀತಿಯಲ್ಲಿ ಕತ್ತಲ್ಪಟ್ಟಿವೆ. ಇವುಗಳನ್ನು ನೋಡುವ ಪ್ರವಾಸಿಗರ ಮೇಲೆ ಅವರವರ ವಯೋಮಾನಕ್ಕೆ ತಕ್ಕಂತೆ ಹಾಸ್ಯ, ಉದ್ವೇಗ, ಅಸಹ್ಯ ಮತ್ತು ಕುತೂಹಲಕರ ಭಾವನೆಗಳನ್ನು ಮೂಡಿಸುತ್ತವೆ.

ಲಜ್ಜಾಗೌರಿ

ಬಾದಾಮಿ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸೂಳೆಯರು ನೀಡಿದ ದಾನ-ಧರ್ಮದ ಮೂಲಕ ಧಾರ್ಮಿಕ ಕಾರ್ಯಗಳಲ್ಲಿ ವಹಿಸಿದ ಪಾತ್ರವನ್ನು ಹಿಂದೆಯೇ ನೋಡಲಾಗಿದೆ. ಲಂಜಿಕಾ = ವೇಶ್ಯೆ ಎಂದು, ಬೆತ್ತಲೆ ಗೌರಿ, ಬೆತ್ತಲೆ ಭೈರವ ಎಂದು ಕಲಬುರ್ಗಿ ಅಭಿಪ್ರಾಯ ಪಟ್ಟಿದ್ದಾರೆ.[೧೬] ಲಜ್ಜಾಗೌರಿಯ

ವಿಗ್ರಹಗಳು ರುಂಡವಿಲ್ಲದೆ (ತಲೆ) ಬೆತ್ತಲೆಯಾಗಿ ಬರೀ ದೇಹದ ಅವಯವಗಳನ್ನು ಮಾತ್ರ ಹೊಂದಿರುತ್ತವೆ. ಮುಖದ ಬದಲು ಕಮಲದ ಇಲ್ಲವೇ ವರ್ತುಲಾಕಾರವುಳ್ಳ ಮುಖವನ್ನು ಹೊಂದಿರುತ್ತವೆ. ಇವುಗಳಿಗೆ ಪ್ರತ್ಯೇಕ ದೇವಾಲಯವಿರುವುದಿಲ್ಲ. ಜನತೆ ಇದನ್ನು ಶಕ್ತಿ ದೇವತೆ ಎಂದು ಇದರ ಯೋನಿಭಾಗವನ್ನು ಪೂಜಿಸುತ್ತಾರೆ. ಇಂತಹ ವಿಗ್ರಹಗಳು ಬಾದಾಮಿ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುತ್ತವೆ ಎಂದು ಕಲಬುರ್ಗಿಯವರು ಗುರುತಿಸಿದ್ದಾರೆ. ಇದರಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು ಶೈವ ಸಂಪ್ರದಾಯದವರಾಗಿರುವುದರಿಂದ ಶೈವ ಸಂಪ್ರದಾಯಕ್ಕೂ ಲಜ್ಜಾಗೌರಿಗೂ ತಾತ್ವಿಕ, ಆಚರಣಾತ್ಮಕ ಸಂಬಂಧವಿರಲೇಬೇಕು. ಆದರೆ ಲಜ್ಜಾಗೌರಿ ತುಂಬಾ ವಿಲಕ್ಷಣವಾದ ವಿಗ್ರಹ. ಇದನ್ನು ಪೂಜಿಸಿದರೆ ಮಕ್ಕಳಾಗುವುದೆಂಬ ನಂಬಿಕೆಯಿಂದ, ಅದರಲ್ಲೂ ಯೋನಿ ಭಾಗವನ್ನು ಪ್ರಧಾನವಾಗಿ ಪೂಜಿಸುವ ಆಚರಣೆಯು ಮಹಾಕೂಟ, ನಾಗರಾಳ ದೇವಾಲಯಗಳಲ್ಲಿ ಇನ್ನು ಕೆಲವು ಕಡೆ ಕಂಡುಬರುತ್ತದೆ.

ಹೀಗೆ ಮಿಥುನ ಶಿಲ್ಪಗಳು ಮತ್ತು ಲಜ್ಜಾಗೌರಿಯ ವಿಗ್ರಹಗಳು ಬಳ್ಳಿಗಾವೆಯ ತ್ರಿಪುರಾಂತ ದೇವಾಲಯ, ಹಾನಗಲ್ಲಿನ ಈಶ್ವರ ದೇವಾಲಯ, ಹುಂಚದ ಕಮಲೇಶ್ವರ, ಕುಕನೂರಿನ ನವಲಿಂಗೇಶ್ವರ, ಬಾದಾಮಿ, ಐಹೊಳೆ, ಪಟ್ಟದಕಲ್ಲು ದೇವಾಲಯಗಳಲ್ಲಿಯೂ ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ಹಂಪೆ ಹಜಾರರಾಮ ದೇವಾಲಯಗಳಲ್ಲಿ ಇವೇ ಶಿಲ್ಪಗಳು ಕಂಡುಬರುತ್ತವೆ.

ಇನ್ನೂ ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ಕೆಲವು ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಗಾಳಿ, ಬಿಸಿಲು, ಮಳೆಗೆ ಮೈಯೊಡ್ಡಿ ನಿಂತಿವೆ. ಕೆಲವು ವೀರಗಲ್ಲುಗಳು ಆಕರ್ಷಣೀಯವಾಗಿದ್ದು, ಸೂಕ್ಷ್ಮ ಕೆತ್ತನೆಗಳಿಂದ ಕೂಡಿವೆ. ಕೆಲವು ಯುದ್ಧ ಚಿತ್ರಗಳನ್ನು ಚಿತ್ರಿಸಿದ್ದರೆ, ಕೆಲವು ಬೇಟೆಯಾಡುವ ಚಿತ್ರಗಳನ್ನು ಚಿತ್ರಿಸುತ್ತವೆ. ಇವುಗಳ ಅಧ್ಯಯನದಿಂದ ಆಯಾ ಕಾಲದ ಜನಜೀವನ, ಸಂಸ್ಕೃತಿಯ ಪರಿಚಯವಾಗಬಹುದು. ವಿವರಗಳನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ. ಹೀಗೆ ಇವೆಲ್ಲವುಗಳ ಸಂಗಮದಿಂದ ಬಾಗಳಿಯ 'ಸರ್ವಧರ್ಮಗಳ ಕೇಂದ್ರ'ವಾಗಿತ್ತೆನ್ನಬಹುದು.

ಕಲ್ಲೇಶ್ವರ ದೇವಾಲಯ, ಲಕ್ಷ್ಮೀನಾರಾಯಣ, ಚನ್ನಬಸವ, ದೇವಾಲಯ, ಸಂಗನಬಸಪ್ಪ ದೇವಾಲಯ, ಇಷ್ಟಲಿಂಗ ದೇವಸ್ಥಾನ, ಕನಕೇಶ್ವರ ದೇವಾಲಯ, ಇವು ಚಿಕ್ಕ ಪ್ರಮಾಣದಲ್ಲಿದ್ದರೂ ಕಲಾಪೂರ್ಣವಾಗಿವೆ. ಅಲ್ಲದೆ ಒಂದು ಜೈನ ಬಸದಿ ಇದೆ. ಇದನ್ನು ಯಾರು ಉಲ್ಲೇಖಿಸಿಲ್ಲ. ಏಕೆಂದರೆ ಚಿಕ್ಕ ಓಣಿಯ ಸಂದಿಯಲ್ಲಿದ್ದು, ಈಗ ಮನೆಯಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ ಇದು ಚಿಕ್ಕ ಕೋಣೆ ಎನಿಸುತ್ತದೆ. ಇದರ ರಂಧ್ರಗಳಲ್ಲಿ ಈಗ ಸುಣ್ಣ ಬಣ್ಣ ತುಂಬಿದ್ದಾರೆ. ಆದರೆ ಚೌಕಟ್ಟಿನ ಮೇಲ್ಭಾಗದಲ್ಲಿ ಜಿನಮೂರ್ತಿಗಳನ್ನು ಕೆತ್ತಲಾಗಿದೆ. ಇದರಿಂದ ಬಾಗಳಿ ಚಾಲುಕ್ಯರ ಕಾಲದಲ್ಲಿ ಕೇವಲ ಶೈವ ಕೇಂದ್ರವಾಗಿರದೆ, ಜೈನ ಮತ್ತು ವೈಷ್ಣವ ಧರ್ಮದ ಕೇಂದ್ರವೂ ಆಗಿತ್ತು ಎನ್ನುವುದನ್ನು ಗಮನಿಸಬಹುದಾಗಿದೆ.

ಇಲ್ಲಿ ಉಳಿದುಳಿದ ದೇವಸ್ಥಾನಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ ಬಾಗಳಿಯು ಹಿಂದೆ ಶಿಲ್ಪ ಶಾಸ್ತ್ರದ ಹಾಗೂ ಸರ್ವಧರ್ಮದ ಕೇಂದ್ರವಾಗಿತ್ತೆಂದು ಸ್ಪಷ್ಟಪಡಿಸಬಹುದು. ಈಗಲೂ ಸಹ ಕಲ್ಲೇಶ್ವರ ಶಿಲ್ಪಶಾಸ್ತ್ರದ ನೋಟವನ್ನು ಸವಿಯಬಹುದು.

ಬಾಗಳಿಯ ಇತರೆ ದೇವಾಲಯಗಳು

ಮಾರುತಿ ದೇವಾಲಯ

ಬಸ್ ನಿಲ್ದಾಣದ ಹತ್ತಿರ ಪೂರ್ವಕ್ಕೆ ಮುಖ ಮಾಡಿ ನಿಲ್ಲಿಸಿದ್ದಾರೆ. ಇದು ಗರ್ಭಗೃಹ ಮತ್ತು ಸುಕನಾಶಿಗಳನ್ನು ಹೊಂದಿದೆ. ಇದರ ಮೇಲ್ಛಾವಣಿಯ ಮುಂದಿನ ಹಂತದಲ್ಲಿ ರಾಮ, ಸೀತೆ, ಲಕ್ಷ್ಮಣ ಮತ್ತು ಹನುಮನ ಮೂರ್ತಿಗಳಿವೆ. ಇತ್ತೀಚೆಗೆ ನಿರ್ಮಿಸಿದವುಗಳು. ಮೇಲೆ ಎರಡೂ ಕಡೆ ನಂದಿ ವಿಗ್ರಹಗಳಿವೆ. ಇದಕ್ಕೆ ಆಂಜನೇಯ ಗುಡಿ ಎಂತಲೂ ಕರೆಯುತ್ತಾರೆ. ಶನಿವಾರದಲ್ಲಿ ಈ ದೇವಾಲಯಕ್ಕೆ ಹೆಚ್ಚಿನ ಭಕ್ತರು ಬರುತ್ತಾರೆ. ಸಾಮಾನ್ಯವಾಗಿ ಆ ದಿನ ಆಂಜನೇಯವಾರವೆಂತಲೂ ಕರೆಯುತ್ತಾರೆ.

ಬಸವೇಶ್ವರ ದೇವಾಲಯ

ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮದಲ್ಲಿ ಒಂದು ಬಸವೇಶ್ವರ ದೇವಾಲಯವಿರುತ್ತದೆ. ಏಕೆಂದರೆ ಬಸವ ಎಂದರೆ, ವೃಷಭ, ನಂದಿ, ಎತ್ತು ಎಂಬ ಪದಗಳು ಸಮಾನಾರ್ಥಕೊಡುತ್ತವೆ. ಗ್ರಾಮಗಳಲ್ಲಿ ಕೃಷಿ ಅವಲಂಬಿತ ಜನಾಂಗ ಹೆಚ್ಚಿರುತ್ತದೆ. ಇವಕ್ಕೆ ಎತ್ತುಗಳ ಆಧಾರ ಸ್ಥಂಬ. ಆದ್ದರಿಂದ ಎತ್ತುಗಳಿಗೆ ಏನಾದರೂ ತೊಂದರೆ ಬಂದರೆ ರೋಗಕ್ಕೆ ತುತ್ತಾದರೆ ಆ ದೇವಾಲಯಕ್ಕೆ ಹರಕ್ಕೆ ಹೊತ್ತುಕೊಳ್ಳುತ್ತಾರೆ. ಈ ದೃಷ್ಟಿಯಿಂದ ಇಲ್ಲಿ ಬಸವೇಶ್ವರ ಅಥವಾ ಬಸವಣ್ಣ ದೇವಾಲಯವಿದೆ. ಇದು ಗರ್ಭಗುಡಿ ಒಂದೇ ಇದೆ. ಇದರಲ್ಲಿ ನಂದಿ ವಿಗ್ರಹ ಸಾದಾಪೀಠದ ಮೇಲೆ ಮೂರು ಅಡಿ ಎತ್ತರದಲ್ಲಿ ಮೇಲೆ ಕುಳಿತ ನಂದಿ ಮೂರ್ತಿ ಇದೆ. ಹೊರಗೋಡೆಗಳಲ್ಲಿ ಯಾವುದೇ ಕೆತ್ತನೆಗಳಿಲ್ಲ. ಕಲ್ಯಾಣಿಚಾಲುಕ್ಯರ ಶೈಲಿಯಲ್ಲಿದೆ.

ವೀರಭದ್ರ ದೇವಾಲಯ

ಕಲ್ಲೇಶ್ವರ ದೇವಸ್ಥಾನದ ದಕ್ಷಿಣ ಭಾಗದಲ್ಲಿ ಕೆರೆಯ ಏರಿಗೆ ಹೊಂದಿಕೊಂಡು ಈ ದೇವಸ್ಥಾನವಿದೆ. ಗರ್ಭಗೃಹ ಅಂತರಾಳವನ್ನು ಹೊಂದಿದೆ. ಗರ್ಭಗೃಹದಲ್ಲಿ ಎತ್ತರವಾದ ಪೀಠದಲ್ಲಿ ಮೂರು ಅಡಿ ಎತ್ತರದ ವೀರಭದ್ರಮೂರ್ತಿಯಿದೆ. ಕಲಾ ನೈಪುಣ್ಯತೆಯಿಂದ ಕೂಡಿರದಿದ್ದರೂ, ಧಾರ್ಮಿಕ ವಿಶೇಷತೆ ಪಡೆದಿದೆ. ಈ ದೇವಸ್ಥಾನದ ಪಕ್ಕದಲ್ಲಿ ಉಗ್ರಾಣವೊಂದಿದೆ. ಅದರಲ್ಲಿ ಇತ್ತೀಚಿಗೆ ಭಕ್ತರು ತಂದೊಪ್ಪಿಸಿದ ನಾಗದೇವತೆಗಳ ಮೂರ್ತಿಗಳಿವೆ. ಹಿಂದೆ ಕಲ್ಲಿನಾಥನ ಪೂಜಾ ಸಮಯದಲ್ಲಿ ಬಾರಿಸುತ್ತಿದ್ದ ಕಬ್ಬಿಣದ ನಗಾರಿ ಮತ್ತು ಚೌಕಟ್ಟು ಇದೆ. ಅದು ನಾಗರಿಯ ಚೌಕಟ್ಟಾಗಿದೆ.

ಮಳೆಮಲ್ಲಪ್ಪನ ದೇವಾಲಯ

ಇದು ಬಾಗಳಿ ಗ್ರಾಮದಿಂದ ಒಂದು ಕಿ.ಮೀ.ದೂರದಲ್ಲಿದ್ದು, ಪೂರ್ವಕ್ಕೆ ಮುಖವಾಗಿದೆ. ಗರ್ಭಗುಡಿ ಒಂದೇ ಇದ್ದು, ಹೊರಗೋಡೆ ಉದ್ದನೆಯ ಕಲ್ಲುಗಳಿಂದ ಜೋಡಿಸಲ್ಪಟ್ಟಿವೆ. ಮೇಲೆ ಒಂದು ನಂದಿ ವಿಗ್ರಹ ಇದೆ. ಇದರಲ್ಲಿ ಯಾವುದೇ ಮೂರ್ತಿಗಳಿಲ್ಲ. ಆದರೆ ಇದರಲ್ಲಿ ಶಾಸನಗಳನ್ನು ನಿಲ್ಲಿಸಿದ್ದಾರೆ. ಈಗ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರವಾಗಿವೆ. ಇದರ ಮೇಲ್ಛಾವಣಿ ಅಚ್ಚು ಮತ್ತು ಗಾರೆಗಳಿಂದ ಕೂಡಿದೆ. ಇದರ ಮುಂದೆ ಬನ್ನಿಮರದ ಕಟ್ಟೆ ಇದೆ. ಆದರೆ ಗರ್ಭಗೃಹದಲ್ಲಿ ಯಾವುದೇ ಮೂರ್ತಿ ಅಥವಾ ವಿಗ್ರಹ ಮೊದಲಿನಿಂದಲೂ ಇಲ್ಲ ಎನ್ನುವ ಹೇಳಿಕೆ ತಪ್ಪಾಗಿದೆ. ಏಕೆಂದರೆ ದೇವಾಲಯ ಎಂದರೆ ಮೂರ್ತಿ ಇರಲೇಬೇಕು. ಪ್ರಾಯಶಃ ಇಲ್ಲಿ ಯಾವುದಾದರೂ ಶಿವಲಿಂಗವಿರಬೇಕು. ಇದರ ಸುತ್ತಲೂ ಶಾಸನಗಳಿವೆ. ಇದರಲ್ಲಿ ವಿಗ್ರಹವಿಲ್ಲವೆನ್ನುವುದು ದುರಂತವಾಗಿದೆ. ಆದರೆ ಕರ್ನಾಟಕ ದೇವಾಲಯ ಕೋಶ (ಬಳ್ಳಾರಿ ಜಿಲ್ಲೆ)ದಲ್ಲಿ ಬೇರೆ ಯಾವ ತಾಲೂಕುಗಳಲ್ಲಿ ಯಾವ ಗ್ರಾಮದಲ್ಲಿ 'ಮಳೆ ಮಲ್ಲಪ್ಪನ ದೇವಾಲಯ' ಎಂಬ ಹೆಸರಿನ ದೇಗುಲ ಕಂಡುಬರುವುದಿಲ್ಲ. ಇಲ್ಲಿ ಇದನ್ನು ಕಾಣುವುದೇ ವಿಶೇಷ. ದಾವಣಗೆರೆ ಜಿಲ್ಲೆಯಲ್ಲಿ ಈ ಹೆಸರಿನ ದೇವಾಲಯವಿರಬಹುದೇನೋ. ಆದರೆ ಬಳ್ಳಾರಿ ಜಿಲ್ಲೆಯ ಯಾವ ಹಳ್ಳಿಗಳಲ್ಲಿ ಕಂಡುಬಂದಿಲ್ಲ.

ಇಲ್ಲಿ ಯಾವುದಾದರೂ ಶಿವ ವಿಗ್ರಹ ಇರಬೇಕು ಎನ್ನುವುದು ಇನ್ನೊಂದು ಕಲ್ಪನೆ. ಏಕೆಂದರೆ ಮಲ್ಲಪ್ಪ> ಮಲ್ಲಣ್ಣ= ಶಿವನ ಹೆಸರು ಇದೇ ಇರಬೇಕು ಎಂದು ಊಹಿಸಿದ್ದಾರೆ. ಬಾಗಳಿಯಿಂದ ಸುಮಾರು ೮-೧೦ ಕಿ.ಮೀ. ದೂರದಲ್ಲಿ ಬೆಟ್ಟದಲ್ಲಿ ಒಂದು ದೇವಾಲಯವಿದೆ. ಅದು ಮಲ್ಲಿಕಾರ್ಜುನ ಎಂದು ಹೆಸರು(ಹಡಗಲಿ ತಾ.). ಬಾಗಳಿಯ ಒಂದು ಲಾವಣಿಯಲ್ಲಿ ಉತ್ತರ ದಿಕ್ಕಿಗೆ ಪರ್ವತ ಸಾಲದು, ಗಿಡಮರದಲ್ಲಿ ತುಂಬಿಹದು ಬೆಟ್ಟದ ಮಲ್ಲೇಶನ ಮಂದಿರವದು ಕೈಲಾಸದ ಪರಿ ಕಾಣುವುದು ಎಂದಿದೆ. ಇದರಿಂದ ಮಳೆ ಮಲ್ಲಪ್ಪನ ದೇವಾಲಯಕ್ಕೂ ಮಲ್ಲಿಕಾರ್ಜುನ ದೇವಾಲಯಕ್ಕೂ ಏನೋ ಸಂಬಂಧವಿರಬಹುದು. ಇದನ್ನು ಕೆ.ಬಿ.ಶಿವತಾರಕ್ ಅವರು 'ಕರ್ನಾಟಕ ಪುರಾತತ್ವ ನೆಲೆಗಳು' ಎಂಬ ಗ್ರಂಥದಲ್ಲಿ, 'ಇತಿಹಾಸ ಆರಂಭಯುಗ ಇಟ್ಟಿಗೆಯಿಂದ ಕಟ್ಟಿದ ದೇವಾಲಯ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದನ್ನೇ Indian Archaeology-1983-84 (Impartant place mention may be made of Bagali. At Bagali the foundation of a Brick built temple of the Satavahana period was noticed laying on the north of the Mallikarjuna temple)ಎಂದು ಬಂದಿದೆ. ಅಂದರೆ ಶಾತವಾಹನರ ಕಾಲದಲ್ಲಿ ಇದು ನಿರ್ಮಿತವಾಗಿತ್ತು ಎಂದರೆ ಬಾಗಳಿಯ ಮಳೆಯಮಲ್ಲಪ್ಪನ ದೇವಾಲಯವೂ ಸಹ ಅದೇ ಕಾಲದೇ ಆಗಿರಬಹುದು ಎನ್ನುವುದು ನಮ್ಮ ಊಹೆ. ಆದರೆ ಬಾಗಳಿಯ ಯಾವ ಶಾಸನದಲ್ಲಿ ಮಳೆ ಮಲ್ಲಪ್ಪನ ದೇವಾಲಯದ ಉಲ್ಲೇಖ ಬರುವುದಿಲ್ಲ. ಆದ್ದರಿಂದ ಇದು ಬರೀ ಕಲ್ಪನೆಯಾಗಿರಬಹುದು.

[illegible]

ಗ್ರಾಮ ದೇವಾಲಯಗಳು

೧. ಊರಮ್ಮ ದೇವಾಲಯ
೨. ಕಾಳಿಕಾ ದೇವಾಲಯ
೩. ಹೊನ್ನಮ್ಮ ದೇವಾಲಯ
೪. ಚೌಡಮ್ಮ ದೇವಾಲಯ
೫. ಗಾಳೆಮ್ಮ ದೇವಾಲಯ
೬. ದುರಗಮ್ಮ ದೇವಾಲಯ
೭. ಮಂಡಿ ದುರಗಮ್ಮ ದೇವಾಲಯ
೮. ತೋಪಿನ ದುರುಗಮ್ಮ ದೇವಾಲಯ
೯. ದೋಣಿ ಕೆಂಚಮ್ಮ ದೇವಾಲಯ

ಇಲ್ಲಿ ಇವುಗಳನ್ನು ಶಕ್ತಿ ದೇವತೆಗಳೆಂದು ಕರೆಯುತ್ತಾರೆ. ಅವುಗಳ ಹೆಸರು ಬೇರೆಯಾದರೂ ಅರ್ಥ ಒಂದೇಯಾಗಿರುತ್ತದೆ.

ಊರಮ್ಮ ದೇವಾಲಯ : ಸಾಮಾನ್ಯವಾಗಿ ಊರಿಗೆ ಒಂದು ದೇವತೆ ಇರಬೇಕಲ್ಲವೆ? ಅದನ್ನು ಶಕ್ತಿ ದೇವತೆಯೆಂದು ಪರಿಗಣಿಸಬಹುದು. ಊರಿಗೆ ಏನಾದರೂ ಮಾರಿ ತೊಂದರೆ ಬಂದರೆ ಈ ದೇವಾಲಯಕ್ಕೆ ಒಂದು ಹರಕೆ ಹೊತ್ತು ಬೇಡಿಕೊಳ್ಳುವುದು ವಾಡಿಕೆ. ಇದನ್ನು ಊರಿನ ಗ್ರಾಮ ದೇವತೆ ಎಂದು ಕರಯುತ್ತಾರೆ. ಇವು ಸಾಮಾನ್ಯವಾಗಿ ಕೆಳಜಾತಿಯ ಜನಾಂಗದವರ ದೇವತೆಗಳಾಗಿರುತ್ತವೆ. ಏಕೆಂದರೆ ಇದರ ಆಚರಣೆ, ಹಬ್ಬಹರಿದಿನಗಳನ್ನು ಮಾಡುವವರು ಇವರೆ. ಈ ದೇವಾಲಯಗಳು ಕೂಡ ಆಯಾ ಜನಾಂಗದವರ ಮನೆಯ ಹತ್ತಿರ ಇರುತ್ತವೆ. ಹೆಚ್ಚು ಆ ಜನಾಂಗದವರೇ ಸೇರಿ ಇದಕ್ಕೆ ಪೂಜಾದಿಗಳನ್ನು ಸಲ್ಲಿಸುತ್ತಾರೆ. ಆದರೆ ಒಂದೊಂದು ಊರಿಗೆ ಒಂದು ರೀತಿಯ ಸಂಪ್ರದಾಯವಿರುತ್ತದೆ. ಈ ಊರಿಗೆ ಇಷ್ಟೆಲ್ಲಾ ದೇವಾಲಯಗಳಿದ್ದರೂ ಒಂದು ಜಾತ್ರೆ ಅಥವಾ ಉತ್ಸವಗಳು ನಡೆಯುವುದಿಲ್ಲ ಎನ್ನುವುದು ಒಂದು ವಿಶೇಷವಾದ ಸಂಗತಿ.

ಕಾಳಿಕಾ ದೇವಾಲಯ : ಇದು ಕೆರೆಯ ದಂಡೆಗೆ ಹೊಂದಿಕೊಂಡು ಪಶ್ಚಿಮಾಭಿಮುಖವಾಗಿದೆ. ಇದು ಗರ್ಭಗೃಹ ಮತ್ತು ಅಂತರಾಳವನ್ನು ಹೊಂದಿದೆ. ಗರ್ಭಗೃಹದಲ್ಲಿ ಸಾದಾ ಪೀಠದ ಕೆತ್ತನೆಯ ಮೇಲೆ ಮೂರು ಅಡಿ ಎತ್ತರವಾದ ಕಾಳಿಕಾದೇವಿಯ ಮೂರ್ತಿಯು ಕಪ್ಪುಶಿಲೆಯಿಂದ ಕೂಡಿದೆ. ಅಂತರಾಳದಲ್ಲಿ ಯಾವುದೇ ಕಂಬಗಳಿಲ್ಲದೆ. ಸಾದಾ ಗೋಡೆಗಳಿಂದ ನಿರ್ಮಿತವಾಗಿದೆ. ಈ ದೇವಾಲಯಕ್ಕೆ ಸುಣ್ಣವನ್ನು ಹಚ್ಚಿದ್ದಾರೆ. ಅಂತರಾಳದಲ್ಲಿ ಸ್ವಲ್ಪ ಎತ್ತರವಾಗಿ ಗೋಡೆಗೆ ಅಂಟಿಕೊಂಡೇ ಕಟ್ಟಡಗಳನ್ನು ಕಟ್ಟಲಾಗಿದೆ. ಅಂತರಾಳದ ಮುಂದೆ ಕೆಲವೊಂದು ಕಲ್ಲುಗಳು ಕಪ್ಪುಶಿಲೆಯಿಂದ ಕೂಡಿದ್ದು, ಅವು ಎಲ್ಲ ಹಾಳಾಗಿವೆ. ಇದನ್ನು ಬಾಗಳಿಯ ಎಲ್ಲಾ ಜನರು ಪೂಜಿಸುತ್ತಾರೆ. ಹರಜನರು ಮಾತ್ರ ಈ ದೇವರ ಪೂಜೆಗೆ ಹೋಗುವುದಿಲ್ಲ.

ಹೊನ್ನತ್ತೆಮ್ಮ: ಈ ದೇವತೆಯ ಹಲವಾರು ದೇವಾಲಯಗಳು ಹರಪನಹಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಂಡುಬರುತ್ತವೆ. ಈ ದೇವತೆಯನ್ನು ಊರ ದೇವತೆ, ಗ್ರಾಮದೇವತೆ ಎಂದು ಕರೆಯುತ್ತಾರೆ. ಕೆಲವು ಹಳ್ಳಿಗಳಲ್ಲಿ ದೇವತೆಯ ಹೆಸರನಿಟ್ಟು ಜಾತ್ರೆ, ಹಬ್ಬಗಳನ್ನು ಮಾಡುವುದುಂಟು. ಇದು ಬಾಗಳಿ ಗ್ರಾಮದ ಪೂರ್ವಭಾಗಕ್ಕೆ ಇದ್ದು, ಇದನ್ನು ಊರ ಜನರಿಂದ ಹಿಡಿದು ಎಲ್ಲಾ ಜನಾಂಗದವರು ಪೂಜಿಸುತ್ತಾರೆ. ಈ ದೇವಾಲಯವನ್ನು ಊರಿನ ಜನರಿಂದ ದೇಣಿಗೆ ಪಡೆದು ನಿರ್ಮಿಸಿದ್ದಾರೆ. ಗರ್ಭಗುಡಿಯನ್ನು ಮಾತ್ರ ಹೊಂದಿದ್ದು, ಗರ್ಭಗುಡಿಯಲ್ಲಿ ಐದು ದುಂಡು ಕಲ್ಲುಗಳನ್ನು ಸುಣ್ಣ ಬಳಿದು ಇಟ್ಟಿದ್ದಾರೆ. ಈ ದೇವತೆಯ ಒಂದು ನಂಬಿಕೆ ಇದೆ. ಅದೇನೆಂದರೆ ಮಂಗಳವಾರ ಅಥವಾ ಶುಕ್ರವಾರ ದೇವಿಯವಾರವೆಂದು ನಂಬಿರುವ ಜನರು ಆ ದಿನದಂದು ತಾವು ಹರಕೆ ಹೊತ್ತುಕೊಳ್ಳುತ್ತಾರೆ. ಇನ್ನೂ ಕೆಲವರು ತಮ್ಮ ಮಕ್ಕಳಿಗೆ ಏನಾದರೂ ಸಣ್ಣ ಸಣ್ಣ ಗುಳ್ಳೆಗಳು ಕಾಣಿಸಿಕೊಂಡರೆ (ಹಳ್ಳಿಯ ಕಡೆ ಇದಕ್ಕೆ ಅಮ್ಮ ಎನ್ನುತ್ತಾರೆ.) ಈ ದೇವತೆ ನೀರು ಹಾಕಿ ಬರುವುದು. ಅಂದಿನ ದಿನ ಬೇವಿನ ಸೊಪ್ಪನ್ನು ತಂದು ತಮ್ಮ ಬಾಗಿಲಿಗೆ ಕಟ್ಟುವುದು ವಾಡಿಕೆ ಇದೆ. ಇಲ್ಲವಾದರೆ ಬೇವಿನ ಸೊಪ್ಪನ್ನು ಪುಡಿ ಮಾಡಿ ಮಕ್ಕಳ ಮೈಗೆ ಹಚ್ಚುವುದು. ಆ ದಿನದಂದು ಏನಾದರೂ ಸಿಹಿ ಅಡಿಗೆ ಮಾಡಿ ದೇವತೆಗೆ ಐದು ಅಥವಾ ಮೂರು ವಾರಗಳನ್ನು ಮಾಡಿ ನೈವೇದ್ಯ ಸಲ್ಲಿಸುತ್ತಾರೆ. ಇದರಂತೆ ಇನ್ನುಳಿದ ದೇವತೆಗಳು ಒಂದೇ ವಿವರಣೆಯನ್ನು ಹೊಂದಿದ್ದರು ಸಹ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ. ಏಕೆಂದರೆ (ಓಣಿ) "ಕೇರಿಗೊಂದು ಗುಡಿ, ಹೆಜ್ಜೆಗೊಂದು ಗುಡಿ" ಎನ್ನುವ ಜನಪದ ಮಾತಿನಂತೆ ಇಲ್ಲಿಯೂ ಸಹ ಓಣಿಗೊಂಡು ಗುಡಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಇವುಗಳನ್ನು ಆಯಾ ಜನಾಂಗದವರು ತಮ್ಮ ಧರ್ಮಸಂಪ್ರದಾಯದಂತೆ ಪೂಜಿಸುತ್ತಾರೆ.

ಹಳ್ಳಿಗಳಲ್ಲಿ ಸಾಮಾನ್ಯವಾಗಿ (ಕೇರಿ) ಹರಿಜನರು ತಮ್ಮದೇ ಆದ ಒಂದು ಕೇರಿಯನ್ನು ರೂಪಿಸಿಕೊಂಡು ಅಲ್ಲಿ ದುರುಗಮ್ಮ, ದ್ಯಾಮವ್ವ, ಗಾಳೆಮ್ಮ, ಚೌಡಮ್ಮ, ಊರಮ್ಮ, ಮಾರಮ್ಮ, ಹುಡುಲ್ಸಮ್ಮ ಹೀಗೆ ಬೇರೆ ಬೇರೆ ಹೆಸರುಗಳಿಂದ ಸಣ್ಣ ಸಣ್ಣ ಗುಡಿಗಳನ್ನು ಕಟ್ಟಿಕೊಂಡಿರುತ್ತಾರೆ. ಅವುಗಳಲ್ಲಿ ಮೂಲ ವಿಗ್ರಹಳಿರುವುದಿಲ್ಲ. ತಾವೇ ಒಂದು ಕಲ್ಲಿನ ಮೂರ್ತಿ ತಂದು ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಯಾವುದಾದರೂ ವಿಗ್ರಹ ಸಿಗಲಿಲ್ಲವೆಂದರೆ ಒಂದು ಸಣ್ಣ ಗಡಿಗೆ ಮಡಿಕೆಗೆ ಸುಣ್ಣ ಬಳಿದು ಅದಕ್ಕೆ ಮುಚ್ಚಣಿಕೆಯನ್ನು ಮುಚ್ಚಿ ಆ ಮಡಿಕೆಗೆ ಬಿಳಿ ದಾರವನ್ನು ೫ ಅಥವಾ ೯ ಸುತ್ತು ಹಾಕಿ ೫ ಅಥವಾ ೩ ಹಸಿರು ಬಳೆಗಳನ್ನು ಕಟ್ಟಿ, ಆ ಗುಡಿಯಲ್ಲಿಟ್ಟು ಪೂಜಿಸುತ್ತಾರೆ. ಇದಕ್ಕೆ ತಾವೇ ಒಂದು ಹೆಸರು ಕೊಟ್ಟು ಆ ಹೆಸರಿನಲ್ಲಿ ಹಬ್ಬ ಹರಿದಿನಗಳನ್ನು ಆಚರಿಸುತ್ತಾರೆ.

ಅಡಿಟಿಪ್ಪಣಿಗಳು

೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ತಿಪ್ಪೇರುದ್ರಸ್ವಾಮಿ, ಪು.೩

೨. ಕರ್ನಾಟಕ ರಾಜ್ಯ ಗೆಸಿಟಿಯರ್, ಭಾಗ-೩, ಪು.೨೫೭

೩. ಅದೇ ಪು.೧೭

೪. ಕುರುಗೋಡಿನ ಸಿಂದರು ಒಂದು ಸಾಂಸ್ಕೃತಿಕ ಅಧ್ಯಯನ, ಚನ್ನಬಸವಯ್ಯ ಹಿರೇಮಠ, ಪು.೨೬೭

೫. ಬಳ್ಳಾರಿ ಜಿಲ್ಲಾ ಶಾಸನ ಸಂ-೧, ಬಾಗಳಿ ಶಾಸನ-೯೭

೬. ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಕುಂ.ಬಾ.ಸ, ಪು.೧೦೬

೭. ಬಳ್ಳಾರಿ ಜಿಲ್ಲಾ ಶಾಸನ ಸಂ.೧, ಬಾಗಳಿ ಶಾಸನ-೧೦೬, ಹ.ಹಳ್ಳಿ ಆದರೆ (ಈ ಶಾಸನದಲ್ಲಿ ದೇವಾಲಯದ ಉಲ್ಲೇಖವೇನೂ ಬರುವುದಿಲ್ಲ. ವಿಕ್ರಮಾದಿತ್ಯ ಆಳ್ವಿಕೆಯಲ್ಲಿ ತ್ರಿಭುವನಮಲ್ಲ ರಾಜ್ಯಭಾರಮಾಡುತ್ತಿದ್ದ(ಪಾಂಡ್ಯ) ನೊಳೆಂಬವಾಡಿಯನ್ನು ಆಳುತ್ತಿದ್ದ ಎಂದು ಉಲ್ಲೇಖಬರುತ್ತದೆ. ಹಾಗೆಯೇ ಇದನ್ನು ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ಸಂ.ತೆಲಗಾವಿ ಶ್ರೀನಿವಾಸ ಇವರು ಮರುಳುಸಿದ್ಧ ಕಾವ್ಯವಿಮರ್ಶೆ ಎಂಬ ಲೇಖನದಲ್ಲಿ ಕ್ರಿ.ಶ.೧೦೦೮ನೇ ವರ್ಷಕ್ಕೂ ಮುಂಚೆಯೇ ಸ್ಥಾಪಿತನಾಗಿದ್ದ ಕಲ್ಲೇಶ್ವರ ಅಥವಾ ಕಲಿದೇವ ಎಂದು ಶಾಸನಗಳಲ್ಲಿ ಉಕ್ತವಾಗಿದೆ. ಪುಟ-೧೩೮)

೮. 'ಸಂದರ್ಶಕರ ಪುಸ್ತಕ' ಬಾಗಳಿ ಕಲ್ಲೇಶ್ವರ ದೇವಾಲಯ, ಸಂಪಾದನೆ-ಬಣಕಾರ ರಾಜಶೇಖರ, ಬಾಗಳಿ

೯. ಅದೇ ,,

೧೦. ಅದೇ ,,

೧೧. ಕರ್ನಾಟಕ ಇತಿಹಾಸ ದರ್ಶನ, ಮೈಸೂರಿನ ದೇವಾಲಯಗಳ ವಾಸ್ತುಶಿಲ್ಪ, ಕರ್ನಾಟಕ ಶೈಲಿ, ಪು.೪೩

೧೨. Temples of Raicharand, Bellary District, karnataka, c.s.patil N-೪, pag-೧೧೯

೧೩. same Book pag-೧೧೯

೧೪. ,,

೧೫. ,, pag-೧೨೧

೧೬. ಬೆಡಗಿನ ಬಾಗಳಿಗೆ ಬಾರಯ್ಯ ರಸಿಕ, ಚಿತ್ರಲೇಖನ, ೧೯೮೯ ದೀಪಾವಳಿ ವಿಶೇಷಾಂಕ, ಉದಯವಾಣಿ, ಪು.೧೪೫

೧೭. ಕ್ಷೇತ್ರಕಾರ್ಯದ ಮಾಹಿತಿ ಸಂಗ್ರಹ, ಡಾ.ದೇವರಕೊಂಡಾರೆಡ್ಡಿ, ಎಂ.ಕೊಟ್ರೇಶ್, ಬಣಕಾರ ರಾಜಶೇಖರ

೧೮. ಇತಿಹಾಸ ದರ್ಶನ, ಸಂ.೫

೧೯. ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ (ಸಂ), ಡಿ.ಎಲ್.ನರಸಿಂಹ ಆಚಾರಿ, ಪು.೩೪

೨೦. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ-೧, ಮಾಡಲಗೇರಿ ಹ.ಹಳ್ಳಿ ಶಾಸನ-೯೩

೨೧. ಅದೇ ,, ಬಾಗಳಿ ಶಾಸನ-೧೨೫, ೯೭೨ ಕಾಲ

೨೨. ಬಳ್ಳಾರಿ ಜಿಲ್ಲಾ ಶಾಸನ ಸಂ, ನಾರಿಹಳ್ಳ(ತಾರಾನಗರ) (ಸಂಡುರು ತಾ) ಶಾಸನ-೧೭

೨೩. ಕಲ್ಯಾಣಿ ಚಾಲುಕ್ಯ ಮತ್ತು ಹೊಯ್ಸಳ ಕಲೆ, ಕ.ರಾ.ಗ್ಯಾ, ಭಾಗ ೩, ಪು.೪೦೩

೨೪. ಕರ್ನಾಟಕ ಇತಿಹಾಸ ದರ್ಶನ, ಮೈಸೂರಿನ ವಾಸ್ತುಶಿಲ್ಪ, ಕರ್ನಾಟಕ ಶೈಲಿ, ಪು.೪೩

೨೫. ಬೆಡಗಿನ ಬಾಗಳಿಗೆ ಬಾರಯ್ಯ ರಸಿಕ, ಚಿತ್ರಲೇಖನ, ಡಾ.ಚಂದ್ರಶೇಖರ, ಪು.೧೪೩

೨೬. ಶಿಲ್ಪದರ್ಶ, ಜಿ.ಜ್ಞಾನಾನಂದ ಸಂ-೧, ಕ.ವಿ.ಹಂ, ಭಾರತೀಯ ಪ್ರತಿಮಾಶಿಲ್ಪದ ಇತಿಹಾಸ, ಪುಟ.೧೨೮

೨೭. ಕಲ್ಯಾಣಿ ಚಾಲುಕ್ಯರ ದೇವಾಲಯಗಳು, ಇತಿಹಾಸ ಪದಕೋಶ, ಲಕ್ಷ್ಮಣ ಅಳವಂಡಿ, ಕಾವ್ಯಶ್ರೀ ಪ್ರಕಾಶನ, ೧೯೯೭, ಕೊಪ್ಪಳ, ಪು.೫೩

೨೮. ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಡಾ.ಸಿಂದಗಿ ರಾಜಶೇಖರ, ಧಾರವಾಡ, ಪು.೧೯೯

೨೯. ಕಲ್ಯಾಣಿಚಾಲುಕ್ಯರು, ಆರ್.ಎಸ್.ರಾವ್., ಪು.೪೦

೩೦. ಕ.ಶಾ.ಸಂ. ಅಧ್ಯಯನ, ಚಿ.ನಾ.ಮೂರ್ತಿ, ದೇವಾಲಲಯ-ಸಾಮಾಜಿಕ ಸಂಸ್ಥೆ, ಪುಟ.೧೭೪

೩೧. ಕುರುಗೋಡಿನ ಸಿಂದರು-ಒಂದು ಅಧ್ಯಯನ, ಚನ್ನಬಸಯ್ಯ ಹಿರೇಮಠ, ಪು.೨೭೧

೩೨. (ಕನ್ನಡ) ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ.ತಿಪ್ಪೇರುದ್ರಸ್ವಾಮಿ, ಪು.೨೭೪

೩೩. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಕ.ವಿ.ಹಂ, ಬಾಗಳಿ ಶಾಸನ-೯೪(ಹ.ಹಳ್ಳಿ)

೩೪. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಕ.ವಿ.ಹಂ, ಕುಡುತಿನಿ ಶಾಸನ-೩೯ (ಬಳ್ಳಾರಿ ಜಿಲ್ಲೆ)

೩೫. ಅದೇ ಕುಮಾರಸ್ವಾಮಿಬೆಟ್ಟ(ಸಂಡೂರು) ಶಾಸನ-೭

೩೬. ,, ಬಾಗಳಿ ಶಾಸನ-೧೨೬

೩೭. ,, ಬಾಗಳಿ ಶಾಸನ-೧೨೪

೩೮. ,, ಹೂವಿನ ಹಡಗಲಿ ಶಾಸನ-೮೩

೩೯. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂ.ವಿ.ಸಂ-೨, ಪುಟ.೩೧೨

೪೦. (ಕನ್ನಡ)ಬಳ್ಳಾರಿ ಜಿಲ್ಲಾ ಶಾಸನ ಸಂ, ಹಿರೇಹಡಗಲಿ ಶಾಸನ-೫೨ (ಹೂ.ಹಡಗಲಿ)

೪೧. ಬಳ್ಳಾರಿ ಜಿಲ್ಲಾ ಶಾಸನ ಸಂ-, ಹೂವಿನ ಹಡಗಲಿ ಶಾಸನ-೮೩

೪೨. ಕರ್ನಾಟಕ ಚರಿತ್ರೆ, ಸಂ. ಪ್ರೊ.ಬಿ.ಷೇಕ್ ಅಲಿ, ಕ.ವಿ.ಹಂ, ಹೊಯ್ಸಳರ ಕಲೆ ಮತ್ತು ವಾಸ್ತು, ಪುಟ.೨೬೨

೪೩. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಬಾಗಳಿ ಶಾಸನ-೧೧೬(ಹ.ಹಳ್ಳಿ)

೪೪. ,, ಕುರುವತ್ತಿ ಶಾಸನ-೧೪(ಹಡಗಲಿ)

೪೫. ,, ಸಂಡೂರು ಶಾಸನ-೭(ಸಂಡೂರು)

೪೬. ,, ಕುರುವತ್ತಿ ಶಾಸನ-೬(ಹಡಗಲಿ)

೪೭. ,, ಹಿರೇಹಡಗಲಿ ಶಾಸನ-೫೩, ಕ್ರಿ.ಶ.೧೨೧೨

೪೮. ಬಳ್ಳಾರಿ ಜಿಲ್ಲಾ ಶಾಸನ ಸಂ, ಕ.ವಿ.ಹಂ, ಬಾಗಳಿ ಶಾಸನ-೧೩೩(ಹ.ಹಳ್ಳಿ)

೪೯. ,, ಕೊಟ್ಟೂರು ಶಾಸನ-೧೩(ಕೂಡ್ಲಿಗಿ)

೫೦. ,, ಬಾಗಳಿ ಶಾಸನ-೧೩೩(ಹ.ಹಳ್ಳಿ)

೫೧. ,, ಬಾಗಳಿ ಶಾಸನ-೧೩೫(ಹ.ಹಳ್ಳಿ)

೫೨. ,, ಬಾಗಳಿ ಶಾಸನ-೧೮೨(ಹ.ಹಳ್ಳಿ)

೫೩. ,, ಬಾಗಳಿ ಶಾಸನ-೧೩೫

೫೪. ಕನ್ನಡ ವಿಷಯ ವಿಶ್ವಕೋಶ, ಪು.೯೦ (ಉಚ್ಚಂಗಿದುರ್ಗದ ಶಾಸನದಲ್ಲಿ ಹೊಯ್ಸಳ ರಾಜ ಎಂದಿದೆ. ಯಾವ ರಾಜ ಎಂದು ಉಲ್ಲೇಖ ಸರಿಯಿಲ್ಲ. ಈಶ್ವರ ದೇವಾಲಯಕ್ಕೆ ತಿಪ್ಪನಕೆರೆಯನ್ನು ಬಿಟ್ಟನೆಂದು ತಿಳಿಸುತ್ತದೆ.)

೫೫. ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ಇತಿಹಾಸ, ಜಿ.ಎಂ.ನಾಗಯ್ಯ, ಪು.೩೫

೫೬. ಬಳ್ಳಾರಿ ಜಿಲ್ಲಾ ಶಾಸನ ಸಂ, ಕ.ವಿ.ಹಂ, ಕುಡುತಿನಿ ಶಾಸನ-೩೨(ಬಳ್ಳಾರಿ ಜಿಲ್ಲೆ)

೫೭. ,, ಕಂಚುಗಾರ ಬೆಳಗಲ್ಲು ಶಾಸನ-೩೮(ಸಿರುಗುಪ್ಪ)

೫೮. ,, ಬಾಗಳಿ ಶಾಸನ-೧೩೦(ಹ.ಹಳ್ಳಿ)

೫೯. ಕನ್ನಡ ರತ್ನಕೋಶ, (ಪರಿಷ್ಕೃತ) ಕನ್ನಡ ಸಾಹಿತ್ಯ ಪರಿಷತ್ತು, ಪು.೨

೬೦. ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಡಾ.ಚನ್ನಕ್ಕ ಎಲಿಗಾರ, ಪು.೪೮

೬೧. ಕರ್ನಾಟಕದ ದೇವಾಲಯಗಳಲ್ಲಿ ರಂಗಭೋಗ(ನೃತ್ಯ), ಕರಣಮಂಗಳವೇಡೆ, ಪಿಹೆಚ್ ಡಿ ಮಹಾಪ್ರಬಂಧ ಅಪ್ರಕಟಿತ, ಕ.ವಿ.ಹಂ

೬೨. ಕುರುಗೋಡಿನ ಸಿಂದರು ಒಂದು ಅಧ್ಯಯನ, ಚನ್ನಬಸವಯ್ಯ ಹಿರೇಮಠ, ಪು.೨೭೩

೬೩. ಕರ್ನಾಟಕದ ದೇವಾಲಯಗಳಲ್ಲಿ ರಂಗಭೋಗ, ಕರುಣಮಂಗಳವೇಡೆ, ಪು.೯

೬೪. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಬಾಗಳಿ ಶಾಸನ-೯೫(ಹ.ಹಳ್ಳಿ)

೬೫. Temples of Raichar and Bellary Disticts, karanataka, pa.೩೯

೬೬. ಶಾಸನಗಳಲ್ಲಿ ಸ್ತ್ರೀ ಸಮಾಜ, ಚನ್ನಕ್ಕ ಎಲಿಗಾರ, ಪುಟ.೫೫

೬೭. ಬಳ್ಳಾರಿ ಜಿಲ್ಲಾ ಶಾಸನ ಸಂ, ಬಾಗಳಿ ಶಾಸನ-೧೦೪(ಹ.ಹಳ್ಳಿ)

೬೮. ,, ಶಾಸನ-೧೦೭(ಹ.ಹಳ್ಳಿ)

೬೯. ,, ೧೧೪ ,,

೭೦. ,, ೧೧೬ ,,

೭೧. ,, ೧೧೭

೭೨. ,, ೧೨೯

೭೩. ,, ೧೨೯

೭೪. ,, ೧೩೮

೭೫. ,, ೧೩೮

೭೬. ,, ೧೭೯

೭೭ ,, ೧೮೧, ಕ್ರಿ.ಶ.೧೧೧೦

೭೮. ,, ೧೮೨

೭೯. ,, ೧೮೪

೮೦. ,, ಹೂ.ಹಡಗಲಿ ಶಾಸನ-೮೩

೮೧. ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ, ಚನ್ನಕ್ಕ ಎಲಿಗಾರ್ , ಪು.೫೫

೮೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ-ಸಾಹಿತ್ಯದ ಸೊಗಡು, ಪು.೪೯೪, ಡಾ.ತಿಪ್ಪೇರುದ್ರಸ್ವಾಮಿ.

೮೩. ಭಾರತೀಯ ಸಂಸ್ಕೃತಿ, ಶ್ರೀಕಂಠಶಾಸ್ತ್ರಿ, ಪು.೨೦೪

೮೪. ವಾತ್ಸಾಯನ ಕಾಮಶಾಸ್ತ್ರ, ಪು-

೮೫. ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ, ಪು.೪೯

೮೬. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಬಾಗಳಿ ಶಾಸನ-೧೩೬(ಹ.ಹಳ್ಳಿ.ತಾ)

೮೭ ಶಾಸನಗಳಲ್ಲಿ ಸ್ತ್ರೀ ಸಮಾಜ, ಚನ್ನಕ್ಕ ಎಲಿಗಾರ, ಪು.೭೦

೮೮. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಬಾಗಳಿ ಶಾಸನ-೯೭(ಹ.ಹಳ್ಳಿ)

೮೯. ,, ಉಚ್ಚಂಗಿದುರ್ಗ ಶಾಸನ-೯(ಹ.ಹಳ್ಳಿ)

೯೦. ,, ಮೊರಗೇರಿ ಶಾಸನ-೨೪(ಹಗರಿಬೊಮ್ಮನ ಹಳ್ಳಿ)

೯೧. ,, ಬಾಗಳಿ ಶಾಸನ-೧೩೬(ಹ.ಹಳ್ಳಿ)

೯೨. ,, ಹಿರೇಮೇಗಳಗೆರೆ ಶಾಸನ-೩೧(ಹ.ಹಳ್ಳಿ)

೯೩. ,, ಬಾಗಳಿ ೯೭

೯೪. ಕರ್ನಾಟಕ ದೇವಾಲಯಗಳಲ್ಲಿ ರಂಗಭೋಗ, ಕರುಣ ಮಂಗಳವೇಡೆ, ಪಿಹೆಚ್ ಡಿ ಮಹಾಪ್ರಬಂಧ(ಅಪ್ರಕಟಿತ), ಕ.ವಿ.ಹಂ, ಪು.೯೯

೯೫. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಬಾಗಳಿ ಶಾಸನ-೯೭(ಹಳ್ಳಿ)

೯೬. ,, ಬಾಗಳಿ ಶಾಸನ-೧೦೦(ಹ.ಹಳ್ಳಿ)

೯೭. ,, ಬಾಗಳಿ ೧೩೫

೯೮. ದೇವಾಲಯದ ವಾಸ್ತುಶಿಲ್ಪ ಪರಿಚಯ, ಕೂ.ಸ.ಅಪರ್ಣ, ಕ.ವಿ.ಹಂ, ಪು.೯

೯೯. ದೇವಾಲಯದ ವಾಸ್ತುಶಿಲ್ಪ ಪರಿಚಯ, . ಕೂ.ಸ.ಅಪರ್ಣ, ಪು.೮

೧೦೦. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ವಾಸ್ತುಶಿಲ್ಪ ಮತ್ತು ಶಿಲ್ಪ, ಡಾ.ತಿಪ್ಪೇರುದ್ರಸ್ವಾಮಿ, ಪು.೫೩೭

೧೦೧. ಬಳ್ಳಾರಿ ಜಿಲ್ಲಾ ಶಾಸನ ಸಂ, ಕ.ವಿ.ಹಂ, ಬಾಗಳಿ ಶಾಸನ-೯೫

೧೦೨ ಅದೇ ,, ೯೭

೧೦೩. ,,

೧೦೪. ,, ೯೮

೧೦೫. ,, ೧೦೨

೧೦೬. ,,

೧೦೭ ,, ೧೦೪

೧೦೮. ,, ೧೦೫

೧೦೯. ,, ೧೦೬

೧೧೦. ,, ೧೦೭

೧೧೧. ,, ೧೦೯

೧೧೨. ,, ೧೧೨

೧೧೩. ,, ೧೧೪

೧೧೪. ,, ೧೧೬

೧೧೫. ,, ೧೧೭

೧೧೬. ,, ೧೨೦

೧೧೭. ,, ೧೧೦

೧೧೮. ,, ೧೦೨

೧೧೯. ,, ೧೦೭

೧೨೦. ,, ೧೧೦

೧೨೧. ,, ೧೧೦

೧೨೨. ,, ೧೧೨

೧೨೩. ,, ೧೧೫

೧೨೪. ,, ೧೨೭

೧೨೫. ,, ೧೨೮

೧೨೬. ,, ೧೩೨

೧೨೭. ,, ೧೩೬

೧೨೮. ,, ೧೭೯

೧೨೯. ,,

೧೩೦. ,, ೧೮೦

೧೩೧. ,, ೧೮೧

೧೩೨. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಬಾಗಳಿ ಶಾಸನ-೯೯(ಹ.ಹಳ್ಳಿ.ತಾ)

೧೩೩. ,, ೧೦೦ ,,

೧೩೪. ,, ೧೦೪ ,,

೧೩೫. ,, ೧೦೬ ,,

೧೩೬. ,, ೧೧೨ ,,

೧೩೭. ,, ೧೨೦ ,,

೧೩೮. ,, ೧೮೪ ,,

೧೩೯. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಬಾಗಳಿ ಶಾಸನ-೧೨೫(ಹ.ಹಳ್ಳಿ)

೧೪೦. ಸ್ಥಳೀಯರ ಕೃಪೆ, ರೋಣದ ನಾಗಪ್ಪ

೧೪೧. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಬಾಗಳಿ ಶಾಸನ-೧೨೫

೧೪೨. ,, ಕುಡುತಿನಿ(ಬಳ್ಳಾರಿ ತಾ) ಶಾಸನ-೧೩೫

೧೪೩. ,, ೨೬

೧೪೪. ,, ಉಚ್ಚಂಗಿದುರ್ಗ ಶಾಸನ-೯(ಹ.ಹಳ್ಳಿ)

೧೪೫. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ-೧, ಬಾಗಳಿ ಶಾಸನ-೧೦೦(ಹ.ಹಳ್ಳಿ), ಕ್ರಿ.ಶ.೧೦೭೯, ಪು.೫೦೦

೧೪೬. ,, ೧೧೬(ಹ.ಹಳ್ಳಿ), ಕ್ರಿ.ಶ.೧೧೯೩

೧೪೭. ,, ೯೭(ಹ.ಹಳ್ಳಿ), ಕ್ರಿ.ಶ.೧೦೧೮

೧೪೮. ,, ೧೧೨(ಹ.ಹಳ್ಳಿ), ಕ್ರಿ.ಶ.೧೧೨೨

೧೪೯. ,, ೯೭(ಹ.ಹಳ್ಳಿ), ಕ್ರಿ.ಶ.೧೦೧೮

೧೫೦. ,, ೧೦೨, ಕ್ರಿ.ಶ.೧೧೦೩

೧೫೧. ,, ೧೦೫, ಕ್ರಿ.ಶ.೧೧೦೭

೧೫೨. ,, ೧೦೭, ಕ್ರಿ.ಶ.೧೧೧೫

೧೫೩. ,, ೯೯, ಕ್ರಿ.ಶ.೧೦೩೫

೧೫೪. ,, ೯೯, ಕ್ರಿ.ಶ.೧೦೩೫

೧೫೫. ,,

೧೫೬. ,, ೧೧೬, ಕ್ರಿ.ಶ.೧೧೯೩

೧೫೭. ,, ೯೯, ಕ್ರಿ.ಶ.೧೦೩೫

೧೫೮. ,, ೧೦೨, ಕ್ರಿ.ಶ.೧೧೦೩

೧೫೯. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಶಾಸನ-೩೮, ಕುಡುತಿನಿ ಬಳ್ಳಾರಿ ಜಿಲ್ಲೆ

೧೬೦. ,, ೧೮೦, ಬಾಗಳಿ(ಹ.ಹಳ್ಳಿ) ಕ್ರಿ.ಶ.೧೧೦೮

೧೬೧. The chalukyas of kalayana(Seminar papers) Editor.Dr.M.S.Nagaraju Rao,'The Enigma of Bagali- E.N.Katkar pag.೧೯-೧೯೩ - ಅಂದರೆ ಬಾಗಳಿ ಮಿಥುನ ಶಿಲ್ಪಗಳನ್ನು ಮೊದಲಿಗೆ ಲೇಖನ ಮಾಡಿ ಮಂಡಿಸಿದವರು. ಇವುಗಳ ವಿವರಗಳನ್ನು ಆ ಗ್ರಂಥದಲ್ಲಿ ನೋಡಿ. ಚಿತ್ರಗಳನ್ನು ಪ್ರಬಂಧದ ಕೊನೆಯ ಪುಟಗಳಲ್ಲಿ ಕೊಡಲಾಗಿದೆ.

೧೬೨. ಮಾರ್ಗ ಸಂ-೨, ಎಂ.ಎಂ.ಕಲಬುರ್ಗಿ, ಪು.೩೩೦, ಲಜ್ಜಾಗೌರಿ-ಲೇಖನ




ಸಭಾಮಂಟಪದ ದಕ್ಷಿಣದ ಬಾಗಿಲು




ಕಲ್ಲೇಶ್ವರ ದೇವಾಲಯದ ನವರಂಗದಲ್ಲಿರುವ ನಂದಿ ಮತ್ತು ಕಂಬಗಳು







ಕಲ್ಲೇಶ್ವರ ದೇವಾಲಯದ ದ್ವಾರಬಾಗಿಲಿನ ಮೇಲಿರುವ ಸುಂದರ ಮಕರ ತೋರಣ



ಕಲ್ಲೇಶ್ವರ ದೇವಾಲಯದ(ಅಂತರಾಳ) ನವರಂಗದಲ್ಲಿನ ಭುವನೇಶ್ವರಿ








ಕಲ್ಲೇಶ್ವರ ದೇವಾಲಯದ ಬಲಭಾಗದ ಕಂಬದಲ್ಲಿರುವ ನೃತ್ಯಗಾತಿ



ಕಲ್ಲೇಶ್ವರ ದೇವಾಲಯದ ನವರಂಗದ ಎಡ
ಕಂಬದಲ್ಲಿ ದರ್ಪಣ ಹಿಡಿದ ಸುಂದರಿ



ಕಲ್ಲೇಶ್ವರ ದೇವಾಲಯದ ನವರಂಗದ ಕಂಬದಲ್ಲಿನ ಸರಸ್ವತಿ



ಕಲ್ಲೇಶ್ವರ ದೇವಾಲಯದ ನವರಂಗದ ಕಂಬದಲ್ಲಿನ ದುರ್ಗಶಿಲ್ಪ



ಕಲ್ಲೇಶ್ವರ ದೇವಾಲಯದ ಬಲಭಾಗದ ಕಂಬದಲ್ಲಿಯ
ನರ್ತಕಿ




ಅದೇ ಕಂಬದಲ್ಲಿಯ ಸ್ತ್ರೀಶಿಲ್ಪ




ಕಲ್ಲೇಶ್ವರ ದೇವಾಲಯದ ನವರಂಗದ ಎಡಭಾಗದ ಕಂಬದಲ್ಲಿನ
ನೃತ್ಯಗಾರ್ತಿ



ಕಲ್ಲೇಶ್ವರ ದೇವಾಲಯದ ನವರಂಗದ ಬಲಭಾಗದ ಕಂಬದಲ್ಲಿರುವ ಚೇಳು ಮತ್ತು ಸುಂದರಿ



ಕಲ್ಲೇಶ್ವರ ದೇವಾಲಯದ ಎಡಭಾಗದಲ್ಲಿ ಅಲಂಕೃತನಾಗಿ ನಿಂತ ಗಣೇಶ



ಜೀರ್ಣೋದ್ಧಾರ ಮಾಡುತ್ತಿರುವ ಸೂರ್ಯದೇವಾಲಯ ಅಧಿಷ್ಠಾನ




ಕಲ್ಲೇಶ್ವರ ದೇವಾಲಯದ ಎದುರಿಗಿರುವ ಸೂರ್ಯನಾರಾಯಣ



ಕಲ್ಲೇಶ್ವರ ದೇವಾಲಯದ ಬಲಭಾಗದಲ್ಲಿರುವ ದ್ವಾರಪಾಲಕರು(ಶೈವ)



ಕಲ್ಲೇಶ್ವರ ದೇವಾಲಯದ ಎಡಭಾಗದಲ್ಲಿರುವ ದ್ವಾರಪಾಲಕರು(ಶೈವ)



ಕಲ್ಲೇಶ್ವರ ದೇವಾಲಯದ ಸಭಾಮಂಟಪದಲ್ಲಿರುವ ಜಾಲಂಧ್ರ







ಕಲ್ಲೇಶ್ವರ ದೇವಾಲಯದ ಉತ್ತರ ಭಾಗಕ್ಕಿರುವ
ಮತ್ತು ಗರ್ಭಗೃಹದ ಹೊರಗಿನ ದೇವ ಕೋಷ್ಟಕ



ಕಲ್ಲೇಶ್ವರ ದೇವಾಲಯದ ಉತ್ತರಕ್ಕಿರುವ ದೇವಕೋಷ್ಟಕ



ಕಲ್ಲೇಶ್ವರ ದೇವಾಲಯದ ದಕ್ಷಿಣಕ್ಕಿರುವ ಅಧಿಷ್ಠಾನದ ಮಧ್ಯಭಾಗದ ದೇವಕೋಷ್ಟಕ



ಕಲ್ಲೇಶ್ವರ ದೇವಾಲಯದ ಹೊರಭಾಗದಲ್ಲಿ ಇರುವ ದೇವಕೋಷ್ಟಕ



ಕಲ್ಲೇಶ್ವರ ದೇವಾಲಯದ ದಕ್ಷಿಣಕ್ಕಿರುವ ಮಧ್ಯಭಾಗದ ದೇವಕೋಷ್ಟಕ



ಕಲ್ಲೇಶ್ವರ ದೇವಾಲಯದ ಮೇಲ್ಛಾವಣಿಯ ನೋಟ



ಕಲ್ಲೇಶ್ವರ ದೇವಾಲಯದ ವಿಹಂಗಮ ನೋಟ



ಕಲ್ಲೇಶ್ವರ ದೇವಾಲಯದ ಗೋಪುರ




ಕಲ್ಲೇಶ್ವರ ದೇವಾಲಯದ ಪೂರ್ವಕ್ಕಿರುವ ದೀಪಸ್ತಂಭ



ಕಲ್ಲೇಶ್ವರ ದೇವಾಲಯದ ನವರಂಗದ ಎಡಭಾಗದಲ್ಲಿರುವ
ಕಂಬದ ಕಪಿ ಮತ್ತು ಸುಂದರಿ







ಕಲ್ಲೇಶ್ವರ ದೇವಾಲಯದ ಮಹಾಮಂಟಪದ ನಂದಿ



ಲಕ್ಷ್ಮೀನಾರಾಯಣ ಶಿಲ್ಪ



ವಸ್ತುಸಂಗ್ರಹಾಲಯದಲ್ಲಿರುವ ಸರಸ್ವತಿ




ವಸ್ತುಸಂಗ್ರಹಾಲಯದಲ್ಲಿರುವ ಮಹಿಷಾಸುರಮರ್ಧಿನಿ



ಕಲ್ಲೇಶ್ವರ ದೇವಾಲಯದ ಉಗ್ರನರಸಿಂಹ



ವಸ್ತುಸಂಗ್ರಹಾಲಯದಲ್ಲಿರುವ ಸರಸ್ವತಿ




ಕಲ್ಲೇಶ್ವರ ದೇವಾಲಯದ ನಾಗಶಿಲ್ಪಗಳು







ದೇವಾಲಯದ ಆವರಣದಲ್ಲಿರುವ ಮಕರ ತೋರಣ



ಕಲ್ಲೇಶ್ವರದ ದೇವಾಲಯದ ದಕ್ಷಿಣಕ್ಕಿರುವ ಮಿಥುನಶಿಲ್ಪ




ಕಲ್ಲೇಶ್ವರದ ದೇವಾಲಯದ ದಕ್ಷಿಣಕ್ಕಿರುವ ಮಿಥುನಶಿಲ್ಪ







ಕಲ್ಲೇಶ್ವರ ದೇವಾಲಯದ ಮಹಾಮಂಟಪದಲ್ಲಿರುವ ಕಂಬಗಳ ತಲವಿನ್ಯಾಸ





ಕಲ್ಲೇಶ್ವರದ ದೇವಾಲಯದ ಉತ್ತರಕ್ಕಿರುವ ಲಜ್ಜಾಗೌರಿ




ಕಲ್ಲೇಶ್ವರದ ದೇವಾಲಯದ ಉತ್ತರಕ್ಕಿರುವ ನಗ್ನಶಿಲ್ಪ




ಕಲ್ಲೇಶ್ವರ ದೇವಾಲಯದ ಹೊರಗಿನ ಭಾಗದಲ್ಲಿರುವ
ಸ್ತ್ರೀಪುರುಷ ಆಲಿಂಗನದ ಶಿಲ್ಪ



ಕಲ್ಲೇಶ್ವರ ದೇವಾಲಯದ ದಕ್ಷಿಣಕ್ಕಿರುವ ಮಿಥುನಶಿಲ್ಪ



ಕಲ್ಲೇಶ್ವರ ದೇವಾಲಯದ ದಕ್ಷಿಣಕ್ಕಿರುವ ಮಿಥುನಶಿಲ್ಪ



ಕಲ್ಲೇಶ್ವರ ದೇವಾಲಯದ ದಕ್ಷಿಣಕ್ಕಿರುವ ಮಿಥುನಶಿಲ್ಪ



ಕಲ್ಲೇಶ್ವರ ದೇವಾಲಯದ ಕೋತಿ



ತ್ರಿಕೂಟ ದೇವಾಲಯದ (ಪಶ್ಚಿಮ ನೋಟ) ಪಕ್ಕದಲ್ಲಿ
ಕಾಣುವುದು ಚನ್ನಬಸವೇಶ್ವರ ದೇವಾಲಯ



ತ್ರಿಕೂಟ ದೇವಾಲಯದ ಮುಖಮಂಟಪ



ತ್ರಿಕೂಟ ದೇವಾಲಯದ ಬಿದ್ದು ಹೋಗಿರುವ
ಮುಖಮಂಟಪ








ತ್ರಿಕೂಟ ದೇವಾಲಯದ ದ್ವಾರಬಾಗಿಲು




ಕೆರೆಯ ಪಕ್ಕದಲ್ಲಿರುವ ತ್ರಿಕೂಟ ದೇವಾಲಯ (ಹೊರಗಿನ ಭಾಗ ಹಾಳಾಗಿದೆ)



ತ್ರಿಕೂಟ ದೇವಾಲಯದ ಸೂರ್ಯವಿಗ್ರಹ




ತ್ರಿಕೂಟ ದೇವಾಲಯದ ಸೂರ್ಯನಾರಾಯಣನ ಮುಂದೆ ನಂದಿ




ತ್ರಿಕೂಟ ದೇವಾಲಯದ ಭುವನೇಶ್ವರಿ



ತ್ರಿಕೂಟ ದೇವಾಲಯದಲ್ಲಿರುವ ವಿಷ್ಣು



ತ್ರಿಕೂಟ ದೇವಾಲಯದಲ್ಲಿರುವ ವಿಷ್ಣುವಿನ ದ್ವಾರಬಾಗಿಲು ಮತ್ತು ಅಂತರಾಳದಲ್ಲಿನ ಸ್ತಂಭಗಳು



ಗ್ರಾಮದ ಒಳಗಿರುವ ಜೈನ ಬಸದಿ ದ್ವಾರದಲ್ಲಿರುವ ಜಾಲಂಧ್ರ



ಇಷ್ಟಲಿಂಗ ದೇವಾಲಯದಲ್ಲಿರುವ ಶಿವಲಿಂಗ



ಇಷ್ಟಲಿಂಗೇಶ್ವರ ದೇವಾಲಯ








ಶಿಥಿಲವಾಗಿರುವ ಚನ್ನಬಸವೇಶ್ವರ ದೇವಾಲಯದ ಉತ್ತರದ ಅಧಿಷ್ಠಾನ




ಚನ್ನಬಸವೇಶ್ವರ ದೇವಸ್ಥಾನ



ವಸ್ತುಸಂಗ್ರಹಾಲಯದಲ್ಲಿರುವ ಮಹಿಷಾಸುರಮರ್ಧಿನಿ(ಹೊಯ್ಸಳರ ಶೈಲಿ)



ಕಲ್ಲೇಶ್ವರ ದೇವಾಲಯದ ಪಕ್ಕದಲ್ಲಿರುವ ಶಿವ ದೇವಾಲಯ



ಕಲ್ಲೇಶ್ವರ ದೇವಾಲಯದ ಗರ್ಭಗುಡಿಯ ಹಿಂದೆ ಇರುವ ವೀರಭದ್ರ



ಕಲ್ಲೇಶ್ವರ ದೇವಾಲಯದಲ್ಲಿರುವ ಶಿವದೇವಾಲಯ



ಕಲ್ಲೇಶ್ವರ ದೇವಾಲಯದ ಉತ್ತರ ನೋಟ










ಕಲ್ಲೇಶ್ವರ ದೇವಾಲಯದ ಬಲಭಾಗದಲ್ಲಿರುವ ನಾಲ್ಕು ಕಂಬದ ಮಂಟಪ



ಕಲ್ಲೇಶ್ವರ ದೇವಾಲಯದ ಉತ್ತರ ಅಧಿಷ್ಠಾನ



ಕಲ್ಲೇಶ್ವರ ದೇವಾಲಯದ ಪಕ್ಕದಲ್ಲಿರುವ ಶಿವದೇವಾಲಯ



ಕಲ್ಲೇಶ್ವರ ದೇವಾಲಯದ ಶಿವಲಿಂಗ ದೇವಾಲಯ ಎರಡು ದ್ವಾರಬಾಗಿಲುಗಳಿವೆ



ಕಲ್ಲೇಶ್ವರ ದೇವಾಲಯದ ಶಿವದೇವಾಲಯ

◆◆

ಚನ್ನಬಸವೇಶ್ವರ ದೇವಾಲಯದ ತಲವಿನ್ಯಾಸ





Fig.-12. Bagali, Channabasava, Plan (After Real.

ಕಲ್ಲೇಶ್ವರ ದೇವಾಲಯದ ತಲವಿನ್ಯಾಸ








Fig. 13. Bagali Kallesvara, Plan (After Rea).

ಕೃಪೆ: ಸಿ.ಎಸ್.ಪಾಟೀಲ



ಅಧ್ಯಾಯ ೭

ಶಾಸನಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು

೧. ಭೂಸಂಪತ್ತು

೨. ವ್ಯವಸಾಯ, ನೀರಾವರಿ

೩. ವಾಣಿಜ್ಯ, ವ್ಯವಹಾರ, ಉತ್ಪಾದನೆ

೪. ವರ್ತಕರು(ಬಣಜಿಗರು), ಸೆಟ್ಟಿಗಳು, ವಡ್ಡವ್ಯವಹಾರಿ

೫. ವರ್ತಕರ ಸಂಘ(ಶ್ರೇಣಿ)ಗಳು, ಅಯ್ಯಾವೊಳೆ ಐನೂರ್ವರು

೬. ಭೂಮಾಪನ, ತೂಕ, ಅಳತೆ, ನಾಣ್ಯಗಳು

೭. ತೆರಿಗೆ ಮತ್ತು ಸುಂಕ

೮. ಸಾಮಾಜಿಕ ವ್ಯವಸ್ಥೆ

   ೧. ವರ್ಗವರ್ಣ, ಮಹಾಜನರು, ಸ್ಥಾನಾಚಾರ್ಯರು,
   ಜೈನಮುನಿಗಳು, ಅಗ್ರಹಾರಗಳು

   ೨. ಶ್ರಮಿಕವರ್ಗ, ಜಾತಿವ್ಯವಸ್ಥೆ
   ವಿವಾಹ, ಸ್ತ್ರೀಸ್ಥಾನಮಾನ, ವೇಶ್ಯೆಯರು, ಸಂಪ್ರದಾಯ, ನಂಬಿಕೆಗಳು,
   ದಾನ-ವ್ರತಗಳು, ತೀರ್ಥಕ್ಷೇತ್ರ, ಆಹಾರ ಪದಾರ್ಥಗಳು

   ೩. ಸಾರ್ವಜನಿಕ ಚಟುವಟಿಕೆಗಳು
   ವಿದ್ಯಾಭ್ಯಾಸ, ವಿದ್ಯಾಭ್ಯಾಸಕ್ರಮ, ವಿದ್ಯಾಗುರುಗಳು

೧. ಭೂಸಂಪತ್ತು

ಒಂದುನಾಡಿನ ಜನರು ತಮ್ಮ ಜೀವನ ನಿರ್ವಹಣೆ ಮತ್ತು ಭದ್ರತೆಗೆ ಅಲ್ಲಿನ ನಿಸರ್ಗ ಸಂಪತ್ತಾದ ಭೂಮಿಯನ್ನು ಆಶ್ರಯಿಸಿರುವುದು ಕಂಡುಬರುತ್ತದೆ. ಅರ್ಥಶಾಸ್ತ್ರದಲ್ಲಿ ಪ್ರಕೃತಿ ದತ್ತವಾದ ಮಣ್ಣು, ನೀರು, ಖನಿಜ, ಅರಣ್ಯ ಸಂಪತ್ತು ಮೊದಲಾದವುಗಳು ಭೂಸಂಪತ್ತಿನಲ್ಲಿ ಸಮಾವೇಶಗೊಳ್ಳುತ್ತವೆ. ಇಂತಹ ಪ್ರಕೃತಿದತ್ತವಾದ ಸಂಪನ್ಮೂಲಗಳು ಶಾಸನಗಳಲ್ಲಿ ಉಲ್ಲೇಖವಾಗಿರುವುದು ಕಂಡುಬರುತ್ತವೆ.[೧] ದಾನಪ್ರಸಂಗದಲ್ಲಿ ಬಂಜರು ಭೂಮಿಯನ್ನು 'ಕೆಯ್' ಎಂಬ ಸಾಧನವನ್ನು ಇಟ್ಟುಕೊಂಡು ದಾನವನ್ನು ಬಿಡುವುದು. ಜೌಳು ಭೂಮಿಯಾದ ಇದನ್ನು, ಕಷ್ಟದಿಂದ ಒಳ್ಳೆಯ ಫಲವತ್ತಾದ ಭೂಮಿಯನ್ನಾಗಿ ಮಾಡಿ ಸಾಗುವಳಿ ಮಾಡುವುದು, ನಂತರ ಬಂದ ಬೆಳೆಯ ಮೇಲೆ ಕರ ವಿನಾಯಿತಿ ಕೇಳುವುದು ಅಂದಿನ ಆರ್ಥಿಕ ಸ್ಥಿತಿಯಾಗಿತ್ತು. ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು 'ಕೆಯ್' ಅಥವಾ 'ಕೆಯಿ' ಎಂದು ಕರೆಯಲಾಗುತ್ತಿತ್ತು. ಈ ಹೊಲವನ್ನು ಫಲವತ್ತಾದ ಭೂಮಿ ಎಂದು ಕರೆಯಬಹುದಾಗಿದೆ. ಈ ಶಾಸನವೊಂದರಲ್ಲಿ 'ಚಾಮೆಯನ ಕೆರೆಯ ಗದ್ದೆ' ಎಂದು ಉಲ್ಲೇಖವಾಗಿದೆ.[೨] ಇದು ಕೆರೆಯ ಹೆಸರನ್ನು ಸೂಚಿಸುತ್ತದೆ. ಜೊತೆಗೆ ಯಾವ ಭೂಮಿ ಎಂದು ಕಂಡುಬರುತ್ತದೆ. ಇಲ್ಲಿ ವ್ಯವಸಾಯವೇ ಮೂಲ ಪ್ರಧಾನವಾಗಿತ್ತು, ಎಂದು ತಿಳಿಯಬಹುದು. ಹೊಲ, ಗದ್ದೆ, ತೋಟಗಳಲ್ಲಿ ಬೆಳೆಯುತ್ತಿದ್ದ ಬೆಳೆಗಳಿಂದ ಬಂದ ಲಾಭವನ್ನು ದಾನ ಮಾಡುತ್ತಿದ್ದರು.

ಸತತ ನೀರಿನಿಂದ(ಆಶ್ರಯ) ಕೂಡಿರುವ ಕೆರೆ, ಬಾವಿ, ತೋಟ, ಗದ್ದೆಗಳಲ್ಲಿ ತೆಂಗು, ವೀಳ್ಯದೆಲೆ, ಅಡಿಕೆಗಳನ್ನು ಬೆಳೆಯಲಾಗುತ್ತಿತ್ತು. ಮಳೆಯನ್ನು ಅವಲಂಬಿಸದೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ನೀರಾವರಿ ಸಂಪನ್ಮೂಲಗಳು ಅತ್ಯವಶ್ಯವಾಗಿದ್ದವು. ನೀರಾವರಿಯು ಮುಖ್ಯವಾಗಿ ನದಿ, ಬಾವಿ, ಕೆರೆ, ಹಳ್ಳ, ಕೊಳ್ಳ ಹೊಂಡಗಳನ್ನು ಅವಲಂಬಿಸಿದ್ದು, ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುತ್ತವೆ. ಇಂತಹ ನದಿ, ಕೆರೆ, ಬಾವಿ, ಹಳ್ಳ ಕೊಳ್ಳಗಳು ಸಾರ್ವಜನಿಕರಿಗೆ ಉಪಯೋಗವಾಗುತ್ತಿದ್ದವು. ಇವುಗಳನ್ನು ನಮ್ಮ ಪೂರ್ವಜರು ಕಟ್ಟಿಸುವುದು ಪುಣ್ಯಕರ, ಶ್ರೇಯಸ್ಸು ಎಂದು ನಂಬಿದ್ದರಿಂದ ಈ ನಾಡಿನ ಉದ್ದಗಲಕ್ಕೂ ಅನೇಕ ಕೆರೆ, ಬಾವಿಗಳನ್ನು ನಿರ್ಮಿಸಿ ದಾನ ಬಿಟ್ಟಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ.[೩] ಹಿಂದೆಯೇ ತಿಳಿಸಿದಂತೆ ನಮ್ಮ ನಾಡು ತುಂಗಭದ್ರಾ ನದಿಯಿಂದ ಸುತ್ತುವರೆದು, ಅದು ಅಲ್ಲಲ್ಲಿ ಉಪನದಿಗಳಾಗಿ, ಹಳ್ಳಕೊಳ್ಳಗಳಾಗಿ ಹರಿದು ನೀರಾವರಿಗೆ ಅನುಕೂಲಮಾಡಿಕೊಟ್ಟಿದೆ. ಇಂತಹ ಹಳ್ಳಕೊಳ್ಳ,

[illegible]

ಕೆರೆಗಳಲ್ಲಿ, ಬಾಗಳಿ ಕೆರೆಯೂ ಸಹ ಒಂದಾಗಿತ್ತು. ಇದು ರಾಷ್ಟ್ರಕೂಟರ ಕಾಲದಲ್ಲಿಯೇ ಅಸ್ತಿತ್ವದಲ್ಲಿತ್ತು. ಇದರಿಂದ ಇಲ್ಲಿ ಹೆಚ್ಚಿನ ಭೂಮಿ ನೀರಾವರಿ, ಗದ್ದೆಯಿಂದ ಕೂಡಿತ್ತು ಎಂದು ಹೇಳಲಾಗಿದೆ. ಇದೊಂದು ಭತ್ತ ಗ್ರಾಮವು ಆಗಿತ್ತೆಂದು ಕಂಡುಬರುತ್ತದೆ. ಇದರಿಂದ ಭತ್ತ ಬೆಳೆಯಲು ಹೆಚ್ಚು ನೀರುಬೇಕು. ನೀರಾವರಿ ವ್ಯವಸ್ಥೆ ಇರಬೇಕು, ಎಂದಾದರೆ ಭತ್ತ ಬೆಳೆಯುವ ಗ್ರಾಮವೆನ್ನಬಹುದಾಗಿದೆ. ಇದರ ಜೊತೆಗೆ ಕೆಲವೊಂದು ಕೆರೆಗಳ ಉಲ್ಲೇಖ ಮತ್ತು ಆ ಕೆರೆಗಳ ಹೆಸರುಗಳು, ಕೆರೆಗಳನ್ನು ಕಟ್ಟಿಸಿದ ಒಡೆಯನ ಹೆಸರನ್ನು ಉಲ್ಲೇಖಿಸುತ್ತವೆ.[೪] ಈ ಎಲ್ಲಾ ಶಾಸನಗಳು ದಾನ ಶಾಸನಗಳಾದ್ದರಿಂದ ರಾಜ, ಅಧಿಕಾರಿ, ಸಾಮಾನ್ಯರೆನ್ನದೆ ಎಲ್ಲರೂ ದಾನ ಕಾರ್ಯವನ್ನು ಕೈಗೊಂಡು, ಕೆರೆಗಳನ್ನು ಕಟ್ಟಿಸಿದರೆಂದು ಕಂಡುಬರುತ್ತದೆ. ದಾನ ಬಿಡುವ ಸಂದರ್ಭದಲ್ಲಿ ಭೂಮಿಯನ್ನು ಸುತ್ತಳತೆಯ ಮೂಲಕ ಸೀಮಾನಿರ್ದೇಶನದ ಮೂಲಕ ದಾನ ಬಿಟ್ಟಿರುವುದು ಕಂಡುಬರುತ್ತದೆ. ಈ ಶಾಸನದಲ್ಲಿ ಕೆರೆಗೆ ದಾನನೀಡಿದ ಮತ್ತು ಕೆರೆಯ ಹೆಸರುಗಳ ಉಲ್ಲೇಖ ಬರುತ್ತದೆ.[೫] ಅಂದರೆ ಕೆರೆಯನ್ನು ಕೆರೆಯ ಹೆಸರನ್ನು ಹೆಸರಿಸಿ, ಜೊತೆಗೆ ಇಂತಿಷ್ಟು ದಾನ, ಇಂತಿಷ್ಟು ಅಳತೆಯ ಮೂಲಕ, ಕೆರೆಯನ್ನು 'ಕಮ್ಮ' ಎಂಬ ಅಳತೆಯ ಸಾಧನದಿಂದ ದಾನ ನೀಡಿರುವುದು ಕಂಡುಬರುತ್ತದೆ. ಈ ಶಾಸನದಲ್ಲಿ ಚಾಮೆಯನ ಕೆರೆಗದ್ದೆ-೪೦ ಕಮ್ಮ ಕೋಡಿಯ ಕೆರೆಯಗದ್ದೆ-೨೨೦ ಕಮ್ಮ' ಎಂದು ಉಲ್ಲೇಖವಾಗಿದೆ.[೬] ಚಾಮೆಯನ ಕೆರೆ ಎಂದಿರುವುದರಿಂದ, ಇದು ಕೆರೆಯನ್ನು ಕಟ್ಟಿಸಿದವನ ಹೆಸರಿರಬೇಕು. ಇನ್ನು ಗದ್ದೆಯನ್ನು ಈ ಕೆರೆಯ ನೀರನ್ನು ಬಳಸಿಕೊಂಡು ಗದ್ದೆ ಮಾಡಿಕೊಂಡಿರುವುದರಿಂದ ಚಾಮೆಯನಕೆರೆ, ಗದ್ದೆ ಎಂದು ಹೇಳಲಾಗಿದೆ. ಹಾಗೆಯೇ ಕೋಡಿಯ ಕೆರೆಯ ಗದ್ದೆ ಎಂದಿರುವುದರಿಂದ[೭] ಕೆರೆಯು ಕೋಡಿಬಿದ್ದ ಮೇಲೆ ಆ ನೀರನ್ನು ಬಳಸಿಕೊಂಡು ಗದ್ದೆ ಮಾಡಿಕೊಂಡಿರುವುದಕ್ಕೆ ಕೋಡಿಯ ಕೆರೆ ಗದ್ದೆ ಎಂದು ಕರೆದಿರಬಹುದು. ಕೆರೆ ಕೋಡಿ ಬಿದ್ದಾಗ ಮಾತ್ರ ಗದ್ದೆಯನ್ನು ಮಾಡುತ್ತಿದ್ದರು. ಕೆರೆಯಲ್ಲಿ ನೀರಿಲ್ಲದಾಗ ಸಾಮಾನ್ಯ ಬೆಳೆಗಳನ್ನು ಗದ್ದೆ ಉಳುಮೆ ಮಾಡಿ ಬೆಳೆಯುತ್ತಿದ್ದರು. ಇದೇ ಶಾಸನದಲ್ಲಿ ಮುಂದುವರಿದು ಕಪ್ಪು ಕೆರೆಯ ಮೂಡಣ, ಕಡೆಯಣ ಗದ್ದೆ, ಬಡಗಲು ಗದ್ದೆ-೧೨ ಕಮ್ಮ, ಪಡುವಣ ಗದ್ದೆಯ ಕೆಳಗೆ ಬಡಗಲು ಎರೆ, ಕಮ್ಮ-೨೨೦ ಎಂದಿದೆ. ಇಲ್ಲಿ ಕಪ್ಪುರ ಕೆರೆಯ ಎಂದರೆ ಕಪ್ಪು ಭೂಮಿಯ ಕೆರೆ ಎಂದಾಗುತ್ತದೆ.[೮] ಇದರಂತೆಯೇ ಪಡುವಣ ಗದ್ದೆಯ ಕೆಳಗೆ ಅಂದರೆ ಪಶ್ಚಿಮ ದಿಕ್ಕಿನ ಕಡೆಗಿರುವ ಗದ್ದೆಯನ್ನು ಎಂದಾಗುತ್ತದೆ. ಇವರಲ್ಲಿಯೇ ಬಡಗಲು ಎರೆ ಎಂದಿವೆ. ಎರೆ ಎಂದರೆ ಕಪ್ಪು ಭೂಮಿ ಎಂದಾಗುತ್ತದೆ. ದಕ್ಷಿಣದ ಕಡೆಗಿರುವ ಕಪ್ಪುಭೂಮಿಯನ್ನು ೨೨೦ ಕಮ್ಮ ದಾನ ನೀಡಿರುವುದು ಎಂದು ಕಂಡುಬಂದಿದೆ.[೯] ಇವೆಲ್ಲವು ದೇವರಿಗೆ ಕೆರೆಯನ್ನು, ಗದ್ದೆಯನ್ನು ದಾನ ನೀಡಿದುದನ್ನು ತಿಳಿಸುತ್ತವೆ. ಈ ಶಾಸನದಲ್ಲಿ ದೇವರ ಹೆಸರಿನಲ್ಲಿ ಕೆರೆಗಳನ್ನು ದಾನ ನೀಡಿದುದು ಕಂಡುಬರುತ್ತದೆ. ಮೂಡಲ ನಾರಣೋರ್ಝುರ ಕೆರೆ, ಶಂಕರೋರ್ಝುರ ಕೆರೆ ಎಂದು ಉಲ್ಲೇಖವಾಗಿದೆ.[೧೦]

[illegible]

ಇವು ದೇವರ ಕಾರ್ಯಗಳಿಗೆ ಮಾತ್ರ ಉಪಯೋಗವಾಗುತ್ತಿದ್ದವು. ಆದರೆ ಇಲ್ಲಿ 'ಓಜ' ಎಂಬ ವಿಶೇಷಣವಿರುವುದರಿಂದ, ಶಾಸನ ಶಿಲ್ಪಿಗಳ ಹೆಸರು 'ಓಜ' ಎಂಬ ವಿಶೇಷಣದಿಂದ ಕೂಡಿವೆ. ಉದಾಹರಣೆಗೆ 'ಚನ್ನೋಜ', 'ಪಂಪೋಜ' ಹೀಗೆ ಬರುವುದರಿಂದ, ದೇವರೆಂದು ನಂಬಿದ ಪ್ರಜೆಗಳು ಇವರನ್ನು ಸಹ ಪೂಜಿಸುತ್ತಿದ್ದರು. ಆದ್ದರಿಂದ ಶಂಕರೋಜ, ನಾರಾಯಣೋಜರು ಶಿಲ್ಪಿಗಳಾಗಿರಬಹುದೇ? ಅಥವಾ ಆ ಕೆರೆಗಳಲ್ಲಿ ಯಾವುದಾದರೂ ವಿಗ್ರಹ ಸಿಕ್ಕಿರಬಹುದಾದರೆ ಅದನ್ನು ಶಂಕರ, ನಾರಾಯಣ ಎಂದು ಕರೆದಿರಬಹುದು. ಇದರಿಂದ ಇವುಗಳನ್ನು ಶಂಕರೋಝುರ ಕೆರೆ, ನಾರಾಯಣೋಝುರ ಕೆರೆ ಎಂದು ಕರೆದಿರಬಹುದು.

ಇನ್ನು ಕೆಲವು ಗ್ರಾಮಗಳ ಹೆಸರಿನಲ್ಲಿ ಕೆರೆಯನ್ನು ಸೂಚಿಸುವುದು ಕಂಡುಬರುತ್ತದೆ. ಅರಸಿಕೆರೆ ಭೂಮಿ, ಜವಲಕೆರೆಯ ಕೊಳ, ಹೊಸಕೆರೆ, ತಂಬುಲಗೆರೆ ಎಂದು ಉಲ್ಲೇಖವಾಗಿವೆ.[೧೧] ಅರಸಿಕೆರೆಯ ಭೂಮಿ ಇದು ಹರಪನಹಳ್ಳಿ ತಾಲೂಕಿನ ಒಂದು ಗ್ರಾಮ ಇದರ ಹೆಸರೇ ಅರಸಿಕೆರೆ. ಇದು ಮೊದಲು ಬಾಗಳಿ ಗ್ರಾಮಕ್ಕೆ ಒಳಪಟ್ಟಿತ್ತು. ಈ ಹೆಸರಿನ ಕೆರೆಯೂ ಇದೆ. ಬಾಗಳಿಯ ಸೀಮೆಯನ್ನು ಗುರುತಿಸುವಾಗ, ಅರಸಿಕೆರೆಯ ಭೂಮಿ ಎಂದು ಗುರುತಿಸುತ್ತಿದ್ದರು. ಆದ್ದರಿಂದ ಅರಸಿಕೆರೆಯ ಭೂಮಿ ಎಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ.[೧೨] ತಂಬುಲಗೆರೆಯಗದ್ದೆ -ಇದು ಹಿರೇಹಡಗಲಿಯ ತುಂಬಿನಕೆರೆ. ಇದು ಕೆರೆಯ ಪಕ್ಕಕ್ಕೆ ಹೊಂದಿಕೊಂಡ ಚಿಕ್ಕ ಗ್ರಾಮ. ಇದು ಮೊದಲು ಬಾಗಳಿಯ ಗ್ರಾಮಕ್ಕೆ ಒಳಪಟ್ಟಿತ್ತು. ಈ ಹೆಸರಿನ ಕೆರೆ ಬಾಗಳಿಯಲ್ಲಿ ಕಂಡುಬರುತ್ತದೆ. ಇಲ್ಲಿ ತಂಬುಲಕೆರೆಯ ಗದ್ದೆ-೧೦೦ ಕಮ್ಮ ನಷ್ಟು ದಾನ ನೀಡಬೇಕೆಂದು ಉಲ್ಲೇಖಬರುತ್ತದೆ. ಇದರಂತೆ ಜವಲಕೆರೆ, ಹೊಸಕೆರೆ ಎಂಬ ಕೆರೆಗಳ ಹೆಸರುಗಳು ಕಂಡುಬಂದಿದೆ.

ಇನ್ನು ಕೆಲವು ವ್ಯಕ್ತಿಯ ಹೆಸರಿನಲ್ಲಿ ಕೆರೆಗಳನ್ನು ದಾನನೀಡಿರುವುದು ಕಂಡುಬರುತ್ತದೆ. ಮಾಚಿಸೆಟ್ಟಿಯ ಕೆರೆ, ಅಬ್ಬೆಯ ದಾಸೆಯನಾಯಕನ ಕೆರೆಗೆ(ಒಂದು) ವಡ್ಡವೀರನ ಕೆರೆ ಎಂದು ಉಲ್ಲೇಖಗಳಿವೆ.[೧೩] ಆದರೆ ಇವುಗಳ ವಿವರ ಸರಿಯಾಗಿ ನೀಡುವುದು ಕಠಿಣದಾಯಕ. ಏಕೆಂದರೆ ಕೆರೆಗಳ ಜೊತೆಗೆ ವ್ಯಕ್ತಿ ಹೆಸರನ್ನು ಉಲ್ಲೇಖಿಸುವುದರಿಂದ ಅವನು ಕೆರೆಯನ್ನು ದಾನನೀಡಿದನೋ, ಕೆರೆಯನ್ನು ಕಟ್ಟಿಸಿದನೋ ಎಂಬುವುದು ಸ್ಪಷ್ಟವಿಲ್ಲವಾದ್ದರಿಂದ ಹೀಗೆ ಹೇಳಲಾಗಿದೆ. ಹಾಗೆಯೇ ದೇವರಿಗೆ ಮಾನ್ಯಮಾಡಿದ(ನೀಡಿದ) ಕೆಲವು ಕೆರೆ, ಗದ್ದೆಗಳ ಉಲ್ಲೇಖ ಕಂಡುಬಂದಿದೆ. ಈ ಶಾಸನದಲ್ಲಿ ಬಾಗಳಿಯ ಚಿಕಗೌಡನೆಂಬುವನಿಗೆ ಮಹಾಜನರು ಕೆರೆಗಳನ್ನು ಮಾನ್ಯ ಮಾಡಿದರೆಂದು ಬಂದಿದೆ.[೧೪] ಹೊಸವೂರ ಕೆರೆಯನ್ನು ಚಿಕಗೌಡಂಗೆ ಕೆರೆ ಮಾನ್ಯ ಮಾಡಿದರು. ಬಾಚಗೌಡನಿಗೆ ಹಿರಿಯ ಕೆರೆ ಮಾನ್ಯ ಮಾಡಿದರು. ಹೀಗೆ ಧರ್ಮದಿಂದ ಬಾಗಳಿಯ ಮಹಾಜನರು ಗೌಡರಿಗೆ(ದಾನ) ಮಾನ್ಯ ನೀಡಿದರೆಂದರೆ, ಅವರು ದೇವರ ಪೂಜಾರಿ ಅಥವಾ ದೇವರ

[illegible]

[illegible]

[illegible]

ಕೆಲಸಗಳನ್ನು ಮಾಡಿಕೊಂಡು ಹೋಗುವ ಧರ್ಮಾಧಿಕಾರಿಗಳಾಗಿರಬೇಕು. ಈ ಶಾಸನದಲ್ಲಿ ಚಿಕ್ಕದೇವಿಯರು, ಹೊಸವೂರ ಕೆರೆಯೊಳಗೆ ಮೂರು ಮತ್ತರು, ಭಾಗದಷ್ಟು ಬೀರಣ್ಣನಿಗೆ ಹಿರಿಯ ಕೆರೆಯನ್ನು ಮಾನ್ಯ ಮಾಡಿದರು.[೧೫] ಇನ್ನು ಈ ಶಾಸನದಲ್ಲಿ 'ಮಿತಿಕೊರಾಯ ಗೋಡನ ಕೆರೆ' ಎಂದಿದೆ.[೧೬] ಇದರ ಅರ್ಥವೇ ಅಸ್ಪಷ್ಟವಾಗಿದೆ. ಇಂತಹ ಕೆರೆಗಳನ್ನು ಮಾನ್ಯ ನೀಡಿದವುಗಳಿಗೆ ಈಗ ಬಾಗಳಿಯಲ್ಲಿ ಸತ್ಯಮಾನ್ಯವು, ನೆತ್ತರ ಮಾನ್ಯವು ಎಂಬ ಹೆಸರಿನಿಂದ ಕರೆಯುತ್ತಾರೆ. ಆದರೆ ಈಗ ಕೆರೆಗಳು ಹೋಗಿ ಗದ್ದೆಗಳಾಗಿವೆ. ಇನ್ನು ಗದ್ದೆಗಳನ್ನು ಇಂತಿಷ್ಟು ಅಳತೆಯೊಂದಿಗೆ ದಾನ ನೀಡಿದ ಉಲ್ಲೇಖಗಳಿವೆ.

ಮೂಡಲ ಬಯಲಗದ್ದೆ-೧೦೦, ಬೆಣಗರ ಕೆರೆಗದ್ದೆ-೧೦೦ರಲ್ಲಿ, ಬಡಗಣ ಭಾಗದ ತೋಟದ ಭೂಮಿಯೊಳಗೆ-೬೦ ಮತ್ತು ಬಾಗಳಿ ಮೊದಲಾಗಿ ಹನ್ನೆರಡು ಹಳ್ಳಿಯನ್ನು ಮಾರಿದನೆಂದನೆಂದು ಕಂಡುಬರುತ್ತದೆ. ಆದರೆ ಯಾರು ಎಂದು ತಿಳಿದುಬರುವುದಿಲ್ಲ. ಈ ಶಾಸನದಲ್ಲಿ ಕಪ್ಪು ಕೆರೆಯ ಗದ್ದೆ-೧೩೦ ಕಮ್ಮ, ಬೆಗೆಯರ ಕೆರೆಯ ಗದ್ದೆ-೧೫೦ ಕಮ್ಮ, ಕಂಚಿಮೆಯ ಕೆರೆಯ ಗದ್ದೆ-೧೫೦ ಕಮ್ಮ ಎಂದು ಬಂದಿದೆ.[೧೭] ಇವೆಲ್ಲವೂ ದೇವರಿಗೆ ದಾನ ನೀಡಿದವುಗಳು. ಈಗ ಗದ್ದೆಗಳನ್ನು ಇಂತಹ ಹೆಸರುಗಳಿಂದ ಕರೆಯುತ್ತಾರೆ. ಆದರೆ ಕೆಲವೊಂದು ಗದ್ದೆಗಳಿಗೆ 'ಪಟ್ಟಿ' ಎಂತಲೂ ಕರೆಯುತ್ತಾರೆ. ಹೊರಪಟ್ಟಿ, ಕಂಬ(ಮ್ಮ)ತ್ ಪಟ್ಟಿ, ಹೊನ್ನನಾಯಕನಪಟ್ಟಿ, ಕಪ್ಪೆಗುಂಡಿ, ವಡಕಿನಗದ್ದೆ, ಹೊರಳ ಗದ್ದೆ, ಹೂವಿನ ಪಟ್ಟಿ, ತೋಟದ ಗದ್ದೆ, ಗದ್ದಿನಾಯಕನ ಪಟ್ಟಿ, ಬಾಳಕಟ್ಟಿ, ಗಾಳೆಕಟ್ಟಿ, ಗಚ್ಚದ ಕೆರೆ, ದನದೋಣಿ ಎರೆ,(ಕಪ್ಪುಪಟ್ಟಿ) ಮಳೆದೆರೆ, ಸುಣ್ಣದ ಗುಂಡಿಕೆರೆ, ಸುಣ್ಣದಕಲ್ಲು, ಅಂಚಿನ ಮನೆ ಎರೆ, ಕೆಂಗಲು, ಹೀಗೆ ಇಂತಹ ಹೆಸರುಗಳಿಂದ ಕರೆಯಲಾಗಿದೆ. ಈ ಶಾಸನಗಳಲ್ಲಿ 'ದೋಸವೂರ' ಕೆರೆ ಮತ್ತು 'ಕಟ್ಟಳ್ಳಿಕೆರೆ' ಎಂದು ಉಲ್ಲೇಖವಾಗಿದೆ.[೧೮] ಆದರೆ ಅರ್ಥ ಸ್ಪಷ್ಟವಿಲ್ಲ. ಈ ಶಾಸನದಲ್ಲಿ ಬಡಕಿಯ ಕಟ್ಟೆಯ ಕೆಳಗೆ ಬಿಟ್ಟ ಭೂಮಿ-೨೦೦ ಕಮ್ಮ ಎಂದು ಬಂದಿದೆ.[೧೯] ಮೇಲೆ ಹೇಳಿದ ವಡಕಿನಗದ್ದೆಯೆ ಬಡಕಿನಕಟ್ಟೆಯಾಗಿರಬಹುದು. ಅಂದರೆ ಬಡಕಿಯಕಟ್ಟೆಯ, ಈಗಿನ ಹೆಸರು ವಡಕಿನ ಗದ್ದೆಯಾಗಿದೆ. ಈಗ ಬಾಗಳಿಯಲ್ಲಿ 'ಕಟ್ಟೆ' ಎಂಬ ಪದಕ್ಕೆ ಪರ್ಯಾಯವಾಗಿ ಗದ್ದೆ ಎಂದು ಕರೆಯುತ್ತಾರೆ. ಈ ಎಲ್ಲಾ ಕೆರೆ, ಗದ್ದೆಗಳನ್ನು ಕೆಯ್, ಕಮ್ಮ, ಮತ್ತರು, ವೀಸ, ಹಾಗ ಇಂತಹ ಅಳತೆ ಸಾಧನೆಗಳಿಂದ ದಾನ ನೀಡಿರುವುದು ಉಲ್ಲೇಖವಾಗಿದೆ.[೨೦] ಇಂತಹ ಕೆರೆ, ಗದ್ದೆಗಳಿಂದ ಹೂತೋಟವನ್ನು ನಿರ್ಮಿಸುತ್ತಿದ್ದರು. ದೇವಾಲಯಗಳಲ್ಲಿ (ವೃ) ವೃತ್ತಿಯಾಗಿ ಬಿಟ್ಟತೋಟಗಳಲ್ಲಿ ದೇವರ ಪೂಜೆಗೆ ಹೂವುಗಳನ್ನು ಬೆಳೆಯಲಾಗು ತ್ತಿತ್ತು. ಕೆಲವರು ದೇವರ ಪೂಜೆಗಾಗಿ ಮಾತ್ರ ಹೂತೋಟವನ್ನು ದಾನ ಬಿಟ್ಟ ಉಲ್ಲೇಖಗಳು ಬಂದಿವೆ.[೨೧] ಈಗಲೂ ಸಹ ದೇವರ ಹೂದೋಟವೆಂದೆ ಕರೆಯುತ್ತಾರೆ. ಆ ತೋಟದಲ್ಲಿ ಬಿಟ್ಟ ಹೂವುಗಳನ್ನು ದೇವರಿಗೆ ಮಾತ್ರ ಸಲ್ಲಿಸಬೇಕು. ಬೇರೆಯವರು ಕೀಳಬಾರದು, ಮುಟ್ಟಬಾರದು ಎಂದು ಹೇಳಲಾಗುತ್ತಿತ್ತು. ಈಗ ಇವುಗಳನ್ನು ಹೂವಿನ ಪಟ್ಟಿ, ಹೂಗಾರ ಪಟ್ಟಿ ಎಂದು ಕರೆಯುತ್ತಾರೆ.

ಈ ಶಾಸನದಲ್ಲಿ ಹೂವಿನ ತೋಟಕ್ಕೆ ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ.೧೧೦೩ರ ಶಾಸನದಲ್ಲಿ ಹೂವಿನ ತೋಟಕ್ಕೆ ಎರಡು ಪಣವನ್ನು ಬಿಟ್ಟರು ಎಂದು ಬಂದಿದೆ.[೨೨] ಅಂದರೆ ಹೂದೋಟಗಳನ್ನು ಮಾಡುವವರು ದೇವಸ್ಥಾನಕ್ಕೆ ಇಷ್ಟು ಹೂಗಳನ್ನು ಕೊಡಬೇಕೆಂದು ನಿಯಮ ಮಾಡಲಾಗಿತ್ತು.

ಇನ್ನು ಕೆಲವು ಶಾಸನಗಳಲ್ಲಿ ಕೆರೆ, ಗದ್ದೆಗಳಲ್ಲಿ, ಸ್ತ್ರೀ(ಯರ) ಹೆಸರುಗಳನ್ನು ಉಲ್ಲೇಖಿಸಿವೆ. ಕೆಂಚವ್ವ ಕೆರೆಯಗದ್ದೆ, ಕಂಚಿಮಯ ಕೆರೆ, ಬೆಗೆಯರ ಕೆರೆಯ ಗದ್ದೆ-೧೫೦ ಮತ್ತರನ್ನು(ರಷ್ಟು) ದೇವರಿಗೆ ದಾನ ನೀಡಬೇಕು. ಅದು ಕೆರೆಯಾಗಿರಬಹುದು, ಗದ್ದೆಯಾಗಿರಬಹುದು. ಆದರೆ ಹೆಚ್ಚಾಗಿ ಗದ್ದೆಯನ್ನು ಬಿಡಬೇಕೆಂದು ಕಂಡುಬರುತ್ತದೆ.[೨೩] ಏಕೆಂದರೆ ಕೆರೆಯಿಂದ ನೀರನ್ನು ಪೈಪ್ ಲೈನ್ ಮುಖಾಂತರ ಒಣಭೂಮಿಗೆ ಬಳಸಿಕೊಂಡು ಗದ್ದೆ ಮಾಡುವುದು, ಹೆಚ್ಚು ಈ ಭಾಗದಲ್ಲಿ ಕಂಡುಬರುವುದರಿಂದ ಅವುಗಳಲ್ಲಿ ಕೆರೆಯ ಹೆಸರನ್ನು ಉಪಯೋಗಿಸಿಕೊಂಡು ಗದ್ದೆ ಎಂದು ಕರೆಯುತ್ತಾರೆ. ಅಂದರೆ ಕೆರೆಯ ಹೆಸರನ್ನೇ ಗದ್ದೆಗೆ ಬಳಸುವುದು.

ಹೀಗೆ ಕೆರೆಗಳ ಹೆಸರುಗಳನ್ನು ಇಲ್ಲಿಯ ಶಾಸನಗಳು ನಾನಾ ರೀತಿಯಾಗಿ ಉಲ್ಲೇಖಿಸಿವೆ. ಕೆರೆಗಳ ಹೆಸರನ್ನು ಬಿಟ್ಟರೆ ಅದರಲ್ಲಿನ ನೀರಿನ ಪ್ರಮಾಣ, ಅದರ ಉದ್ದಳತೆ, ನೀರಾವರಿ ಉಪಯೋಗದ ವಿಧಾನ ಇತ್ಯಾದಿಗಳ ಬಗ್ಗೆ ಶಾಸನಗಳು ಯಾವ ಮಾಹಿತಿಯನ್ನು ಒದಗಿಸುವುದಿಲ್ಲ. ಕೆಲವುಗಳಲ್ಲಿ ಕೆರೆಗಳ ಅಳತೆಗಿಂತ, ಗದ್ದೆಗಳ ಅಳತೆಯನ್ನು ಮತ್ತರುಗಳಲ್ಲಿ ಗುರುತಿಸಲಾಗಿದೆ. ಕೆಲವೊಂದು ಗ್ರಾಮಗಳಿಗೆ (ಹರಪನಹಳ್ಳಿಯ ಸುತ್ತಲೂ) ಈಗಲೂ 'ಕೆರೆ'ಯೆಂಬ ಪದದೊಂದಿಗೆ, ಕೇರೆ, ಗೇರೆ, ಕೆರೆ ಎಂಬ ಹೆಸರುಗಳಿರುವುದು ಕಂಡುಬರುತ್ತದೆ. ಅರಸಿಕೆರೆ, ಹಿಕ್ಕಿಂಗೇರೆ, ಕಂಚಿಕೆರೆ, ನಿಂಬಳಗೇರೆ, ಅಳಿಗಂಚಿಕೆರೆ ಹೀಗೆ ಮುಂತಾದವುಗಳನ್ನು ಕಾಣಬಹುದಾಗಿದೆ. ಇನ್ನು ಬೆದ್ದಲು ಭೂಮಿಗಳಲ್ಲಿ ಆಹಾರ ಧಾನ್ಯ ಮತ್ತು ಪ್ರಮುಖ ಬೆಳೆಯನ್ನು ಬೆಳೆಯುತ್ತಿದ್ದರೆಂದು ಕಂಡುಬರುತ್ತದೆ. ಈ ಶಾಸನದಲ್ಲಿ ನೆಲ್ಲನ್ನು ಬೆಳೆಯುತ್ತಿದ್ದರೆಂದು ತಿಳಿಸುತ್ತದೆ.[೨೪] (ಇದು ವಾಣಿಜ್ಯ ಬೆಳೆಗಳಲ್ಲಿ ಒಂದಾಗಿದೆ) ಈ ಶಾಸನದಲ್ಲಿ 'ತಲೆವೊರಿಗೆ ಬೇಳೆ' ಎಂದಿದೆ.[೨೫] ಪ್ರಾಯಶಃ ಇದು ಭೂಮಿಯನ್ನು ಮಾಡಿಕೊಂಡು ಹೋಗುವವರಿಗೆ, ತಲೆಗೊಂದು ಬೆಳೆಯನ್ನು ಕೊಡುತ್ತಿರಬೇಕು. ಇಲ್ಲಿ 'ಬೇಳೆ' ಎಂದರೆ ಯಾವುದಾದರೂ 'ಬೆಳೆ' ಅಥವಾ 'ಧಾನ್ಯ'ಗಳಾಗಿರಬಹುದು. ಹೀಗೆ ಪ್ರಾಚೀನಕಾಲದಲ್ಲಿ ಕೆರೆ, ಗದ್ದೆಗಳಿಂದ ಭೂಮಿ ಸಮೃದ್ಧವಾಗಿತ್ತೆಂದು ಎಂದು ಶಾಸನಗಳಿಂದ ತಿಳಿದುಬರುತ್ತದೆ.

ಭೂಮಿಯ ಉಳುಮೆಗೆ(ವ್ಯವಸಾಯಕ್ಕೆ) ಮೂಲ ಶ್ರಮ ದನಕರುಗಳು. ಮಾನವನೊಂದಿಗೆ ಪ್ರಾಣಿಗಳ ಸಂಬಂಧ ಮಹತ್ವವಾದುದು. ವ್ಯವಸಾಯದ ಜೊತೆಗೆ ಎರಡು ಉದ್ಯಮಗಳು ಎಂದು ಹೇಳಬಹುದು ಪಶುಪಾಲನೆ ಮತ್ತು ಕುರಿಸಾಕಣೆ ಪ್ರಾಚೀನ ಮತ್ತು ಮಧ್ಯಕಾಲದಲ್ಲಿಯೂ ಕಂಡುಬರುತ್ತದೆ. ಇವುಗಳ

ಸಾಕಣೆಯ ಜೊತೆಗೆ, ಸಂರಕ್ಷಣೆಯೂ ಅಷ್ಟೆ ಮುಖ್ಯವಾದುದು. ಶಾಸನಗಳಲ್ಲಿ ಗೋವುಗಳನ್ನು ಅಪಹರಿಸುತ್ತಿದ್ದರೆಂದು ಉಲ್ಲೇಖಗಳು ಕಂಡುಬರುತ್ತವೆ. ಇಂಥ ಸಮಯದಲ್ಲಿ ಅವುಗಳನ್ನು ಸಂರಕ್ಷಿಸುವುದು ಆಯಾ ಊರಿನ ಜನರ ಪ್ರಮುಖ ಕರ್ತವ್ಯ ಆಗಿತ್ತು. ಇವುಗಳ್ನು ಶಾಸನಗಳಲ್ಲಿ 'ತುಱುಗೋಳ್' ಎಂದು ಕರೆಯಲಾಗಿದೆ. ಇಲ್ಲಿಯ ಶಾಸನಗಳಲ್ಲಿ ತುರುಗೋಳ್ ಶಾಸನಗಳು ಕಂಡುಬರುತ್ತವೆ. ವೀರಗಲ್ಲುಗಳಲ್ಲಿ ಕೆಲವೊಂದು ಗೋವುಗಳನ್ನು ಬಿಡಿಸಿಕೊಳ್ಳುವ ಚಿತ್ರಣವನ್ನು ಕಾಣಬಹುದಾಗಿದೆ.[೨೬] ಇಂತಹ ಚಿತ್ರಣವನ್ನು ಇಲ್ಲಿ ಮೂರು ಕಲ್ಲಿನಲ್ಲಿ ನೋಡಬಹುದು. ಇವುಗಳಿಂದ ಪ್ರಾಣಿಗಳು ಮತ್ತು ಮನುಷ್ಯರ ಸಂಬಂಧ ಮೊದಲಿನಿಂದಲೂ ಇತ್ತು ಎಂಬುದನ್ನು ತಿಳಿಯಬಹುದಾಗಿದೆ. ಆದರೆ ಪ್ರಾಣಿಗಳನ್ನು ಅಪಹರಿಸಿದವರಿಗೆ ಪಾಪ ಬರುತ್ತದೆ ಎಂಬುದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಆದರೂ ಸಹ ಗೋವುಗಳನ್ನು ಅಪಹರಿಸುತ್ತಿದ್ದರು. ಶಾಸನಗಳಲ್ಲಿ ಹೆಚ್ಚಾಗಿ ಪಾಪದ ಮಾತುಗಳು ಶಾಸನಗಳ ಫಲಶೃತಿಯಲ್ಲಿ ಉಲ್ಲೇಖವಾಗಿರುತ್ತವೆ.[೨೭] ಅಂದರೆ ಗೋವುಗಳನ್ನು ಅಪಹರಿಸಬಾರದು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಹೀಗೆ ಪ್ರಾಣಿಗಳಿಗೂ ಸಹ ಮನುಷ್ಯನೊಂದಿಗೆ ನಿಕಟ ಸಂಬಂಧವಿತ್ತೆಂದು, ಮತ್ತು ಅವುಗಳ ಪಾತ್ರ ಯುದ್ಧದಲ್ಲಿಯೂ ಸಹ ಮುಖ್ಯವಾಗಿತ್ತೆಂದು ಕಂಡುಬರುತ್ತದೆ. ಹಾಗೆಯೇ ವ್ಯವಸಾಯಕ್ಕೂ, ನೀರಾವರಿ ಕೆಲಸಗಳಲ್ಲಿ ಪ್ರಾಣಿಗಳನ್ನು ದುಡಿಸಿಕೊಳ್ಳುತ್ತಿದ್ದರೆಂದು ತಿಳಿಯುತ್ತದೆ. ಹೀಗೆ ವ್ಯವಸಾಯದಿಂದ ಗಳಿಸಿದ ಲಾಭವನ್ನು ವ್ಯಾಪಾರ ಮಾಡುವುದು ಆ ಜನರ ಆರ್ಥಿಕ ಅವಲಂಬನೆಯಾಗಿತ್ತು.

ಉತ್ಪಾದನೆ ಮತ್ತು ವ್ಯವಹಾರ-ಕೈಗಾರಿಕೆಗಳು

ಆರ್ಥಿಕ ವ್ಯವಸ್ಥೆಯಲ್ಲಿ ವ್ಯವಸಾಯಕ್ಕಿರುವಷ್ಟು ಪ್ರಾಮುಖ್ಯತೆ ಕೈಗಾರಿಕೆಗಳು ಪಡೆದಿವೆ. ಕಚ್ಚಾ ಸಾಮಗ್ರಿಗಳನ್ನು ಒಂದು ಶುದ್ಧ ರೂಪದಲ್ಲಿ ತರುವುದೇ ಕೈಗಾರಿಕೆಗಳು. ಇಂತಹ ಉತ್ಪಾದನೆಯನ್ನು ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ನೋಡಲಾಗಿದೆ.

ಎಣ್ಣೆ ತಯಾರಿಕೆ : ಪ್ರಾಚೀನ ಕಾಲದಿಂದಲೂ ಉಪಯೋಗಿಸುತ್ತಿದ್ದ ಪ್ರಮುಖ ಕೈಗಾರಿಕೆಗಳಲ್ಲಿ ಗಾಣದೆಣ್ಣೆಯೂ ಒಂದು. ದಿನನಿತ್ಯದ ಬದುಕಿಗೆ ಅವಶ್ಯಕವಾದ ಎಣ್ಣೆಯ ಉತ್ಪಾದನೆ ಹೆಚ್ಚುತ್ತಾ ಬಂದಿತ್ತು. ಇದನ್ನು ಆಹಾರಕ್ಕೆ, ಪದಾರ್ಥಗಳಿಗೆ ನಂದಾದೀವಿಗೆಗೆ ಉಪಯೋಗಿಸುತ್ತಿದ್ದರು. ಇಂತಹ ಎಣ್ಣೆ ತಯಾರಿಸುವವರನ್ನು ಶಾಸನಗಳಲ್ಲಿ ಗಾಣಿಗ, ತೆಲ್ಲಿಗ ಎಂದು ಕರೆಯಲಾಗಿದೆ.[೨೮]

ಅಂದರೆ ಬಾಗಳಿಯಲ್ಲಿಯೂ ಸಹ ಪ್ರಾಚೀನ ಕಾಲದಲ್ಲಿ ಗಾಣದೆಣ್ಣೆಯನ್ನು ತಯಾರಿಸಿದ ಗಾಣಿಗರು ಮತ್ತು ಎಣ್ಣೆ ತಯಾರಿಕೆಯ ಯಂತ್ರವಿತ್ತೆಂದು ಕಂಡುಬರುತ್ತದೆ. ತಯಾರಿಸಿದ ಎಣ್ಣೆಯನ್ನು ದೇವಾಲಯದ ಪೂಜಾಕಾರ್ಯಗಳಿಗೆ ಮತ್ತು ದಿನ ಬಳಕೆಯ ವಸ್ತುವನ್ನಾಗಿ ಮಾರುತ್ತಿದ್ದರು. ಒಂದು ಶಾಸನ ಗಾಣವಾರಿ, 'ಗಾಣಪ್ರತಿ' ಎಂದು ಉಲ್ಲೇಖಿಸುತ್ತದೆ.[೨೯] ಅಂದರೆ ಗಾಣಿಗರೇ ದೇವರಿಗೆ ಎಣ್ಣೆಯನ್ನು ದಾನ ಬಿಡಬೇಕು

ಎಂದು ತಿಳಿಸುತ್ತಿರಬೇಕು. ಇನ್ನೊಂದು ಶಾಸನದಲ್ಲಿ ಗಾಣನೆರೆ ಹದಿನಾಲ್ಕು ಕೊಟ್ಟುರು ಎಂದು ಬರುತ್ತದೆ.[೩೦] ಇದು ಎಣ್ಣೆಯನ್ನು ತಯಾರು ಮಾಡುವವನಿಗೆ ಹದಿನಾಲ್ಕು ಭಾಗದಷ್ಟು ಎಣ್ಣೆ ಅಥವಾ ಭೂಮಿಯನ್ನಾದರೂ ಬಿಡಬೇಕು. ಹೀಗೆ ಇಲ್ಲಿಯ ಕೆಲವೊಂದು ಶಾಸನಗಳಲ್ಲಿ ಇಂತಹ ಉಲ್ಲೇಖಗಳು ಕಂಡುಬರುತ್ತವೆ. ಇನ್ನು ಕೆಲವುಗಳಲ್ಲಿ 'ಧನದಾನ್ಯಂಗಳು' ಎಂದು ಉಲ್ಲೇಖ ಬಂದಿದೆ.[೩೧] ಹಣದ ಜೊತೆಗೆ ದಾನ್ಯಗಳನ್ನು ದಾನ ನೀಡುತ್ತಿದ್ದರೆಂದು, ಇವುಗಳ ಉತ್ಪಾದನೆ ಮತ್ತು ವ್ಯವಹಾರವೂ ಅಷ್ಟೇ ಪ್ರಮುಖವಾಗಿತ್ತೆಂದು ತಿಳಿಸಲಾಗಿದೆ.

ಹೀಗೆ ಪ್ರತಿಯೊಂದು ಮೂಲದಿಂದ ಬಂದ ಲಾಭವನ್ನು ವ್ಯವಹಾರ ಮಾಡುವುದು, ಅವುಗಳನ್ನು ಬೇರೆಡೆಗೆ ಸಾಗಿಸುವುದು ವರ್ತಕರ ಕೆಲಸವಾಗಿತ್ತು. ಒಂದರ್ಥದಲ್ಲಿ ವ್ಯಾಪಾರಿಗಳನ್ನು ವರ್ತಕರು ಎಂದೇ ಕರೆಯಲಾಗಿದೆ.

ವರ್ತಕರು

ವ್ಯಾಪಾರವನ್ನು ವೃತ್ತಿಯಾಗಿಸಿಕೊಂಡವರು ವರ್ತಕರು. ಇವರಲ್ಲಿಯೂ ಅನೇಕ(ಪ್ರಕಾರ) ಪಂಗಡಗಳಿದ್ದವು. ಬಣಜಿಗ, ಸೆಟ್ಟಿ, ಸೆಟ್ಟಿಗುತ್ತ, ವಡ್ಡವ್ಯವಹಾರಿ, ನಾನಾದೇಶಿ, ಉಭಯನಾನಾದೇಶಿ, ಸಾಸಿರ್ವರು, ಪಂಬುಲಿಗರು, ಅಯ್ಯಾವೊಳೆ ಐನೂರ್ವರು ಹೀಗೆ ಮೊದಲಾದವುಗಳನ್ನು ಹೆಸರಿಸಬಹುದು.

ಇಲ್ಲಿ ಬರುವ ಶಾಸನಗಳು 'ಸೆಟ್ಟಿ ಬಣಂಜಿಗೆ' ಎಂದು ಉಲ್ಲೇಖಿಸಿವೆ.[೩೨] ಸಂಸ್ಕೃತದ 'ವಣಜ'-'ಶ್ರೇಷ್ಟನ್' ಪದಗಳ ಕನ್ನಡ ರೂಪ, 'ಬಣಂಜಿಗ' ಎಂದು 'ಸೆಟ್ಟಿ' ಎಂದು ಕರೆಯಲಾಗಿದೆ. 'ವಣಿಜ' ವೃತ್ತಿ ಸೂಚಿಯಾದರೆ 'ಸೆಟ್ಟಿ' ಪ್ರತಿಷ್ಠಸೂಚಿ ಎಂದು ಹೇಳಬಹುದು. ಕ್ರಮೇಣ ಈ ಎರಡು ಪದಗಳು ವೃತ್ತಿವಾಚಿಯಾಗಿ ಬೆಳೆದವು. ಇಲ್ಲಿಯ ಒಂದು ಶಾಸನದಲ್ಲಿ ಮದ್ದೂರ ಬಾದಿಸೆಟ್ಟಿಯುಂ, ಹಾನಂಗಲ್ಲ ಕೊಸಗಿ ಸೆಟ್ಟಿಯಂ, ಹಮ್ಮಕ್ಕ ಬಮ್ಮಿಸೆಟ್ಟಿಯಂ, ತಳದ ಗಾತ್ರದ ಸೆಟ್ಟಿಗಳು ಎಂದು ಉಲ್ಲೇಖಿಸುತ್ತದೆ.[೩೩] ಕೆಲವುಗಳಲ್ಲಿ ಗವರೆ-ಗಾತ್ರಿಗ' ಎಂದು ಬರುತ್ತದೆ. ಇವರು ಆಯಾ ಗ್ರಾಮದ ಪ್ರಮುಖ ವ್ಯಾಪಾರಿಗಳು ಎಂದು ಕರೆಯಲಾಗಿದೆ. ಏಕೆಂದರೆ ಹೆಸರಿನ ಹಿಂದೆ ಊರಿನ ಹೆಸರುಗಳು ಉಲ್ಲೇಖವಾಗಿರುವುದು ಕಂಡುಬಂದಿದೆ. ಆದರೆ ಇವರು ಯಾವ ವ್ಯಾಪಾರಿಗಳು ಅಥವಾ ವರ್ತಕರೆಂದು ತಿಳಿದುಬರುವುದಿಲ್ಲ. ಈ ಶಾಸನದಲ್ಲಿ ಸಿದ್ದಿಸೆಟ್ಟಿ, ಸೋಭನಯ್ಯ, ಮಲ್ಲಯ್ಯಸೆಟ್ಟಿ ಎಂದು ಉಲ್ಲೇಖಬರುತ್ತದೆ.[೩೪] ಇವರು ಬಾಗಳಿಯ ವರ್ತಕರಲ್ಲಿ ಪ್ರಮುಖರು ಎಂದು ಹೇಳಬಹುದಾಗಿದೆ. ಇನ್ನೊಂದು ಶಾಸನದಲ್ಲಿ ಬಾಗುಳಿಯ ಪಟ್ಟಣಸ್ವಾಮಿ ಲಕ್ಕಿಸೆಟ್ಟಿಯರ ಮಗ ಮತ್ತು ಲಿಂಗಿಸೆಟ್ಟಿಯರು ಎಂದಿದೆ.[೩೫] ಇವರು ಮುಖ್ಯ ವ್ಯಾಪಾರಸ್ಥರಾಗಿದ್ದು, ಹೆಚ್ಚು ಭತ್ತವನ್ನು ಉತ್ಪಾದಿಸುತ್ತಿದ್ದರೆಂದು ಕಂಡುಬರುತ್ತದೆ. ಆದ್ದರಿಂದ ಇವರನ್ನು

ಅಕ್ಕಿ ವ್ಯಾಪಾರಿಗಳೆಂದು ಗುರುತಿಸಬಹುದು. ಇನ್ನು ಈ ಶಾಸನದಲ್ಲಿ ಚಿನ್ನಗೆಯ ಕಪ್ಪಿ ಸೆಟ್ಟಿಯರು' ಎಂದು ಬರುತ್ತದೆ.[೩೬] ಇವರು ಚಿನ್ನದ ವ್ಯಾಪಾರವನ್ನು ಮಾಡುವವರೆಂದು ತಿಳಿಸುತ್ತದೆ. ಅಂದರೆ ಆಭರಣಗಳನ್ನು (ಮಾಡುವವರು) ಮಾರುವವರು ಎಂದೇ ಹೇಳಬಹುದು. ಹೆಚ್ಚಾಗಿ ಆಭರಣಗಳ ಅಂಗಡಿಗಳು ಸೆಟ್ಟಿಗಳು(ಶೇತ್ರು) ಹೊಂದಿರುತ್ತಾರೆ. ಕೆಲವೊಂದು ಶಾಸನಗಳಲ್ಲಿ ಸೆಟ್ಟಿಯೂ ಸಹ ಆ ಗ್ರಾಮದ ಪ್ರಮುಖ ವ್ಯಕ್ತಿಯಾಗಿರುತ್ತಿದ್ದನೆಂದು ಉಲ್ಲೇಖ ಬರುತ್ತದೆ.[೩೭] ಅಂದರೆ ಯಾವುದೇ ಗ್ರಾಮದಲ್ಲಿಯೂ(ಈಗಲೂ) ಏನಾದರೂ ಪ್ರಮುಖವಾದ ಕಾರ್ಯಗಳು ಜರುಗಬೇಕಾದರೆ ಇವರ ಒಪ್ಪಿಗೆ, ಸಹಾಯ, ಸಹಕಾರ ಬೇಕಾಗುತ್ತದೆ. ಆದ್ದರಿಂದ ಈ ಶಾಸನದಲ್ಲಿ ಚವುಡ ಸೆಟ್ಟಿಯ ನಿರೂಪದಂತೆ ಎಂದು ಉಲ್ಲೇಖಬರುತ್ತದೆ.[೩೮] ಈಗಲೂ ಸಹ ಹಳ್ಳಿಯಲ್ಲಿ ಅಣಕಾರ, ಬಣಕಾರ, ಸೆಟ್ಟಿ, ತಳವಾರ, ಗೌಡ, ಶ್ಯಾನಭೋಗರು ಇರುವುದನ್ನು ಕಾಣಬಹುದು. ಇವರನ್ನು 'ಊರಿನ ದೈವಸ್ಥರೂ' ಎಂದು ಕರೆಯಲಾಗಿದೆ. ಇಂತಹ ಉಲ್ಲೇಖಗಳೂ ಜಿಲ್ಲೆಯ ಅನೇಕ ಶಾಸನಗಳಲ್ಲಿ ಕಂಡುಬರುತ್ತವೆ.

ವಡ್ಡವ್ಯವಹಾರಿ

ಪ್ರಾಚೀನ ಮತ್ತು ಮಧ್ಯಕಾಲೀನ ವರ್ತಕರ ಪ್ರಕಾರಗಳಲ್ಲಿ ವಡ್ಡವ್ಯವಹಾರಿಯೂ ಪ್ರಮುಖವಾಗಿದೆ. ಹಿರಿಯ ವ್ಯಾಪಾರಿ ಎಂಬರ್ಥದಲ್ಲಿ ಇವರನ್ನು ಗುರುತಿಸಲಾಗಿದೆ. (ವಡ್ಡವ್ಯವಹರಿ ಎಂದರೆ, ಅರಸನಿಂದ ನಿಯಮಿತಗೊಂಡ ಬೆಲೆಬಾಳುವ ವಸ್ತುಗಳೂ ಸಗಟುವ್ಯಾಪಾರ ಕೈಗೊಳ್ಳುವವರು ಎಂದರ್ಥ ಕೊಡಲಾಗಿದೆ) ಇಲ್ಲಿಯ ಶಾಸನಗಳಲ್ಲಿ ಇವರನ್ನು ಉಲ್ಲೇಖಿಸುವುದನ್ನು ನೋಡಬಹುದು. ಈ ಶಾಸನದಲ್ಲಿ ಮಹಾವಡ್ಡ ವ್ಯವಹಾರಿ ಕಪ್ಪಿಸೆಟ್ಟಿಯರು ಇದ್ದರೆಂದು ಬಂದಿದೆ.[೩೯] ಇವರದು ವಂಶಪಾರಂಪರಿಕ ಕಸುಬುದಾಯಕ ಮನೆತನವಾಗಿತ್ತು. ಇವನು ಪ್ರಮುಖ ವ್ಯಾಪಾರಿಯಾಗಿದ್ದು, ಯಾವ ವ್ಯಾಪಾರಿಯಾಗಿದ್ದನೆಂದು ತಿಳಿಯುವುದಿಲ್ಲ. ಆದರೆ ಈ ಹಿಂದೆ ಚಿನ್ನಗೆಯ ಕಪಿಸೆಟ್ಟಿಯರು ಎಂದು ಬಂದಿರುವುದರಿಂದ ಇವರು ಪ್ರಾಯಶಃ ಚಿನ್ನದ ವ್ಯಾಪರವನ್ನೇ ಅವಲಂಬಿಸಿರಬಹುದು. ಇಲ್ಲಿ ಮಹಾಮಲೆಯಾಳ ವಡ್ಡವ್ಯವಹಾರಿ ಪೂನ್ಮೂರ್ಖ್ಬ್ಬಿ ಸೆಟ್ಟಿಯು ದೇವರಿಗೆ, ನಂದಾದೇವಿಗೆಗೆ ಹನ್ನೆರಡು ಗದ್ಯಾಣ ದಾನ ನೀಡಿದನೆಂದು ಉಲ್ಲೇಖ ಬರುತ್ತದೆ.[೪೦] ಇವನು ತನಗೆ ಬಂದ ಲಾಭದಲ್ಲಿ ದೇವರಿಗೆ ದಾನ ನೀಡುತ್ತಿದ್ದನೆಂದು ಕಂಡುಬರುತ್ತದೆ. ಶಾಸನದಲ್ಲಿ 'ಪೂನ್ಮೂ(ರ್ಕ)ಖ್ಬ್ಬಿ' ಸೆಟ್ಟಿ ಎಂದಿರುವುದರಿಂದ, ಇದು ಅವನ ಶ್ರೀಮಂತಿಕೆಯನ್ನು ಸೂಚಿಸುವ ಪದವಾಗಿದ್ದು, ಇದನ್ನು ಸರಳ ರೀತಿಯಲ್ಲಿ ಕೊಮರಮೂರ್ಕ್ಕನು ಎಂದು ಹೇಳಬಹುದು. ಇವನ ಪ್ರತಿ ದಿನದ ದೇವರ ನಂದಾದೀವಿಗೆಗೆ ದಾನ ನೀಡಬೇಕೆಂದಿದ್ದನೆಂದು ಕಂಡುಬರುತ್ತದೆ. ಇನ್ನು ಈ ಶಾಸನದಲ್ಲಿ ವಡ್ಡವ್ಯವಹಾರಿಗೆ ಇಂತಿಷ್ಟು ದಾನ ಕೊಡಬೇಕೆಂದು ತಿಳಿದುಬರುತ್ತದೆ.[೪೧] ಅಂದರೆ

ವಡ್ಡವ್ಯವಹಾರಿಗಳಿಗೆ ಮತ್ತು ಅವರ ಕೆಲಸಗಳಿಗೆ ಲಕ್ಷಕ್ಕೆ ಆರು ಪಣದ ಮುಪ್ಪಾಗದಲ್ಲಿ, ಒಂದು ಪಾಗವನ್ನು ಬಿಡುವುದಾಗಿ ಎಂದು ಪ್ರಭುಗಳು ತಿಳಿಸಿರುವುದನ್ನು ಉಲ್ಲೇಖಿಸುತ್ತದೆ. ಆದರೆ ಮೇಲೆ ಹೇಳಿದ ಹಾಗೆ ವಡ್ಡವ್ಯವಹಾರಿ, ಮಹಾವಡ್ಡವ್ಯವಹಾರಿ ಎಂದಿರುವುದರಿಂದ ಇದು ಅವರ ಅಂತಸ್ತು ಮತ್ತು ಶ್ರೀಮಂತಿಕೆಯನ್ನು ಸೂಚಿಸುತ್ತದೆ. ಇವರಲ್ಲಿ ಅಂತಹ ಗಮನಾರ್ಹ ವ್ಯತ್ಯಾಸವೇನು ಕಂಡುಬರುವುದಿಲ್ಲ. ವಡ್ಡವ್ಯವಹಾರಿಗಳಲ್ಲಿಯೇ ಮಹಾವಡ್ಡ ವ್ಯವಹಾರಿಗಳು, ಹಿರಿಯ ವರ್ತಕರಾಗಿ ಕಂಡುಬರುತ್ತಾರೆ. ಈ ವಡ್ಡವ್ಯವಹಾರಿಗಳ ಮುಂದೆ ಮತ್ತು ಹಿಂದೆ ಕೆಲವೊಂದು ಪದಗಳು ಬಳಕೆಯಾಗಿವೆ. ಮಲೆಯಾಳ, ಕುಮಾರ, ಕೊಟ್ಟೂರ-ಕಮ್ಮದೇವ, ವಾಸುದೇವ, ಹೀಗೆ ಮುಂತಾದವುಗಳಿಂದ ಉಲ್ಲೇಖಗೊಂಡಿವೆ. ಇದರಿಂದ ಇವರು ಅಥವಾ ಇವರ ಮೂಲವನ್ನು ಮತ್ತು ಸಂದರ್ಶಿಸಿದ ಸ್ಥಳಗಳನ್ನು ಗುರುತಿಸಬಹುದು.

ರಾಜ ಪೂಜಿತರು, ರಾಜಾನುಗ್ರಹಯುಕ್ತರೂ ಆದ ಇವರು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಡಿಮೆ ಸಂಖ್ಯೆಯಲ್ಲಿ ಕಾಣಿಸಿಕೊಂಡರು. ಹೊಯ್ಸಳರ ಕಾಲದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಈ ವರ್ತಕರು ಅನುವಂಶೀಯವಾಗಿ ವ್ಯಾಪಾರ ಮಾಡುತ್ತಿದ್ದರೆಂದು ಉಲ್ಲೇಖಬರುತ್ತದೆ. ಇಲ್ಲಿಯ ಒಂದು ಶಾಸನದಲ್ಲಿ ವಂಶಾನ್ವರಪ್ಪಕುಬೇರವಂಶ ಎಂದು ಬರುತ್ತದೆ.[೪೨] ಇವುಗಳಿಂದ ಇವರನ್ನು ಯಾವ ವಂಶಕ್ಕೆ ಸೇರಿದವರೆಂದು ಗುರುತಿಸಬಹುದು. ಈ ಶಾಸನದಲ್ಲಿ ಚಿನ್ನಗೆಯಿ ಕಡವ(ಬಂಗಾರ ವ್ಯಾಪಾರಿ) ಕುಬೇರ ವಂಶದಲ್ಲಿ ಜನಿಸಿದ ಈತನು 'ಸ್ವಸ್ತ್ಯನೇಕಗುಣಗಣಾಲಂಕೃತ ಸತ್ಯ ಶಾಚಾಚಾರ ಚಾರಿತ್ರನಯ ವಿನೆಯಶೀಳಗುಣ ಸಂಪನ್ನನೆಂದು ಹೆಸರು ಪಡೆದಿದ್ದನೆಂದು ಕಂಡುಬರುತ್ತದೆ.[೪೩] ಇನ್ನು ಇಂತಹ ಉಲ್ಲೇಖಗಳು ಕೆಲವು ಕಡೆ ಕಂಡುಬರುತ್ತವೆ. ಇನ್ನು ಇವರಲ್ಲಿ ಮಹಾಮಲೆಯಾಳ ವಡ್ಡವ್ಯವಹಾರಿ, ಕೊಮಾರಮೂರ್ಖಸೆಟ್ಟಿ, ಪೊನ್ಮೂರ್ಖಸೆಟ್ಟಿಯರು, ಕೊಳಮೂಕಸೆಟ್ಟಿಯರು, ಪಟ್ಟಣ ಅಥವಾ ಕೇರಳದಿಂದ ಬಂದಿರಬಹುದು. ನಂತರ ಕನ್ನಡ ನಾಡಿನಲ್ಲಿ ನೆಲೆಸಿರಬಹುದು. ಏಕೆಂದರೆ ಇವರ ಹೆಸರುಗಳನ್ನು ಗಮನಿಸಿ ಹೀಗೆ ಹೇಳಬಹುದು. ಇಲ್ಲಿ ಮಹಾ ಮಲೆಯಾಳ ವಡ್ಡವ್ಯವಹಾರಿ ಪೊನ್ಮೂರ್ಖ ಸೆಟ್ಟಿಯು ನಿಡುಗಲ್ ನಾಡ ಮಹಾವಡ್ಡವ್ಯವಹಾರಿಯಾಗಿದ್ದ ನೆಂದು ಬರುತ್ತದೆ. ಇನ್ನೊಂದು ಶಾಸನದಲ್ಲಿ 'ಸ್ವಸ್ತಿ ಸಮಸ್ತವಸ್ತು ವಿಷಯ, ವ್ಯಾಪಾರನಿಯತನುಂ, ವಸ್ತುಗುಣಸಂಪನ್ನನುನುಡಿದುಯತ್ತೆನ್ನನು ವ್ರಾಸ್ರಿತಚಿಂತಾಮಣಿಯುಂ ವ್ಯವಹಾರ ಶಿಖಾಮಣಿಯು ಮಪ್ಪಾದ ಪಟ್ಟಣ ಸಮುದ್ಧರಣನು, ಸಮಯಸಮುದ್ಧರಣನು ಸಾರಾದೇವೀಲಬ್ಧವರ ಪ್ರಸಾದನು ಶ್ರೀ ಮದ್ದೇಸಿಯಂಕ ಕಾರನು ಎಂದು ಉಲ್ಲೇಖಿಸುತ್ತದೆ. ಈ ಮಲೆಯಾಳ ವಡ್ಡವ್ಯವಹಾರಿ, ನಂಬಿಗಣ್ಣೆ ಸೆಟ್ಟಿಯರು ಕೋಗಳಿ ಐನ್ನೂರರ ಮೇಲಾಳಿಕೆಯನ್ನು, ಬಿಕ್ಕಿಗನೆಪ್ಪತ್ತರೊಳಗಿನ ಗ್ರಾಮ ದುಗ್ಗತಿಯನ್ನು ಆಳುತ್ತಿದ್ದರೆಂದು ಉಲ್ಲೇಖಿಸುತ್ತದೆ.[೪೪] ಹೀಗೆ ಇವರ ಮೂಲವನ್ನು ಗುರುತಿಸಬಹುದು. ಇವರು ನಾಡಿನ ಆರ್ಥಿಕ ಪ್ರಗತಿಗೆ, ವ್ಯಾಪಾರ ಅಭಿವೃದ್ಧಿಗೆ ಸಲ್ಲಿಸಿದ ಸೇವೆ ಅನುಪಮ.

ವರ್ತಕರ ಸಂಘಗಳು(ಶ್ರೇಣಿಗಳು)

ವರ್ತಕರಲ್ಲಿ ವೀಳ್ಯದೆಲೆಯನ್ನು ಮಾರುವವರನ್ನು, ಒಂದು ಪ್ರಕಾರವೆಂದು ಪರಿಗಣಿಸಲಾಗಿದೆ. ಇವರನ್ನು(ರಲ್ಲಿ) ತೆಂಬುಲಿಗರು, ತಂಬುಲಿಗ, ಸಾಸಿರ್ವರು ಎಂದು ಗುರುತಿಸಿಕೊಳ್ಳಲಾಗಿದೆ. ಮತ್ತೆ ಇವರಲ್ಲಿ ನಾನಾ ದೇಶಿ, ಉಭಯ ನಾನದೇಶಿ, ತಂಬುಲಿಗರೆಂದು ಶಾಸನಗಳಲ್ಲಿ ಉಲ್ಲೇಖಗಳು ಬಂದಿವೆ. ಆದರೆ ಇವರ ಸ್ಥಾನಮಾನ ಸ್ವರೂಪ, ಸಾಮ್ಯ, ವೈಷಮ್ಯ, ಸಾಮಾಜಿಕ ಸ್ಥಿತಿಗತಿಗಳ, ಬಗ್ಗೆ ಸ್ಪಷ್ಟಪಡಿಸುವುದಿಲ್ಲ. ಕೋಗಳಿ-೫೦೦ರಲ್ಲಿ ಒಂದಾದ ಬಾಗಳಿಯೂ ಸಹ ತಂಬುಲಿಗರ(ತೆಂಬುಲಿಗ) ನೆಲೆಗಳಲ್ಲಿ ಒಂದಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿಯ ಒಂದು ಶಾಸನದಲ್ಲಿ 'ತಂಬುಲಿಗೆ ಸಾಸಿರ್ವ್ವರು' ಎಂದು ಉಲ್ಲೇಖ ಬಂದಿದೆ. ಆದರೆ ಇವರು ಸಹ ವರ್ತಕರೆಂದು ಹೇಳಲಾಗಿದೆ.[೪೫] ಪ್ರಮುಖ ವ್ಯಾಪಾರಿಗಳ ವರ್ತಕರಲ್ಲಿ ಈ ವ್ಯಕ್ತಿಗಳು ಅಥವಾ ಸಾಸಿರ್ವ್ವರು ಸಹ ಸೇರಿದ್ದರೆಂದು ಮತ್ತು ಊರಿನ ಅನ್ಯಾಯ, ನ್ಯಾಯವಿಚಾರಣೆ, ಮಾಡುವವರೂ ಆಗಿದ್ದರೆಂದು ಹೇಳಬಹುದು. ಇವರು ವಿವಿಧ ರೀತಿಯ ವ್ಯಾಪಾರವನ್ನು ಮಾಡುತ್ತಿದ್ದರು. ಆದ್ದರಿಂದ ಶಾಸನಗಳಲ್ಲಿ ಹೆಚ್ಚಾಗಿ ಸಾಸಿರ್ವ್ವರು ಎಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ. ಮತ್ತು ಇವರಿಗೆ ಬಿಟ್ಟ, ಇವರು ನೀಡಿದ ದಾನದ ಉಲ್ಲೇಖಗಳು ಕಂಡುಬಂದಿವೆ.

ನಾನಾದೇಶಿ-ಉಭಯ ನಾನಾದೇಶಿ

ನಾನಾದೇಶಿ, ಉಭಯ ನಾನಾದೇಶಿಗಳು ವರ್ತಕರ ಪ್ರಕಾರಗಳಾಗದಿದ್ದರೂ, ವರ್ತಕರಿಗೆ ಸೇರಿದ ಒಂದು ಪಂಗಡವೆಂದು ಹೇಳಬಹುದು. ಪ್ರಾಯಶಃ ಈ ಪದಗಳನ್ನು ನೋಡಿದರೆಯೆ ಅರ್ಥವನ್ನು ಸೂಚಿಸಬಹುದು. ಅಂದರೆ ನಾನಾದೇಶಿ-ಬೇರೆ ಬೇರೆ ದೇಶಗಳಿಂದ ಬಂದು ವ್ಯಾಪಾರ ಮಾಡುವವರೆಂದು ಹೇಳಬಹುದು. ಒಂದು ಶಾಸನದಲ್ಲಿ ಸಾಸಿರ್ವರು ನಾನಾದೇಶಿ, ತಂಬುಲಿಗರು ಎಂದು ಉಲ್ಲೇಖವಾಗಿದೆ.[೪೬] ಇವರು ದೇವಾಲಯದ ಕೆಲಸ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಮತ್ತು ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿದರೆಂದು ಶಾಸನಗಳಿಂದ ತಿಳಿಯುತ್ತದೆ. ಇದೇ ಶಾಸನದ ಮುಂದುವರಿದ ಭಾಗದಲ್ಲಿ ಕಲಿದೇವರಿಗೆ ಎಲೆಯ 'ನಡೆ'ಗೆ ಒಂದು 'ತಾರ' (ಲೋಹಾಭರಣಗಳು)ಗಳನ್ನು ದಾನ ಬಿಡುತ್ತಾರೆ.[೪೭] ಇವರು ವಿವಿಧ ಗ್ರಾಮ ಪಟ್ಟಣಗಳಿಗೆ ಹೋಗಿ ವ್ಯಾಪಾರ ಮತ್ತು ಮಾರಾಟವನ್ನು ಮಾಡುತ್ತಿದ್ದರು. ಆಯಾ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ವಸ್ತುಗಳನ್ನು ಖರೀದಿಸುತ್ತಿದ್ದರು. ಹೀಗೆ ವ್ಯಾಪಾರ ಮಾಡುವ ಮೂಲಕ ನಾಡಿನ ತುಂಬ ಸಂಚರಿಸುತ್ತಿದ್ದರು.

ತಂಬುಲಿಗ ಸಾಸಿರ್ವರು

ಹಿಂದೆ ತಿಳಿಸಿದ ಹಾಗೆ ತಂಬುಲಿಗ ಸಾಸಿರ್ವರು ಎಲೆಯ ವ್ಯಾಪಾರಕ್ಕೆ ಪ್ರಸಿದ್ಧರಾದವರು. ಇವರು ಮೂಲತಃ ಸಾವಿರ ಜನ ತಂಬುಲಿಗರಾಗಿದ್ದರು. ಯಾವುದೋ ಒಂದು ಕಾಲದಲ್ಲಿ ಕಟ್ಟಿದ ಈ ಸಂಘ ಸಂಸ್ಥೆಗಳಲ್ಲಿ ಸದಸ್ಯರ ಸಂಖ್ಯೆಯಲ್ಲಿ ಏರಿಳಿತವಾಗುತ್ತಿತ್ತು. ಇವರನ್ನು ಕೆಲವು ಸಾಂಪ್ರದಾಯಿಕ ಮನೆತನಗಳಿಂದ ಗುರುತಿಸಬಹುದು. ಇಲ್ಲಿ ಸಿದ್ದಿಸೆಟ್ಟಿ ಶೋಭನಯ್ಯ, ಮಲ್ಲಯ್ಯಸೆಟ್ಟಿ, ಅಣ್ಣಮ್ಮ ಎಂದು ಕರೆದಿವೆ.[೪೮] ಆದರೆ ಹೆಚ್ಚಿನ ಶಾಸನಗಳಲ್ಲಿ ತಂಬುಲಿಗ ಸಾಸಿರ್ವರೆಂದೇ ಇವರನ್ನು ಕರೆಯಲಾಗಿದೆ. (ವೀಳ್ಯದೆಲೆಯ ವರ್ತಕರು) ಕೆಲವು ಶಾಸನಗಳಲ್ಲಿ ಇವರು ವಿವಿಧ ಗುಣಾವಳಿಗಳಿಂದ ಗುರುತಿಸಿಕೊಂಡಿದ್ದಾರೆ. ಅಲ್ಲದೇ ಕೆಲವು ಶಾಸನಗಳಲ್ಲಿ ಹೊಗಳಿಕೆಗಳು ಬಂದಿವೆ. ಈ ಶಾಸನದಲ್ಲಿ ಸುಬುದ್ಧಿ, ಶುದ್ಧಾಚಾರ, ಸುಮನಸ್ಸು, ಔದಾರ್ಯ, ಔನತ್ಯ, ಸಚ್ಛಾರಿತ್ರ, ದಾನಶಕ್ತಿ, ಧರ್ಮಬುದ್ಧಿ, ಪರೋಪಕಾರಿ, ನಿತ್ಯಸತ್ಯನಿಷ್ಠ ಎಂಬ ಗುಣಗಳಿಂದ ಕೂಡಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ.

ಅಯ್ಯಾವೊಳೆ-ಐನೂರ್ವರು

ಅಯ್ಯಾವೊಳೆ-ಐನೂರ್ವರು, ಇದು ಗ್ರಾಮಸೂಚಿಯನ್ನು ಸೂಚಿಸಿದರೆ, ತಂಬುಲಿಗ-ಸಾಸಿರ್ವರು, ಸಂಘ ಅಥವಾ ಶ್ರೇಣಿಯೂ, ವೃತ್ತಿ ಸೂಚಿ ಹೆಸರಾಗಿದೆ. ಈಗಾಗಲೇ ವರ್ತಕರ ವಿವಿಧ ಪ್ರಕಾರಗಳನ್ನು ಹಿಂದೆ ನೋಡಲಾಗಿದ್ದು, ಈ ಪ್ರಕಾರವನ್ನು ಹೆಚ್ಚು ವಿವರಿಸಿಲ್ಲ. ಇಲ್ಲಿನ ಶಾಸನಗಳಲ್ಲಿ ಬಂದಿರುವ ವರ್ತಕರ ಪ್ರಕಾರಗಳನ್ನು ಮಾತ್ರ ನೋಡಲಾಗಿದೆ. ಇದು ಐದುನೂರು ಸದಸ್ಯರುಳ್ಳ ವರ್ತಕ ಸಂಘ.(ಅಯ್ಯಾವೊಳೆ-ಐಹೊಳೆ) ಇವರ ಸ್ಥಳ ಐಹೊಳೆಯಾಗಿತ್ತೆಂದು ಕಂಡುಬರುತ್ತದೆ. ಇಂತಹ ಸಂಘಗಳು ಕ್ರಿ.ಶ.೮೦೦ ಐಹೊಳೆ ಶಾಸನದಿಂದೀಚೆಗೆ ಕಂಡುಬರುತ್ತವೆ.[೪೯] ಆದರೆ ಇದಕ್ಕೂ ಮುಂಚೆಯೇ ವರ್ತಕ ಶ್ರೇಣಿಗಳಿದ್ದವು ಎಂದು ಚಿ.ಮೂ ಅಭಿಪ್ರಾಯ ಪಡುತ್ತಾರೆ.[೫೦] ಆದರೆ ಈಗಿನ ಮಟ್ಟಿಗೆ ಕ್ರಿ.ಶ.೯೧ರ ಬಾಗಳಿ ಶಾಸನದಲ್ಲಿ ಈ ಸಂಘದ ಪ್ರಾಚೀನತೆಯನ್ನು ತಿಳಿಸುತ್ತದೆ.[೫೧] ಆದ್ದರಿಂದ ಪ್ರಾಚೀನ ಕಾಲದಲ್ಲಿಯೇ ಇಂತಹ ಸಂಘ ಸಂಸ್ಥೆಗಳು, ವರ್ತಕ ಶ್ರೇಣಿಗಳು ಇದ್ದವೆಂದು ಹೇಳಬಹುದು. ಈ ಒಂದು ಶಾಸನದಲ್ಲಿ ಮಾತ್ರ ಅಯ್ಯಾವೊಳೆ-ಐನೂರ್ವರು ಎಂದು ಉಲ್ಲೇಖಬರುತ್ತದೆ.[೫೨] ಕೆಲವು ಶಾಸನಗಳಲ್ಲಿ 'ತಂಬುಲಿಗರು' ಎಂದು ಬಂದಿದೆ. ಇವರು ಎಲೆಯ ವ್ಯಾಪಾರದ ವರ್ತಕರರಾಗಿರುವುದರಿಂದ ಇವರು ರಚಿಸಿಕೊಂಡ ಸಂಘವನ್ನು ತಂಬುಲಿಗ ಸಾಸಿರ್ವರು, ಸಾಸಿರ್ವರು ಎಂದು ಕರೆಯಲಾಗಿದೆ.

ಇನ್ನು ಕೆಲವು ಶಾಸನಗಳಲ್ಲಿ ವೃತ್ತಿನಿರತ ವ್ಯಕ್ತಿಗಳ ವೃತ್ತಿಯನ್ನು ಹೆಸರಿಸುತ್ತವೆ. ಇವರಿಗೆ ಇಂತಿಷ್ಟು ದಾನ ಕೊಡಬೇಕೆಂದು ಉಲ್ಲೇಖಗಳು ಕಂಡುಬರುತ್ತವೆ. ಆದರೆ ಈ ಶಾಸನ ತ್ರುಟಿತವಾಗಿರುವುದರಿಂದ

ಸರಿಯಾದ ಮಾಹಿತಿ ಒದಗುವುದಿಲ್ಲ. ಈ ಶಾಸನದಲ್ಲಿ ಉಪ್ಪಿನಿಕ ಗದ್ಯಾಣ, ಭೋವ ಗದ್ಯಾಣ, ಮಾದರ ಗದ್ಯಾಣ, ಕಮ್ಮಾರ ಗದ್ಯಾಣ ಹೀಗೆ ಉಲ್ಲೇಖ ಬಂದಿದೆ.[೫೩] ಇದರಿಂದ ಇವರ ವೃತ್ತಿಯನ್ನು ತಿಳಿಯಬಹುದು. ಉಪ್ಪಾರ, ಭೋವಿ, ಮಾದಿಗ, ನೇಕಾರ ಮುಂತಾದವರು ತಮ್ಮ ತಮ್ಮ ವೃತ್ತಿಗಳೊಂದಿಗೆ ಕಂಡುಬರುತ್ತಾರೆ. ಅಥವಾ ಇಂತಹ ವೃತ್ತಿಯರು ಒಂದು ಗದ್ಯಾಣದಷ್ಟು ಬಂದ ಲಾಭದಲ್ಲಿ ದಾನವನ್ನು ನೀಡಬೇಕಿತ್ತು ಎಂದು ಹೇಳಬಹುದು. ಇಂತಹ ಉಲ್ಲೇಖಗಳು ಕೋಗಳಿ ಶಾಸನದಲ್ಲಿ ಕಂಡುಬರುತ್ತವೆ.[೫೪]

ನಾಣ್ಯಗಳು

ನಾಣ್ಯಗಳ ಕಥೆಯೂ ಮಾನವನ ವಂಶದ ಚರಿತ್ರೆಯೊಂದಿಗೆ ಹಾಸುಹೊಕ್ಕಿದೆ. ನಾಣ್ಯಗಳ ಚಲಾವಣೆ(ಯಲ್ಲಿ) ಆರ್ಥಿಕಾಭಿವೃದ್ಧಿಯಲ್ಲಿ ಹೊಸ ಮನ್ವಂತರವನ್ನೇ ತೆರೆದಿವೆ. ಆರ್ಥಿಕ ವ್ಯವಸ್ಥೆ ವಿಕಸಿತವಾಗದ ಸಮಯದಲ್ಲಿ ಕೊಡುಕೊಳ್ಳುವ ವ್ಯವಹಾರಕ್ಕೆ ವಸ್ತುಗಳನ್ನು ಬಳಸಲಾಗುತ್ತಿತ್ತು. ನಾಣ್ಯಗಳನ್ನು 'ಟಂಕಶಾಲೆ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಇವುಗಳ ಮುದ್ರಣಕ್ಕೂ ಸಹ 'ಟಂಕಶಾಲೆ' ಎಂದು ಕರೆಯುತ್ತಿದ್ದರು.[೫೫] ಆದರೆ ಬಹುಹಿಂದಿನ ಕಾಲದಲ್ಲಿ ನಾಣ್ಯಗಳನ್ನು ಈ ಹೆಸರುಗಳಿಂದ ಕರೆಯುತ್ತಿದ್ದರು. ಬಿಲ್ಲೆ, ದಮ್ಮಡಿ, ಒಂದು ದುಡ್ಡು, ಕೈಗಡ, ಗಿದ್ನ, ಮಣ, ಪಾವು, ಸೇರು ಹೀಗೆ ಮುಂತಾದ ಹೆಸರುಗಳಿಂದ ನಾಣ್ಯಗಳ ಚಲಾವಣೆ ಇತ್ತು. ನಂತರ ಆಯಾ ಕಾಲಕ್ಕೆ ತಕ್ಕಂತೆ ಹೆಸರುಗಳಲ್ಲಿ ಬದಲಾವಣೆಯಾಗುತ್ತಾ ಬಂದಿತು. ಇಲ್ಲಿ 'ದುರ್ಗಿವರ' ಎಂಬ ಹೆಸರಿನ ನಾಣ್ಯವಿತ್ತು ಎಂದು ಹೇಳುತ್ತಾರೆ. ನಂತರ ಕಲ್ಯಾಣಿ ಚಾಲುಕ್ಯರ ಕಾಲದ ನಾಣ್ಯಗಳನ್ನು ಇಂತಹ ಹೆಸರುಗಳಿಂದ ಗುರುತಿಸಲಾಗಿದೆ. ಲೊಕ್ಕಿ ಗದ್ಯಾಣ, ಲೊಕ್ಕಿ ಅಚ್ಚಿನ ಗದ್ಯಾಣ ಮುಂತಾದವುಗಳನ್ನು ಚಾಲುಕ್ಯರ ಶಾಸನಗಳಲ್ಲಿ ಕಾಣಬಹುದಾಗಿದೆ. ಕೆಲವು ಶಾಸನಗಳಲ್ಲಿ ನಾಣ್ಯ ಸೂಚಿಸುವ ಪದಗಳು ಕಂಡುಬಂದಿವೆ. ಪೊನ್ ಅಥವಾ ಹೆನ್ ಎಂದು ಕರೆಯಲಾಗಿದೆ.(ನಿಷ್ಕ) ಈ ಶಾಸನಗಳಲ್ಲಿ ಗದ್ಯಾಣ ಪಾಗ, ವೀಸ ಮುಂತಾದವುಗಳು ಉಲ್ಲೇಖವಾಗಿವೆ. ಹಿಂದೆ ಬಳಕೆಯಲ್ಲಿದ್ದ ಇಂತಹ ನಾಣ್ಯಗಳ ಸಂಬಂಧವನ್ನು ರಾಜಾದಿತ್ಯನು ವ್ಯವಹಾರ ಗಣಿತದಲ್ಲಿ ವಿವರಿಸಿದ್ದಾನೆ. ಅವನ ಪ್ರಕಾರ ಗದ್ಯಾಣಕ್ಕೂ ಉಳಿದ ನಾಣ್ಯಗಳಿಗೂ ಇರುವ ಸಂಬಂಧವನ್ನು ಬೇರೆ ಎಂದು ಗುರುತಿಸಬಹುದು. ಈ ಎಲ್ಲಾ ಶಾಸನಗಳಲ್ಲಿ ನೋಡಿದರೆ ಗದ್ಯಾಣದ ಜೊತೆಗೆ, ಪೊನ್, ದ್ರಮ್ಮ, ಹಣ, ಹಾಗ, ಬೇಳೆ' ಎಂಬಂತಹ ನಾಣ್ಯಗಳು ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ಕುರುಗೋಡಿನ ಶಾಸನವೊಂದರಲ್ಲಿ ನವಿಲಚ್ಚಿನ ಪೊನ್ನುಗಳು ಎಂದು ಉಲ್ಲೇಖ ಬಂದಿದೆ.[೫೬] ಈ ರೀತಿಯ ಉಲ್ಲೇಖವಾಗಿರುವುದು ಇದೇ ಮೊದಲು ಎಂದು ಹೇಳಬಹುದು. ಏಕೆಂದರೆ 'ಪೊನ್ನ'ಗಳು ಎಂದು ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡುಬರುತ್ತದೆ. ಆದರೆ ನವಿಲಚ್ಚಿನ ಪೊನ್ನುಗಳೆನ್ನುವುದು ವಿಶೇಷವೆನಿಸುತ್ತದೆ. ಕುಡುತಿನಿ ಗ್ರಾಮದಲ್ಲಿರುವ ಕುಮಾರಸ್ವಾಮಿ ದೇವಸ್ಥಾನದಲ್ಲಿ ಹಿಂದೆ ಕಮ್ಮಟ ಎಂಬಲ್ಲಿ(ನಾಣ್ಯಗಳ ಟಂಕಿಸುತ್ತಿದ್ದ ಸ್ಥಳ) ನವಿಲು

ಮುದ್ರೆಯುಳ್ಳ ನಾಣ್ಯಗಳನ್ನು ಟಂಕಿಸುತ್ತಿದ್ದರು ಎಂದು ಕಂಡುಬರುತ್ತದೆ.[೫೭] ವಡ್ಡಾರಾಧನೆಯಲ್ಲಿ 'ದ್ರಮ್ಮ' ಮತ್ತು 'ದೀನಾರ' ಎಂಬ ನಾಣ್ಯಗಳ ಹೆಸರು ಬಂದಿರುವುದನ್ನು ನೋಡಬಹುದಾಗಿದೆ. ಇವೆಲ್ಲವುಗಳನ್ನು ಗಮನಿಸಿದರೆ 'ಪೊನ್ ' ಎಂಬುವುದೇ ನಂತರದಲ್ಲಿ ಗದ್ಯಾಣವಾಗಿರಬೇಕು. ಕೆಲವೊಂದರಲ್ಲಿ 'ವರಹ' ಎಂಬ ನಾಣ್ಯವಿತ್ತೆಂದು ಉಲ್ಲೇಖ ಬಂದಿದೆ. ನಾಣ್ಯಗಳಲ್ಲಿ ಕಡಿಮೆ ಬೆಲೆ ಉಳ್ಳದ್ದು 'ಗಿದ್ದಾಣಿ' ಎಂಬ ನಾಣ್ಯವಿತ್ತು. ಇಂತವುಗಳಿಂದ ದವಸಗಳನ್ನು ತೂಗಿ ಮಾರುವ, ಅಳೆದು ಮಾರುವ ಪದ್ಧತಿ ಮಧ್ಯಕಾಲೀನ ಕರ್ನಾಟಕದಲ್ಲಿ ಜಾರಿಯಲ್ಲಿತ್ತು ಎಂದು ಕಂಡುಬರುತ್ತದೆ. ಈಗ ನಾಣ್ಯಗಳನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಳ್ಳಲಾಗಿದೆ. ಜನಪದರು ಹಾಡಿನಲ್ಲಿಯೇ ಅಳತೆ ತೂಕವನ್ನು ಗುರುತಿಸಿಕೊಳ್ಳುತ್ತಿದ್ದರು. ಈ ಹಾಡಿನಂತೆ ಇಲ್ಲಿ ಪ್ರಮಾಣವನ್ನು ಗುರುತಿಸಬಹುದಾಗಿದೆ.

'ಹನಿ ಹನಿಗೂಡಿದರೆ ಹಳ್ಳ
ತೆನೆ ತೆನೆ ಗೂಡಿದರೆ ಬಳ್ಳ'

ಎಂಬ ಹಾಡಿನಲ್ಲಿ(ಬಳ್ಳ) ಎಂದರೆ 'ರಾಶಿ' ಬಹಳ ಎನ್ನುವ ಅರ್ಥ ಬರುತ್ತದೆ. ಇದು ಸಹ ಒಂದು ಅಳತೆಯ ಪ್ರಮಾಣವನ್ನು ಇಂತಿಷ್ಟು ಎಂದು ಗುರುತಿಸುತ್ತದೆ. ಇದರಿಂದ ದವಸ ಧಾನ್ಯಗಳ ಅಳತೆಯನ್ನು ಗುರುತಿಸಬಹುದು. ಇನ್ನು ಶಾಸನಗಳಲ್ಲಿ ಭತ್ತ, ಎಣ್ಣೆಯನ್ನು ಅಳೆಯಲು ಕೊಳಗ, ಬಳ್ಳ, ಮಾನ, ಖಂಡುಗ ಮೊದಲಾದ ಅಳತೆಯೊಂದಿಗೆ ಉಪಯೋಗಿಸುತ್ತಿದ್ದರೆಂದು ಕಂಡುಬರುತ್ತದೆ.[೫೮] ವ್ಯವಹಾರ ಗಣಿತದಲ್ಲಿ ಅಂದಿನ ತೂಕದ ವಿವರಗಳನ್ನು ನೋಡಬಹುದಾಗಿದೆ.

ಇನ್ನು ಈ ಶಾಸನಗಳಲ್ಲಿ ಹಣ್ಣು(ಹಂಪಲು) ಕಚ್ಚು, ಅಡಿಕೆ ಮೊದಲಾದ ಪದಾರ್ಥಗಳು ಎಣಿಕೆ ಕ್ರಮದಲ್ಲಿ ಕೊಟ್ಟಿರುವುದನ್ನು ಉಲ್ಲೇಖಿಸುತ್ತವೆ.[೫೯] ಅಂದರೆ ಕೆಲವೊಂದು ಪದಾರ್ಥಗಳನ್ನು ಎಣಿಸಿ ತೂಕಮಾಡುವುದನ್ನೆ ನಾವು ಪ್ರತಿನಿತ್ಯ ನೋಡುತ್ತೇವೆ. ಈಗ ಎಲೆಯ ವ್ಯಾಪಾರವನ್ನು ಚಟ್ಟಿ ಅಥವಾ ಎಣಿಕೆಯ ಮೂಲಕ ವ್ಯಾಪಾರ ಮಾಡುವುದನ್ನು ಗಮನಿಸಿದರೆ, ಹಿಂದೆ ಎಲೆಗಳನ್ನು ಹೇರುಗಳ ಮುಖಾಂತರ ವ್ಯಾಪಾರ ಮಾಡುವುದನ್ನೆ ನೋಡಬಹುದಾಗಿದೆ. ಹುಲ್ಲನ್ನು ಸಹ ಹಿಡಿ ಇಲ್ಲವೆ ಸೂಡುಗಳಾಗಿಯೋ, ಹೇರು ಮತ್ತು ಹೊರೆಗಳಾಗಿಯೋ ಮಾರುತ್ತಿದ್ದರು. ಈ ಶಾಸನವೊಂದರಲ್ಲಿ ಉಪ್ಪೊಳಗಾಗಿ ಧಾನ್ಯಗಳೆಲ್ಲವು ಎಂದು ಬಂದಿದೆ.[೬೦] ಅಂದರೆ ಉಪ್ಪಿನಿಂದ ಮೊದಲಾಗಿ, ಎಲ್ಲಾ ದವಸ ಧಾನ್ಯಗಳನ್ನು ಸಹ ಅಳೆದು ಕೊಡಬೇಕಿತ್ತು. ಈ ಶಾಸನದಲ್ಲಿ ಅಳತೆಯ ಈ ಸಾಧನಗಳೊಂದಿಗೆ ಅಳೆದು ಕೊಡಬೇಕಾಗುತ್ತಿತೆಂದು ಕಂಡುಬರುತ್ತದೆ. ಪೋಗೆ, ಬಳ್ಳ, ಗದ್ಯಾಣ, ಕೊಳಗ, ಪಣ, ಅಳೆಬಳ್ಳ, ನೆಲಕ್ಕಿಕೊಳಗ, ವೀಸ, ಎಣ್ಣೆ, ಸೊಳಸಂ, ಹೇರು, ನೂರು, ತಲೆವೊರಿಗೆ, ಪೊನ್ನು, ಎಲೆಯ 'ನಡೆಗೆ-ತಾರ' ಎಂಬಂತಹ ಮುಂತಾದ ಅಳತೆಯ ಮಾಪನಗಳು ಇದ್ದವೆಂದು ಕಂಡುಬಂದಿದೆ. ಇಲ್ಲಿ ಸೊಳಸ,

ಸೊಳಸಂ ಎಂದು ಉಲ್ಲೇಖವಾಗಿರು ವುದರಿಂದ[೬೧] ಇದು ಏನು ಎಂಬುದನ್ನು ಸ್ಪಷ್ಟಪಡಿಸುವುದು ಕಠಿಣ. ಆದರೆ ಇದೊಂದು ಅಳತೆಯ ಮಾಪನ ಎನ್ನಬಹುದು.

ಭೂಮಾಪನ-(ಉದ್ದಳತೆ)

ರಾಜಾದಿತ್ಯನು ತನ್ನ ವ್ಯವಹಾರ ಗಣಿತದಲ್ಲಿ ಹೊಲಗಳನ್ನಳೆಯಲು 'ಗಳೆ'(ಕೋಲು)ಗಳನ್ನು ಬಳಸುತ್ತಿದ್ದರೆಂದು, ಅವುಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಅಳತೆಯ ಭೂಮಾಪನಗಳು ಪ್ರತ್ಯೇಕವಾಗಿದ್ದವೆಂದು ಹೇಳಿದ್ದಾನೆ.[೬೨] ಕೆಲವೆಡೆ ಗೇಣಿನ ಲೆಕ್ಕದಲ್ಲಿದ್ದವು. ಕೆಲವು ಶಾಸನಗಳಲ್ಲಿ ಬಾಯ್ಕಲ್ಲು ಎಂಬ ಉಲ್ಲೇಖ ಬಂದಿದೆ. ಅಂದರೆ ಗಡಿ ಕಲ್ಲು, ಅಂದರೆ ಇಲ್ಲಿಯವರೆಗೆ ಒಂದು ಭೂಮಿ ಎಂದು ಒಂದು ಕಲ್ಲನ್ನು ಗುರುತಿಸುವುದು. ಇಂತಹ ಮಾಪನಗಳು ಕೆಲವು ಊರ ಹೆಸರಿನಲ್ಲಿದ್ದರೆ, ಕೆಲವೆಡೆ ವ್ಯಕ್ತಿ ಹೆಸರಿನಲ್ಲಿದ್ದವು. ಇವುಗಳು ಆಯಾ ಸುತ್ತಮುತ್ತಲಿನ ಪ್ರದೇಶದ ಪ್ರಮಾಣೀಕೃತ ಮಾಪನಗಳಾಗಿದ್ದವು. ಇಲ್ಲಿಯ ಕಲ್ಲೇಶ್ವರ ದೇವಾಲಯದ ನವರಂಗದ ಕಂಬವೊಂದರ ಮೇಲ್ತುದಿಯಲ್ಲಿ 'ತೋಟವಳೆ-ತೋಟವನಳೆವಗಡಿಬ' ಎಂದು ಉಲ್ಲೇಖವಾಗಿದೆ.[೬೩] ಇದರ ಕಾಲದ ೧೨ನೇ ಶತಮಾನವೆಂದು ಉಲ್ಲೇಖ ಬರುತ್ತದೆ. ಈ ಅಕ್ಷರಗಳ ಮೇಲೆ ಅಂದರೆ ಕಲ್ಲೇಶ್ವರ ದೇವಾಲಯದ ಮಹಾಮಂಟಪದ ಕಂಬವೊಂದರಲ್ಲಿ 'ಗೆರೆ'ಯನ್ನು ಕೊರೆಯಲಾಗಿದೆ. ಇದರಿಂದ ಇವುಗಳನ್ನು ಅಳತೆಯ ಕೋಲು ಎಂದೇ ಪರಿಗಣಿಸಬಹುದು. ಈ ಶಾಸನದಲ್ಲಿ ಅಳತೆಯ ಕೋಲನ್ನು 'ಪಿರಿಯಕೋಲು' ಎಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ.[೬೪] ಇದನ್ನು ದೇವಸ್ಥಾನ, ಊರು, ಲಾಂಛನ ಇತ್ಯಾದಿ ಹೆಸರುಗಳಿಂದ ಕರೆಯುತ್ತಿದ್ದರು. ಇಂತಹ ಉಲ್ಲೇಖ ಕೋಗಳಿಯ ಒಂದು ಶಾಸನದಲ್ಲಿ 'ಕೋಗಳಿ ಗಡಿಂಬ' ಎಂದು ಬಂದಿರುವುದನ್ನು ಗಮನಿಸಬಹುದು.[೬೫] ಅಂದರೆ ಕೋಗಳಿ ಸುತ್ತಮುತ್ತಲೂ ಇದು ಅಧಿಕೃತವಾಗಿ ಬಳಕೆಯಾಗಿತ್ತೆಂದು ನೋಡಬಹುದು. ಹಡಗಲಿಯ ಶಾಸನವೊಂದರಲ್ಲಿ ನಾಲ್ವತ್ತನಾಲ್ಗೇಣ, ಘಳೆಯೆಂದು ಉಲ್ಲೇಖವಾಗಿರುವುದನ್ನು ಕಾಣಬಹುದು.[೬೬] ಬಳ್ಳಾರಿಯ ಶಾಸನವೊಂದರಲ್ಲಿ ಬಿಟ್ಟಭೂಮಿಯನ್ನು ಭೂಮಿಯಯ್ವತ್ತಾರು ಗೇಣಘಳೆ' ಎಂದು ಬಂದಿದೆ.[೬೭] ಹೀಗೆ ಇಂತಹ ಅಳತೆಕೋಲು(ಗೋಲು) ಪ್ರಾಚೀನದಲ್ಲಿರುವುದುದನ್ನು ಶಾಸನಗಳಿಂದ ತಿಳಿಯಬಹುದು. ಪ್ರಾಯಶಃ ಇದೇ ಮೊದಲಾಗಿರಬೇಕು ಭೂ ಅಳತೆಯ ಮಾಪನ ಅಥವಾ ಸಾಧನ. ಇಂತಹ ಮಾಪನಗಳನ್ನು ಉಪಯೋಗಿಸಿ ಭೂಮಿಯನ್ನು ಅಳೆಯುತ್ತಿದ್ದರೆಂದು ಕಾಣಬಹುದು. ಇನ್ನು ಕೆಲವುಗಳಲ್ಲಿ ಕಮ್ಮ, ಮತ್ತರುಗಳ್ನು ಉಪಯೋಗಿಸುತ್ತಿದ್ದರೆಂದು ಕಂಡುಬರುತ್ತದೆ. ಊರಿಂದ ಊರಿಗೆ, ಪ್ರದೇಶದಿಂದ ಪ್ರದೇಶಕ್ಕೆ ಅಳತೆಗೋಲುಗಳ ಹಿನ್ನೆಲೆಯಲ್ಲಿ ಇವುಗಳ ಪ್ರಮಾಣವನ್ನು ಗುರುತಿಸಬಹುದು. ಇವುಗಳ ಖಚಿತ ಪ್ರಮಾಣದ ಉಲ್ಲೇಖ ಬರುವುದು ಕಡಿಮೆ.

ಇಲ್ಲಿಯ ಶಾಸನಗಳೆಲ್ಲ ತೋಟಕಂಬ-೮೦, ತೋಟಕಂಬ-೧೨೦, ಗದ್ದೆಕಂಬ-೩೦೦, ಇನ್ನು ಕೆಲವುಗಳಲ್ಲಿ ತೋಟಕಂಬ-೧ ಎಂದು ಉಲ್ಲೇಖ ಬರುತ್ತದೆ.[೬೮] ಕೆಲವುಗಳಲ್ಲಿ 'ಕೆಯಿ', ಕೆಯ್, ಎಂದು ಉಲ್ಲೇಖವಾಗಿದೆ.[೬೯] 'ಮತ್ತರು' ಎಂಬ ಅಳತೆಯೊಂದಿಗೆ ಇವುಗಳನ್ನು ಹೋಲಿಸಲಾಗಿದೆ. ಮತ್ತರ ಎಂಬುದನ್ನು ಇಂದಿನ 'ಎಕರೆ' ಎಂಬ ಅಳತೆಯೊಂದಿಗೆ ಸರಿದೂಗಿಸುವ ಪ್ರಯತ್ನಗಳೂ ನಡೆದಿವೆ.

ಇಂತಹ ಅಳತೆಯ ಮಾಪನದೊಂದಿಗೆ ಪ್ರಾಚೀನ ಕಾಲದಲ್ಲಿ ಅಳತೆಗಳನ್ನು ಮಾನವನ ಶರೀರದ ವಿವಿದಾಂಗಗಳ ಹೆಸರನ್ನು ಮಾಪನಗಳಾಗಿ ಬಳಸಿರುವುದು ಕಂಡುಬರುತ್ತದೆ. ಅವುಗಳಲ್ಲಿ ಗೇಣು, ತೋಳು, ಅಡಿ, ಆಣೆ, ಬಿಲ್ಲೆ, ದಮ್ಮಡಿ, ಮಾರು, ಇಂಚು, ಗಿದ್ನ, ಮೊಳ ಹೀಗೆ ಗುರುತಿಸಿಕೊಳ್ಳುತ್ತಿದ್ದರು.

ತೆರಿಗೆ ಮತ್ತು ಸುಂಕ (ರಾಜ್ಯಾದಾಯ)

ಒಂದು ನಾಡಿನ ಸುಭದ್ರತೆ ಅಥವಾ ಅಭಿವೃದ್ಧಿ ಅಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ ಎಂದು ಹೇಳಬಹುದಾಗಿದೆ. ಆದ್ದರಿಂದ ನಮ್ಮ ಪ್ರಾಚೀನರು ಅದಕ್ಕೆ 'ರಾಜಕೀಯ' ಎಂಬ ಹೆಸರನ್ನು ಕೊಟ್ಟು ಮನ್ನಣೆ ನೀಡಿದ್ದಾರೆ. ಇದನ್ನು ಮೂರು ಅಂಗಗಳ ಕೋಶವು ಎಂದರೆ ತಪ್ಪಾಗಲಾರದು. ಈ ಕೋಶವನ್ನು ತುಂಬಿಸುವ ಮಾರ್ಗವೇ ತೆರಿಗೆ. ಇತರ ಮೂಲಗಳಿಂದಲೂ ಕೋಶವನ್ನು ತುಂಬಿಸುತ್ತಿದ್ದರು. ವಾಸ್ತವದಲ್ಲಿ ಪಟ್ಟಿ ಮಾಡಿರುವ ವಿವಿಧ ವರಮಾನಗಳನ್ನು ಕುರಿತು, ನಮ್ಮ ತಿಳುವಳಿಕೆ ನಾವು ಸಂಗ್ರಹಿಸುವ ಸಂಗ್ರಹಕ್ಕಿಂತ ರಿಯಾಯತಿಗಳ ಪಟ್ಟಿಗಳೇ ಹೆಚ್ಚು. ಆದರೆ ಪ್ರಾಚೀನ ಕಾಲದಲ್ಲಿ ಬಂದ ವರಮಾನಗಳನ್ನು ತೆರಿಗೆಗೆ ಹೆಚ್ಚು ಬಳಸುತ್ತಿದ್ದರು ಮತ್ತು ಸರಿಯಾದ ರೀತಿಯಲ್ಲಿಯೇ ಸಂಗ್ರಹಿಸುತ್ತಿದ್ದರು. ತೆರಿಗೆಯ ವಿಷಯಗಳಲ್ಲಿ ನಿಜವಾದ(ರೂಪ) ಬೆಲೆಯನ್ನು ಕಟ್ಟುತ್ತಿದ್ದರು, ಕೊಳ್ಳುತ್ತಿದ್ದರು. ಪ್ರತಿಯೊಬ್ಬ ಜನಸಾಮಾನ್ಯರು ತೆರಿಗೆಯಲ್ಲಿ ರಾಜನಿಗೆ ಒಂದು ಭಾಗವೆಂದು ಬೇರ್ಪಡಿಸಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಇದರ ಜೊತೆಗೆ ಒಂದು ನಿರ್ದಿಷ್ಟ ಹಳ್ಳಿಯನ್ನು, ರಾಜನ ವರಮಾನವೂ ಕೂಡಿದಂತೆ, ಬೇರೆ ಮೂಲಗಳಿಂದ ಬರುವ ಸುಂಕವೂ ಸೇರಿದಂತೆ, ಬಲತ್ಕಾರದ ದುಡಿಮೆಯಿಂದಲೂ ಬಂದ ಆದಾಯ, ಧಾನ್ಯ ಹಾಗೂ ಲೋಹಗಳ ಮೇಲಿನ ಕಂದಾಯದ ನಿಗಧಿಯೂ ಸೇರಿ ದಾನ ನೀಡಬೇಕಾಗುತ್ತಿತ್ತು. ರಾಜನು ತನಗೆ ಬಂದ ಭಾಗವನ್ನು ದಾನಪರಿಗ್ರಹಿಗೆ ಕೊಡುತ್ತಿದ್ದನೆಂದು ಹೇಳಬಹುದಾಗಿದೆ. ಏಕೆಂದರೆ ಹಿಂದಿನ ರಾಜ ಮಹಾರಾಜರು ಪ್ರಜೆಗಳ ಯೋಗಕ್ಷೇಮವೇ ಅವರ ಗುರಿಯಾಗಿತ್ತೇ ವಿನಃ ಅಧಿಕಾರ, ಹಣದಾಸೆ, ಗಳಿಕೆಯಾಗಿರಲಿಲ್ಲ. ಇಲ್ಲಿಯ ಕೆಲವು ಶಾಸನಗಳಲ್ಲಿ ತಮ್ಮ ಸಾಮ್ರಾಜ್ಯದ, ನಾಡಿನ ಅಭಿವೃದ್ಧಿಗಾಗಿ ಸಂಗ್ರಹಿಸುತ್ತಿದ್ದ ತೆರಿಗೆಗಳನ್ನು ಹೀಗೆ ನೋಡಬಹುದು. ತೆರಿಗೆಯ ಮುಖಾಂತರ ದಾನಗಳನ್ನು ನೀಡಿದ ವಿವರಗಳು ಕಂಡುಬಂದಿವೆ.

ಈ ಶಾಸನದಲ್ಲಿ ಊರೊಡೆಯ ಪಶುಪತಿಭಟ್ಟನಿಗೆ 'ಬಾಬನ್ದಿಯ' ಎಲ್ಲ ತೆರಿಗೆಯನ್ನು ದಾನ ನೀಡಿದನೆಂದು ಬರುತ್ತದೆ.[೨೦] ಈ 'ಬಾಬನ್ದಿಯ' ಎಂಬ ಪದದ ಅರ್ಥ ಸ್ಪಷ್ಟವಿಲ್ಲ. ಇದು ತೆರಿಗೆ ಒಂದು ಹೆಸರಾದರೂ, ಊರೊಡೆಯನಿಗೆ ನೀಡಿದರು ಎಂದಿರುವುದರಿಂದ, ಊರಿನ ಪ್ರತಿಯೊಬ್ಬರೂ ತೆರಿಗೆ ಕೊಡಬೇಕು. ಅದು ಯಾವುದರ, ಯಾವುದಕ್ಕೆ ಎನ್ನುವುದು ಸ್ಪಷ್ಟವಿಲ್ಲ. ಯಾವುದೇ ವಿಷಯಕ್ಕೆ ಸಂಬಂಧಿಸಿದ ತೆರಿಗೆಯಾಗಿರಬಹುದು. ಆದ್ದರಿಂದ ಬಾಬನ್ದಿಯ ಎಲ್ಲ ತೆರಿಗೆ ಎಂದು ಹೇಳಲಾಗಿದೆ. 'ಬಾಳ್ಗುಳಿಯ ಊರೊಡೆಯ ಪಶುಪತಿ ಭಟ್ಟಂಗೆ' ಎಂದಿರುವುದರಿಂದ ಒಂದರ್ಥದಲ್ಲಿ ಆ ಕಾಲದ ರಾಜನನ್ನು ಸೂಚಿಸಿದರೆ, ಇನ್ನೊಂದರ್ಥದಲ್ಲಿ ಅಲ್ಲಿನ ಪ್ರಮುಖ ದೇವರಾದ ಕಲ್ಲೇಶ್ವರನಿಗೆ ಎಂದು ಹೇಳಬಹುದಾಗಿದೆ. ಏಕೆಂದರೆ ಪಶುಪತಿ ಎಂದರೆ ಶಿವನೆಂದಾಗುತ್ತದೆ. ಆದರೆ ಪ್ರಾಚೀನರು ರಾಜ ಅಥವಾ ಅರಸರನ್ನು ದೇವರೆಂದೇ ತಿಳಿದಿರುವುದನ್ನು ಶಾಸನಗಳೂ ಉಲ್ಲೇಖಿಸುತ್ತವೆ. ಇಲ್ಲಿ ಬಾಬಾನ್ದಿಯ ಸಂಬಂಧದ ರಾಜದ್ರವ್ಯವಾದುದೆಲ್ಲವನ್ನು ದಾನ ಬಿಡಬೇಕೆಂದು ಉಲ್ಲೇಖವಾಗಿರುವುದರಿಂದ ಇದು ರಾಜನಿಗೆ ಸಂಬಂಧಿಸಿದ ತೆರಿಗೆ ಎಂದು ಹೇಳಬಹುದು. ಇದರ ಮುಂದುವರಿದ ಭಾಗದಲ್ಲಿ 'ಇಂತಪ್ಪುದ ಅಯ್ಯುದಿಂಬರು ಕಾದು ಬಾಳ್ವರ್' ಎಂದು ಕಂಡುಬರುತ್ತದೆ. ಪ್ರಾಚೀನ ಕಾಲದಲ್ಲಿ ತೆರಿಗೆ ಪದ್ಧತಿ ಏಕರೂಪವಾಗಿತ್ತು. ಅದನ್ನು ಯಾರಾದರೂ ವ್ಯತ್ಯಾಸ ಮಾಡಿದರೆ, ಅವರು ಹೋರಾಡಿ(ಬಾಳುವುದನ್ನು) ಸಾವನ್ನಪ್ಪುತ್ತಿದ್ದರೆಂದು ಉಲ್ಲೇಖಗಳಾಗಿರುವುದನ್ನು ಗಮನಿಸಬಹುದು.

ಇಲ್ಲಿಯ ಒಂದು ಶಾಸನದಲ್ಲಿ ತೆರಿಗೆಯಲ್ಲಿ ವ್ಯತ್ಯಾಸವಾದಾಗ ಪ್ರಜೆಗಳು ಪ್ರತಿಭಟಿಸಿರುವುದನ್ನು ಸೂಚಿಸುತ್ತದೆ. ಇದು ಎರಡು ಮನೆತನದ ರಾಜರು ಆಳಿದರೆಂದು ಉಲ್ಲೇಖಿಸುತ್ತದೆ.[೨೧] ರಾಷ್ಟ್ರಕೂಟರ ದೊರೆ ಮೂರನೆ ಕೃಷ್ಣನು ತನ್ನ ಆಳ್ವಿಕೆಯಲ್ಲಿ ಒಂದೇ ರೀತಿಯ ತೆರಿಗೆಯನ್ನು ಜಾರಿಗೊಳಿಸಿದ್ದನು. ಆದರೆ ಕಲ್ಯಾಣಿ ಚಾಲುಕ್ಯರ ದೊರೆಯ ಆಳ್ವಿಕೆಯಲ್ಲಿ (ಎರಡನೆ ತೈಲಪ) (ಎಲೆಯ ಹೇರಿನ ಸುಂಕ) ತೆರಿಗೆಯ ಸುಂಕವನ್ನು ಹೆಚ್ಚಿಸಿದನು. ಇದನ್ನು ಸಹಿಸಲಾರದ ಬಾಗಳಿಯ ಮಹಾಜನರು, ಸೆಟ್ಟಿಯರು, ಸಾಸಿರ್ವರು, ತಂಬುಲಿಗರು, ಅಯ್ಯೂರ್ವರು ಸೇರಿ ಅಹವಮಲ್ಲನಲ್ಲಿಗೆ ಹೋಗಿ ಸುಂಕದ ಭಾರದಿಂದಾಗಿ ಅನ್ಯಾಯವನ್ನು ನಿವೇದಿಸಿಕೊಂಡಾಗ, ಇದನ್ನು ಮನಗಂಡು ಮೊದಲಿದ್ದ ಪದ್ಧತಿಯನ್ನೇ ಜಾರಿಗೆ ತರುತ್ತಾನೆ. ಇದನ್ನು ಶಾಸನದಲ್ಲಿ 'ಕನ್ನರ ದೇವನ ಮರ್ಯ್ಯಾದೆಯಲಾದ ಸುಂಕದ ಮರ್ಯ್ಯಾದೆಯಂ ತಪ್ಪದೆ ನಡೆಯಿಮೆಂದು' ಹೇಳಿಕೆಯನ್ನು ಹೊರಡಿಸುತ್ತಾನೆ. ಇದರಿಂದ ಒಬ್ಬೊಬ್ಬರ ಆಡಳಿತ ವ್ಯತ್ಯಾಸವನ್ನು ಎತ್ತಿ ತೋರುತ್ತದೆ. ಆದ್ದರಿಂದ ಇದು ತೆರಿಗೆಯ ಪದ್ಧತಿಯನ್ನು ಪ್ರತಿಭಟಿಸಿದ ಅಪರೂಪದ ದಾಖಲೆಯೆನಿಸಿದೆ. ಈ ಶಾಸನದಲ್ಲಿ ಮುಂದುವರಿದ ಭಾಗದಲ್ಲಿ ಬಾರಿಕ 'ಏಚ' ಎಂಬುವವನಿಗೆ ತೆರಿಗೆ ನೀಡಿದರೆಂದು ಬರುತ್ತದೆ. ಊರಿನ ಪ್ರಮುಖರು ಇವನಿಗೆ ತೆರಿಗೆ ರೂಪದಲ್ಲಿ ಒಂದು ಪೊಕ್ಕಲು ಭಾಗವನ್ನು ದಾನನೀಡಿದರೆಂದು

ಹೇಳಲಾಗಿದೆ. ಮುದ್ದರಸನು(ತೆರಿಗಾಧಿಕಾರಿ) ಊರಿನ ಐವತ್ತು ಮಹಾಜನರ ಸಮ್ಮುಖದಲ್ಲಿ ನೈವೇದ್ಯಕ್ಕೆ, ನಂದಾದೀವಿಗೆಗೆ ಎರಡು ಹೇರಿನ ಸುಂಕ ಮತ್ತು ೧೨ ಪಣಬಿಡಬೇಕೆಂದು, ಮತ್ತೆ ಇದರಲ್ಲಿ ಭಾಗ ಮಾಡಿ, ಪೂಜಾರಿಗೆ ಪುರಾಣ ಓದುವವನಿಗೆ, ಹೂವಿನ ತೋಟಕ್ಕೆ ಎರಡೆರಡು ಪಣ ದಾನ ನೀಡಬೇಕೆಂದು ನಿಬಂಧನೆ ಹಾಕುತ್ತಾನೆ. ಇದರಿಂದ ಇವೆಲ್ಲವುಗಳ ಮೇಲೆ ತೆರಿಗೆಯಿರುತ್ತಿದ್ದುದು ಗೊತ್ತಾಗುತ್ತದೆ. ಇನ್ನು ಈ ಶಾಸನದಲ್ಲಿ ಬಮ್ಮರಸನು ಹಿರಿಯಕೆರೆಯ ಕೆಲಸದಲ್ಲಿ ಬರುವ ಪನ್ನಾಯದ ಸುಂಕದಲ್ಲಿ ತೆರಿಗೆ ನೀಡಬೇಕೆಂದು ಕಂಡುಬರುತ್ತದೆ.[೨೨] ಅಂದರೆ ಕೆರೆಯ ಕೆಲಸವನ್ನು ಗುತ್ತಿಗೆ ಹಿಡಿಸಿಕೊಂಡು(contract) ದುರಸ್ತಿ ಮಾಡಿಸುವಾಗ ಬರುವ ಆದಾಯದಲ್ಲಿ ತೆರಿಗೆ ಕಟ್ಟಬೇಕೆಂದು ಹೇಳಲಾಗಿದೆ. ಇಲ್ಲಿ ಪನ್ನಾಯ ಎಂದರೆ ಎಲೆ ಅಡಿಕೆಗಳ ಮೇಲೆ ಹಾಕುವ ಸುಂಕವೆಂದು ಹೇಳಬಹುದು. ಎಲೆ ಕೆಡುವ ವಸ್ತುವಾದ್ದರಿಂದ(ಪನ್ನಾಯದ) ಪನ್ನಾಯವನ್ನು ವಸ್ತುರೂಪದಲ್ಲಿ ಸ್ವೀಕರಿಸದೆ ಹಣದ ರೂಪದಲ್ಲಿ ಸ್ವೀಕರಿಸುತ್ತಿದ್ದರು. ಆದ್ದರಿಂದ ಶಾಸನಗಳಲ್ಲಿಯೂ ಪನ್ನಾಯವೆಂದೇ ಉಲ್ಲೇಖಿಸಿದೆ. ಈ ಶಾಸನದಲ್ಲಿ ಎಲೆಯ ವ್ಯಾಪಾರದಲ್ಲಿ ಬಂದ ಲಾಭ ಅಥವಾ ಬಡ್ಡಿಯಲ್ಲಿ ದೇವರ ಹೆಸರಿನಲ್ಲಿ ತೆರಿಗೆ ನೀಡಬೇಕು ಎಂದು ಕಂಡುಬರುತ್ತದೆ.[೨೩] ಇನ್ನು ಕೆಲವು ಶಾಸನಗಳಲ್ಲಿ ಕುರಿದೆರಿಗೆ ನೀಡಿರುವುದನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ಕುರಿಯ ಮೇಲೆ ತೆರಿಗೆ ನೀಡಬೇಕೆಂದು ಕುರುಬರಿಗೆ ಹೇಳುವುದು ಕಂಡುಬರುತ್ತದೆ.[೨೪] ಬಾಗಳಿಯ ಚಾಮಿನಾಯಕನ ಮಗ ಹೆಳೆವಿನಾಯಕ ಬಾಗಳಿಯ ಮತ್ತು ಇದರ ಉಪಗ್ರಾಮಗಳ(ಇದೊಂದು ಹೋಬಳಿ ಕೇಂದ್ರವಾಗಿತ್ತು) ಕುರುಬರಿಗೆ ಕುರಿ ತೆರಿಗೆಯನ್ನು ಕೊಡಬೇಕೆಂದು ಹೇಳಲಾಗಿದೆ. ಇಂತಹ ಉಲ್ಲೇಖ ಕೊಟ್ಟೂರಿನ ಶಾಸನದಲ್ಲಿಯೂ ಬರುತ್ತದೆ.[೨೫] ಬಾಗಳಿಯ ಮಾಚಿನಾಯಕನ ಮಗನಾದ ವಾದಿನಾಯಕನು ಕೊಟ್ಟೂರ ಸೀಮೆಯ ಕುರುಬರಿಗೆ, ಕುರಿ ತೆರಿಗೆ ಕೊಡಬೇಕೆಂದು ಕಂಡುಬಂದಿದೆ. ಇದರಿಂದ ಕುರುಬರು ಸಹ ಅಂದಿನ ಕಾಲಕ್ಕೆ ಕುರಿಗಳ ಮೇಲೆಯೂ ತೆರಿಗೆಯನ್ನು ಕಟ್ಟಬೇಕೆಂದು ಉಲ್ಲೇಖವಾಗಿರುವುದನ್ನು ನೋಡಲಾಗಿದೆ. ಈಗಲೂ ಸಹ ಕುರಿದೆರಿಗೆಯನ್ನು ಅಲ್ಲಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೊಡುವುದನ್ನು ಕಾಣಬಹುದು. ಪ್ರಾಚೀನ ಕಾಲದಲ್ಲಿಯೇ ಕುರಿದೆರಿಗೆ ನಿಗದಿಯಾಗಿತ್ತೆಂದು ಹೇಳಬಹುದು. ಈ ಶಾಸನವೊಂದರಲ್ಲಿ ಹಸ್ತಿನಾಪುರದವರೆಗೆ, ಪಾಂಡ್ಯದನಾಡವಳಗಿನ ಕೋಗಳಿಯವರೆಗೆ ಗ್ರಾಮಗಳಲ್ಲಿರುವ ಕುರುಬರು ಕುರಿದೆರಿಗೆ ಕೊಡಬೇಕೆಂದು ಕಂಡುಬರುತ್ತದೆ.[೨೬] ಕೋಗಳಿಯೂ ಸಹ ಹೋಬಳಿ ಗ್ರಾಮವಾಗಿದ್ದರಿಂದ ತೆರಿಗೆಯನ್ನು ಅಲ್ಲಿಗೆ ಬಂದು ಕೊಡಬೇಕಿತ್ತು. ಈ ಶಾಸನದಲ್ಲಿ ಸುಂಕದ ಹೆಗ್ಗಡೆ ಎಂಬುವನು ಕಲಿದೇವರ ನಂದಾದೀವಿಗೆಗೆ, ಎಲೆಯ ಹೇರಿನ ಸುಂಕದೊಳಗೆ ತಿಂಗಳಿಗೆ ಒಂದರಂತೆ ತೆರಿಗೆ ಕೊಡಬೇಕೆಂದು ತಿಳಿಸುತ್ತದೆ.[೨೭] ಇದರಲ್ಲಿಯೂ ಸಹ ರಿಷಿಯಣ್ಣಭಟ್ಟನು ದೇವರ ನಂದಾದೀವಿಗೆಗೆ ತಿಂಗಳಿಗೆ ಒಂದು ಎಲೆಯ ಹೇರಿನ ಸುಂಕದಲ್ಲಿ, ಬಂದ ಲಾಭದಲ್ಲಿ ತೆರಿಗೆ ನೀಡಬೇಕೆಂದು ಉಲ್ಲೇಖಿಸು

[illegible]

ತ್ತದೆ.[೭೮] ಮತ್ತು ಕೆರೆಯ ದುರಸ್ತಿಯನ್ನು ಮಾಡಿಸಲು ಜವಾಬ್ದಾರಿಯನ್ನು ವಹಿಸಿಕೊಂಡ ಊರಿನ ಮಹಜನರು, ದುರಸ್ತಿಯ ಲಾಭದಲ್ಲಿ ಬಂದುದನ್ನು ತಿಂಗಳಿಗೆ ಒಂದು ಪಣವನ್ನು ತೆರಿಗೆ ರೂಪದಲ್ಲಿ ನೀಡಬೇಕು ಎಂದು ಬರುತ್ತದೆ.

ಹೀಗೆ ಎಲ್ಲರೂ ತೆರಿಗೆಯನ್ನು ಸಮನಾಗಿ ಕೊಡಬೇಕೆಂದು ಕಂಡುಕೊಂಡಿದ್ದರಿಂದ ಪ್ರಾಚೀನ ಕಾಲದ ಗ್ರಾಮಗಳು ಶ್ರೀಮಂತಿಕೆಯಿಂದ ಸುಭೀಕ್ಷೆಯಿಂದ ಕೂಡಿದ್ದವು. ಮತ್ತು ಇದರಿಂದ ರಾಜ್ಯಕ್ಕೂ ಒಳಿತು. ಗ್ರಾಮಕ್ಕೂ ಒಳಿತು. ಪ್ರಜೆಗಳು ಸಹ ಅನ್ಯೋನ್ಯವಾಗಿದ್ದರೆಂದು ಹೇಳಬಹುದಾಗಿದೆ.

ಇಲ್ಲಿಯ ಕೆಲವು ಶಾಸನಗಳಲ್ಲಿ 'ನಾಯಿಂದರು' ಎಂದು ಬಂದಿದೆ.[೭೯] ಇದು(ಕ್ಷೌರಿಕ ಹಜಾಮ) ಎಂಬ ಅರ್ಥಕೊಡುತ್ತದೆ. ಆದರೆ ಶಾಸನಗಳಲ್ಲಿ ಇವರ ಮೇಲೆಯೂ ತೆರಿಗೆಯನ್ನು ವಿಧಿಸಿದ್ದರೆಂದು ಉಲ್ಲೇಖವಾಗಿದೆ. ತೆರಿಗೆ ನೀಡುವುದರ ಜೊತೆಗೆ ಇದರಿಂದ ವಿನಾಯತಿಯನ್ನು ಪಡೆದಿದ್ದರು. ರಾಜನಿಯೋಗದ ನಾಯಿಂದರಾದ ಭದ್ರೋಜ, ತಿಮ್ಮೋಜ, ಕೊಂಡೋಜ, ಮತ್ತಿತರರಿಗೆ, ಕೆಲವೊಂದು ತೆರಿಗೆಗಳಿಂದ ವಿನಾಯಿತಿ ಇತ್ತು ಎಂದು ಕಂಡುಬರುತ್ತದೆ. ಅಂದರೆ ಇಲ್ಲಿ ತೆರಿಗೆಗಳಾದ ಕಾಣಿಕೆ, ಕಡ್ದಾಯ, ಬಿಟಿ, ಬಿರಾಡ ಮುಂತಾದ ಇಂತಹ ತೆರಿಗೆಗಳು ಇದ್ದವು. ಇವುಗಳಿಂದ ಇವರಿಗೆ(ರಿಯಾಯತಿ) ವಿನಾಯತಿ ಇತ್ತೆಂದು ಕಂಡುಬರುವುದಾಗಿದೆ. ಬಾಗಳಿಯ ನಾಯಿಂದರ ಜೊತೆಗೆ, ಕೊಟ್ಟೂರ ಸೀಮೆಯ ನಾಯಿಂದರಿಗೆ ತೆರಿಗೆಗಳಿಂದ ವಿನಾಯತಿ ಇತ್ತೆಂದು ಕಂಡಿದೆ. ಅಂದರೆ ಇಲ್ಲಿ ಕ್ಷೌರಿಕರಿಗೂ(ಹಡಪದ) ತೆರಿಗೆ ವಿಧಿಸಲಾಗಿತ್ತು ಎಂದು ಸ್ಪಷ್ಟಪಡಿಸಬಹುದು. ಇಂತಹ ಉಲ್ಲೇಖ ಕೊಟ್ಟೂರಿನ ಶಾಸನದಲ್ಲೂ ಬಂದಿದೆ.[೮೦] ರಾಮರಾಜನು ಕೊಟ್ಟೂರಿನ ಸೀಮೆಯ ನಾಯಿಂದರಿಗೆ ಕಡ್ದಾಯವಾಗಿ ಕೊಟ್ಟ, ಕಡಾಯ, ಬಿಟ, ಕೊಟ್ಟಣ, ತೆರಿಗೆಗಳು. ಈ ತೆರಿಗೆಗಳನ್ನು ತಿಮ್ಮೋಜ ಭದ್ರೋಜ, ಕೊಂಡೋಜ ಎಂಬುವವರು ಕೊಡಬೇಕು. ಬಾಗಳಿಯ ಶಾಸನಗಳಲ್ಲಿ ಇವರಿಗೆ ತೆರಿಗೆಗಳಿಂದ ಮುಕ್ತಿ ಹೊಂದಿದವರೆಂದು ಉಲ್ಲೇಖವಾದರೆ, ಈ ಶಾಸನದಲ್ಲಿ ತೆರಿಗೆ ನೀಡಬೇಕೆಂದು ಉಲ್ಲೇಖವಾಗಿದೆ.[೮೧] ವಿಜಯನಗರದ ಅರಸರ ಕಾಲದಲ್ಲಿ ಇಂತಹ ನಾಯಿಂದರು ಇದ್ದರೆಂದು, ಅವರು ಸಹ ತೆರಿಗೆ ನೀಡಬೇಕೆಂದು ಕಂಡುಬರುತ್ತದೆ.

ಹೀಗೆ ಶಾಸನಗಳಲ್ಲಿ ತೆರಿಗೆ ಪದ್ಧತಿಯು ವರ್ತಕರ ಮೇಲೆ, ಮಾರಾಟ ಮಾಡುವ ವಸ್ತುಗಳ ಮೇಲೆ ತೆರಿಗೆ ಇರುವಂತೆಯೇ, ಅವರು ವ್ಯಾಪಾರದ ಲಾಭದಲ್ಲಿ, ವ್ಯಾಪರಕ್ಕಾಗಿ ಸಂತೆಗೆ ಕೊಂಡೊಯ್ಯುವ ಸರಕುಗಳ ಮೇಲೆಯೂ ತೆರಿಗೆ ಇತ್ತು ಎಂದು ಕಂಡುಕೊಳ್ಳಬಹುದಾಗಿದೆ. ಇದನ್ನು ಬಿ.ಆರ್ .ಹಿರೇಮಠರವರು ಮಾರಾಟ ಸುಂಕ, ಸಂತೆಯ ಸುಂಕವೆಂದು ಅಭಿಪ್ರಾಯಪಟ್ಟಿದ್ದಾರೆ. ದವಸ ಧಾನ್ಯಗಳ ತೆರಿಗೆಯನ್ನು 'ಕೊಟ್ಟಲ್ಲಿ ಕೊಂಡಲ್ಲಿ' ಎಂಬ ಅಳತೆಯಿಂದ ತೆರಿಗೆ ನೀಡಬೇಕೆಂದು ಬರುತ್ತದೆ. ಇದಲ್ಲದೆ ವರ್ತಕರ

ಪ್ರತಿಯೊಂದು ಖಾಯಂ ಅಂಗಡಿಯ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದರು. ಈ ಶಾಸನದಲ್ಲಿ ಅಂಗಡಿಯ ಕಾಳಯ್ಯ ಎಂದಿದೆ. ಅಂದರೆ ಅಂಗಡಿಯ ಕಾಳಯ್ಯನ ಮೇಲೆ ತೆರಿಗೆಯನ್ನು ಹಾಕಲಾಗಿತ್ತೆಂದು ಕಂಡುಬರುತ್ತದೆ. ಇದರಿಂದ ಪ್ರತಿಯೊಂದು ವಸ್ತುಗಳ ಮೇಲೆ ಸುಂಕ ಅಥವಾ ತೆರಿಗೆಯನ್ನು ಕೊಡಬೇಕಾದರೆ ಉಳಿಯುವುದಾದರೂ ಏನು? ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಬಸವಣ್ಣನ ಒಂದು ವಚನದಲ್ಲಿ ಸುಂಕದ ಪರಿತಾಪವನ್ನು ವಿವರಿಸುತ್ತದೆ.[೮೨] ಆದರೆ ಇಲ್ಲಿಯ ಬಹಳಷ್ಟು ತೆರಿಗೆಗಳು ಆಯಾ ದೇವಸ್ಥಾನ ಛತ್ರ ಮತ್ತು ಅಗ್ರಹಾರಗಳಿಗೆ ಬಿಟ್ಟುಕೊಡುವುದರ ಮೂಲಕ ಆಯಾ ಊರಿನ ತೆರಿಗೆ ಆದಾಯದಲ್ಲಿ ಸ್ವಲ್ಪ ಭಾಗವನ್ನು ಅಲ್ಲಿನ ವ್ಯವಸ್ಥೆಗೆ ಉಪಯೋಗಿಸುತ್ತಿದ್ದರು. ದಾನ ಶಾಸನಗಳ ಉದ್ದಕ್ಕೂ ಕಂಡುಬರುವ ಸರ್ವಭಾದಾಪರಿಹಾರ ಎಂಬಂತಹ ಮಾತುಗಳು ದಾನದತ್ತಿಗಳ, ಕರವಿನಾಯತಿಗಳನ್ನು ಪಡೆದಂತೆ ತೆರಿಗೆ ಸುಂಕಗಳಿಂದ ಮುಕ್ತವಾದುದನ್ನು ಸೂಚಿಸುತ್ತವೆ. ಹೀಗೆ ಇಲ್ಲಿಯ ಶಾಸನಗಳಲ್ಲಿ ಉಲ್ಲೇಖವಾಗಿರುವ ತೆರಿಗೆ ಪದ್ಧತಿಯನ್ನು ನೋಡಲಾಯಿತು.

ಸಾಮಾಜಿಕ ಸ್ಥಿತಿಗತಿಗಳು

ವರ್ಗ-ವರ್ಣ(ಜಾತಿ)

ಪರಸ್ಪರ ಸಂಬಂಧವುಳ್ಳ ಜನತೆಯ ವ್ಯವಸ್ಥಿತ ಸಮೂಹವನ್ನು ಸಮಾಜವೆಂದು ಕರೆಯಲಾಗಿದೆ. ಮಾನವ ಮತ್ತು ಸಮಾಜ ಒಂದನ್ನು ಬಿಟ್ಟು ಇನ್ನೊಂದಿರಲಾರದು. ಸಮಾಜದ ಜೀವನದ ಎಲ್ಲ ರಂಗಗಳಲ್ಲೂ ಧರ್ಮ ಹಾಸುಹೊಕ್ಕಾಗಿ ಪರಿಣಮಿಸಿದೆ. ಸಮಾಜವು ಅನೇಕ ವರ್ಗ, ವರ್ಣ, ಜಾತಿ, ವಿವಾಹ, ಕುಟುಂಬ, ಉದ್ಯೋಗ, ಸಂಘ-ಸಂಸ್ಥೆ, ವ್ಯಾಪಾರ ಮುಂತಾದ ಅಂಶಗಳಿಂದ ಕೂಡಿದ್ದು, ಅವು ಆಯಾ ಜನಾಂಗ, ಆಯಾ ಸಮಾಜದ ಜನಗಳಿಂದ ಒಪ್ಪಿಗೆ ಪಡೆದ ಮೌಲ್ಯಗಳಾಗಿವೆ. ಅಂದರೆ ಅನುಕೂಲ ಮತ್ತು ವ್ಯವಸ್ಥೆಗೆ ತಕ್ಕಂತೆ ಒಪ್ಪಂದವೇರ್ಪಡಿಸಿ ಕೊಂಡಿರುತ್ತದೆ. ಇಂತಹ ಒಪ್ಪಂದ ಏರ್ಪಡಿಸಲು ಸಮಾಜ ವನ್ನು ಮತ್ತು ವರ್ಣಪದ್ಧತಿಯನ್ನು ಆಯಾ ವೃತ್ತಿಗನುಗುಣವಾಗಿ ವರ್ಗೀಕರಣ ಮಾಡಲಾಗತ್ತಿತ್ತು. ಅಂದರೆ ಸಮಾಜದ ಬಹುಪಾಲು ಕುಟುಂಬಗಳು ಕೃಷಿಯಾಧಾರದಿಂದಲೇ ಕೂಡಿರುತ್ತಿದ್ದವು. ಅವರ ಮುಖ್ಯ ಕಸುಬು ವ್ಯವಸಾಯವೇ ಆಗಿತ್ತು. ಸುಭದ್ರವಾದ ಸಮಾಜ ರಚನೆಗೆ ಅಲ್ಲಿನ ಆರ್ಥಿಕ ವ್ಯವಸ್ಥೆ ಸರಿಯಾಗಿರುವಂತೆ ನೋಡಿಕೊಳ್ಳುವುದು ಅವಶ್ಯವೆನಿಸುತ್ತದೆ. ಹೀಗಾಗಬೇಕಾದರೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಉದ್ಯೋಗ ನಿರತನಾಗಿರಬೇಕು. ಇದರ ಆಧಾರದ ಮೇಲೆ ವರ್ಗ, ವರ್ಣ, ಜಾತಿ ವ್ಯವಸ್ಥೆಗಳು ನಿರ್ಣೀತವಾಗಿರುತ್ತವೆ. ಜಾತಿ ಎನ್ನುವುದು ಆಯಾ ಕೆಲಸಗಳಿಂದ ಗುರುತಿಸಿಕೊಂಡ ನಮ್ಮ ಸಮಾಜದಲ್ಲಿರುವ ಜಾತಿ ವ್ಯವಸ್ಥೆಯನ್ನು ಖಂಡಿಸಿದ ಬಸವಣ್ಣನವರ ಒಂದು ವಚನದಲ್ಲಿ ನೋಡಬಹುದು.[೮೩] ಕಾಸಿ

ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸವನಿಕ್ಕಿ ಸಾಲಿಗನಾದ,
ವೇದವನೋದಿ ಹಾರವನಾದ

ಎನ್ನುವ ಮಾತು ಸರಿ ಎನಿಸುತ್ತದೆ. ಇಂತಹ ವರ್ಣವ್ಯವಸ್ಥೆಯಲ್ಲಿ ಜಾತಿ ಪದ್ಧತಿ ರಕ್ತಸಂಬಂಧ, 'ಮದುವೆ' ಎಂಬ ಸಾಮಾಜಿಕ ಬಂಧನಗಳು ರೂಪಿತವಾಗಿವೆ. ಇಂತಹ ಪ್ರಯತ್ನ ಪದ್ಧತಿಗಳು ಪ್ರಾಚೀನ ಕಾಲದಲ್ಲಿಯೇ ಕಂಡುಬರುತ್ತಿತ್ತು. ಶಾಸನಗಳ ಉಲ್ಲೇಖವೂ ಆಗಿತ್ತು. ಪ್ರಾಚೀನ ಕರ್ನಾಟಕದಲ್ಲಿ ವರ್ಣಪದ್ಧತಿಯ ಪರಿಪಾಲನೆ ಕಡಿಮೆಯಿತ್ತು. ಈ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಒಂದೊಂದು ಹಳ್ಳಿಯ ಪದ್ಧತಿಗಳನ್ನು ಮೈಗೂಡಿಸಿಕೊಂಡಿರುತ್ತದೆ. ಇಂತಹವುಗಳಲ್ಲಿ ಬಾಗಳಿಯ ಶಾಸನಗಳಲ್ಲಿ ಬೇರೆ ಬೇರೆ ವೃತ್ತಿ, ಜಾತಿ, ಧರ್ಮಗಳು ಬೇರೆ ಬೇರೆ ಕೇರಿಗಳಲ್ಲಿ ಬೀದಿಗಳಲ್ಲಿ ವಾಸಿಸುತ್ತಿದ್ದರೆಂದು ಕಂಡುಬರುತ್ತದೆ.[೮೪] ಇಲ್ಲಿನ ಶಾಸನಗಳು ಬಹುಮಟ್ಟಿಗೆ ಮೇಲುಸ್ತರದ ಜಾತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಉಲ್ಲೇಖಿಸುತ್ತವೆ. ಇಂತಹ ಮೇಲುಸ್ತರದ ಜಾತಿಗಳಲ್ಲಿ ಬ್ರಾಹ್ಮಣರ ಬಗೆಗೆ ಹೆಚ್ಚಿನ ವಿವರಗಳು ಕಂಡುಬರುತ್ತವೆ.

ಮಹಾಜನರು

ಮಹಾಜನರು ಅಂದಿನ ಸಮಾಜದಲ್ಲಿ ಅಗ್ರಸ್ಥಾನ ಪಡೆದಿದ್ದರು. ಜಾತಿಗಳಲ್ಲಿ ಬ್ರಾಹ್ಮಣರೇ ಮೇಲು ಎಂದು ಪಂಪ ಹೇಳುತ್ತಾನೆ. ಪುನಃ ತಾನೇ 'ಮಾನವ ಜಾತಿ ತಾನೊಂದೇ ವಲಂ' ಎಂತಲೂ ಹೇಳುತ್ತಾನೆ. ಆದರೂ ಸಹ ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರು ಮೇಲು ಜಾತಿಯೆಂದೇ ಗುರುತಿಸಿಕೊಂಡಿದ್ದಾರೆ.

ಸಿರುಗುಪ್ಪ ಶಾಸನದಲ್ಲಿ ಬ್ರಾಹ್ಮಣರಿಗಲ್ಲದೆ ಗೊರವುಗಳಿಗೆ ಸಲ್ಲದು ಬ್ರಾಹ್ಮಣ ಪೂಜೆ, ಎಂದು ಉಲ್ಲೇಖವಾಗಿರುವಂತೆ ಇವರೇ ಜಾತಿಯಲ್ಲಿ ಮೇಲುಸ್ತರದ ಸ್ಥಾನವನ್ನು ಪಡೆದಿದ್ದಾರೆ ಎಂದು ತಿಳಿಸುತ್ತದೆ.[೮೫] ಯೋಗವನ್ನು ಮಾಡುವುದು, ಮಾಡಿಸುವುದು, ಓದುವುದು, ಓದಿಸುವುದು, ದಾನ ನೀಡುವುದು, ಸ್ವೀಕರಿಸುವುದು ಇವರ ಕೆಲಸಗಳಾಗಿದ್ದವು. ಇವುಗಳ ಜೊತೆಗೆ ಬೇರೆ ಬೇರೆ ಜವಬ್ದಾರಿಯನ್ನು ವಹಿಸಿಕೊಂಡಿದ್ದರೆಂದು ತಿಳಿಯುತ್ತದೆ. ದೇವಾಲಯಗಳಿಗೆ ನೀಡಿದ ದಾನವು ಸರಿಯಾಗಿ ನಿರ್ವಹಣೆಯಾಗುವಂತೆ ನೋಡಿಕೊಳ್ಳುವುದು. ದೇವಾಲಯದಲ್ಲಿರುವ ಅಥವಾ ನೈಷ್ಟಿಕ ತಪೋಧನರು, ತಮ್ಮ ನೈಷ್ಟಿಕ ಕರ್ತವ್ಯಗಳನ್ನು ಆಚರಿಸುವುದನ್ನು ಗಮನಿಸುವುದು, ಅದನ್ನು ಅಥವಾ ಆ ಆಚರಣೆಯನ್ನು ತಪ್ಪಿದಾಗ ಅವರನ್ನು ಸ್ಥಾನದಿಂದ ಚ್ಯುತಿಗೊಳಿಸಿ, ಬೇರೆಯವರನ್ನು ನೇಮಿಸುವುದು, ಬಂಡವಾಳ ಹಾಕಿ ಕೆರೆಗಳನ್ನು ಕಟ್ಟಿಸುವುದು ಅಥವಾ ಜೀರ್ಣೋದ್ಧಾರ ಮಾಡಿಸುವುದು ಇಂತಹ ಮೇಲು ಜಾತಿಯ ಮಹಾಜನರನ್ನು(ಬ್ರಾಹ್ಮಣ) ನೀಲಗುಂದದ ಒಂದು ಶಾಸನದಲ್ಲಿ ಹೀಗೆ ವರ್ಣಿಸಲಾಗಿದೆ.

ಯಮನಿಯಮ ಸ್ವಾಧ್ಯಾಯಧ್ಯಾನಧಾರಣ ಮೌನಾನುಷ್ಠಾಣಜಪಸ
ಮಾದಿಶೀಳಗುಣಸಂಪನ್ನರುಂಸುಜನ ಪ್ರಸನ್ನರುಂಚತುಃ ಸಮು
ದ್ರಮೇಖಳಾವನೀತಳ ಪ್ರಖ್ಯಾತರುಂ ಏಕವಾಕ್ಯರುಂ ದ್ವಿಜವಂಶಾ
ವತಂಸರುಂ ತ್ರಿಕಾಣ್ಡ ಮೀಮಾಂಸಾರೋವರ ರಾಜ ಹಂಸರುಂಚತು
ರ್ವ್ವೇದ ವೇದಾಂಗೋಪಾಂಗಾಷ್ಟಾದಶಸ್ಮೃತಿಪುರಾಣಾನೇಕ ಶಾಸ್ತ್ರಸಾಹಿ
ತ್ಯ ಪಾರಾವಾರ ಪಾರಂಗತರುಂ ಪಂಚಮಹಾಯಜ್ಞ ಕ್ರಿಯಾನಿರತ
ರುಂಷಟ್ಕರ್ಮ್ಮಪರರುಂ, ಸಪ್ತ ಸೋಮಸಂಸ್ಥಾವಭೃತಾವ ಗಾಹನಪ
ವಿತ್ರೀಕೃತ ಶರೀರರು ಮಷ್ಟಾಂಗಯೋಗ ಪ್ರಯೋಗರುಂನವಸೂತ್ರ
ವಿರಾಜಮಾನವಿಶಾಳೋರಸ್ಕರುಂ ದಶದಿಶಾಧವಳಿತ ಮಹಾ
ಯಶಸ್ಕರುಂ ಚತುರ್ದ್ದಶವಿದ್ಯಾ ಪಾರಗರುಂ ದ್ವಾತ್ರಿಂಶತುಸಹಸ್ರ
ಸಮಯಾಗ್ರಗಣ್ಯರುಂ ಮನವರತ ಸಮುಪಾರ್ಜ್ಜಿತಪುಣ್ಯರುಂ[೮೬]

ಅಂದರೆ ಯಜನ, ಯಾಜನ, ಅಧ್ಯಾಪನ, ಅಧ್ಯಯನ, ವೇದಾಧ್ಯಯನ, ಯೋಗನಿರತರು, ಷಟ್ಕರ್ಮಗಳನ್ನು ತ್ಯಜಿಸುವುದು, ಶರೀರವನ್ನು ದಂಡಿಸುವುದು. ಇವರ ಕೆಲಸಗಳಾಗಿದ್ದವು. ಪುರಾಣಶಾಸ್ತ್ರಗಳನ್ನು ಓದಿಸುವುದು, ಓದುವುದು, ಯಜ್ಞಯಾಗಗಳನ್ನು ಮಾಡುವುದು, ಮಾಡಿಸುವುದು ಅವರ ಷಟ್ಕರ್ಮಗಳಾಗಿದ್ದವು. ಇಂತವರನ್ನು ಶಾಸನಗಳಲ್ಲಿ 'ಮಹಾಜನರು', 'ಐವತ್ತುಮಹಾಜನರು' ಎಂದು ಬಹುಪಾಲು ಶಾಸನಗಳಲ್ಲಿ ಉಲ್ಲೇಖವಾಗಿವೆ.[೮೭] ಇನ್ನು ಕೆಲವುಗಳಲ್ಲಿ 'ಬಾಗಳಿಯ ಊರೊಡೆಯ ಪ್ರಮುಖ ಮಹಾಜನ ಐವದಿಂಬರು' ಎಂದು ಬಂದಿದೆ.[೮೮] ಇದರಿಂದ ಇಲ್ಲಿ ಇವರಿಲ್ಲದೆ ಬೇರೆ ಏನೂ ಕೆಲಸ ಕಾರ್ಯಗಳನ್ನು, ದಾನ ಮಾಡುವಂತಿಲ್ಲ, ದಾನದತ್ತಿಗಳನ್ನು ಬಿಡುವಂತಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಮೇಲೆ ಹೇಳಿದ ಉಲ್ಲೇಖವೆ ಇಲ್ಲಿಯ ಶಾಸನಗಳಲ್ಲಿ ಬಂದಿದೆ. ಈ ಶಾಸನದಲ್ಲಿ ಶ್ರೀಸ್ವಯಂಭುಕಲಿದೇವ ಪಾರಾರಾಧಕರುಂ, ಶ್ರೀ ಮಹಾಲಕ್ಷ್ಮೀವರ ಪ್ರಸಾದರುಮಪ್ಪ ಶ್ರೀಮದುಹರಿಶ್ಚಂದ್ರ ದತ್ತಿಯಗ್ರ, ಮಹಾಗ್ರಹಾರಂ, ಬಾಳ್ಗುಳಿಯೂರೊಡೆಯ ಪ್ರಮುಖವಿಶೇಷ ಮಹಾಜನಗಳು ಐವಂದಿರ ಸನ್ನಿಧಾನದೊಳ್' ಎಂದು ಉಲ್ಲೇಖವಾಗಿದೆ.[೮೯] ಹೀಗೆ ಸಮಾಜದಲ್ಲಿ ಉನ್ನತ ಸ್ಥಾನ(ಪಡೆದ) ಹೊಂದಿದ್ದ ಇವರು ಪೌರೋಹಿತ್ಯದಿಂದಾಗಿ, ರಾಜಕೀಯದಲ್ಲೂ ಪ್ರಮುಖ ಸ್ಥಾನವನ್ನು ಪಡೆದಿದ್ದರು. ಇಲ್ಲಿ ವಿದ್ಯಾಗುರುಗಳಾದ ಮಹಾಜನರಾದ ಸೋಮಸಿಂಘಭವಾರ ಎಂಬುವವನನ್ನು ಮಹಾಮಾತ್ಯ, ಪದವಿರಾಜಮಾನ, ಉನ್ನತ ಪ್ರಭುಗಳು, ಅಧಿಕಾರದ ಪದವಿಗಳನ್ನು ಹೊಂದಿದ್ದರೆಂದು ಕಂಡುಬರುತ್ತದೆ.[೯೦] ಅಂದರೆ ಒಂದು ರೀತಿಯಲ್ಲಿ ಚಾಲುಕ್ಯರ ಅರಸರು ಹೊಂದಿದ ಬಿರುದುಗಳನ್ನು ಹೊಂದಿದರೆಂದು ಕಂಡುಬಂದಿದೆ. ಇದರಿಂದ ಬ್ರಾಹ್ಮಣರು ಕೇವಲ ಪೂರ್ವಾಚಾರದ, ಪುರೋಹಿತ್ಯ ಸಂಪ್ರದಾಯಗಳನ್ನು, ಆಚಾರ, ನಿಯಮ, ಬಂಧನಗಳ ಕಟ್ಟಿನಲ್ಲಿ ಬಂಧಿತರಾಗದೆ, ಇತರ ವೃತ್ತಿಗಳನ್ನು ಹೇಗೆ ಅವಲಂಬಿಸತೊಡಗಿದ್ದರೆಂದು ಗೊತ್ತಾಗುತ್ತದೆ. ಇವರಲ್ಲಿಯೇ ಕೆಲವೊಂದು ವಿಶಿಷ್ಟ ಕುಲಗೋತ್ರಗಳಿದ್ದವು ಎಂದು ಕಂಡುಬರುತ್ತದೆ. ಇವರು

ಋಷಿಗೋತ್ರದವರೆಂದು ಕೆಲವರು ವಿಶ್ವಾಮಿತ್ರಗೋತ್ರ, ವಶಿಷ್ಟಗೋತ್ರ, ವಿಷ್ಣುಗೋತ್ರದವರೆಂದು ಹೆಸರಿಸುತ್ತವೆ.[೯೧]

ಮಹಾಜನರ ಪಾಂಡಿತ್ಯ, ಶಾಸ್ತ್ರ ಪರಿಜ್ಞಾನಗಳು ವಿದ್ಯಾಕ್ಷೇತ್ರದಲ್ಲಿ ಅವರಿಗೆ ಅಪಾರವಾದ ಗೌರವವನ್ನು ತಂದುಕೊಟ್ಟಿದ್ದವು. ಆ ಮೂಲಕ ಅವರು ಎಲ್ಲಾ ಕ್ಷೇತ್ರಗಳಲ್ಲಿಯೂ ಅಗ್ರಮಾನ್ಯರಾಗಿದ್ದರು. ಅದಕ್ಕಾಗಿ ಇವರಿಗೆ ಅರಸರು, ಅಧಿಕಾರಿಗಳು ಮತ್ತು ಇತರೆ ಜನರು ಅವರಿಗೆ ಅನೇಕ ದಾನ-ದತ್ತಿಗಳನ್ನು ನೀಡಿದರು. ಅಗ್ರಹಾರಗಳಂತೂ ಅವರಿಗಾಗಿಯೇ ನಿರ್ಮಾಣಗೊಂಡಿದ್ದವು. ಇವರು ಅಗ್ರಹಾರಗಳಲ್ಲಿ ವಾಸಿಸುತ್ತಿದ್ದಂತೆಯೇ, ಇತರ ಧರ್ಮಗಳಲ್ಲಿ ಗೌರವವನ್ನು ತೋರುತ್ತಿದ್ದರು. ದೇವಸ್ಥಾನಗಳಿಗೆ ದತ್ತಿಯನ್ನು ನೀಡಿದ್ದರು. ಇತರರು ಬಿಟ್ಟದತ್ತಿಗಳನ್ನು ರಕ್ಷಿಸುತ್ತಿದ್ದರು. ಹೀಗೆ ಹಿರಿತನವನ್ನು ಪ್ರದರ್ಶಿಸಿ ಸಾಂಸ್ಕೃತಿಕ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡಿದ್ದರೆಂದು ಇಲ್ಲಿ ಉಲ್ಲೇಖವಾಗಿರುವ ಶಾಸನಗಳಿಂದ ತಿಳಿಯಬಹುದಾಗಿದೆ.

ಅಗ್ರಹಾರ : ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದಲ್ಲಿ ಕಂಡುಬರುವ ಒಂದು ಪ್ರಮುಖ ಅಂಶವೆಂದರೆ ಅಗ್ರಹಾರಗಳು. ಇವು ಊರೂರುಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ನಿರ್ಮಾಣಗೊಂಡಿದ್ದವು. ಜೊತೆಗೆ ಮಠಗಳು ಇದ್ದವು. `ಅಗ್ರಹಾರ` ಎಂಬ ಪದದಲ್ಲಿ ಎರಡು ಅರ್ಥಗಳು ಅಡಗಿವೆ. ಅಗ್ರಹಾರ = ಅಗ್ರ-(ಶ್ರೇಷ್ಟ, ಉನ್ನತ) ಎಂದಾದರೆ, ಆಹಾರ-ಎಂದರೆ (ಸ್ಥಳ) ಪದಾರ್ಥ ಎಂದು ಗುರುತಿಸುವುದಾದರೆ, ಅದು ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ. ಊರು ಅಥವಾ ವಸ್ತು, ಪದಾರ್ಥವೆಂದು ಪರಿಗಣಿಸಬಹುದು. ಅಂದರೆ ಇಲ್ಲಿ ಶ್ರೇಷ್ಠರೆಂದರೆ ಚತುರ್ ವರ್ಣದಲ್ಲಿ ಅಗ್ರರಾದ ಬ್ರಾಹ್ಮಣರೆನ್ನಲಾಗಿದೆ. ಆದ್ದರಿಂದ ಅವರಿಗೆ ದತ್ತಿಯಾಗಿ ಬಿಟ್ಟುಕೊಟ್ಟ ಊರುಗಳೇ ಅಗ್ರಹಾರಗಳು. ಈ ದತ್ತಿಗಳನ್ನು ಸಾಮಾನ್ಯವಾಗಿ ಬ್ರಾಹ್ಮಣರಿಗೆ ಬಿಟ್ಟು ಕೊಡಲಾಗುತ್ತಿದ್ದರೂ, ಕೆಲವು ಸಂದರ್ಭಗಳಲ್ಲಿ ಬ್ರಾಹ್ಮಣರೇತರರಿಗೂ ಬಿಟ್ಟುಕೊಟ್ಟಿರುವ ಉದಾಹರಣೆಗಳು ಉಂಟು. ಆದರೆ ಬಾಗಳಿ ಒಂದು 'ಭತ್ತಗ್ರಾಮ'ವಾಗಿದ್ದರೂ, ಬ್ರಾಹ್ಮಣರಿಗೆ ದತ್ತಿಬಿಟ್ಟ ಅಗ್ರಹಾರವಾಗಿದೆ. ಇಲ್ಲಿನ ಬಹುಪಾಲು ಶಾಸನಗಳಲ್ಲಿ ಅಗ್ರಹಾರವೆಂದು ಉಲ್ಲೇಖವಾಗಿದೆ. ಈ ಶಾಸನದಲ್ಲಿ 'ಶ್ರೀ ಮತುಹರಿಶ್ಚಂದ್ರ ದತ್ತಿಯ ಮಹಾಗ್ರಹಾರವೆಂದು ಉಲ್ಲೇಖವಾಗಿದೆ. ಇದು ಅನಾದಿ ಅಗ್ರಹಾರವೆಂದು ಉಲ್ಲೇಖಿಸಿದೆ. ಈ ಅಗ್ರಹಾರದಲ್ಲಿ(ಐವತ್ತು) '೫೦ ಮಹಾಜನರು' ಇದ್ದರೆಂದು ತಿಳಿಯುತ್ತದೆ. ಈ ಆಧಾರದಿಂದ ಬಾಗಳಿ ಕ್ರಿ.ಶ.೯೨೨ಕ್ಕಿಂತ ಮೊದಲೇ ಅಗ್ರಹಾರವಾಗಿದ್ದ ಬಗ್ಗೆ ತಿಳಿದುಬರುತ್ತದೆ. ಕ್ರಿ.ಶ.೧೦೬೦ರ ಒಂದು ಶಾಸನದಲ್ಲಿ 'ಬಾಗಳಿ ಮತ್ತು ಕಾರಿಟ್ಟಗೆ' ಮೊದಲಾದ ಭತ್ತಗ್ರಾಮಗಳು ಈ ಪ್ರದೇಶದಲ್ಲಿದ್ದ ಬಗ್ಗೆ ಉಲ್ಲೇಖ ಬರುತ್ತದೆ.[೯೨] ಭತ್ತ ಗ್ರಾಮಗಳೆಂದರೆ 'ರಾಜನಿಂದ, ಯಾವುದೇ ಅಧಿಕಾರಿಗೆ ಅಥವಾ ವ್ಯಕ್ತಿಗೆ ಸಂಪೂರ್ಣ ಸ್ವಾಮ್ಯಸಮೇತ ಬಿಟ್ಟುಕೊಡಲಾದ ಹಳ್ಳಿ' ಎಂದಾಗುತ್ತದೆ. ಆದರೆ ಇದನ್ನು ಜಹಗೀರು ಕೊಟ್ಟಿರುವುದು ಅಥವಾ ಇನಾಮು ಕೊಟ್ಟಿರುವುದು ಎಂದು ಕಲಬುರ್ಗಿಯವರು

ಅಭಿಪ್ರಾಯ ಪಡುತ್ತಾರೆ.[೬೩] ಭತ್ತಗ್ರಾಮವೆಂದರೆ ಬ್ರಾಹ್ಮಣೇತರರಿಗೆ ದೊರೆಯಬಹುದಾದ ಕಾಣಿಕೆ ಎಂದು ಊಹಿಸುತ್ತಾರೆ. ಆದರೆ ಬಾಗಳಿಯನ್ನು ಬ್ರಾಹ್ಮಣರಿಗೆ ಬಿಟ್ಟ ಅಗ್ರಹಾರವೆಂದು ಶಾಸನಗಳಿಂದ ಸ್ಪಷ್ಟಪಡಿಸಬಹುದು. ಇದು ಭತ್ತಗ್ರಾಮವಾದರೂ ದತ್ತಿಬಿಟ್ಟ ಅಗ್ರಹಾರವೆಂದು ಗುರುತಿಸಿದೆ. ಇದು ಕ್ರಿ.ಶ.೯೨೨ ರಿಂದ ೧೦೬೦ರ ನಂತರವೂ ಮಹಾಜನರ ಒಂದು ಅಗ್ರಹಾರವಾಗಿಯೇ ಮುಂದುವರಿದಿತ್ತು. ಇಲ್ಲಿಯ ಇನ್ನೊಂದು ಶಾಸನದಲ್ಲಿ 'ದುಗ್ಗಿಮಯ್ಯ ಪ್ರತಿಷ್ಠಾಪಿಸಿದ ಆದಿತ್ಯ ದೇವರಿಗೆ ಬಾಗಳಿಯ ಐವತ್ತು ಮಹಾಜನರು ದತ್ತಿಬಿಟ್ಟರೆಂದು ತಿಳಿಸುತ್ತದೆ.[೬೪] ಅಂದರೆ ಕಲ್ಲೇಶ್ವರ ದೇವರ ಮೂರ್ತಿಯನ್ನು ಮಾಡಿಸಿಕೊಟ್ಟರು ಎಂದು ಕಂಡುಬರುತ್ತದೆ. ಇದು ಅಗ್ರಹಾರದಲ್ಲಿರುವ ಮಹಾಜನರ ಸಾಮಾಜಿಕ ಕಾಳಜಿಯನ್ನು ಎತ್ತಿತೋರಿಸುತ್ತದೆ.

ಅಗ್ರಹಾರಗಳಲ್ಲಿರುವ ಮಹಾಜನಗಳ ಸಂಖ್ಯೆಯನ್ನು(ಅಲ್ಲಿರುವ ವಯಸ್ಕರಾಗಿರಬಹುದು, ಗೃಹಸ್ಥನಾಗಿರಬಹುದು) ಶತಮಾನಗಳು ಉರುಳಿದರೂ, ಶತಮಾನದುದ್ದಕ್ಕೂ ಒಂದೇ ಸಂಖ್ಯೆಯಲ್ಲಿ ಮುಂದುವರಿದುಕೊಂಡು ಬಂದಿರುವುದನ್ನು ಶಾಸನಗಳಲ್ಲಿ ಕಾಣಬಹುದು. ಇದೊಂದು ಸೋಜಗವೇ ಸರಿ. ಇವರನ್ನು ಕೆಲವು ಶಾಸನಗಳಲ್ಲಿ 'ಅಶೇಷ' ಎಂದು ಕರೆದಿವೆ.[೬೫] ಇದು 'ಸಮಸ್ತ' ಎಂಬ ಅರ್ಥವನ್ನು ಕೊಡುತ್ತದೆ. ಅಂದರೆ ಅಗ್ರಹಾರದಲ್ಲಿರುವ ಮಹಾಜನರು ಅಥವಾ 'ವಿಪ್ರರು' ಎಂದು ಹೇಳಲಾಗುತ್ತದೆ. ಈ ಶಾಸನದಲ್ಲಿ 'ಸಬಾಳವೃದ್ಧ ಸಹಿತವಶೇಷಂ' ಕಲಿದೇವಸ್ವಾಮಿಯ ದೇವಾಲಯದೊಳ್ನೆರೆದು' ಎಂದು ಕಂಡುಬರುತ್ತದೆ.[೬೬] ಇದು ಬಾಳ್ಗುಳಿಯ ಊರೊಡೆಯ ಪ್ರಮುಖವಶೇಷ ಮಹಾಜ(ನಂ)ಗಳಯ್ಬುದಿಂಬರ' ಎಂದು ಉಲ್ಲೇಖವಾಗಿದೆ.[೬೭] ಇವೆರಡರಲ್ಲೂ 'ಅಶೇಷ' ಎಂದು ಬಂದಿರುವುದನ್ನು ಗಮನಿಸಬಹುದು. ಇಂತಹ ಉಲ್ಲೇಖ ಇನ್ನು ಕೆಲವು ಶಾಸನಗಳಲ್ಲಿ ಕಂಡುಬರುತ್ತದೆ.

ಹೀಗೆ ಅಗ್ರಹಾರಗಳ ಎಲ್ಲ ಚಟುವಟಿಕೆಗಳು ಸಾಮಾನ್ಯವಾಗಿ ಮಹಾಜನರ ಸಮ್ಮುಖದಲ್ಲಿ ನಡೆಯುತ್ತಿದ್ದವು. ಇವರು ಅಗ್ರಹಾರದ(ಗಳ) ಒಡೆಯರಾಗಿ ಯಾವುದೇ ಕುಂದುಕೊರತೆಗಳು ಬಾರದಂತೆ, ದಾನಧರ್ಮಗಳನ್ನು ನೀಡುವಲ್ಲಿ ಎಚ್ಚರಿಕೆ ವಹಿಸುತ್ತಿದ್ದರು. ಊರಿನ ಯಾವ ವ್ಯಕ್ತಿಯಾಗಲಿ ಇತರ ದಾನಧರ್ಮಗಳನ್ನು ಬಿಡಬೇಕಾದಾಗ ಈ ಮಹಾಜನರ ಅನುಮತಿಯನ್ನು ಪಡೆಯಬೇಕಾಗಿತ್ತು. ದಾನ ಸ್ವೀಕರಿಸುವಾಗ ಅದರ ಬಳಕೆಯೊಂದಿಗೆ, ಅವುಗಳ ಪ್ರತಿಪಾಲನೆಯೂ ಮಹಾಜನರ ಮುಖ್ಯ ಕರ್ತವ್ಯವಾಗಿತ್ತು. ಆದ್ದರಿಂದ ಇಲ್ಲಿನ ಬಹುಪಾಲು ಶಾಸನಗಳಲ್ಲಿ 'ಮಹಾಜನರ ಸನ್ನಿದಾನದೊಳ್ ' ಎಂದು ಉಲ್ಲೇಖವಾಗಿರುವುದು ಕಂಡುಬರುತ್ತದೆ.[೬೮] ಅಗ್ರಹಾರಗಳಲ್ಲಿ ವಾಸುತ್ತಿದ್ದುದಕ್ಕೆ ವಿದ್ವಾಂಸ, ಪಂಡಿತ ಎಂದು ಬಣ್ಣಿಸಿರುವುದನ್ನು ಗಮನಿಸಬಹುದಾಗಿದೆ.[೬೯] ಇನ್ನು ಇವರು ಎಲ್ಲಾ ಸಮಯದಲ್ಲೂ ಅಗ್ರಹಾರಗಳಲ್ಲಿ ಇರುತ್ತಿರಲಿಲ್ಲ.

[illegible]

[illegible]

[illegible]

ಗ್ರಾಮದಲ್ಲಿ ಒಂದು ಕಡೆಗೆ ಮನೆಯನ್ನು ಮಾಡಿಕೊಂಡು ವಾಸಿಸುತ್ತಿದ್ದರೆಂದು ತಿಳಿದುಬರುತ್ತದೆ. ಇವರು ವಾಸವಾಗಿರುವ ಕೇರಿಗಳನ್ನು 'ಬ್ರಹ್ಮಪುರಿ' ಎಂದು ಕರೆಯಲಾಗುತ್ತಿತ್ತು. ಇಲ್ಲಿಯ ಒಂದು ಶಾಸನದಲ್ಲಿ ಬಾಗುಳಿಯ ಮಹಾಜನಮಯ್ವದಿಂಬರು ಪುರಾಣದ ಈಶ್ವರ ಭಟ್ಟೋಪಾಧ್ಯಾಯರಿಗೆ ಸೋಮನಾಯಕ ಕೊಟ್ಟ, ಕಟ್ಟೆಯ ಕೆರೆಯ ತೋಟ,(ಕಂಮೆ) ೬೦ ಕಮ್ಮ ಮತ್ತರು, ಶ್ರೀ ಕಲಿದೇವರ ಬ್ರಹ್ಮಪುರಿಗಳಾಗಿ, ಶ್ರೀಮಾನ್ಯವಾಗಿ ಸಲ್ಲಿಸುವರು ಎಂದು ಉಲ್ಲೇಖವಾಗಿದೆ.[೧೦೦] ಅಂದರೆ ಇವರು 'ಕಲಿದೇವರ ಬ್ರಹ್ಮಪುರಿಗಳಾಗಿ' ಎಂದಿರುವುದರಿಂದ ಇಲ್ಲಿ ಅಗ್ರಹಾರವೇ ಬ್ರಹ್ಮಪುರಿಯಾಗಿತ್ತೆಂದು ಕಂಡುಬರುತ್ತದೆ. ಕುರುಗೋಡಿನ ಒಂದು ಶಾಸನದಲ್ಲಿ ಬ್ರಹ್ಮಪುರಿಗಳಿಗೆ ದಾನ-ದತ್ತಿಗಳನ್ನು ನೀಡುತ್ತಿದ್ದರೆಂದು ಬರುತ್ತದೆ.[೧೦೧] ಇಂತಹ ಬ್ರಹ್ಮಪುರಿಗಳಿಗೆ ಇದರ ಅಭಿವೃದ್ಧಿಗೆ 'ವೃತ್ತಿ'ಯಾಗಿ ಬಿಟ್ಟುದುದು ಸಾಕಾಗುತ್ತಿರಲಿಲ್ಲ. ಆದ್ದರಿಂದ ಈ ಶಾಸನದಲ್ಲಿ 'ಶ್ರೀಮದ್‌ಅನಾದಿಯಗ್ರಹಾರಂ, ಹರಿಶ್ಚಂದ್ರದತ್ತಿಯಬಾಗುಳಿಯ ಶ್ರೀ ಮದ್‌ಶೇಷ ಮಹಾಜನಂಗಳು ಗ್ರಾಮಸಮಯ ಯೀ ದಿನಂ ಮೊದಲಾಗಿ ಬ್ರಾಹ್ಮಣರಿಗೆ ಸಾಮ್ಯವಡಿಕೆಯಿಲ್ಲ. ವೃತ್ತಿ ವ್ಯವಹಾರವಿಲ್ಲ' ಎಂದು ಉಲ್ಲೇಖ ಬಂದಿದೆ.[೧೦೨] ಈ ವೃತ್ತಿಯ ಒಡೆತನವು ಗುಣದಲ್ಲಿ ಶ್ರೇಷ್ಠನಾದವನಿಗೆ ದೊರೆಯುತ್ತಿತ್ತೆಂದು ಹೇಳಲಾಗಿದೆ. ಅಂದರೆ ಬಾಗುಳಿಯ ಮಹಾಜನರು ಬಾಗಳಿಯ ಬ್ರಾಹ್ಮಣರಿಗೆ, ಗ್ರಾಮ್ಯಸಾಮ್ಯದಿಂದ ವಿನಾಯತಿ ನೀಡುತ್ತಾರೆ ಎಂದು ಕಂಡುಬರುತ್ತದೆ. ಪ್ರಾಚೀನ ಕಾಲದಲ್ಲಿ ಇವರಿಗೆ ತೆರಿಗೆ ಇರುತ್ತಿರಲಿಲ್ಲವೆಂದು ಹೇಳಬಹುದು. ಬದಲಾಗಿ ಕೆಲವೊಂದು ಆದಾಯ ತೆರಿಗೆಗಳಿಂದ ಮುಕ್ತಹೊಂದಿರಬೇಕು.

ಈ ಶಾಸನಗಳಲ್ಲಿ ಅಗ್ರಹಾರದಲ್ಲಿ ವಾಸವಾಗಿದ್ದ ಬ್ರಾಹ್ಮಣರು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದರೆಂದು ಉಲ್ಲೇಖಿಸುವುದರ ಜೊತೆಗೆ ಇವರ ವಂಶಾವಳಿಯನ್ನು ಹೇಳಿರುವುದನ್ನು ಗಮನಿಸಬಹುದು. ಇದರಲ್ಲಿ ಬೆಣ್ಣೆಯ ಮಾಳಪ್ಪಯ್ಯನ ಹೆಂಡತಿ ರಾಮಿಯಕ್ಕನ(ಮಗಳು) ಇವಳ ಮಗನಾದ ಚಿದ್ದಣನ ಪತ್ನಿಯಾದ ಧರ್ಮವ್ವೆ ಎಂಬುವವಳು, ಬಾಗುಳಿಯಲ್ಲಿ ಲಕ್ಷ್ಮೀನಾರಾಯಣ ದೇವರನ್ನು ಸ್ಥಾಪಿಸಿ, ಪುರಾಣ ಹೇಳುವವನಿಗೆ, ಶಾಸ್ತ್ರವ್ಯಾಖ್ಯಾನ ಮಾಡುವವನಿಗೆ, ಅಗ್ರಾಸನದ ಬ್ರಾಹ್ಮಣ ಭೋಜನಕ್ಕೆ ಮುಂತಾದ ಕಾರ್ಯಗಳಿಗೆ ದಾನ ನೀಡಿದಳೆಂದು ಉಲ್ಲೇಖ ಬರುತ್ತದೆ.[೧೦೩] ಮುಂದುವರಿದ ಭಾಗದಲ್ಲಿ ಈಕೆಯ ವಂಶಾವಳಿ ಮತ್ತು ಹೊಗಳಿಕೆ ಕಂಡುಬರುತ್ತದೆ. ಆದರೆ ಶಾಸನದ ಹೆಚ್ಚಿನ ಭಾಗ ತ್ರುಟಿತವಾಗಿರುವುದರಿಂದ ಸ್ಪಷ್ಟತೆ ಬರುವುದಿಲ್ಲ. ಆದರೂ ಕೆಲವೊಂದು ಹೊಗಳಿಕೆಯ ಮಾತುಗಳನ್ನು ಕಂಡುಬಂದಿವೆ. ಶ್ರೀರಮಣಿ ಚಿದ್ದರಾಂಗನೆ, ಸೀತೆಸೌಭಾಗ್ಯ, ಪತಿವ್ರತೆ, ಭಾರತೀಕಾಂತೆ, ಸಮಸ್ತ ಶುಭಲಕ್ಷಣೆ, ಧರ್ಮವ್ವೆಯ ವಂಶಾವತಾರ ಸ್ತ್ರೀ ಕುಲದಾರಿಕೆಯಾದುದು ಎಂದು ಹಾಗೆಯೇ ಕೆಲವೊಂದು ಉಪಮಾಲಂಕಾರದ ಪದಗಳನ್ನು ಹೋಲಿಸಿ ಹೇಳಿರುವುದು ಕಂಡುಬರುತ್ತದೆ. ಹಂಸಯಾನೆ, ಧರಣೀಸುತೆ, ಫೇನಾಂಬರೆ, ಮೀನಲೋಚನೆ, ಧರ್ಮಾಂಗನೆ ಎಂಬ ಅಲಂಕಾರಿಕ ಪದಗಳು ಬಳಕೆಯಾಗಿವೆ. ಇಂತಹ

[illegible]

[illegible]

ಉಲ್ಲೇಖ ಹಡಗಲಿ ಶಾಸನದಲ್ಲಿ ಕಂಡುಬರುತ್ತದೆ. ಈ ಶಾಸನವೊಂದರಲ್ಲಿ ಚಿದ್ದರಾಜನನ್ನು 'ಮನುಮಾರ್ಗ್ಗಚರಿತ್ರೆ' ಎಂದು ಸೂಚಿಸುತ್ತದೆ.[೧೦೪]

ಹೀಗೆ ಬಾಗಳಿ ಅಗ್ರಹಾರವಾಗಿತ್ತು. ಹಾಗೆಯೇ ಇಲ್ಲಿರುವ ಮಹಾಜನರ ಸ್ಥಾನಮಾನವನ್ನು ನೋಡಲಾಯಿತು. ಇಂತಹ ಅಗ್ರಹಾರಕ್ಕೆ ಅಪವಾದವೆನ್ನುವಂತೆ ಕುರುವತ್ತಿ ಶಾಸನದಲ್ಲಿ[೧೦೫] ಮಹಾಜನರನ್ನು ಬೈದು, ಹೊಡೆದು ಅವರ ಮನೆಯನ್ನು ಕೊಳ್ಳೆ ಹೊಡೆದು ಓಡಿ ಹೋಗಿರುವುದರ ಪಾಪಕ್ಕೆ ಶಿಕ್ಷೆಯನ್ನು ಅನುಭವಿಸಿದನೆಂಬ ಉಲ್ಲೇಖ ಬರುತ್ತದೆ. ಅಂದರೆ ಗಂಡರಾದಿತ್ಯ ಹೊಳಲ ಎಂಬುವವನು ಅಗ್ರಹಾರದ ಒಡೆಯನಾಗಿದ್ದಾಗ ಮನ್ನೆಯ ಬೊಪ್ಪಯನು ಹೊಳಲನ್ನು ಸೆರೆಹಿಡಿದು ಗ್ರಾಮವನ್ನು ಸುಲಿಗೆ ಮಾಡಿ, ಬ್ರಾಹ್ಮಣರನ್ನು ಕೊಂದನೆಂದು ದೊರೆಗೆ(ತ್ರಿಭುವನಮಲ್ಲ) ದೂರು ನೀಡಿದಾಗ ದೊರೆಯು ಅವನನ್ನು ಕರೆಸಿದಂಡಿಸಿ ಅವನು ಮತ್ತು ಅವನ ಸಂತತಿಯವರು ಹೊಳಲಿನ ಮನ್ನೆಯವನ್ನು ಪಡೆಯದಂತೆ ಆಜ್ಞಾಪಿಸಿದನು. ಅವನು ಅದಕ್ಕೆ ಒಪ್ಪಿ ಆ ಪ್ರಕಾರವೇ ಬೆಣ್ಣೆವೂರು-೧೨ ನೀಲಗುಂದ, (ಹೂವಿನ ಹಡಗಲಿ, ಹಿರೇಹಡಗಲಿ) ಎಂದು ಹಡಂಗಿಲೆಗಳು, ಮಾಂಗೋಳ, ಬಿದರಹಳ್ಳಿ(ಹಗರನೂರು) ಹಹನೂರು, ಹೊನ್ನವಳ್ಳಿ, ಕುರುವತ್ತಿ ಮತ್ತು ಬಾಳ್ಗುಳಿಯನ್ನೊಳಗೊಂಡಂತೆ ೩೨ ಜನರ ಸಮ್ಮುಖದಲ್ಲಿ ತ್ರಿಪುರಾಂತಕ ದೇವರ ಬಳಿ ನೀರನ್ನು ಕುಡಿದು ನಂತರ ಒಂದು ಕಲ್ಲನ್ನು ನಿಲ್ಲಿಸಬೇಕೆಂದು ಹೇಳಿದಾಗ ಅವನು ಈ ಶಿಕ್ಷೆಯನ್ನು ಒಪ್ಪಿಕೊಳ್ಳಲು ತಯಾರಾಗಿದ್ದನೆಂದು ಕಂಡುಬರುತ್ತದೆ. ಆದ್ದರಿಂದ ಇವರಿಗೆ ಏನನ್ನು ಮಾಡಬಾರದು(ಮಹಾಜನರು) ಅವರನ್ನು ದೇವರ ಸಮನಾಗಿ ಕಂಡುಕೊಳ್ಳಬೇಕೆಂದು ಪ್ರಾಚೀನ ಕಾಲದಿಂದಲೂ ಕಂಡುಬರುತ್ತದೆ. ಆದರೆ ಅವರ ತಪ್ಪು ಇಂದಿಗೂ ಸಹ ಯಾರು ಎತ್ತಿ ತೋರುವುದಿಲ್ಲ. ಇಂತಹ ಅಗ್ರಹಾರಗಳು ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಇದ್ದದ್ದು ಕಂಡುಬರುತ್ತವೆ.

ಸ್ಥಾನಾಚಾರ್ಯರು : ಇವರನ್ನು ಶಾಸನಗಳಲ್ಲಿ 'ನೈಷ್ಠಿಕರು' ಎಂದು ಉಲ್ಲೇಖಿಸಲಾಗಿದೆ. ಸ್ಥಾನಚಾರ್ಯರು ಶೈವ ಸಂಪ್ರದಾಯದ ಪಾಶುಪತ ಕಾಳಾಮುಖ ಪಂಥಕ್ಕೆ ಸೇರಿದ ದೇವಸ್ಥಾನ, ಮಠಗಳ ಆಚಾರ್ಯರಾಗಿದ್ದರು. ಇವರನ್ನು ಸ್ಥಾನಪತಿಗಳು ಎಂದು ಕರೆಯಲಾಗಿದೆ. ಕೆಲವೊಂದು ಕಡೆ ಸ್ಥಾನಿಕರು ಎಂದು ಕರೆಯಲಾಗಿದೆ.

ಹತ್ತನೆಯ ಶತಮಾನದ ಪ್ರಾರಂಭ, ಒಂಬತ್ತನೆಯ ಶತಮಾನದ ಕೊನೆ ಕೊನೆಗೆ ಜೈನರ ಪ್ರಭಾವಳಿ ಇಳಿಮುಖವಾಗುತ್ತಿದ್ದಂತೆಯೇ ಶೈವರ ಪ್ರಭಾವ ಹೆಚ್ಚಾಗತೊಡಗಿತು. ಇಲ್ಲಿಯೂ ಸಹ ಶೈವರ ಪ್ರಭಾವವು ಹೆಚ್ಚಾಗಿತ್ತೆಂದು ಕಂಡುಬರುತ್ತದೆ. ಇವರು ಪ್ರಭುವರ್ಗದವರಿಂದ ಮತ್ತು ಸಮಾಜದ ಗೌರವದಿಂದ ತಮ್ಮ ಪ್ರಾಬಲ್ಯವನ್ನು ಸಾಧಿಸಿಕೊಂಡರು. ಚಕ್ರವರ್ತಿಗಳು ಮಹಾಮಂಡಳೇಶ್ವರರು, ಇತರ ಅಧಿಕಾರಿಗಳು ಮತ್ತು ಜನಸಾಮಾನ್ಯರು ಇವರಿಗೆ ದತ್ತಿಯನ್ನು ನೀಡಿದ್ದು, ಇವರಿಗೆ ಉನ್ನತ ಸ್ಥಾನವನ್ನು ಕೊಟ್ಟು, ನೈಷ್ಠಕರೆಂದು, ಬ್ರಹ್ಮಚಾರಿಗಳೆಂದು, ಗುರುತಿಸಿ ದೇವಾಲಯ, ಮಠಗಳಲ್ಲಿ, ಅಗ್ರಹಾರಗಳಲ್ಲಿ, ಆಡಳಿತ ನೋಡಿಕೊಳ್ಳು

ವುದಕ್ಕಾಗಿ ನೇಮಿಸಿದ್ದರು. ಇವರನ್ನು ಶಾಸನಗಳಲ್ಲಿ ಯಮ- ನಿಯಮಸ್ವಾಧ್ಯಾಯ-ಧ್ಯಾನಧಾರಣ, ಮೌನನುಷ್ಠಾನ, ಜಪತಪಸಮಾಧಿ, ಶೀಲಸಂಪನ್ನರಪ್ಪ ಎಂದು ಮುಂತಾಗಿ ಉಲ್ಲೇಖವಾಗಿರುವುದು ಕಂಡುಬರುತ್ತದೆ.[೧೦೬] ಇವರು ದೇವಾಲಯದ ಪೂಜೆ-ಪುನಸ್ಕಾರ, ಪರ್ವ, ಪವಿತ್ರತೆಗಳೊಂದಿಗೆ ಅಲ್ಲಿ ಓದುವ ತಪೋಧನರ ಸತ್ರಕ್ಕೆ ಛಾತ್ರಕ್ಕೆ ವಸತಿ ಊಟೋಪಚಾರಗಳ ಮೇಲ್ವಿಚಾರಣೆ ನೋಡಿಕೊಳ್ಳಲಾಗುತ್ತಿತ್ತು ಎಂದು ತಿಳಿದು ಬರುತ್ತದೆ. ದೇವಾಲಯವನ್ನು ಒಂದು ಸಾಮಾಜಿಕ ಸಂಸ್ಥೆಯೆಂದುಕೊಂಡು ಸಾಮಾಜಿಕವಾಗಿಯೂ ಇವರು ಹೊಣೆಗಾರಿಕೆ ಹೊಂದಿದ್ದರೆಂದು ಕಂಡುಕೊಳ್ಳಲಾಗಿದೆ. ಹೀಗೆ ಇವರು ಸಾಮಾಜಿಕ ಮತ್ತು ಧಾರ್ಮಿಕ ಕೆಲಸಗಳಲ್ಲಿ ಭಾಗಿಯಾಗಿದ್ದುಕೊಂಡು ಊರಿನ ಆಗು-ಹೋಗುಗಳನ್ನು ಗಮನಿಸುತ್ತಿದ್ದರೆಂದು ಕಂಡುಬರುತ್ತದೆ.

ಜೈನ ಮುನಿಗಳು : ಪ್ರಾಚೀನ ಕಾಲದಲ್ಲಿ ಜೈನಧರ್ಮವು ಒಂದು ಪ್ರಭಾವಯುತವಾದ ಧರ್ಮವಾಗಿತ್ತು. ಬಳ್ಳಾರಿ ಜಿಲ್ಲೆಯಲ್ಲಿ ಈ ಧರ್ಮ ಬೇರೂರಿತ್ತು. ಆದರೆ ಹತ್ತನೇ ಶತಮಾನದ ನಂತರ ಜೈನಧರ್ಮ ಒಂದು ಕಡೆ ತಾಂತ್ರಿಕ ಆಚರಣೆಗಳಿಗೆ ಇಂಬುಕೊಟ್ಟು, ಮತ್ತೊಂದು ಕಡೆ ರಾಜವೈಭವದಿಂದ ವಂಚಿತವಾಗಿ ಸಾಕಷ್ಟು ಏಳು ಬೀಳಿಗೆ ತುತ್ತಾಯಿತು. ಈ ಪ್ರಭಾವ ಜಿನಮುನಿಗಳ ಮೇಲೆ ಆಗಿರಬೇಕು. ಆದ್ದರಿಂದ ಅಂದಿನಿಂದ ಇಲ್ಲಿಯವರೆಗೂ ಇವರ ಉಲ್ಲೇಖಗಳು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ. ಇಲ್ಲಿಯ ಶಾಸನಗಳಲ್ಲಿ ಬೆರಳೆಣಿಕೆಯಷ್ಟು ಉಲ್ಲೇಖವಾಗಿರುವ ಶಾಸನಗಳು ಬರುತ್ತವೆ. ಈ ಶಾಸನದಲ್ಲಿ ಜೈನಗುರು ಮಹೇಂದ್ರದೇವ ಪಂಡಿತ ಎಂದು ಉಲ್ಲೇಖವಾಗಿದೆ.[೧೦೭] ಶಾಸನ ತ್ರುಟಿತವಾಗಿರುವುದರಿಂದ ಸ್ಪಷ್ಟವಾದ ಮಾಹಿತಿ ಸಿಗುವುದಿಲ್ಲ. ಈ ಶಾಸನದಲ್ಲಿ ಬ್ರಹ್ಮ ಜಿನಾಲಯಕ್ಕೆ ಶಿವಮಯ್ಯ ದಾನ ನೀಡಿದನೆಂದು ಬಂದಿದೆ.[೧೦೮] ಇಲ್ಲಿ 'ಬ್ರಹ್ಮ' ಮತ್ತು 'ಜಿನಾಲಯ' ಎಂದು ಉಲ್ಲೇಖವಾಗಿರುವುದರಿಂದ ಶೈವ ಮತ್ತು ಜೈನ ಎಂದು ಗುರುತಿಸಲಾಗಿದೆ. ಏಕೆಂದರೆ ಬ್ರಹ್ಮ(ಶೈವ), ಜೈನ(ಜಿನ), ಅಂದರೆ ದೇವಾಲಯಕ್ಕೂ ಮತ್ತು ಬಸದಿಗೂ ದಾನನೀಡಿರಬೇಕೆಂದು ಕಂಡುಬರುತ್ತದೆ. ಏಕೆಂದರೆ ಚಾಲುಕ್ಯರು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಸೋಗಿಯ ಒಂದು ಶಾಸನದಲ್ಲಿ ಉಭಯಾಚಾರ್ಯನೆಂಬ ಜೈನಗುರುಗಳಿಗೆ ಎಂಬ ಉಲ್ಲೇಖ ಬರುತ್ತದೆ.[೧೦೯] ಆದ್ದರಿಂದ ಇಲ್ಲಿಯೂ ಸಹ ಜೈನ ಧರ್ಮ ಪ್ರಚಲಿತದಲ್ಲಿತ್ತೆಂದು ಕಂಡು ಬರುತ್ತದೆ. ಮಾಡಲಗೇರಿಯ ಒಂದು ಶಾಸನದಲ್ಲಿ

> XX 'ಪರಮೇಶ್ವರ ಜಿ(ನ)ಗನ್ಧೋದಕ ಪವಿತ್ರಿಕೃತೋತ್ತಮಾನಸ
> ನಂ ಸಂಮ್ಯಕರತ್ನಾಕರನುಂ ಚತುಸ್ಸಮಯ ಪೂಜಾದುರಂಧರನುಂ
> ಅಭಿನವ ಶ್ರೇಯಾ(ಂ) ಸನುಂ ಪದ್ಮಾXX ದೇವಿ ಲಬ್ಧವರ ಪ್ರಸಾರದನುಂ

ಬಾಗುಳಿಯಯ್ಯದಿಂಬರ ವರಪುತ್ರನುಂ' ಎಂದು ಉಲ್ಲೇಖವಾಗಿದೆ.[೧೧೦] ಜಿನಗನ್ಧೋದಕ ಎಂದು ಬಂದಿರುವುದರಿಂದ ಯೋಗಿ-ನೇಮಿಭಟ್ಟಾರಕ ಎಂಬ ಜೈನ ಗುರು ಇದ್ದನೆಂದು ಹೇಳಬಹುದಾಗಿದೆ. ಹೀಗೆ ಇಲ್ಲಿಯ ಶಾಸನಗಳಲ್ಲಿ ಜೈನರ ಉಲ್ಲೇಖಗಳು ತುಂಬಾ ಕಡಿಮೆ.

ಶ್ರಮಿಕವರ್ಗ : ವಿವಿಧ ವೃತ್ತಿಗಳನ್ನಾಶ್ರಯಿಸಿದ ಕುಶಲ ಕರ್ಮಿಗಳನ್ನು ಶ್ರಮಿಕವರ್ಗಗಳೆಂದು ಗುರುತಿಸಬಹುದು. ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಗೊಂಡ ಆಧಾರದಿಂದ ಶ್ರಮಿಕವರ್ಗವನ್ನು ಅಕ್ಕಸಾಲಿ, ಕಮ್ಮಾರ, ಕಲ್ಲುಕುಟಿಗ, (ಶಿಲ್ಪ)ಬಡಗಿ, ಹೀಗೆ ಮುಂತಾದವರನ್ನು ನೋಡಬಹುದಾಗಿದೆ. ಈ ಕುಶಲ ಕರ್ಮಿಗಳು ತಮ್ಮ ವಂಶಪಾರಂಪರ್ಯವಾಗಿ ಬಂದ ಕೆಲಸವನ್ನು ಮುಂದುವರಿಸಿಕೊಂಡು ಬಂದವರು. ಈ ಶಾಸನದಲ್ಲಿ ಅಕ್ಕಸಾಲಿಗೆ ಆಯವಾಗಿ ಬಂದಿದ್ದ ಧಾನ್ಯ ಮತ್ತು ಉಪ್ಪನ್ನೆಲ್ಲವನ್ನು ದಾನ ನೀಡಬೇಕು ಎಂದು ಬಂದಿದೆ.[೧೧೧] ಇದರಿಂದ ಪ್ರಾಚೀನ ಕಾಲದಲ್ಲಿಯೂ ಅಕ್ಕಸಾಲಿಗರು ತಮ್ಮ ಕೆಲಸಗಳಿಗೆ ಧವಸ ಧಾನ್ಯಗಳನ್ನು ತೆಗೆದುಕೊಳ್ಳುತ್ತಿದ್ದರು. ಅಂದರೆ ವರ್ಷಕ್ಕೆ ಇಂತಿಷ್ಟು ಜೋಳ, ರಾಗಿ ಅಥವಾ ನವಣೆ, ಉಪ್ಪು, ಹೀಗೆ ಬಂದಿರುವುದನ್ನು ತನಗೆ ಬೇಕಾದಷ್ಟು ಇಟ್ಟುಕೊಂಡು ಉಳಿದುದನ್ನು ದಾನ ನೀಡಬೇಕೆಂದು ಕಂಡುಬರುತ್ತದೆ. ಆದರೆ ಈ ಪದ್ಧತಿ ಈಗ ಇಲ್ಲ. ತನಗೆ ಏನೇ ಬಂದರೂ ಅದನ್ನು ತನ್ನ ಬಂಧು ಬಳಗದವರಿಗೆ ಕೊಡುತ್ತಾರೆ. ಇಲ್ಲವಾದರೆ ಮಾರುತ್ತಾರೆ. ಆದ್ದರಿಂದ ಅಕ್ಕಸಾಲಿಯೂ ಸಹ ಹೆಚ್ಚಿನ ಪದಾರ್ಥವನ್ನು ಇಟ್ಟುಕೊಳ್ಳದಂತೆ ನೋಡಿಕೊಳ್ಳುತ್ತಿದ್ದರೆಂದು ಕಂಡುಬರುತ್ತದೆ. ಈ ಶಾಸನದಲ್ಲಿ ಬಡಗಿ ರೆಬ್ಬೋಜಗೆ ಎಂದು ಬಂದಿದೆ. ಅಂದರೆ ಬಡಗಿ ರೆಬ್ಬೋಜನಿಗೆ ಗದ್ದೆಯನ್ನು ದಾನ ನೀಡಬೇಕೆಂದು ತಿಳಿಯುತ್ತದೆ.[೧೧೨] ಇನ್ನು ಕಲ್ಲುಕುಟಿಗರು ಅಥವಾ ರೂವಾರಿಗಳು ದೇವಾಲಯದ ನಿರ್ಮಾಣದೊಂದಿಗೆ ಶಾಸನಗಳನ್ನು ಕಂಡರಿಸುತ್ತಿದ್ದರೆಂದು ತಿಳಿದುಬರುತ್ತದೆ. ಇಲ್ಲಿ ಒಂದು ಶಾಸನದಲ್ಲಿ

> ಕಲಿದೇವಸ್ವಾಮಿಗೆ ಕಂಪಲಿಯಾಳು
> ತನ್ನಾಳ್ದನಿತ್ತ ದತ್ತಿಯಮನಿತಂ ಪಲರರಿಯೆ
> ಪಡೆದು ಮತ್ತೆ ಶಿಳಾಶಾಸನದೊಳು
> ವಿಶೇಷದಿಂ ಬರೆಯಿಸಿದ ಅಂತಕನಾಂತರಿಬಲಕೆ

ಎಂದು ಉಲ್ಲೇಖ ಬಂದಿದೆ.[೧೧೩] ಇದೇ ಶಾಸನ ಮುಂದುವರಿದು ಕೊನೆಯ ಭಾಗದಲ್ಲಿ ಮುರಾನ್ತಕನುದ್ಯೋಗದೆಡೆಗೆ, ಶೌರ್ಯೋಚಿತದೊಳ್ಕೂಂತಿಸುತನೆನಿಪ, ಮಹಾಶ್ರೀಮಂತನ, ಮಗ ನೆಲೆನೆಗಳ್ದ ನರಸಿಂಘಯ್ಯ ಎಂದು ಬಂದಿರುವುದರಿಂದ ಮಗನಿಗೆ ಉದ್ಯೋಗಸಿಗಲಿ ಎಂಬ ನಂಬಿಕೆಯಿಂದ ಈ ಶಾಸನವನ್ನು ಬರೆಸಿರಬೇಕು. ಯಾವುದೇ ಅಡ್ಡಿ ಆತಂಕಗಳು ಬರದಿರಲಿ ಎಂಬ ತಿಳುವಳಿಕೆಯಿಂದ ನರಸಿಂಘಯ್ಯ ಈ ಕೆಲಸವನ್ನು ಮಾಡಿಸಿರಬೇಕು. ಇಂತಹ ವಿವರಣೆಯನ್ನು ಒಳಗೊಂಡು ಇನ್ನೊಂದು ಶಾಸನ ಇಲ್ಲಿ ಬರುತ್ತದೆ.[೧೧೪] ಇದು ರೇವಣಾರ್ಯ್ಯ ಎಂಬ ಕಲ್ಲುಕುಟಿಗನು ಅಕ್ಷರವನ್ನು ಕಂಡರಿಸಿದನೆಂದು ತಿಳಿಸುತ್ತದೆ.[೧೧೫] ಇಲ್ಲಿ ಇವನು ಕಂಡರಿಸುವುದರಲ್ಲಿ ನಿಪುಣ ಮತ್ತು ಜಾಣತನವನ್ನು ಹೊಂದಿದವನೆಂದು ಕಂಡುಬರುತ್ತದೆ. ಇದರಲ್ಲಿ ತನ್ನ ಬುದ್ಧಿವಂತಿಕೆ ಮತ್ತು ಹೆಗ್ಗಳಿಕೆಯನ್ನು ಹೇಳಿಕೊಂಡಿದ್ದಾನೆ. ಕೆಲವೊಂದು ಸಾರಿ ಚಿನ್ನದ ಆಭರಣಗಳನ್ನು ಮಾಡುವ ಅಕ್ಕಸಾಲಿಗರು ಶಾಸನಗಳನ್ನು ಕೆತ್ತುತ್ತಿದ್ದರೆಂದು ಕಂಡುಬರುತ್ತದೆ.

ಆದರೆ ಇಂತಹ ಉಲ್ಲೇಖ ಅಪರೂಪಕ್ಕೊಂದು ಮಾತ್ರ ಬಂದಿರುತ್ತದೆ. ಉಚ್ಚಂಗಿಯ ಒಂದು ಶಾಸನದಲ್ಲಿ ಅಕ್ಕಸಾಲಿ ಮುದಿಯಪ್ಪನ ಮಗ ಕಲಿಯಪ್ಪ ಶಾಸನವನ್ನು ಕೆತ್ತಿದವನು ಎಂದು ಬರುತ್ತದೆ.[೧೧೬] ಆದರೆ ಬಾಗಳಿಯ ಶಾಸನಗಳಲ್ಲಿ ಅಕ್ಕಸಾಲಿಗರು ದೇವರನ್ನು, ಲಿಂಗವನ್ನು ದೇವಾಲಯದ ಹೊರಗಿನ ಕೆಲಸವನ್ನು ಮಾಡಿಸಿದರೆಂದು ಉಲ್ಲೇಖಗಳು ಬರುತ್ತವೆ. ಕಲ್ಲುಕುಟಿಗರೇ ಶಾಸನಗಳನ್ನು ಕಂಡರಿಸಿದರೆಂದು ಇವುಗಳಿಂದ ತಿಳಿಯುತ್ತದೆ. ಆದರೆ ಕಂಡರಿಸಿದ ಎನ್ನುವಲ್ಲಿ ಕಲ್ಲುಕುಟಿಗ ಎಂದು ಬರುವುದಿಲ್ಲ.

ಇನ್ನು ಕೆಲವು ಶಾಸನಗಳಲ್ಲಿ ಹಡಪದರ ಬಗ್ಗೆ ಉಲ್ಲೇಖಗಳು ಬಂದಿವೆ. ಹಡಪದ ಕೃಷ್ಣಪ್ಪನಾಯಕರಿಗೆ ಕೊಟ್ಟೂರ ಸೀಮೆವರೆಗಿನ ಭೂಮಿ ಕೊಡಬೇಕೆಂದು ಬರುತ್ತದೆ. ಅಂದರೆ ಪ್ರಾಚೀನ ಕಾಲದ ಬಾಗಳಿಯಲ್ಲಿ ಹಡಪದರಿಗೂ ಒಂದು ಸ್ಥಾನ, ಗೌರವವನ್ನು ಕೊಡಲಾಗಿತ್ತೆಂದು ತಿಳಿದುಬರುತ್ತದೆ. ಕೊಟ್ಟೂರವರೆಗಿನ ಭೂಮಿ ಎಂದರೆ, ಹಡಪದರು ಕೊಟ್ಟೂರವರೆಗೂ ಹೋಗಿ ತಮ್ಮ ಕಾಯಕವನ್ನು ಮಾಡಬೇಕಿತ್ತು.(ಮನೆ ಮನೆಗೆ ಹೋಗಿ ಕ್ಷೌರವನ್ನು ಮಾಡುವುದು) ಇವರಿಗೂ ಈಗಲೂ ಸಹ ಇಂತಿಷ್ಟು ಊರುಗಳೆಂದು ಹಂಚಿಕೊಡುತ್ತಾರೆ. ಈ ಶಾಸನದಲ್ಲಿ ಹಡಪದ ಬಯ್ಯಪ್ಪನಾಯಕನ(ರ) ಮಕ್ಕಳು ಭೂಮಿಯನ್ನು ದಾನ ನೀಡಬೇಕೆಂದು ಬಂದಿದೆ.[೧೧೭] ಮೇಲೆ ಹೇಳಿದ ಶಾಸನದಲ್ಲಿ ಇವರಿಗೆ ದಾನ ನೀಡಿದ ಉಲ್ಲೇಖ ಬಂದರೆ ಇಲ್ಲಿ ಇವರೇ ದಾನ ಕೊಡಬೇಕೆಂದು ಕಂಡುಬರುತ್ತದೆ.[೧೧೮] ಒಂದು ಕಡೆಗೆ ಕೊಡುವುದಾದರೆ, ಇನ್ನೊಂದು ಕಡೆಗೆ ತೆಗೆದು ಕೊಳ್ಳುತ್ತಿದ್ದರು. ಆದರೆ ಇಲ್ಲಿಯ ಒಂದು ಶಾಸನದಲ್ಲಿ 'ನಾಯಿಂದರು' ಎಂದು ಬಂದಿದೆ.[೧೧೯] ನಾಯಿಂದರು ಎಂದರೆ ಇಲ್ಲಿ ಹಡಪದರು(ಕ್ಷೌರಿಕ, ಹಜಾಮ)ಎಂದೇ ಅರ್ಥ ಬರುತ್ತದೆ.

ಹೀಗೆ ಶ್ರಮಜೀವಿಗಳಾದ ಒಕ್ಕಲಿಗರು, ತಂಬುಲಿಗರು, ತೆಲ್ಲಿಗರು ತಮ್ಮದೇ ಆದ ವೃತ್ತಿ ಸಂಘಗಳನ್ನು ಕಟ್ಟಿಕೊಂಡು ಜೀವನವನ್ನು ರೂಪಿಸಿಕೊಂಡಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಮಾಡಲಗೇರಿಯ ಒಂದು ಶಾಸನದಲ್ಲಿ ಅಯಿನೂರ್ರ್ವರ ಸಂಘ ತೆಲ್ಲಿಗರು, ತಂಬುಲಿಗರು, ಸಾಸಿರ್ವರು ಎಂದು ಉಲ್ಲೇಖವಾಗಿದೆ.[೧೨೦]

ಜಾತಿವ್ಯವಸ್ಥೆ

ಶ್ರಮಜೀವಿಗಳು ವಂಶಪರಂಪರೆಯಾಗಿ ಮುಂದುವರಿಸಿಕೊಂಡು ಬಂದ, ತಮ್ಮ ವೃತ್ತಿ ವೈಶಿಷ್ಟಗಳನ್ನು ಉಳಿಸಿಕೊಂಡು ಬಂದುದೇ, ಮುಂದೆ ಜಾತಿ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿತು ಎಂದು ಹೇಳಬಹುದು. ಪ್ರಾಚೀನ ಕಾಲದಲ್ಲಿಯೇ ಹದಿನೆಂಟು ಜಾತಿಗಳು ಪ್ರಚಲಿತವಿದ್ದ ವಿಷಯ ಶಾಸನ ಮತ್ತು ಕಾವ್ಯಗಳಲ್ಲಿ ಸಾಂಪ್ರದಾಯಿಕವಾಗಿ ಉಲ್ಲೇಖಗೊಂಡಿವೆ. ಸಾಮಾನ್ಯವಾಗಿ ಹರಿಜನರು ವಾಸಿಸುತ್ತಿದ್ದ ಪ್ರದೇಶವನ್ನು, ಹೊಲಗೇರಿ ಅಥವಾ ಕೇರಿ ಎಂದು ಕರೆಯಲಾಗುತ್ತದೆ. ಇವರು ಊರ ಹೊರಗೆ ವಾಸಿಸುತ್ತಿದ್ದರು.

ಇವರನ್ನು ಹೊಲೆಯರೆಂದು, ಸಮಗಾರರೆಂದು ಕರೆಯಬಹುದಾಗಿತ್ತು. ಅಂದರೆ ಸಮಾಜ ವ್ಯವಸ್ಥೆಯಲ್ಲಿ ಉನ್ನತ ಹಂತದಲ್ಲಿ ಪುರೋಹಿತನಾದ ಬ್ರಾಹ್ಮಣನಿದ್ದರಿಂದ ಕೆಳಹಂತದಲ್ಲಿ ಇವರು ಇರುತ್ತಿದ್ದರು. ಶಾಸನವೊಂದರಲ್ಲಿ ಗ್ರಾಮಸಮಯ ಎಂದಿದ್ದು, ಬ್ರಾಹ್ಮಣರಿಗೆ ಕೆಲವೊಂದು ವ್ಯವಸ್ಥೆಯಲ್ಲಿ ವಿನಾಯತಿ ನೀಡಿದ್ದು ಎಂದು ಉಲ್ಲೇಖಿಸುತ್ತಾ ಮುಂದುವರಿದ ಭಾಗದಲ್ಲಿ ಜಾತಿ ಭ್ರಷ್ಟತೆಯ ಉಲ್ಲೇಖವಿರುವುದನ್ನು ಗಮನಿಸಬಹುದು.[೧೨೧] ಅಂದರೆ ಇಲ್ಲಿ ಅಂಗಡಿ ಕಾಳಯ್ಯನ ಮಗಳು ಜಾತಿ ಸಂಕರವಾದ ಸಮಯದಲ್ಲಿ ಬಾಗಳಿಯ ಐವತ್ತು ಮಹಾಜನರು, ಮಹಾಪ್ರಧಾನರಾದ ಕುಮಾರ ಪಂಡಿತಯ್ಯ, ಹೆಗ್ಗಡೆಮಲ್ಲಯ್ಯ, ಗೋಪಯ್ಯ ಸಭೆ ಸೇರಿ ಕಾಳಯ್ಯನ ಮಗಳು ಮಾಡಿದ ತಪ್ಪಿಗೆ ದಂಡ ರೂಪದಲ್ಲಿ ೮೦ ಕಮ್ಮ ಭೂಮಿಯನ್ನು ದೇವರಿಗೆ ದಾನ ಬಿಡಬೇಕು ಎಂದು ಬರುತ್ತದೆ. ಆದರೆ ಇಲ್ಲಿ ಜಾತಿಸಂಕರ ಎಂದು ಅಷ್ಟೇ ಉಲ್ಲೇಖವಾಗಿರುವುದರಿಂದ ಸರಿಯಾದ ವಿವರಣೆ ಕೊಡುವುದು ಸುಲಭವಲ್ಲ. ಏಕೆಂದರೆ ಸಂಕರ ಎಂಬ ಪದಕ್ಕೆ ಬೇರೆ ಬೇರೆ ಅರ್ಥಗಳಿದ್ದರೂ, ಇದಕ್ಕೆ ಹೊಂದುವಂತೆ ಇದೇ ಎಂದು ಹೇಳುವುದು ಕಠಿಣ. ಇಲ್ಲಿ 'ಸಂಕರ' ಎಂದರೆ ಅಂತರ್ ಜಾತಿಗಳಿಂದ ಉಂಟಾಗುವ ಮಿಶ್ರಜಾತಿ, ಮತ್ತು ಸಂಕರ ಜಾತಿಗಳೆಂಬಲ್ಪಡುವರು, ಅಥವಾ ಮಿಶ್ರಜಾತಿ ಎಂದು ಬರುತ್ತದೆ. ಆದ್ದರಿಂದ ಇಲ್ಲಿ ಅಂಗಡಿ ಕಾಳಯ್ಯನ ಮಗಳು ಜಾತಿ ಸಂಕರಮಾಡಿದಾಗ ಎಂದಿರುವುದರಿಂದ ಇದು ಮೇಲಿನ ಅರ್ಥವನ್ನು ಕೊಡುತ್ತದೆ. ಈಕೆ ಯಾರನ್ನಾದರೂ ಬೇರೆ ಜಾತಿಯವರನ್ನು ಮದುವೆಯಾಗಿರಬೇಕು, ಇಲ್ಲವೆ ಯಾರನ್ನಾದರೂ ಪ್ರೇಮಿಸಿರಬೇಕು. ಇಲ್ಲಿ ಸಂಕರ ಎಂಬ ಪದವು ಇದೇ ಅರ್ಥವನ್ನು ಕೊಡುತ್ತದೆ. ಶಾಸನಗಳಲ್ಲಿ ಇಂತಹ ಉಲ್ಲೇಖ ಬರುವುದು ಅಪರೂಪ. ಏಕೆಂದರೆ ಹನ್ನೆರಡನೆಯ ಶತಮಾನದಿಂದ ಆಚೆಗೆ ಅಂತರ್ ಜಾತಿಯ ವಿವಾಹಕ್ಕೆ ಅವಕಾಶವಿರಲಿಲ್ಲ. ಅದನ್ನು ಮೀರಿ ಮಾಡಿಕೊಂಡರೆ, ಶಿಕ್ಷೆ ಅಥವಾ ತೆರಿಗೆ ಕಟ್ಟಬೇಕಾಗುತ್ತಿತ್ತೆಂದು ಸ್ಪಷ್ಟಪಡಿಸಬಹುದು. ಹನ್ನೆರಡನೆ ಶತಮಾನದ ನಂತರ ಅಂತರ್ ಜಾತಿಯ ವಿವಾಹಗಳಿಗೆ ಅವಕಾಶ ಸಿಕ್ಕಿತ್ತು. ಆದ್ದರಿಂದ ಇಲ್ಲಿ ಅಂಗಡಿ ಕಾಳಯ್ಯನ ಮಗಳು ಮಾಡಿದ ತಪ್ಪಿಗೆ ೮೦ ಕಮ್ಮ ಭೂಮಿಯನ್ನು ಮಹಾಜನರ ಸಮ್ಮುಖದಲ್ಲಿ, ಊರಿನ ಗೌಡರ ಸಮ್ಮುಖದಲ್ಲಿ ದಾನ ಬಿಡುತ್ತಾನೆ. ಮತ್ತೊಂದು ಶಾಸನದಲ್ಲಿ ಬ್ರಾಹ್ಮಣರ ಭೂಮಿಯನ್ನು(ಕೆಳಜಾತಿ) ಶೂದ್ರನು ಉಳುಮೆ ಮಾಡುವಾಗ, ಮಾಡಿದ ತಪ್ಪಿಗೆ ವರ್ಷಕ್ಕೆ ಮೂರು ಪಣಗಳನ್ನು(ವೀಸ) ನೀಡಬೇಕು ಎಂದು ಬರುತ್ತದೆ.[೧೨೨] ಇದರಲ್ಲಿ ಗೊಂದಲವಿರುವುದು ಕಂಡುಬರುತ್ತದೆ. ಏಕೆಂದರೆ ಭೂಮಿಯನ್ನು ಲಾವಣಿ ಹಿಡಿದುಕೊಂಡರೆ ಅವರಿಗೆ ವರ್ಷಕ್ಕೆ ಇಂತಿಷ್ಟು ಬೆಳೆದ ಲಾಭದಲ್ಲಿ ಕೊಡಬೇಕು. ಭೂ ಒಡೆಯ ಯಾರೇ ಆಗಿರಲಿ, ಇನ್ನೊಂದು ಭೂಮಿ ಯಾರದೆಂದು ಕೇಳದೆ ಉಳುಮೆ ಮಾಡಿದರೆ ದಂಡ ಕಟ್ಟಬೇಕು. ಅಂದರೆ ಇಲ್ಲಿ ಮೇಲ್ವರ್ಗದವರ ಭೂಮಿಯನ್ನು ಅವರ ಜಾತಿಯವರೇ ನೋಡಿಕೊಂಡು ಹೋಗಬೇಕು ಎಂದು ಹೇಳಬೇಕಾಗುತ್ತದೆ.

[illegible]

ಹೀಗೆ ಸಮಾಜದಲ್ಲಿ ಜಾತಿವ್ಯವಸ್ಥೆಯ ಬಗ್ಗೆ ನಡೆಯುವ ಕೀಳರಿಮೆಗಳು ಹಲವಾರು, ಈ ಜಾತಿ ವರ್ಗಗಳ ಬಗ್ಗೆ ಹೀಗೆಯೇ ಎಂದು ನಿಖರವಾಗಿ ಹೇಳುವುದು ಕಷ್ಟ. ಏಕೆಂದರೆ ಒಬ್ಬೊಬ್ಬ ಮನುಷ್ಯನು ಒಂದು ಜಾತಿಯನ್ನು ನಿರ್ಮಿಸಿ ಕೊಂಡಿರುವುದು ಇಂದಿಗೂ ಕಂಡುಬರುತ್ತದೆ. ಆದರೆ ಶಾಸನಗಳು ಹೆಚ್ಚು ಮೇಲ್ವರ್ಗದವರ ಬಗೆಗೆ ವಿವರಣೆಯನ್ನು(ಕೊಟ್ಟಂತೆ) ಉಲ್ಲೇಖಿಸಿದಂತೆ, ಕೆಳವರ್ಗದವರ ಉಲ್ಲೇಖಗಳು ಶಾಸನಗಳಲ್ಲಿ ತೀರಾ ಕಡಿಮೆ. ಏಕಂದರೆ ರಾಜ, ಮಹಾರಾಜರು ಹೆಚ್ಚಾಗಿ ಶೈವ, ವೈಷ್ಣವ, ಜೈನರಾಗಿದ್ದರೇ ವಿನಃ ಕೆಳಜಾತಿಯವರು ಆಡಳಿತ ಮಾಡಿರುವುದು ಕಡಿಮೆ. ಆದ್ದರಿಂದ ಇವರ ಬಗ್ಗೆ ಹೆಚ್ಚು ಉಲ್ಲೇಖಗಳು ಬರುವುದಿಲ್ಲ. ಇಂದಿಗೂ ಸಹ ಈ ಹಳ್ಳಿಯಲ್ಲಿ, ಆಯಾ ಜಾತಿಗೆ ಬೇರೆ ಬೇರೆ ಕೇರಿ(ಓಣಿ)ಗಳಿರುವುದು ಕಂಡುಬರುತ್ತದೆ.

ಕುಟುಂಬ ವ್ಯವಸ್ಥೆ

ಕುಟುಂಬವು ಸಮಾಜದ ಒಂದು ಅಂಗ. ಇದು ಸಾಮಾಜಿಕ ವ್ಯವಸ್ಥೆಯ ಪ್ರಥಮ ಘಟಕವಾಗಿದೆಯೆನ್ನ ಬಹುದು. ಇದಕ್ಕೆ ಸ್ತ್ರೀ ಪುರುಷ ಸಂಬಂಧವೇ ಮೂಲವೆನ್ನಬಹುದು. ಆದರೆ ಶಾಸನಗಳಲ್ಲಿ ಕುಟುಂಬ, ವಿವಾಹ, ಜೀವನದ ಬಗೆಗೆ ಉಲ್ಲೇಖಿಸಿರುವುದು ಕಂಡುಬರುವುದಿಲ್ಲ. ಸತಿ-ಪತಿ ಸಂಬಂಧದ ಬಗ್ಗೆ ಕೆಲವೊಂದು ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ನೋಡಬಹುದಾಗಿದೆ. ಆದರೆ ಮದುವೆ ಮಾಡಿದುದರ ಫಲವಾಗಿ ಸ್ಥಳೀಯ ದೇವಾಲಯಗಳಿಗೆ ದಾನ-ದತ್ತಿಗಳನ್ನು, ತೆರಿಗೆಗಳನ್ನು ನೀಡಿರುವುದನ್ನು ಉಲ್ಲೇಖಿಸುತ್ತವೆ. ಶಾಸನವೊಂದರಲ್ಲಿ ವಿಕ್ರಮಾದಿತ್ಯ ದೇವನ ಅತ್ತೆ ಕೇತಬ್ಬರಸಿ ಮತ್ತು ಅವನ ಹೆಂಡತಿ ನಾಗಿಯಾಂಡೆಯರಿಗೆ ದಾನದ ಫಲಸಿಗಲೆಂದು ಬಂದಿದೆ.[೧೨೩] ಅಂದರೆ ಸಾಮಂತರು ಬಿಟ್ಟ ದಾನದಫಲ ಇವರಿಗೂ ಸಲ್ಲಬೇಕು ಎಂಬುದನ್ನು ತಿಳಿಸುತ್ತದೆ. ಇದರಿಂದ ಅವನ ಸಂಬಂಧವು ಚೆನ್ನಾಗಿರಲೆಂದು, ಹೇಳಿ ದಾನ ನೀಡಿರುವುದನ್ನು ಗಮನಿಸಬಹುದು. ಅಂದರೆ ತನ್ನ ಸತಿಯ ಜೊತೆ ಅತ್ತೆಯೂ ಸಹ ಚೆನ್ನಾಗಿರಬೇಕೆಂಬ ಮುಂದಾಲೋಚನೆ ಯಿಂದ, ಅವರಿಗೂ ಒಳ್ಳೆಯದಾಗಲೆಂಬ ದೃಷ್ಟಿಯಿಂದ ದಾನ ನೀಡುವುದನ್ನು ನೋಡಬಹುದಾಗಿದೆ.

ಕುಟುಂಬ ವ್ಯವಸ್ಥೆಯಲ್ಲಿ ತಾಯಿಯ ಪಾತ್ರ ಮಹತ್ವದ್ದು. ಏಕೆಂದರೆ ಯಾವಾಗಲೂ ತನ್ನ ಮಕ್ಕಳಿಗೆ, ಗಂಡನಿಗೆ ಒಳ್ಳೆಯದಾಗಲೆಂದು ಕ್ಷಣಕ್ಷಣಕ್ಕೂ ತನ್ನ ಕರ್ತವ್ಯವನ್ನು ಇವರಿಗಾಗಿಯೇ ಮುಡುಪಾಗಿಡುತ್ತಾಳೆ. ಅದರಲ್ಲೂ ಪುರುಷ ಪ್ರಧಾನ ಸಮಾಜದಲ್ಲಿ ತನ್ನ ಮಗನಿಗಂತೂ ತನ್ನ ಜೀವನವನ್ನೇ ಸವೆಸುತ್ತಾಳೆ. ಹೀಗೆ ಸಮಾಜದಲ್ಲೆ ದಾಂಪತ್ಯ, ರಕ್ತಸಂಬಂಧ, ಪ್ರೀತಿ, ಪ್ರೇಮ, ಇವುಗಳಿಗೆ ತಾಯಿಯ ಮಮತೆ ಗಾಢವಾಗಿರುತ್ತದೆ. ಇಂತಹ ಉಲ್ಲೇಖಗಳು ಶಾಸನದಲ್ಲಿಯೂ ಕಂಡುಬರುತ್ತದೆ. ಈ ಶಾಸನದಲ್ಲಿ ತನ್ನ ಮಗನಿಗೋಸ್ಕರವಾಗಿಯೇ ದೇವರಿಗೆ ದಾನ ಬಿಡುವುದು ವ್ಯಕ್ತವಾಗಿದೆ.[೧೨೪] ಬಾಗಳಿಯ ಪಟ್ಟಣಸ್ವಾಮಿಯಾದ ಲಕ್ಕಿಸೆಟ್ಟಿಯ ಹೆಂಡತಿ ಲಿಂಗಮ್ಮ ತನ್ನ ಮಗ ಲಿಂಗಯ್ಯನಿಗೆ ಶುಭವಾಗಲೆಂದು, ಒಳ್ಳೆಯದಾಗಲೆಂದು

[illegible]

[illegible]

ದೇವರಿಗೆ ನಮಸ್ಕರಿಸಿ ತಮ್ಮ ಕೈಯಾರೆ ತಾವೇ ದೇವರ ರಾತ್ರಿ ನೈವೇದ್ಯಕ್ಕೆ, ಪೂಜೆ-ಪುನಸ್ಕಾರ, ಮೇಲುವೆಚ್ಚದ ಸಹಾಯಕ್ಕೆ ನೀಗಲೆಂದು ದಾನ ನೀಡುವುದನ್ನು ಈ ಶಾಸನದಲ್ಲಿ ಅಲಂಕಾರಯುತವಾಗಿ, ಕಾವ್ಯಾತ್ಮಕವಾಗಿ ಉಲ್ಲೇಖವಾಗಿರುವುದನ್ನು ಹೀಗೆ ನೋಡಬಹುದಾಗಿದೆ.

ಬಾಳ್ಗುಳಿಯ ಪಟ್ಟಣಸ್ವಾಮಿ
ಲಕ್ಕಿಸೆಟ್ಟಿಯರ ಮದವಳಿಗೆ ಲಿಂಗಂಮನು
ಸತಿಯೊಳ್ ಸರಸ್ವತಿಯೆನಲು
ಪತಿಯೊಳ್ಸೀಲತ್ವವೆನಲ್ತುಂನಸುತ ಲಿಂಗೈ
ಯ್ಯನಿಗೆ ಸತಿಸುತಧನ ಧಾನ್ಯಂ
ಗಳ ಸುತಾಯುಂ ಸಮ್ರುದ್ಧಯೆಂದುನಾನ
ತನಾದಳು ಅನ್ತೆನಿಸಿ ಕಲಿದೇವ
ತಾ ನಮಸ್ಕಾರವಂ ಮಾಡಿ ತಮ್ಮ ಮಕ್ಕಳಂ
ಲಿಂಗಿ ಸೆಟ್ಟಿಯರು ಮುಖ್ಯವಾಗಿ.......

ಹೀಗೆ ಮುಂದುವರಿದು ಧಾನ್ಯಗಳಾದ, ನೆಲ್ಲು, ಲವಣ, ಕಟುಘೃತಂ ಮತ್ತು ಬಾಡುಕಾಯಿ ಇನ್ನುಳಿದವುಗಳನ್ನು ತನ್ನ 'ಪುತ್ರಪೌತ್ರ ಪಾರಂಪರೆಯಿಂದ' ದಾನ ಬಿಟ್ಟರು. ಇದರಿಂದ ತಾಯಂದಿರು ತಮ್ಮ ಮಕ್ಕಳಿಗೆ ಒಳ್ಳೆಯದಾಗುವುದಾದರೆ ಏನೆಲ್ಲಾ ತ್ಯಾಗ ಕಷ್ಟಗಳನ್ನು ಸಹಿಸುತಿದ್ದರೆಂದು ತಿಳಿದುಬರುತ್ತದೆ.

ದಾಂಪತ್ಯ : ನಮ್ಮ ಪರಂಪರೆ, ಸಂಪ್ರದಾಯದಲ್ಲಿ ಆದರ್ಶ ದಾಂಪತ್ಯಕ್ಕೆ ಒಂದು ಮುಖ್ಯ ಸ್ಥಾನವನ್ನು ಕೊಟ್ಟಿದ್ದೇವೆ. ಕಾಯಾ, ಮನಸಾ ಒಂದುಗೂಡಿದ ದಂಪತಿಗಳು ಧಾರ್ಮಿಕ ಆಚರಣೆಯಲ್ಲಂತೂ ಅವರು ಕೂಡಿಯೇ ಹೆಜ್ಜೆ ಹಾಕುತ್ತಾರೆ. ಸತಿ-ಪತಿಗಳೊಂದಾದ ಭಕ್ತಿಹಿತವಾಗಿಪ್ಪುದು ಶಿವಂಗೆ' ಎಂಬ ದಾಸಿಮಯ್ಯನ ಮಾತಿನಂತೆ[೧.೨೫] ದೇವತೆ, ದೇವರಿಗೆ ಒಟ್ಟಾಗಿ ಭಕ್ತಿ, ಪೂಜೆ, ಆಹುತಿಗಳನ್ನರ್ಪಿಸುವ ದಂಪತಿಗಳು, ಸಹಬಾಳ್ವೆಯಿಂದ ಇದ್ದರೆಂದು ಶಾಸನಗಳಲ್ಲಿ ಉಲ್ಲೇಖವಾಗಿರುವುದು ಕಂಡುಬರುತ್ತದೆ. ಈ ಕೆಲವು ಶಾಸನಗಳಲ್ಲಿ ಸತಿಪತಿಗಳು ಕೂಡಿ ದಾನ-ದತ್ತಿ ನೀಡಿದ ವಿವರವೂ ಬಂದಿವೆ. ಪತಿಯೊಬ್ಬನೇ ಈ ಕೆಲಸವನ್ನು ಕೈಗೊಳ್ಳದೆ ಸತಿಯ ಸಮ್ಮತಿಯೊಂದಿಗೆ ಇಬ್ಬರೂ ಕೈಗೂಡಿ ದಾನ ನೀಡಿದ್ದಾರೆ. ಮೇಲೆ ಹೇಳಿದಂತೆ ಈ ಶಾಸನದಲ್ಲಿ ಗಂಡ-ಹೆಂಡತಿ ದಾನ ನೀಡಿದ ವಿಷಯ ವ್ಯಕ್ತವಾಗಿದೆ.[೧೨೬] ನಾದೇವ ಫೈಸನ ಹೆಂಡತಿ ಮಹಾದೇವಿಯರು ಸೇರಿ, ದೇವರಿಗೆ ದಾನ ನೀಡಿದರೆಂದು ಉಲ್ಲೇಖಿಸುತ್ತದೆ. ಇದು ಪಿರಿಯಾಡ ಪೆರ್ಗ್ಗಡೆಯೂ ಇವನ ಹೆಂಡತಿಯಾದ ಬಾಚಲದೇವಿಯರು ಸೇರಿ ದಾನ ಕೈಗೊಂಡರೆಂದು ತಿಳಿದುಬರುತ್ತದೆ. ಹಿರೇ ಹಡಗಲಿಯ ಒಂದು ಶಾಸನದಲ್ಲಿ ವಿಕ್ರಮಪಾಂಡ್ಯನು ಅವನ ಪತ್ನಿ ಬಾಚಲದೇವಿಯರು ಸೇರಿ ದಾನ ನೀಡಿದರೆಂದು ಉಲ್ಲೇಖ ಬರುತ್ತದೆ.[೧೨೭] ಆದರೆ ಇವರ ತಮ್ಮ ಮಗಳ ಶ್ರೇಯೋಭಿವೃದ್ಧಿಗಾಗಿ, ಶುಭವಾಗಲೆಂದು ದಾನ ಬಿಡುತ್ತಾರೆ.(ಮಗಳು ಮಹಾದೇವಿ) ಹೂವಿನ ಹಡಗಲಿಯ ಶಾಸನವೊಂದರಲ್ಲಿ

ರವಿಗ ಅಥವಾ ರವಿದೇವನ ಪತ್ನಿ ಕಿಬ್ಬಲದೇವಿಯು ಸೇರಿ ಹುಟ್ಟೂರಾದ ಹೂವಿನ ಹಡಗಲಿಯಲ್ಲಿ ಕೇಶವ ದೇವಾಲಯವನ್ನು ಕಟ್ಟಿಸಿ, ದೇವರನ್ನು ಸ್ಥಾಪಿಸಿ, ದೇವರಿಗೆ ದಾನ ನೀಡುತ್ತಾರೆ.[೧೨೮]

ಹೀಗೆ ದಾಂಪತ್ಯದಿಂದ ಕೂಡಿಕೊಂಡು, ಸತಿ-ಪತಿಗಳೊಂದಾಗಿ ದಾನ-ದತ್ತಿಗಳನ್ನು ನೀಡಿರುವುದು ಶಾಸನಗಳಲ್ಲಿ ಕಂಡುಬರುತ್ತದೆ. ಇಂತಹ ಉಲ್ಲೇಖಗಳು ಇನ್ನು ಕೆಲವು ಶಾಸನಗಳಲ್ಲಿ ವ್ಯಕ್ತವಾಗಿವೆ. ಹೀಗೆ ಮಕ್ಕಳಿಗೋಸ್ಕರ, ಪತಿಗೋಸ್ಕರ ಸತಿಯರು, ತಾಯಂದಿರು, ತಮ್ಮ ದಾಂಪತ್ಯ ಜೀವನದ ಸಾರ್ಥಕತೆಗೆ ಮಕ್ಕಳ ಭವಿಷ್ಯಕ್ಕೆ ದೇವರುಗಳಿಗೆ ಹರಕೆ, ದಾನ-ದತ್ತಿಗಳನ್ನು ಬಿಟ್ಟಿರುವುದು ಪ್ರಾಚೀನ ಕಾಲದ ಆದರ್ಶವಾಗಿತ್ತೆಂದು ಬಾಗಳಿಯ ಶಾಸನಗಳಿಂದ ಸ್ಪಷ್ಟವಾಗಿ ತಿಳಿಯುತ್ತವೆ. ಇಂದಿಗೂ ಸಹ ಮಕ್ಕಳ ಶ್ರೇಯೋಭಿವೃದ್ಧಿಗೆ ತಾಯಂದಿರು ದೇವರಿಗೆ ಹರಕೆ, ಪೂಜೆ, ಪುನಸ್ಕಾರಗಳನ್ನು ಮಾಡಿಸುತ್ತಾರೆ.

ಸ್ತ್ರೀಯರ ಸ್ಥಾನಮಾನ : ಮಧ್ಯಕಾಲೀನ ಕರ್ನಾಟಕದಲ್ಲಿ ಸ್ತ್ರೀಯರು ಸಾಮಾಜಿಕ ಕ್ಷೇತ್ರಗಳಲ್ಲಿ ಭಾಗಿಯಾಗುತ್ತಿದ್ದರೆಂದು ಶಾಸನಗಳು ಉಲ್ಲೇಖಿಸುತ್ತವೆ. ಹನ್ನೆರಡನೆಯ ಶತಮಾನದಲ್ಲಿ ಹಿಂದೆಂದೂ ಇಲ್ಲದ ಸಂಖ್ಯೆಯಷ್ಟು ಮಹಿಳೆಯರು ಸಾರ್ವಜನಿಕ ಕ್ಷೇತ್ರದಲ್ಲಿ ಕಾಣಿಸಿಕೊಂಡಿರುವುದನ್ನು ಗಮನಿಸಬಹುದು. ಈ ಶತಮಾನದಲ್ಲಿ ವಚನಕಾರರು ಸಮಾಜ ವಿರುದ್ಧ ಬಂಡೆದ್ದು ಸ್ತ್ರೀ ಮೋಕ್ಷಳಲ್ಲ ಎಂಬ ಮಾತನ್ನು ವಿರೋಧಿಸಿದರು. ಸ್ತ್ರೀಯರು ಸಹ ಎಲ್ಲಾ ರಂಗಗಳಲ್ಲಿ ಭಾಗವಹಿಸಬೇಕೆಂಬ ಮಹದಾಸೆ ಅವರದಾಗಿತ್ತು. ಇವರಿಗೂ ವಿದ್ಯಾಭ್ಯಾಸಕ್ಕೆ ಅವಕಾಶವಿತ್ತು ಎಂಬುದಾಗಿ ಪ್ರಾಚೀನ ಕಾಲದಲ್ಲಿ ಸೂಚನೆ ಕಂಡುಬರುತ್ತದೆ. ರಾಮಾಯಣದಲ್ಲಿ ಕನ್ನಡ ನಾಡಿನ ಕಿಷ್ಕಿಂಧೆ ಆಗ ಬಹು ಪ್ರಮುಖಪಾತ್ರ ವಹಿಸಿತ್ತು. ಅಲ್ಲಿ ವಾಲಿಯ ಹೆಂಡತಿ 'ತಾರೆ' ವಿದ್ಯಾವತಿಯಾಗಿದ್ದು, ಮಂತ್ರಗಳನ್ನು ಪಟಿಸುತ್ತಾ ಧರ್ಮಪ್ರಕ್ರಿಯೆಯಲ್ಲಿ ತೊಡಗಿದ್ದಳೆಂದು ತಿಳಿದುಬರುತ್ತದೆ. ಚಾರಿತ್ರಿಕಯುಗದಲ್ಲಿ 'ಹಾಲನ ಗಥಾಸಪ್ತಸತಿ' ಯಲ್ಲಿ ಕವಿಯಿತ್ರಿ ಇದ್ದರೆಂದು ತಿಳಿದುಬರುತ್ತದೆ.[೧೨೯] ಹೀಗೆ ಬರಬರುತ್ತಾ ಸ್ತ್ರೀ ಎಲ್ಲಾ ರಂಗಚಟುವಟಿಕೆಗಳಲ್ಲಿ ಸ್ವತಂತ್ರವಾಗಿ ಭಾಗವಹಿಸುತ್ತಾ ಬಂದಳು. ಇಂತಹ ವ್ಯವಸ್ಥೆ ಬಾಗಳಿಯಲ್ಲಿ ಇತ್ತು ಎಂದು ಕಂಡುಬರುತ್ತದೆ ಅಲ್ಲಿನ ಬಹುಪಾಲು ಸ್ತ್ರೀಯರು ಶಿಕ್ಷಣ ಪಡೆದು ಪ್ರತಿಯೊಂದು ರಂಗಗಳಲ್ಲಿ ಭಾಗವಹಿಸುತ್ತಾರೆ.

ವೇಶ್ಯೆಯರು : 'ವೇಶ್ಯೆ' ಎಂದರೆ ಸೂಳೆ>ದೇವದಾಸಿ ಎಂದರ್ಥ ಕೊಡುತ್ತೇವೆ. ಆದರೆ ಈಗ ಅರ್ಥ ಬದಲಾಗಿದೆ. ವೇದಗಳ ಕಾಲದಲ್ಲಿ ವೇಶ್ಯಾಪದ್ಧತಿ ಸಾಮಾನ್ಯವಾಗಿತ್ತು. ವೇದಗಳಲ್ಲಿ ಇವರನ್ನು 'ಗಣಿಕೆ'ಯರೆಂದು ಉಲ್ಲೇಖಿಸಲಾಗಿದೆ.[೧೩೦] ಚಾಲುಕ್ಯರ ವಿನಯಾದಿತ್ಯನ ಕಾಲದಲ್ಲಿ ಇವನ ತಂಗಿಯಾದ ಮಹಾದೇವಿ ಅರಸ ಪ್ರೀತಿಗೆ ಪಾತ್ರಳಾಗಿದ್ದು, ರಾಜನರ್ತಕಿಯಾಗಿದ್ದಳೆಂದು ಬರುತ್ತದೆ.[೧೩೧] ಇವಳನ್ನೇ (ವಿನಾಪೊಟಿ) ವೀಣಾಪೋತಿ' ಎಂದು ಕರೆಯಲಾಗಿದೆ. ಇದರಿಂದ ಇವರ ಕಾಲದಲ್ಲಿಯೇ ಮೊದಲು ನರ್ತಕಿಯಾಗಿದ್ದು ಕಂಡುಬರುತ್ತದೆ. ಅಂದರೆ ೬ನೇ ಶತಮಾನದ ರಾಜ ಮನೆತನದವರೇ ನರ್ತಕಿಯಾಗಿದ್ದು,

ಅದು ಚಾಲುಕ್ಯರ ಮನೆತನದ ರಾಣಿಯರೇ ಮೊದಲು ಎಂದು ಹೇಳಬಹುದು. ಈ ಅವಧಿಯಲ್ಲಿ ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ಉನ್ನತ ಮತ್ತು ಗೌರವ ಸ್ಥಾನಪಡೆದಿದ್ದರು. ದೇವಾಲಯಗಳಲ್ಲಿ ಅಂಗಭೋಗ ಮತ್ತು ರಂಗಭೋಗಗಳ ಸೇವೆಯಲ್ಲಿ ಸ್ತ್ರೀಯರನ್ನು ನೇಮಿಸುತ್ತಿದ್ದರು. ಈ ಸೇವೆಗಾಗಿ ಬಿಡುವ ಸ್ತ್ರೀಯರನ್ನು ಶಾಸನಗಳಲ್ಲಿ ಸೂಳೆಯರು, ತೊತ್ತು, ಸೇವಕಿಯರು ಎಂದು ಉಲ್ಲೇಖವಾಗಿವೆ.[೧೩೨] ಇವರು ವೇಶ್ಯೆಯರಿಗಿಂತ ಭಿನ್ನವಾಗಿದ್ದ ರೆಂದು ಹೇಳಬಹುದು. ಇಂತಹ ಸೂಳೆಯರು ಮದುವೆಯಾಗದೇ ಹಾಗೆಯೇ ಮುಂದುವರಿಯುತ್ತಿದ್ದರು. ದೇವರ ಕೆಲಸ ಕಾರ್ಯಗಳಲ್ಲಿ ಕಾಲ ಕಳೆಯುತ್ತಿದ್ದರು. ಇಲ್ಲಿಯ ಶಾಸನಗಳಲ್ಲಿ ಬಹುಪಾಲು ವಿವರಗಳು ಇವರ ಬಗೆಗೆ ಬಂದಿರುವುದನ್ನು ನೋಡಬಹುದಾಗಿದೆ. ಬಾಗಳಿಯ ದೇವಾಲಯದಲ್ಲಿನ ಶಾಸನವೊಂದು ಸೂಳೆಯರ ವ್ಯವಸ್ಥೆಗಾಗಿ ಭೂಮಿಯನ್ನು ದತ್ತಿಬಿಟ್ಟ ಬಗ್ಗೆ ತಿಳಿಸುತ್ತದೆ.[೧೩೩] ಈ ಶಾಸನದಲ್ಲಿ ಬಂದಿರುವ 'ಪನ್ನಿರ್ವ್ವಸೂಳೆಯರ್ಗ್ಗಂ, ಸೂಳೆವಾಳಂಗೆ' ಎಂಬ ಉಲ್ಲೇಖವನ್ನು[೧೩೪] ಗಮನಿಸಿದಾಗ ಈ ದೇವಸ್ಥಾನದ ಸೇವಾಕಾರ್ಯದಲ್ಲಿ ಸೂಳೆಯರ ಒಂದು ಗುಂಪು(ಮೇಳ) ಭಾಗವಹಿಸುತ್ತಿತ್ತು ಎಂಬುದನ್ನು ಸ್ಪಷ್ಟಪಡಿಸಬಹುದು. ಆದುದರಿಂದ ದೇವಾಲಯದ ಸೇವೆಗಾಗಿ ಸೂಳೆಯರನ್ನು ದಾನವಾಗಿ ಬಿಡುತ್ತಿದ್ದರು. ಹೀಗೆ ತಮ್ಮದೇ ಆದ ಒಂದು ಸಾಮಾಜಿಕ ನಿಯಮವನ್ನು ಪಾಲಿಸಿಕೊಂಡು ಬರುತ್ತಿದ್ದ ಇವರ ಸ್ಥಾನವು ಗೌರವಯುತವಾಗಿತ್ತು. ಈಗಲೂ ಸಹ ಸೂಳೆಗಾರಿಕೆ ಇರುವುದು ಕಂಡುಬರುತ್ತದೆ.

ಸಂಪ್ರದಾಯ-ನಂಬಿಕೆಗಳು

ನಮ್ಮ ದೈನಂದಿನ ಬದುಕಿನಲ್ಲಿ ಅನೇಕ ಪದ್ಧತಿ, ಆಚರಣೆ, ನಂಬಿಕೆ, ಕಲ್ಪನೆಗಳಿಗೆ ಅವಕಾಶಗಳನ್ನು ಕೊಟ್ಟು, ಇವುಗಳನ್ನು ಒಂದು ಸಂಪ್ರದಾಯವೆಂಬ ರೂಪಕೊಟ್ಟಿದ್ದೇವೆ. ಮಾನವನ ಅಂತರಂಗದ ಪ್ರತಿಕ್ರಿಯೆಗಳನ್ನು ನಂಬಿಕೆಗಳೆನ್ನಬಹುದು. ಇಂತಹ ನಂಬಿಕೆ ಮತ್ತು ಸಂಪ್ರದಾಯಗಳನ್ನು ಪ್ರಾಚೀನ ಕಾಲದಿಂದಲೂ ರೂಢಿಸಿಕೊಂಡು ಬಂದಿದ್ದಾನೆ. ಇವು ಆಯಾ ಧರ್ಮ, ದೇಶ, ಕಾಲ, ಸಮಾಜಗಳ ಹಿನ್ನೆಲೆಯಲ್ಲಿ ಬೆಳೆದುಬಂದಿವೆ. ಇವು ಧರ್ಮದ ಮೇಲೆ ಅವಲಂಬಿತವಾಗಿವೆ. ಈ ಹಿನ್ನೆಲೆಯಲ್ಲಿ ಧ್ಯಾನ, ದಾನ, ವ್ರತ, ಆಚರಣೆ, ಹಬ್ಬ, ಆಚಾರ ವಿಚಾರ, ನಡವಳಿಕೆ, ಪೂಜೆ, ತೀರ್ಥಕ್ಷೇತ್ರ, ಪುಣ್ಯ, ಪಾಪಗಳ ಕಲ್ಪನೆ ಬೆಳೆದು ಬಂದಿವೆ.

ದಾನ-ವ್ರತ

ಶಾಸನಗಳ ಉಗಮ ದಾನ-ಧರ್ಮಗಳಲ್ಲಿ ಎನ್ನುವಂತೆ ದಾನ ಬಿಡುವ ಪದ್ಧತಿಯು ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಒಂದು ಮೌಲ್ಯ. ಅದು ವ್ಯಕ್ತಿಯ ಶ್ರೇಯಸ್ಸು ಮತ್ತು ಪುಣ್ಯಾರ್ಜನೆಗಿರುವ ಮುಖ್ಯ ಸಾಧನವಾಗಿತ್ತು. ದಾನಗಳು ಇವರಿಗೆ, ಇಂತವರಿಗೆ ಎಂದು ಸೀಮಿತವಾಗಿರಲಿಲ್ಲ. ಯಾರಾದರೂ

ದಾನಬಿಡಬಹುದು. ಆದರೆ ಶಾಸನಗಳಲ್ಲಿ ರಾಜರು, ವಿವಿಧ ಅಧಿಕಾರಿಗಳು, ಪುರೋಹಿತವರ್ಗದ ಬ್ರಾಹ್ಮಣರು ಮತ್ತು ಇತರರು ಈ ಕಾರಣಗಳಿಗಾಗಿ ದಾನ ಬಿಟ್ಟ ಉಲ್ಲೇಖಗಳು ಈ ನಾಡಿನಾದ್ಯಂತ ದೊರೆಯುತ್ತವೆ. ಪ್ರಭುವರ್ಗದವರು ಹೆಚ್ಚಾಗಿ ಪುತ್ರೋತ್ಸವದ ಸಂದರ್ಭಗಳಲ್ಲಿ, ದೇವರ ಸಕಲ ಕಾರ್ಯಕಲಾಪಗಳಿಗೆ ಒಳ್ಳೆಯ ದಿನ, ನಕ್ಷತ್ರ, ಕಾಲ, ತಿಥಿಗಳನ್ನು ನೋಡಿ ದಾನ ಧರ್ಮಗಳನ್ನು ಕೈಗೊಳ್ಳುತ್ತಿದ್ದರು. ಮಧ್ಯಮವರ್ಗದವರು ಸಾಮಾನ್ಯವಾಗಿ ತಮ್ಮ ಹರಕೆಗೆ ತಕ್ಕಂತೆ ದಾನಗಳನ್ನು ನೀಡುತ್ತಿದ್ದರು. ಸಾಮಾನ್ಯರು ಕೂಡ ಇದೇ ರೀತಿ ದಾನಗಳನ್ನು ಬಿಡುತ್ತಿದ್ದರು. ಶಾಸನಗಳಲ್ಲಿ ದಾನ ಬಿಡುವ ಸಮಯವನ್ನು ಹಬ್ಬ, ವಾರ, ದಿನ, ನಕ್ಷತ್ರ, ಸೂರ್ಯಗ್ರಹಣ, ಚಂದ್ರಗ್ರಹಣ, ಸಂಕ್ರಾತಿಯ ದಿನಗಳು ಪ್ರಶಸ್ತವಾದವುಗಳು ಎಂಬ ನಂಬಿಕೆ ಇರುವುದನ್ನು ಉಲ್ಲೇಖಿಸುತ್ತವೆ. ದಾನ ಧರ್ಮಗಳನ್ನು ಸಾಮಾನ್ಯವಾಗಿ ದೇವಾಲಯಗಳ ಪರಿಸರದಲ್ಲಿ ನೀಡುತ್ತಿದ್ದರು. ಈ ಶಾಸನವೊಂದರಲ್ಲಿ 'ವಡ್ಡವಾರ' ಎಂದು ಉಲ್ಲೇಖವಾಗಿದೆ.[೧೩೫] ಇದು ಒಂದು ಒಳ್ಳೆಯ ದಿನವೆಂದು ಹೇಳಬಹುದು.

ನದಿ-ತೀರ್ಥಕ್ಷೇತ್ರ

ಸಾಮಾನ್ಯವಾಗಿ ಪವಿತ್ರ ದಿನಗಳಲ್ಲಿ, ವಿಶೇಷವಾದ ದಿನಗಳಲ್ಲಿ, ಹಬ್ಬಗಳಲ್ಲಿ ನದಿ ಸ್ನಾನಮಾಡುವುದು ಒಂದು ಸಂಪ್ರದಾಯ, ನಂಬಿಕೆಯಾಗಿದೆ. ಗಂಗಾ ಮತ್ತು ತುಂಗಾ ನದಿಗಳು ಪವಿತ್ರವಾದವುಗಳೆಂದು ಭಾರತೀಯರ ನಂಬಿಕೆ. ಆದ್ದರಿಂದ ನಮ್ಮವರು ನೀರನೆಲ್ಲಾ ಗಂಗೆ ಎಂದೇ ಕರೆದಿದ್ದಾರೆ. ಇಂಥ ಸ್ಥಳದಲ್ಲಿರುವ ದೇವಾಲಯಕ್ಕೆ ದತ್ತಿ ಬಿಡುವುದನ್ನು ಶ್ರೇಷ್ಠವೆಂದು ತಿಳಿದಿದ್ದರು. ಈ ಶಾಸನವೊಂದರಲ್ಲಿ ತುಂಗಭದ್ರೆಯ 'ತೆಂಕಲ ತಡಿಯಲ್ಲಿ ದೇವರಿಗೆ ದಾನ ಬಿಟ್ಟುದುದನ್ನು ವಿವರಿಸುತ್ತದೆ.[೧೩೬] ಇದೇ ಉಲ್ಲೇಖ ಇನ್ನೊಂದು ಶಾಸನದಲ್ಲಿ ಕಂಡುಬರುತ್ತದೆ.[೧೩೭]

ಹೀಗೆ ಬಾಗಳಿ ಶೈವ, ವೈಷ್ಣವ, ಜೈನ(ಬಸದಿ) ದೇವಾಲಯಗಳಿಂದಾಗಿ ತೀರ್ಥಕ್ಷೇತ್ರವೆನಿಸಿತ್ತು. ಇಲ್ಲಿಯ ಒಂದು ಶಾಸನದಲ್ಲಿ ಉಮಾಮಹೇಶ್ವರ ದೇವರನ್ನು ಮತ್ತು ನಾರಾಯಣ ದೇವರನ್ನು ಮಾಡಿಸಿದ ಉಲ್ಲೇಖ ಬರುತ್ತದೆ.[೧೩೮] ಶಾಸನ ತ್ರುಟಿತವಾಗಿರುವುದರಿಂದ ಹೆಸರು ಹಾಳಾಗಿದೆ. ಈ ಶಾಸನವೊಂದರಲ್ಲಿ 'ಕೋಟಿತೀರ್ಥದ ಕೋಟೆ' ಎಂದು ಉಲ್ಲೇಖಬಂದಿದೆ.[೧೩೯] ಹಂಪೆಯಂತುವಿರುಪಾಕ್ಷ, ಪಂಪಾಂಬಿಕೆ ಹಾಗೂ ತುಂಗಭದ್ರೆಗಳ ತ್ರಿವೇಣಿ ಸಂಗಮವಾಗಿದೆ. ತೀರ್ಥಕ್ಷೇತ್ರವೆನಿಸಿದೆ. ಕುರುವತ್ತಿ ಹೂವಿನ ಹಡಗಲಿ, ಹಿರೇ ಹಡಗಲಿಗಳು ಪವಿತ್ರ ಕ್ಷೇತ್ರಗಳೆನಿಸಿವೆ. ಇವುಗಳಿಗೆ ದಾನ ನೀಡಿದ ಉಲ್ಲೇಖಗಳು ಕಂಡುಬರುತ್ತವೆ.[೧೪೦]

ಪಾಪಪುಣ್ಯ (ಶಾಪಾಶಯಗಳು)

ಸಮಾಜದಲ್ಲಿ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬೇಕೆಂಬ ಉದ್ದೇಶಕ್ಕಾಗಿ ಪಾಪ-ಪುಣ್ಯ, ಸ್ವರ್ಗ ನರಕಗಳ ಕಲ್ಪನೆ ಹುಟ್ಟಿಕೊಂಡು, ಮುಂದೆ ಅದೊಂದು ನಂಬಿಕೆಯಾಗಿ ಬಹಳ ಹಿಂದಿನಿಂದಲೂ ಬೆಳೆದು ಬಂದಿದೆ.

ಪ್ರಾಚೀನ ಕಾಲದಲ್ಲಿ ತಂದೆ-ತಾಯಿಗಳು ಮಾಡಿದ ಪಾಪ, ಪುಣ್ಯಗಳು ಮಕ್ಕಳಿಗೆ ತಟ್ಟುತ್ತಿತ್ತೆಂದು ನಂಬಲಾಗಿದೆ. ಆದರೆ ಶರಣರು ಇದನ್ನು ಒಪ್ಪಿಕೊಳ್ಳುವುದಿಲ್ಲ. ಮಾಡುವ ಕಾಯಕದಲ್ಲಿ ಪಾಪ-ಪುಣ್ಯ, ಸ್ವರ್ಗ-ನರಕವಿದೆ ಎನ್ನುತ್ತಾರೆ. ಇದು ಸತ್ಯವೂ ಹೌದು.

ಶಾಸನಗಳಲ್ಲಿ ಪಾಪ-ಪುಣ್ಯ, ಶಾಪಾಶಯಗಳನ್ನು, ಶಾಸನಗಳ ಕೊನೆಯ ಭಾಗದಲ್ಲಿ, ಫಲಶ್ರುತಿಯಲ್ಲಿ ನೋಡಬಹುದು. ವೇದಗಳಲ್ಲಿ ಪಾಪಗಳಿಗೆ 'ಮಹಾಪಾತಕ' ಎಂದು ಕರೆಯಲಾಗಿದೆ. (ಬ್ರಾಹ್ಮಣರು ಮಾಡುವ ಪಾಪಗಳು) ಶಾಸನಗಳಲ್ಲಿ ಮಹಾಪಾತಕ, ಪಂಚಮಹಾಪಾತಕನಕ್ಕುಂ' ಎಂದು ಬರುತ್ತದೆ.[೧೪೧] ಬಿಟ್ಟಿರುವ ದಾನ-ದತ್ತಿಗಳನ್ನು ಕಾಪಾಡಿದವರಿಗೆ, ಶ್ರೇಯಸ್ಸು ಪುಣ್ಯ, ಬರುತ್ತದೆ, ಹಾಳು ಮಾಡಿ ಅಪಹರಿಸಿದವನಿಗೆ ಪಾಪಗಳು ಬರುತ್ತವೆ ಎಂದು ಸೂಚಿಸಲಾಗಿದೆ. ಹೆಚ್ಚಾಗಿ ಶಾಸನಗಳಲ್ಲಿ ಬೇರೆ ಬೇರೆ ಶಾಪಾಶಯಗಳು ಬಂದಿವೆ.[೧೪೨] ಅವುಗಳಲ್ಲಿ ಇದೊಂದು ಹೇಳಲಾಗಿದೆ.

ಸಾಮಾನ್ಯೋಯಂ ಧರ್ಮಸೋತು
ನೃಪಾಣಾಂ, ಕಾಳೇ ಕಾಳೇ ಪಾಳನೀಯೋಭವದ್ಭಿ'

ಹೀಗೆ ಮುಂತಾದ ಉಲ್ಲೇಖಗಳು ಬರುತ್ತವೆ. ದಾನವನ್ನು ರಕ್ಷಿಸಿದವರಿಗೆ ಒಳ್ಳೆಯದು, ಕೆಡಿಸಿದವರಿಗೆ ಪಾಪಗಳು ಬರುತ್ತವೆ ಎಂಬ ಅರ್ಥವನ್ನು ಕೊಡುತ್ತದೆ. ಇಂತಹ ಪಾಪಗಳನ್ನು ಮಾಡಿ ಇವುಗಳಿಂದ ಮುಕ್ತಿ ಪಡೆಯಲು ಪ್ರಾಯಶಃ ದಾನ-ಧರ್ಮಗಳು ಹುಟ್ಟಿಕೊಂಡಿರಬೇಕು. ವಚನಗಳಲ್ಲಿ ಬ್ರಾಹ್ಮಣರು ಮಾಡಿದ ಪಾಪಗಳನ್ನು ಪಂಚಮಹಾಪಾತಕ ಎಂದು ಕರೆದಿವೆ.[೧೪೩]

ಆಹಾರ ಪದಾರ್ಥಗಳು

ಆಹಾರವಿಲ್ಲದೇ ಒಂದು ಜೀವಿಯೂ ಸಹ ಬದುಕುವುದು ಕಠಿಣ. ಪ್ರಾಚೀನ ಕಾಲದಲ್ಲಿ ಆಹಾರ ಪದಾರ್ಥಗಳಿಗೆ ಕೆಲವೊಂದು ಹೆಸರುಗಳನ್ನು ಬಳಸಿರುವುದನ್ನು ಶಾಸನಗಳಲ್ಲಿ ಉಲ್ಲೇಖವಾಗಿವೆ. ಹಾಗೆಯೇ ಆಹಾರ ವೈವಿಧ್ಯದ ವಿಷಯವನ್ನು ಉಲ್ಲೇಖಿಸುವುದಿಲ್ಲ. ಪದಾರ್ಥಗಳಾದ ಬಾಡುಕಾಯಿ, ಕಾಯಿ, ಎಲೆ, ಅಡಿಕೆ, ಕಟುಘೃತ, ತೈಲಗಳನ್ನು ಉಪಯೋಗಿಸುತ್ತಿದ್ದರು. ಇವುಗಳನ್ನು ತಯಾರಿಸಲು ಅಂದರೆ ಆಹಾರವನ್ನು ತಯಾರಿಸಲು ಬಂಡಿಗಟ್ಟಲೇ ಸೌದೆಗಳನ್ನು ಉಪಯೋಗಿಸುತ್ತಿದ್ದರೆಂದು ಬರುತ್ತದೆ.[೧೪೪] ಇದರ ಜೊತೆಗೆ ಹುಳಿ ಎಂಬ ಪದಾರ್ಥವನ್ನು ಉಲ್ಲೇಖಿಸುತ್ತದೆ. ಇದು ಪ್ರಾಯಶಃ ಹುಣಸೆ ಹುಳಿ ಅಥವಾ ಹುಣಸೆ ಹಣ್ಣು ಇರಬಹುದು. ಇಂತಹ ಪದಾರ್ಥಗಳನ್ನು ದೇವರ ನೈವೇದ್ಯಕ್ಕೆ, ಬ್ರಾಹ್ಮಣರ ಭೋಜನಕ್ಕೆ ಉಪಯೋಗಿಸುತ್ತಿದ್ದರು. ಜೊತೆಗೆ ಇವುಗಳಿಗೆ ದಾನ-ದತ್ತಿಗಳನ್ನು ಬಿಡುತ್ತಿದ್ದರು. ಈ ಶಾಸನದಲ್ಲಿ ದಕ್ಷಿಣೆಗೆಯವರ ಭೋಜನಕ್ಕೆ ಎಂದು ಉಲ್ಲೇಖವಾಗಿದೆ.[೧೪೫] ದಕ್ಷಿಣೆ ಎಂದರೆ (ಗುರು-ಹಿರಿಯರಿಗೆ, ಸ್ವಾಮಿಗಳಿಗೆ ಹಣದ ರೂಪದಲ್ಲಿ ಕೊಡುವ ಸಂಭಾವನೆ ಎಂದಾಗುತ್ತದೆ) ಇನ್ನೊಂದು

ಶಾಸನದಲ್ಲಿ ಬ್ರಾಹ್ಮಣರ ಭೋಜನದೊಳಗೆ ಆರು ಮನುಷ್ಯರ ಭೋಜನಫಲ' ಎಂದು ಬಂದಿದೆ.[೧೪೬] ಇದರ ಮುಂದುವರಿದ ಭಾಗದಲ್ಲಿ ಮತ್ತೆ ಆರು ಮಂದಿಬ್ರಾಹ್ಮಣರ ಭೋಜನಕ್ಕೆ ಎಂದು ತಿಳಿದುಬರುತ್ತದೆ. ಬ್ರಾಹ್ಮಣರಾದ ಆರು ಮಂದಿ ಪುರೋಹಿತರಿಗೆ ಭೋಜನಕ್ಕೆ ದಾನ ನೀಡಿದರೆಂದು ತಿಳಿದುಬರುತ್ತದೆ. ದೇವಾಲಯಗಳಿಗೆ ಬಿಡುವ ದಾನಗಳಲ್ಲಿ ದೇವರಿಗೆ ನಡೆಸುವ ಸೇವೆ ಅಥವಾ ನೈವೇದ್ಯಗಳಲ್ಲಿ ಅಡಿಕೆ-ಎಲೆಗಳು ಮುಖ್ಯವಾಗಿ ಉಲ್ಲೇಖವಾಗಿವೆ.[೧೪೭] ಎಲೆಗಳಲ್ಲಿ ವೀಳ್ಯದೆಲೆ ನಮ್ಮ ಪ್ರಾಚೀನ ಕಾಲದಿಂದಲೂ ಶುಭಕಾರ್ಯಕ್ಕೆ ಬಳಸುವ ಪದಾರ್ಥವಾಗಿದೆ. ನಮ್ಮವರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಆದ್ದರಿಂದ ದೇವರಿಗೆ ಎಲೆಗಳನ್ನು ದಾನ ನೀಡುತ್ತಿದ್ದರೆಂದು ಕಂಡುಬರುತ್ತದೆ. ಈಗ ಇಲ್ಲಿಯ ದೇವರುಗಳಿಗೆ ಎಲೆ ಪೂಜೆ ಮಾಡಿಸುವುದನ್ನು ಕಾಣಬಹುದು.

ದೀಪಾವಳಿ ಹಿಂದುಗಳಿಗೆ ಸ್ವಲ್ಪ ವಿಶೇಷವಾದ ಸಂತೋಷವನ್ನುಂಟು ಮಾಡುವುದಲ್ಲದೆ ಕಾರ್ತಿಕ ಮಾಸದಲ್ಲಿ ಬರವ ಇದು(ದಿವಾಳಿ) ಎಣ್ಣೆಸ್ನಾನ ಮಾಡಿ, ಸುಂದರವಾದ ಬಣ್ಣ, ಬಣ್ಣದ ಹೊಸ ಬಟ್ಟೆಗಳನ್ನು ಹಾಕಿಕೊಂಡು, ಅಡಿಕೆ, ಸುಣ್ಣವನ್ನು ಸೇರಿಸಿ ವೀಳ್ಯದೆಲೆಯೊಂದಿಗೆ, ಎಲೆ-ಆಡಿಕೆಯನ್ನು ಪರಸ್ಪರ ಹಂಚುವುದನ್ನು ನೋಡಬಹುದು. ಹೀಗೆ ಪದಾರ್ಥಗಳನ್ನು ಆಯಾ ಹಬ್ಬದ ದಿನಗಳಲ್ಲಿ ಪೂಜೆ, ನೈವೇದ್ಯಗಳಲ್ಲಿ ಹೆಚ್ಚಾಗಿ ಬಳಸುತ್ತಿದ್ದರು. ಕೆಲವು ಶಾಸನಗಳಲ್ಲಿ ಜೋಳ, ಭತ್ತ, ಎಣ್ಣೆ, ನೆಲ್ಲಕ್ಕಿ, ತುಪ್ಪ ಎಂದು ಉಲ್ಲೇಖಗಳಿವೆ.[೧೪೮]

ಸಾರ್ವಜನಿಕ ಚಟುವಟಿಕೆಗಳು

ಕನ್ನಡಿಗರ ಎಲ್ಲ ಚಟುವಟಿಕೆಗಳ ಮೂಲ ಪ್ರೇರಣೆ ಧರ್ಮವೇ ಆಗಿದೆ. ಲೌಕಿಕ ವ್ಯವಹಾರಗಳಿಂದಲೇ, ತೃಪ್ತಿ ಪಡದ ಮಾನವ, ಅದರಾಚೆಗಿನ ಕಾರ್ಯಕ್ಕೂ ಕೈ ಹಾಕಿದನು. ಈ ಹಂತದಲ್ಲಿ ಅವನಿಗೆ ಸತ್ಕಾರ್ಯದ ಮೂಲಕ ಪುಣ್ಯ ಗಳಿಸಬೇಕೆಂಬ ಆಸೆ ಮೂಡಿತು. ಇದಕ್ಕೆ ಜಾತಿ ಮತ ಪಂಥಗಳಾವುವು ಅಡ್ಡಬರಲಿಲ್ಲ. ಸೇವೆ ಮತ್ತು ತ್ಯಾಗ ವೃತ್ತಿಯಿಂದ ಸಮರ್ಪಣ ಭಾವವನ್ನು ಮೆರೆದಿದ್ದಾರೆ. ಇದನ್ನು ಒಂದು ಶಾಸನದಲ್ಲಿ ಪರಹಿತ ವೃತ್ತಿ ಎಂದು ಯಥಾರ್ಥವಾಗಿ ಬಣ್ಣಿಸಿದೆ. ಇದರಿಂದ ಅನೇಕ ದೇವಾಲಯಗಳು ಕೆರೆ, ಬಾವಿಗಳು, ಕಟ್ಟೆಗಳು, ಸತ್ರಗಳು, ಅರವಂಟಿಕೆಗಳು ನಿರ್ಮಾಣಗೊಂಡವು. ಇವುಗಳ ಸುವ್ಯವಸ್ಥೆಯ ಕಾರ್ಯವೂ ಮುಂದುವರೆಯುತ್ತಾ ಬಂದಿತು. ಇಂತಹ ಕೆಲಸಗಳಲ್ಲಿ ನಮ್ಮ ಜನರು ಮೇಲು ಕೀಳೆನ್ನದೆ, ಬಡವ-ಬಲ್ಲಿದರೆನ್ನದೆ ಎಲ್ಲರೂ ಸೇರಿ ಉದಾರಭಾವದಿಂದ ದಾನ-ದತ್ತಿಗಳನ್ನು ನೀಡಿದರು.

ಮಾನವ ಜೀವನದ ಅವಶ್ಯಕ ಮತ್ತು ಅಗತ್ಯವಾದ ನೈಸರ್ಗಿಕ ಸಂಪನ್ಮೂಲಗಳಾದ ಗಾಳಿ, ಅನ್ನ, ನೀರು ಬೇಕೇ ಬೇಕು. ವಸತಿ ಹೆಚ್ಚಿದಂತೆಲ್ಲ. ಹೊಸ ಆಯಾಮಗಳನ್ನು ಸೃಷ್ಟಿ ಮಾಡಲು ಅದರಲ್ಲೂ

ನೀರಿನ ಪೂರೈಕೆಗೆ ನಮ್ಮ ಪ್ರಾಚೀನರು ಹೆಚ್ಚಿನ ಆದ್ಯತೆಯನ್ನು ನೀಡಿದ್ದಾರೆ. ಕನ್ನಡಿಗರ ಔದಾರ್ಯ ಮುಖ್ಯವಾಗಿ ಒಂದು ದೇವಾಲಯದ ನಿರ್ಮಾಣದಲ್ಲಿ, ಮತ್ತೊಂದು ತಟಾಕ(ಕೆರೆ) ನಿರ್ಮಾಣದಲ್ಲಿ ಎಂಬ ಮಾತು ಪ್ರಾಚೀನ ಕಾಲಕ್ಕೆ ನಿಜವೇ ಆಗಿತ್ತು. ಯಾವ ವ್ಯಕ್ತಿಯೇ ಆಗಲಿ ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ನೀರನ್ನು ಕುಡಿದರೆ ಅವನಿಗೆ ಕೋಟಿ ಪುಣ್ಯ ಬರುತ್ತೆ, ಎಂಬ ನಂಬಿಕೆಯೂ ಶಾಸನಗಳಿಂದ ತಿಳಿದುಬರುತ್ತದೆ. ಈ ಶಾಸನಗಳಲ್ಲಿ ಕೆರೆಯ ಪ್ರಸ್ತಾಪವೂ ಬಂದಿದೆ. ಕೆಲವೊಂದು ವ್ಯಕ್ತಿಯ ಹೆಸರಿನಲ್ಲಿ ಬಂದರೆ, ಕೆಲವೊಂದು ಕೆರೆಗೆ ದಾನ ನೀಡಿದ ಉಲ್ಲೇಖಗಳು ಬಂದಿವೆ. ಆದರೆ ಇಲ್ಲಿ ಹಲವಾರು ಕೆರೆಗಳ ಹೆಸರುಗಳು ವ್ಯಕ್ತವಾಗಿವೆ. ಕೆಲವೊಂದು ವ್ಯಕ್ತಿನಿಷ್ಠ ಕೆರೆಗಳಾದ ನಾಯಕನ ಕೆರೆ, ಚಾಮೆಯನ ಕೆರೆ, ನಾರಣೋಝರ ಕೆರೆ, ಶಂಕರೋಝರ, ಮಾಚಿಸೆಟ್ಟಿಯ ಕೆರೆ, ದಾಸಯನ ಕೆರೆ, ಚಿಣ್ಣಗರ ಕೆರೆ, ಮಾದಿಯಕೆರೆ, ಕಂಚಿಮೆಯ ಕೆರೆ, ಕೆಂಚವ್ವನ ಕೆರೆ, ಬೆಗೆಯರ ಕೆರೆ ಇಂತಹ ಹೆಸರುಗಳಿಂದ ಉಲ್ಲೇಖವಾಗಿವೆ.[೧೪೯] ಇನ್ನು ಕೆಲವುಗಳಲ್ಲಿ ಪಿರಿಯಕೆರೆ ಎಂದು ಉಲ್ಲೇಖವಾಗಿದೆ.[೧೫೦] ಹಿರಿಯ ಕೆರೆಯ ಕೆಲಸಕ್ಕೆ ಮಿಕ್ಕಿದ್ದು, ಪಿರಿಯ ಕೆರೆಯಗೆ ಮಾಣಗೊಂಡು ಎಂದಿದೆ. ಪಿರಿಯಕೆರೆಯ ಕೆಳಗಿನ ಲಾಲಾಬಾಗಿನ ತೋಟದ ಹರಿನೀರಿನಲ್ಲಿ ಬಿಡುವ ತೋಟದ ಭಾಗವನ್ನು ದಾನ ಬಿಡುವುದು. ಇಂತಹ ಕೆರೆಗಳು ಸಾರ್ವಜನಿಕರ ಕೆಲಸಗಳಿಗೆ ಉಪಯೋಗವಾಗುತ್ತಿದ್ದವು. ಇವು ಗ್ರಾಮಗಳಲ್ಲಿರುವ ಕೆರೆಗಳಲ್ಲಿಯೇ ದೊಡ್ಡ ಕೆರೆಗಳಾಗಿರಬೇಕು. ಈ ಕೆರೆಯ ನೀರು ಯಾವ ಕಾಲದಲ್ಲಿಯೂ ಭತ್ತದೇ ಇರಬಹುದು. ಇಲ್ಲಿಯ ಮತ್ತೊಂದು ಶಾಸನದಲ್ಲಿ 'ಮನ್ನೆಯ ಕೆರೆ' ಎಂದು ಉಲ್ಲೇಖವಾಗಿದೆ.[೧೫೧] ಆದರೆ ಇದು ಕೆರೆಯ ಹೆಸರಲ್ಲ ಅದು ಸ್ಥಳದ ಹೆಸರು, ಬಿಡು ಬಿಟ್ಟ ಪ್ರದೇಶ ಎಂದಾಗಿರಬೇಕು. ಏಕೆಂದರೆ ಇದರ ಮುಂದಿನ ಸಾಲಿನಲ್ಲಿ ನೆಲೆವೀಡಿನೊಳ್ ಸುಖಸಂಕಥಾವಿನೋದದಿಂ' ರಾಜ್ಯಂಗೆಯ್ಯುತ್ತಮಿರೆ, ಎಂದು ಬಂದಿರುವುದರಿಂದ, ಈ ಪ್ರದೇಶವನ್ನು ರಾಜಧಾನಿ ಎಂದು ಗುರುತಿಸಬಹುದು.

ಇದನ್ನು ಡಾ.ದೇಸಾಯಿಯವರು ರಾಜಧಾನಿ ಎಂದೇ ಕರೆದಿದ್ದಾರೆ.[೧೫೨] ವಿಕ್ರಮಾದಿತ್ಯ ಕಲ್ಯಾಣದಿಂದ ಆಳುವಾಗ ಬಂದು ಬೀಡುಬಿಟ್ಟ ಗ್ರಾಮಕ್ಕೆ 'ಮನ್ನೆಯಕೆರೆ' ಎಂದು ಕರೆಯಬಹುದಾಗಿದೆ. ಇಂತಹ ಉಲ್ಲೇಖಗಳು ಅನೇಕ ಕಡೆ ಕಂಡುಬಂದಿವೆ. ಪೊಟ್ಟಳಕೆರೆ, ಅರಸಿಕೆರೆ, ಕಂಚಿಕೆರೆ ಮುಂತಾದವುಗಳು ಕಂಡುಬರುತ್ತವೆ. ಆದರೆ ಇವು ಕೆರೆಗಳಲ್ಲ ಗ್ರಾಮಗಳು. ಆದರೆ ಕಲಬುರ್ಗಿಯವರು ಇದು ಒಂದು ಸಣ್ಣ ಗ್ರಾಮವಾಗಿರಬೇಕು.[೧೫೩] ಎಂದಿದ್ದಾರೆ. ಮನ್ನೆಯಕೆರೆಯಂಥ ಅಪ್ರಸಿದ್ಧ ಗ್ರಾಮಗಳನ್ನು ರಾಜಧಾನಿ, ಇಲ್ಲವೆ ಉಪರಾಜಧಾನಿಗಳನ್ನಾಗಿ ಮಾಡಿಕೊಳ್ಳುವುದು ಅಸಾಧ್ಯ. ಆದ್ದುದರಿಂದ ಇದು ರಾಜಧಾನಿಯಾಗಿರದೆ, ಆಡಳಿತದಲ್ಲಿ ಕೆಲವೊಂದು ಘಟನೆಗಳು ಜರುಗಿದಾಗ ಚಕ್ರವರ್ತಿಯು ಯಾವ ಊರಿನಲ್ಲಿ ಇದ್ದನೆಂಬುದನ್ನು ಮಾತ್ರ ಸೂಚಿಸುತ್ತಿರಬೇಕು. ಅಂದರೆ ಆತನು ಪ್ರಯಾಣ ಪ್ರಸಂಗದಲ್ಲಿ ಒಂದು ದಿನವೋ ನೆಲೆನಿಂತ

ಊರಾಗಿರಬೇಕು. ಪ್ರಾಯಶಃ ಇದೇ ಸರಿಯಾದ ಅರ್ಥವಿರಬೇಕು. ಏಕೆಂದರೆ ರಾಜರು ತಾವು ಉಳಿದುಕೊಂಡು ಹೋಗುತ್ತಿದ್ದ ಸ್ಥಳಕ್ಕೆ ಕೆಲವೊಂದು ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದರು. ಸೆಟ್ಟಿ ಉಳಿದಲ್ಲಿ ಅಥವಾ ಇಳಿದಲ್ಲಿ ಪಟ್ಟಣವೆಂಬಂತೆ ರಾಜನು ಅಲ್ಲಿ ನೆಲೆ ನಿಂತರೆ ಮಾತ್ರ ರಾಜಧಾನಿ ಎನ್ನಬಹುದು. ಆದ್ದರಿಂದ 'ಮನ್ನೆಯ ಕೆರೆ' ಒಂದು ಗ್ರಾಮವೆಂದು ಹೇಳಬಹುದು. ಅದು ಬಾಗಳಿ ಎಂದು ಕರೆಯಲಾಗಿದೆ. ಸಂಡೂರಿನ ಒಂದು ಶಾಸನದಲ್ಲಿ ದೇವರನೈವೇದ್ಯಕ್ಕೆ ತಟಾಕಗ್ರಾಮವನ್ನು ದಾನನೀಡಿದನೆಂದು ಉಲ್ಲೇಖ ಬರುತ್ತದೆ.[೧೫೪] ಹರಪನ ಹಳ್ಳಿಯಲ್ಲಿ ಅಯ್ಯಪ್ಪನಕೆರೆ ಎಂದಿದೆ, ಅದನ್ನು ಸೋಮಶೇಖರ ನಾಯಕ ತನ್ನ ತಂದೆಯ ನೆನಪಿಗಾಗಿ ಕಟ್ಟಿಸಿದನೆಂದು ಹೇಳುತ್ತಾರೆ. ಇಂತಹ ಕೆರೆ, ಅರವಟ್ಟಿಗೆಗಳು ಸಾರ್ವಜನಿಕರಿಗೆ ಉಪಯೋಗವಾಗುತ್ತಿದ್ದವು.[೧೫೫] ಬೇಸಿಗೆಯ ಕಾಲದಲ್ಲಿ ಪ್ರಯಾಣಿಕರಿಗೆ ಬಾಯಾರಿಕೆಗಾಗಿ ಮಾರ್ಗಮಧ್ಯದಲ್ಲಿ ಕೆಲವೊಂದು ಅರವಟ್ಟಿಗೆಗಳನ್ನು ನಿರ್ಮಿಸುತ್ತಿದ್ದರು. ಇವು ಸತ್ರ, ದೇವಸ್ಥಾನಗಳಿಗೆ ಹೊಂದಿಕೊಂಡಿರುತ್ತಿದ್ದವು. ಅರವಟ್ಟಿಗೆಗಳಲ್ಲಿ ನೀರು ಸಿಕ್ಕರೆ, ಸತ್ರಗಳಲ್ಲಿ ಅನ್ನ ಸಿಗುತ್ತಿತ್ತು. ಇಂತಹ ಉಲ್ಲೇಖಗಳು ಇಲ್ಲಿಯ ಬಹುಪಾಲು ಶಾಸನಗಳಲ್ಲಿ ಕಂಡುಬರುತ್ತದೆ. ಈ ಶಾಸನವೊಂದರಲ್ಲಿ ಬಾಗಳಿಯ ಮಹಾಜನರ ಸಮ್ಮುಖದಲ್ಲಿ ಹರಿಕಾರ ದೇವಣ್ಣನ ಮಗಳು ಸೂಳೆ ಬೊಂಮವ್ವೆ, ಅರವಂಟಿಗೆಯನ್ನು ಮಾನ್ಯವಾಗಿ, ಕೆರೆಯನ್ನು ದಾನವಾಗಿ ಬಿಟ್ಟಳೆಂದು ಬರುತ್ತದೆ.[೧೫೬] ಆದರೆ ಕಟ್ಟಿಸಿದ ಉಲ್ಲೇಖಗಳಿಲ್ಲ.

ಸತ್ರ(ಛತ್ರ)ಗಳಿಗೆ ದೇವಸ್ಥಾನ ಅಥವಾ ಮಠಗಳಿಗೆ ಹೊಂದಿಕೊಂಡಿದ್ದು ದೇವಸ್ಥಾನಗಳ ಅಂಗಗಳಾಗಿದ್ದವು. ಅತಿಥಿಸತ್ಕಾರದ ವಿಸ್ತೃತರೂಪ ಸತ್ರವೆನ್ನಬಹುದಾಗಿದೆ. ದಾನಗಳಲ್ಲಿ ಅನ್ನದಾನ ಶ್ರೇಷ್ಠವೆಂದು ನಂಬಿದ್ದರು. ಭೂದಾನ, ವಿದ್ಯಾದಾನಗಳಿಗಿಂತ ಈ ದಾನವೇ ಮೇಲು ಎಂದು ಈಗಲೂ ಸಹ ನಂಬಿಕೆ ಇದೆ. 'ಹಸಿದವರಿಗೆ ಅನ್ನ ಹಾಕಬೇಕೆಂಬಂತೆ' ಎಂಬ ಮಾತಿನ ಅರ್ಥದಂತೆ ಅಂದಿನ ಕಾಲಕ್ಕೆ ಸತ್ರಗಳು ನಿರ್ಮಾಣವಾಗಿದ್ದವೆಂದು ತಿಳಿದುಬರುತ್ತದೆ.

ಈ ಶಾಸನದಲ್ಲಿ ಅಕ್ಕಸಾಲಿಯು ಬಂದ ಲಾಭದಲ್ಲಿ ನಿತ್ಯವೂ ನಾಲ್ಕು ಜನರಿಗೆ ಸತ್ರವನ್ನು ನಡೆಸುವಂತೆ ದಾನ ನೀಡುತ್ತಾನೆ ಎಂದು ಬಂದಿದೆ.[೧೫೭] ಇದು ಸೋಮರಸನು ಸತ್ರಕ್ಕೆ ಒಂದು ಪಾಗವನ್ನು ದಾನಬಿಡುತ್ತಾನೆ. ಆದರೆ ಏನು ಎಂಬುದನ್ನು ಸ್ಪಷ್ಟಪಡಿಸುವುದಿಲ್ಲ.[೧೫೮] ಈ ಶಾಸನವು ತ್ರುಟಿತವಾಗಿರುವುದರಿಂದ ಯಾವುದೇ ವಿವರ ಸರಿಯಾಗಿ ಕಂಡುಬರುವುದಿಲ್ಲ. ಇದರಲ್ಲಿ ಬಾವಿ, ಅರವಂಟಿಗೆ, ಸತ್ರಕ್ಕೆ ೪೫೦ ಮತ್ತರು ಭೂಮಿಯನ್ನು ನೀಡಿರಬಹುದು. ಇದರ ಜೊತೆಗೆ ಬ್ರಾಹ್ಮಣರಿಗೆ ಪ್ರತ್ಯೇಕ ಸತ್ರವನ್ನು ವ್ಯವಸ್ಥೆ ಮಾಡಿದ್ದರೆಂದು ಕಂಡುಬರುತ್ತದೆ. ಏಕೆಂದರೆ ಶಾಸನಗಳಲ್ಲಿ ಬ್ರಾಹ್ಮಣರ ಸತ್ರಕ್ಕೆ ನೀಡಿದ ದಾನಗಳು ಎಂದು ಉಲ್ಲೇಖಗಳು ಬಂದಿವೆ. ಈ ಶಾಸನದಲ್ಲಿ ಬ್ರಾಹ್ಮಣರ ಸತ್ರಕ್ಕೆ ಎಂದು ಸ್ಪಷ್ಟಪಡಿಸಿದೆ.[೧೫೯] ಬಹುಪಾಲು ಶಾಸನಗಳಲ್ಲಿ ಬ್ರಾಹ್ಮಣರಿಗೆ ಮತ್ತು ಅವರ ಸತ್ರಕ್ಕೆ ಬಿಟ್ಟ ದಾನಗಳನ್ನು ಉಲ್ಲೇಖಿಸುತ್ತವೆ.

ಈ ಶಾಸನವೊಂದರಲ್ಲಿ ಬಾಗಲಿಯೆಂಬ ಊರ ಅಗ್ರಹಾರದ ಪನ್ನಾಯದ ಅಧಿಷ್ಠಾಯನಾದ ಮುದ್ದರಸ ದಂಡನಾಯಕನು ಮಹಾಜನರ ಸನ್ನಿಧಾನದಲ್ಲಿ ಕಲಿದೇವರ ಸ್ವಾಮಿದೇವರ ನೈವೇದ್ಯ, ನಂದಾದೀವಿಗೆಗೆ ತಿಂಗಳಿಗೆ ಎರಡೆಲೆಯ ಹೇರಿನ ಸುಂಕ ಪನ್ನೆರಡನ್ನು ಧಾರಾಪೂರ್ವಕವಾಗಿ ದಾನಬಿಟ್ಟನು. ಸೆಟ್ಟಿಗಳು ಕಲಿದೇವಸ್ವಾಮಿ ಅಗ್ರಾಸನದ ಬ್ರಾಹ್ಮಣರ ಸತ್ರಕ್ಕೆ ಎಲೆಯ ಪೇರಿಂಗೆ ವೀಸಂಬಿಟ್ಟರು[೧೬೦] ಎಂದು ಬಂದಿರುವುದರಿಂದ ಇವು ಸಾಮಾಜಿಕ ಸಂಸ್ಥೆಗಳಾಗಿದ್ದು, ಸಾಂಸ್ಕೃತಿಕ ಕೆಲಸಗಳನ್ನು ನಡೆಸುತ್ತಿದ್ದರೆಂದು ಹೇಳಬಹುದಾಗಿದೆ.ಹೂವಿನ ಹಡಗಲಿ ಶಾಸನವೊಂದರಲ್ಲಿ ಸೇನಾಪತಿ ರವಿಗನ ಹೆಂಡತಿ ರೆಬ್ಬಲದೇವಿ ದೇವರ ಸೇವಾಕಾರ್ಯಗಳಿಗೂ ಮತ್ತು ಬ್ರಾಹ್ಮಣರ ಆಹಾರ ಸತ್ರಕ್ಕೆ ಎರೆಯ ಭೂಮಿ ಮತ್ತು ಮನೆಯನ್ನು ದಾನ ನೀಡಿದಳು ಎಂದು ಉಲ್ಲೇಖವಾಗಿದೆ.[೧೬೧] ಒಟ್ಟಾರೆ ಸತ್ರಗಳು ಪ್ರವಾಸಿಗರಿಗೆ, ಅನಾಥರಿಗೆ, ಓದುವ ವಿದ್ಯಾರ್ಥಿಗಳಿಗೆ, ಅಲ್ಲಿಯ ಮಠಗಳು ಆಶ್ರಯವನ್ನು ಒದಗಿಸುತ್ತಿದ್ದವೆಂದು ಹೇಳಬಹುದಾಗಿದೆ.

ವಿದ್ಯಾಭ್ಯಾಸ

ಒಂದು ನಾಡು ಸುಸಂಸ್ಕೃತವಾಗಿದೆ ಎಂಬುದನ್ನು ಅಲ್ಲಿಯ ವಿದ್ಯಾಕೇಂದ್ರಗಳಿಂದ ತಿಳಿಯಬಹುದು. ನಾಡಿನಾದ್ಯಂತವೂ ದೊರಕುವ ನೂರಾರು ಶಾಸನಗಳು ಆ ಕಾಲದ ವಿದ್ಯಾಭ್ಯಾಸದ ಪದ್ಧತಿಯ ಪರಿಚಯಕ್ಕೆ ಕಿಟಕಿಗಳನ್ನು ತೆರೆಯುತ್ತವೆ. ನಮ್ಮ ರಾಜರು ಮತ್ತು ಮಹಾಜನಗಳು ವಿದ್ಯೆಗೆ ಕೊಡುತ್ತಿದ್ದ ಉದಾರ ಮತ್ತು ಹೆಚ್ಚಿನ ಪ್ರೋತ್ಸಾಹವೇ ಇದಕ್ಕೆ ನಿದರ್ಶನಗಳಾಗಿವೆ. ಪ್ರಾಚೀನ ಕಾಲದಿಂದಲೂ ವಿದ್ಯೆಗೆ ಗೌರವ ನೀಡುತ್ತಾ ಬಂದಿದ್ದಾರೆ. ಅವರು ಲೌಕಿಕ ಜ್ಞಾನಕ್ಕಿಂತ ಆಧ್ಯಾತ್ಮಿಕ ಜ್ಞಾನವೇ ಹೆಚ್ಚು ಎಂದು ಅರಿತು, ವಿದ್ಯೆಗೆ ಹೆಚ್ಚಿನ ಒತ್ತನ್ನು ನೀಡಿದ್ದರು. ಆದ್ದರಿಂದ ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದಲ್ಲಿ ಕಂಡುಬರುವ ಅಂಶಗಳೆಂದರೆ ಊರೂರುಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ, ದೇವಾಲಯಗಳಲ್ಲಿ ಮಠಗಳಲ್ಲಿ ಅಗ್ರಹಾರಗಳಲ್ಲಿ ವಿದ್ಯೆ ಕಲಿಸಲಾಗುತ್ತಿತ್ತು. ದೇವಾಲಯಗಳಿಗೆ ದಾನ ದತ್ತಿಗಳನ್ನು ಬಿಡುವಾಗ ವಿದ್ಯಾಭ್ಯಾಸಕ್ಕೆ ಇಂತಿಷ್ಟು ಭಾಗವನ್ನು ಮೀಸಲಾಗಿರಿಸುತ್ತಿದ್ದರು. ವಿದ್ಯಾಕೇಂದ್ರಗಳಾದ ದೇವಸ್ಥಾನಗಳಲ್ಲಿ ಮಠಗಳಲ್ಲಿ ತಪೋಧನರು ಛಾತ್ರರು, ವಿದ್ಯಾಭ್ಯಾಸದಲ್ಲಿ ನಿರತರಾಗಿರುತ್ತಿದ್ದರು. ತಪೋಧನರು ನೈಷ್ಠಿಕ ಬ್ರಹ್ಮಚಾರಿ ಗಳಾಗಿದ್ದು ವಿದ್ಯಾಭ್ಯಾಸದ ನಂತರ ಮಠ, ದೇವಸ್ಥಾನಗಳ ಸ್ಥಾನಪತಿಗಳಾಗುತ್ತಿದ್ದರು. ಛಾತ್ರರು ಗೃಹಸ್ಥಾ ಶ್ರಮಕ್ಕೆ ಮರಳುತ್ತಿದ್ದರು. ಋಗ್ವೇದದಲ್ಲಿ ವಿದ್ಯೆಗೆ ಹೆಚ್ಚಿನ ಮಹತ್ವ ಕೊಟ್ಟಿದೆ ಎಂದು ತಿಳಿಯುತ್ತದೆ. ದೇವಸ್ಥಾನದ ಮಠಗಳ ಸಮಸ್ತ ಹೊಣೆ ಹೊತ್ತ ಸ್ಥಾನಚಾರ್ಯರು, ನೈಷ್ಠಿಕ ಬ್ರಹ್ಮಚಾರಿ ಗಳಾಗಿರು ವುದರೊಂದಿಗೆ ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಕೆಲವು ಶಾಸನಗಳು ತಪೋಧನರಿಗೆ, ನೈಷ್ಠಿಕರಿಗೆ, ವಿದ್ಯಾರ್ಥಿಗಳಿಗೆ, ಮಠಗಳಿಗೆ ದಾನ-ದತ್ತಿಗಳನ್ನು ನೀಡಿದ ಉಲ್ಲೇಖಗಳನ್ನು[೧೬೨] ಕಾಣಬಹುದು.

[illegible]

ಈ ಶಾಸನದಲ್ಲಿ ಛಾತ್ರರ ಭೋಜನಕ್ಕೆ ಮೂರು ಕಾಲ ನಡೆಸುವಂತೆ ಎಂದು ಉಲ್ಲೇಖಬರುತ್ತದೆ.[೧೬೩] ಹಡಗಲಿ ಒಂದು ಶಾಸನದಲ್ಲಿ 'ಮಠದ ತಪೋಧನರಿಗೆ, ವಿದ್ಯಾರ್ಥಿಗಳ ಸನಾಚ್ಛಾದನಕ್ಕೆ' ಎಂದು ಬಂದಿದೆ.[೧೬೪] ಮಠದ ಯತಿಗಳಿಗೆ ಆಹಾರಕ್ಕೆ ಮತ್ತು ವಿದ್ಯಾರ್ಥಿಗಳ ಬಟ್ಟೆ ಮತ್ತು ಆಹಾರಕ್ಕೆ ಗ್ರಾಮದ ಆದಾಯವನ್ನು ದಾನ ನೀಡಿದನೆಂದು ಕಂಡುಬರುತ್ತದೆ. ಕೋಗಳಿಯ ಒಂದು ಶಾಸನದಲ್ಲಿ ಸ್ಥಾನಪತಿಯಾದ ಗಣದೇವಭಟ್ಟಾರರು ಮಠಕ್ಕೆ ದಾನವಾಗಿ ಭೂಮಿಯನ್ನು ನೀಡಿದ ಎಂದಿದೆ.[೧೬೫] ಮೋರಗೇರಿಯ ಒಂದು ಶಾಸನದಲ್ಲಿ ೨೪ ಜನರಿಗೆ, ಛತ್ರಕ್ಕೆ, ವಿದ್ಯಾದಾನಕ್ಕೆ ಗ್ರಾಮವನ್ನು ದಾನ ನೀಡಿದನೆಂದು ಹೇಳುತ್ತದೆ.[೧೬೬] ಈ ಶಾಸನದಲ್ಲಿ ಸ್ಥಾನಿಕ ದೇವರಾಸಿಜೀಯರು ಎಂದು ಬಂದಿದೆ.[೧೬೭] ಅಂದರೆ ದೇವಾಲಯದಲ್ಲಿಯೇ ಇದ್ದು ಪಾಠ ಪ್ರವಚನ ಮಾಡುವವರು. ಇನ್ನೊಂದು ಶಾಸನದಲ್ಲಿ ದೇಸಿಗಛಾತ್ರಕ್ಕೆ ಭೋಜನಕ್ಕೆ ಎಂದು,[೧೬೮] ಮತ್ತು ಮೂರು ಕಾಲಗಳಲ್ಲಿ ಸತತವಾಗಿ ಛತ್ರ ನಡೆಯುವಂತೆ ಮತ್ತು ಸ್ಥಾನಿಕರಿಗೆ(ಗುರುಗಳು) ದಾನ ನೀಡಿದರು. ಅಂದರೆ ದೇವಾಲಯವೇ ಇವರ ವಾಸಸ್ಥಾನವಾದುದರಿಂದ ಇವರಿಗೂ ದಾನವನ್ನು ನೀಡುತ್ತಿದ್ದರು ಎಂದು ತಿಳಿಯಬಹುದಾಗಿದೆ.

ವಿದ್ಯಾಭ್ಯಾಸ ಕ್ರಮ

ಬಾಗಳಿಯ ಶಾಸನಗಳಲ್ಲಿ ದೇವಸ್ಥಾನ ಮತ್ತು ಮಠಗಳಲ್ಲಿ ಅಗ್ರಹಾರಗಳಲ್ಲಿ ಕಲಿಸುತ್ತಿದ್ದ ಪಠ್ಯಕ್ರಮದ ಬಗ್ಗೆ ಯಾವ ಮಾಹಿತಿಗಳು ಒದಗುವುದಿಲ್ಲ. ಆದರೆ ಪ್ರಾಥಮಿಕ ಹಂತದಿಂದ ಪ್ರೌಢಹಂತದವರೆಗೂ ವಿದ್ಯಾಭ್ಯಾಸ ನಡೆಯುತ್ತಿರಬಹುದು. ಇಲ್ಲಿ ಕಲಿಯುವ ವಿದ್ಯೆ, ವೇದ, ಪುರಾಣ, ಶಾಸ್ತ್ರ, ಯೋಗಗಳಾಗಿದ್ದ ವೆಂದು ಉಲ್ಲೇಖಿಸುತ್ತವೆ.

ಈ ಶಾಸನದಲ್ಲಿ ವೇದಪಾರಗರಿಗೆ ಎಂದಿದೆ.[೧೬೯] ವೇದವನ್ನು ಹೇಳುವವರು ಪಂಡಿತರು ಎಂದು ಹೇಳಬಹುದು.(ಪಾರಗ-ಪಂಡಿತ) ಇಂತಹ ಉಲ್ಲೇಖವೇ ಬಹುಪಾಲು ಶಾಸನಗಳಲ್ಲಿ ಬಂದಿದೆ. ಇಲ್ಲಿಯ ಶಾಸನವೊಂದರಲ್ಲಿ ಪುರಾಣದ ಈಶ್ವರ ಭಟ್ಟೋಪಾಧ್ಯಾಯರಿಗೆ ಎಂದು ಉಲ್ಲೇಖಿಸುತ್ತದೆ.[೧೭೦] ಅಂದರೆ ಈಶ್ವರಭಟ್ಟೋಪಾಧ್ಯಾಯರು ಪುರಾಣಕಲಿಸುವ ಉಪಾಧ್ಯಾಯರಾಗಿದ್ದರು. ಇವರು ವೇದಗಳನ್ನು ಕಲಿಸುತ್ತಿದ್ದರೆಂದು ಉಲ್ಲೇಖಿಸುತ್ತದೆ. ವೇದದ ಖಣ್ಡಕಗಳನ್ನು ಕಲಿಸುವವರಿಗೆ ದಾನಬಿಟ್ಟು ಇಂತಹ ವೇದಗಳನ್ನು ವರ್ಷಕ್ಕೆ ಒಬ್ಬರೇ ಹೇಳಬೇಕು ಎಂದು ತಿಳಿದುಬರುತ್ತದೆ. ಈ ಶಾಸನವೂ ಸಹ ಇದೇ ವಿವರವನ್ನು ಹೇಳುತ್ತದೆ.[೧೭೧] ಬಾಗಳಿಯ ಲಕ್ಷ್ಮಿನಾರಾಯಣ ದೇವಾಲಯದಲ್ಲಿ ವಿದ್ಯಾಭ್ಯಾಸ ನಡೆಯುತ್ತಿತ್ತು. ಧರ್ಮವ್ವೆ ಎನ್ನುವವಳು ದೇವರಿಗೆ, ಶಾಸ್ತ್ರವ್ಯಾಖ್ಯಾನ ಮಾಡುವವರಿಗೆ, ಪುರಾಣದ ಪೊಭುಪಧ್ಯಾಯರಿಗೆ, ವರ್ಷಪ್ರತಿ, ಬಾಗಳಿಯೇಳು, ಗದ್ಯಾಣಪೊಂನ, ಜೀವಿತಕ್ಕಂ ಎಂದು ಆಕೆ ದಾನ ಬಿಟ್ಟುದ್ದನ್ನು ಮತ್ತು ಇದರ

ವಿನಿಯೋಗದ ವಿವರಣೆಯನ್ನು ಹೇಳಲಾಗಿದೆ. ಇದರಿಂದ ಇಲ್ಲಿ ಶಾಸ್ತ್ರಗಳನ್ನು ಪುರಾಣಗಳನ್ನು ವ್ಯಾಖ್ಯಾನ ಮಾಡಲಾಗುತ್ತಿತ್ತು ಮತ್ತು ಬೋಧಿಸಲಾಗುತ್ತಿತ್ತು. ಒಂದೊಂದು ವಿಷಯವನ್ನು ಒಬ್ಬೊಬ್ಬ ಪಂಡಿತರು, ಉಪಾಧ್ಯಾಯರು ಕಲಿಸುತ್ತಿದ್ದರು. ಹೀಗೆ ಇವರಿಗೆ ವರ್ಷಕ್ಕೊಮ್ಮೆ ಬಾಗಳಿಯೋಳು ಗದ್ಯಾಣವನ್ನು ಪೊನ್ನಿನ ರೂಪದಲ್ಲಿ, ಜೀವಿತಕ್ಕಾಗಿ ಸಂಬಳ ರೂಪದಲ್ಲಿ ಕೊಡಲಾಗುತ್ತಿತ್ತು. ಮಹಾಜನರೆಂದು ಕರೆಸಿಕೊಂಡಿದ್ದ ಬ್ರಾಹ್ಮಣರು ಸಹ ವೇದಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರೆಂದು ತಿಳಿದುಬರುತ್ತದೆ. ಇವರು ಸಮಸ್ತಶಾಸ್ತ್ರ, ವೇದ ವೇದಾಸ್ತಧ್ಯಯನಧಾರಣಗಳನ್ನು ಬಲ್ಲವರಾಗಿದ್ದರು. ಈ ಶಾಸನದಲ್ಲಿ ಉಪಾಧ್ಯಾಯರಿಗೆ ಮತ್ತು ಪುರಾಣ ಹೇಳುವವರಿಗೆ ತನ್ನ ಮನೆಯನ್ನು, ಪರೋಕ್ಷ ಮತ್ತು ಪ್ರತ್ಯಕ್ಷವಾಗಿ ದೇವರ ಮನೆಯನ್ನು ಬಿಟ್ಟು ಕೊಡುತ್ತಾಳೆಂದು ಬರುತ್ತದೆ. ಇದನ್ನು ಶಾಂತಿಕಬ್ಬೆಯೆಂಬುವವಳು ದಾನ ಬಿಡುತ್ತಾಳೆ.[೧೨] ಹೀಗೆ ಶಾಸನಗಳಲ್ಲಿ ವಿದ್ಯಾಭ್ಯಾಸದ ಕ್ರಮದೊಂದಿಗೆ, ವಿದ್ಯಾಗುರುಗಳು ವೇದಾಧ್ಯಯನವನ್ನು ಮಾಡಿಸುತ್ತಿದ್ದರೆಂದು ಇಲ್ಲಿನ ಬಹುಪಾಲು ಶಾಸನಗಳಿಂದ ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು

೧. ಕ.ವಿ.ಶಾ.ಸಂ.೧ ಬಾಗಳಿ ಶಾಸನ ಸಂ.೯೭ ಕ್ರಿ.ಶ.೧೦೧೮

೨. ,, ,, -೯೫ ಕ್ರಿ.ಶ.೧೧೭೪

೩. ಇಲ್ಲಿನ ಶಾಸನಗಳಲ್ಲಿ ಬಹುಪಾಲು ಶಾಸನಗಳು ಕೆರೆ, ಗದ್ದೆ, ಬಾವಿ, ತೋಟ, ಹಳ್ಳ, ಕೊಳ್ಳ ಇತ್ಯಾದಿಗಳನ್ನು ಉಲ್ಲೇಖಿಸುತ್ತವೆ. ಇವುಗಳಿಗೆ ದಾನದತ್ತಿ ಬಿಟ್ಟಿರುವುದನ್ನು ಶಾಸನ ಆಧಾರದಿಂದ ಹೇಳಲಾಗಿದೆ.

೪. ಕ.ವಿ.ಶಾ.ಸಂ ಬಾಗಳಿ ಶಾಸನ ಸಂಖ್ಯೆ-೧೮೪ ಕ್ರಿ.ಶ.೧೧೬೦

೫. ,, ೯೫ ಕ್ರಿ.ಶ.೧೧೭೪

೬. ,,

೭. ಇದರ ಮುಂದುವರಿದ ಭಾಗದ ಉಲ್ಲೇಖ

೮. ಶಾಸನ ೯೫ರಲ್ಲಿ ಬೇರೆ ಬೇರೆ ಕೆರೆಗಳ ಉಲ್ಲೇಖ ಅವುಗಳ ದಿಕ್ಕು ಭೂಮಿಯ ಮಣ್ಣುಗಳನ್ನು ಉಲ್ಲೇಖಿಸಿದೆ.

೯. ಕ.ವಿ.ಶಾ.ಸಂ ಬಾಗಳಿ ಶಾಸನ ಸಂಖ್ಯೆ-೯೫ ಕ್ರಿ.ಶ.೧೧೭೪

೧೦. ,, ೯೭ ಕ್ರಿ.ಶ.೧೦೧೮

೧೧. ,, ೧೦೪ ಕ್ರಿ.ಶ.೧೦೭೯

೧೨. ,, ೧೦೦ ಕ್ರಿ.ಶ.೧೦೭೯

೧೩. ,, ೧೩೬ ಕ್ರಿ.ಶ.೧೦೧೮

೧೪. ,, ೧೨೩ -

೧೫. ,, ೧೩೭ ಕ್ರಿ.ಶ.೧೧೨೬

೧೬. ,, ೧೭೮ ಕ್ರಿ.ಶ.೧೪೦೦

೧೭. ,, ೧೮೦ ಕ್ರಿ.ಶ.೧೧೦೮

೧೮. ,, ೧೮೪ ಕ್ರಿ.ಶ.೧೧೬೦

೧೯. ,, ೧೮೦ -

೨೦. ,,

೨೧. ,, ೧೮೦ -

೨೨. ,, ೧೦೨ ಕ್ರಿ.ಶ.೧೧೦೩

೨೩. ,, ೧೮೦ ಕ್ರಿ.ಶ.೧೧೦೮

೨೪. ,, ೧೧೫ ಕ್ರಿ.ಶ.೧೧೫೩

೨೫. ,, ೯೬ ಕ್ರಿ.ಶ.೯೯೧

೨೬. ಬಾಗಳಿ ವಸ್ತು ಸಂಗ್ರಾಲಯ ವೀರಗಲ್ಲು (A.S.I N-೬೮, N-೬೬)

೨೭. ಕ.ವಿ.ಶಾ.ಸಂ ಬಾಗಳಿ ಸಂ.೯೬

೨೮. ,, ೧೨೨ ಕ್ರಿ.ಶ.೧೦೭೯

೨೯. ,, ೧೦೦ ಕ್ರಿ.ಶ.೧೦೭೯

೩೦. ,, ೧೨೨ ಕ್ರಿ.ಶ.೧೦೭೯

೩೧. ,, ೯೯ ಕ್ರಿ.ಶ.೧೦೩೫

೩೨. ಶಾಸನಗಳಲ್ಲಿ ವರ್ತಕರು ಬಿ.ಆರ್.ಹಿರೇಮಠ ಪು.೨

೩೩. ಕ.ವಿ.ಶಾ.ಸಂ ಬಾಗಳಿ ಸಂ.೧೦೨ ಕ್ರಿ.ಶ.೧೧೦೩

೩೪. ,, ೯೬ ಕ್ರಿ.ಶ.೯೯೧

೩೫. ,, ೧೨೦ ಕ್ರಿ.ಶ.೧೫೫೦

೩೬. ,, ೧೮೦ ಕ್ರಿ.ಶ.೧೧೦೮

೩೭. ಬಾಗಳಿಯ ಪಟ್ಟಣಸ್ವಾಮಿ ಎಂದಿರುವುದರಿಂದ ಈ ಊಹೆಗೆ ಅವಕಾಶ ಕಲ್ಪಿಸಿ ಕೊಡುತ್ತದೆ. ಇಂತಹ ಉಲ್ಲೇಖ ಹೊಸಪೇಟೆಯ ಶಾಸನದಲ್ಲಿ ಕಂಡಬರುತ್ತದೆ.(ಶಾಸನ ಸಂಖ್ಯೆ-೮)

೩೮. ಕ.ವಿ.ಶಾ.ಸಂ ಬಾಗಳಿ ಸಂಖ್ಯೆ ೧೩೯ ಕ್ರಿ.ಶ.೧೨೫೦

೩೯. ,, ೧೮೦ ಕ್ರಿ.ಶ.೧೧೦೮

೪೦. ,, ೧೨೭ ಕ್ರಿ.ಶ.೧೧೧೩

೪೧. ,, ೧೪೦ ಕ್ರಿ.ಶ.೧೧೨೨

೪೨. ,, ೧೮೦ -

೪೩. ,,

೪೪. ,, ದುಗ್ಗತಿ ಶಾಸನ-೩೬ ಕ್ರಿ.ಶ.೧೧೨೬

೪೫. ,, ಬಾಗಳಿ ಶಾಸನ-೯೬ -

೪೬. ,, ೧೩೪ ಕ್ರಿ.ಶ.೧೨೯೬

೪೭. ,,

೪೮. ,, ೯೬ -

೪೯. ಶಾಸನಗಳಲ್ಲಿ ವರ್ತಕರು, ಬಿ.ಆರ್.ಹಿರೇಮಠ, ಪು.೭೯

೫೦. ,, ಪು.೮೦

೫೧. ಕ.ವಿ.ಶಾ.ಸಂ ಬಾಗಳಿ ಸಂ.೯೬ ಕ್ರಿ.ಶ.೯೯೧

೫೨. ,,

೫೩. ,, ೧೦೦ ಕ್ರಿ.ಶ.೧೦೭೯

೫೪. ,, ಕೋಗಳಿ ಸಂ.೧೦ ಕ್ರಿ.ಶ.೧೫೫೧

೫೫. ನಾಣ್ಯಗಳು, ಎ.ಎಂ.ಅಣ್ಣಿಗೇರಿ, ಪುಟ-೧೧

೫೬. ಕ.ವಿ.ಶಾ.ಸಂ ಕುರುಗೋಡು ಸಂ.೧೨, ೯ನೇ ಶತಮಾನ

೫೭. ,, ಕುಡುತಿನಿ ಸಂ.೭೦ ಕ್ರಿ.ಶ.೧೦೯೮

೫೮. ,, ಬಾಗಳಿ ಸಂ.೧೧೫ ಕ್ರಿ.ಶ.೧೧೫೩

೫೯. ,,

೬೦. ,, ೯೯ ಕ್ರಿ.ಶ.೧೦೩೫

೬೧. ,, ೧೧೫ ಕ್ರಿ.ಶ.೧೧೫೩

೬೨. ಅದೇ ಪು.೩೯

೬೩. ಅದೇ ಬಾಗಳಿ ಶಾಸನ ಸಂ-೧೪೧

೬೪. ಅದೇ ಕಂಚಗಾರ ಬೆಳೆಗಲ್ಲು ಸಂ.೩೮ ಕ್ರಿ.ಶ.೯೮೧

೬೫. ಅದೇ, ಅಲಬೂರು ಶಾಸನ-೭ ಕ್ರಿ.ಶ.೧೧೪೭ (ಕೋಗಳಿ ಸುತ್ತಮುತ್ತಲು ಎಂದರೆ, ಅದೇ ಅಲಬೂರ ಶಾಸನದ ಮುಂದುವರಿದ ಭಾಗದಲ್ಲಿ, ತೆಂಕಲಾಗಡಿಂಬದಲು ಎಂದಿದೆ. ಮತ್ತು ಮೋರಗೆರೆಯ ಒಂದು ಶಾಸನದಲ್ಲಿ(ಸಂ.೨೪) ಕೋಗಳಿಯ ಗಡಿಂಬದಕೋಲಾ ಎಂದು ಉಲ್ಲೇಖವಾಗಿದೆ.)

೬೬. ಅದೇ ಕುರುವತ್ತಿ ಸಂ.೩ ಕ್ರಿ.ಶ.೧೨೦೩

೬೭. ,, ಕೋಳೂರು ಸಂ.೩ ಕ್ರಿ.ಶ.೧೧೪೭

೬೮. ,, ಬಾಗಳಿ ಸಂ.೧೩೩ (ಇಲ್ಲಿ ಬೇರೆ ಬೇರೆ ಕಾಲದ ಉಲ್ಲೇಖಗಳು ಬಂದಿವೆ)

೬೯. ಅದೇ ಬಾಗಳಿ ಸಂ.೧೩೩

೭೦. ,, ೯೪ ಕ್ರಿ.ಶ.೯೫೬

೭೧. ,, ೯೬ ಕ್ರಿ.ಶ.೯೯೧

೭೨. ,, ೧೦೨ ಕ್ರಿ.ಶ.೧೧೦೭

೭೩. ,, ೧೦೫ ಕ್ರಿ.ಶ.೧೧೦೮

೭೪. ,, ೧೮೫ ಕ್ರಿ.ಶ.೧೫೪೭

೭೫. ,, ಕೊಟ್ಟೂರು-೧೦ ಕ್ರಿ.ಶ.೧೫೫೧

೭೬. ,, ಬಾಗಳಿ ಸಂ.೧೨೧ ಕ್ರಿ.ಶ.೧೫೮೦

೭೭. ,, ೧೩೧ -

೭೮. ,, ೧೩೪ -

೭೯. ,, ೧೮೫ ಕ್ರಿ.ಶ.೧೫೪೭

೮೦. ,, ಕೊಟ್ಟೂರು ೧೦ ಕ್ರಿ.ಶ.೧೫೫೦

೮೧. ,, ಬಾಗಳಿ ಸಂ.೧೮೫ ಕ್ರಿ.ಶ.೧೫೪೭

೮೨. ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಪಿ.ವಿ.ನಾರಾಯಣ, ಪು.೧೯೨

೮೩. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ.೩, ಬಸವಣ್ಣನ ವಚನಗಳ ಆಶಯ, ಪು.೧೦೬

೮೪. ಬಾಗಳಿಯ ಶಾಸನಗಳಲ್ಲಿ ಕೆಲವು 'ಗೇರಿ'ಗಳು ಎಂದು ಉಲ್ಲೇಖವಾಗಿವೆ. ಆದರೆ ಅರ್ಥ ಸ್ಪಷ್ಟವಿಲ್ಲ. ಇವು ಗ್ರಾಮಗಳ ಹೆಸರುಗಳಾಗಿರಬಹುದು. ಏಕೆಂದರೆ 'ಕೇರಿ' ಎಂದು ಬಂದರೆ ಅದೊಂದು ಓಣಿ, ಬೀದಿ ಎಂದಾಗುತ್ತದೆ. ಇವು ಹೆಚ್ಚಾಗಿ 'ಗೇರಿ' ಎಂದೇ ಉಲ್ಲೇಖವಾಗಿರುವುದನ್ನು ನೋಡಬಹುದಾಗಿದೆ.

ಮಿಂಚುಂಗೇರಿ ಶಾ-೧೨೫ ಕ್ರಿ.ಶ.೯೭೨

ಮಾದಲಗೇರಿ ಶಾ-೧೦೭ ಕ್ರಿ.ಶ.೧೦೨೦

ಕಲ್ಲಕೇರಿ (ಇದೊಂದು ಗ್ರಾಮದ ಹೆಸರು) ೯೯-೧೦೩೫

ಜವಲಗೇರಿ - ೧೦೦-೧೦೭೯

ಕಂಚಿಮೆಯಗೇರಿ ೧೮೦-೧೧೦೮

ಕರ್ಮಣ್ಯಗೇರಿ ೧೧೦-೧೧೨೨

ಗೊರಲಗೇರಿ ೧೧೨-೧೧೨೬

ಕಂಚಿಮೆಯಗೇರಿ - ೧೮೦

ಸಿರಲಗೇರಿ - ೧೨೩

ಚಾಮೆಯಗೇರಿ - ೧೧೪- ೧೧೪೮

೮೫. ಅದೇ, ಸಿರುಗುಪ್ಪ ಶಾಸನ-೧ ಕ್ರಿ.ಶ.೧೯೦೨

೮೬. ,, ನೀಲಗುಂದ ಶಾ-೮೮ ಕ್ರಿ.ಶ.೧೦೭೯

೮೭. ,, ಬಾಗಳಿ ಶಾ-೯೬ ಕ್ರಿ.ಶ.೯೯೧

೮೮. ,, ೧೦೦ ಕ್ರಿ.ಶ.೧೦೭೯

೮೯. ,,

೯೦. ,, ೧೩೬ ಕ್ರಿ.ಶ.೧೦೧೮

೯೧. ,, ೯೮ ಕ್ರಿ.ಶ.೧೧೪೭

೯೨. EI.xv.pag-೮೮ ೧೦೬೦(ಮಾರ್ಗ-೨ ಕಲಬುರ್ಗಿ, ಪುಟ-೬೦)

೯೩. ಅದೇ

೯೪. ಬ.ಜಿ.ಶಾ.ಸಂ ಬಾಗಳಿ ೧೩೦ ಕ್ರಿ.ಶ.೯೮೭

೯೫. ,, ೧೩೫ ಕ್ರಿ.ಶ.೧೨೩೧

೯೬. ,, ೯೯ ಕ್ರಿ.ಶ.೧೦೩೫

೯೭. ,, ೧೦೦ ಕ್ರಿ.ಶ.೧೦೭೯

೯೮. ,, ೧೦೨ ಕ್ರಿ.ಶ.೧೧೦೩

೯೯. ,, ಕುರುವತ್ತಿ, ಶಾಸನ-೧ ಇದರಲ್ಲಿ ಅಗ್ರಹಾರವನ್ನು ಮತ್ತು ಮಹಾಜನರನ್ನು ಹೀಗೆ ನಿರ್ದೇಶಿಸುತ್ತದೆ. ಕ್ರಿ.ಶ.೧೦೯೯

೧. ಆ ನಾಡೊಳಗ್ರಹಾರಂ
ಭೂನಾರೀಹಾರ ಮಧಿಕ ವಿಭುದಾದಾರಂ
ಶ್ರೀ ನಾರಿಗಿರಲಾಗಾರಂ
ಭೂನಿಧಿ ಕುರುವರ್ತಿನೋಡೆ ಸೊಗೆಯಿಸುತಿಕುಂ,

೨. ಇಂತು ನೆಗಳ್ದಗ್ರಹಾರಾ
ಭ್ಯಂತಿಕದೊಳು ತುಂಗಭದ್ರೆ ಪಶ್ಚಿಮಮುಖದಿಂ
ಸಂತವಾಯಿನಿಯೆ ನಲಿಂ
ತಿಂ ತೆಂದೀ ಗ್ರಾಮವಿಭುವಮಂ ಬಣ್ಣಿಪರಾರ್

ಎಂದು ಅಗ್ರಹಾರದಲ್ಲಿರುವ ವಿದ್ವಾಂಸರನ್ನು ಕಾಯ್ಯಾತ್ಮಕವಾಗಿ ನಿರೂಪಿಸಿದೆ.

೧೦೦. ಅದೇ ಬಾಗಳಿ ೧೦೭ ಕ್ರಿ.ಶ.೧೧೧೫

೧೦೧. ,, ಕುರುಗೋಡು-೨೦ ಕ್ರಿ.ಶ.೧೦೯೮

೧೦೨. ,, ಬಾಗಳಿ ೧೩೫ ಕ್ರಿ.ಶ.೧೨೩೧

೧೦೩. ,, ೧೮೪ ,, ೧೧೬೦

೧೦೪. ,,

೧೦೫. ,, ಕುರುವತ್ತಿ-೧೩ ಕ್ರಿ.ಶ.೧೧೦೪

೧೦೬. ,, ಬಾಗಳಿ-೧೦೦ ಕ್ರಿ.ಶ.೧೦೭೯

೧೦೭. ,, ಬಾಗಳಿ-೧೨೫ ಕ್ರಿ.ಶ.೯೭೨

೧೦೮. ,, ೧೦೭ ಕ್ರಿ.ಶ.೧೧೦೫

೧೦೯. ,, ಸೋಗಿ-೧೦೦ -

೧೧೦. ,, ಮಾಡಲಗೇರಿ-೯೩ -

೧೧೧. ,, ಬಾಗಳಿ-೯೯ ಕ್ರಿ.ಶ.೧೦೩೫

೧೧೨. ,, ೧೮೦ ಕ್ರಿ.ಶ.೧೧೦೮

೧೧೩. ,, ೯೭ ಕ್ರಿ.ಶ.೧೦೧೮

೧೧೪. ,, ೧೩೬ ,, ೧೦೧೮

೧೧೫. ,,

೧೧೬. ,, ಉಚ್ಚಂಗಿದುರ್ಗ ಸಂ.೧೯ ಕ್ರಿ.ಶ. ೧೬೫೩

೧೧೭. ,, ಬಾಗಳಿ-೧೧೯ ಕ್ರಿ.ಶ.೧೫೫೦

೧೧೮. ,,

೧೧೯. ,, ೧೮೫ ಕ್ರಿ.ಶ.೧೫೪೭

೧೨೦. ,, ಮಾಡಲಗೇರಿ ಶಾಸನ-೯೩ -

೧೨೧. ,, ಬಾಗಳಿ ೧೩೫ -

೧೨೨. ,, ೧೩೩ ಕ್ರಿ.ಶ.೧೨೩೧

೧೨೩. ,, ೧೧೫ -

೧೨೪. ,, ೧೨೦ ಕ್ರಿ.ಶ.೧೫೫೦

೧೨೫. ವಚನ ಕಮ್ಮಟ ದಾಸಿಮಯ್ಯನ ವಚನಗಳು

೧೨೬. ಕ.ವಿ.ಶಾ.ಸಂ ಬಾಗಳಿ-೧೦೦ ಕ್ರಿ.ಶ.೧೦೭೯

೧೨೭. ,, ಹಿರೇಹಡಗಲಿ-೫೪ ಕ್ರಿ.ಶ.೧೦೭೯

೧೨೮. ,, ಹೂವಿನಹಡಗಲಿ-೮೩ ಕ್ರಿ.ಶ.೧೦೯೦

೧೨೯. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಹೆಚ್.ತಿಪ್ಪೇರುದ್ರಸ್ವಾಮಿ ಪು.೨೨೪

೧೩೦. ವೇದಗಳಲ್ಲಿ ಜನಸಾಮಾನ್ಯರು ಬಿ.ವಿ.ವೀರಭದ್ರಪ್ಪ, ಪು-೪೦

೧೩೧. ಶಾಸನಗಳಲ್ಲಿ ಸ್ತ್ರೀ ಸಮಾಜ, ಚನ್ನಕ್ಕ ಎಲಿಗಾರ, ಪು-೩೦

೧೩೨. ಚಾಲುಕ್ಯರ ಇತಿಹಾಸ, ಪ್ರೊ.ಎ.ಎಸ್ .ನಂಜುಂಡಸ್ವಾಮಿ, ಪು.೧೬

೧೩೩. ಕ.ವಿ.ಶಾ.ಸಂ ಬಾಗಳಿ-೯೭ ಕ್ರಿ.ಶ.೧೦೧೮

೧೩೪. ,, ೧೩೬ ಕ್ರಿ.ಶ.೧೦೧೮

೧೩೫. ,, ೧೦೦ ಕ್ರಿ.ಶ.೧೦೭೯

೧೩೬. ,, ೯೭ -

೧೩೭. ,, ೧೩೬

೧೩೮. ,, ೧೬೮ ಕ್ರಿ.ಶ.೧೨ನೇ ಶತಮಾನ

೧೩೯. ,, ೧೧೪ ಕ್ರಿ.ಶ.೧೧೪೮

೧೪೦. ಬಾಗಳಿಯ ಹಾಗೆ, ಕುರುವತ್ತಿ, ಹೂವಿನಹಡಗಲಿ, ಹೊಳಲು, ಹಿರೇಹಡಗಲಿ, ಮಾಗಳ, ಕೋಗಳಿ ಇವುಗಳು ತೀರ್ಥಕ್ಷೇತ್ರಗಳಾಗಿದ್ದವು.

೧೪೧. ಕ.ವಿ.ಶಾ.ಸಂ ಬಾಗಳಿ ಸಂ.೧೨೫ ೯೫೭

೧೪೨. ,, ೯೬ ಕ್ರಿ.ಶ.೯೯೧

೧೪೩. ,, ೧೨೫ -

೧೪೪. ,, ೧೧೫ ಕ್ರಿ.ಶ.೧೧೫೩

೧೪೫. ,, ೧೧೪ ಕ್ರಿ.ಶ.೧೧೪೮

೧೪೬. ,, ೧೧೫ -

೧೪೭. ,, ೧೦೨

೧೪೮. ,, ೧೦೦

೧೪೯. ,,

೧೫೦. ಈ ಶಾಸನದಲ್ಲಿ ಹಿರಿಯ>ಪಿರಿಯ ಎಂಬ ಪದಗಳು ಎರಡು ಒಂದೇ ಅರ್ಥವನ್ನು ಕೊಡುತ್ತವೆ. ಶಾ.೧೮೪

೧೫೧. ಕ.ವಿ.ಶಾ.ಸಂ ಬಾಗಳಿ-೧೧೨ ಕ್ರಿ.ಶ.೧೧೨೬

೧೫೨. ಮಾರ್ಗ.ಸಂ.೨ರಲ್ಲಿ ಮನ್ನೆಯ ಎಂಬ ಪದಕ್ಕೆ ದೇಸಾಯಿಯವರು ರಾಜಧಾನಿ ಎಂದು ಅಭಿಪ್ರಾಯಿಸಿದ್ದಾರೆ. ಪು.೪೦

೧೫೩. ,,

೧೫೪. ಕ.ವಿ.ಶಾ.ಸಂ ಸಂಡೂರು-೭ ಕ್ರಿ.ಶ.೧೨೦೬

೧೫೫. ಹ.ಹಳ್ಳಿ ಪಾಳೆಯಗಾರರು ಪು.೭೦

೧೫೬. ಕ.ವಿ.ಶಾ.ಸಂ ಬಾಗಳಿ-೧೩೫

೧೫೭. ,, ೯೯

೧೫೮. ,, ೧೦೮ ಕ್ರಿ.ಶ.೧೧೨೨

೧೫೯. ,, ೧೮೪ -

೧೬೦. ,, ೧೦೨

೧೬೧. ,, ಹೂವಿನಹಡಗಲಿ ಶಾ-೮೩ ಕ್ರಿ.ಶ.೧೦೯೦

೧೬೨. ,, ಬಾಗಳಿ-೧೮೪ ಕ್ರಿ.ಶ.೧೧೬೦

೧೬೩. ,, ೧೩೬ ಕ್ರಿ.ಶ.೧೦೧೮

೧೬೪. ,, ಹೂವಿನಹಡಗಲಿ-೮೪ ಕ್ರಿ.ಶ.೧೦೭೧

೧೬೫. ,, ಕೋಗಳಿ-೧೭ ಕ್ರಿ.ಶ.೯೯೧

೧೬೬. ,, ಮೋರಗೇರಿ-೨೪ ಕ್ರಿ.ಶ.೧೦೪೫

೧೬೭. ,, ಬಾಗಳಿ - ೯೯ ಕ್ರಿ.ಶ.೧೦೧೮

೧೬೮. ,, ೧೩೨ ಕ್ರಿ.ಶ.೧೦೬೮

೧೬೯. ,, ೧೦೭ ಕ್ರಿ.ಶ.೧೦೨೦

೧೭೦. ,, ೧೦೭ ಕ್ರಿ.ಶ.೧೦೨೦

೧೭೧. ,, ೧೧೦ ಕ್ರಿ.ಶ.೧೧೨೨

೧೭೨. ,, ೧೮೪ ಕ್ರಿ.ಶ.೧೧೬೦

◆◆

ಅಧ್ಯಾಯ ೮
ಸಮಾರೋಪ

ಕರ್ನಾಟಕದ ಇತಿಹಾಸದ ರಚನೆಯಲ್ಲಿ ಪ್ರಾದೇಶಿಕ ಇತಿಹಾಸವನ್ನು ಮರೆಯುವಂತಿಲ್ಲ ಎಂಬಂತೆ ಈವರೆಗಿನ ಅಧ್ಯಯನವು ಕೋಗಳಿಯ-೫೦೦ರ ಆಡಳಿತ ವಿಭಾಗದಲ್ಲಿ ಒಂದಾದ ಬಾಗಳಿ-೫೦೦ರ ಚರಿತ್ರೆಯ ರೂಪರೇಷೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಊರಿನ ಭೌಗೋಳಿಕ ಹಾಗೂ ನೈಸರ್ಗಿಕ ವಿವರಗಳ ಜೊತೆಗೆ ಶಾಸನಗಳು, ಸ್ಮಾರಕಗಳು, ಸಾಹಿತ್ಯ, ಕವಿಗಳು, ಇದರ ಸ್ಥಳನಾಮದ ಉಲ್ಲೇಖಗಳನ್ನು ಒಳಗೊಂಡಿದೆ.

ಕರ್ನಾಟಕದ ಪ್ರಮುಖ ಅರಸು ಮನೆತನಗಳಾದ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರ ಆಳ್ವಿಕೆಯಲ್ಲಿ ತಮ್ಮ ಇತಿಹಾಸವನ್ನು ರೂಪಿಸಿಕೊಂಡ ಸೇವುಣರು, ಕಲಚುರಿಗಳು, ನೊಳಂಬರು, ಪಾಂಡ್ಯರು, ಮಹಾಮಂಡಳೇಶ್ವರ, ಮಹಾಸಾಮಂತ, ಮನ್ನೆಯರು ವಿಭಿನ್ನ ಅವಧಿಯಲ್ಲಿ ಈ ನಾಡಿನ ಬಾಗಳಿಯನ್ನು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡಿದರು.

ಕರ್ನಾಟಕದ ಆಡಳಿತ ವಿಷಯವಾಗಿ ಅಲ್ಲಲ್ಲಿ ಕೆಲಸ ನಡೆದಿದ್ದರೂ, ಆಗಬೇಕಾದ ಕೆಲಸ ಸಾಕಷ್ಟಿದೆ. ವಿವಿಧ ಅಧಿಕಾರಿಗಳು ಪರಸ್ಪರ ಹೊಂದಿದ ಸಂಬಂಧ, ಒಬ್ಬನೇ ವ್ಯಕ್ತಿಯಲ್ಲಿ ಅಡಕವಾಗಿರುವ ವಿವಿಧ ಅಧಿಕಾರ ಶಾಖೆಗಳು, ಅಧಿಕಾರಿಗೆ ನೀಡಲಾಗುತ್ತಿದ್ದ ಸಂಬಳ, ಗೌರವ, ಅಧಿಕಾರದಲ್ಲಿ ಅವರು ವಹಿಸುತ್ತಿದ್ದ ಸ್ವಾತಂತ್ರತೆ ಇತ್ಯಾದಿ ವಿಷಯಗಳು ಇನ್ನು ಸ್ಪಷ್ಟಗೊಳ್ಳಬೇಕಿದೆ. ಇಂತಹವುಗಳಲ್ಲಿ ಕೆಲವೊಂದು ಅಧಿಕಾರದ ಶಾಖೆಗಳನ್ನು ಇಲ್ಲಿ ಗಮನಿಸಲಾಗಿದೆ.

ಬಾಗಳಿಯು ಸಾಮಾಜಿಕವಾಗಿ ಮುಂದುವರಿದಂತೆಯೇ ಸಾಂಸ್ಕೃತಿಕವಾಗಿಯೂ ಮುಂದುವರಿದ ಗ್ರಾಮ (ನಾಡು)ವಾಗಿತ್ತು. ಈ ಬಾಗಳಿ ನಾಡಿನ ಅಭಿವೃದ್ಧಿಯಲ್ಲಿ ಶ್ರಮಿಸಿದವರ ಪಾತ್ರ ಮಹತ್ವವಾದುದು. (ಈ ನಮ್ಮ ಅಧ್ಯಯನದಲ್ಲಿ ಅವರನ್ನು ಗುರುತಿಸಲಾಗಿದೆ.) ಸಮಾಜ ವ್ಯವಸ್ಥೆಯಲ್ಲಿ ಕುಟುಂಬ ಪ್ರಧಾನವಾದುದು, ಸ್ತ್ರೀಪುರುಷ ಕುಟುಂಬದ ಸದಸ್ಯರಾಗಿ ಬದುಕಿ, ತಮ್ಮ ಜೀವಿತದ ನೆಲೆಯನ್ನು ಕಂಡುಕೊಂಡು, ಜೊತೆಯಲ್ಲಿ ದಾನ, ಧರ್ಮಗಳನ್ನು ನೀಡಿದುದರ ವಿವಿಧ ಹಂತಗಳನ್ನು ವಿವರಿಸಲಾಗಿದೆ. ಸಮಾಜದ ಕೆಟ್ಟ ಸಂಪ್ರದಾಯಗಳಾದ ಸೂಳೆಗಾರಿಕೆ, ದೇವದಾಸಿ ಪದ್ಧತಿ ಬಾಗಳಿಯಲ್ಲಿ ಹೆಚ್ಚಾಗಿತ್ತೆಂದು ಕಂಡು ಬರುತ್ತದೆ. ಹಬ್ಬಹರಿದಿನಗಳು, ನಂಬಿಕೆಗಳು, ಸಾರ್ವಜನಿಕ ಚಟುವಟಿಕೆಗಳನ್ನು ಇಲ್ಲಿನ ಎಲ್ಲಾ ಶಾಸನಗಳಿಂದ ಸಂಗ್ರಹಿಸಲಾಗಿದೆ. ಪ್ರಾಚೀನ ಕಾಲದಲ್ಲಿ ವಿದ್ಯಾಭ್ಯಾಸ ಕೇಂದ್ರಗಳೆಂದು ಕರೆಯುವ ಅಗ್ರಹಾರಗಳು, ಬ್ರಹ್ಮಪುರಿಗಳು ಇವುಗಳನ್ನು ಮುನ್ನಡೆಸುವ ಮಹಾಜನರು ಇದ್ದರು. ಇವುಗಳಿಗೆ ನಮ್ಮ

ಇತಿಹಾಸಕಾರರು ಪ್ರಧಾನ ಸ್ಥಾನಮಾನವನ್ನು ನೀಡುತ್ತಾ ಬಂದಿದ್ದಾರೆ. ಹೀಗೆ ಅಗ್ರಹಾರ, ಬ್ರಹ್ಮಪುರಿಗಳೆಂದು ಹೆಸರು ಏನೇ ಇದ್ದರೂ ಆ ಚಟುವಟಿಕೆಗಳು ನಡೆದಿರುವುದು ದೇವಾಲಯಗಳಲ್ಲಿ ಎಂಬುದು ಸ್ಪಷ್ಟ. ಇಂತಹ ಅಗ್ರಹಾರ, ಅನಾದಿ ಅಗ್ರಹಾರ, ಶ್ರೀಮತ್ ಹರಿಶ್ಚಂದ್ರ ದತ್ತಿಯಗ್ರಹಾರವಾಗಿತ್ತು-ಬಾಗಳಿ. ಆದರೆ ಇದನ್ನು ದತ್ತಿ ನೀಡಿದ ಗ್ರಾಮವೆಂದು ಯಾವುದರಲ್ಲೂ ಕಂಡುಬರುವುದಿಲ್ಲ. ಕೆಲವೊಂದು ಶಾಸನಗಳಲ್ಲಿ ನೈಷ್ಠಿಕರಿಗೆ, ಸ್ಥಾನಾಚಾರ್ಯರಿಗೆ, ವಿದ್ಯಾರ್ಥಿಗಳಿಗೆ ಹಲವು ರೀತಿಯಿಂದ ಸದ್ವಿನಿಯೋಗವಾಗುವಂತೆ ದಾನಗಳನ್ನು ನೀಡಿರುವುದು ಕಂಡುಬರುತ್ತದೆ. ಇಲ್ಲಿಯ ಒಂದು ಶಾಸನದಲ್ಲಿ ಖಣ್ಡಿಕದ ಬಗ್ಗೆ ಉಲ್ಲೇಖವಿದೆ. ಖಣ್ಡಿಕವೆಂದರೆ ವೇದವನ್ನು ಭಾಗಗಳಾಗಿ ಪಠಿಸುವುದು. ಯಾರು ಬೇಕಾದರೂ ಈ ಕಾರ್ಯ ಮಾಡಬಹುದಿತ್ತು. ಆದರೆ ಈ ಶಾಸನದಲ್ಲಿ (ಬಾಗಳಿ-೧೧೦) ಖಣ್ಡಿಕವನ್ನು ವರ್ಷಕ್ಕೆ ಒಬ್ಬರೇ ಹೇಳಬೇಕು ಹಾಗೂ ಈ ಖಣ್ಡಿಕವನ್ನು ಸ್ಥಾನಿಕರು ಮಾತ್ರ ಹೇಳಬೇಕು, ಪರಸ್ಥಳದವರು ಹೇಳುವಂತಿಲ್ಲವೆಂಬ ಕಟ್ಟುಪಾಡು ವಿಧಿಸುತ್ತಾರೆ. ಈ ವಿಧಿ ನಿಷೇಧಗಳಿಂದ ಈ 'ಖಣ್ಡಿಕ' ಎಂಬ ಪದದ ಅರ್ಥ ಬೇರೊಂದು ಅರ್ಥವಿರಬಹುದೆಂಬ ಊಹೆ ಮಾಡಬಹುದಾಗಿದೆ. ಈ ಶಾಸನದ ಕಟ್ಟುಪಾಡುಗಳನ್ನು ನೋಡಿದಾಗ ಇದನ್ನು ವರ್ಷಕ್ಕೊಮ್ಮೆ ಹೇಳಬಹುದಾದ ಕಾರಣಿಕಕ್ಕೆ (ಬಳ್ಳಾರಿ ಜಿಲ್ಲೆಯ ಮೈಲಾರ ಜಾತ್ರೆಯ ಕಾರಣಿಕದಂತೆ ಆಗಿರಬಹುದು) ಅನ್ವಯಿಸಬಹುದೆ, ಇದು ಇನ್ನೂ ಅಧ್ಯಯನ ಮಾಡಬೇಕಾದ ವಿಷಯವಾಗಿದೆ.

ಹೀಗೆ ಅಗ್ರಹಾರವಾಗಿ ಇವರಿಗೆ ಆಶ್ರಯ ನೀಡಿದ ಬಾಗಳಿಯು ಯಾವ ರೀತಿಯಲ್ಲಿ ಆರ್ಥಿಕ, ಸಾಮಾಜಿಕ, ಸಾಹಿತ್ಯಕ ವಿಷಯಗಳಲ್ಲಿ ಮುಂದುವರಿದ ನಾಡಾಗಿತ್ತು ಎಂಬುದನ್ನು ನಮ್ಮ ಅಧ್ಯಯನದಲ್ಲಿ ಎತ್ತಿ ತೋರಿಸಲಾಗಿದೆ.

ನಮ್ಮ ಜಿಲ್ಲೆಯ ಕೆಲವು ಶಾಸನಗಳಲ್ಲಿ ಬರುವ ಹೆಸರುಗಳು ಹಂಪೆಯಲ್ಲಿ ವಾಸವಾಗಿ ಕೃತಿ ರಚನೆ ಮಾಡಿದ ಹರಿಹರ ಕವಿಯ ಬಸವರಾಜದೇವರ ರಗಳೆಯಲ್ಲಿ ಕಂಡುಬರುತ್ತವೆ. ಇದರಲ್ಲಿ ಅನೇಕರನ್ನು ಅಥವಾ ಕೆಲವರನ್ನಾದರೂ ಹರಿಹರ ಕವಿ ಕಂಡಿರಬೇಕು. ಹೀಗಾಗಿ ಹರಿಹರನ ಕಾಲ ನಿರ್ಣಯ ಮತ್ತು ಕಲ್ಯಾಣ ಕ್ರಾಂತಿಗೆ ಸಂಬಂಧಿಸಿದ ಮೂಲಗಳನ್ನು ಹುಡುಕಲು ಈ ಶಾಸನಗಳು ಸಹಾಯಕವಾಗಬಹುದು. ಈ ಕಾರಣದಿಂದ ಬಸವರಾಜದೇವರ ರಗಳೆಯಲ್ಲಿ ಉಲ್ಲೇಖವಾಗಿರುವ ಬಿಜ್ಜಳನ ಆಸ್ಥಾನದಲ್ಲಿದ್ದ ಬ್ರಾಹ್ಮಣರ ಹೆಸರುಗಳನ್ನು ಹೇಳಿದ್ದು, ಇದಾದ ಮೇಲೆ ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ಬರುವ ಹೆಸರುಗಳನ್ನು ಗುರುತಿಸಬಹುದು. ಇವುಗಳನ್ನು ಮೊದಲಬಾರಿಗೆ ನಾವು ಅಧ್ಯಯನ ನಡೆಸಿದ್ದೇವೆ.

.....ಗದ್ದುಗೆಯ ಮೇಲೆ ಬಸವನಿರೆ ಪಿಂತಣ ಮೈಯೊಳು ಬಿಜ್ಜಳನ ಗುರುವಪ್ಪ ನಾರಾಯಣಭಟ್ಟ ನೋಡನೆ ಮಂಚ್ಯಣಮಿತಂ ಕೊಚಿಗಂ ಪೋಜಿಪೆರ್ದ್ದಿಗಂ ಮೊದಲಾದ ವೇದಜಡರ್.....

ಇಂತಹ ವೇದಜಡರ್‌ರಾದ ಬಾಗಳಿಯ ರಿಷಿಯಣಭಟ್ಟನೂಒಬ್ಬನಾಗಿದ್ದನು ಎಂದು ಇಲ್ಲಿಯ ಒಂದು ಶಾಸನದಲ್ಲಿ ಉಲ್ಲೇಖಬರುತ್ತದೆ. ಇಂತಹ ವ್ಯಕ್ತಿ(ಬ್ರಾಹ್ಮಣರು)ಗಳ ಉಲ್ಲೇಖ ಹಲವಾರು ಶಾಸನಗಳಲ್ಲಿ ಕಂಡುಬರುತ್ತದೆ.

ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರಿನ ಬೇರೆ ಬೇರೆ ಅಳತೆಯ ಭೂಮಾಪನಗಳು ಪ್ರಚಲಿತದಲ್ಲಿದ್ದವು. ಕೆಲವು ದೇವಾಲಯಗಳಲ್ಲಿ ಈ ಅಳತೆಯ ಮಾಪನಗಳನ್ನು ತೋರಿಸಿದ್ದಾರೆ. ಬಾಗಳಿಯ ಕಲ್ಲೇಶ್ವರ ದೇವಾಲಯದ, ನವರಂಗದ ಕಂಬದ ಮೇಲೆ ಒಂದು ಗೆರೆ ಕೊರೆದು 'ತೋಟ ವನಳೆವಗಡಿಂಬ' ಎಂದು ಬರೆಯಲಾಗಿದೆ. ಇಂತಹ ಮಾಪನಗಳು ಆ ಸುತ್ತಮುತ್ತಲ ಪ್ರದೇಶದ ಪ್ರಮಾಣೀಕೃತ ಮಾಪನಗಳಾಗಿದ್ದವು.

ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಸಾಕಷ್ಟು ವಿವರಗಳು ಇಲ್ಲಿನ ಶಾಸನಗಳಲ್ಲಿ ದೊರೆಯುತ್ತವೆ. ವ್ಯಾಪಾರ, ಉದ್ಯೋಗಗಳಿಂದ ಕೂಡಿದ್ದು, ವಿವಿಧ ವರ್ತಕರಾದ, ತಂಬುಲಿಗರು, ನಾನಾದೇಶಿ ತಂಬುಲಿಗರು, ಐನ್ನೂರ್ವರು, ಸಾಸಿರ್ವರು ಮೊದಲಾದವರನ್ನು ನಮ್ಮ ಈ ಅಧ್ಯಯನದಲ್ಲಿ ಮೊದಲ ಬಾರಿಗೆ ವಿಸ್ತೃತವಾಗಿ ಚರ್ಚಿಸಲಾಗಿದೆ.

ಬಾಗಳಿಯು ನೈಸರ್ಗಿಕ ಸಂಪನ್ಮೂಲಗಳಿಂದಲೂ ಸಂಪದ್ಭರಿತವಾಗಿದ್ದು, ದಕ್ಷಿಣಕ್ಕೆ ಹಡಗಲಿಯ ಪಕ್ಕದಲ್ಲಿ ತುಂಗಭದ್ರಾನದಿ ಹರಿಯುತ್ತದೆ. ಸುತ್ತಲೂ ಚಿಕ್ಕ ಚಿಕ್ಕ ಹಳ್ಳಗಳಿಂದ, ಅನೇಕ ದೊಡ್ಡ ಕೆರೆಗಳಿಂದ ಕೂಡಿದೆ. ಇಂತಹ ಸಂಪದ್ಭರಿತವಾದ ಬಾಗಳಿ ನಾಡಿನ ಮೇಲೆ ವ್ಯಾಪಕವಾದ ತೆರಿಗೆ ಪದ್ಧತಿ ಜಾರಿಯಲ್ಲಿದ್ದುದು ತಿಳಿದುಬರುತ್ತದೆ. ವಡ್ಡರಾವುಳ, ಪನ್ನಾಯದಂತ ಸುಂಕಗಳನ್ನು ವಿಧಿಸಲಾಗಿತ್ತು. ಈ ಅಂಶಗಳನ್ನು ನಮ್ಮ ಅಧ್ಯಯನದಲ್ಲಿ ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ.

ನಮ್ಮ ಬದುಕನ್ನು ರೂಪಿಸುವ ಪ್ರಬಲ ಶಕ್ತಿಗಳಲ್ಲಿ ಧರ್ಮವು ಒಂದು. ಬಾಗಳಿಯಲ್ಲಿ ಜೈನರು, ವೈಷ್ಣವರು, ಶೈವರುಗಳು ಜೊತೆ ಜೊತೆಯಲ್ಲಿ ಬದುಕಿದ್ದರು. ಕೋಗಳಿಯಂತೆ, ಬಾಗಳಿಯು ಜೈನ ಕ್ಷೇತ್ರವಾಗಿತ್ತು ಎನ್ನುವುದಕ್ಕೆ ಅಲ್ಲಿನ ಒಂದು ಬಸದಿ ನಿದರ್ಶನವಾಗಿದೆ. ಮತ್ತು ಇಲ್ಲಿನ ಶಾಲೆಯ ಹಿಂದುಗಡೆ ಒಂದು ಮಣ್ಣುದಿನ್ನೆ ಇದ್ದು, ಅಲ್ಲಿ ಒಂದು ಜೈನ ಬಸದಿ ಇರಬೇಕೆಂದು ತೋರುತ್ತದೆ. ಅಲ್ಲಿ ಬಸದಿಯ ಮಾದರಿಯ ಕೆಲವೊಂದು ಸ್ತಂಭಗಳು ಕಂಡುಬರುತ್ತವೆ. ಆ ದೇವಾಲಯದಲ್ಲಿ ೨೪ ತೀರ್ಥಂಕರ ಮೂರ್ತಿಗಳನ್ನು ಕೆತ್ತಲಾಗಿದೆ. ಜೊತೆಗೆ ಇಲ್ಲಿ ಅನೇಕ ಶೈವ ಮತ್ತು ವೈಷ್ಣವ ದೇವಾಲಯಗಳಿವೆ. ಬಾಗಳಿ ದೇವಾಲಯಗಳು ಇಲ್ಲಿಯವರೆಗೂ ಪೂರ್ಣ ಉಪೇಕ್ಷಿತವಾಗಿದೆ. ಈ ದೇವಾಲಯಗಳು ಕಲಾ ಪ್ರಪಂಚಕ್ಕೆ ಚಾಲುಕ್ಯರ ಶ್ರೇಷ್ಠ ಕೊಡುಗೆಯಗಿದ್ದು ಕಲ್ಲೇಶ್ವರ ದೇವಾಲಯವನ್ನು ಚಾಲುಕ್ಯರ ವಾಸ್ತುಶಿಲ್ಪದ

ಪ್ರಯೋಗ ಶಾಲೆ ಎನ್ನಬಹುದು. ಇಂತಹ ದೇವಾಲಯಗಳಿಗೆ ನೀಡಿದ ದಾನ, ದತ್ತಿಗಳು ಹಲವಾರು. ದೇವರ ನಂದಾದೀವಿಗೆಗೆ, ದೇವಾಲಯದ ಅಂಗ ರಂಗಭೋಗಗಳಿಗೆ, ದೇವದಾಸಿಯರಿಗೆ, ಹಾಡುಗಾರರಿಗೆ, ಪರಿಕಾರರಿಗೆ, ನೀಡಿದ ದಾನಗಳು, ದೇವಾಲಯದ ಖಂಡಸ್ಪುಟಿತ್ ಜೀರ್ಣೋದ್ಧಾರ ಮಾಡಿ ರಾಜನು ನೀಡಿದ ದಾನ ದತ್ತಿಗಳನ್ನು ಇಲ್ಲಿನ ಶಾಸನಗಳಲ್ಲಿ ವಿವರಿಸಲಾಗಿದೆ. ಇಂತಹ ದೇವಾಲಯಗಳು ಇತಿಹಾಸ ಕಾಲದ ಗತ ವೈಭವದ ಸಂಕೇತಗಳಾಗಿ ನಿಂತಿವೆ. ಇವುಗಳನ್ನು ಹಳ್ಳಿಯಲ್ಲಿ 'ಗುಡಿ' ಅಥವಾ ದೇಗುಲವೆಂದು ಕರೆಯುವ ರೂಢಿ ಇದೆ. ಆದರೆ ಶಾಸನಗಳಲ್ಲಿ ದೇವಾಲಯದ ಉಲ್ಲೇಖಗಳು ತೀರಾ ಕಡಿಮೆ. ಬಾಗಳಿಯ ಕೆಲವೊಂದು ಶಾಸನಗಳಲ್ಲಿ ಕಲ್ಲಿನಾಥ, 'ಕಲ್ಲೇಶ್ವರ' ಎಂದು ಉಲ್ಲೇಖವಾಗಿದೆ. ಆದರೆ ಶಾಸನಗಳ ಆಧಾರದಿಂದ ಅಂದರೆ ದೇವಾಲಯದ ವಾಸ್ತುವಿನಿಂದ ಕಲ್ಯಾಣಚಾಲುಕ್ಯರ ಕಾಲದ ಏಳು ದೇವಾಲಯಗಳನ್ನು ಗುರುತಿಸಲಾಗಿದೆ. ನಂತರ ಇತರರ ೨೩ ದೇವಾಲಯಗಳನ್ನು ಗುರುತಿಸಲಾಗಿದೆ. ಇವೆಲ್ಲ ಹೆಚ್ಚಾಗಿ ಶೈವ ಧರ್ಮದ ದೇವಾಲಯಗಳಾಗಿವೆ.

ಹೀಗೆ ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ನಿರ್ಮಿಸಿದವರ ಹೆಸರನ್ನು ಇಡುವುದು ಬಹು ಪ್ರಾಚೀನ ಕಾಲದಿಂದಲೇ ನಮ್ಮಲ್ಲಿ ಬೆಳೆದುಬಂದ ಪದ್ಧತಿಯಾಗಿದೆ. ಚಾಲುಕ್ಯರ ರಾಜ ಎರಡನೆ ತೈಲಪನ ಆಳ್ವಿಕೆಯಲ್ಲಿ ಅವನ ಸಾಮಂತ ಆಯ್ಯುತವರ್ಮನು ಕಿಸುಕಾಡು-೭೦, ಕೋಗಳಿ-೫೦೦ನ್ನು ಆಳುತ್ತಿರಲು ಬಾಗುಳಿಯ-೫೦ ಮಹಾಜನರು ದುಗ್ಗಿಮಯ್ಯ ಪ್ರತಿಷ್ಠಾಪಿಸಿದ ಆದಿತ್ಯ ದೇವರಿಗೆ ತೋಟವನ್ನು ದಾನ ನೀಡಿದನೆಂದು ಕಂಡುಬಂದಿದೆ. ಇಂತಹ ಇನ್ನು ಕೆಲವು ಶಾಸನಗಳಲ್ಲಿ ಸರಸ್ವತಿ ಪ್ರತಿಮೆಯನ್ನು ಲಿಂಗವನ್ನು ಕಲ್ಲಶಿಖರವನ್ನು ಮಾಡಿದರೆಂದು ಉಲ್ಲೇಖಬರುತ್ತವೆ. ಹಲವು ಶಾಸನ ತ್ರುಟಿತವಾಗಿರುವುದರಿಂದ ಯಾರು ಎಂದು ತಿಳಿಯುವುದಿಲ್ಲ. ಇವುಗಳಲ್ಲಿ ಉಮಾಮಹೇಶ್ವರ ಮತ್ತು ನಾರಾಯಣ ದೇವರನ್ನು ಮಾಡಿಸಿದನೆಂದು ಕಂಡುಬರುತ್ತದೆ. ಆದರೆ ಯಾರು ಎಂದು ಗೊತ್ತಾಗುವುದಿಲ್ಲ. ಇಲ್ಲಿಯ ಕೆಲವು ದೇವಾಲಯಗಳಲ್ಲಿ ಕೆಲವು ವಿಶೇಷ ಅಂಶಗಳು ಕಂಡುಬರುತ್ತವೆ. ಅಂದರೆ ಪಾಣಿಪೀಠದ ಎಡಭಾಗದಲ್ಲಿ ಸಿಂಹದ(ಶಿಲ್ಪ) ಮುಖವನ್ನು ಕೆತ್ತಲಾಗಿದ್ದು. ಚನ್ನಬಸವೇಶ್ವರ ದೇವಾಲಯದ ಮೇಲ್ಭಾಗ ಇಳಿಜಾರಿನ ಭೋದಿಗೆಗಳಿಂದ ಕೂಡಿದ್ದು, ಸುತ್ತಲಿನ ಕೋಷ್ಟಕ ಕಂಬಗಳಿಂದ ಕೂಡಿದೆ. ಹೀಗೆ ಬಾಗಳಿಯಲ್ಲಿ ಕಲ್ಲೇಶ್ವರ ದೇವಾಲಯ, ಲಕ್ಷ್ಮೀನಾರಾಯಣ, ಚನ್ನಬಸವೇಶ್ವರ ಮತ್ತು ಸಂಗನಬಸವೇಶ್ವರ, ಇಷ್ಟಲಿಂಗ, ಕನಕೇಶ್ವರ, ವೀರಭದ್ರ, ಮಾರುತಿ ದೇವಾಲಯಗಳು ಮತ್ತು ಅಲ್ಲಲ್ಲಿ ಬಿದ್ದ ವೀರಗಲ್ಲುಗಳು, ಮಾಸ್ತಿಕಲ್ಲುಗಳು ಈ ಎಲ್ಲಾ ವಾಸ್ತುಶಿಲ್ಪಗಳನ್ನು ನೋಡಿದಾಗ, ಐಹೊಳೆಯನ್ನು ಬಗೆಬಗೆಯ ವಾಸ್ತು ಮತ್ತು ಶಿಲ್ಪಕಲೆಯ ಪ್ರಯೋಗ ಶಾಲೆಯೆಂದು ಕರೆದಿರುವುದನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ನಮ್ಮ ದೃಷ್ಟಿಯಲ್ಲಿ ಬಾಗಳಿಯನ್ನು ಕಲ್ಯಾಣಿ ಚಾಲುಕ್ಯರ ವಾಸ್ತುಶಿಲ್ಪಕಲೆಯ ಪ್ರಯೋಗ ಶಾಲೆ ಎನ್ನಬಹುದು. ಬಾಗಳಿಯ ದೇವಾಲಯಗಳನ್ನು

[illegible]

ಪ್ರಾಯಶಃ ಮೊದಲಬಾರಿಗೆ ವಿವರಿಸಿದ ಶ್ರೇಯಸ್ಸು ಡಿ.ಅಲೆಕ್ಸಾಂಡರ್ ಅವರಿಗೆ ಸಲ್ಲುತ್ತದೆ. ಪ್ರಸ್ತುತ ಬಾಗಳಿಯಲ್ಲಿ ನಾವು ಏಳು ದೇವಾಲಯಗಳನ್ನು ಸಮಗ್ರವಾಗಿ ನೋಡಿದಾಗ ಪ್ರಾಯಶಃ ಇಲ್ಲಿ ಕಲ್ಯಾಣಚಾಲುಕ್ಯರ ಶೈಲಿಯ ವಾಸ್ತುಶಿಲ್ಪದ ಶೈಕ್ಷಣಿಕ ಕೇಂದ್ರವಿದ್ದಿರಬೇಕು ಎನಿಸುತ್ತದೆ. ಇಲ್ಲಿ ದೊರೆತ ೧೦೦ ಶಾಸನಗಳು, ಕಲ್ಲೇಶ್ವರ ದೇವಾಲಯದಲ್ಲಿರುವ ಸುಂದರ ವೀರಗಲ್ಲುಗಳು ಈ ಮಾತಿಗೆ ಪುಷ್ಟಿಯನ್ನು ಒದಗಿಸುತ್ತವೆ. ಆದರೆ ಇವುಗಳನ್ನು ಹಳ್ಳಿ ಜನರು ದನದ ಕೊಟ್ಟಿಗೆಗಳಾಗಿಯೋ, ಹತ್ತಿಕಟ್ಟಿಗೆ ಸಂಗ್ರಹಿಸಿಡಲು ಕಣಜಗಳಾಗಿಯೋ, ಜೋಳದ ಸೊಪ್ಪನ್ನು ಸಂಗ್ರಹಿಸಲು ಉಗ್ರಾಣಗಳಾಗಿಯೋ ಮಾರ್ಪಡಿಸಿ ಕೊಂಡಿದ್ದಾರೆ. ಇಲ್ಲಿನ ಜೈನ ದೇವಾಲಯವನ್ನು ಯಾರೂ ಗುರುತುಹಿಡಿಯಲು ಸಾಧ್ಯವೆ ಇಲ್ಲ. ಏಕೆಂದರೆ ಅದೊಂದು ಓಣಿಯಲ್ಲಿ ಒಂದು ಮನೆಗೆ ಒರಗಿಕೊಂಡು ದಕ್ಷಿಣಾಭಿಮುಖವಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ ಇದೊಂದು ಚಿಕ್ಕ ಕೋಣೆ(Room)ಯೆಂದು ಸುಮ್ಮನಾಗಬೇಕು. ಯಾರಾದರೂ ಸ್ಥಳೀಯರು ಹೇಳಿದರೆ ಮಾತ್ರ ಇಲ್ಲಿ ಒಂದು ದೇವಾಲಯವಿತ್ತೆಂದು ತಿಳಿಯುತ್ತದೆ. ಇದು ಸುಂದರ ಜಾಲಂಧರದಿಂದ ಕೂಡಿದ್ದು, ಒಂದಕ್ಕೊಂದು ಪೋಣಿಸಿದ ಹಾಗೆ ಕೆತ್ತಲಾಗಿದೆ. ಇಂತಹ ಜಾಲಂಧರವಿರುವ ಒಂದು ಬಾಗಿಲು ಚೌಕಟ್ಟು ಇದ್ದು, ಅದರ ರಂಧ್ರಗಳಲ್ಲಿ ನಮ್ಮ ಜನರು ಸಣ್ಣ ಸಣ್ಣ ಬೀಜಗಳನ್ನು, ಸುಣ್ಣ ಬಣ್ಣ, ಸಗಣಿಯನ್ನು ತುಂಬಿ ವಿಕಾರ ಗೊಳಿಸಿದ್ದಾರೆ. ಚೌಕಟ್ಟಿನ ಮೇಲ್ಭಾಗದ ಅಡ್ಡಪಟ್ಟಿಯಲ್ಲಿ ಜಿನಮೂರ್ತಿಗಳನ್ನು ಕೆತ್ತಲಾಗಿದೆ. ಇದರ ಅರ್ಥವೆಂದರೆ ಬಾಗಳಿಯು ಚಾಲುಕ್ಯರ ಕಾಲದಲ್ಲಿ ಕೇವಲ ಶೈವ ಧರ್ಮದ ಕೇಂದ್ರವಾಗಿರದೆ, ವೈಷ್ಣವ, ಜೈನಧರ್ಮದ ಕೇಂದ್ರವೂ ಆಗಿತ್ತು. ಹೀಗೆ ಅಳಿದುಳಿದ ದೇವಸ್ಥಾನಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ ಬಾಗಳಿ ಹಿಂದೆ ಶಿಲ್ಪಶಾಸ್ತ್ರದ ಹಾಗೂ ಸರ್ವಧರ್ಮದ ಕೇಂದ್ರವಾಗಿತ್ತೆಂದು ಕಂಡುಬರುತ್ತದೆ. ಇಂತಹ ಅಳಿದುಳಿದವುಗಳನ್ನು ಪುನರುತ್ಥಾನಗೊಳಿಸಿ, ಅನಾಥವಾಗಿ ಬಿದ್ದಿರುವ ಶಿಲ್ಪಗಳು, ವೀರಗಲ್ಲುಗಳು, ಶಿಲಾಶಾನಗಳನ್ನು ರಕ್ಷಿಸಲು ಒಂದು ವಸ್ತುಸಂಗ್ರಹಾಲಯವನ್ನು ನಿರ್ಮಿಸಿದ್ದಾರೆ.

ಹಿಂದೆ ಹೇಳಿದ ಹಾಗೆ ಮಿಥುನಶಿಲ್ಪಗಳಂತೂ ವಿವರಿಸಲಾಗದ ಕೆತ್ತನೆಯಿಂದ ಕೂಡಿದ ಪುರುಷಾರ್ಥ ಗಳಲ್ಲೊಂದಾದ ಕಾಮಶಾಸ್ತ್ರವನ್ನು ವಿವರಿಸುವಂತಿವೆ. ಪ್ರಾಯಶಃ ವಾತ್ಸಾಯನನ ಕಾಮಸೂತ್ರ ಇವುಗಳಿಗೆ ಪ್ರೇರಣೆ ನೀಡಿದೆ ಅನ್ನಬಹುದು. ಇವು ಒಂದಕ್ಕಿಂತ ಒಂದು ಭಿನ್ನವಾಗಿ ಕಾಣಿಸಿಕೊಂಡ ಶಿಲ್ಪಗಳಾಗಿವೆ. ಇಲ್ಲಿ ಒಂದು ಲಜ್ಜಾಗೌರಿಯ ಶಿಲ್ಪವಿದೆ. ಒಂದು ಶಿಲ್ಪದಲ್ಲಿ ಕೋತಿ ಒಂದು ಕೋಲನ್ನು ಹಿಡಿದು ಎಳೆಯುವ ಶಿಲ್ಪವು ವಿಶಿಷ್ಟತೆಯಿಂದ ಕೂಡಿದೆ. ಇಂಥವುಗಳನ್ನು ಬಳ್ಳಿಗಾವೆ, ಹಳೇಬೀಡು, ಹಂಪಿಯ ಹಜಾರರಾಮದೇವಾಲಯದಲ್ಲೂ ಕಾಣಬಹುದಾಗಿದೆ.

ಬಾಗಳಿಯ ಪಾಳೆಯಗಾರರನ್ನು ಕುರಿತು ಇಲ್ಲಿ ವಿವರವಾಗಿ ಚರ್ಚಿಸಲಾಗಿದ್ದು, ಇವರು ಯಾವ ರೀತಿ ಬಾಗಳಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮ ಹೆಸರಿನ ಹಿಂದೆ ಬಾಗಳಿ ಎಂದು

ಗುರುತಿಸಿಕೊಂಡಿದ್ದರೆಂದು ಚರ್ಚಿಸಲಾಗಿದೆ. ಇವರು ಮೊದಲು ಬಾಗಳಿಯಲ್ಲಿಯೇ ನೆಲೆಸಿದ್ದರು. ಇವರು ಯಾವ ರೀತಿ ಸಮಕಾಲೀನರೊಂದಿಗೆ ಅಂದರೆ ಚಿತ್ರದುರ್ಗ, ಗುಡೇಕೋಟೆ, ಜರಿಮಲೆ, ಕೆಳದಿ ಅರಸರ ಜೊತೆಗೆ ಸ್ನೇಹ ಸಂಬಂಧಗಳನ್ನು ಬೆಳೆಸಿದ್ದರೆಂಬುದನ್ನು ವಿವರವಾಗಿ ನಮ್ಮ ಅಧ್ಯಯನದಲ್ಲಿ ನೋಡಲಾಗಿದೆ.

ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಬಾಗಳಿಯ ಶಾಸನಗಳಲ್ಲಿ ಅನೇಕ ಶಾಸನ ಕವಿಗಳು ಕಂಡುಬರುತ್ತಾರೆ. ಶಾಸನದ ಕೊನೆಯ ಭಾಗದಲ್ಲಿ ತಮ್ಮನ್ನು ಕಲ್ಲುಕುಟಿಗರು, ರೂವಾರಿಗಳು, ಕೆತ್ತಿದವರು, ಖಂಡಿಸಿದವರು, ಬರೆದಂ ಎಂದು ಹೇಳಿಕೊಂಡಿದ್ದಾರೆ. ಆದರೆ ಇಲ್ಲಿಯ ಶಾಸನ ಕವಿಗಳು ಹೆಚ್ಚಾಗಿ ಓಜ ಎಂಬ ವಿಶೇಷಣಗಳಿಂದ ಗುರುತಿಸಿಕೊಂಡಿದ್ದಾರೆ. ಶಾಸನಗಳ ಛಂದಸ್ಸಿನಲ್ಲಿ ಕೆಲವು ಕಂದಪದ್ಯ, ವೃತ್ತಗಳಿಂದ, ವಚನಗಳಿಂದ ಕೂಡಿವೆ. ಬಾಗಳಿಯನ್ನು ಕಾವ್ಯಾತ್ಮಕವಾಗಿ ವರ್ಣಿಸಿ ಉಲ್ಲೇಸಿವೆ. ಶಾಸನಗಳಲ್ಲಿ ಬರುವ ಅಲಂಕಾರಿಕ ಅಂಶಗಳನ್ನು ಲಿಪಿಯ ವೈವಿಧ್ಯತೆಯನ್ನು ನೋಡಲಾಗಿದೆ. ಅಂದರೆ ಇಲ್ಲಿಯ ಶಾಸನಗಳ ಲಿಪಿ, ನಡುಗನ್ನಡ ಕಾಲದ ಲಿಪಿಯಾಗಿದೆ. ಈ ಶಾಸನವೊಂದರ ಛಂದಸ್ಸು ಹೀಗೆ ಕಂಡುಬರುತ್ತದೆ. ಶ್ಲೋಕದ ಬದಲಾಗಿ ಇಂತಹ ಉಲ್ಲೇಖಗಳು ಕಂಡುಬರುತ್ತವೆ. ಆದರೆ ಇದು ಯಾವ ಛಂದಸ್ಸಿಗೂ ಒಳಪಡುವುದಿಲ್ಲ.

ಜಯತ್ಯೇಷ ಮಹಾದೇವೋ, ವಿಶ್ವರಕ್ಷಾ ವಿಚಕಃ
ಯಸ್ಸತ್ತಮುನಿ ಮೋದಾರ್ಥ ಮವಿರ್ಭೂತಃ ಕಲಾನಿಧಿ

ಎಂದು ಉಲ್ಲೇಖವಾಗಿದೆ. ಇಂತಹ ಉಲ್ಲೇಖಗಳು, ಕುಂಚೂರು, ನೀಲಗುಂದ ಶಾಸನಗಳಲ್ಲಿ ಕುಂಡುಬಂದರೂ ಹೆಚ್ಚಾಗಿ ಬಾಗಳಿ ಶಾಸನಗಳಲ್ಲಿ ಇವನ್ನು ಬಳಸಿದ್ದಾರೆ. ಸಾಮಾನ್ಯವಾಗಿ ಕಾವ್ಯಮಯವಾದ ಶಾಸನಗಳು ಚಂಪೂರೀತಿಯಲ್ಲಿಯೇ ಬಳಕೆಯಾಗಿವೆ. ಕೋಗಳಿಯ ಒಂದು ಶಾಸನ ತ್ರಿಪದಿಯಲ್ಲಿ ಬಳಕೆಯಾಗಿವೆ. ಆದರೆ ಶಾಸನಗಳಲ್ಲಿ ಬಳಕೆಯಾಗಿರುವ ಅನೇಕ ಪದ್ಯಗಳು ಛಂದೋ ನಿಮಯಗಳನ್ನು ಮೀರಿವೆ. ಇದು ಗಮನಿಸಬೇಕಾದ ಅಂಶವಾಗಿದೆ. ಅಂದರೆ ಇವು ಗಣ ವಿಂಗಡಣೆ, ಅಂಶಗಣಗಳಿಗೆ ಒಳಪಡುವುದಿಲ್ಲ.

ಇನ್ನೂ ಕೆಲವು ಶಾಸನಗಳಲ್ಲಿ ಪ್ರಾರಂಭದಲ್ಲಿ ಶಂಖ, ಚಕ್ರ, ಗದೆಯ ಚಿಹ್ನೆಗಳನ್ನು ಹೊಂದಿದ್ದು, ಶಾಸನಗಳ ಕೊನೆಯ ಭಾಗದಲ್ಲಿ ನೇಗಿಲು ಚಿಹ್ನೆ ಮತ್ತು ಪದ್ಮದ ಚಿಹ್ನೆಗಳು ಕಂಡುಬಂದಿವೆ. ಆದರೆ ನೇಗಿಲಿರುವ ಶಾಸನಗಳನ್ನು ರಾಷ್ಟ್ರಕೂಟರ ಶಾಸನಗಳೆಂದು ಗುರುತಿಸಬಹುದಾಗಿದೆ. ಇನ್ನು ಕೆಲವು ಶಾಸನಗಳಲ್ಲಿ ಧರ್ಮಸಮನ್ವಯತೆಯ ಅಂಶಗಳು ಕಂಡುಬರುತ್ತವೆ. ಮೊದಲು ಶಿವನನ್ನು ಸ್ತುತಿಸುವ ಶ್ಲೋಕವಿದ್ದು, ನಂತರ ವಿಷ್ಣುವನ್ನು ಸ್ತುತಿಸುವ ಶ್ಲೋಕಗಳು ಉಲ್ಲೇಖವಾಗಿವೆ. ಒಂದು ಶಾಸನದಲ್ಲಿ ರಾಷ್ಟ್ರಕೂಟರ ಮೂರನೆ ಕೃಷ್ಣನನ್ನು ಮತ್ತು ಇಮ್ಮಡಿ ತೈಲಪನನ್ನು ಉಲ್ಲೇಖಿಸಿರುವುದು ತಿಳಿಯುತ್ತದೆ. ಇದಲ್ಲದೆ ರಾಜರು ಸಹ ಧರ್ಮಸಮನ್ವಯರಾಗಿದ್ದರೆಂದು ಕಂಡುಬರುತ್ತದೆ.

ಹೀಗೆ ಇಲ್ಲಿಯ ಶಾಸನಗಳನ್ನು ಬಿಡಿಯಾಗಿ ಬಂದ ಲೇಖನಗಳ ಜೊತೆ ಇಡಿಯಾಗಿ ನೋಡಲಾಗಿದ್ದು, ಸಾಧ್ಯವಾದಷ್ಟು ಸಮಗ್ರವಾಗಿ ಚರ್ಚಿಸಲಾಗಿದೆ. ಅಧ್ಯಯನದ ಉದ್ದೇಶದಿಂದ ಬಾಗಳಿ ೫೦ ಎಂದು ಗುರುತಿಸಿಕೊಂಡು ರಾಷ್ಟ್ರಕೂಟರು, ಕಲ್ಯಾಣಿಚಾಲುಕ್ಯರ, ಸೇವುಣರ, ಕಲಚೂರಿಗಳ, ನೊಳಂಬರ, ಪಾಂಡ್ಯರ, ಹೊಯ್ಸಳರ, ವಿಜಯನಗರದ ಅರಸರ ರಾಜಕೀಯ, ಆಡಳಿತ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ವ್ಯವಸ್ಥೆಯನ್ನು (ಕಟ್ಟಿಕೊಳ್ಳುವುದರ) ಪುನಾರಚಿಸುವುದರ ಮೂಲಕ ಸಮಗ್ರವಾಗಿ ಮೊದಲ ಬಾರಿಗೆ ಪರಿಶೀಲಿಸಲಾಗಿದೆ.

ಬಾಗಳಿ ಒಂದು ಅಗ್ರಹಾರ, ಕಟ್ಟೆಮನೆ ಗ್ರಾಮವಾಗಿದ್ದು, ಜನಪದ ಸಾಹಿತ್ಯದಲ್ಲಿ ವಿಶಿಷ್ಟತೆಯನ್ನು ಹೊಂದಿದೆ ಎಂದು ಹೇಳಬಹುದಾಗಿದೆ. ಭೌಗೋಳಿಕ ಮತ್ತು ನೈಸರ್ಗಿಕವಾಗಿ ಸುತ್ತಲು ಮರಗಳಿಂದ ಕೂಡಿದ್ದು, ತಗ್ಗಾದ ಪ್ರದೇಶದಲ್ಲಿ ನೆಲೆಗೊಂಡಿದೆ. ಅಲ್ಲಿನ ಜನಪದರ ಆಚರಣೆಗಳು, ವಿಧಿವಿಧಾನ, ಸಂಪ್ರದಾಯಗಳು, ಹಬ್ಬ, ಹರಿದಿನಗಳು ಜಾತ್ರೆ, ಉತ್ಸವಗಳು ಮೂಢನಂಬಿಕೆಗಳು, ಆಟೋಟಗಳು, ಊಟ, ಉಪಚಾರ, ಉಡಿಗೆ ತೊಡಿಗೆಗಳು ಮುಂತಾದ ಜನಪದ ಅಂಶಗಳಿಂದ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಇವುಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅವಶ್ಯಕತೆಯಿದೆ. ವಿಷಯವು ವಿಸ್ತಾರವಾಗುವುದೆಂಬ ಕಾರಣದಿಂದ ಇಲ್ಲಿ ಜನಪದ ಅಂಶಗಳನ್ನು ವಿವರವಾಗಿ ಚರ್ಚಿಸಿಲ್ಲ.

ದಿನದಿನಕ್ಕೆ ನಾಗರೀಕತೆ ಹಬ್ಬಿದ್ದರೂ ಆಚರಣೆ, ನಂಬಿಕೆ, ಪರಂಪರೆ, ವಿಶಿಷ್ಟ ದೈವಗಳನ್ನು ಭಯದ ಹಿನ್ನೆಲೆಯಲ್ಲಿ ಅಲ್ಲಿನ ಸಮುದಾಯ ಮುಂದುವರಿಸಿಕೊಂಡು ಬಂದಿದೆ. ಇಲ್ಲಿಯ ಜನರ ಕಡುಬಡತನದ ನಡುವೆಯೂ ಇವರ ಸಾಂಸ್ಕೃತಿಕ ಶ್ರೀಮಂತಿಕೆ ಹಾಗೂ ವೈವಿಧ್ಯತೆಗೆ ಕೊರತೆ ಇಲ್ಲ. ಅಂದರೆ ಶಾಸನಗಳನ್ನು ಹೊರತುಪಡಿಸಿ ಬಾಗಳಿ ಒಂದು ಜಾನಪದೀಯ ಅಧ್ಯಯನಕ್ಕಾಗುವಷ್ಟು, ಜಾನಪದ ಸಾಹಿತ್ಯ ವಿಫುಲವಾಗಿ ಕಂಡುಬರುತ್ತದೆ. ನಮ್ಮ ಅಧ್ಯಯನ ಮುಖ್ಯವಾಗಿ ಶಾಸನಗಳನ್ನಾಧರಿಸಿರುವುದರಿಂದ ಇವುಗಳನ್ನು ಬಳಸಿಲ್ಲ. ಹೀಗಾಗಿ ಬಾಗಳಿ, ಕೋಗಳಿ-೫೦೦ರ ಉಪವಿಭಾಗವಾಗಿ ಕೊಟ್ಟೂರು ಸೀಮೆಗೆ ಸೇರಿತ್ತು. ನಂತರ ರಾಷ್ಟ್ರಕೂಟರ, ಚಾಲುಕ್ಯರ, ಹೊಯ್ಸಳರ, ಪಾಳೆಯಗಾರರ, ವಿಜಯನಗರ ಅರಸ ಸದಾಶಿವರಾಯನ ಕಾಲಕ್ಕೆ(೧೫೫೦) ಹಡಪದನಾಯಕರ ಮಕ್ಕಳು ಕೃಷ್ಣಪ್ಪನಾಯಕರಿಗೆ ಕೋಗಳಿ ಮತ್ತು ಬಾಗಳಿಯನ್ನು ಅಮರಮಾಗಣಿಯಾಗಿ ಕೊಡಲಾಯಿತು. ಆಗ (ಬಾಗಳಿಯನ್ನು) ಬಾಗಳಿಯ ಸೀಮೆಯನ್ನು ಹಳವಿನಾಯಕ ಆಳುತ್ತಿದ್ದನು. ಇಂತಹ ಇತಿಹಾಸ ಹೊಂದಿ ೧೦೦೦ ವರ್ಷಗಳ ತನ್ನ ಗತವೈಭವಕ್ಕೆ ಮೂಕ ಸಾಕ್ಷಿಯಾಗಿ ಕೆರೆಯ ದಂಡೆಯಲ್ಲಿ ಪ್ರಶಾಂತ ವಾತಾವರಣದಲ್ಲಿ, ಮೌನವಾಗಿ ಬಂದವರಿಗೆ ತನ್ನ ಕಥೆ ಹೇಳುತ್ತಾ ನೆಲೆಗೊಂಡ ಗ್ರಾಮವಾಗಿದೆ ಬಾಗಳಿ.

ಈ ಗ್ರಾಮದ ಜನರು ತಮ್ಮ ಗ್ರಾಮದ ಮಹತ್ವವನ್ನರಿತುಕೊಳ್ಳಬೇಕು. ದೇವಾಲಯ, ಶಿಲ್ಪ,

ಶಾಸನಗಳನ್ನು ರಕ್ಷಿಸಬೇಕು. ಸರ್ಕಾರದ ಸಂಘ ಸಂಸ್ಥೆಗಳ ನೆರವಿನಿಂದ ಗ್ರಾಮದ ಅಭಿವೃದ್ಧಿಗೆ ಶ್ರಮಿಸಬೇಕು. ಕಲ್ಲೇಶ್ವರ ದೇವಾಲಯಕ್ಕೆ ಹೆಚ್ಚಿನ ಪ್ರಚಾರ ನೀಡಿ ಪ್ರವಾಸಿಗರನ್ನು ಸೆಳೆದು, ಪ್ರವೇಶ ಶುಲ್ಕ ವಿಧಿಸಿ ಅದನ್ನು ಗ್ರಾಮಾಭಿವೃದ್ಧಿಗೆ ಬಳಸಬಹುದು. ವಸ್ತುಸಂಗ್ರಹಾಲಯವನ್ನು ಇನ್ನೂ ವಿಸ್ತರಿಸಬೇಕು. ಹರಪನಹಳ್ಳಿಯಿಂದ ಸರ್ಕಾರಿ ಬಸ್ ಸೌಲಭ್ಯವಾಗಬೇಕು. ಸ್ಥಳೀಯ ಶಾಲಾ ಕಾಲೇಜುಗಳಲ್ಲಿ ಬಾಗಳಿ ಇತಿಹಾಸ ಸಂಸ್ಕೃತಿ ಅವಶೇಷಗಳ ಬಗ್ಗೆ ಪರಿಚಯಾತ್ಮಕ ಪಠ್ಯವನ್ನಿಟ್ಟು ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿಯ ಅರಿವನ್ನು ತಿಳಿಸಬೇಕು.

ಇಲ್ಲಿನ ಶಾಸನಗಳ ಬಗ್ಗೆ ಮತ್ತು ದೇವಾಲಯಗಳ ಬಗ್ಗೆ ವಿವರವಾದ ಪುಸ್ತಕಗಳನ್ನು ಪ್ರಕಟಿಸಬೇಕು. ಈ ಗ್ರಾಮದ ಜನಪದ ಆಚರಣೆಗಳು, ಜನಪದ ಸಾಹಿತ್ಯ ವಿಫುಲವಾಗಿದೆ. ಅದನ್ನು ಸಮಗ್ರವಾಗಿ ಅಧ್ಯಯನ ಮಾಡುವ ಕಾರ್ಯ ಜರೂರಾಗಿ ಆಗಬೇಕಿದೆ.

◆◆

ಸಂಕೇತಾಕ್ಷರ ಸೂಚಿ

S.I.I.	:	South Indian Inscriptions
E.C.	:	Epigraphia Carnatica
E.I.	:	Epigraphia India
K.I.	:	Karnataka Inscriptions
ಬ.ಜಿ.ಶಾ.ಸ	:	ಬಳ್ಳಾರಿ ಜಿಲ್ಲಾ ಶಾಸನ ಸಂಪುಟ
ಕೊ.ಜಿ.ಶಾ.	:	ಕೊಪ್ಪಳ ಜಿಲ್ಲಾ ಶಾಸನಗಳು
ಹಂ.ಶಾ.	:	ಹಂಪಿಯ ಶಾಸನಗಳು
ಕ.ಸಾ.ಪ.ಪ.	:	ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ

ಗ್ರಂಥ ಋಣ

ಶಾಸನ ಸಂಪುಟಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ ಬಳ್ಳಾರಿ ಜಿಲ್ಲೆ

೨. ಸೌತ್ ಇಂಡಿಯಾ ಇನ್‌ಸ್ಕ್ರಿಪಿಷನ್ಸ್ ಸಂಪುಟಗಳು

ಕೃತಿಗಳು

ಅಪರ್ಣ ಕೂ.ಸ., **ದೇಗುಲ ವಾಸ್ತುಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಅಣ್ಣಿಗೇರಿ ಎ.ಎಂ. ಮತ್ತು ಮೇವುಂಡಿ ಮಲ್ಲಾರಿ, **ಶಾಸನ ಸಾಹಿತ್ಯ ಸಂಚಯ**, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೬೧

ಕಪಟರಾಳ ಕೃಷ್ಣರಾಯರು, **ಕರ್ನಾಟಕ ಲಾಕುಳ ಶೈವರು**, ಕರ್ನಾಟಕ ಇತಿಹಾಸ ಅಕಾಡೆಮಿ ಸಂಸ್ಥೆ, ಧಾರವಾಡ, ೧೯೫೫

ಕುಮಾರಸ್ವಾಮಿ ಕೆ.ಎಸ್., **ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು**, ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೬

ಕೊಪ್ಪಾ ಎಸ್.ಕೆ., **ತರ್ದವಾಡಿ ನಾಡು ಒಂದು ಅಧ್ಯಯನ** (ಶಾಸನಗಳ ಹಿನ್ನೆಲೆಯಲ್ಲಿ), ಪ್ರತಿಭಾ ಪ್ರಕಾಶನ, ಇಂಡಿ, ೧೯೯೦

ಗೋವಿಂದರಾಜು, **ಚೆನ್ನಾದೇವಿ ಅಗ್ರಹಾರ ಒಂದು ಜಾನಪದ ಅಧ್ಯಯನ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೯೩

ಚನ್ನಕ್ಕ ಪಾವಟೆ, **ಶಾಸನಗಳಲ್ಲಿ ಸ್ತ್ರೀ ಸಮಾಜ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

ಚನ್ನಬಸವ ಹಿರೇಮಠ, **ಕುರುಗೋಡಿನ ಸಿಂದರು ಒಂದು ಅಧ್ಯಯನ**, ಕೊಪ್ಪಳ ಸಂಗಣ್ಣನವರು ಅಡಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ, ೧೯೫೫

ಚಿದಾನಂದಮೂರ್ತಿ ಎಂ., **ಸಂಶೋಧನ ತರಂಗ, ಸಂಪುಟ ೨**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೯

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಅದೇ, **ಮಾಸ್ತಿಗಲ್ಲು-ವೀರಗಲ್ಲು**, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೪

ತಾಪಿಧರ್ಮರಾವ್ ಎಸ್.ಆರ್., **ದೇವಾಲಯಗಳಲ್ಲಿ ಲೈಂಗಿಕ ಶಿಲ್ಪಗಳು**, ಕನ್ನಡ ಸಾಹಿತ್ಯ ಅಕಾಡೆಮಿ, ಉಪಸಂಸ್ಕೃತಿ ಮಾಲೆಗಳು, ಬೆಂಗಳೂರು, ೧೯೯೩

ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು.

ಧ್ರುವರಾಜ ನಾ.ಗದಗಕರ, **ದೇಗುಲ ರಥಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ನರಸಿಂಹಚಾರ್ ಡಿ.ಎಲ್., **ವಡ್ಡಾರಾಧನೆ**, ಡಿ.ವಿ.ಕೆ.ಮೂರ್ತಿ, ಪ್ರಕಾಶಕರು, ಮೈಸೂರು, ೨೦೦೧

ನರಸಿಂಹಚಾರ್ ಆರ್., **ಶಾಸನ ಪದ್ಯಮಂಜರಿ**,

ನಾರಾಯಣ ಪಿ.ವಿ., **ಬಸವಣ್ಣನ ವಚನಗಳ ಸಾಂಸ್ಕೃತಿಕ ಅಧ್ಯಯನ**, ತೋಟದಾರ್ಯಮಠ, ಗದಗ, ೧೯೮೩

ನೇಗಿನಹಾಳ, **ಪ್ರಾಚಿನ ಕನ್ನಡ ಶಾಸನ ಭಾಷಿಕ ಅಧ್ಯಯನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೨

ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೨

ನಾಗಯ್ಯ ಜೆ.ಎಂ., **ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ**, ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು ಮಠ, ಬೆಳಗಾವಿ, ೧೯೯೨

ಪರಮಶಿವಮೂರ್ತಿ ಡಿ.ವಿ., **ಕನ್ನಡ ಶಾಸನಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಪಂಡಿತ ಎಸ್.ಬಸಪ್ಪ, **ದೇವಕವಿ ಕೃತ ಮರುಳಸಿದ್ಧಕಾವ್ಯ**, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು, ೧೯೭೭

ಪಂಚಮುಖಿ ಆರ್.ಎಸ್., **ಕರ್ನಾಟಕ ಇತಿಹಾಸ**, ಕರ್ನಾಟಕ ಇತಿಹಾಸ ಸಂಸ್ಥೆ, ಮಂಡಲ, ಧಾರವಾಡ, ೧೯೬೭

ಪುಟ್ಟಪ್ಪ ಕೆ.ವಿ., **ಭಾರತೀಯ ಸಂಸ್ಕೃತಿ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೫೪

ಮಹದೇವ ಬಣಕಾರ, **ವಿಶ್ವಬಂಧು ಮರುಳಸಿದ್ಧಕಾವ್ಯ**, ಶ್ರೀ ತರಳಬಾಳು ಪ್ರಕಾಶನ, ಸಿರಿಗೆರೆ, ೧೯೮೯

ಮಹಾಬಲೇಶ್ವರ ಕಾಟ್ರಳ್ಳಿ, **ಬಾಗಳಿಯೇ ಬಾಗಳಿಗೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

ಮೇವುಂಡಿಮಲ್ಲಾರಿ, **ಕನ್ನಡ ಶಾಸನ ಕವಿಗಳು**

ರಮೇಶ ಕೆ.ವಿ., **ಕರ್ನಾಟಕ ಶಾಸನ ಸಮೀಕ್ಷೆ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೧

ರಾಜಶೇಖರ ಸಿಂದಗಿ, **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ**, ಸುಜಾತ ಪಬ್ಲಿಕೇಶನ್ಸ್, ಧಾರವಾಡ, ೧೯೮೮

ರಾಮಚಂದ್ರರಾವ್ ಎ.ಕೆ., **ಮೂರ್ತಿಶಿಲ್ಪ ನೆಲೆ-ಹಿನ್ನೆಲೆ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೯೬

ಸದಾಶಿವಪ್ಪ ಕಂಚೂರು, **ಬಳ್ಳಾರಿ ಜಿಲ್ಲಾ ದರ್ಶನ**, ಮಾಲತೇಶ ಪ್ರಕಾಶನ

ಸದಾಶಿವಪ್ಪ ಕುಂ.ಬಾ. **ಹರಪನಹಳ್ಳಿ ಪಾಳೆಯಗಾರರು**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೬

ಡಾ.ಶೇಠೆ ಎನ್., **ಕರ್ನಾಟಕದಲ್ಲಿ ಸತಿಪದ್ಧತಿ**, ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೧

ಶಿವತಾರಕ್ ಕೆ.ಬಿ., **ಕರ್ನಾಟಕದ ಪುರಾತತ್ವ ನೆಲೆಗಳು**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೧

ಶಿವರಾಮಕಾರಂತ, **ಕರ್ನಾಟಕದ ಚಿತ್ರಕಲೆ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೭೨

ಸುರೇಶ್ ಕೆ.ಎಂ. ಮತ್ತು ಇತರರು, ಕರ್ನಾಟಕ ದೇವಾಲಯ ಕೋಶ(ಬಳ್ಳಾರಿ ಜಿಲ್ಲೆ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ, ೧೯೯೮

ಸುಂದರ ಅ., **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪

ಹಿರೇಮಠ ಬಿ.ಎ., **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**, ವೀರಶೈವ ಅಧ್ಯಯನ ವೇದಿಕೆ, ಜಂಜಗಿ, ೧೯೬೨

ಹಿರೇಮಠ ಬಿ.ಆರ್., **ಶಾಸನಗಳಲ್ಲಿ ವರ್ತಕರು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಇಂಗ್ಲಿಶ್ ಗ್ರಂಥಗಳು

Bhodairia, G.S. **Women Indian Art,** Agam Kala Prakasana, Delhi, 1995

Davanga Desai, **Erroctics in Indian Sculpture**

Gopal B.R., **Epigraphical Studies,** Archaeology and Museums, Mysore, 1987

Indian Archaeology A Review, 1983-84

Indian Archaeology A Review, 1988-89

Mysore State, **Bellary District Gazetter,** 1972

Nagaraja Rao M.S., **The Chalukyas of Kalyana,** Mythic Soceity, Bangalore, 1983

Nandagopal Choodamani, **Dance and Music in the Temple Architecture,** Agam Kala Prakashan Delhi, 1990

Patil C.S., **Temple of Raichur and Bellary Districts,** Archaeology and Museums, Mysore, 1992

Smith Lucie, **Sexulity in Westren Art,** 1991

ಸಂಪುಟಗಳು

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳು, ಪ್ರ.ಸಂ.ಡಾ.ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು

ಕವಿಚರಿತೆಯ ಸಂಪುಟಗಳು

ಚರಿತ್ರೆಯ ಸಂಪುಟಗಳು, ಡಾ.ಬಿ.ಷೇಕ್ಅಲಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗ ಸಂಪುಟಗಳು, ಎಂ.ಎಂ.ಕಲಬುರ್ಗಿ

ಇತಿಹಾಸ ದರ್ಶನ ಸಂಪುಟಗಳು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಕನ್ನಡ-ಕನ್ನಡ ನಿಘಂಟುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಪತ್ರಿಕೆಗಳು(ದಿನಪತ್ರಿಕೆಗಳು)

ಕನ್ನಡ ಪ್ರಭ, ಡಿಸೆಂಬರ್ ೨೦೦೨

ಸಂಯುಕ್ತ ಕರ್ನಾಟಕ, ಮಾರ್ಚ್ ೨೦೦೧

ಉದಯವಾಣಿ (ವಿಶೇಷಾಂಕ), ೧೯೮೯

ವಾರಪತ್ರಿಕೆ

ಸುಧಾ, ಜುಲೈ, ೨೦೦೦

ತರಂಗ

ಕರ್ಮವೀರ, ಮೇ, ೧೯೯೯

◆◆

ಲಾವಣಿಪದ

ಭಾಗ್ಯಪುರ ಬಾಗಳಿ

ಸುಂದರ ಭಾರತ ದೇಶವಿ ಮೆರೆವುದು| ಬಂಧುರ ಬಾಗಳಿ ಭಾಗ್ಯಪುರ|
ಕರ್ನಾಟಕದೊಳು ಬಳ್ಳಾರಿ ಜಿಲ್ಲೆಯ| ಹರಪ್ಪನಹಳ್ಳಿ ತಾಲೂಕಿನ ಊರ|
ಪುರಾಣಕಾಲದಿ ಪ್ರಸಿದ್ಧಿವಾಗಿಹ| ಕಲ್ಲೇಶ್ವರ ಶಿವದೇಗುಲವು|
ವರಶಿಲ್ಪಯ ಕಲೆ ಚಿತ್ರವಿಚಿತ್ರದಿ| ಕಾಣ್ಬುದು ಕಂಣಿಗೆ ಸೂಜಿಗವು|
ಶಿಲಾಶಾಸನಗಳಂತಾಗಿವೆ| ದೇವಾಲಯದಲಿ ತುಂಬಿಹವು|
ಪುರಾತನದ ಚರಿತ್ರೆ ಬರೆದು ಚಿರ| ಕೀರ್ತಿಯ ಜನದಲಿ ತೋರುವವು|
ಪುರದ ಮಧ್ಯದೊಳು ಶೋಭಿಸುತಿರುವುದು| ವೀರಭದ್ರೇಶನ ಮಂದಿರವು|
ಮತ್ತೊಂದೆಡೆಯಲಿ ಕನಕೇಶ್ವರಗುಡಿ| ಬಂಧುರ ಕಲ್ಲಿನ ಕಟ್ಟಡವು|
ಸಂಗನ ಬಸವನ ಚನ್ನಬಸವೇಶನ| ಇಷ್ಟಲಿಂಗ ದೇವರ ನಿಲವು|
ಊರ ಸುತ್ತಮುತ್ತ ಕಟ್ಟಭಕ್ತಿ ಸಿರಿ| ಸಂಪತ್ತಿಗೆ ಕುರು ಆಗಿಹವು|
ಉತ್ತರ ದಿಕ್ಕಿಗೆ ಪರ್ವತ ಸಾಲದು| ಗಿಡಮರದಿಂದಲಿ ತುಂಬಿಹದು|
ಬೆಟ್ಟದ ಮಲ್ಲೇಶನ ಮಂದಿರವದು| ಕೈಲಾಸದ ಪರಿ ಕಾಣವುದು|
ಕೋಡಿಹಳ್ಳಿ ಚಿಕ್ಕಳ್ಳಿ ಕೂಲಹಳ್ಳಿ| ಸಿಂಗಾರ ತೋಟದ ಮಧ್ಯದಲ್ಲಿ|
ಮೂಡಿದ ಭಾಗ್ಯದ ಪುರುವಿದು ಬಾಗಳಿ| ವಿಶಾಲ ನೀರ್ಕೆರೆ ದಂಡೆಯಲಿ|
ಸೋಮಶೇಖರ ಪ್ರಭುವಿನ ರಾಜ್ಯದ| ರಾಜದಾನಿಯದು ಬಾಗಳಿಯು|
ನೇಮನಿತ್ಯದಲ್ಲಿ ದಾನಧರ್ಮದಲಿ| ಹೆಸರಾಗಿರುವುದು ಬಾಗಳಿಯು|
ಕೊಟ್ಟೂರೇಶ್ವರ ಕೋಲಶಾಂತೇಶ್ವರ| ತಿಪ್ಪೇರುದ್ರಸ್ವಾಮಿಯರು|
ಮದ್ದಾನೇಶ್ವರ ಕೆಂಪಯ್ಯಂಬರು| ಮೆರೆದಿಹರಿಲ್ಲಿ|
ಗಣಾದಿಪರರಾದ ಮದ್ದಾನೇಶ್ವರ ಸ್ವಾಮಿಯ ಕೃಪೆಯಲಿ| ಹುಟ್ಟಿದಗೋಣಿಬಸವೇಶ್ವರನು|
ಶುದ್ದಸಿದ್ದ ಪ್ರಸಿದ್ದ ಪವಾಡಗಳೆಸಗುತ| ಇಲ್ಲಿಯ ಮೆರೆದಿಹನು|
ಹತ್ತಿಗೋದಿ ಹೈಬ್ರಿಡಜೋಳ ಭತ್ತ ರಾಗಿ| ಹುರುಳಿ ನೆಲಗಡ್ಲಿಯದು|
ಉಳ್ಳೇಗಡ್ಡಿಮೆನ್ಸಿನಕಾಯಿ ಸರ್ವ| ಕಾಯ್ಬಿಲ್ಲೆಯ ಬೆಳೆಯುವ ಊರಿದು|
ತರುಣರೈತರಲಿ ಸಂಘುಟನೆಯಲಿ| ಸಂಘುಟವಾಗಿ ಮಾರ್ಪಟ್ಟಿಹುದು|
ಶ್ರೀ ಕನಕೇಶ್ವರ ಕಲ್ಲೇಶ್ವರ ಶಿವ ಕೃಪೆಯನು| ಸಂತಸದಲಿ ಪಡೆದಿಹುದು|
ವಿಶ್ವಕಲಾಶ್ರೀ ಯುವಕ ರೈತಸಂಘ| ನಾಮದಿಂದ ಹೆಸರಾಗಿಹುದು|
ನಾತಕ ಸಂಗೀತಾದಿ ಕಲೆಯರುಚಿ| ಸುತ್ತಮುತ್ತ ಜನ ಕುಣಿಸಿಹುದು|
ಭಾಗ್ಯದ ಪುರವಿದು ಬಾಗಳಿ| ಊರು ನಾಡಿಗೆ ಮಾದರಿಯಾಗಿಹುದು|
ಗೋಣಿಬಸವ ಶಿವಶರಣ ಶ್ರೇಷ್ಠನ| ಜಾತ್ರೆಯ ಪುಣ್ಯದಕ್ಷೇತ್ರವಿದು|
ತಾಳಕೇರಿ ಮುದುಬಸವರಾಜ ಕವಿ| ಬರೆದ ಲಾವಣಿ ಪದ್ಯವಿದು|
ಕೇಳಿದ ಜನಗಳು ಆನಂದ ಪಡೆಯಲಿ| ಸಾರ್ಥಕವಾಗುವುದು ಹಾಡಿದುದು|